ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ

★

ದ್ವಿತೀಯ ಸಂಪುಟ (ಚಿ-ಪ)

ಪ್ರಾಚ್ಯವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೯೬೨

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ

★

ದ್ವಿತೀಯ ಸಂಪುಟ (ಚಿ-ಪ)

ಪ್ರಾಚ್ಯವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೯೬೨

A DESCRIPTIVE
CATALOGUE OF KANNADA MANUSCRIPTS

in the

Oriental Research Institute, Mysore.

Vol. II (Chi-pa)

General Editor :

H. DEVEERAPPA, M.A.,

Director.

Editor :

B. S. SANNAIAH, M.A.,

Asst. Director.

Assisted by :

The Research Assistants.

ORIENTAL RESEARCH INSTITUTE.

UNIVERSITY OF MYSORE.

MYSORE.

1962

Published by :
Oriental Research Institute, Mysore.

Price Rs. 4.50

Printed by :
Sree Sharada Press, Mysore.

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕಸೂಚೀ

ದ್ವಿತೀಯ ಸಂಪುಟ (ಚಿ-ಪ)

ಪ್ರಧಾನ ಸಂಪಾದಕರು :
ಹೆಚ್. ದೇವೀರಪ್ಪ, ಎಂ. ಎ.
ಡೈರೆಕ್ಟರ್.

ಪ್ರಾಚ್ಯವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

1962

ಪ್ರಥಮ ಮುದ್ರಣ ೧೦೦೦ ಪ್ರತಿಗಳು

ಬೆಲೆ: ೪-೫೦ ರೂ.

ಮುದ್ರಣಕಾರರು:
ಶ್ರೀ ಶಾರದಾ ಪ್ರೆಸ್, ಮೈಸೂರು.

THIS WORK

HAS BEEN PUBLISHED WITH THE AID OF A GRANT FROM

THE MINISTRY OF SCIENTIFIC RESEARCH &

CULTURAL AFFAIRS,

GOVERNMENT OF INDIA.

ಪೀಠಿಕೆ

ಮುದ್ರಣ ಸೌಕರ್ಯವಿಲ್ಲದಿದ್ದ ಕಾಲದಲ್ಲಿ ಜನರು ತಮಗೆ ಬೇಕಾದ ವಿಷಯಗಳನ್ನೂ ಗ್ರಂಥಗಳನ್ನೂ ಓಲೆಗರಿಗಳ ಮೇಲೂ ಕಾಗದವು ಬಳಕೆಗೆ ಬಂದಮೇಲೆ ಕಾಗದದ ಮೇಲೂ ಬರೆದು ಇಟ್ಟುಕೊಳ್ಳುತ್ತಿದ್ದರು. ಪ್ರಾಚೀನ ಗ್ರಂಥಗಳನ್ನು ತಾವು ಓದುವುದಕ್ಕಾಗಿ ಲಿಪಿಕಾರರಿಂದ ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದೂ ಉಂಟು. ಇದರಿಂದಲೇ ಇಂದು ಒಂದೇ ಕೃತಿಯ ಹಲವಾರು ಕೈಬರಹದ ಪ್ರತಿಗಳು ನಮಗೆ ದೇಶದ ಬೇರೆ ಬೇರೆ ಮೂಲೆಗಳಲ್ಲಿ ದೊರೆಯುತ್ತಿವೆ. ಹೀಗೆ ದೇಶದಾದ್ಯಂತ ಇರುವ ಈ ವಿಧವಾದ ಹಸ್ತಲಿಖಿತ ಗ್ರಂಥಗಳಲ್ಲಿ ಮುಖ್ಯವಾದುವನ್ನು ಸಂಗ್ರಹಿಸಿ ನಮ್ಮ ಸಂಸ್ಥೆಯ ಗ್ರಂಥಾಲಯದಲ್ಲಿಟ್ಟಿದೆ. ಅವುಗಳಲ್ಲಿ ಕನ್ನಡ ಗ್ರಂಥಗಳ ಸ್ವರೂಪವನ್ನು ಈ ವರ್ಣನಾತ್ಮಕ ಸೂಚಿಯು ವಿವರವಾಗಿ ತಿಳಿಯಪಡಿಸುತ್ತದೆ. ಪ್ರತ್ಯಕ್ಷವಾಗಿ ಪುಸ್ತಕಗಳನ್ನು ನೋಡದೆಯೇ ಅವುಗಳ ಸ್ಥೂಲಪರಿಚಯವನ್ನು ಈ ವರ್ಣನಾತ್ಮಕ ಸೂಚಿಯು ಮಾಡಿಕೊಡುತ್ತದೆ.

ಈ ವಿಧವಾದ ವರ್ಣನಾತ್ಮಕ ಸೂಚಿಯು ಕನ್ನಡ ವಿದ್ವಾಂಸರಿಗೆ ಅನೇಕ ದೃಷ್ಟಿಯಿಂದ ಉಪಯುಕ್ತವೆಂಬುದನ್ನು ಮನಗಂಡು ಸಂಸ್ಥೆಯು ಕ್ರಿ. ಶ. ೧೯೫೪ರ ವರೆಗೆ ಸಂಗ್ರಹಿಸಿರುವ ಕೈಬರಹದ ಕನ್ನಡ ಗ್ರಂಥಗಳ ವರ್ಣನಾತ್ಮಕ ಸೂಚಿಯನ್ನು ಅತ್ಯಲ್ಪಕಾಲದಲ್ಲಿ ಸಿದ್ಧಪಡಿಸಿ ನಾಲ್ಕುಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಈ ನಾಲ್ಕು ಸಂಪುಟಗಳಲ್ಲಿ ಇದು ಎರಡನೆಯದು. ಇದರಲ್ಲಿ 'ತ'ಕಾರದಿಂದ 'ಪ' ಕಾರ ಪೂರ್ತಿ ಒಟ್ಟು ೫೦೨ ಕೃತಿಗಳ ವಿವರಣೆಯನ್ನು ಕೊಟ್ಟಿದೆ.

ಮೊದಲು ಆಂಗ್ಲ ಸಂಖ್ಯೆಯಲ್ಲಿ ಕೊಟ್ಟಿರುವುದು ಗ್ರಂಥಗಳ ಕ್ರಮಾಂಕ. ಇದಾದ ಬಳಿಕ ಗ್ರಂಥದ ಸಾಂಕೇತಿಕಾಂಕವನ್ನು ಕನ್ನಡ ಅಂಕಿಗಳಲ್ಲಿ ಕೊಟ್ಟಿದೆ. ಈ ಸಾಂಕೇತಿಕಾಂಕದ ಹಿಂದೆ 'ಕೆ' ಎಂದು ಮಾತ್ರ ಇದ್ದರೆ ಅದು ಓಲೆಯ ಪ್ರತಿಯೆಂದೂ, 'ಕೆ.ಎ' ಎಂದಿದ್ದರೆ ದೊಡ್ಡ ಅಳತೆಯ ಕಾಗದದ ಪ್ರತಿಯೆಂದೂ, 'ಕೆ.ಬಿ' ಎಂದಿದ್ದರೆ ಚಿಕ್ಕ ಅಳತೆಯ ಕಾಗದದ ಪ್ರತಿಯೆಂದೂ ಸೂಚನೆ. ಒಂದೇ ಪುಸ್ತಕದಲ್ಲಿ ಹೆಚ್ಚು ಗ್ರಂಥಗಳಿದ್ದಾಗ ಆ ಗ್ರಂಥವು ಆ ಕಟ್ಟಿನಲ್ಲಿ ಎಷ್ಟನೆಯದು ಎನ್ನುವುದನ್ನು ತಿಳಿಯುವುದಕ್ಕಾಗಿ ಸಾಂಕೇತಿಕಾಂಕದ ಮುಂದೆ ಒಂದು ಗೀಟನ್ನು ಹಾಕಿ ಅದರ ಮುಂದೆ ಗ್ರಂಥದ ಸಂಖ್ಯೆಯನ್ನು ಕೊಟ್ಟಿದೆ. ಅದೇ ಸಾಲಿನ ಮಧ್ಯದಲ್ಲಿ ದೊಡ್ಡ ಅಕ್ಷರಗಳಲ್ಲಿರುವುದು ಗ್ರಂಥದ ಹೆಸರು. ಕೊನೆಯಲ್ಲಿರುವುದು ಗದ್ಯ, ಪದ್ಯ, ವಚನ, ಷಟ್ಪದಿ ಮೊದಲಾದ ಗ್ರಂಥಪ್ರಭೇದ. ಎರಡನೆಯ ಸಾಲಿನ ಆರಂಭದಲ್ಲಿ ಪುಸ್ತಕದ

ಅಳತೆಯನ್ನು ಅಂಗುಲಗಳಲ್ಲಿ ಕೊಟ್ಟಿದೆ. ಅಂಗುಲದ ವಿಭಾಗವನ್ನು ದಶಮಾಂಶದಿಂದ ಸೂಚಿಸಿದೆ. ಈ ಅಳತೆಯ ಅಂಕಿಗಳಲ್ಲಿ ಮೊದಲನೆಯದು ಉದ್ದ, ಎರಡನೆಯದು ಅಗಲ. ಇವೆರಡರ ಮಧ್ಯೆ ವಿಭಾಗಕ್ಕಾಗಿ 'X' ಚಿಹ್ನೆಯನ್ನು ಉಪಯೋಗಿಸಿದೆ. ಗ್ರಂಥದ ಹೆಸರಿನ ಕೆಳಗೆ, ಕವಿಯು ತಿಳಿದಿದ್ದರೆ ಆತನ ಹೆಸರನ್ನೂ ಅದೇ ಸಾಲಿನ ಕೊನೆಯಲ್ಲಿ ಕವಿಯ ಕಾಲವನ್ನೂ ಈ ಎರಡೂ ತಿಳಿಯದಿದ್ದಾಗ ಆ ಸ್ಥಳಗಳಲ್ಲಿ ಪ್ರಶ್ನಚಿಹ್ನೆ ?) ಯನ್ನೂ ಕೊಟ್ಟಿದೆ. ಕವಿ ಮತ್ತು ಕಾಲವಿಚಾರಗಳಿಗೆ ಬಹುಮಟ್ಟಿಗೆ ಕರ್ಣಾಟಕ ಕವಿಚರಿತೆಯನ್ನು ಅವಲಂಬಿಸಿದೆ.

ಮೂರನೆಯ ಸಾಲಿನ ಆರಂಭದಲ್ಲಿ ಗ್ರಂಥ ಪ್ರಾರಂಭವಾಗುವ ಮತ್ತು ಮುಗಿಯುವ ಪತ್ರ ಸಂಖ್ಯೆಗಳನ್ನು ಹೇಳಿದೆ. ಪತ್ರಗಳಿಗೆ ಕ್ರಮಾಂಕವನ್ನು ಬರೆಯದಿರುವ ಪುಸ್ತಕಗಳಲ್ಲಿ ಒಟ್ಟು ಎಷ್ಟು ಪತ್ರಗಳಿವೆ ಎನ್ನುವುದನ್ನು ಲೆಕ್ಕಮಾಡಿ ಕೊಟ್ಟಿದೆ. ಕೆಲವುಕಡೆಗಳಲ್ಲಿ ಪುಟಸಂಖ್ಯೆಯನ್ನು ಕೊಟ್ಟಿದೆ. ಪತ್ರ ಎಂದಿರುವ ಕಡೆ ಎರಡು ಪಾರ್ಶ್ವಗಳೂ ಸೇರಿ ಒಂದು ಎಂದೂ, ಪುಟ ಎಂದರೆ ಪ್ರತಿಪಾರ್ಶ್ವಕ್ಕೂ ಬೇರೆ ಬೇರೆ ಕ್ರಮಾಂಕ ಕೊಟ್ಟಿದೆ ಎಂದೂ ತಿಳಿಯಬೇಕು. ಒಂದೇ ಪಾರ್ಶ್ವದಲ್ಲಿ ಬರೆದಿರುವ ಕಡೆಗಳಲ್ಲೆಲ್ಲಾ ವಿಶೇಷ ವಿಭಾಗದಲ್ಲಿ, ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರವಣಿಗೆ ಇದೆ ಎಂದು ತಿಳಿಸಿದೆ. ಇದೇ ಸಾಲಿನ ಮಧ್ಯದಲ್ಲಿ ಪ್ರತಿ ಪತ್ರದ ಒಂದೊಂದು ಪಾರ್ಶ್ವದಲ್ಲೂ ಇರುವ ಸಾಲಿನ ಸಂಖ್ಯೆಗಳನ್ನೂ, ಕೊನೆಯಲ್ಲಿ ಪ್ರತಿಸಾಲಿನಲ್ಲೂ ಇರುವ ಅಕ್ಷರ ಸಂಖ್ಯೆಗಳನ್ನೂ ಸರಾಸರಿ ಮಾನದಿಂದ ಕೊಟ್ಟಿದೆ. ಬಳಿಕ ಗ್ರಂಥದ ಆದಿಭಾಗವನ್ನು '**ಆದಿ** :–' ಎನ್ನುವುದರ ಮುಂದೆಯೂ ಅಂತ್ಯಭಾಗವನ್ನು '**ಅಂತ್ಯ** :—' ಎನ್ನುವುದರ ಮುಂದೆಯೂ ಕೊಟ್ಟಿದೆ. ಈ ಆದ್ಯಂತ ಗ್ರಂಥ ಭಾಗಗಳ ಕೆಲವು ಕಡೆಗಳಲ್ಲಿ .... ಈ ಗುರುತಿರುವ ಕಡೆ ಗ್ರಂಥ ತ್ರುಟಿತವಾಗಿದೆಯೆಂದೂ x x x x ಹೀಗಿರುವ ಕಡೆ ಪುಸ್ತಕದಲ್ಲಿ ಆ ಭಾಗದ ಗ್ರಂಥವಿದ್ದರೂ ಆ ಭಾಗವನ್ನು ಬಿಟ್ಟು ಮುಂದುವರಿಸಿದೆ ಎಂದೂ ತಿಳಿದುಕೊಳ್ಳಬೇಕು. **ಆದಿ, ಅಂತ್ಯ**ಗಳಾದ ಬಳಿಕ ಇರುವ **ವಿಷಯ** ಎಂಬ ವಿಭಾಗದಲ್ಲಿ ಪ್ರತಿಪಾದ್ಯ ವಿಷಯವನ್ನು ಒಂದೊಂದು ವಾಕ್ಯದಲ್ಲಿ ಸೂಚಿಸಲಾಗಿದೆ.

ಆ ಬಳಿಕ ಇರುವ **ವಿಶೇಷ** ಎಂಬ ವಿಭಾಗದಲ್ಲಿ ಆ ಪುಸ್ತಕಕ್ಕೆ ಸಂಬಂಧಪಟ್ಟಂತೆ ಲಿಪಿ, ಪುಸ್ತಕದ ಸ್ಥಿತಿ, ಶಕಟರೇಫದ ಬಳಕೆ, ಅದೇ ಪುಸ್ತಕದಲ್ಲಿ ಇರುವ ಇತರ ಗ್ರಂಥಗಳ ಸಂಖ್ಯೆ ಇವುಗಳ ವಿವರವನ್ನು ಸಂಗ್ರಹವಾಗಿ ಕೊಟ್ಟಿದೆ. ಕೆಲವು ಕನ್ನಡ ಪುಸ್ತಕಗಳೊಡನೆ ಇರುವ ಸಂಸ್ಕೃತ ಮತ್ತು ತೆಲುಗು ಭಾಷೆಯ ಗ್ರಂಥಗಳನ್ನು ಪ್ರತ್ಯೇಕವಾಗಿ ಪಟ್ಟಿಮಾಡಿ ನಾಲ್ಕನೆಯ ಸಂಪುಟದ ಅನುಬಂಧದಲ್ಲಿ ಕೊಟ್ಟಿದೆ.

ಪ್ರತಿಗ್ರಂಥದ ವರ್ಣನೆಯೂ 'ಕ್ರಮಾಂಕ' ಮೊದಲಾಗಿ 'ವಿಶೇಷ' ಕಡೆಯಾಗಿ ಹದಿನಾಲ್ಕು ವಿಭಾಗಗಳನ್ನೊಳಗೊಂಡಿದೆ.

ಸೂಚಿಯಲ್ಲಿ ಎತ್ತಿಕೊಟ್ಟಿರುವ ಭಾಗಗಳು ಪಾಠದೃಷ್ಟಿಯಲ್ಲಿ ಮೂಲಪ್ರತಿಯನ್ನೆ ಸಂಪೂರ್ಣವಾಗಿ ಹೋಲುತ್ತಿವೆ. ಆದರೆ ಪದ್ಯಭಾಗವನ್ನು ಆಯಾ ಛಂದಸ್ಸಿಗನು ಗುಣವಾಗಿ ವಿಭಾಗಮಾಡಿ, ಗೀಟುಗಳಿದ್ದರೆ ಅವನ್ನು ತೆಗೆದುಹಾಕಿದೆ. ಓದುಗರಿಗೆ ಸೌಲಭ್ಯವಾಗಲೆಂದು ಅಗತ್ಯವಿದ್ದ ಕಡೆಗಳಲ್ಲಿ ಆಧುನಿಕ ಚಿಹ್ನೆಗಳನ್ನು ಹಾಕಲಾಗಿದೆ. ಲಿಪಿಕಾರರು ಆದ್ಯಂತಗಳಲ್ಲಿ ಅನೇಕ ಇಷ್ಟದೇವತೆಗಳ ಹೆಸರುಗಳನ್ನು ಬರೆದಿದ್ದರೆ, ಮೊದಲನೆಯದನ್ನು ಮಾತ್ರ ಕೊಟ್ಟು ಉಳಿದುವುಗಳನ್ನು ಬಹುಶಃ ಬಿಡಲಾಗಿದೆ. 'ಶ್ರೀ'ಕಾರದ ವಿಷಯದಲ್ಲಿಯೂ ಅಷ್ಟೆ. ಒಂದನ್ನೊ ಎರಡನ್ನೊ ಉದ್ಧರಿಸಿ ಉಳಿದು ವನ್ನು ಬಿಟ್ಟಿದೆ. ಅನೇಕ ಪ್ರತಿಕಾರರು ಗ್ರಂಥಾಂತ್ಯದಲ್ಲಿ, ತಪ್ಪಂ ಬರೆದಂ ಕಡುಜಡ| ನಪ್ಪಂ ಬರೆದಾತನೆಂದು ಬಯ್ಯಲು ಬೇಡಾ || ತಪ್ಪಕ್ಕು ಶುದ್ಧಮಕ್ಕು | ತಪ್ಪುಳ್ಳರೆ ತಿದ್ದಿಕೊಳುವುದುತ್ತಮ ಪುರುಷರ್—ಎಂದಿರುವುದುಂಟು. ಇದನ್ನು ಗ್ರಂಥಸೂಚಿ ಯಲ್ಲಿ ಸೇರಿಸಿಲ್ಲ. ಹಸ್ತಪ್ರತಿಗಳ ಸ್ವರೂಪವು ಗೊತ್ತಾಗಲೆಂದು ಅದರಲ್ಲಿರುವ ತಪ್ಪು ಗಳನ್ನು ತಿದ್ದದೆ ಅವುಗಳಲ್ಲಿರುವಂತೆ ತಪ್ಪಾಗಿಯೇ ಕೊಟ್ಟಿದೆ. ಸಂಶೋಧಕರು ಇಂತಹ ಅಶುದ್ಧವೂ ಅಸಾಧುವೂ ಆದ ಬರವಣಿಗೆಯಿಂದ ಕೂಡಿದ ಹಸ್ತಪ್ರತಿಗಳ ಆಧಾರದ ಮೇಲೆ ಸರಿಯಾದ ಪಾಠವನ್ನು ಕಂಡುಹಿಡಿದು ಮೂಲಪ್ರತಿಯನ್ನು ಪುನರ್ನಿರ್ಮಿಸಿ ಸಂಪ್ರತಿಸಿ ಪ್ರಕಟಿಸುವಲ್ಲಿ ಎಷ್ಟು ಶ್ರಮ ವಹಿಸಬೇಕಾಗುತ್ತದೆ ಎಂಬುದನ್ನು ನಿಷ್ಪಕ್ಷಪಾತಿಗಳೂ ಗುಣಗ್ರಾಹಿಗಳೂ ಆದ ವಿದ್ವಜ್ಜನರು ಊಹಿಸಕೊಳ್ಳ ಬಲ್ಲರು.

ಈಗ ದೊರೆಯುತ್ತಿರುವ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳು ಲಿಪಿಕಾರರಿಂದ ಪ್ರತಿಮಾಡಲ್ಪಟ್ಟವು. ಕವಿಯ ಸ್ವಹಸ್ತಾಕ್ಷರ ಪತ್ರಿಗಳಲ್ಲ. ಕವಿ ಗ್ರಂಥವನ್ನು ಸೃಷ್ಟಿಸಿದವ ಮಾತ್ರ. ಆತ ಒಬ್ಬನೇ. ಆದರೆ ಆ ಗ್ರಂಥ ಭಂಡಾರದ ರಕ್ಷಣೆಯ ಭಾರವನ್ನು ಬಹುಮಂದಿ ಲಿಪಿಕಾರರು ಹೊತ್ತಿದ್ದಾರೆ. ಗ್ರಂಥಕ್ಕೆ ಮರುಜೀವಣಿ ಎರೆಯುವವರು ಅವರು. ಒಂದು ಗ್ರಂಥದ ಹಲವಾರು ಪ್ರತಿಗಳನ್ನು ಬೇರೆ ಬೇರೆ ಲಿಪಿಕಾರರು ಬರೆದಿರುವುದರಿಂದಲೇ ಈಗಲೂ ಪ್ರಾಚೀನ ಗ್ರಂಥಗಳು ಜೀವಂತವಾಗಿವೆ.

ಅನೇಕ ಪ್ರತಿಗಳನ್ನು ಬರೆಯುವುದರ ಮೂಲಕ ಈ ಪ್ರತಿಕಾರರು ಪ್ರಾಚೀನ ಸಾಹಿತ್ಯದ ಒಂದು ಬೃಹದ್ರತ್ನಾಕರವನ್ನೇ ರಚಿಸಿದ್ದಾರೆ. ಇದಕ್ಕಾಗಿ ಪ್ರತಿಯೊಬ್ಬ ಸಾಹಿತ್ಯಾಭಿಮಾನಿಯೂ ಈ ಲಿಪಿಕಾರರನ್ನು ಅಭಿನಂದಿಸಬೇಕು.

ತಾನು ಬರೆದ ಬರವಣಿಗೆಯಲ್ಲಿ ತಪ್ಪು ಕಂಡುಬಂದರೆ ಅದನ್ನು ಸರಿಪಡಿಸಿಕೊಳ್ಳಿ ಎಂದು ಗ್ರಂಥಾಂತ್ಯದಲ್ಲಿ ಓದುಗರನ್ನು ಪ್ರಾರ್ಥಿಸದ ಲಿಪಿಕಾರನಿಲ್ಲ. ಇದು ಆತನ ವಿನಯವನ್ನು ಸೂಚಿಸುತ್ತದೆ. ಗ್ರಂಥಾರಂಭಕ್ಕೆ ಮೊದಲು ಪ್ರತಿಯೊಬ್ಬ ಲಿಪಿಕಾರನೂ ತನ್ನ ಇಷ್ಟದೈವ ಮತ್ತು ಗುರುಗಳನ್ನು ಸ್ತುತಿಸಿ ಬಳಿಕ ಗ್ರಂಥವನ್ನು ಬರೆಯಲು

ಪ್ರಾರಂಭಿಸುತ್ತಾನೆ. (ಈ ವರ್ಣನಾತ್ಮಕ ಸೂಚಿಯಲ್ಲಿ ಅತ್ಯಧಿಕವಾಗಿ ಸ್ತುತಿಗಳು ಇರುವೆಡೆಗಳಲ್ಲಿ ಅವುಗಳನ್ನು ಬಿಟ್ಟು ಗ್ರಂಥವನ್ನು ಮುಂದುವರಿಸಿದೆ). ಕೆಲವರು ತಾವು ಬರೆಯಲು ಪ್ರಾರಂಭಿಸಿದ ಮತ್ತು ಪ್ರತಿಮಾಡಿ ಮುಗಿಸಿದ ಕಾಲವಿವರವನ್ನು ಬರೆದಿದ್ದಾರೆ.

ವೀರಮಾಹೇಶ್ವರಾಚಾರ ಸಂಗ್ರಹವನ್ನು ಬರೆದ ಒಬ್ಬ ಲಿಪಿಕಾರನು ತಾನು ತಾಳೇಗರಿಯನ್ನು ಸಂಗ್ರಹಿಸಿ ಅದರಲ್ಲಿ ಬರವಣಿಗೆಯನ್ನು ಪೂರ್ತಿಮಾಡಿರುವ ವರೆಗಿನ ವಿವರವನ್ನು ಗ್ರಂಥಾಂತ್ಯದಲ್ಲಿ ಕೊಟ್ಟಿರುತ್ತಾನೆ. ಅದರ ಒಕ್ಕಣೆ ಈ ರೀತಿ ಇದೆ. :—

ಪಡುವಣ ದೆಸೆಯಿಂದೊಪ್ಪುತಿರ್ದ ಲವಣಾಂಬುಧಿಗೆ ಪುರ್ಬುಂ ಪುಟ್ಟಿದಹಾಂಗಿರ್ದ ಘಟ್ಟದ ಸರೋವರಂಗಳಲ್ಲೇಕಪಾದಚರ ಕೆದಜೀದ ಮಂಡೆ ಮೌನವ್ರತದಿಂದೊಪ್ಪುತ್ತಿರ್ದ ದಿವ್ಯತಾಳಪತ್ರಮುಂ ತಂದು ದ್ವಿತೀಯ ರಂಧ್ರವಂ ಮಾಡಿ ಬಿಂಗದ ಹೊರೆಯಂತೊಂದೊಂದಂ ಪೊಂದಿಸಿಕ್ಕೆಲದಲುಭಯಂ ಪಲಗೆಯಷ್ಟಲೋವೆಯಷ್ಟಮೂಲೆಗಳಿಂದತ್ಯಂತಲಂಕಾರವಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯ ಶಿವಾಲಯವಂ ನಿರ್ಮಿಸಿದಿಂತಿರಬಾರದೆಂದು ಬಿಂದು ವಿಸರ್ಗಂ ದಡ್ಡತೆ ಪೊಂದಿದಾವೃತೋರ್ಧ್ವರೇಫೆ ದೀರ್ಘ ಹ್ರಸ್ವದಿಂದೊಪ್ಪುತ್ತಿರ್ದ್ದ ಅಕ್ಷರಮೂರ್ತಿಗಳಂ ಲೇಖನವಂಮಾಡೆಂದು ಚಿಕ್ಕೈಯನವರು ದಿವ್ಯ ಆಲೇಖಮುಂ ಷಟ್‌ಸ್ಥಲಜ್ಞಾನ ಸಂಪನ್ನರಾದ ವಿರಕ್ತಅನ್ನದಾನ ದೇವರ ಹಸ್ತದಲ್ಲಿ ಪಾಲಿಸಲು ಯಿಂತೀ ಶಿವಗಣಂಗಳ ನಿರೂಪವಂ ಕೈಗೊಂಡು ಬರವುದಕ್ಕೆ ಯನ್ನ ಕಂಗಳು ಜಿಹ್ವೆ ಕರ ಕರ್ನಂಗಳು ಗತಿ ಮತಿ ಚೈತನ್ಯಕ್ಕೆ ಸಮಸ್ತ ಸದ್ಭಕ್ತ ವೀರಮಾಹೇಶ್ವರರುಗಳೇ ಕರ್ತ್ರರಾದ ಕಾರಣ ಯಿಂತಿವರ ಕರುಣ ಪ್ರಸಾದಮುಂ ಕೈಕೊಂಡು ಈ ವೀರಮಾಹೇಶ್ವರಾಚಾರ ಸಂಗ್ರಹವ ಬರದೆನಲ್ಲದೆ ನನ್ನಿಚ್ಛೆಯೊಳಂ ನಾ ಬರದುದಿಲ್ಲ

ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ ।
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ॥

ಇಂತೆಂದುದಾಗಿ ಈ ಪುಸ್ತಕವಂ ಬರದ ಸ್ಥಿತಿಯೆಂತೆಂದಡೆ – ಸ್ವಸ್ತಿ ಶ್ರೀ ಜಯಾಭ್ಯುದಯ ವಿಧಿಷ್ಟ ಶಕ ವಿಕ್ರಮ ಶಕಯೊ ದ್ವಿತೀಯಶಕ ಸಂದದು ೪೦೦೦ ವರುಷ । ಶಾಲಿವಾಹನಶಕ ಸಂದದು ೧೫೪೩ ವರುಷ ಸಂದು ವರ್ತಮಾನವಾದ ಶಾರ್ವರಿ ಸಂವತ್ಸರದ ಚೈತ್ರಮಾಸದ ಶುಕ್ಲಪಕ್ಷದ ರೇವತಿ ನಕ್ಷತ್ರದ ಶುದ್ಧ ದಶಮಿ ಶಶಿವಾರದಲ್ಲು ಬರದ ವಿರಕ್ತ ಅನ್ನದಾನದೇವರು ಆಚಾರ್ಯಚಿಕ್ಕೈಯದೇವಗೆ ನೀಲಕಂಠನಾಗನಾಥಾಚಾರ್ಯರು ವಿರಚಿಸಿದಂಥಾ ವೀರಮಾಹೇಶ್ವರಾಚಾರ ಸಂಗ್ರಹವೆಂಬ ಬಾಹುಲ್ಯವಾದ ವ್ಯಾಖ್ಯಾನಶಾಸ್ತ್ರವ ಬರದು ಸಂಪೂರ್ನವಾಯಿತ್ತು । ಯಿಂತೀ ಪುಸ್ತಕಕ್ಕೈಶ್ವರ್ಯಮಸ್ತು ಶುಭಮಸ್ತು ನಿರ್ವಿಘ್ನಮಸ್ತು ಅಜೀರ್ಣಮಸ್ತು । ಆಯುರಾರೋಗ್ಯಮಸ್ತು ಚಂದ್ರಾರ್ಕ ತಾರಾ ನಭವುಳ್ಳನಕಂ ಸ್ಥಾಯಿಯಸ್ತು ॥

ಭಗ್ನಪೃಷ್ಠಕಟಿಗ್ರೀವ ಬದ್ಧದೃಷ್ಟಿರಧೋಮುಖಂ। ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯ ॥ ಇಂತೆಂದುದಾಗಿ ಈ ಪುಸ್ತಕವಂ ಬರವರ್ಗಂ ಓದುವರ್ಗಂ ಶಿವಾನುಭಾವವಂ ನಿರೂಪಿಸುವರ್ಗಂ ಲಾಲಿಸುವರ್ಗಂ ಸಹಸ್ರಕೋಟಿ ನಮಸಾ ರವಂ ಮಾಡುತ್ತಿದೇನೆ. ಎನ್ನ ಬಿಂನಪವನವಧರಿಸಿ ಯಿದಂ ಬರದ ನಿಂಮ ಕರುಣದ ಕಂದನಿಗೆ ನಿಮ್ಮ ಕೃಪಾಮೃತ ರಸವನೆಱದು ನೋಡಿ ಸಲಹಿ ನಿಮ್ಮ ಶ್ರೀಪಾದ ಪದ್ಮಾರಾಧನೆಯು ಯೆಂದೆಂದು ಪಿಂಗದಂತೆ ಮಾಡಯ್ಯಾ ಲಿಂಗತಂದೆ ಶರಣು ಶರಣು ಶರಣಾರ್ತ್ರಿ ॥

ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಂ।
* ಆಯಾಸಂ ಪುನರಾಯಾಸಂ ಭ್ರಷ್ಟಭ್ರಷ್ಟಾ ಚ ಭ್ರಷ್ಟಯೋ ॥

ಜಲಾದ್ರಕ್ಷ ತೈಲಾದ್ರಕ್ಷ ದ್ರಕ್ಷಮಸ್ಲಾಗ್ಯ ಬಂಧನಾತ್।
ಅವಸ್ಯ ಯಾಚಕದ್ರಕ್ಷ ಮಮ ರಕ್ಷಂತು ಪುಸ್ತಕಂ ॥

ನೀಲಕಂಠ ನಾಗನಾಥಾಚಾರ್ಯ ವಿರಚಿತಂ ವೀರಮಾಹೇಶ್ವರಾಚಾರ ಸಂಗ್ರಹಂ ಸಂಪೂರ್ಣಂ ಮಂಗಳ ಮಹಾಶ್ರೀ ॥"

ಈವಿಧವಾದ ಒಕ್ಕಣೆಯಿಂದ ಪ್ರತಿಕಾರನ ವಿಚಾರವೂ ಆತನು ಪ್ರತಿಮಾಡಲು ತೆಗೆದುಕೊಂಡ ಶ್ರಮವೂ ಸ್ಪಷ್ಟಪಡುತ್ತದೆ.

ಈ ಗ್ರಂಥಸೂಚಿಯನ್ನು ಸಂಸ್ಥೆಯ ಅಸಿಸ್ಟೆಂಟ್ ಡೈರೆಕ್ಟರ್ ಆಗಿರುವ ಶ್ರೀ ಬಿ. ಎಸ್. ಸಣ್ಣಯ್ಯನವರು ಮತ್ತು ರಿಸರ್ಚ್ ಅಸಿಸ್ಟೆಂಟರು ಅತ್ಯಲ್ಪಕಾಲದಲ್ಲಿ ಸಿದ್ಧಪಡಿಸಿರುವುದು ಸಂತೋಷಕರವಾದ ವಿಷಯ.

ಈ ವರ್ಣನಾತ್ಮಕ ಸೂಚಿಯ ಎರಡನೆಯ ಸಂಪುಟವನ್ನು ಅತಿ ಶೀಘ್ರಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವ ಮೈಸೂರಿನ ಶ್ರೀ ಶಾರದಾ ಪ್ರೆಸ್ ಮಾಲೀಕರಿಗೂ, ಈ ಗ್ರಂಥ ಪ್ರಕಟನೆಗೆ ಆರ್ಥಿಕ ನೆರವು ನೀಡಿರುವ ಕೇಂದ್ರ ಸರ್ಕಾರದವರಿಗೂ ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಈ ಸಂಸ್ಥೆಯ ಕೃತಜ್ಞತಾ ಪೂರ್ವಕ ವಾದ ವಂದನೆಗಳು.

ಹೆಚ್. ದೇವೀರಪ್ಪ.

* ಈ ಶ್ಲೋಕಗಳ ಸರಿಯಾದ ಪಾಠ ಈರೀತಿ ಇದೆ.

ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾ ಚ ಖಂಡಶಃ ॥
ತೈಲಾದ್ರಕ್ಷೇಜ್ಜಲಾದ್ರಕ್ಷೇಚ್ಛಿಥಿಲ ಬಂಧನಾತ್ ।
ಮೂರ್ಖಹಸ್ತೇ ನ ದಾತವ್ಯಮೇವಂ ವದತಿ ಪುಸ್ತಕಂ ॥

498

೧೧೨	**ಚಿಕ್ಕದೇವರಾಜ ವಂಶಾವಳಿ**	ಗದ್ಯ
೧೭.೧"×೧.೪"	ತಿರುಮಲಾರ್ಯ	೧೬೮೦
೪೪—೧೧೪ ಪತ್ರ	೬ ಪಂಕ್ತಿ	೬೦ ಅಕ್ಷರ

ಆದಿ: ನಟ್ಟನಡುವೆ ನೆಟ್ಟಪೊಂಗಳೆಯೊಳ್ ಕಟ್ಟಿದ ಕಾರ್ಗೋಡಗದ ಸರಪಣಿಯ ಕೀಲಂ ಕಳಲ್ಚಿ ಪೆಡತಲೆ ಪಿಡಿರ್ದನೆಳದೊಯ್ದಾರುಮರಿಯದಂತೋಳು ಮೂಲೆವನೆಯೊಳ್ ಮರ....ವೋ . ರಿ ಮುಂಡಿಸಿ ವೆಣ್ಣೆನಿಸಿಯೊಡನುಂಡು ದನುಗುಳೆಬುದಂಡಿಸುವಿನಮುದರ್ಕದು ಬೆದರಿ ಪಲಗಿರಿಪುದುಮುದಂ ಬೆಣ್ಣೆ ಗೆತ್ತು ಬೆರಲಿಂ ತೆಗೆವುತ್ತಿರೆ ಮುಮ್ಮ್ರನೆವಾಳ್ತಿಗೆಯ್ದು

ಅಂತ್ಯ: ದ್ರೋಹಮುನೆಣಿಸಿಯುವನಂ ಕಪಡಿನೊಳ್ಮಡುಪಿ ಈ ದೊರೆತನಮಂ ಕೊಂಡು ತಾನುಂ ಪಾವುಡಮುಂ ಕಾಣೆಕಗಳಿಕಳುಪುವಿನಮವಿನ ತಪ್ಪುಗೆಯ್ಮ್ರಗಳ ನೆಣಿಸಿ ನೀಳ್ಕರಿಸಿ ಬಂದ ಗುರಿವಾನಿಸನಂ ಬಂದಂತೆ ಕಳುಪಲೊಡಮುದರ್ಕಾ ದೊರೆ ಪಿರಿದುಂ ಬಿಗುರ್ತು ನೆರವನರಸಿ ಮುಂ ತನ್ನಂದೆ ಬಿಜ್ಜಾನಗರಿಯ ಧೊರೆತನಮನಾಳ್ದ ತೆಲುಂಗರಾಯರ ಬಗೆಯೊಳಿ....ರ್ಪಾ ಶ್ರೀರಂಗರಾಯ ನೆನಿಸುವಂ ತನ್ನ ಬೇಲೂರ್‌ಚಂದ್ರಗಿರಿ ಮುಂತಾದ ಕೋಂಟೆ ದುರ್ಗಂ ಗಳ್ತುರುಕರ್ಗೆ ಸೂರೆಕೊಟ್ಟು

ವಿಷಯ: ಚಿಕ್ಕದೇವರಾಜನ ವಂಶವಿಚಾರ.

ವಿಶೇಷ: ಅಸಮಗ್ರಪ್ರತಿ, ಗ್ರಂಥಲಿಪಿ, ಕೆಲವು ಪತ್ರಗಳ ಅಂಚು ಮುರಿದಿದೆ.

499

ಕೆ ೧೩೭	**ಚಿಕ್ಕದೇವರಾಜ ವಂಶಾವಳಿ**	ಗದ್ಯ
೧೩.೭"×೧.೨"	ತಿರುಮಲಾರ್ಯ	೧೬೮೦
೧—೧೩೦ ಪತ್ರ	೯ ಪಂಕ್ತಿ	೪೪ ಅಕ್ಷರ

ಆದಿ: ಶ್ರೀಮತೇ ರಾಮಾನುಜಾಯ ನಮಃ। ಶ್ರೀ ಶೈಲಾರ್ಯ ಗುರುವೇ ನಮಃ॥ ಸ್ವಸ್ತಿ ಸಮಸ್ತ ಭೂಮಂಡಲ ಪುಂಡರೀಕಕರ್ಣಿಕಾಯಮಾನ ಕನಕಾಚಲ ದಕ್ಷಿಣದಿಶಾಪರೀರ್ಯ್ಯಸ್ತ ಪರಿಕಮ್ರ್ಯಲ ಕಮ್ಮ್ರಣ ಭಾರತವರ್ಷ ಮಂಡ ನಾಯತಖಂಡೋದ್ದಂಡ ವೈಭವೋತ್ತಮುನ್ನಾರ್ಗಂತ ಕನ್ನಾರ್ಟದೇಶದೊ ಳ್ಕಾವೇರಿ ದಕ್ಷಿಣ ತೀರದೊಳದಿದೂರದೊಳೆಸೆವ ಮಹಿಶೂರ ಪುರದೊಳ್

ಸಕಲ ಸಾಮಂತ ಕೋಟೀರ ಕೋಟಿಮಣಿಘೃಣಿಚೀತ್ರಿತ ಪದರಾಜೀವ
ನೆನಿಸಿ ರಾಜಿಪ ಚಾಮರಾಜಂಗೆ ಚತುರತೆಗೊಲ್ದು ಮೆಯ್ವತ್ತು

ಅಂತ್ಯ : ಪೆಣ್ಬುಲ್ಲೆಗಳುಮಂ ಕನ್ಗೊಳಿಸಿ ಮನಂಗರಗುತ್ತೆ ಮತ್ತಂ ಕಿಱಿದುಂ ದೂಱಿಂ
ನಡೆ ... ...ಳ್ಪಮಿತ್ ಕುಶಕುಸುಮಂಗಳಂ ಸಂಗ್ರಹಿಸುವೆಡೆಯೊಳ
ಮುಳಿಯದಂತುಪಾಧ್ಯಾ... ... .

ವಿಷಯ : ಮೈಸೂರು ರಾಜರ ವಂಶಾವಳಿ.

ವಿಶೇಷ : ಗ್ರಂಥವು ಬಹಳ ಶಿಥಿಲ. ಕೆಲವು ಗರಿಗಳು ಮುರಿದಿವೆ. ಶಕಟರೇಫ
ಪ್ರಯೋಗವಿವೆ.

500

ಕೆ. ಬಿ. ೨೩೦	ಚಿಕ್ಕದೇವರಾಜ ವಂಶಾವಳಿ	ಚಂಪು
೮.೨"×೬.೭"	ವೇಣುಗೋಪಾಲ ವರಪ್ರಸಾದ	ಸು. ೧೬೮೦
೧–೧೦ ಪತ್ರ	೨೪ ಪಂಕ್ತಿ	೩೦ ಅಕ್ಷರ

ಆದಿ : ಶ್ರೀಲಕ್ಷ್ಮೀ ಕುಚಕುಂಭ ಕುಂಕುಮಲಸತ್ಪಂಕಾಂಕಿತೋರಸ್ಥಲಂ
ನೀಲಾಂಭೋರುಹ ಸುಂದರಾಂಗಮಮರಾಧೀಶಾರ್ಚಿತಾಂಘ್ರಿದ್ವಯಂ
ವ್ಯಾಳೇಶೋರು ಫಣಾಮಣಿ ದ್ಯುತಿ ಸಮೂಹಶ್ಲಿಷ್ಟ ವಕ್ತ್ರಾಂಬುಜಂ
ಲೀಲಾ ಸಂತತಿವೆತ್ತು ರಕ್ಷಿಸುಗೆ ಶ್ರೀರಂಗೇಶನೊಲ್ದಿಂನುಮುಂ ॥ ೧ ॥

ಅಂತ್ಯ : ನಗಧೈರ್ಯಂಗೆ ನರಾಧಿಪಂಗೆ ನತಭೂಪೌವ್ರಾತ ಪಾಲಂಗೆ ಪಂ
ನಗಜದ್ವಿಕ್ರಮ ಸಂಯುತಂಗೆ ಜನಚಿತ್ತಾಂಹ್ಲಾದ ಕೃತ್ಯಂಗೆ ವಂ
ದಿಗಣಾಶಾ ಫಲದಾಯಕಂಗೆ ಕುಸುಮಾಸ್ತ್ರಾತ್ಯಂತರೂಪಂಗೆ ಶ್ರೀಚಿಕ್ಕದೇವ
ಕ್ಷಿತಿಪಾಲಕಂಗೆ ಸದ್ಗುಣ ವಿಭೂಷಂಗಂ ॥ ಜಯ ಮಂಗಳಂ ॥ ೩೭ ॥
ವಚನಯಿಂತೆಂದು ನುತಿಸಿದ ವಂದಿಜನಕ್ಕೆ ಪಸಾಯಿತಮಿತ್ತು

X X X X

ಶ್ರೀಮದ್ವೇಣುಗೋಪಾಲನ ವರ ಪ್ರಸಾದೇನ ಕವಿತಮಂ ಪೇಳ್ದೆ ನಿಗಮ ಶಿರೋಮಣಿ
ಗಳಾಲಿಸಿ ಕೇಳಿ ತಪಿದೊರ್ಡಂ ತಿದ್ದಿ ಮೆರಸುವ ಭಾರ ನಿಮಗೆ ಯೆಂದು ವಪ್ಪಿಸಿದೆ
ಚಿಕ್ಕದೇವರಾಯ ಮಹಾರಾಯರ ವಂಶಾವಳಿಗೆ ಮಂಗಳ ಆಚಂದ್ರತಾರಕಮಭಿ
ವೃದ್ಧಾಯಃ ಸಂತೂ ಶ್ರೀ

ವಿಷಯ : ಚಿಕ್ಕದೇವರಾಜರ ಮತ್ತು ಮೈಸೂರು ರಾಜರ ವಂಶಾವಳಿ.

ವಿಶೇಷ : ಮೋಡಿ ಬರಹ. ಪತ್ರಗಳನ್ನು ಅಲ್ಲಲ್ಲಿ ಹುಳು ಕೊರೆದಿದೆ.

501

೩೨	**ಚಿಕ್ಕದೇವರಾಯಬಿನ್ನಪ**	ಚಂಪು
೧೬.೭"×೧.೩"	ಚಿಕ್ಕದೇವರಾಜ	೧೬೮೦
೧_೭೪ ಪತ್ರ	೪ ಪಂಕ್ತಿ	೬೦ ಅಕ್ಷರ

ಆದಿ: ಶ್ರೀ x x ಚಿಕ ದೇವರಾಯ ಬಿಂನಪಂ ||

ಶ್ರೀರಮಣನಖಿಲಸದ್ಗುಣ
ವಾರಿಧಿಯಾನನ್ದಮಯು ವಿಮಾನೋದರ ವಿ
ಸ್ಫಾರಿತರೂಪಂ ಯದುಗಿರಿ
ನಾರಾಯಣನಾಳ್ದನಕ್ಕೆ ನರಪತಿಗನಿಶಂ || ೧ ||

ಶಾ|| ಆನಂದೈಕರಸಂ ಸಮಸ್ತಜಗದಾನನ್ದಂಗೆ ಚಕ್ರಾಯುಧಂ
ಸೇನಾಚಕ್ರವಿಮರ್ದಿತಾಹಿತ ಮಹೀ ಚಕ್ರಜಿಗ್ಗೆವೈಕುಣ್ಠನ
ನ್ಯೂನೋಪಾಯ.... ಕುಣ್ಠಿತಾರಿಧರಣೀಭೃದ್ದುರ್ಗ್ಗವರ್ಗಜಿಗ್ಗೆ ಲ
ಕ್ಷ್ಮೀನಾರಾಯಣನೀವನಕ್ಕೆ ಚಿಕದೇವೇಂದ್ರಂಗೆ ಸಾಮ್ರಾಜ್ಯಮಂ || ೨ ||

ಅಂತ್ಯ: ಕರ್ಣಾಟಕ ಚಕ್ರವರ್ತಿಯುಂ | ಕಲ್ಯಾಣ ಕೀರ್ತಿಯುಂ | ಲೋಕೈಕ ವೀರನುಂ | ವೀರರೊಳ್ ಗಣ್ಡನುಂ | ಗಣ್ಡರೊಳ್ಗಣ್ಡನುಂ | ಆನ್ತೆಮ್ಬರ ಗಣ್ಡ........ ....ಸಿ ನೆಗಳ್ದ ಶ್ರೀಮದಪ್ರತಿಮ ವೀರನರಪತಿ ಚಿಕದೇವ ಮಹಾರಾಯ ವಿರಚಿತಮಪ್ಪ ದಿವ್ಯ ಪ್ರಬನ್ಧಙ್ಗಳೊಳ್ । ಚಿಕದೇವರಾಯ ಬಿನ್ನಪಕ್ಕೆ ಮಙ್ಗಳಂ || ಶ್ರೀ || ಶ್ರೀಮತೇರಾಮಾನುಜಾಯನಮಃ ||

ವಿಷಯ: ಮೇಲುಕೋಟೆ ನಾರಾಯಣಸ್ವಾಮಿಯನ್ನು ಕುರಿತು ಮಾಡಿದ ಸ್ತೋತ್ರ.

ವಿಶೇಷ: ಬರಹವು ಸ್ಫುಟವಾಗಿಯೂ ಸುಂದರವಾಗಿಯೂ ಇದೆ. ಕಡೆಯ ಎರಡು ಓಲೆಗಳು ಮುರಿದುಹೋಗಿವೆ. ೨೮ ಕ್ರಮ ಸಂಖ್ಯೆಯ ಎರಡು ಪತ್ರಗಳಿವೆ.

502

ಕೆ. ಎ. ೨೪	**ಚಿಕ್ಕದೇವರಾಯ ಬಿನ್ನಪ**	ಚಂಪು
೧೨.೮"×೭.೮"	ಚಿಕ್ಕದೇವರಾಜ	೧೬೮೦
೧_೬೫ ಪತ್ರ	೨೨ ಪಂಕ್ತಿ	೨೫ ಅಕ್ಷರ

ಆದಿ: ಚಿಕ್ಕದೇವರಾಯ ಬಿಂನಪಾ–

ಶ್ರೀ ಕೌಶಿಕಾನ್ವಯ x x x

ಶ್ರೀ ರಮಣನಖಿಲ ಸದ್ಗುಣ
ವಾರಿಧಿಯಾನನ್ದಮಯ ವಿಮಾನೋದರ ವಿ ।
ಸ್ಫೂರಿತ ರೂಪಂ ಯದುಗಿರಿ
ನಾರಾಯಣನಾಳ್ದನಕ್ಕೆ ನರಪತಿಗನಿಶಂ ॥

ಶಾ॥ ಆನಂದೈಕರಸಂ ಸಮಸ್ತಜಗದಾನಂದಂಗೆ ಚಕ್ರಾಯುಧಂ
ಸೇನಾಚಕ್ರದಿ ಮುದ್ರಿತಾಹಿತ ಮಹೀಚಕ್ರಂಗೆ ವೈಕುಂಠನಂ
ನ್ಯೂನೋಪಾಯ ವಿಕುಣ್ಠಿತಾರಿ ಧರಣೀ ಭೃದ್ದುರ್ಗ್ಗವರ್ಗಂಗೆ ಲ
ಕ್ಷ್ಮೀನಾರಾಯಣಸೀವನಕ್ಕೆ ಚಿಕ್ಕದೇವೇನ್ದ್ರಂಗೆ ಸಾಮ್ರಾಜ್ಯಮಂ ॥ ೨॥

ಅಂತ್ಯ: ಕರ್ನಾಟಕ ಚಕ್ರವರ್ತಿಯುಂ ಕಲ್ಯಾಣಕೀರ್ತಿಯುಂ ಲೋಕೈಕವೀರನುಂ ವೀರರೊಳ್ಗಂಡನುಂ ಗಂಡರೊಳ್ಗಂಡನುಂಮೆನಿಸ ನೆಗಳ್ದ ಶ್ರೀಮದಪ್ರತಿಮ ವೀರನರಪತಿ ಶ್ರೀ ಚಿಕದೇವ ಮಹಾರಾಜ ವಿರಚಿತಮಪ್ಪ ದಿವ್ಯಪ್ರಭಂಧಂಗಳೊಳ್ ಶ್ರೀಚಿಕದೇವರಾಯ ಬಿಂನ್ನಪಕ್ಕೆ ॥ ಜಯಮಂಗಳ ॥ ಶ್ರೀಶ್ರೀಶ್ರೀ ಶ್ರೀಕೃಷ್ಣಾರ್ಪಣಮಸ್ತು ॥ ಶ್ರೀಚಿಕದೇವರಾಯ ಬಿಂನಪಂ ಸಂಪೂರ್ಣಂ ॥

ವಿಷಯ: ಮೇಲುಕೋಟೆ ನಾರಾಯಣಸ್ವಾಮಿಯನ್ನು ಕುರಿತು ಮಾಡಿದ ಸ್ತೋತ್ರ.

ವಿಶೇಷ: ಗ್ರಂಥವು ಸುದೃಢವಾಗಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

503

ಕೆ. ಬಿ. ೬೭	**ಚಿಕ್ಕದೇವರಾಯ ಸಪ್ತಪದೀ**	ಹಾಡು
೮.೧″×೬.೪″	ಚಿಕ್ಕದೇವರಾಜ	೧೬೮೦
೧–೪೯ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ: ಶ್ರೀ ಚಿಕದೇವರಾಯ ಸಪ್ತಪದಿ ಪ್ರಾರಂಭಃ ॥ ಬಿರುದಾವಳಿ ಸಪ್ತಪದಿ ಇದರೊಳೊರ್ಮೊದಲ ತ್ರಿಪದಿಯೊಳ್ ಇಷ್ಟದೇವತಾ ಸ್ಮರಣರೂಪವಾದ ಮಂಗಲಮಂ । ಕಥಾನಾಯಕ ಗುಣವರ್ನರೂಪವಾದ ವಸ್ತುನಿರ್ದೇಶಮುಮಂ ಬೆರಸಿ ಪೇಳ್ವರ್ ॥ ರಾಗ ಯರಕಲ ಕಾಂಬೋಧಿ ಅಟತಾಳ.

ಮಂಗಳ ಮಹಿಶೂರವರನಿಗೆ ।
ಮಗೆ ಮಂಗಳ ಚಿಕದೇವರಾಯನಿಗೆ ॥ ಪಲ್ಲವಿ ॥

ಪರಿತಂದ ಧರ್ಮ ವಿಪಕ್ಷರೆನಿಪ ಭೂ
ವರನನಿಬರ ಪೊಯ್ದು ಬಸವಳಸಿ
ಉರೆ ಧರ್ಮರಾಜ್ಯವನುನ್ನತಿಗೊಳಿಸಿದ
ಪುರುಷೋತ್ತಮನಿಗೆ ಪುಂಡರೀಕಾಕ್ಷಗೆ ॥ ೧ ॥

ಅಂತ್ಯ : ಮೊಗದಿರುಗುವವರ ಮೋನದೊಳಿರುವರ
ಹಗೆಯ ಸಾಧಿಸುವರ ಹಂಮೈಸುವರ
ಮುಗುಳುನಗೆದೋರುವರ ಮೋಡಿಯು ಕಾಣಿಸುವರ
ಯೆಗುವೆ ಚಿಕದೇವರಾಯನೇನು ಮೆಚ್ಚಿದೆನೆಂಬರಾ ॥ ೩ ॥ ೭ ॥

ಸ್ವಾಧೀನವಲ್ಲಭೆಯರ ವೃತ್ತಾಂತ ಸಪ್ತಪದಿ ಸಂಪೂರ್ಣಂ

ವಿಷಯ : ಚಿಕ್ಕದೇವರಾಯನ ಗುಣವರ್ಣನೆ.

ವಿಶೇಷ : ೧೮೫ರಿಂದ ೨೮೨ರವರೆಗೆ ಪುಟಸಂಖ್ಯೆ ಇದೆ. ಗ್ರಂಥದಾದಿಯ ಬೇರೊಂದು ಪತ್ರದಲ್ಲಿ ವಿಷಯಾನುಕ್ರಮಣಿಕೆಯಿದೆ.

504

ಕೆ. ೧೮೯/೨	**ಚಿಕ್ಕನೀಲಮ್ಮನ ಸ್ತೋತ್ರ**	ವಾರ್ಧಕ ಷಟ್ಪದಿ
೯.೬"×೨"	?	?
೨೫ನೆಯ ಪತ್ರ	೯ ಪಂಕ್ತಿ	೪೦ ಅಕ್ಷರ

ಆದಿ : ಚಿಕ್ಕನೀಲಮ್ಮನ ಸ್ತೋತ್ರ. ವಾರ್ಧಿಕ ಷಟ್ಪದ.
ಶರಣು ಶರಣು ಹಿತಕಾಲಮತ ಹತಕಾಲಜಿತ ನಿಮಗೆ
ಶರಣು ಶರಣಾವಾಗ ನಿಂಮ್ಮ ಮೃದು ಪದಂಗಳಿಗೆ
ಶರಣೆಂದು ದುರಿತವನಕಳವೆನೆಂನಯ ಜಗದ್ಗುರು ಬಸವರಾಜನರಶಿ ॥ಪಲ್ಲ॥

ಪತ್ರಜಾತನ ಶಿರಃ ಪತ್ರಕರ ಪಾತ್ರನಂ
ಪತ್ರ ಗಮನನ ನಯನ ಪತ್ರ ವಿಕಶಿತ ಭಾನು
ಪತ್ರ ವೈರಿಯು ಪತ್ರಮಿತ್ರಗ್ನಿಯಾವಾಗ ನೇತ್ರನಾಗಿರುತಿರ್ಪನಾ
ಪತ್ರಾತಪತ್ರ ಚೌಲೋಕುಲಿಶಕುದುರಾತ
ಪತ್ರನಯನನೋಪಾದ ಪತ್ರನಂ ಸದ್ಭಕ್ತಿ
ಗೋತ್ರನಂ ಭವಲತಲವಿತ್ರನಂ ಸದ್ಧರ್ಮ್ಮಗೋತ್ರ ಬಸವೇಶನರಶಿ ॥ ೧ ॥

ಅಂತ್ಯ: ಯೂಪದಂಗಳನುದೆಯ ಮದ್ಯಾನ ಸಂಜೆಯೊಳು
ವ್ಯಾಪಕತತ್ವದೊಳು ಬರದೋದಿಡೆ ಭಕ್ತಿಯಂ
ತಾಪದುಸ್ಸಂಗ ಸ್ವಪ್ನಂಗಳಳಿವವವು ಕಾಪಾಲಿ ಬಸವೇಶನಾ
ಯೋಪಳೆನಿಸುವ ನೀಲಲೋಚನೆಯ ಸ್ತೋತ್ರವಂ
ತಾಪಕೋಪವಿರಹಿತ ದುಸ್ಸಂಗದೂರವಹ
ಚಪಲರು ಬಜಿಸಿ ಭಕ್ತಿಯ ರಸವು ತುಂಬಿರ್ದ್ದ ಕೂಪಳೆನಿಸುವ ಶಾಂತೆಯು||೫||

ಚಿಕ್ಕನೀಲಮ್ಮನ ಸ್ತೋತ್ರ ಸಂಪೂರ್ನ ಮಂಗಳ ಮಹಾ ಶ್ರೀ-

ವಿಷಯ: ಬಸವನರಸಿಯ ಸ್ತುತಿ.

ವಿಶೇಷ: ಈ ಕೃತಿಯಲ್ಲಿ ಐದು ಷಟ್ಪದಿಗಳಿವೆ. ಇದೇ ಕಟ್ಟನಲ್ಲಿ ಸಿದ್ಧೇಶ್ವರ ಪುರಾಣದ ನಾಂದ್ಯ, ಮಹಂತಯ್ಯನವರು ನಿರೂಪಿಸಿದ ನಾಂದ್ಯಗಳೆಂಬ ಇತರ ೨೩ ಗ್ರಂಥಗಳಿವೆ.

505

ಕೆ ಬಿ. ೩೫೩/೩	**ಚಿಕ್ಕಪಟ್ಟಾಭಿಷೇಕ**	ಯಕ್ಷಗಾನ
೯"×೬.೫"	?	?
೪೯–೭೨ ಪತ್ರ	೨೩ ಪಂಕ್ತಿ	೨೧ ಅಕ್ಷರ

ಆದಿ: ರಾಮಾಯಣದೊಳಗಣ ಆಯೋದ್ಯಖಾಂಡಾ ಚಿಕ್ಕಪಟ್ಟಾಭಿಷೇಕ ಬರೆಯುವ ದಕ್ಕೆ ನಿರ್ವಿಘ್ನಮಸ್ತು ||

ಶ್ಲೋಕ||ಶ್ರೀರಾಮಂಚ ಸು....ಪುಂಗ್ಗವಂಧಿತಪದಂ ಕಂಸ್ಸಲ್ಯಾಗರ್ಭೋದ್ಭವಂ
ಪಾರಾವಾರ ಸಮಾನ ಗಂಭೀರಗುಣಂ ತ್ರೈಲೋಕನಾಥಾ ಪ್ರಚು
ಮಾರೀಚಾ ಖರಕುಂಭಕರ್ನ ಮತ್ತನಂ ದಶಕಂಠ ಸಂಹಾರಕಂ
ಕಾರುಣ್ಯಾಂಬುಧಿ ಜಾ.......ಕೀಪಥಂ ದ್ಯಾಯ ಮದ್ಯಾನಂ ಸಮ್ಮರ್ಪ
ಯೊಮರಿಯೆ ಗಹಾವಿಗ್ನಾ ಕರ್ಮಾಕೂಲೇ ಭತಗಾಜ ಸಂಗ ವಿರಾಜಿತಂ||

ರಾಗಾ ನಾಟ್ಟ ಜಂಪ್ಪೆ ||

ಜಯಾ ಜಾನಕೀಕಾಂತ್ತಾ । ಜಯಾ ಸಾಧುಗುಣವಂತ್ತ
ಜಯತು ಮಹಿಮ.... । ಜಯಾ ಭಾಗ್ಯವಂತ್ತ ||

ಜಯತು ಜಯತು || ಪಾಲಾ ||

ಅಂತ್ಯ : ರಾಗಾ ॥ ಡಾವಾಳಾರಿ ಅಷ್ಟ ॥

ಮುರು ಲೋಕದ ಚೆಂನಿಗನಾ ತಾನ್ನಾಕಾನದ್ಧಾರಾ ।
ಮುರುಲೋಕದಿ ನೋ--ಮಾನ ಮುಪು ತಂನವಯನಾಗಳು ॥
ಮುರುಲೋಕಳು ಮುರುಕಂ ಮುರುಕರ ಮುರು ಲೋಕರ ತಾ
ತಂಮ್ಮಯನ ....ಳು ....ಮುರುಧಾನಾಯನು........।

ವಿಷಯ : ರಾಮಾಯಣದ ಅಯೋಧ್ಯಾಕಾಂಡದ ಕಥಾಭಾಗ.

ವಿಶೇಷ : ೭೩–೭೬ ಪತ್ರಗಳು ಇಲ್ಲ. ಅಸಮಗ್ರ ಮತ್ತು ಶಿಥಿಲ ಪ್ರತಿ. ತಪ್ಪು ಅಧಿಕ. ಹುಳು ಹಿಡಿದಿದೆ. ಇದೇ ಪುಸ್ತಕದಲ್ಲಿ ರಾವಣೋದ್ಭವ ಪ್ರಸಂಗ, ಪುತ್ರಕಾಮೇಷ್ಠಿ, ವಾಲಿಸುಗ್ರೀವರ ಕಾಳಗ, ಚೂಡಾಮಣಿ ಪ್ರಸಂಗ, ಸೇತುಬಂಧನ ಪ್ರಸಂಗ, ಅಂಗದ ಸಂಧಾನ, ರಾವಣನ ಕಥೆ, ವೆಂಕಟೇಶ ಶತಕ ಎಂಬ ಕೃತಿಗಳಿವೆ.

506

ಕೆ. ಎ. ೧೯೮/೨	**ಚಿಕ್ಕಶ್ರಾವಕಾಚಾರ**	ಕಂದ, ವೃತ್ತ
೧೨.೮"×೮"	?	?
೧–೧೮ ಪತ್ರ	೨೮ ಪಂಕ್ತಿ	೨೫ ಅಕ್ಷರ

ಆದಿ : ಚಿಕ್ಕ ಶ್ರಾವಕಾಚಾರ X X X

ಶ್ರೀ ವೃಷಭ ಜಿನೇಂದ್ರಾದಿ ಮಾ
ಹಾವೀರ ಜಿನಾಂತ್ಯಮಾದ ಜಿನಪತಿಗಳು
ಭವ್ಯಾಳಿಗೆ ಚತುರ್ವಿಂಶತಿ
ದೇವರ್ದಯೆಗೆಯ್ಗೆ ವಿಮಳರತ್ನತ್ರಯಮಂ ॥ ೧ ॥

ಅಮರ್ದಷ್ಟಾದಶದೋಷ ವರ್ಜಿತನವಂ ಸರ್ವಜ್ಞನಿಂದ್ರಾರ್ಚಿತ
ಕ್ರಮುಮಂತಾತನೆ ಪೇಳ್ವುದಾಗಮುಮಿಳಾ ಲೋಕೈಕ ಪೂಜಂ ತದಾ
ಗಮುವೊಂದರ್ತ್ಥಮೆ ತತ್ತ್ವಮೆಂದು ನಯದಿಂ ಕೈಕೊಂಡು ನಂಬಿಪ್ಪುದು
ತ್ತಮ ಸೌಖ್ಯಾಸ್ಪದಮಪ್ಪ ಸಿರ್ವೃತಿನುತ ಶ್ರೀ ಸ್ಪರ್ಶನಂ ದರ್ಶನಂ ॥ ೨ ॥

ಅಂತ್ಯ : ಬಗೆ ಪುಸ್ತಕ ಶೌಚಗುಣಂ
ನೆಗಳ್ದ ಕಮಂಡಲು ದಯಾರ್ದ್ರ ಭಾವಂ ಕುಂಚಂ
ಮಿಗಿಲೆನಿಪಾತ್ಮಧ್ಯಾನಂ
ಸೊಗಯಿಪ ಲಿಂಗಂ ಯಾಥಾರ್ಥಯತಿಗುಪಕರಣಂ ॥ ೧೪೭ ॥

ಜಗದೊಳ್ಪಾವನಮಪ್ಪ ತೀರ್ಥಜಲದಿಂ ಶ್ರೀಗಂಧದಿಂ ಮುತ್ತಿನ
ಕ್ಷತೆಯಿಂ ಚಂಪಕಮಾಲೆಯಿಂ ಚರುವಿನಿಂ ದೀಪಂಗಳಿಂ ಧೂಪದಿಂ
ನೆಗಳ್ದಿರ್ದ್ದ ಕ್ರಮು ಮಾತುಳುಂಗ ಫಲದಿಂ ರತ್ನತ್ರಯಾಧೀಶ್ವರರಂ
ಘ್ರಿಗಳಂ ಪೂಜಿಪ ಭವ್ಯಕೋಟಿಗೆ ಜಯಂ ಭದ್ರಂ ಶುಭಂ ಮಂಗಳಂ॥೧೪೪॥

ಚಿಕ್ಕ ಶ್ರಾವಕಾಚಾರ ಸಮಾಪ್ತ ಶ್ರೀ॥

ವಿಷಯ : ಜೈನಸಂಪ್ರದಾಯದ ಧರ್ಮ ಮತ್ತು ಆಚಾರಗಳು.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಪ್ರತಿಯ ಕಾಲ ಕ್ರಿ. ಶ. ೧೮೯೫; ಪ್ರತಿಕಾರರು ನರಸಿಂಹ ಶಾಸ್ತ್ರಿಗಳು. ಇದೇ ಪುಸ್ತಕದಲ್ಲಿ ಮುನಿವಂಶಾಭ್ಯುದಯ, ಶ್ರಾವಕಾಚಾರ, ಜ್ಞಾನಸಾರ ಎಂಬ ಕೃತಿಗಳಿವೆ.

507

ಕೆ. ಬಿ. ೨೪೯/೧	**ಚಿತ್ಕಲಾಲಿಂಗ ವಚನಾಮೃತಸಾರ**	ಕಂದ
೮"×೬.೬"	?	?
೧–೯ ಪತ್ರ	೨೫ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ x x x ಚಿಕ್ಕಲಾಲಿಂಗ ಚಿತ್ತ್ರಣಮು ಸಂಯೋಗ ಚಿದಾಮೃತಸಾರ ಬರ್ರೆವುದಕ್ಕೆ ಶುಭಮಸ್ತು ನಿರ್ವಿಘ್ನಮಸ್ತು ಶ್ರೀಬಸವ ಲಿಂಗಾಯ ನಮಃ

ಕಂದ ॥ ಶೀಮದ್ಗುರುವರ ಶಂಕರ
ಹೇಮಾಚಲವಾಸಯಿಾಶ ಮುನಿಗಣ ಸೇವಿತ
ಕಾಮುಪಿತ ನಯನ ಪೂಜಿತ
ಪ್ರೇಮದಿ ಸಲಹೆಂನ ಬಸವಲಿಂಗ ಪ್ರಭುವೇ ॥ ೧ ॥

ಶ್ರೀ ಮಹದೇವನೆ ಶಂಕರ
ಸೋಮುಸೆ ಸುಖ ಪೂರ್ನದಾಮು ನಿತ್ಯನೇ ನಿರಪನೆ
ಕಾಮಿತ ಸುರವರ ಪೂಜ್ಯನೆ
ಪ್ರೇನುದಿ ಸಲಹೆಂನ ಪರಮು ಗುರುಬಸವೇಶಾ ॥ ೨ ॥

ಅಂತ್ಯ : ಇದು ಲಿಂಗಾಂಗದ ಸಂಗದ
ಸದಮಲ ಸದ್ಭಾವ ಪೂಜೆ ಇದನಾವವ ಹೃ

ತ್ಸದನದೊಳಗರಿದು ಪರಿಸಿದ
ಡಮು ಗುರು ಲಿಂಗಾಂಗ ಸಂಗ ಪರಮಪ್ರಭುವೇ ॥ ೨೪೬ ॥

ಚಿಕ್ಕಲಾಲಿಂಗ ಚಿತ್ರುಣವು ಸಂಯೋಗ ಚಿದಾಂಮೃತಸಾರ
ಸಂಪೂರ್ನ ಮಂಗಳ ಮಹಶ್ರೀ

ವಿಷಯ : ವೀರಶೈವ ತತ್ತ್ವ.

ವಿಶೇಷ : ಇದೇ ಪುಸ್ತಕದಲ್ಲಿ 'ಹರದ ನೀತಿ' ಎಂಬ ಮತ್ತೊಂದು ಗ್ರಂಥವಿದೆ.

508

ಕೆ. ಎ. ೧೦೭/೭	**ಚಿತ್ರಸೇನನ ಕಾಳಗ**	ಯಕ್ಷಗಾನ
೧೨.೧"×೭.೮"	ಮಧ್ವದಾಸ	೧೮೦೦
೮೫–೧೦೦ ಪತ್ರ	೩೩ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ ಯಕ್ಷಗಾನದಲ್ಲಿ ಚಿತ್ರಸೇನ ಕಾಳಗ ಬರಿಯುವದಕ್ಕೆ ನಿರ್ವಿಘ್ನಮಸ್ತು ॥
ನಾಂದಿವೃತ್ತಾ ॥

ಶ್ರೀಮಂನ್ಮಾರುತನಂದನಾರ್ಚಿತ ಪದಂ ಶ್ಯಾಂತಂ ರಮಾವಲ್ಲಭಂ
ಸೋಮಾದಿತ್ಯ ಸಹಸ್ರಕೋಟಿ ಸದ್ರುಶಂ ಸುಜ್ಞಾನ ದೇವಂ ಹರೀಂ
ಕಾಮಾರಾತಿ ಸಖಂ ಕರೀಂದ್ರ ವರದಂ ಕಾರುಂಣ್ಯಕಲ್ಪೋಧ್ರುಮಂ
ಭೀಮಂ ಭಕ್ತಜನಾನುತಾಪ ಶಮನಂ ಶ್ರೀಕೃಷ್ಣದೇವಂ ಭಜೇ ॥ ೧ ॥

ಅಂತ್ಯ :
ಸಂಗೀತಲೋಲನಿಗೇ ಸರಸಗುಣ ಸೀಲನಿಗೇ
ಮಂಗಳಾಂಗಗೆ ಮಹೇಶ್ವರ ಬಾಲಗೇ
ಶೃಂಗಾರದಿಂದ ಧರ್ಮಸ್ತ್ರಳದಿ ಶೋಭಿಸುವ
ಭಂಗಾರ ಗಜಮುಖದ ಗಣನಾಥಗೇ ॥ ೩೫೦ ॥
ಅವತಾರತ್ರಯಗೆ ಮಾಯಾವಾದಿ ದಲ್ಲಣಗೇ
ಪರಮಪವನಸುತಗೇ ಪಾವನ ಚರಿತಗೇ
ಭುವನಜೀವನ ಮಧ್ವಪತಿ ಕೃಷ್ಣಸುಪ್ರಿಯಗೇ
ದಿವಿಜವಂದಿತಗೆ ತತ್ವಜ್ಞಾನಿಗೇ
ಜಯ ಮಂಗಳಂ ನಿತ್ಯ ಶುಭ ಮಂಗಳಂ ! ಅಂತೂ ಸಂಧಿ ೧೫ಕ್ಕಂ
ಪದನೂ ೩೫೧ಕ್ಕಂ ಮಂಗಳಂ ಮಹಾಃ ಶ್ರೀ॥

ವಿಷಯ : ಧನಂಜಯನು ಚಿತ್ರಸೇನ ಗಂಧರ್ವನೊಡನೆ ನಡೆಸಿದ ಕಾಳಗ.

ವಿಶೇಷ : ಇದೇ ಪುಸ್ತಕದಲ್ಲಿ ಐರಾವತ, ದ್ರೌಪದೀಕಲ್ಯಾಣ, ಸುಭದ್ರೆಕಲ್ಯಾಣ, ಕನಕಾಂಗಿ ಕಲ್ಯಾಣ. ಸಭಾಪರ್ವ. ಇಂದ್ರಕೀಲ ಎಂಬ ಗ್ರಂಥಗಳೂ ಇವೆ. ೧೧೧ನೇ ಪತ್ರದಲ್ಲಿ ವಿರಾಟಪರ್ವದ ಆರಂಭದ ಒಂದೇ ಒಂದು ಹಾಡೂ ಮತ್ತು ಗೌಳೀ ಫಲ ನಿರ್ಣಯವೆಂಬ ಅಸಂಪೂರ್ಣ ಗ್ರಂಥವೂ ಇವೆ.

509

ಕೆ. ಬಿ. ೩೫೪/೧	ಚಿತ್ರಸೇನನ ಕಾಳಗ	ಯಕ್ಷಗಾನ
೭.೧"×೫.೮	ಮಧ್ವದಾಸ	೧೮೦೦
೧—೨೪ ಪತ್ರ	೧೯ ಪಂಕ್ತಿ	೨೪ ಅಕ್ಷರ

ಆದಿ : ಶ್ರೀ ಚಿತ್ರಸೇನನ ಕಾಳಗ ಬರೆಯುವುದಕ್ಕೆ ಶುಭಮಸ್ತು ||

ವೃತ್ತಾ|| ಶ್ರೀಮನ್ಮಾರುತ ನಂದನಾರ್ಚಿತ ಪದಂ ಭಾಂತಂ ರಮಾವಲ್ಲಭಂ
ಸೋಮಾದಿತ್ಯ ಸಾಹಾಸ್ರಕೋಟೀರುಚಿರಂ ಸುಗ್ನ್ಯಾನ ದೇವಂ ಹರಿಂ
ಕಾಮರತಿಸಖಂ ಹರೀಂದ್ರವಾರದಂ ಕಾರುಂಣ್ಯ ಕಲ್ಪದ್ರುವಂ
ಭೀಮಂ ಭಕ್ತಜನನುತ ಪಾಪಶಮನಂ ಶ್ರೀಕೃಷ್ಣದೇವಂ ಭಜೇ || ೧ ||

ರಾಗಾ || ನಾಟಿ ಝಂಪೆ || ಜಯಮಹಾಗಣನಾಥ
ಜಯಮೂಷಿಕವರೂಥ
ಜಯತು ಶಿವಸಂಜಾತ
ಜಯಹರಪ್ರೀತಾ || ಪಲ್ಲಾ ||

ಅಂತ್ಯ : ಪಶ್ಚಿಮಾಂಬುಧಿಯ ತಡಿಯಲಿ ಬಂದ ಮಾರುತಿಗೆ ನಿಶ್ಚಯವ ತೋರಿ ಪೂಜೆಯಗೊಂಬಗೇ ಆಶ್ಚರ್ಯ ಮಹಿಮಗೆ ಆನಂದಭರಿತನಿಗೆ ಸಚ್ಚರಿತ ಮಧ್ವಪತಿ ಶ್ರೀ ಕೃಷ್ಣಗೇ || ಜಯಮಂಗಳಂ || ೩೩೮ ||

ಚಿತ್ರಸೇನನ ಕಾಳಗಾ ಸಂಪೂರ್ನಕಂ ಮಂಗಳಂ ಮಹಾಶ್ರೀ||

ವಿಷಯ : ಅರ್ಜುನನು ಚಿತ್ರಸೇನನನ್ನು ಸೋಲಿಸಿ ಕೈಸೆರೆಯಿಂದ ದುರ್ಯೋಧನನನ್ನು ಬಿಡಿಸಿದ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ಕರ್ಣಾರ್ಜುನರ ಕಾಳಗ ಧ್ರುವಚರಿತ್ರೆ, ಐರಾವತ, ವಿರಾಟಪರ್ವ ಎಂಬ ಈ ನಾಲ್ಕು ಕೃತಿಗಳಿವೆ.

510

ಕೆ. ಬಿ. ೩೫೮/೧	ಚಿತ್ರಸೇನನ ಕಾಳಗ	ಯಕ್ಷಗಾನ
೭.೬"X೫.೭"	ಮಧ್ವದಾಸ	೧೮೦೦
೧ ೪೭ ಪತ್ರ	೧೪ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ X X ಭಾರತದಲ್ಲಿ ಅರಂಣ್ಯ ಪರ್ವದೊಳಗೆ ಚಿತ್ರಸೇನನ ಕಾಳಗ ಬರಿಯುವದಕ್ಕೆ ಶುಭಮಸ್ತು.

ಶ್ರೀಮಂನ್ಮಾರುತ ನಂದನಾರ್ಚಿತ ಪದಂ ಶಾಂತಂ ರಮಾವಲ್ಲಭಂ
ಸೋಮಾದಿತ್ಯ ಸಹಸ್ರ ಕೋಟಿರುಚಿರಂ ಸುಗ್ನಾನದೇವಂ ಹರೀ
ಕಾಮಾರಾತಿ ಸಖಂ ಕರೀಂದ್ರ ವರದಂ ಕಾರುಂಣ್ಯ ಕಲ್ಪದ್ರುಮಂ
ಭೀಮಂ ಭಕ್ತಜನಾನುತಾಪಶಮನಂ ಶ್ರೀಕೃಷ್ಣದೇವಂ ಭಜೇ ॥ ೧ ॥

X X X X

ಕಂನಡದ ನುಡಿಗಳಿಂದೆಕ್ಷಗಾನದಲೀ
ವರ್ನಿಸುವೆ ಮಧ್ವಪತಿ ಕೃಷ್ಣನೊಲುಮೆಯಲೀ ॥ ೪ ॥

ಅಂತ್ಯ : ಅವತರಾತ್ರಯಗೆ ಮಾಯಾವಾದಿದಲ್ಲಣಗೆ
ಪರಮ ಪವನ ಸುತಗೆ ಪಾವನ ಚರಿತಗೆ
ಭುವನ ಜೀವನ ಮಧ್ವಪತಿ ಕೃಷ್ಣಸುಪ್ರಿಯಗೆ
ದಿವಿಜವಂದಿತಗೆ ತತ್ವಗ್ನರಾಯರಿಗೆ ॥ ೪ ॥ ಶ್ರೀ

ವಿಷಯ : ಭಾರತದ ಅರಣ್ಯಪರ್ವದಲ್ಲಿ ಬರುವ ಚಿತ್ರಸೇನನ ಕಾಳಗ.

ವಿಶೇಷ : ಇದೇ ಪುಸ್ತಕದಲ್ಲಿ ರುಕ್ಮಿಣಿ ಸ್ವಯಂವರ ಎಂಬ ಮತ್ತೊಂದು ಗ್ರಂಥವಿದೆ.

511

ಕೆ. ಬಿ. ೨೩೮	ಚಿದಾನಂದರ ಕೋರಡೆ	ಹಾಡು
೭.೮"X೬.೨"	ಚಿದಾನಂದ	ಸು. ೧೬೭೫
೧–೧೬೩ ಪತ್ರ	೧೪ ಪಂಕ್ತಿ	[illegible] ಅಕ್ಷರ

ಆದಿ : ಚಿದಾನಂದ ಕೋರಡೆ ಪ್ರಾರಂಭವು X X X

ಶ್ರೀ ಚಿದಾನನ್ದ ಗುರವೇ ನಮಃ ॥ ತತ್ವದ ಕೀರ್ತನೆಗಳು ॥
ರಾಗ ॥ ನಾಟ ॥ ಝಂಪೆ ತಾಳ ॥ ಜಯತು ಜಯತೂ ॥

ಜಯತು ನಿತ್ಯಜನನಾಥ ಜಯತು ನಿಜನಿರ್ಭೀತ
ಜಯತು ಸದ್ಗುರುನಾಥ ಜಯತು ಅವಧೂತ ॥ ಪಲ್ಲ ॥
ಭುಗು ಭುಗು ಭುಗಿಸೆ ಪ್ರಭೆ ಥಾಯು ಝುಗ ಝುಗಿಸೆ ಕಳೆ ಮಾಯ
ನಿಗಿನಿಗಿಸಿಗಿಸೆ ಶತಸೂರ್ಯ ಹೊಳೆವ ಮರ್ಯ್ಯಾ ॥

X X X X

ನಿರರುಜ ನಿರಾಕಾರ ಜನನಿರಾಧಾರ
ನಿರ್ಲಿಪ್ತಗುರು ಚಿದಾನಂದ ಅವಧೂತ ಪ್ರಖ್ಯಾತಾ ॥ ೫ ॥

ಅಂತ್ಯ : ದೂಷಣ ಭೂಷಣವಳಿದು ನಾನು ನರನು ಎಂಬದಳಿದು । ಖುರವ ಗುರುತು ಗಳೆಲ್ಲ ಅಳಿದು ತಾನೆ ಚಿದಾನಂದ ವಿರೂಪಾಕ್ಷಿ ಹರಿಗೆ । ಯಲೆಗಾವುದೀ॥೩॥

ಅಧ್ಯಾತ್ಮ ವಿಷಯುಕವಾದ ಕೀರ್ತನೆಗಳು ಸಂಪೂರ್ಣವು.

ಭಗ್ನೇ ಪೃಷ್ಠ ಕಟಗ್ರೀವಸ್ತಬ್ಧ ದೃಷ್ಟಿರಧೋ ಮುಖಂ ।
ಕಷ್ಟೇನ ಲಿಖಿತಂ ಗ್ರನ್ಥಂ ಯತ್ನೇನ ಪರಿಪಾಲಯೇತ್ ॥

ಶ್ರೀ ಕೃಷ್ಣಾರ್ಪಣಮಸ್ತು ಶ್ರೀ

೧೯೦೧ನೇ ಪ್ಲವ ನಾಮ ಸಂವತ್ಸರದ ಅಧಿಕ ಆಷಾಢಶುದ್ಧ ೫ ಶುಕ್ರವಾರ ದಲ್ಲು ಬರೆಯಲ್ಪಟ್ಟತು.

ವಿಷಯ : ವೇದಾಂತಕ್ಕೆ ಸಂಬಂಧಿಸಿದ ಕೀರ್ತನೆಗಳು.

ವಿಶೇಷ : ಅಲ್ಲಲ್ಲಿ ಗ್ರಂಥ ಲೋಪವಿದ್ದು ಶುದ್ಧ ಪತ್ರಗಳಿವೆ. ಅಕ್ಷರ ಸ್ಫುಟವಾಗಿದೆ.

512

ಕೆ. ಬಿ. ೧೧೪	**ಚೂಡಾಮಣಿ**	ಯಕ್ಷಗಾನ
೭.೭″×೬.೧″	ಅಳಿಯ ಲಿಂಗರಾಜ	೧೮೫೦
೧–೪೧ ಪತ್ರ	೧೫ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ X X X ಚೂಡಾಮಣಿ ಕಥೆ

ವಾರ್ಧಿಕ॥ ಸಾರತತ್ವ ವಿಚಾರ ಪಾರೀಣ ಮುನಿಪತಿಯೆ
ಸೂರವಂಶೋದ್ಧಾರ ರಾಮಲಕ್ಷ್ಮಣರು
ವರಶಾರದ ಘನಾಕಾರ ಕಬರಿಯಂ ಶಬರಿಯಂನುದ್ಧರಿಸಿ ಕರುಣವೆರಸಿ
ಘೋರ ಕಾಂತಾರದೊಳ್ ತೊಳಲುತ್ತ ಬಳಲುತ್ತ

ನಾರಿಯಂ ನೆನನೆನದು ಮರುಗುತ್ತ ಕರಗುತ್ತ
ವೀರರಘುವರನು ಮುಂದೇನನೆಸಗಿದನೆಂದು ಕುಶಲವರು ಕೇಳಿಕೇಳಿ || ೧ ||
ದ್ವಿಪದೆ|| ಕೇಳಿರೈ ಮಕ್ಕಳಿರ | ಮುದದಿ ಮುಂಗಥೆಯ
ಪೇಳುವೆನು ನಿಮ್ಮ ಪಿತನೆಸಗಿರ್ಪ ಪರಿಯು || ೨ ||

ಅಂತ್ಯ : ವಾರ್ಧಿಕ—

ಮೆರೆವ ಚೂಡಾಮಣಿಯ ಕಪಿಕುಲ ಶಿಖಾಮಣಿಯು
ಕರಕೀಯೆ ನಿಜ ಶೋಕ ತಿಮಿರ ದಿನಮಣಿಯಂತೆ
ಶರೆವಿಡಿದು ನಯನಾಬ್ಜದಿಂ ನೋಡಿ ನಲಿದಾಡಿ ಕೊಂಡಾಡಿ ಬಿಗಿದಪ್ಪುತ
ಕರವಿಡಿದು ಮುಂದಪ್ಪ ವಿಧಿಪದವಿ ನಿನಗೆಂದು
ಕರುಣದಿಂ ಧಾರೆಯಂ ನೆರೆಯುತ್ತ ಪವನಜಗೆ
ಪರಮಸುಖದಿಂ ರಾಮನಿರ್ದನೆನುತ ಮುನಿ ಕುಶಲವರಿಗುಸುರುತಿರ್ದಂ
|| ೪೧೬ ||

x x x x

ಪುಂಗವ ತುರಂಗನಿಗೆ ಗಂಗಾಜನಿಗೆ
ಲಿಂಗರಾಜ ಸೇವ್ಯನಿಗೆ | ತುಂಗಮಹಲಿಂಗಗೆ || ೪೧೯ ||
ಸಂಪೂರ್ಣಂ || ಮಂಗಳಮಸ್ತು ||

ವಿಷಯ : ಹನುಮಂತನು ಲಂಕೆಯಲ್ಲಿದ್ದ ಸೀತಾದೇವಿಯನ್ನು ಕಂಡು ಗುರುತಿಗಾಗಿ ಅವಳಿಂದ ಚೂಡಾಮಣಿಯನ್ನು ತೆಗೆದುಕೊಂಡು ರಾಮನಿಗೆ ತಂದು ಕೊಡುವ ಪ್ರಸಂಗ.

ವಿಶೇಷ : ಅಕ್ಷರವು ಸ್ಫುಟವಾಗಿದೆ

513

ಕೆ. ಬಿ. ೩೬೭/೩	**ಚೂಡಾಮಣಿ**	ಯಕ್ಷಗಾನ
೮.೫"×೬.೮"	ಅಳಿಯಲಿಂಗರಾಜ	೧೮೫೦
೧೧೧—೧೫೨ ಪತ್ರ	೧೩ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ| ಚೂಡಾಮಣಿ ಬರೆಯುವದಕ್ಕೆ ನಿರ್ವಿಘ್ನಮಸ್ತು

ವಾರ್ಧಿಕ್ಯ|| ಕುಶನೆ ಕೇಳ್ವಾಲಿಯಂ ಸಂಹರಿಶಿ ಕಿಷ್ಕಿಂಧ
ದೆಶೆಯಾಧಿಪತ್ಯಮಂ ಸುಗ್ರೀವನಿಗೆ ಕೊಟ್ಟು
ಕುಶಲದಿಂ ಸ್ರವಣಪರ್ವತಕೆ ನಡೆತಂದಲ್ಲಿ ಮಳೆಗಾಲವಂ ಕಳಿದರು

ವಸುದೆಪಾಲಕನೊಂದು ದಿನ ತಂನ ಮನದಿ ಚಿಂ
ತಿಸುತ ಜನಕಾತ್ಮಜಯ ನೆನನೆನದು ದುಃಖಿಸು
ತ ಸ್ತೈರಣೆಯೊಳಂತರಂಗದಿ....ದು ಸವುಮಿತ್ರಗಿಂತೆಂದನ್ನು ॥ ೧ ॥
ರಾಗ ॥ ಮುದುವಮಾದವಿ ತ್ರಿವುಡೆ ॥
ಪೋಗು ಸವುಮಿತ್ರ ಸುಗ್ರೀವ ಬರಲಿಲ್ಲಾ। ಬೇಗದಿಂದಲಿ ನಾಗಸಂನೀಬವೇಣಿ
ರತಿಸುಖ ಭೋಗದಿಂದೆಂಮನು ಮರತನು ರವಿಜಾತಾ ॥ ೨ ॥

ಅಂತ್ಯ : ವಾರ್ಧಿಕ್ಯ ॥
ಅರಸು ಮಕ್ಕಳು ಕೇಳಿ ಆಗ ಚೂಡಾಮಣಿಯ
ಮರುತಸುತ ರಾಮಚಂದ್ರನ ಕೈಯ ಕೊಟ್ಟಲ್ಲಿ
ಭರಿತವಾಯಿತ್ತು ಸಂಧಿಯೆಂದು ವಾಲ್ಮೀಕಿ ಮುನಿವರನುಸೂರ್ದಂ ಪುಣ್ಯ ಕಥೆಯಾ
ಅರಿತು ಹೇಳುವ ಕೇಳ್ವ ಶ್ರೀ ಪುಣ್ಯವಂತರಿಗೆ
ದುರಿತಗಳ ಪರಿಹರಿಶಿ ಸಂತೋಷಾದಲಿ ಕಂಣ್ವ
ಪುರದೊಡೆಯ ಶ್ರೀ ಕೃಷ್ಣಾ ಸಕಲ ಭಾಗ್ಯವನಿತ್ತು ಪೊರವನನುಗಾಲ ಬಿಡದೆ ॥ ೨೯೦ ॥
ಅಂತ್ತು ಸಂಧಿ ೧.ಕ್ಕಾಂ ಮಂಗಳ ಮಹಾ ಶ್ರೀ.

ವಿಷಯ : ಲಂಕೆಗೆ ಹೋಗಿ ಆಂಜನೇಯನು ಸೀತಾದೇವಿಯಿಂದ ಚೂಡಾಮಣಿಯನ್ನು ತೆಗೆದುಕೊಂಡು ಶ್ರೀರಾಮನ ಬಳಿಗೆ ಬಂದು ಕೊಡುವ ಸನ್ನಿವೇಶ.

ವಿಶೇಷ : ಗ್ರಂಥವು ಶಿಥಿಲವಾಗಿದೆ. ಹುಳು ತಿಂದಿದೆ. ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ. ಇದೇ ಪುಸ್ತಕದಲ್ಲಿ ರುಕ್ಮಿಣೀ ಸ್ವಯಂವರ ಮತ್ತು ಬಭ್ರುವಾಹನನ ಕಾಳಗ ಎಂಬೆರಡು ಗ್ರಂಥಗಳಿವೆ.

514

ಕೆ. ಬಿ. ೫೦೦	**ಚೂಡಾಮಣಿ**	ಯಕ್ಷಗಾನ
೮"×೬.೨"	ಅಳಿಯ ಲಿಂಗರಾಜ	೧೮೫೦
೧–೬೬ ಪತ್ರ	೧೩ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ರಾಮಾಯಣದೊಳಗಣ ಚೂಡಾಮಣಿ ಬರೆಯುವುದಕ್ಕೆ ಶುಭಮಸ್ತು
ನಾಂದಿ | ಕಂದಾ ॥
ಶ್ರೀಮತ್ತಾಮರಶೋತ್ಪಲ ಶ್ವಸನವೈತ್ರೀ ಪಾತ್ರನೇತ್ರತ್ರಯಂ
ಭೀಮಂ ಭ್ರೂಕುಟಿಭಂಗಲೇಶಭಟ ಕಲ್ಪಾನಲ್ಪನಾಕಾಲಯಂ

ವಾಮಂಕಾಸ್ತಿತ ಶೈಲರಾಜತನಯಾ ಸಲ್ಲಾಪ ಲೋಲಾಶಯಂ
ಪ್ರೇಮಂಬೆತ್ತೆಮಗೀಗೆ ಭದ್ರತತಿಯಂ ಶ್ರೀ ಭದ್ರಕಾಳೀಪ್ರಿಯಂ ‖ ೧ ‖
ರಾಗಾ | ನಾಟ | ಝಂಪೆ |
ಜಯದಶರಥಕುಮಾರ | ಜಯಗಾಧಿಜಾಧಾರ
ಜಯತಾಟಕಾಕಾರ | ಕಾನನ ಕುಠಾರ
ಜಯತ ಮಾರೀಚ ಸೂಬಾಹು ಖಲ ಜಯಧೀರ
ಜಯತೂ ಗೌತಮದಾರ | ದಾನಾಮಂದಾರ ‖ ೨ ‖

X X X X

(೩ನೆಯ ಪತ್ರ) ಕಂದಾ‖ ವರ ವಾಲ್ಮೀಕಿ ತಪೋಧನ
ವಿರಚಿತ ರಾಮಾಯಣಾಬ್ಧಿಮಥನೋದ್ಗತ ಬಂ
ಧುರ ರಾಮಕಥಾಂಮೃತವಂ
ನೆರವೆನು ವಿಬುಧರ್ಗೆ ಯಕ್ಷಗಾನದೊಳಲೆಯಿಂ ‖ ೧೮ ‖

ಅಂತ್ಯ: ಪುಂಗವ ತುರಂಗನಿಗೆ | ಗಂಗಾಜಾನಿಗೆ
ಲಿಂಗರಾಜ ಸೇವ್ಯನಿಗೆ | ತುಂಗ ಮಹಲಿಂಗನಿಗೆ
ಮಂಗಳಂ ಮಹಲಿಂಗನಿಗೆ | ಶುಭಮಂಗಳಂ ‖ ೪೨೯ ‖

ಶ್ರೀಗುರುವೇಗತಿ " ಸನ್ ೧೮೯೦ ಯಿಸವಿ ಮಾರ್ಚಿ ತಾರೀಖು ೭ ರಲ್ಲು ವೋದೋಮಾದನು ಬರದೊಪ್ಪಿಸಿದ ಚೂಡಾಮಣಿ ಕಥೆ ಸಂಪೂರ್ಣಕಾಂ ಮಂಗಳಮಹಾಶ್ರೀ.

ವಿಷಯ: ರಾಮಾಯಣದಲ್ಲಿ ಬರುವ ಚೂಡಾಮಣಿ ಪ್ರಸಂಗ.

ವಿಶೇಷ: ಅಕ್ಷರ ವಿರಳವಾಗಿದೆ. ಸಮಗ್ರಪ್ರತಿ.

515

ಕೆ. ಬಿ. ೩೫೩/೫	**ಚೂಡಾಮಣಿ ಪ್ರಸಂಗ**	ಯಕ್ಷಗಾನ
೯"×೬.೫"	?	?
೯೪—೧೧೧ ಪತ್ರ	೨೨ ಪಂಕ್ತಿ	೨೩ ಅಕ್ಷರ

ಆದಿ: ಚೂಡಾಮಣಿ ಪ್ರಸಂಗ ಬರೆಯುವದಕ್ಕೆ ಸುಭಮಸ್ತು ‖ ವಾರ್ಧಿಕ್ಯಾ ‖
ಕುಶನೆ ಕೇಳ್ ವಾಲಿಯಂ ಸಾಂಹರಿಶಿ
ಕಿಸ್ಕಿಂದ ದೇಶಯಾಧಿಪತ್ಯಮಂ ಸುಗ್ರೀವನಿಗೆ ಕೊಟ್ಟು
ಕುಶಲದಿಂ ಶ್ರವಣ ಪರ್ವತದೆಡೆಗೆ ನಡೆತಂದಲ್ಲಿ ಮಳೆಗಾಲಮಂ ಕಳದರು

ವಸೂಧೆಪಾಲಕ ವಂದು ದಿನ ತನ್ನಮನದಿ ಚಿಂ
ತಿಸುತ್ತ ಜನಕಾತ್ಮಜೆಯಾ ನೆನನೆನದು ದುಃಖಿಸುತ್ತ
ಪಸರಿಸೂವಸ್ಯೆಯರಣಿಯೊಳಂತರಂಗದಿ ನಿಲಿಸಿ ಸವೂಮಿತ್ರಗಿಂತೆಂದನು ||

ಅಂತ್ಯ : ವಾರ್ಧಿಕ್ಯಾ ||
ಅರಸು ಮಕ್ಕಳು ಕೇಳೀ ಆಗಾಚೂಡಾಮಣಿಯ
ಮರುತಸುತ ರಾಮಚೆಂದ್ರನ ಕೈಯಿಲಿ ಕೊಟ್ಟಲ್ಲಿ
ನಾರಿತಾವಾಯ್ತು ಸಂಧಿಯೆಂದು ವಾಲ್ಮೀಕಿಮುನಿಯೊರೆದನೀ ಪುಣ್ಯ
ಕಥೆಯಾ ||

ಅರಿತು ಹೇಳುವ ಕೇಳುವಾ ಪುಣ್ಯ ...ನು
ಧುರಿತಗಳ ಪರಿಹಾರಿಶಿ ಸಂತೋಷದಲಿ
ಕಾಣ್ವಾಪೂರಥ ಗೋಪಾಲ ಕ್ರಿಷ್ಣನಾ ಕಾಟಾಕ್ಷದಿಂದಾ ||

ಪೂರದೊಡೆಯ ಗೋಪಾಲಾಕ್ರಿಷ್ಣ ರಕ್ಷಿಸುತ್ತ ಪೊರವನನ್ನುಗಾಲಾ ಬಿಡದೇ
ಅಂತು ಸಂಧಿ ೪,೯೨೬ ಕಂ ಜಯಮಂಗಳ ಮಹಾಶ್ರೀ

ವಿಷಯ : ರಾಮಾಯಣ ಸುಂದರಕಾಂಡದ ಕಥೆ.

ವಿಶೇಷ : ಶಿಥಿಲ ಮತ್ತು ಅಶುದ್ಧ ಪ್ರತಿ. ಹುಳು ಹೊಡೆದಿದೆ ಕೃತಿ ಕೊನೆಯಲ್ಲಿ ಕಣ್ವಪುರದ ಗೋಪಾಲಕೃಷ್ಣನ ಅಂಕಿತವಿದೆ. ಇದೇ ಪುಸ್ತಕದಲ್ಲಿ ರಾವಣೋದ್ಧವಪ್ರಸಂಗ, ಪುತ್ರಕಾಮೇಷ್ಟಿ, ಚಿಕ್ಕಪಟ್ಟಾಭಿಷೇಕ, ವಾಲಿಸುಗ್ರೀವರ ಕಾಳಗ, ಸೇತುಬಂಧನ ಪ್ರಸಂಗ, ಅಂಗಧಸಂಧಾನ, ರಾವಣನ ಕಥೆ, ವೆಂಕಟೇಶಶತಕವೆಂಬ ಕೃತಿಗಳಿವೆ.

516

ಕೆ. ಎ. ೨೫೦/೧೧	**ಚೂರ್ಣಿಕೆಗಳು**	ಗದ್ಯ
೧೩"×೮"	?	?
೧–೧೦ ಪತ್ರ	೧೪ ಪಂಕ್ತಿ	೧೮ ಅಕ್ಷರ

ಆದಿ : ಚೂರ್ನಿಕೆಗಳು
ಶ್ರೀ ವಿಷ್ಣುದಂಡಕ ||
ಶ್ರೀದೇವ ಕಾಂತಾರ ಸದ್ಗುಣಾಧಾರ | ಶ್ರೀಮೇರುಮಂದಾರ ಶ್ರೀಭಾಗ್ಯ ಗಾಂಭೀರ್ಯ | ಶ್ರೀಭಕ್ತಮಂದಾರ | ಶ್ರೀಸರ್ವ ಸಾಕಾರ | ಶ್ರೀರಾಜ ರಾಜೇಂದ್ರ | ಶ್ರೀವೇದಚಂದ್ರಾರ್ಕ ಕಾರುಣ್ಯಕೈವಲ್ಯ | ವಿಷ್ವಾರ್ಥ ದಾತಾರ | ವೈದೇಹಿನಾಥಾಯ | ವೈಕುಂಠ ವಾಸಾಯ |

ಅಂತ್ಯ: ಮೃತ್ಯುಂಜಯ ಚಾಪಖಂಡನ | ವಿಶ್ವಮಿತ್ರಯಾಗ ಸಂರಕ್ಷಣಾ
ಅಹಲ್ಯಾಶಾಪವಿಮೋಚನಾ | ಆತ್ಮಪರಾಯಣಾ |
ಶ್ರೀಮದ್ದಶಾವತಾರ ಲೀಲಾವಿನೋದಾ | ಶ್ರೀವೇದಗಿರಿ ನಿಲಯಾ
ಅಲಮೇಲ್ಮಂಗಮನೋಹರಾ ಶ್ರೀ ವೆಂಕಟೇಶ ಪಾಹಿಮಾಂ ಪಾಹಿಮಾಂ
ಪಾಹಿ || ಶ್ರೀ ||

X X X X

ರಾಮಮಂತ್ರಾಯ ತುಭ್ಯಂ ನಮೋ | ರೋಮ ಕೊಟಾಷ್ಟ ಲಿಂಗಾಯ
ತುಭ್ಯಂ ನಮೋ | ಕಡಲ ಶೈಲೇಶದಾಸನೆ ಮತ್ಪೋಷನೆ | ಶ್ರೀವೀರ
ಹನುಮಂತನೆ ನಮಸ್ತೆ ನಮಸ್ತೆ ನಮಃ || ಶ್ರೀ

ವಿಶೇಷ: ವಿಷ್ಣು ಸ್ತುತಿ.

ವಿಷಯ: ಪತ್ರದ ಒಂದು ಕಡೆ ಬರೆದಿದೆ. ಇಲ್ಲಿ ವಿಷ್ಣುದಂಡಕ ಹನುಮಂತ ದಂಡಕಗಳು ಸೇರಿವೆ. ಇದರಲ್ಲಿ 'ನೀತಿ ಶತಕ'ವೇ ಮೊದಲಾದ ಇತರ ೧೦ ಗ್ರಂಥಗಳಿವೆ.

517

ಕೆ. ೩೫/೧೦	ಚೇರಮ ಕಾವ್ಯ	ವಾರ್ಧಕ ಷಟ್ಪದಿ
೧೨"X೧.೪"	ಚೇರಮಾಂಕ	೧೫೨೬
೯೦-೧೬೭ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ: ಚೇರಮ ಕಾವ್ಯ || ರಾಗ ನಾಟಿ ||

ಪಲ್ಲವ|| ಭೂವಳಯದೊಳಗೆ ನಾರದಂ ಬಿಂನ ... ವಂ ಕಳುಪಿ ಧರಣೀತಳಕ್ಕೆ
ಚೇರಮನಾಗಿ ನಡೆತಂದನೂ ||

ಪದ|| ಶ್ರೀಮದಗಜಾವದನ ತಾಮರಸ ದಿನನಾಥ
ಕಾಮಿತ ಫಲಪ್ರದ ಸದಾ ಮಂಜುಲಾಂಗ ನಿ
ಸ್ಸೀಮ ನಿರ್ಮಲಮೂರ್ತಿ ಸಾಮವೇದಸ್ತುತ್ಯ ರಾಮಣೀಯ್ಯಕ ಸುಭಕ್ತಾ
ಪ್ರೇಮಿಯಾನತ ಕಲ್ಪಭೂಮಿರುಹ ಸಕಲಸುಖ
ಧಾಮ ಪರ್ವತ ಸಾರ್ವಭೌಮ ಸೌಂಧರ ದಿವ್ಯ
ಜಾಮಾತೃವೆನಿಪ ಗಂಗಾಮಕುಟ ರಕ್ಷಿಸಾ ಪ್ರೇಮದಿಂ ಭೋಗಮಲ್ಲಾ||೧||

X X X X

ಆ ರಮ್ಯ ಗಂಗಪ್ಪ ಶೆಟ್ಟಿಯರ ಗರ್ಭಾಬ್ಧಿ
ಚಾರುಚಂದ್ರಂ ಸತ್ಕಲಾಲಕ್ಷಣಂ ಶಿವವ
ರಾರಾಧಕನನೆಂನನೀಕ್ಷಿಸುತ ನುಡಿದರುತ್ತಮರು ಸತ್ಪ್ರಉಡರ್ಕ್ಕಳೂ
ಚೇರಮಾಂಕಂ ಶಿವನ ಪುರಕೆ ಥಾಳಿಯನಿಟ್ಟ
ಚೇರಮಚರಿತ್ರಮಂ ಸಕಲಸಜ್ಜನರುವಾ
ಚೇರಮಾಕರವಾಗಿ ಪೇಳೆಂದ ಸದ್ಭಕ್ತರಾಙತಿಯೊಳಾಂ ಪೇಳ್ವೆನೂ ॥ ೧೮ ॥

ಅಂತ್ಯ : ದೇವವಾಕ್ಯಂ ಸಾಲಿವಾಹನ ಸಕಂ ನಡೆದ
ಪಾವನಾಬ್ದದ ಸಧರ್ಮ್ಮವ್ಯಯದ ಕಾರ್ತ್ತಿಕ
ವಾ ವಿಮಲ ಶುದ್ಧ ಪಾಡ್ಯೋದಯಂ ರವಿದಿನಂ ಸ್ವಾತಿ ಸುಪ್ರೀತಿಯೋಗಂ
ಭಾವಿಸಲ್ಕಿಂ ತುಲಾರಾಸಿ ಶಶಿತಾರೆಗಳು
ತೀವಿರ್ದ್ದ ಸನ್ಮುಹೂರ್ತ್ತದೊಳಧಿಕ ಸೌಕ್ಯದಿಂ
ಭೂವರಂ ಚೇರಮಾಂಕನಂ ಚರಿತ್ರಂ ನಾಡೆ ಸಂಪೂರ್ನ್ನಮಾಯ್ತು
ಚೆಲ್ವಿಂ ॥ ೭೦ ॥

X X X X

ಯಿದು ಸಕಲ ಪದಪದ್ಮ ಮಧುಕರ ಪುಣ್ಯ
ಸದನ ಗುಬ್ಬಿಯ ಮಲ್ಲಣಾರ್ಯ್ಯರ ಕ್ರುಪಾಪಾತ್ರ
ಮುದಿತ ನವರಸಭಾವ ಲಕ್ಷಣಾಲಂಕಾರ ನಿಪುಣನೆಂದೆನಿಸಿ ಮೆರೆವಾ
ಚದುರ ಚೇರಮನೊರೆದ ಚೇರಮ ಚರಿತ್ರಮಂ
ಪದಪಿಂದೆ ಬರದೋದಿ ಕೇಳಿ ವಿಸ್ತರಿಸುವ
ಗ್ರೋದವಿಪ್ಪುದಾಯುರಾರೋಗ್ಯ ಸಂಪದ ಸರ್ವ್ವಸಿದ್ಧಿ ಸತ್ಯಂ ತಥ್ಯವೂ
॥ ೭೫ ॥

ಅಂತು ಸಂಧಿ ೧೧ಕ್ಕಂ ಪದನು ೫೫೫ಕ್ಕಂ ಮಂಗಳ ಮಹಾಶ್ರೀ. ವಿಳಂಬಿ ಸಂವತ್ಸರದ ಶ್ರಾವಣ ಸುಧ ೬ ಭಾನುವಾರದಲು ನಂಜಪ್ಪ ಬರದ ಚೇರಮ ಕಾವ್ಯಕೆ ಸುಭಮಸ್ತು ಮಂಗಳ ಮಹಾಶ್ರೀ

ವಿಷಯ : ಚೇರಮನ ಕಥೆ.

ವಿಶೇಷ : ಒಂದೆರಡು ಪತ್ರಗಳು ತ್ರುಟಿತ. ೧೬೧ನೆಂ ಪತ್ರದ ಕೊನೆ ಮುರಿದು ಹೋಗಿದೆ. ಶಕಟರೇಫವಿದೆ. ೫ ನೇ ಸಂಧಿಯಲ್ಲಿ (೧೧೭ ನೆಯ ಪತ್ರ) ೨೨ ರಿಂದ ೨೭ ಪದ್ಯಗಳಿಲ್ಲ. ೯ನೆಯ ಸಂಧಿಯಲ್ಲಿ ೩೯ ನೇ ಪದ್ಯದಿಂದ ೪೩ ಪದ್ಯಗಳನ್ನು ಬರೆಯದೆ ಬರಿಯ ಪತ್ರವಿದೆ. (ಎಂದರೆ ೧೪೬ ನೆಯ ಪತ್ರ) ಇದೇ ಕಟ್ಟಿನಲ್ಲಿ ಮಲ್ಲೇಶ್ವರ ಶತಕ, ಪಾರ್ವತೀವಲ್ಲಭ ಶತಕ, ಉಮಾ

ಮಹೇಶ್ವರ ಶತಕ. ಪ್ರಾಣನಾಥ ಶತಕ, ಶ್ರೀಕಂಠ ಸೋಮೇಶ್ವರ ಶತಕ, ಕಂದಶತಕ, ಪ್ರಭುದೇವರ ಪುರಾಣದ ನಾಂದ್ಯಗಳು, ಮಹಿಮ್ನಸ್ತೋತ್ರ, ಶಿವಪೂಜಾವಿಧಾನ—ಎಂಬೀ ಗ್ರಂಥಗಳಿವೆ.

518

ಕೆ. ೧೬೯/೧೧	**ಚೇರಮನ ಕಾವ್ಯದ ನಾಂದ್ಯ**	ವಾರ್ಧಕಷಟ್ಪದಿ
೯.೬"×೨"	ಚೇರಮಾಂಕ	೧೫೨೬
೫೦—೫೪ ಪತ್ರ	೧೦ ಪಂಕ್ತಿ	೪೬ ಅಕ್ಷರ

ಆದಿ : ಚಾರಮನ ಕಾವ್ಯದ ನಾಂದ್ಯ ॥ ವಾರ್ದ್ಧಿಕ ॥

ಪಲ್ಲ ॥ ಭೂವಳೆಯದನುವನಾ ನಾರದಂ ಬಿಂನವಿಸೆ
ಪಾವನ ಚರಿತ್ರನೆಸುವ ಭಸಿತಕಾಯನಂ
ದೇವದೇವಂ ಕಳುಪಿ ಧರಣೀತಳಕ್ಕೆ ಚೇರಮನಾಗಿ ನಡೆತಂದನೂ ॥

ಪದ ॥ ಶ್ರಿಮದಗಜಾವದನ ತಾಮರಸ ದಿನನಾಥ
ಕಾಮಿತ ಪಲಪ್ರದ ಸದಾಮಂಜುಲಾಂಗ ನಿ
ಸ್ಸೀಮ ನಿರ್ಮ್ಮಳ ಮೂರ್ತ್ತಿ ಸಾಮವೇದ ಸ್ತುತ್ಯ ರಾಮಣೀಯ್ಯಕ ಸುಭಕ್ತಾ
ಪ್ರೇಮಿಯಾನತ ಕಲ್ಪಭೂಮಿರುಹ ಸಕಲಸುಖ
ಧಾಮ ಪರ್ವತಸಾರ್ವಭೌಮ ಸೌಂಧರದಿವ್ಯ
ಜಾಮಾತ್ರುವನಿಪ ಗಂಗಾ ಮಕುಟ ರಕ್ಷಿಸಾ ಪ್ರೇಮದಿಂ ಭೋಗಮಲ್ಲಾ ॥ ೧ ॥

ಅಂತ್ಯ : ಯಿದು ಸಕಲ ಭಕ್ತಿ ಪದಪದ್ಮ ಮಧುಕರ ಪುಣ್ಯ
ಸದನ ಗುಬ್ಬಿಯ್ಯ ಮಲ್ಯಾಂಣಾರ್ಯ್ಯ ಕೃಪಾಪಾತ್ರ
ಮುದಿತ ನವರಸ ಭಾವ ಲಕ್ಷಣಾಲಂಕಾರ ನಿಪುಣನೆಂದೆನಿಸಿ ಮೆಱೆದಾ
ಚದುರು ಚೇರಮನೊರೆದ ಚಾರಮ ಚರಿತ್ರಮಂ
ಸದಪಿಂದೆ ಬರದೋದಿ ಕೇಳಿ ವಿಸ್ತರಿಸುವರ್ಗ್ಗೊದಗಿ
ಪ್ಪುದಾಯುರಾರೋಗ್ಯ ಸಂಪದ ಸರ್ವ್ವಸಿದ್ಧಿ ಸತ್ಯಂ ಸತ್ಯವೂ ॥ ೩೫ ॥

ಶ್ರೀ ಚೇರಮಾಂಕನ ಕಾವ್ಯದ ನಾಮದ್ಗುರು ಸಬ್ರಮದಿಂ
ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಸ್ತುತಿ (ನಾಂದೀ ಪದ್ಯಗಳು).

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಆದಯ್ಯನ ನಾಂದ್ಯ, ಮಣ್ಣೀಶ್ವರನ ಕಾವ್ಯದ ನಾಂದ್ಯಗಳೇ ಮೊದಲಾದ ಇನ್ನೂ ೨೩ ಗ್ರಂಥಗಳಿವೆ.

519

ಕ. ೩೨೪/೬	**ಚೇರಮನ ಕಾವ್ಯದ ನಾಂದ್ಯ**	ವಾರ್ಧಕ ಷಟ್ಪದಿ
೯.೪"×೨"	ಚೇರಮಾಂಕ	೧೪೨೬
೧೨–೧೪ ಪತ್ರ	೧೧ ಪಂಕ್ತಿ	೪೬ ಅಕ್ಷರ

ಆದಿ : ಚೇರಮಾಂಕನ ಕಾವ್ಯದ ನಾಂದ್ಯ

ಪಲ್ಲ॥ ಭೂವಳಿಯದನುವನಾ ನಾರದಂ ಬಿಂನವಿಸೆ
ಪಾವನ ಚರಿತ್ರನೆನಿಸುವ ಭಸಿತ ಕಾಯನಂ
ದೇವದೇವಂ ಕಳುಪಿ ಧರಣೀತಳಕ್ಕೆ ಚೇರಮನಾಗಿ ನಡೆತಂದನೂ ॥
ಪದ॥ ಶ್ರೀಮದಗಜಾವದನ ತಾಮರಸ ದಿನನಾಥ
ಕಾಮಿತ ಫಲಪ್ರದಾಯಕ ಸದಾಮಂಜುಲಾಂಗ ನಿ
ಸ್ಸೀಮ ನಿರ್ಮಳಮೂರ್ತಿ ಸಾಮವೇದಸ್ತುತ್ಯ ರಾಮಣೀಯ್ಯಕ ಸುಭಕ್ತಾ
ಪ್ರೇಮಿಯಾನತ ಕಲ್ಪಭೂಮಿರುಹ ಸಕಲ ಸುಖ
ಧಾಮ ಪರ್ವ್ವತ ಸಾರ್ವ್ವಭೌಮ ಸೌಂದರ ದಿವ್ಯ
ಜಾಮಾತೃವೆನಿಪ ಗಂಗಾಮಕುಟ ರಕ್ಷಿಸಾ ಪ್ರೇಮದಿಂ ಭೋಗಮಲ್ಲಾ॥೧॥

ಅಂತ್ಯ : ಯಿದು ಸಕಲ ಭಕ್ತ ಪದ ಪದ್ಮ ಮದುಕರ ಪುಣ್ಯ
ಸದನ ಗುಬ್ಬಿಯ ಮಲ್ಲಣಾರ್ಯ್ಯರ ಕೃಪಾಪಾತ್ರ
ಮುದಿತ ನವರಸಭಾವ ಲಕ್ಷಣಾಲಂಕಾರ ನಿಪುಣನೆಂದೆನಿಸಿ ಮೆರೆವಾ
ಚದುರ ಚೇರಮನೊರದ ಚೇರಮ ಚರಿತ್ರಮಂ
ಪದಪಿಂದ ಬರದೋದಿ ಕೇಳಿ ವಿಸ್ತರಿಸುವ
ಗ್ರೊರ್ದಗಿರ್ಪ್ಪದಾಯುರಾರೋಗ್ಯಸಂಪದ ಸರ್ವ್ವಸಿದ್ಧಿ ಸತ್ಯಂಸತ್ಯವು॥೩೪॥
ಚೇರಮಾಂಕನ ಕಾವ್ಯದ ನಾದ್ಯ ಸಮಾಪ್ತ ಮಂಗಳ ಮಹಾಶ್ರೀ

ವಿಷಯ : ಸ್ತುತಿ (ನಾಂದೀಪದ್ಯಗಳು).

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಪ್ರಭುದೇವರ ಪುರಾಣದ ನಾಂದ್ಯ, ಶಿವಲಿಂಗದ ನಾಂದ್ಯಗಳೆಂಬ ಇನ್ನೂ ಇತರ ೨೪ ಗ್ರಂಥಗಳಿವೆ.

520

ಕೆ. ೧೧೬ **ಚೋರ ಕಥೆ** ಯಕ್ಷಗಾನ
೧೫′×೧.೫″ ಕಸ್ತೂರಿ ಸಿದ್ಧ ಸು. ೧೮೦೦
೧–೯೫ ಪತ್ರ ೫ ಪಂಕ್ತಿ ೫೬ ಅಕ್ಷರ

ಆದಿ : ಶ್ರೀ x x x ಚೋರ ಕಥೆ ಬರೆಯುವದಕ್ಕೆ ನಿರ್ವಿಘ್ನೆಮಸ್ತೂ

ದಿ ಪದೆ—ಶ್ರೀ ಗಿರಿಜಾದೀಶ ಶ್ರೀಗಿರಿವಾಸ
ಭಾಗೀರಥೀಶ ಭಾಸುಪ್ರಕಾಶ
ಯಾಣನಂ ಧರಿಶಿದನೆ ಯಸವ ಚರ್ವಾಂಬರನೆ
ವಾಣೀಶ ಶಶಿಕರನೆ ವಸುಧೆಪಾಲಕನೇ
x x x x
ವಿಸ್ತಾರಿಶಿಯೆ ಯಕ್ಷಗಾನವಾಗಿಯೆ ಪೇಳ್ದ
ಕಸ್ತೂರಿ ಸಿದ್ಧನು... ....॥ ೧ ॥

ಅಂತ್ಯ : ಕಪ್ಪುಗೊರಳನ ಸುತರ ಕಾರಣದ ಕೃತಿಯ
ಮನಹರುಷದಿಂದ ಕರ್ನದಿ ಕೇಳಿ ವೋದಿದರೆ
ಅಸವರತ ಆಯುರಾರೋಗ್ಯ ಆಯಿಶ್ವರ್ಯ
ಹರನೊಲಿದು ಕರುಣಿಪರೂ
ಶರಧಿ ಗಿರಿ ತಾರೆ ಹಿಮ ತರಣಿಯುಳ್ಳನಕ ಸ್ಥಿರವಾದ ಕೃತಿಯೂ ॥
ಮಂಗಮಹಾ ಶ್ರೀ x x x x

ಪ್ರಭವ ಸಂವತ್ಸರದ ಮಾರ್ಗಶರ ಶುದ್ಧ ೫ ದಿವಸ ಸೋಮನಹಳಿ ವೆಂಕಟೇಶ್ಯೆಯನವರ್‍ರು । ಬಾಣಾವಾರದ ಹುರಕ್ಕಿ ಚಿಕನಂಜೈನ ಕುಮಾರ ನಂಜುಂಡಗೆ ಬರಕೊಟ್ಟ ಚೋರ ಕಥೆ ಪುಸ್ತಕಕ್ಕೆ ಮಂಗಳ ಮಹಾ ॥

ವಿಷಯ : ವಜ್ರಮುಕುಟರಾಯನ ಪುತ್ರರಾದ ಸೋಮಶೇಖರ ಚಿತ್ರಶೇಖರರ ಕಥೆ.

ವಿಶೇಷ : ೩೯. ೪೦, ೪೨. ೪೪. ೬೪ನೆಯ ಪತ್ರಗಳು ಮುರಿದುಹೋಗಿವೆ.

521

ಕೆ. ೧೫೨ **ಚೋರ ಕಥೆ** ಯಕ್ಷಗಾನ
೧೦″×೧.೪″ ಕಸ್ತೂರಿ ಸಿದ್ಧ ಸು. ೧೮೦೦
೧–೧೧೫ ಪತ್ರ ೬ ಪಂಕ್ತಿ ೩೮ ಅಕ್ಷರ

ಆದಿ : ಶ್ರೀ x x x ಯಕ್ಷಗಾನದ ಚೋರಕತೆ ಬರೆಯುದಕ್ಕೆ ನಿರ್ವಿಗ್ನಮಸ್ತು ||

ದ್ವಿಪತೇ|| ಶ್ರೀ ಗಿಜಾಧೀಶ | ಶ್ರೀ ಗಿರಿವಾಸ
ಭಾಗೀರಥೀಶ | ಭಾನುಪ್ರಕಾಶ
ವೇಣನಂ ಧರಿಸಿದನೆ | ಯಸವ ಚರ್ಮಾಂಬರನೆ
ವಾಣೀಶ ಸಿಕರನೆ | ವಸುದೆಪಾಲಕನೆ

x x x x

(೨ನೆಯ ಪತ್ರ) ವಿಸ್ತರಿಸಿಯೆ | ಯಕ್ಷಗಾನವಾಗಿ ಪೇಳ್ವ ಕಸ್ತೂರಿ ಸಿದ್ಧನು ಕುಡು ಹರುಷದಲಿ ||

ಅಂತ್ಯ : ಕಪ್ಪುಗೊರಳನ ಸುತರ | ಕಾರಣವ ಕೃತಿಯ ಮನ ಹರುಷದಿಂದಾ
ಕರ್ನಧಿ ಕೇಳಿ ವೋದಿ ಬರದವರ್ಗೆ | ನವರತ್ನ ಆಬಾರಣ
ಆಯುರಾರೋಗ್ಯ | ಐಶ್ವರ್ಯ ಹರನೊಲಿದು | ಕರುಣಿಪನು
ಶರ ಗಿರಿ ತಾರೆ ಹಿಮಕರ ತರುಣಿವುಳ್ಳನಕ ಸ್ಥಿರವಾದ ಕೃತಿಯೂ ||
ಅಂತು ಸಂಧಿ ೯ಕಂ ಪದನ್ನು ೧೦೧೦೦ ಕಂ ಮಂಗಳ ಮಹಾ ಶ್ರೀ ಸರ್ಶ ೧೮೫೫ನೇ ಯಿಸವಿ ಕ್ರೋದಿ ಸಂ| ಮರ್ಗಶಿರ ಬಳ ೩ವರಿಗೆ ಬರದ ಚೋರರ ಕತೆ ತೆಂಬ ಬಲರುವ್ರಾ ಶಟರ ವಾಗ ಚಂನ್ನ ಮಲರಟಿ ಕೈಬರಹಾ ತಪಿದರೆ ತಿದಿಕೊಂಬುದು.

ವಿಷಯ : ವಜ್ರಮಕುಟರಾಯನ ಪುತ್ರರಾದ ಸೋಮಶೇಖರ ಚಿತ್ರಶೇಖರರ ಕಥೆ.

ವಿಶೇಷ : ಗ್ರಂಥದ ಕೆಲವು ಗರಿಗಳು ಹುಳುಗಳಿಂದ ಕೊರೆಯಲ್ಪಟ್ಟವೆ. ೧೦, ೬೮ ಪತ್ರಗಳು ಲುಪ್ತ.

522

ಕೆ. ೨೦೨/೧	**ಚೋರಕಥೆ**	ಯಕ್ಷಗಾನ
೮.೪"×೧.೪"	ಕಸ್ತೂರಿಸಿದ್ಧ	ಸು. ೧೮೦೦
೧೯೮ ಪತ್ರ	೬ ಪಂಕ್ತಿ	೪೦ ಅಕ್ಷರ

ಆದಿ : ಶ್ರಿ ಚಿತ್ರಸೇಖರ ಸೋಮಸೇಖ........ ....ಶ್ರೀ ಗಿರಿಜಾಧೀಶ ಶ್ರೀ ಗಿರಿವಾಸ ಭಾಗೀರತಿಯಿಾಶ ಭಾನುಪ್ರಕಾಶ

ಯೇಣನಂ ದರಿಶಿದನ..............
ಶಶಿಖರನೆ ವಸುದೆ ಪಾಲಕನೆ
ದಶಸಿರಂಗೊಲಿದವನೆ ದನಪತಿಗೆ ಸಖನೆ
x x x x ಯಿಾಶನೆ ಪರವು ಪ್ರಕಾಶನೆ
ಕರುಣ ಮಲ್ಲೇಶನೇ ನಿಮ್ಮಂಘ್ರಿಗಳಿಗೆರಗುವೆನೂ ||

ಅಂತ್ಯ : ಚೋರರ ಕಥೆಯನಿಶಿ ಚರಿಸುತ್ತಿರಲು ಬಲ್ಲ ಗಂಭೀರಾ
ಪುರುಷರು ಯಕ್ಷಗಾನದ ತೆರದಿ ಹರುಷದಿಂ ಮಾಡೆನಲು
ವಿರುಪಾಕ್ಷ ದೇವರ ಕರಜಾತ ಕಸ್ತೂರಿಯನಾಗಂಣ್ಣ ನರಸಿ
ಪರಮ ಪತಿವ್ರತೆ ಅರುಂಧತಿಗೆ ಸಮನಾಗಿರ್ದ ಗುರುವಂಮ
ನೆನಿಸುವಳ ವರಪುತ್ರನಾದ ಕಸ್ತೂರಿಯ ಸಿದ್ದನಿದು
ಚೋಳೇಶನೆಂದೆಂಬ ಕರ್ತುವಿನ ವರದಿಂದ ವಿಸ್ತಾರವಾಗಿ
ಸೋಮಸೇಖರ ಯಕ್ಷಗಾನವೆಂದೀ ಕೃತಿಯು
ನಾಮದಿಂ ರಚಿಸಿ ಬಹು ಪ್ರೇಮದಿಂ ಪೇಳೆ
ನೆರೆ ಜಾಣರುಗಳು ....ಕವಿಗಳಾದವರೆಲ್ಲ
ಅರಿಯಿದವೆ ಪೇಳ್ವಾನಂದ್ದರವು ಮಾಡದಿರಿ
ತಪ್ಪುಳ್ಳರಿದೀವ ಸುಜನಮನವರಿದು
x x x ಶಾರದಿ ಹಿಮಕರಕರಣ ತಾರೆ ವುಳನಕಾ
ಸ್ತಿರವಾಗಿ ವೊಪ್ಪುವದು ಧರೆಯೊಳೀ ಕೃತಿಯು || ಶ್ರೀ ||
ಕೀಲಕ ಸಂವತ್ಸರದ ಮಾರ್ಗಶಿರ ಬ ೬ ಯಲ್ಲು ಕುಂಟ್ಲೂರಪ್ಪೈಕವರ ಕುಮಾರ ಲಿಂಗಪ್ಪ ಮುದ್ದಪ್ಪಗೆ ಸಹ ಕುಂದಾಣದ ಲಕ್ಷ್ಮೀನಾರಣಪ್ಪ ಬರಕೊಟ್ಟ ಚೋರಕಥೆ ಸಂಪೂರ್ನ ಮಂಗಳ ಮಹಾಶ್ರೀ

ವಿಷಯ : ವಜ್ರಮುಕುಟರಾಯನ ಪುತ್ರರಾದ ಸೋಮಶೇಖರ ಚಿತ್ರಶೇಖರರ ಕಥೆ.

ವಿಶೇಷ : ಕೆಲವು ಗರಿಗಳ ಅಂಚು ಮುರಿದಿದೆ. ೭, ೧೯, ೨೪ನೇ ಪತ್ರಗಳು ಮುರಿದು ಶಿಥಿಲವಾಗಿವೆ. ೩೫, ೭೬, ೯೫ನೇ ಪತ್ರಗಳಿಲ್ಲ. ಇದೇ ಕಟ್ಟಿನಲ್ಲಿ ಪಾರ್ವತೀ ಕೊರವಂಜಿ ಎಂಬ ಮತ್ತೊಂದು ಗ್ರಂಥವಿದೆ.

523

ಚೋರ ಕಥೆ

ಕಸ್ತೂರಿ ಸಿದ್ಧ

೭ ಪಂಕ್ತಿ

ಕೆ. ೩೭೨
೧೩.೬"×೧.೪"
೧–೭೬ ಪತ್ರ

ಯಕ್ಷಗಾನ
ಸು. ೧೮೦೦
೪೮ ಅಕ್ಷರ

ಆದಿ : ದ್ವಿಪದೆ—ಶ್ರೀ ಗಿರಿಜಾಧೀಶ ಶ್ರೀಗಿರಿವಾಸ
ಭಾಗೀರತಿಯಿಾಶ ಭಾನುಪ್ರಕಾಶ
ಯೇಣನಂಧರಿದನೆ । ಯಸವ ಚರ್ಮಾಂಬರನೆ
ವಾಣೀಶ ಶಿರಕರನೆ ವಸುದೆ ಪಾಲಕನೆ

x x x x

ಯಕ್ಷಗಾನವಾಗಿಯೆ ಪೇಳ್ವ । ಕಸ್ತುರಿ ಸಿ ಕತು ಹರುಷದಲಿ ।

ಅಂತ್ಯ : ಕಪ್ಪುಗೊರಳನ ಸುತರ ಕಾರಣದ ಕ್ರೂತಿಯ ಮನೆಹರುಷದಲ್ಲಿ
ಕರ್ನದಿ ವೋದಿ ಕೇಳಿದವರ್ಗ । ನವರತ್ನ ಆಯುರಾಯಿರೋಗ್ಯ
ಅಯಿಶ್ವರ್ಯ್ಯ ಹ. ನೊಲ್ದಿದೂ ಕರೂಣಿಪನೂ
ಶರಧಿ ಗಿರಿ ತಾರ್ತೆ ಹಿಮಕರ ತರಣಿಯುೂಳ್ಳನಕಾ ಸ್ತಿರಾವಾದ ಕೃತಿಯ
ಆಂತು ಸಂಧಿ ೯ ಕಂ ಪದನಾ ೯೭೦ ಕಂ ಸಲೆ । ದ್ವಿಪದೇ

ವಚನ x x x x

ಯೀ ಚೋರ ಕತೆಯ ಬಿಸದಾತ ಹುಲಿಯೂರ ದೂರ್ಗದ ಲಕ್ಷ್ಮಮೆಯಾನವರ ಮಗ ಮುದುರಂಗೈಯನೂ ಆಯಿಚೋರ ಜವಳಿಯಾರ್ರೈಯುಗೆ । ಬರೆದ ಪಸ್ತುಕಕ್ಕೆ .... ಸೋಬನಮಸ್ತು। ಆಯುರಾರೋಗ್ಯ ಐಶ್ವರ್ಯಮಸ್ತು ಶ್ರೀ.

ವಿಷಯ : ವಜ್ರಮುಕುಟರಾಯನ ಪುತ್ರರಾದ ಸೋಮಶೇಖರ ಚಿತ್ರಶೇಖರರ ಕಥೆ.

ವಿಶೇಷ : ಗ್ರಂಥದ ಕೆಲವು ಗರಿಗಳು ಮುರಿದಿವೆ ಹಾಗೂ ಹುಳುಗಳಿಂದ ಕೊರೆಯ ಲ್ಪಟ್ಟಿವೆ.

524

ಕೆ. ೩೮೨/೨	**ಚೋರ ಕಥೆ**	ಯಕ್ಷಗಾನ
೧೯.೨"×೨"	ಕಸ್ತೂರಿ ಸಿದ್ಧ	ಸು. ೧೮೦೦
೧–೨೬ ಪತ್ರ	೧೦ ಪಂಕ್ತಿ	೯೫ ಅಕ್ಷರ

ಆದಿ : ಶ್ರೀ ಗಿರಿಜಾಧೀಶ ಶ್ರೀ ಗಿರಿವಾಸ । ಭಾಗೀರಥಿಯಿಾಶ ಭಾನುಪ್ರಕಾಶ
ಯೇಣನಂ ಧರಿಸಿದನೆ ವ್ಯಾಘ್ರ ಚರ್ಮಾಂಬರನೆ
ವಾಣೀಶಶಿರಕರನೆ ವಸುಧೆಪಾಲಕನೆ

ದಶಶಿರಂಗೊಲಿದವನೆ ಧನಪತಿಗೆ ಸಖನೆ
ಅಸುರರೆದೆದಲ್ಲಣನೆ ಅಮೃತಕರ ಧರನೆ। x x x
ಪೊಳೆವ ಕರ್ಕೋದ್ಗಿರಿಯೊಳು ನೆಲಸಿದ ಯಿಾಶ ಸಲಹೋ ಗಂಗೇಶಾ॥೧॥

ಅಂತ್ಯ: ಹಿಮಕರನ ಧರಿಸಿದ ದೇವ ಹರಿಪೀಠದಲ್ಲಿ । ದೇವನೊಪ್ಪಿದನು ಸಂಜೀವನೊಪ್ಪಿದನು । ....ನೊಪ್ಪಿದನು ಮಹಾದೇವ ಸಭೆಯರಿಯಿಾಶನೊಪ್ಪಿದನು । ಫಣೀಶ ಭೂಷಣನೊಪ್ಪಿದನು ।

ಗುರಾವಂಮ್ಮನೆನಿಸುವಳ ವರಪುತ್ರನಾದ ಕಸ್ತೂರಿಯಡ್ಡ ಬಂಳೇಶನೆಂದೆಂಬ ಕರ್ತುವಿನ ಕೃಪೆಯಿಂದ ವಿಸ್ತಾರವಾಗಿ ಸೋಮಶೇಖರನ ಯಕ್ಷಗಾನವೆಂದೀ ಕೃತಿಗೆ ನಾಮವಿಟ್ಟನು x x x x ಮುಗ್ಧಭಾವದಿ ಪೇಳ್ದೆ ಮುನಿವರನ ವರದಿ। ತಪ್ಪುಳರಿದ ತಿದ್ದಿ ಶರಣರಾದವರೆಲ್ಲ । ಕಪ್ಪುಗೊರಳನ ಸುತರು ಕಾರಣದನುಪ್ರತಿಯು । ಮನಹರುಷದಲಿ ಕರ್ನದಲಿ ಕೇಳಿ ಪೊಂದಿದರ್ಗನವರತ ಆಯುರಾರೋಗ್ಯ ಅಯಿಶ್ವರ್ಯ । ಹರನೊಲಿದು ಕರುಣಿಪನು ಶರಧಿ ಗಿರಿಜಾತೆ ಹಿಮಕರಣಿವುಳ್ಳನಕ ಸ್ಥಿರವಾದ ಕೃತಿಯು ॥ ಅಂತು ಸಂಧಿ ೯ಕ್ಕೆ ಪದನು ೨೧೦ಕ್ಕೆ ಮಂಗಳ ಮಹಾಶ್ರೀ.

ವಿಷಯ: ವಜ್ರಮುಕುಟ ಮಹಾರಾಜನಿಗೆ ಈಶ್ವರ ವರಪ್ರಸಾದದಿಂದ ಜನಿಸಿದ ಸೋಮಶೇಖರ, ಚಿತ್ರಶೇಖರರ ವಿವಾಹ ವೃತ್ತಾಂತ.

ವಿಶೇಷ: ಪ್ರತಿಯ ಸ್ಥಿತಿ ಸಾಧಾರಣವಾಗಿದೆ ಈ ಗ್ರಂಥವಲ್ಲದೆ ಹನುಮಂತ ವಿಜಯ, ಶೃಂಗಾರ ಕಟ್ಲೆ (ತೆಲುಗು), ರಾಮಾಯಣ, ಸೋಮಶೇಖರ ಚಿತ್ರಶೇಖರರ ಕಥೆಗೆ ಸಂಬಂಧಿಸಿದ ಯಕ್ಷಗಾನದ ಒಂದೊಂದು ಪತ್ರ, ಕುಮುಟರಾಮನ ಸಾಂಗತ್ಯ ಇವು ಇವೆ.

525

ಕೆ. ೪೧೮/೧	**ಚೋರ ಕಥೆ**	ಯಕ್ಷಗಾನ
೧೪.೫"×೧.೨"	ಕಸ್ತೂರಿ ಸಿದ್ಧ	ಸು. ೧೮೦೦
೧–೬೪ ಪತ್ರ	■ ಪಂಕ್ತಿ	೬೬ ಅಕ್ಷರ

ಆದಿ: ಯಕ್ಷಗಾನದಲ್ಲಿ ಸೋಮಸೇಕರ ಚಿತ್ರಸೇಕರರ ಕಥೆ ಬರೆಯುವದಕ್ಕೆ ಶುಭಮಸ್ತು ।

ದ್ವಿಪತೇ॥ ಶ್ರೀಗಿರಿಜಾಧೀಶ ಶ್ರೀಗಿರಿವಾಸ
ಭಾಗೀರತೀಶ ಭಾನುಪ್ರಕಾಶಾ
ಯೇಣನಂ ಧರಿಸಿದನೆ ಯಸವ ಚರ್ಮಾಂಭರನೆ
ವಾಣೀ ಶಶಿಕರನೆ ವಸುಧೆಪಾಲಕನೆ

X X X

ವಿಸ್ತರಿಸಿಯೆ ಯಕ್ಷಗಾನವಾಗಿಯೆ ಪೇಳ್ದಾ ಕಸ್ತೂರಿಸಿದ್ಧನು ಕಡು ಹರುಷದಲೀ ॥ ೧೨ ॥

ಅಂತ್ಯ: ಕಪ್ಪುಗೊರಳನ ಸುತರ ಕರಣದ ಕೃತಿಯ ಮನಹರುಷದಲಿ ಕರ್ನದಲಿ ಕೇಳಿ ವೋದಿದವರ್ಗೆ ಅನವರತ ಆಯುರಾರೋಗ್ಯ ಆಯಿಶ್ವರ್ಯವನ ಹರನೊಲಿದು ಕರುಣಿಪನೂ । ಶರದಿ ಗಿರಿಜಾತೆ ಹಿಮಕರ ತರಣಿಯುಳ್ಳನಕ ಸ್ಥಿರವಾದ ಕೃತಿಯೂ ॥

ಅಂತ್ತು ಸಂಧಿ ೯ ಕಂ ಪದನೂ ೧೨೨೦ ಕಂ ಮಂಗಳ ಮಹಾ ಶ್ರೀ ವಿರೋಧಿ ಸಂವತ್ಸರದ ಭಾದ್ರಪತ ಶುದ್ಧ ೨ಯು ಸೋಮವಾರ ಚೋರಕಥೆ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ: ವಜ್ರಮಕುಟರಾಯನ ಪುತ್ರರಾದ ಸೋಮಶೇಖರ ಚಿತ್ರಶೇಖರರ ಕಥೆ.

ವಿಶೇಷ: ಗ್ರಂಥವು ಸಾಮಾನ್ಯವಾಗಿದೆ; ಆದರೆ ಅಲ್ಲಲ್ಲಿ ಗರಿಗಳು ಹುಳುಗಳಿಂದ ಕೊರೆಯಲ್ಪಟ್ಟವೆ. ಇದೇ ಕಟ್ಟನಲ್ಲಿ (೬೫ರಿಂದ ೧೧೯ನೇ ಗರಿಯ ವರೆಗೆ) ಕರಿಭಂಟನ ಕಥೆ ಇದೆ.

526

ಕೆ. ಎ. ೨೪೧	**ಛಂದಸ್ಸಾರ**	ಕಂದ, ವೃತ್ತ
೧೩"X೭.೮"	ಗುಣಚಂದ್ರ	ಸು. ೧೬೫೦
೧–೪೧ ಪತ್ರ	೨೦ ಪಂಕ್ತಿ	೧೬ ಅಕ್ಷರ

ಆದಿ: ಗುಣಚಂದ್ರ ವಿರಚಿತ ಛಂದಸ್ಸಾರ ಬರೆಯುವದಕ್ಕೆ ನಿರ್ವಿಘ್ನಮಸ್ತು

X X X X

ಸುತ್ರಾಮಾದಿಸುಪರ್ವರಾಜ ಮಕುಟೀ ಕೋಟೀ ಘಟೀ ಪ್ರಜ್ವಲ
ದ್ರತ್ನಾಂಶೂಚ್ಚಯ ನಿನ್ನುಗಾಪ್ರವಿಲಸತ್ಪಾದಾಂಬುಜಾತ ದ್ವಯಂ

ಭೇಕಂ ಸಂಸೃತಿಸಾಗರ ಪ್ರವಹದೊಳ್ಪತ್ತರ್ಗೆ ಕಲ್ಪಾಂಘ್ರಿಪಂ
ನೇತ್ರಾಳಿವ್ರಜಕೀಗೆ ಸಾರಸುಖಮಂ ಸಂತಾಪವಿಚ್ಛೇದಕಂ ‖ ೧ ‖

ಅಂತ್ಯ: ಸೀಸಪದ್ಯಂ ‖

ಇಪತ್ರರೊಳು ಯತಿಯು ಸಪ್ತಾಶ್ವ ಪುರ ಕಲೆಯು
ವೊಪ್ಪುವುದು ಪಾದದೊಳು ಸೀಸಾಖ್ಯೆಯ ‖ ೧೮ ‖

ಇತಿ ಶ್ರೀಮದನುಪಮನಿತ್ಯನಿರಂಜನ ಪರಮಾತ್ಮಾರ್ಹದಾರಾಧನಾ
ಪರಮಾನಂದ ಬಂಧುರಗುಣಚಂದ್ರ ವಿರಚಿತ ಛಂದಸ್ಸಾರದೊಳ್
ಪಂಚಮಾಧ್ಯಾಯಂ ಸಮಾಪ್ತಂ ‖ ಶ್ರೀ ‖

ವಿಷಯ: ಕನ್ನಡ ಛಂದಸ್ಸಿನ ಲಕ್ಷಣಗಳು.

ವಿಶೇಷ: ಪತ್ರದ ಒಂದು ಕಡೆ ಮಾತ್ರ ಬರೆದಿದೆ.

527

ಕೆ. ೨೩೧/೫	**ಛಂದೋಂಬುಧಿ**	ಕಂದ, ವೃತ್ತ, ವಚನ
೧೦"×೧.೪"	ನಾಗವರ್ಮ	ಸು ೯೯೦
೧೮೩–೧೯೯ ಪತ್ರ	೧೦ ಪಂಕ್ತಿ	೬೪ ಅಕ್ಷರ

ಆದಿ: ನಾಗವರ್ಮನ ಛಂದಸ್ಸು ‖

ವೃ‖ ಜೆಡೆಗಳ ಬಂಬಲೊಪ್ಪುವಳಕಾವಳಿ ಭೀಷಣಮಪ್ಪ ಪಾವಿನೊ
ಳ್ಡೊಡಿಗೆ ಪೊವಳ್ದ ಪೊಂದೊಡಿಗೆ ಶಕ್ತಿ ವಿರಾಜಿತ ಶಕ್ತಿಶೂಲಮೇ
ಪಿಡಿದ ಕರಾಸಿ ಗೌರಿ ನಿಜವಲ್ಲಭೆಯಾಗಿರೆ ಮಿಕ್ಕನಾಕಿಸ
ಯ್ಯಡಿಯ ಪಿನಾಕಿ ಕೂರ್ತ್ತುವೆಮಗೀಗೆ ವರಂಗಳನುತ್ಸವಂಗಳಂ ‖ ೧ ‖

ಅಂತ್ಯ: ಜಿತಬಾಣಂ ಹರಿಯಂತಿರಲ್ಪ್ರಿಯಮಯೂರಂ ತಾರಕಾರಾತಿಯಂ
ತತಿವಾಘಂ ಶಿಶಿರಾಂತ್ಯದಂತೆ ಸುರಪಪ್ರೋಚ್ಚಡಂ ಕೋದಂಡದಂ
ತೆತಿರೆ ಭೂನುತನಬ್ಜಸಂಭವನನಂತಾವಿರ್ಭವಂ ದಂಡಿ ಭಾ
ರತದಂತಾತ್ರ ಧನಂಜಯೈಕ ವಿಭವಂ ಪಾಗ್ಗುಂಪದೊಳ್ನಾಕಿಗಂ ‖ ೧೬ ‖

ಗದ್ಯಂ‖ ಇದು ಪರಮೇಶ್ವರ ಚರಣಾರವಿಂದ ಮಂದ ಮಧುರರಾಯಮಾನ
ವಿಬುಧಜನಮನಃ ಪದ್ಮಿನೀ ರಾಜಹಂಸಂ ಮತ್ತವಿರಾಜಹಂಸ ವಿರಚಿತ

ಮಪ್ಪ ಛಂದೋಂಬುಧಿಯೊಳ್ಷಷ್ಠಮಾಧಿಕಾರಂ ಸಮಾಪ್ತಂ ಮಂಗಳ ಮಹಾ ಶ್ರೀ॥ ಅಂತುಮೆಲ್ಲಾ ಲೆಕ್ಕಂ ೨೭೯ಕ್ಕ ಮಂಗಳ ಮಹಾ ಶ್ರೀ ॥

ವಿಷಯ: ಕನ್ನಡ ಛಂದಸ್ಸಿನ ಲಕ್ಷಣಗಳು

ವಿಶೇಷ: ಅಕ್ಷರಗಳು ಸ್ಫುಟವಾಗಿವೆ. ಶಕಟರೇಫ ಮತ್ತು ೞ ಈ ಲಿಪಿಗಳ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಶಬ್ದಮಣಿದರ್ಪಣ, ಉದಯಾದಿತ್ಯಾಲಂಕಾರ, ಶೃಂಗಾರ ರತ್ನಾಲಂಕಾರ, ರಸರತ್ನಾಕರ ಎಂಬ ಈ ನಾಲ್ಕು ಕೃತಿಗಳೂ ಇವೆ. ಕೊನೆಯಲ್ಲಿರುವ ೧೭, ೧೮ನೆಯ ಪತ್ರಗಳು ಶಬ್ದಮಣಿದರ್ಪಣದ ೧೭, ೧೮ನೆಯ ಪತ್ರಗಳ ನಕಲಾಗಿವೆ.

528

೫೮೨/೨	**ಛಂದೋಂಬುಧಿ**	ಕಂದ, ವೃತ್ತ, ವಚನ
೧೨-೮"×೨"	ನಾಗವರ್ಮ	ಸು ೯೯೦
೧–೧೩ ಪತ್ರ	೧೧ ಪಂಕ್ತಿ	೭೮ ಅಕ್ಷರ

ಆದಿ: ನಾಗವರ್ಮನ ಛಂದಸ್ಸು ॥

ಜಡೆಗಳ ಬಂಬಲೊಪ್ಪುವಳಕಾವಳಿ ಭೀಷಣಮಪ್ಪ ಸಾವಿನೋ
ಳೊಡಿಗೆ ಪೊದಳ್ದ ಪೊಂದೊಡಿಗೆ ಶಕ್ತಿ ವಿರಾಜಿತಶಕ್ತಿ ಶೂಲಮೇ
ಪಿಡಿದಕ ರಾಸಿ ಗೌರೀ ನಿಜವಲ್ಲಭೆಯಾಗಿರೆ ಮಿಕ್ಕ ನಾಕಿಸ
ಯ್ಯಡಿಯ ನಾಕಿ ಕೂರ್ತುರ್ನ ನಮಗೀಗೆ ವರಂಗಳನುತ್ಸವಂಗಳಂ ॥ ೧ ॥
ಸಕಲಕಲಾಗಮಾಭರಣನೀಶ್ವರಪುತ್ರ ಸಮಸ್ತವಸ್ತು ರೂ
ಪಕನಕಲಂಕನಪ್ಪುದೆಯ ಕಾರಣ ವಕ್ತ್ರನಾಪ್ತ ಲೌ
ಕಿಕಮತನ್ವಿತಾಗಮ ಪದಾರ್ಥ ಪರಂಪರಾನಾದನಾ ವಿನಾ
ಯಕಂ ಕೃತಿಗೆ ನಾಯಕನಕ್ಕೆ ನೆಗಳ್ತೆಗೋಜನಾ ॥ ೨ ॥

ಅಂತ್ಯ: ೧೪॥ ಜಿತಬಾಣಂ ಹರಿಯಂತಿರಲ್ ಪ್ರಿಯಮಯೂರಂ ತಾರಕಾವೈರಿಯಂ
ತತಿಮಾಘಂ ಶಿಶಿರಾಂತ್ಯದಂತೆ ಸುರಪಪ್ರೋಚ್ಚಂಡಕೋದಂಡ ದಂ
ತೆ ತಿರೆ ಭೂನೂತನಬ್ಜಸಂಭವನನಂತಾವಿರ್ಭಾವಂದಂದೀ ಭಾ
ರತದಂತಾತ್ರ್ಯಧನಂಜಯೆ ಕವಿಭಾವಂ ವಾಗುಂಪದೊಳ್ನಾಕಿಗಂ ॥೧೫೨-೯೧॥
ಇದು ಪರಮೇಶ್ವರ ಚರಣಾರವಿಂದ ಮಂದ ಮದುಕರಾಯಮಾನ ವಿಬುಧ ಜನಮನ ಪದ್ಮಿನೀರಾಜಹಂಸಂ ಶ್ರೀಮತ್ಕವಿರಾಜಹಂಸವಿರಚಿತಮಪ್ಪ ಛಂದೋಂಬುಧಿಯೊಳ್ ಷಷ್ಠಾಧಿಕಾರಂ ಸಮಾಪ್ತ ಮಂಗಳ ಮಹಾಶ್ರೀ

ವಿಷಯ : ಕನ್ನಡ ಛಂದಸ್ಸಿನ ಲಕ್ಷಣಗಳು.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಶಕಟರೇಫವ ಬಳಕೆ ಇದೆ. ಈ ಗ್ರಂಥಕ್ಕೆ ಮೊದಲು ಉದಯಾದಿತ್ಯಾಲಂಕಾರಕ್ಕೆ ಸಂಬಂಧಪಟ್ಟ ಎರಡುಪತ್ರಗಳೂ ಮತ್ತು ಕಪೋತನ ಕಥೆಗೆ ಸಂಬಂಧಿಸಿದ ಎರಡು ಪತ್ರಗಳೂ ಇವೆ. ಇದೇ ಕಟ್ಟನಲ್ಲಿ ಬಸವ ಪವಾಡವೆಂಬ ಕೃತಿ ಇದೆ. ಅಂತ್ಯದಲ್ಲಿ ಈ ಗ್ರಂಥದ ತರುವಾಯ ಅಮರಕೋಶದ ಮೊದಲನೆಯ ಕಾಂಡಕ್ಕೆ ಸಂಬಂಧಿಸಿದ ಐದು ಪತ್ರಗಳೂ ಇವೆ.

529

೬. ಎ. ೮	**ಛಂದೋಂಬುಧಿ**	ಕಂದ, ವೃತ್ತ, ವಚನ
೧೧.೩″×೮″	ನಾಗವರ್ಮ	ಸು. ೯೯೦
೭೯ ಪತ್ರ	೧೦ ಪಂಕ್ತಿ	೧೦ ಅಕ್ಷರ

ಆದಿ : ಶ್ರೀ x x ನಾಗವರ್ಮ ಛಂದಸು ।

ದೇವಂ ದೇವಿಗೆ ಪೇಳ್ದು
ನಾವಂ ಪಿಂಗಳನೆ ಕೇಳ್ದು ರುಷಿಯರ್ಗಂ ಪೇ
ಳ್ದಾ ವಿಧಾನವಾ ನಿನಗೆ ಪೇಳ್ದಪೆ
ಭಾವಿಸಿ ಕೇಳ್ಕೆಳದಿ ಛಂದಮುಂ ಕ್ರಮದಿಂದಂ ॥ ೧ ॥

ಅಂತ್ಯ : ಬಂದಿದರುಕುಷಟ್ಪದಿಗ
ಳೊಂದೇ ತೆಱನೆರಡು ಪಾದಮುಂ ಮೇಣ್ ಮುಂದ
ಕ್ಕೊಂದರೆ ಬಕ್ಕುರ್ಕಿಂ ತುದಿಯೊಳ್
ಇಂದುಧರಂ ಬಂದೊಡರಿಗೆ ಷಟ್ಪದಿಯ ತೆರಂ ॥ ೧೮ ॥

ಇಂತೀ ನಾಗವರ್ಮಕೃತ ಛಂದೋಂಬುರಾಶಿಯೊಳ್ ಆರ್ಯ ಪ್ರಕರಣಂ ಚತುರ್ಥಂ ಸಮಾಪ್ತಿ ಮಂಗಳ ಮಹಾಶ್ರೀ.

ವಿಷಯ : ಕನ್ನಡ ಛಂದಸ್ಸಿನ ಲಕ್ಷಣಗಳು

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಪ್ರತಿಯು ಅಸಮಗ್ರವಾಗಿದೆ. ೧-೩೨, ೧-೧೧, ೧-೩೭ ಈ ರೀತಿ ಪತ್ರಗಳ ಕ್ರಮಸಂಖ್ಯೆಯಿದೆ.

530

ಕೆ. ಎ. ೧೨	**ಛಂದೋಂಬುಧಿ**	ಕಂದ, ವೃತ್ತ, ವಚನ
೧೩"×೮"	ನಾಗವರ್ಮ	ಸು ೯೬೦
೧–೪೪ ಪತ್ರ	೨೩ ಪಂಕ್ತಿ	೨೩ ಅಕ್ಷರ

ಆದಿ: ಶ್ರೀ x x ಕರ್ಣಾಟಕ ಛಂದಸ್ಸು.

ಶ್ರೀವಧುವಂ ಪಯೋಧಿಮಥನೋದ್ಭವ ವಸ್ತುಸಮೂಹದೊಳ್ಮಹಾ
ದೇವನಜಸ್ರಮಿದ್ದ್ಸುರರುಂ ಸುರರುಂ ಕುಡೆ ತಂನ್ನ ಮೆಚ್ಚುಗೊಂ
ಡಾವನಶೇಷ ಭೂಭುವನಮಂಡಬ ವಲ್ಲಭನಾದ ದೇವನೀ
ಗಾವಗಮೆಮ್ಮ ಬೇಟ್ಪ ವರಮಂ ದಯೆಯಿಂ ಸುಕವೀಂದ್ರ ವಲ್ಲಭಂ ॥ ೧ ॥

ಅತಿಮಧುರ ಪ್ರಸಂನ್ನೆ ಪರಿಪೂರ್ಣರಸೋಚಿತೆ ರಂಜಿತಾರ್ಥ್ಸ
ಯ್ಯುತೆ ಸಕಲಾಗಮೋಕ್ತ್ರಿಯುತೆ ಲಕ್ಷಣಯುಕ್ತೆ ಸಮಸ್ತ ವಸ್ತು ಸ
ಯ್ಯುತೆ ಸರಸಿಜಗರ್ಭನ ಮುಖಾಂಬುಜದಿಂದಮುಗಲ್ದು ಬಂದು ಭಾ
ರತಿ ನೆಲಸಿರ್ಕೆ ಕೂರ್ತು ಮುಖಪಂಕಜದೊಳ್ಕವಿ ರಾಜಹಂಸನಾ ॥ ೨ ॥

ಅಂತ್ಯ: (೪೪ನೆಯ ಪತ್ರ) ಇದು ಸಕಲ ಸುರಾಸುರೇಂದ್ರ ಮಕುಟತಟಘಟಿತ ಭಗವದ್ಭವಾನೀ ವಲ್ಲಭೆ ....ಂದ್ವ ಮಕರಂದ ಮತ್ತ ಮಧುಕರಾಯಮಾಣಂ ಸುಕವಿಜನ ಸಂಸ್ತೂಯಮಾನಂ ವಿಬುಧ ಜನಮನಃ ಪದ್ಮ..................ಂ ನಾಗವರ ವಿರಚಿತಮಪ್ಪ ಛಂದೋಂಬುರಾಶಿಯೊಳ್ ಷಟ್ಪ್ರತ್ಯಯ ನಿರೂಪಣಂ ಷಷ್ಠಂ ಪ್ರಕರಣಂ ॥ ಕರ್ಣಾಟ ಛಂದಶಾಸ್ತ್ರಂ ಸಂಪೂರ್ಣಂ ಮಂಗಳ ಮಹಾ ಶ್ರೀ॥

ಭೂಮಿಗಣಾಗ್ರದೊಳ್ ಜಗಣ ಮೊದಲನೇಕಮುಮಪ್ಪ ಸಂಪದಂ
ತಾಮಹುದ್ಯೆದೆ ವಾಯು ಬಱಿಸಂದಡಧೀಶ್ವರಗೆಲ್ಲಿಯುಂ ಜಯ
ವ್ಯೋಮದ ಸಂಗದಿಂದಪಜಯಂ ಪಿರಿದಗ್ನಿಯಿಂನಕ್ಕು ನಾಶಯಂ
ತಾ ಮಹಿಯಂ ತಗುಳ್ಚೆ ಯಗಣಾಗ್ರದೊಳಾಗಲೆ ಸಂಪದಂ ಪ್ರದಂ ॥ ೧ ॥

x x x x

ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ
ಗುರು ನಾಲ್ಕಾಗಿರೆ ಸ್ರಗ್ಧರಂ ಬರೆ ಲಘುದ್ವಂದ್ವಂ ಗುರುದ್ವಂದ್ವಮಾ
ಗಿರೆ ಮತ್ತೇಭ ಲಘುದ್ವಯಂ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ
ಹರಿಣಾ ಕ್ಷಿಲಘುನಾಲ್ಕು ಚಂಪಕಮಿದಾರುಂ ಬೆತ್ತ ಕರ್ಣಾಟಕದೊಳ್ ॥೧॥

ವಿಷಯ: ಕನ್ನಡ ಛಂದಸ್ಸಿನ ಲಕ್ಷಣಗಳು

ವಿಶೇಷ: ಶಕಟರೇಫ ಮತ್ತು ಱ ಈ ಅಕ್ಷರಗಳ ಪ್ರಯೋಗವಿದೆ. ಪತ್ರಗಳಿಗೆ ಕ್ರಮಾಂಕವನ್ನು ಹಾಕಿಲ್ಲ. ಗ್ರಂಥದ ಆರಂಭ ಮತ್ತು ಕೊನೆಗಳಲ್ಲಿ ನಾಲ್ಕು ಶುದ್ಧ ಪತ್ರಗಳಿವೆ. ಇದನ್ನು ಜಯರಾಂ ಶಿಂಗ್ಲಾಚಾರ್ಯರು ಕ್ರಿ. ಶ. 1890ರಲ್ಲಿ ಪ್ರತಿ ಮಾಡಿರುತ್ತಾರೆ.

531

ಕೆ. ಎ. ೨೮೩	ಛಂದೋಂಬುಧಿ	ಕಂದ, ವೃತ್ತ, ವಚನ
೧೨.೭"×೮"	ನಾಗವರ್ಮ	ಸು. ೯೯೦
೧—೨೪ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ: ನಾಗವರ್ಮನ ಛಂದೋಂಬುಧಿ x x x

ಶ್ರೀವಧುವಂ ಪಯೋಧಿಮಂಥನೋದ್ಭವ ವಸ್ತುಸಮೂಹದೊಳ್ ಮಹಾ
ದೇವಸಮೇತಮಿರ್ದಸುರರುಂ ಸುರರುಂ ಕುಡೆ ತನ್ನ ಮೆಚ್ಚುಗೊಂ
ಡಾವನಶೇಷ ಭೂಭುವನಮಂಡನ ವಲ್ಲಭನಾದ ದೇವನಿ
ಗಾವಗಮೆಂದು ಬೇಳ್ಪ ವರದುನ್ನತಿಯಂ ಸುಕವೀಂದ್ರವಲ್ಲಭಂ ॥ ೧ ॥

ಅಂತ್ಯ: ಮಂದರ ಶೈಲದಂತೆ ದಿವಿಜಾಪಗೆಯಂತೆ ಪಯೋಧಿಯಂತೆ ಪೆಂ
ಪಿಂ ದೊರೆವೆತ್ತ ದೇವಕುಲದಂತೆ ದಿಶಾಗಜ ರಾಜಿಯಂತೆ ಸೂ
ರ್ಯೇಂದುಗಳಂತೆ ತಾರೆಗಣದಂತೆ ಸನಾತನ ವೇದದಂತೆ ನಿ
ಲ್ಕೆಂದುಮವಿಘ್ನತಾಪ್ರಸರಮಿಂತಿದು ಕೂಡೆ ಸಮಸ್ತ ಧಾತ್ರಿಯೊಳ್ ॥

ಗದ್ಯ॥ ಇದು ಪರಮೇಶ್ವರ ಚರಣಾವಿಂದ x x x ಶ್ರೀಮತ್ಕವಿರಾಜ ಹಂಸ ವಿರಚಿತಮಪ್ಪ ಛಂದೋಂಬುಧಿಯೊಳ್ ಷಷ್ಠಾಧಿಕಾರಂ ಸಮಾಪ್ತಂ

x x x

ಆದಿ ಮಧ್ಯಾವಸಾನೇಷು ಯರತಾ ಯಾಂತಿ ಲಾಘವಂ
ಭಜಸಾ ಗೌರವಂ ಯಾಂತಿ ಮನೌ ತು ಗುರುಲಾಘವಂ ॥

ವಿಷಯ: ಕನ್ನಡ ಛಂದಸ್ಸಿನ ಲಕ್ಷಣಗಳು

ವಿಶೇಷ: ಪತ್ರದ ಒಂದು ಕಡೆ ಮಾತ್ರ ಬರೆದಿದೆ. ೧೩ನೆಯ ಪತ್ರ ಎರಡಿವೆ.

532

ಕೆ. ಎ. ೨೬೭ ಛಂದೋಂಬುಧಿ ಕಂದ, ವೃತ್ತ, ವಚನ

೧೨.೭"×೮" ನಾಗವರ್ಮ ಸು. ೯೯೦

೧-೩೦ ಪತ್ರ ೩೨ ಪಂಕ್ತಿ ೨೩ ಅಕ್ಷರ

ಆದಿ : ನಾಗವರ್ಮನ ಛಂದೋಂಬುಧಿ

ಶ್ರೀವೆಂಕಟಪತಯೆ ನಮಃ ॥ ನಾಗವರ್ಮ ॥ ಶ್ರೀರಸ್ತು ।' ಶ್ರೀರಾಮಾಯ ನಮಃ ॥

ಶ್ರೀವಧುವಂ ಪಯೋಧಿಮಥನೋದ್ಭವ ವಸ್ತುಸಮೂಹದೊಳ್ಕಹಾ
ದೇವಸಮೇತಮಿರ್ದಸುರರುಂ ಸುರರುಂ ಕುಡೆ ತನ್ನ ಮೆಚ್ಚುಗೊಂ
ಡಾವನಶೇಷ ಭೂಭುವನಮಂಡನ ವಲ್ಲಭನಾದ ದೇವನೀ
ಗಾವಗಮೆಂಮು ಬೇಳ್ಪ ವರದುಂನತಿಯುಂ ಸುಕವೀಂದ್ರ ವಲ್ಲಭಾ ॥ ೧ ॥

ಅಂತ್ಯ : ಮಂದರಶೈಲದಂತೆ ದಿವಿಜಾಪಗೆಯಂತೆ ಪಯೋಧಿಯಂತೆ ಪೆಂ
ಪಿಂ ದೊರೆವೆತ್ತ ದೇವಕುಲದಂತೆ ದಿಶಾಗಜರಾಜಿಯಂತೆ ಸೂ
ರ್ಯೇಂದುಗಳಂತೆ ತಾರೆಗಣದಂತೆ ಸನಾತನ ವೇದದಂತೆ ನಿ
ಲ್ಕೆಂದುಮವಿಘ್ನತಾ ಪ್ರಸರಮಿಂತಿದು ಕೂಡೆ ಸಮಸ್ತ ಧಾತ್ರಿಯೋಳ್॥೨೩॥

ಗದ್ಯ॥ ಇದು ಪರಮೇಶ್ವರ ಚರಣಾವಿಂದ ಮಂದಮಧುಕರಾಯಮಾನ ವಿಬುಧ ಜನ ಮನಃಪದ್ಮಿನೀ ರಾಜಹಂಸಂ ಶ್ರೀಮತ್ಕವಿರಾಜಹಂಸ ವಿರಚಿತಮಪ್ಪ ಛಂದೊಂಬುಧಿಯೊಳ್ ಷಷ್ಠಾಧಿಕಾರಂ ಸಮಾಪ್ತಂ ॥

X X X X

ನೊಂದರ್ಬೆಂದರ್ವೋಹದಿ
ಕಂದಿರ್ದಕ್ರ್ಯಾಳಗೆನೊಲಿದಳದಿರ್ಯತ್ತಾ
ವೊಂದಿದರಾಪತ್ತಂ ಕಳೆ
ಗುಂದಿತದರೆಂದುಸುರ್ದಡಶುಭನಾಂದ್ಯದ ಪದದೊಳ್ ॥

ವಿಷಯ : ಕನ್ನಡ ಛಂದಸ್ಸಿನ ಲಕ್ಷಣಗಳು.

ವಿಶೇಷ : ೧ರಿಂದ ೬ ಅಧಿಕಾರ ಪೂರ್ತಿ ಗ್ರಂಥ ಸಮಗ್ರವಾಗಿದೆ ಗ್ರಂಥ ಮುಗಿದ ಮೇಲೆ ಬರೆದಿರುವ ಬರವಣಿಗೆಯು ಗ್ರಂಥಕ್ಕೆ ಸಂಬಂಧಿಸಿದುದಲ್ಲವಾಗಿ ತೋರುತ್ತದೆ. ಆದರೂ ಗ್ರಂಥಸ್ಥ ವಿಷಯಕ್ಕೆ ಸಂಬಂಧಿಸಿದ ಅನ್ಯತ್ರ ಇರುವ ವಿಷಯಗಳ ಸಂಗ್ರಹಟಿಪ್ಪಣಿಯೆನ್ನಬಹುದು. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

533

ಕೆ. ಎ. ೨೬೦/೩ ಛಾಯಾಪುರುಷನ ಲಕ್ಷಣ ಹಾಡು
೧೨"×೮" ? ?
೧೭—೨೭ ಪತ್ರ ೨೫ ಪಂಕ್ತಿ ೧೮ ಅಕ್ಷರ

ಆದಿ: ಛಾಯಾಪುರುಷನ ಲಕ್ಷಣವಂ ತಿಳಿದು ನಕ್ಷತ್ರಮಾಸದಿ
ಪೊರುಷದಾ ಮರಣವಂ ಪೇಳೊ ಅಧ್ಯಾಯಾ ||
ನೋಡುತಲೆ ನೋಡುತಲೆ ಕೂಡಿ ಛಾಯವ ಮರಣದ
ದ್ಬವದಾಯುವನು ತಿಳಿವಾತ್ಮರಿಗೆ ತಿಳಿದು ಅಳಿಯುವ
ಮಹಾತ್ಮರಿಗೆ ಫಲವನರುಹುವೆನೆಂದು ಸರುಹಿದ
ನಿಜಗುಣಾರ್ಯನ ವಚನ ಅಮೃತದೀ || ಪದನು ||
ಶಂಭು ಆಗುವ ಲಿಂಗನಾಗುವ ಹೊಂದಿಕೆಯ ಆ
ನಂದದಲಿ ರಂಧ್ರದಲಿ ತೋರುವ ಆನಂದ ಅತೀತವನು
ಸಂಧಿ ಸಲಿಸುವ ಛಂದರಿಗೆ ಬಂಧನವ ಬಿಡಿಸುವ
ಛಾಯರಿಗೆ ಹೇಳುವೆನೆಂದನಾ ಮುನಿಪಾ || ೧ ||

ಅಂತ್ಯ: ನಿಜಗುಣಾರ್ಯನ ವಚನದಾಮೃತವನ್ನು
ಸವಿಯುವ ಶಿವಮಹಾತ್ಮರು ತಿಳಿದು ನೋಡಲಿ
ಯೆಂದು ಯಿದರಯ ಸಾರವನು ಛಾಯಾಪುರುಷನ
ಲಕ್ಷಣದಿ ಪೇಳಿದೆನು ಕೇಳೆಂದನಾ ಮುನಿಪಾ || ೮೧ ||
ಛಾಯಾ ಪುರುಷನ ಲಕ್ಷಣ ಸಮಾಪ್ತಂ ಮಂಗಳ ಮಹಾಶ್ರೀ||

ವಿಷಯ: ತತ್ತ್ವಬೋಧೆ.

ವಿಶೇಷ: ರಾವಣ ಮಂಡೋದರೀ ವಾದ, ಆತ್ಮೈಕ್ಯಬೋಧೆ (ತೆ), ಶತಕತ್ರಯ (ಸಂ) ಪ್ರಸ್ತಾಪದ ಗ್ರಂಥಗಳು (ಸಂ) ಎಂಬ ಕೃತಿಗಳು ಈ ಪುಸ್ತಕದಲ್ಲಿವೆ. ಇವನ್ನು ಕೆ. ಬಿ. ೩೮೦ನೆಯ ನಂಬರಿನ ಪ್ರತಿಯನ್ನು ನೋಡಿ ಬರೆದಿರುವಂತೆ ತಿಳಿದುಬರುತ್ತದೆ.

534

ಕೆ. ಬಿ. ೩೮೦/೩ ಛಾಯಾಪುರುಷನ ಲಕ್ಷಣ ಹಾಡು
೯.೫"×೭.೫" ? ?
೨೦—೩೩ ಪತ್ರ ೨೦ ಪಂಕ್ತಿ ೧೮ ಅಕ್ಷರ

ಆದಿ: ಛಾಯಾಪುರುಷನ ಲಕ್ಷಣವಂ ತಿಳಿದು ನಕ್ಷತ್ರ ಮಾಸದಿ
ಪೊಂಬಷದಾ ಮರಣವಂ ಪೇಳೊ ಅದ್ಯಾಯಾ ॥
ನೋಡುತಲೆ ನೋಡುತಲೆ ಕೂಡಿ ಚ್ಛಾಯವ ಮರಣದ
ಧೃವದಾಯುವನು ತಿಳಿವಾತ್ಮರಿಗೆ ತಿಳಿದು ಅಳಿಯುವ
ಮಹಾತ್ಮರಿಗೆ ಪಲವನರುಹುವೆನೆಂದು ನರುಹಿದ
ನಿಜಗುಣಾರ್ಯನ ವಚನ ಅಮೃತದಿ ॥ ಪದನೂ ॥
ಶಂಭು ಆಗುವ ಲಿಂಗನಾಗುವ ಹೊಂದಿಕೆಯು ಆ
ನಂದದಲಿ ರಂದ್ರದಲಿ ತೋರುವ ಆನಂದ ಅತೀತವನು
ಸಂಧಿಸಲಿಸುವ ಛಂದರಿಗೆ ಬಂಧನವ ಬಿಡಿಸುವ
ಚ್ಛಾಯರಿಗೆ ಹೇಳುವೆನೆಂದನಾ ಮುನಿಪಾ ॥ ೧ ॥

ಅಂತ್ಯ: ನಿಜಗುಣಾರ್ಯನ ವಚನದಾಮೃತವನ್ನು
ಸವಿಯುವ ಶಿವಮಹಾತ್ಮರು ತಿಳಿದು ನೋಡಲಿ
ಯೆಂದು ಯಿದರಯ ಸಾರವನು ಛಾಯಾಪುರುಷನ
ಲಕ್ಷಣದಿ ಪೇಳಿದೆನು ಕೇಳೆಂದನಾ ಮುನಿಪಾ ॥ ೬೧ ॥
ಛಾಯಾ ಪುರುಷನ ಲಕ್ಷಣ ಸಮಾಪ್ತಂ ಮಂಗಳ ಮಹಾಶ್ರೀ॥

ವಿಷಯ: ತತ್ತ್ವಬೋಧೆ.

ವಿಶೇಷ: ಚಾಟುಗ್ರಂಥಗಳು (ಸಂ. ರಾವಣ ಮಂಡೋದರೀ ವಾದ, ಆತ್ಮೈಕ್ಯ ಬೋಧೆ (ತೆ) ಶತಕತ್ರಯ (ಸಂ) ಪ್ರಸ್ತಾಪದ ಗ್ರಂಥಗಳು (ಸಂ) ಎಂಬ ಕೃತಿಗಳೂ ಈ ಪುಸ್ತಕದಲ್ಲಿವೆ.

535

ಕೆ. ೮೭	**ಜಗನ್ನಾಥ ವಿಜಯ**	ಚಂಪು
೧೯.೭"×೧.೯"	ರುದ್ರಭಟ್ಟ	ಸು. ೧೧೮೦
೧–೧೧೮ ಪತ್ರ	೧೦ ಪಂಕ್ತಿ	೯೦ ಅಕ್ಷರ

ಆದಿ: ಶ್ರೀ X X X ಜಗಂನಾಥ ವಿಜಯ ಬರೆಯುವದಕ್ಕೆ ಶ್ರೀರಸ್ತು
ಶ್ರೀರಾಮಾ ನಟ ಕೌಸ್ತುಭದ್ಯುತಿ ಕಿರತ್ಪುಷ್ಪಾಂಜಲಿ ಕ್ಷೇಪವ
ಕ್ಷೋರಂಗಸ್ಥಿತೆಯಾದ ಪಾದನಖರೋಚಿಗ್ಗ್ರಂಗೆ ಪೃಥ್ವೀಶಕೋ
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂ
ಭಾರಛೇದ ವಿನೋದಿ ಕೃಷ್ಣ ನಮಗೀಗಾನಂದ ಸಂದೋಹಮಂ ॥ ೧ ॥

X X X X

ಯಿನೆಯಳ ಸೋಂಕಿನಂತೆ ಪೊಸ ಮಾವಿನ ಪೂವಿನ ಜೊಂಪದಂತೆ ಚಂ
ದನರಸದಣ್ಪಿನಂತೆ ನನೆಯೇರಿದ ಮಲ್ಲಿಗೆಯಂತೆ ಪೂರ್ಣ ಚಂ
ದ್ರನ ಸಿರಿಯಂತೆ ಬಂದೆಸೆವ ತೆಂಕಣ ತಂಬೆಲರಂತೆ ರುದ್ರಭ
ಟ್ಟನ ಕವಿತಾರಸಂ ಮನಮನಿಕ್ಕುಳಿಗೊಳ್ವುದು ಸಜ್ಜನರ್ಕಳಾ ॥ ೧೬ ॥

ಅಂತ್ಯ : ಬಾಡಿದ ಕೆಯ್ಗೆ ಕೊಳ್ಗೆ ಮಳೆ ಸಸ್ಯಕುಲಂ ಸತತಂ ಸುಭಿಕ್ಷೆಯಂ
ಮಾಡುಗೆ ಗೋಧನಾಳಿ ಕೊಡವಾಲ್ಗೆರೆಗೋಪರನಂಗರಾಗದೊಳ್
ಕೂಡುಗೆ ರುದ್ರಭಟ್ಟ ಕೃತಿ ವೈಷ್ಣವ ಕಾವ್ಯರಸಾರ್ಣ್ನವಂ ತುಳುಂ
ಕಾಡುಗೆ ಭೂಮಿ ನಿಲ್ವಿನಮುಹರ್ಪ್ಪತಿ ನಿಲ್ವಿನಂ ॥ ೧೦೨ ॥

ಗದ್ಯ॥ ಇದು ಸಮಸ್ತ ಕಮಳಭವಾಂಡಮಾಲಾಘಟಿ ಘಟಿತಾರಘಟ್ಟ ಘಟನಾ
ಸ್ವತಂತ್ರ ನಿಜಸ್ವರೂಪ ನಿರೂಪಣ ಚಕಿತ ಸಕಲಾಮ್ನಾಯತಂತ್ರ ಲಕ್ಷ್ಮೀ
ಕಾಂತ ಶ್ರೀಪಾದಭಕ್ತಿಯುಕ್ತ ಸುಕವೀಂದ್ರ ರುದ್ರಪ್ರಣೀತ ಶ್ರೀ ಜಗಂನಾಥ
ವಿಜಯ ಮಹಾಪ್ರಬಂಧದೊಳು ಅಂಧಕರಿಪುಸ್ಕಂದ ಯುದ್ಧ ಬಾಣಾಸುರ
ಸಹಸ್ರ ಭುಜಾಛೇದನ ರಿಪುಭ್ರಮಣ ಪುರಸ್ತಂಭನ ಸಾಲ್ವ ವಧ ದ್ವಾರಾ
ವತೀ ಪ್ರವೇಶ ವರ್ಣ್ನನಮಷ್ಟಾದಶಾಶ್ವಾಸಂ ಸಂಪೂರ್ನಂ

X X X X

ಶ್ರೀ ಜಗಂನಾಥವಿಜಯ ಮಹಾಪ್ರಬಂದದೊಳು ಆಶ್ವಾಸ ೧೮ಕಂ ವೃತ್ತಾ
೧೦೩೬ ಕಂದ ೯೮೫ ವಚನ ೬೨೨ ಕಾಂ ಮಂಗಳ ಮಹಾ ಶ್ರೀ

ವಿಷಯ : ಶ್ರೀ ಕೃಷ್ಣನ ಕಥೆ.

ವಿಶೇಷ : ೧೦೭ನೆಯ ಪತ್ರದ ಅಂಚು ಮುರಿದುಹೋಗಿದೆ.

536

ಕೆ. ೧೧೬	**ಜಗನ್ನಾಥ ವಿಜಯ**	ಚಂಪು
೧೯.೨"×೧ ೮"	ರುದ್ರಭಟ್ಟ	ಸ. ೧೧೮೦
೧–೧೩೧ ಪತ್ರ	೧೦ ಪಂಕ್ತಿ	೮೦ ಅಕ್ಷರ

ಆದಿ : ಜಗಂನಾಥ ವಿಜಯ ಪುಸ್ತಕಸ್ಯ ಭದ್ರಂ ಭೂಯಾತ್ X X X

ವೃತ್ತ॥ ಶ್ರೀರಾಮಾನಟ ಕೌಸ್ತುಭದ್ಯುತಿ ಕಿರತ್ಪುಷ್ಪಾಂಜಲಿಕ್ಷೇಪ ವ
ಕ್ಷೋರಂಗಸ್ಥಿತೆಯಾದ ಪಾದ ನಖರೋಚಿರ್ಗಂಗೆ ಪೃಥ್ವೀಶ ಕೋ

ಟೀರವ್ಯಾಪ್ತಿಗೆ ಸಂದ ಚಕ್ರರವಿದೈತ್ಯಧ್ವಾಂತಮಮಂ ಗೆಲ್ದ ಭೂ
ಭಾರ ಚ್ಛೇದವಿನೋದಿ ಕೃಷ್ಣನೆಮಗೀಗಾನಂದಸಂದೋಹಮಂ ‖ ೧ ‖

ಯಿನಿಯಳ ಸೋಂಕಿನಂತೆ ಪೊಸಮಾವಿನ ಪೂವಿನ ಜೊಂಪದಂತೆ ಚಂ
ದನರಸದಂಪಿನಂತೆ ನನೆಯೇರಿದ ಮಲ್ಲಿಗೆಯಂತೆ ಪೂರ್ನ ಚಂ
ದ್ರನ ಸಿರಿಯಂತೆ ಬಂದೆಸವ ತೆಂಕಣ ತಂಬೆಲರಂತೆ ರುದ್ರಭ
ಟ್ಟನ ಕವಿತಾರಸಂ ಮನವನಿರ್ಕುಳಿಗೊಳ್ಳದು ಸಜ್ಜನರ್ಕಳಾ ‖ ೧೬ ‖

ಅಂತ್ಯ : .... ಸುಭಿಕ್ಷಮಂ
ಮಾಡುಗೆ ಗೋ ದನಾಳಿ ಕೊಡೆವಾಲ್ಗರೆಗೋಪರಸಂಗರಾಗದೊಳ್
ಕೂಡುಗೆ ರುದ್ರಭಟ್ಟಕೃತಿ ವೈಷ್ಣವಕಾವ್ಯರಸಾರ್ನವಂ ತುಳುಂ
ಕಾ.... .... ‖
..........ಭವಾಂಡಮಾಲಾ ಘಟಘಟಿತಾರಘಟ್ಟ ಘಟನಾ ಸ್ವತಂತ್ರ ನಿಜಸ್ವರೂಪ ನಿರೂಪಣ ಚಕಿತ ಸಕಳಾಂಮ್ನಾಯ ರಿಪುಭ್ರಮ ಪುರಸ್ತಂಭ ಸಾಲ್ವವಧ ದ್ವಾರಕಾಪ್ರವೇಶ ವರ್ಣನಂ ಅಷ್ಟಾದಶಾಶ್ವಾಸಂ ಮಂಗಳ ಮಹಾ.

ವಿಷಯ : ಶ್ರೀಕೃಷ್ಣನ ಕಥೆ.

ವಿಶೇಷ : ಪ್ರತಿ ಸಮಗ್ರವಾಗಿದೆ. ಕೊನೆಯ ಒಂದು ಪತ್ರ ಮಾತ್ರ ಮುರಿದು ಹೋಗಿದೆ. ಪ್ರತಿಯ ಕೊನೆಯಲ್ಲಿ ಉತ್ಪಳಮಾಳಾವೃತ್ತಾ ‖
ಯಿಾತೆರದಿಂದ ರುದ್ರಕವಿವರ್‍ಯನುಸುರ್ದ ಮನೋಜ್ಞಮಿಾ ಜಗಂನಾ........
X X X X
ಗಂನಾಥ ವಿಜಯ ಪ್ರಬಂಧ ಪರಿಸಮಾಪ್ತಿಯುತ ಪುಸ್ತುಕಸ್ಯ ಭದ್ರಂ ಭೂಯಾತ್ ‖ ಗ್ರಂಥದ ಕೊನೆಯಲ್ಲಿ ಕೆಲವು ಕ್ರಮಸಂಖ್ಯೆಗಳನ್ನು ತಿದ್ದಿದೆ.

537

ಕೆ. ೩೩೯	ಜಗನ್ನಾಥ ವಿಜಯ	ಚಂಪು
೧೬.೭"×೧.೪"	ರುದ್ರಭಟ್ಟ	ಸು. ೧೧೮೦
೧-೧೯೦ ಪತ್ರ	೭ ಸಂಕ್ತಿ	೭೩ ಅಕ್ಷರ

ಆದಿ : ಶ್ರೀ X X X ಜಗನ್ನಾಥ ವಿಜಯದ ಪೋಸ್ತಕ X X X
ಶ್ರೀರಾಮಾನಟ ಕೌಸ್ತುಭದ್ಯುತಿ ಕಿರತ್ಪುಷ್ಪಾಂಜಲಿಕ್ಷೇಪ ವ
ಕ್ಷೋರಂಗಸ್ಥಿತೆಯಾದ ಪಾದನಖರೋಚಿಗ್ಗಂಗೆ ಪೃಥ್ವೀಶಕೋ

ಟೀರ ವ್ಯಾಸಿಗೆ ಸಂದ ಚಕ್ರ ರವಿ ದೈತ್ಯಧ್ವಾಂತಮಂ ಗೆಲ್ದ ಭೂ
ಭಾರಚ್ಛೇದ ವಿನೋದಿ ಕೃಷ್ಣನೆಮಗೀಗಾನಂದ ಸಂದೋಹವು ॥ ೧ ॥

X X X X

ಯಿಸಿಯಳ ಸೋಂಕಿನಂತೆ ಪೊಸಮಾವಿನ ಪೂವಿನ ಜೊಂಪದಂತೆ ಚಂ
ದನರಸದಂಪಿನಂತೆ ನನೆಯೇರಿದ ಮಲ್ಲಿಗೆಯಂತೆ ಪೂರ್ಣಚಂ
ದ್ರನ ಸಿರಿಯಂತೆ ಬಂದೆಸವ ತೆಂಕಣ ತಂಬೆಲರಂತೆ ರುದ್ರಭ
ಟ್ಟನ ಕವಿತಾರಸಂ ಮನಮನಿರ್ಕ್ಕುಳಿಗೊಳ್ಳುದು ಸಜ್ಜನರ್ಕ್ಕಳಾ ॥ ೧೬ ॥

ಅಂತ್ಯ: ಬಾಡದ ಕೆಯಿಗೆ ಕೊಳ್ಗೆ ಮಳೆ ಸಸ್ಯಕುಲಂ ಸತತಂ ಸುಭಿಕ್ಷೆಯಂ
ಮಾಡುಗೆ ಗೋಧನಾಳಿ ಕೊಡವಾಲ್ಗರೆ ಗೋಪರನಂಗನಾಗದೊಳ್
ಕೂಡುಗೆ ರುದ್ರಭಟ್ಟ ಕೃತಿ ವೈಷ್ಣವ ಕಾವ್ಯರಸಾರ್ನ್ನವಂ ತುಳುಂ
ಕಾಡುಗೆ ಭೂಮಿ ನಿಲ್ವಿನಮುಹಃಪತಿ ನಿಲ್ವಿನಮಿಂದು ನಿಲ್ವಿನಂ ॥ ೧೫೬ ॥

ಗದ್ಯ॥ ಯಿದು ಸಮಸ್ತ ಕಮಲ ಭವಾಂಡ ಮಾಲಾಘಟಘಟಿತಾ ರಘಟ್ಟ
ಘಟನಾ ಸ್ವತಂತ್ರ X X X ಸುಕವೀಂದ್ರ ರುದ್ರಪ್ರಣೀತ ಶ್ರೀ
ಜಗನ್ನಾಥಭಟ್ಟ ವಿಜಯ ಮಹಾಪ್ರಬಂಧದೊಳು ಅಂಧಕರಿಪುಸ್ಕಂಧ ಯುದ್ಧ
X X X ದ್ವಾರಾವತೀ ಪ್ರವೇಶ ವರ್ನ್ನನಮಷ್ಟಾದಶಾಚ್ವಾಸಂ.

ಸೇವ್ಯಕಾವ್ಯ ನಾಟಕ ತರ್ಕ್ಕ ವ್ಯಾಕರಣ ಛಂದೋಲಂಕಾರಾದ್ಯನೇಕ ಶಾಸ್ತ್ರ ಪಾರಾವಾರಗ ಶ್ರೀಮತ್ಸುಕವೀಂದ್ರ ರುದ್ರಭಟ್ಟ ಪ್ರಣೀತ ಶ್ರೀ ಜಗಂನಾಥಭಟ್ಟ ವಿಜಯ ಮಹಾಪ್ರಬಂಧೇ ಪ್ರಥಮಂ ತಾವತ್ಸುರಜ್ಯೇಷ್ಠ ವಿಗ್ನಾಪನಾ ಶ್ರೀವರ್ನ್ನನ X X X ಯಿಂತು ಜಗನ್ನಾಥ ವಿಜಯ ಮಹಾಪ್ರಬಂಧದೊಳು ಆಚ್ವಾಸ ೧೮ಕ್ಕಂ ವೃತ್ತಂಗಳು ೧೧೩೭ ಕಂದಂಗಳು ೯೮೫ ವಚನಂಗಳು ೭೨೨ ಕಂ ಗ್ರಂಥಪ್ರಮಾಣು ೭೫೦೦ ಕಂ ಮಂಗಲ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದ ೧೫೬೭ ವರುಷ ಸಂದ ರಾಕ್ಷಸ ಸಂವತ್ಸರದ ಪಾಲ್ಗುನ ಶು ೧೦ ಚಂದ್ರವಾರ ಪುನರ್ವಸು ನಕ್ಷತ್ರದಲೂ ಹದಿನಾಡ ಸೀಮೆ ಸೇನಭಾಗ ದೊಡ್ಡತಂಮರನರ ಮಲ್ಲಪ್ಪ ರನರ ಮಗ ಗವಿಯಂಣನ ಮಗ ವೆಂಕಟಪತಿಯು ಬರದ ಜಗಂನಾಥ ವಿಜಯದ ಪುಸ್ತಕಕ್ಕೆ ಮಂಗಲ.

ವಿಷಯ: ಶ್ರೀಕೃಷ್ಣನ ಕಥೆ.

ವಿಶೇಷ: ಪ್ರತಿಯ ಮೊದಲು ಎರಡು ಪತ್ರಗಳಲ್ಲಿ ಪ್ರತಿಕಾರನು ಬರೆದ ಕಥಾಗರ್ಭ ವಿದೆ. ೧೪೯ ಮತ್ತು ೧೫೫ರಿಂದ ೧೫೮ರ ವರೆಗಿನ ಒಟ್ಟು ಆರು ಪತ್ರಗಳು ಲುಪ್ತವಾಗಿವೆ.

538

ಕೆ. ೩೩೦ | ಜಗನ್ನಾಥ ವಿಜಯ | ಚಂಪೂ

೧೦.೫" × ೨.೧" | ರುದ್ರಭಟ್ಟ | ಸು. ೧೧೮೦

೧–೧೧೪ ಪತ್ರ | ೧೧ ಪಂಕ್ತಿ | ೪೫ ಅಕ್ಷರ

ಆದಿ: ಶ್ರೀ x x x

ಶ್ರೀರಾಮಾ ನಟಿಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪ ವ
ಕ್ಷೋರಂಗಸ್ಥಿತೆಯಾದ ಪಾದನಖರೋಚಿಗಂಗೆ ಪೃತ್ವೀಶ ಕೋ
ಟೀರ ವ್ಯಾಪ್ತಿಗೆ ಸಂದ ಚಕ್ರರವಿದೈತ್ಯದ್ವಾಂತಮುಂ ಗೆಲ್ದ ಭೂ
ಭಾರಚ್ಛೇದಿ ವಿನೋದಿ ಕೃಷ್ಣನಮಗೀಗಾನಂದ ಸಂದೋಹಮಂ ॥ ೧ ॥

x x x x

ಯಿನೆಯಳ ಸೋಂಕಿನಂತೆ ಪೊಸಮಾವಿನ ಪೂವಿನ ಜೊಂಪದಂತೆ ಚಂ
ದನರಸದಂಪಿನಂತೆ ನೆನೆಯೇರಿದ ಮಲ್ಲಿಗೆಯಂತೆ ಪೂರ್ಣಚಂ
ದ್ರನ ಸಿರಿಯಂತೆ ಬಂದೆಸೆವ ತೆಂಕಣ ತೆಂಬೆಲರಂತೆ ರುದ್ರಭ
ಟ್ಟನ ಕವಿತಾರಸಂ ಮನಮನಿಕ್ಕುರ್ಳಿಗೊಳ್ಪುದು ಸಜ್ಜನರ್ಕ್ಕಳಾ ॥

ಅಂತ್ಯ: ಶ್ರೀವಕ್ಷಪನಸನಿವಾಹಮು
ಮೂ ವಿಕೃತ ಕುಸುಮವಿಸರಮೆನೆ ಶಿಖರಿವನಂ
ತೀವಿರೆ ಶಿಖಂಡಿ ಮಣಿಕಿರ
ಣಾವಳಿಯಿಂ ಕಾಣಲಾಯ್ತು ರೈವತ ಶೈಲಂ ॥ ೧ ॥

ವೃ॥ ಯಿರೆ ಶಬರಾಧಿರಾಜ ರಾಜಕಟಕಂ ಕಟಕಂಕಟಕಂಧರೋಗ್ರ ಸಿಂ
ಧುರಮೆನೆ ನಿರ್ಝರೋಲ್ಲಹರಿಗಳ್ ಹರಿಗಳ್ ಹರಿಗಳ್ ವಿಜೃಂಭದಿಂ
ಗಿರಿತಟದಲ್ಲಿ ದಾವಶಿಖಿಯುಂ ಶಿಖಿಯುಂ ಶಿಖಿಯುಂ

ವಿಷಯ: ಶ್ರೀಕೃಷ್ಣನ ಕಥೆ.

ವಿಶೇಷ: ೧–೧೧೩ ಪತ್ರದವರೆಗೆ ೧೨ನೆಯ ಆಶ್ವಾಸದ ೯೭ನೆಯ ಪದ್ಯದವರೆಗಿನ ಗ್ರಂಥವಿದೆ. ಇನ್ನೊಂದು ಪತ್ರದಲ್ಲಿ ೧೫ನೆಯ ಆಶ್ವಾಸದ ಕೊನೆಯ ಸ್ವಲ್ಪ ಭಾಗವಿದ್ದು ೧೬ನೆಯ ಆಶ್ವಾಸ ಮೊದಲಾಗಿ ಆ ಮೇಲೆ ಬರವಣಿಗೆ ನಿಲ್ಲುತ್ತದೆ. ಒಟ್ಟನಲ್ಲಿರುವುದು ೧೨ ಆಶ್ವಾಸಗಳು. ಇಲ್ಲದಿರುವುದು ೬ ಆಶ್ವಾಸಗಳು.

539

ಕೆ. ಎ. ೫೯	**ಜಗನ್ನಾಥ ವಿಜಯ**	**ಚಂಪು**
೧೩" × ೮"	ರುದ್ರಭಟ್ಟ	ಸು. ೧೧೮೦
೧—೩೦೭ ಪತ್ರ	೧೮ ಪಂಕ್ತಿ	೨೨ ಅಕ್ಷರ

ಆದಿ: ಶ್ರೀರಾಮಾ ನಟಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪ ವ
ಕ್ಷೋರಂಗಸ್ಥಿತೆಯಾದ ಪಾದ ನಖರೋಚಿಗ್ಗ್ರಂಗೆ ಪೃಥ್ವೀಶ ಕೋ
ಟೀರವ್ಯಾಪ್ತಿಗೆ ಸಂದ ಚಕ್ರರವಿದ್ಯೈತ್ಯದ್ವಾಂತಮುಂ ಗೆಲ್ದ ಭೂ
ಭಾರ ಚ್ಛೇದಿ ವಿನೋದಿ ಕೃಷ್ಣನೆಮಗೀಗಾನಂದ ಸಂದೋಹಮಂ ॥ ೧ ॥

X X X X

ಇನಿಯಳ ಸೋಂಕಿನಂತೆ ಪೊಸಮಾವಿನ ಪೂವಿನ ಜೊಂಪದಂತೆ ಚಂ
ದನರಸದಣ್ಪಿನಂತೆ ನೆನೆಯೇರಿದ ಮಲ್ಲಿಗೆಯಂತೆ ಪೂರ್ಣ ಚಂ
ದ್ರನ ಸಿರಿಯಂತೆ ಬಂದೆಸಪ ತೆಂಕಣ ತೆಂಬೆಲರಂತೆ ರುದ್ರಭ
ಟ್ಟನ ಕವಿತಾರಸಂ ಮನಮನಿಕ್ಕುಳಿಗೊಳ್ವುದು ಸಜ್ಜನರ್ಕಳಾ ॥ ೧೬ ॥

ಅಂತ್ಯ: ಕೋಪೋನ್ಮೀಲಿತ ದೃಷ್ಟಿಯಿ
ನಾ ಪಂಕಜಪತ್ರನೇತ್ರೆಮುರಿದೀಕ್ಷಿಸುತಿ
ರ್ದ್ದಾ ಪಾಂಗು ಪಡೆದುದೆನಸುಂ
ಶ್ರೀ ಪುರುಷೋತ್ತಮನೊಳತನು ರಾಗೋದಯಮಂ ॥

ವೃ॥ ಸಮುಸಂದೊಲ್ಮೆಗೆ ಮುಂಪ್ರಸಂನವತಿಯಾಗಿದ್ರ್ದಂದಿನಾ ರೂಪು ವಿ
ಭ್ರಮಮಾ ಸಾಧ್ವಸಭಾವಮಾ ರತಿ ಕಳಾಚಾತುರ್ಯಮಾ ವಾಕ್ಯವ
ಕ್ರಿಮಮುಹಾಸ...............

ವಿಷಯ: ಶ್ರೀಕೃಷ್ಣನ ಕಥೆ

ವಿಶೇಷ: ೧೨ನೆಯ ಆಶ್ವಾಸದ ೮೬ನೆಯ ಪದ್ಯದ ವರೆಗಿನ ಗ್ರಂಥವಿದೆ. ಇನ್ನೂ ಆರು ಆಶ್ವಾಸಗಳಿಲ್ಲ ೧೦೭, ೧೦೮ನೆಯ ಪತ್ರಗಳು ೧೧೦ನೆಯ ಪತ್ರದ ಅನಂತರ ಇವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

540

ಕೆ. ಬಿ. ೧೨	**ಜಗನ್ನಾಥ ವಿಜಯ**	**ಚಂಪು**
೮.೧"×೬.೪"	ರುದ್ರಭಟ್ಟ	ಸು. ೧೧೮೦
೧—೬೯ ಪತ್ರ	೧೩ ಪಂಕ್ತಿ	೨೦ ಅಕ್ಷರ

ಆದಿ: ಶ್ರೀವತ್ಸಾಂಕೇವ ಸುಭಗಂ
ಶ್ರೀವತ್ಸಾಂಕೇಷು ದಳಿತಗೋಪೀ ಹೃದಯಂ
ಗೋವರ್ಧನಪಟು ನಲಿದಂ
ಗೋವರ್ಧನ ಗಿರಿಯೊಳಿಸೆವ ವೃಂದಾವನದೊಳ್ ॥

ಅಂತ್ಯ: ಮಸಕಂಗೊಂಡಟ್ಟಿಗಳ್ ವರ್ತಿಸೆ ಸಮರಮಹೀರಂಗದೊಳ್ ನಾರದಂ ನ
ರ್ತಿಸೆ ರೋಧೋರಂಗದೊಳ್ ಸಂಗರಜಯವದುವಾ ತ್ಮೀಯ
ದೋರ್ಯುಗ್ಮದೊಳ್ ನ
ರ್ತಿಸೆ ಗೆಲ್ಲಂಗೊಂಡು ತಮ್ಮೊ(?)ಳ್ಪೊಣರ್ದು ಗಿಡು ತೆರಳ್ದೋಡುವಾ ಭೂಪರಂ ಸಂ
ತಸದಿಂ ನೋಡುತ್ತಮಿರ್ದಂ ಪ್ರಹಸಿತವದನಂ ಗೋಪಮಾರ್ತಾಂಡ ದೇವಂ॥

ಗದ್ಯ॥ ಇದು ಸಮಸ್ತ ಕಮಳ ಭವಾಂಡ ಮಾಲಾಘಟ ಘಟಿತಾ ರಘಟ್ಟ
ಘಟ್ಟನಾ ಸ್ವತಂತ್ರ x x x ಸುಕವೀಂದ್ರ ರುದ್ರಪ್ರಣೀತ ಶ್ರೀ
ಜಗನ್ನಾಥ ವಿಜಯ ಮಹಾಪ್ರಬಂಧದೊಳು ಉಗ್ರಸೇನಾಭಿಷೇಕ x x
ಸುದರ್ಶನಶಾರ್ಜಕೌಮೋದಕೀ ಸಮಾಗಮನ ಜರಾಸಂಧ ಯುದ್ಧವರ್ಣನಂ
ಸಪ್ತಮಾಶ್ವಾಸಂ ॥ ಶ್ರೀ.

ವಿಷಯ: ಶ್ರೀಕೃಷ್ಣನ ಕಥೆ.

ವಿಶೇಷ: ಪ್ರತಿಯು ೪ನೆಯ ಆಶ್ವಾಸದಿಂದ ೭ನೆಯ ಆಶ್ವಾಸದ ವರೆಗಿದೆ.

541

ಕೆ. ೧೧೧ ಜಗನ್ನಾಥವಿಜಯ ಪಂಚಪಾಷಾಣ ವ್ಯಾಖ್ಯಾನಂ ಪದ್ಯ, ವ್ಯಾಖ್ಯಾನ
೧೯.೨" × ೧.೮" ? ?
೧–೭ ಪತ್ರ ೧೦ ಪಂಕ್ತಿ ೮೦ ಅಕ್ಷರ

ಆದಿ: ಶ್ರೀ x x ಜಗಂನಾಥ ವಿಜಯ ಮಹಾ ಪ್ರಬಂಧ ಮಂಗಲಾಚರಣ
ಪಂಚಪಾಷಾಣ ವ್ಯಾಖ್ಯಾನಂ । ಅಥ ಮಹಾಕವಿಃ ಉಭಯ ಭಾಷಾ
ಭೂಷಿತ ಪ್ರಬಂಧ ಪ್ರವೀಣಃ ಶ್ರೀವರ್ಮಾ ರುದ್ರಭಟ್ಟನಾಮ ಪುರುಷೋತ್ತಮ
ಚರಿತ x x x ಮಂಗಲಮಾಚರತಿ.

ಶಾರ್ದೂಲ ವಿಕ್ರೀಡಿತ ವೃತ್ತಂ ॥
ಶ್ರೀರಾಮಾನಟ ಕೌಸ್ತುಭದ್ಯುತಿ ಕಿರತ್ಪುಷ್ಪಾಂಜಲಿಕ್ಷೇಪವ
ಕ್ಷೋರಂಗಸ್ಥಿತೆಯಾಡ ಪಾದನಖರೋಚಿರ್ಗಂಗೆ ಪೃಥ್ವೀಶ ಕೋ

ಟೀರ ವ್ಯಾಪ್ತಿಗೆ ಸಂದ ಚಕ್ರರವಿದ್ವೈತ್ಯದ್ಧ್ವಾಂತಮಂ ಗೆಲ್ದ ಭೂ
ಭಾರಚ್ಛೇದ ವಿನೋದಿ ಕೃಷ್ಣನೆಮಗೀಗಾನಂದ ಸಂದೋಹಮಂ ॥

ಅತ್ರ ಕೃಷ್ಣನೆಮಗೀಗಾನಂದ ಸಂದೋಹಮಮಿತ್ಯತ್ರಾಧಿಕೃತ ದೇವತಾ ಪ್ರಾರ್ಥನಾರೂಪಾಶೀರ್ನಿರೂಪಣಂ ಶ್ರೀರಾಮೇತ್ಯಾದಿನಾ ಮೂರ್ತಿಧ್ಯಾನೇನ ಮಾನಸಿಕ ನಮಸ್ಕ್ರಿಯಾಭಿವರ್ಣನಂ ॥

ಅಂತ್ಯ : ಅರಿರೌದ್ರಂ ಕರದೈರ್ಘ್ಯಮುಲ್ಲಸದಹೀನಾಲಂಕೃತಂ ಮೂರ್ತಿ ಸಾ
ಕ್ಷರಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದಂ ಸದಾಳಿಪ್ರಿಯಂ ॥
ವರದಾನೋಂನತ ಭದ್ರಲಕ್ಷಣಪದಂ ಪದ್ಮಾನುಷಂಗಿತ್ವಮಾ
ಗಿರೆ ಪೆಂಪಚ್ಚರಿಯಾದ ದೇವಗಣಪಂ ರಕ್ಷಿಕ್ಕೆ ಭೂಚಕ್ರಮಂ ॥

ಇತಿ ದೇವಗಣಪಃ । ದೇವಶ್ಚಾಸಾ ಗಣಪಶ್ಚ । ವರಪ್ರದವಿಘ್ನರಾಜಃ । ಭೂಚಕ್ರಮಂ ರಕ್ಷತ್ವಿತಿ ಕ್ರಿಯಾಕಾರಕ ಸಂಬಂಧಃ । x x
ಭದ್ರಲಕ್ಷಣಂ ಯಸ್ಯತ್ । ತಸ್ಯ ಲಕ್ಷಣಂ ವರದಾನಮುಂನತಂ
ಭದ್ರಲಕ್ಷಣಯುತಂ ಚ । ಸದಾಳಿಪ್ರಿಯಂ । ಸತತಮಳಿಪ್ರಿಯಂ
ಭೃಂಗಹೃದ್ಯಂ । ವರದಾನಮಿತಿ । ದಾನಸ್ಯ ಮದಜಲಸ್ಯ ಸೌಗಂಧ್ಯ
ಮುಕ್ತಂ ಅತ ಏವ ಸದಾಳಿಪ್ರಿಯಂ । ಸದೇತಿ ನಿತ್ಯಮದೋ ಗಮ್ಯತೆ ।

ವಿಷಯ : ಜಗನ್ನಾಥ ವಿಜಯದ ಮೊದಲ ಐದು ಪದ್ಯಗಳ ವ್ಯಾಖ್ಯಾನ.

ವಿಶೇಷ : ಅಸಮಗ್ರ.

542

ಕೆ. ೯೨/೨	ಜನವಶ್ಯ (ಮದನ ತಿಲಕ)	ಭೋಗಷಟ್ಪದಿ
೧೫.೮ X ೧.೩"	ಕಲ್ಲರಸ	ಸು. ೧೪೫೦
೧—೭೧ ಪತ್ರ	೫ ಪಂಕ್ತಿ	೬೨ ಅಕ್ಷರ

ಆದಿ : ಮಲ್ಲಿಕಾರ್ಜುನ ವಿಜಯ ॥ ಭೋಗ ॥
ಶ್ರೀಮದಮದವರ ಕಿರೀಟ
ಭಾಮನೋಹರಾಂಘ್ರಿ ಶೋಣ
ತಾಮರಸನುದಾರ ಸುರತರಂಗಿಣೀಧರಂ
ಸಾಮಗಾನಲೋಲ......
..... ಮಹೇಶಸಿಂದು ಭೂಷ
ಹೇಮಕೂಟಗಿರಿನಿವಾಸನೀಗೆ ಸೌಖ್ಯಮಂ ॥ ೧ ॥

ಅಂತ್ಯ : ಮಲ್ಲಿಕಾರ್ಜುನಧರಾ... ....

....

....

ಸಲ್ಲಲಿತವಾಣಿ ಕವಿ
ಕಲ್ಲರಸನಜೀವವರ
ಮೆಲ್ಲಿರ್ದೆಯನಿಂಬುಗೊಳ್ಳಂತೆ ಬರೆದಂ ॥

ಜನವಶ್ಯದೊಳ್ ದೂತಿ ಮಂತ್ರತಂತ್ರವರ್ನ್ನನ..........
.... ಶ್ರೀ

ವಿಷಯ : ಕಾಮಶಾಸ್ತ್ರ.

ವಿಶೇಷ : ಆರಂಭ ಮತ್ತು ಅಂತ್ಯದಲ್ಲಿ ಕೆಲವು ಓಲೆಗಳು ಮುರಿದಿವೆ. ಮಧ್ಯದಲ್ಲಿ ೩೯ರಿಂದ ೫೨ ಪೂರ್ತಿ ಓಲೆಗಳಿಲ್ಲ. ಶಕಟರೇಫದ ಬಳಕೆ ಇದೆ. ಇದೇ ಕಟ್ಟನಲ್ಲಿ ಗಜೇಂದ್ರ ಮೋಕ್ಷವೆಂಬ ಮತ್ತೊಂದು ಗ್ರಂಥವಿದೆ.

543

ಕೆ. ೩೨೨/೫ ಜಪದಲಕ್ಷಣ ಇತ್ಯಾದಿ ಗದ್ಯ, ಶ್ಲೋಕ, ಟೀಕು
೧೩"×೨" ? ?
೧–೫ ಪತ್ರ ೧೨ ಪಂಕ್ತಿ ೪೨ ಅಕ್ಷರ

ಆದಿ : ಶ್ರೀ ಶಿವಾಯ ನಮಃ ॥ ಜಪದ ಲಕ್ಷಣ ॥ ಆಧಾರಚಕ್ರದಲ್ಲಿ ಚೌದಳಪದ್ಮ । ಅಲ್ಲಿ ಭಕ್ತಿಸ್ಥಲ । ಆ ಭಕ್ತನ ಇಷ್ಟಲಿಂಗದ ಪೀಠದಲ್ಲಿರುವ ಪೀತವರ್ಣದ ಆಚಾರಲಿಂಗ ನೆಲಸಿರ್ಪನ್ಸೈಯ್ಯ । ಆ ಲಿಂಗದಲ್ಲಿ ನಾಲ್ಕು ಘಳಿಗೆ ನಾಲ್ವತ್ತೆಂಟು ಪಾನಿವಾಳಕ್ಕೆ ನಕಾರವೆಂಬ ಪ್ರಣವದಿಂದ ಹದಿನೇಳು ನೂರ ಇಪ್ಪತ್ತೆಂಟು ಜಪ ನಡವುತ್ತಿಪ್ಪುದೈಯ ॥ ೧ ॥

ಅಂತ್ಯ : ಪ್ರಬುದ್ಧಾಯ ನಮಸ್ತುಭ್ಯಂ ಸ್ಥಿರಾಯ ಪರಮಾತ್ಮನೇ
ಸಭಾರೂಪಾಯ ತೇ ತುಭ್ಯಂ ಸಭಾಯಾಃ ಪತಯೇ ನಮಃ ॥ ೧೪ ॥
ನಮಃ ಶಿವಾಯ ಸಾಂಬಾಯ ಬ್ರಹ್ಮಣೇ ಸರ್ವಸಾಕ್ಷಿಣೇ ॥ ೧೫ ॥
ಯಃ ಪಠೇಚ್ಛೃಣುಯದ್ವಾಪಿ ಮುಕ್ತಿಖಂಡಮಿದ ಮುದಾ
ಸಾಕ್ಷಾನ್ಮುಕ್ತಿಮವಾಪ್ನೋತಿ ಪ್ರಸಾದೇನ ಸಭಾಪತೇಃ ॥ ೧೬ ॥

ವಿಷಯ : ಜಪಲಕ್ಷಣ–ತತ್ವಪೂಜೆಯ ಲಕ್ಷಣ–ಅಷ್ಟಮೂರ್ತಿಪೂಜೆ-ಶನಿಪ್ರದೋಷ ವಿಧಿ–ಬ್ರಹ್ಮಕೃತ ಶಿವಶಕ್ತಿ ಸ್ತೋತ್ರಂ–ಮಾರ್ಕಂಡೇಯ ಸ್ತೋತ್ರಂ ಮತ್ತು ಲಿಂಗಧಾರಣಪರಕಗಳಾದ ಶ್ರುತ್ಯಾಗಮ ಗ್ರಂಥಗಳು ಟೀಕುಸಹಿತವಾಗಿ ಇರುತ್ತವೆ.

ವಿಶೇಷ : ಇದರೊಂದಿಗೆ ವಜ್ರಸೂಚ್ಯಾದ್ಯುಪನಿಷದಃ (ಸಂ), ಶಿವಕವಚಾದಿಗಳು (ಸಂ), ಮಹತ್ವ ರತ್ನಮಾಲೆ ಮೊದಲಾದ ಗ್ರಂಥಗಳಿವೆ.

544

ಕೆ. ಗಾ	**ಜಯನೃಪ ಕಾವ್ಯ**	**ಪರಿವರ್ಧಿನಿ ಷಟ್ಪದಿ**
೧೭"×೨"	೩ನೆಯ ಮಂಗರಸ	೧೫೦೪
೧–೫೭ ಪತ್ರ	೧೧ ಪಂಕ್ತಿ	೬೨ ಅಕ್ಷರ

ಆದಿ : ಶ್ರೀ X X X

ಶ್ರೀಮತ್ ಸಾಮಾನ್ವಯ ನವತಿಲಕಂ
ಸೋಮಪ್ರಭ..............
...... ಯಂ ಪರಿಪಾಲಿಸಿ ಸಾದಿಸಿದಂ ಮುಕ್ತಿಯನೂ ॥

ಪದ॥ ಶ್ರೀಮದಖಿಲ ಸುಮನೋಗಣ ಭಾಸಿ ಸ
ದಾಮೃತ ಫಲವಿತರಣ ವಿಲಸದ್ಗುಣ
ದಾಮಂ ವಿಮದಾನಂದಾಕರನಮಲಚ್ಛಾಯಾಯೋಗಂ
ಕಾಮ ಪ್ರಸರಾಪಹರಂ ವರ ರಂ
ಮ್ಯಾಮರ ಭೂರುಹವೆನೆ ಚೆಲ್ವಂದಳೆ
ದಾ ಮಹಿತಾದೀಶ್ವರನೆಮಗೀಗಭಿಮತ ಸಂಸಿದ್ಧಿಯನೂ ॥ ೧ ॥

ಅಂತ್ಯ : ಯಿದು ಸುರನರ ಫಣಿ ಪರಿವೃಡ ವಿನಮಿತ
ವಿದಿತ ವಿನಯ ಗುಣಗಣಯುತ ಜಿನಪತಿ
ಪದಸರಸಿಜ ಮದಮಧುಕರನತಿಚತುರಕಲಾಪರಿಪೂರ್ನಂ
ಸದಮಲಚರಿತಂ ಪ್ರಭುರಾಜಂ ಸಂ
ಮದದಿಂ ರಚಿಸಿದ ಜಯನೃಪಕಾವ್ಯದೊ
ಳೊದವಿ ಮನೋಹರಮಾದುದು ಪದಿನಾಱನೆಯ ಮಿಸುಪಸಂಧಿ ॥ ೪೩ ॥
ಅಂತು ಸಂಧಿ ೧೬ಕ್ಕಂ ಪದನು ೧೦೩೩ಕ್ಕಂ ಮಂಗಲಮಹಾ ಶ್ರೀ

ವಿಷಯ: ಜಯನೃಪನ ಚರಿತ್ರೆ.

ವಿಶೇಷ: ಶಕಟರೇಫದ ಬಳಕೆಯಿದೆ. ಅಕ್ಷರ ಸುಂದರ ಮತ್ತು ಸ್ಫುಟ.

545

ಕೆ. ೨೯೭	ಜಯನೃಪ ಕಾವ್ಯ	ಪರಿವರ್ಧಿನಿ ಷಟ್ಪದಿ
೧೩.೩"×೨.೧"	ಶನೆಯ ಮಂಗರಸ	೧೫೦೮
೧–೫೨ ಪತ್ರ	೯ ಪಂಕ್ತಿ	೬೨ ಅಕ್ಷರ

ಆದಿ: ಶ್ರೀಮತ್ಸೋಮಾನ್ವಯ ಕುಲತಿಲಕಂ
ಸೋಮಪ್ರಭಸುತ ವಿಕ್ರಮಗೌರವ
ನಾಮನವನಿಯಂ ಪರಿಪಾಲಿಸಿ ಪಡೆದಂ ನಿರ್ವಾಣವನೂ ||

ಪದ|| ....ಗಣ ಭಾಷಿಸ
ದಾಮೃತ ವಿಲಸತ್ಫಲ ವಿತರಣಗುಣ
ರಾಮಂ ವಿಮಲಾನಂದಕರಂ ವಿಮಲಚ್ಛಾಯಾಯೋಗಂ
ಕಾಮ ಪ್ರಸರಾಪಹರಂ ವರರ
ವ್ಯಾಮರ ಭೂರುಹವೆನೆ ಚೆಲ್ವಂದಳೆ
ದಾ ಮಹಿತಾಧೀಶ್ವರನೆಮಗೀಗಭಿಮತ ಸಿದ್ಧಿಯನೂ || ೧ ||

ಅಂತ್ಯ: ಈ ಪರಿಯಿಂ ಸದ್ಧರ್ಮಾಧರ್ಮನಿ
ರೂಪಣಮಂ ತಿಳಿವಂದದಿ ಸುವನ
ಶ್ಚಾಪಮದಾಪಹರಣನಭಿನವತೀರ್ಥಂಕರನೆಂದೆನಿಪ
ತಾಪಸನೊ.... ...... ಚನ ಸುಧಾ
ಕೂಪಾರದೊಳಿರದಾಳಿದರಾ ಪೃ
ಥ್ವೀಪಾಲೋತ್ತಂಸನುಮಾ ಸಭೆಯ ಜನರು ಸಂತೋಷದೊಳೂ || ೨೬ ||
ಮೊದಲಾ ಮುನಿಪತಿಯುಪಶಾಂತತ್ವಕೆ
ಪದಪಿಂದಂ ತಂತಂಮಯ ವೈರಂ ದೊ
ರೆದಧೀರ.......... ....

ವಿಷಯ: ಜಯನೃಪನ ಚರಿತ್ರೆ.

ವಿಶೇಷ: ಪ್ರತಿ ಅಸಮಗ್ರ. ೧೧ನೆಯ ಸಂಧಿ ೨೬ನೆಯ ಪದ್ಯದವರೆಗಿದೆ.

546

ಕೆ. ಬಿ. ೧೪೮	**ಜಯಸಿಂಹರಾಜ ಚರಿತ್ರೆ**	ನಾಟಕ
೭.೬"×೬.೩"	ನಂಜನಗೂಡು ಸುಬ್ಬಾಶಾಸ್ತ್ರಿ	೧೯ನೆಯ ಶತಮಾನ
೧—೯೭ ಪತ್ರ	೧೬ ಪಂಕ್ತಿ	[illegible] ಅಕ್ಷರ

ಆದಿ: ಜಯಸಿಂಹರಾಜ ಚರಿತ್ರೆ—ಸೂತ್ರಧಾರ ॥

ಕಂ॥ ಆವಳ ಪಾತಿವ್ರತ್ಯದಿ
ರಾವಣ ಗರ್ವಮದು ಭಗ್ನಮಾದುದೋರಣದೊಳ್
ಆ ವನಿತಾಮಣಿ ಸೀತೆಯು
ಭಾವಿಸಿ ಮಂಗಳವ ಮಾಳ್ಕೆ ಚಾಮೇಂದ್ರನಿಗೆ ॥

ರಾಗ॥ ತೋಡಿ
ಶೈಲರಾಜ ಬಾಲೆ । ಸುಶೀಲೆ ॥ ಪ ॥
ಕಾಲ ಕಾಲ ಜಾಯೆ । ಪಾಲಯ ಮುನಿಗೇಯೆ ॥ ಅ ॥

ಅಂತ್ಯ: ಆವಳಿಗೂ ಆವಳ ಕಡೆಯುವರಿಗೂ ದೇವರೇ ಶಿಕ್ಷೆಯನ್ನು ಮಾಡಿದ. ಎಲೈ ಆರ್ಯಮಿತ್ರನೆ ಈಗ ನಮಗೆ ಉಂಟಾಗಿರುವ ಸಂತೋಷಾರ್ಥವಾಗಿ ದೇವ ಸ್ಥಾನಗಳಲ್ಲಿ ಉತ್ಸವಾದಿಗಳು ನಡೆಯಲಿ (ಎಂದು ಎಲ್ಲರೂ ಹೋಗುವರು)

ಪಂಚಮಾಂಕಂ ಸಂಪೂರ್ಣಂ.

ಈ ಗ್ರಂಥವು ನಂಜನಗೂಡು ಸುಬ್ಬಾಶಾಸ್ತ್ರಿಗಳಿಂದ ವಿರಚಿತವಾದದ್ದು.

ವಿಷಯ: ಜಯಸಿಂಹರಾಜನ ಕಥೆ.

ವಿಶೇಷ: ಈ ಗ್ರಂಥವು ಷೇಕ್ಸ್‌ಪಿಯರ್‌ನ ಸಿಂಬಲಿನ್ ನಾಟಕದ ಅನುವಾದ.

547

ಕೆ. ೧೭೫/೯	**ಜಯಸ್ತೋತ್ರ–ಬಿರುದಾವಳಿ ವಿವರ**	ಗದ್ಯ, ಪದ್ಯ
೧೦.೫"×೩.೪"	?	?
೧—೫ ಪತ್ರ	೧೧ ಪಂಕ್ತಿ	೪೯ ಅಕ್ಷರ

೧. **ಆದಿ:** (ಪತ್ರಸಂಖ್ಯಾ ೧). ಶ್ರೀ ಗುರುಬ ವಲಿಂಗಾಯ ನಮಃ ॥ ಜಯ ಸ್ತೋತ್ರಾ ॥ ಶ್ರೀ ಗುರುವೆ ಮಹಾಗುರುವೆ ಶಾಂತಿಕಳಾ ಗುರುವೆ ಶಿವಾತ್ಮ ವಿದ್ಯಾಗುರುವೆ x x x ಗುರುವೇ ಶಿವಾಥವಾ ॥ ಶ್ರೀ ॥ ಗುರುವೇ ಜ್ಞಾನದಾನ ಸಂಪತ್ತಿಯಿಂದುಪದೇಶಿಸುವ ಗುರುವೆ । ಮಹಾಗುರುವೆ । ಪೂಜ್ಯನಾದ ಗುರುವೇ । x x x

ಅಂತ್ಯ : ಶಿವಾದವಾ । ಚಿಚ್ಛಕ್ತಿವಲ್ಲಭನಾದ ಪರಮಶಿವಸ್ವರೂಪನಾದ ಗುರುವೆ । ಜಯ । ಸರ್ವೋತ್ಕೃಷ್ಟನಾಗೂ ॥ ಶ್ರೀ ॥ ರುಧಿರೋದ್ಗಾರಿ ಸಂವತ್ಸರದ ವೈಶಾಖ ಬ ೧೧ಯೂ ಆದಿತ್ಯವಾರ ಅಮ್ರುತ ಘಳಿಗೆಯಲ್ಲಿ ರೇವಣಾರಾಧ್ಯರ ಸ್ಥಳದ ಸಾಂಪ್ರದಾಯಕರಾದ ಕಲ್ಲುಕುಣಿಯ ಗುರು ಬಸವಪ್ಪದ್ಯಾವರವರ ಸುಪುತ್ರರಾದಂಥಾ ಚೆಂನ್ನ ವೀರದ್ಯಾವರವರ ಸಹೋಧರರಾದಂಥಾ ಮತೋದ್ಧಾರಕರಾಧಂಥಾ ನಿಜಗುಣದ್ಯಾವರವರ ಪಸ್ತುಕಕ್ಕೆ ॥ ॥ ಸತ್ಯಾಗಾಲದ ಸ್ಥಳದ ವಡೇರಪಾಳ್ಯದ ಸಿದ್ದನಂಜೈಯ್ಯನವರ ಕುಮಾರ ಶಿವಲಿಂಗೈಯ್ಯ ಸೇರ್ಪಡಿ ಮಾಡಿದ ಶಾಸ್ತ್ರಗಳ ವಿವರಾ ॥ ಪ್ರಥಮದಲ್ಲಿ ಅನುಭವ ಸೂತ್ರ ೧೦೧ ವಾಲೆ । ದ್ವಿತೀಯದಲ್ಲಿ ಮನೋವಿಜಯ ೨೧ ವಾಲೆ । ತೃತೀಯದಲ್ಲಿ ಕಾರಗಹಳ್ಳಿ ಶಾಂತೈಯನವರ ವಚನ ೧೪ ವಾಲೆ । ಚತುರ್ಥದಲ್ಲಿ ವೀರಶೈವ ದೀಕ್ಷಾವಿಧಾನ ೧೪ ವಾಲೆ । ಪಂಚಮದಲ್ಲಿ ಪರಮರಹಸ್ಯದ ಗ್ರಂಥ ೨೩ ವಾಲೆ । ಷಷ್ಟಮದಲ್ಲಿ ಸರ್ವಾದಿಕ್ರಿಯ್ಯ ವಾಲೆ । ಸಪ್ತಮದಲ್ಲಿ ಶಿವಪೂಜಾವಿಧಾನ ೬ ವಾಲೆ । ಅಷ್ಟಮದಲ್ಲಿ ಪ್ರಸಾದ ಮಹಾತ್ಮೆ ೬ ವಾಲೆ । ಉಭೆಯಂ ಪುಸ್ತಕ ೧ಕ್ಕೆ ಸೇರಿದ ಶಾಸ್ತ್ರ ೮ಕ್ಕೆ ವಾಲೆ ೧೯೩ಕ್ಕೆ ಯೀ ಯೆಂಟ್ಟು ಶಾಸ್ತ್ರ ಉ ಸಮಾಪ್ತಿ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ॥

೨. **ಆದಿ, ಅಂತ್ಯ :** (ಪತ್ರಸಂಖ್ಯಾ ೨) ಶ್ರೀ ಗುರುವೆಗತ್ತಿ ॥ ಬಿರದವಳಿ ವಿವರ ॥ ಮೂಲಪಂಚಾಕ್ಷರಿಯ ಲಕ್ಷಣ ನಿರ್ಗುಣಗ್ನಾಪ್ತಿ ಸ್ಥೂಲಶಿವಬಂಭಿವದು ಶಾಸ್ತ್ರದಿಂ ತಿಳಿಯಲನುಕೂಲವಿಲ್ಲೆಂದು x x x ಅನಾಮಯ ಅಪ್ರತಿಯೆತೀಶ್ವರೂಪಮಪ ॥ ಶ್ರೀ ಶ್ರೀ ॥ ಶ್ರೀಮದಮಂದಾನಂದ ಕಂದಳಿತನಂದ ಮೌನಶತಾನಂದ ಪುರಂಧರಾದಿ ಭೃಂದಾರಕ ಭೃಂದನಿರಸ್ಸಂದೋಹ ಕುಂದಮಂಥಾರ ಮಲ್ಲಿಕಾಸಿಷ್ಯಂದ ಮರಂದ ಮಂದಾಕಿಸೀ ನಿಮ್ಮಲೀಕೃತ ಪದಾರವಿಂದ x x x ಸಾಕ್ಷಾತ್ಪರಂಜ್ಯೋತಿಶ್ವರೂಪರಾದ ॥ ಶ್ರೀ ॥ ಶ್ರೀಮದಖಂಡ ಬ್ರಹಾಂಡ ಬಾಂಡಕಾಂಡ ಪ್ರಚಂಡಸರ್ಗಸ್ತಿತ್ಯಂತ್ತ ಹಿಮಚೂತ ಬ್ರುಂದಾರ ಬ್ರುಂದೇಂದ್ರ ಮುಸಿಕನಕಸನಂದ ಸನತ್ಕುಮಾರ ಯಕ್ಷ ಕಿಂನ್ನರ ಕಿಂಪುರುಷ ನರ ಗರುಡ ರಾಕ್ಷಸ ಪ್ರಮಥಗಣ ಪೂಜಿತ ಪಾದಾರವಿಂದಾಷ್ಟಮೂರ್ತಿ ಧ್ಯಾನ ಧಾರಣ ಸಮಾದ್ಯಷ್ಟಾಂಗಯೋಗ ನಿರತ x x x ಕಲಿಯುಗ ಪ್ರಮಾಣು ೪೩೨೦೦೦ ವರುಷಕ್ಕೆ ಕಲ್ಯಗತಾಬ್ದ॥ ೪೮೪೪ಕ್ಕೆ ಶಾಲಿವಾಹನ ಶಕಾಬ್ದ॥ ೧೬೬೪ಕ್ಕೆ ಸಂದ ವರ್ತಮಾನವಾದ ರುಧಿರೋದ್ಗಾರಿನಾಮ ಸಂವತ್ಸರದ ಫಾಲ್ಗುಣ ಬ ೧೩ ಯು ಗುರುವಾರ ಅಮೃತಗಳಿಗೆಯಲ್ಲಿ ಚತುರಾಚಾರ್ಯರಲ್ಲಿ ರೇವಣಾರಾಧ್ಯರ

ಸಾಂಪ್ರದಾಯಕರಾದ ಕಲ್ಲುಕುಣಿಯ ಗುರುಬಸವಪ್ಪದ್ಯಾವರವರ ಸುಪತ್ನಿಯರಾದಂತ ಬಸುವಾಜಂಮನವರ ಸುಪುತ್ರರಾಥಂತ್ತ ಚೆಂನುವೀರದ್ಯಾವರವರಸುಜರಾದಂತ್ತ ಮತೋದ್ಧಾರಕರಾಥಂತ್ತ ನಿಜಗುಣದ್ಯಾವರವರ ಪಾದಕ್ಕೆ ಸತ್ಯಗಾಲದ ಸ್ಥಳದ ವಡೇರಪಾಳ್ಯದ ಸಿದ್ಧನಂಜೈಯ್ಯನವರ ಕುಮಾರ ಶಿವಲ್ಯಿಂಗಯ್ಯ ತನ್ನ ಹಸ್ತಾಕ್ಷರದಲ್ಲಿ ಬರದು ಸೇರ್ಪಡಿಮಾಡಿ ಒಪ್ಪಿಸ್ತ ಪಸ್ತುಕಾ ಒಂದಕ್ಕೆ ಶೇರಿಯಿರುವ ಶಾಸ್ತ್ರವಾಲೆಗಳ ವಿವರಾ ॥ ಪ್ರತಮದಲ್ಲಿ ಮಗ್ಗೆಮಾಯಿದೇವಾಚಾರ್ಯರು ನಿರೂಪಿಸಿದ ಅನುಭವ ಸೂತ್ರ ವಾಲೆ ೧೦೧ ದ್ವಿತೀಯದಲ್ಲಿ ಗುರುಬಸವೇಶ್ವರ ದೇವರು ನಿರೂಪಿಸಿದ ಮನೋವಿಜಯವಾಲೆ ೨೧ ತ್ರತೀಯದಲ್ಲಿ ಕಾರಗಹಳ್ಳಿ ಶಾಂತೈಯ್ಯ (ಸಂಖ್ಯಾರಹಿತ ಎರಡನೆಯ ಪತ್ರದಲ್ಲಿ) ನವರು ನಿರೂಪಿಸಿದ ವಚನವಾಲೆ ೧೪ ಚತುರ್ತ್ಥದಲ್ಲಿ ಬೆಂಗಳೂರು ಮುದ್ದುವೀರಸ್ವಾಮಿಗಳು ನಿರೂಪಿಸಿದ ವಚನವಾಲೆ ೮ ಪಂಚಮದಲ್ಲಿ ಶಂಕರಾಚಾರ್ಯರು ನಿರೂಪಿಸಿದ ವಾಕ್ಯಸುಧೀಯೆಂಬ ಗ್ರಂಥ ವಾಲೆ ೧೦ ಷಷ್ಟಮದಲ್ಲಿ ವೀರಶೈವ ಧೀಕ್ಷಾವಿಧಾನ ವಾಲೆ ೧೪ ಸಪ್ತಮದಲ್ಲಿ ಪರಮುರಹಸ್ಯ ಗ್ರಂಥ ವ್ಯಾಖ್ಯಾನ ಸಹಾ ವಾಲೆ ೨೩ ಅಷ್ಟಮದಲ್ಲಿ ವೀರಾಗಮದ ಸಮಾಧಿಕ್ರಿಯ್ಯ ವಾಲೆ ೮ ನಉಮದಲ್ಲಿ ಶಿವಪೂಜಾ ವಿಧಾನ ವಾಲೆ ೬ ದಶಮದಲ್ಲಿ ಪ್ರಸಾದಮಹಾತ್ಮೆ ವಾಲೆ ೬ ಉಭಯಂ ಪಸ್ತು ೧ಕ್ಕೆ ಸೇರೀಯಿರುವ ಶಾಸ್ತ್ರ ೧೦ಕ್ಕೆ ವಾಲೆ ೨೧೧ಕ್ಕೆ ಯೀ ಹತ್ತು ಶಾಸ್ತ್ರಉ ಸಮಾಪ್ತಿ ಜಯಮಂಗಳ ಮಹಾ ಶ್ರೀ ಶ್ರೀ.

ವಿಷಯ: ಶ್ರೀಗುರುಮಹಿಮಾಸ್ತುತಿ ಮತ್ತು ಗುರುಹಿರಿಯರಿಗೆ ಬರೆಯಬೇಕಾದ ಒಕ್ಕಣಿಕೆಯ ರೀತಿ.

ವಿಶೇಷ: ಒಟ್ಟು ಆದಿಯಿಂದ ೯ ಪತ್ರಗಳಲ್ಲಿ ಮೇಲ್ಕಂಡ ವಿಷಯಗಳಡಕವಾಗಿವೆ. ಇವುಗಳಲ್ಲಿ ಎರಡು ಪತ್ರಗಳು ಸಂಖ್ಯಾರಹಿತಗಳಾಗಿವೆ. ಸುಸ್ಥಿತಿ. ಶಕಟ ರೇಫಾದಿಗಳಿಲ್ಲ.

ಇದರೊಂದಿಗೆ ಈ ಕಟ್ಟಿನಲ್ಲಿ ಅನುಭವಸೂತ್ರಂ (ಸಟೀಕು)—ಪರಮುರಹಸ್ಯಂ (ಸಟೀಕು)–ಮನೋವಿಜಯ ಕಾವ್ಯ–ಪರಮಾರ್ಥ ಗೀತೆ–ಶಿವಪೂಜಾವಿಧಾನ ಈ ಗ್ರಂಥ ಈರೇಳು ದೀಕ್ಷೆಪ್ರಶಸ್ತಿಗಳೂ ಇರುತ್ತವೆ. ಅಲ್ಲದೆ ಕೊನೆಯಲ್ಲಿರುವ ೧ ಪತ್ರದಲ್ಲಿ ರಸಸಿಂಧೂರ ಕ್ರಮದ ಗದ್ಯ ಚುಟಕಾ ವಿವರವೂ ಇದೆ.

ಈ ಕಟ್ಟಿನಲ್ಲಿರುವ ವಿವರದ ಓಲೆಗರಿಯಲ್ಲಿ ನಮೂದಾಗಿರುವ—

1. ಕಾರಗಹಳ್ಳಿ ಶಾಂತಯ್ಯನವರ ವಚನ.

2. ಬೆಂಗಳೂರು ಮುದ್ದವೀರಸ್ವಾಮಿಗಳ ವಚನ
3. ಶಂಕರಾಚಾರ್ಯರ ವಾಕ್ಯಸುಧೀ.
4. ವೀರಾಗಮದ ಸಮಾಧಿಕ್ರಿಯಾ.
5. ಪ್ರಸಾದ ಮಹಾತ್ಮ್ಯ.

ಈ ಗ್ರಂಥಗಳು ಮಾತ್ರ ಈ ಕಟ್ಟಿನಲ್ಲಿಲ್ಲವಾಗಿವೆ.

ಅಲ್ಲದೆ— 1. ಮನೋವಿಜಯ.
2. ಪರಮಾರ್ಥ ಗೀತೆ.
3. ಈರೇಳು ದೀಕ್ಷಾಪ್ರಶಸ್ತಿ – ಜಯಸ್ತೋತ್ರ – ಬಿರುದಾವಳಿ ವಿವರ, ರಸಸಿಂಧೂರಕ್ರಮ ಇವುಗಳು ಈ ಕಟ್ಟಿನಲ್ಲಿಯೇ ಇದ್ದರೂ ಇವುಗಳನ್ನು ಮೇಲ್ಕಂಡ ಕಟ್ಟಿನೊಳಗಿರುವ ಗರಿಯಲ್ಲಿ ನಮೂದಿಸಿಲ್ಲವೆಂಬುದೂ ಗಮನಾರ್ಹವಾಗಿದೆ.

548

ಕೆ. ಬಿ. ೧೧೨	ಜಲಂಧರನ ಕಾಳಗ	ಯಕ್ಷಗಾನ
೭.೮″×೬.೩″	ಲಿಂಗರಾಜ	೧೮೫೦
೧—೨೯ ಪತ್ರ	೧೩ ಪಂಕ್ತಿ	೨೫ ಅಕ್ಷರ

ಆದಿ: ಜಲಂಧರ ಚಿತ್ರಾ ಯಕ್ಷಗಾನ ||

ಕಂದ|| ಶ್ರೀ ಶರ್ವಣೀ ನವರತ
ಕೌಶಲ ಸರ್ವಜ್ಞ ಸಾಕ್ಷಿ ಹೃದಯ ಸರೋಜಂ
ದಾಶಾರ್ಹವಿಶಿಖನುಗ್ರಾ
ವೇಶಂ ಕೊಡಲೆಮಗೆ ಸವುಖ್ಯಮಂ ವೀರೇಶಂ || ೧ ||

x x x x

ಕಂದ|| ಸುರಚಿರ ಪದ್ಮಪುರಾಣದೆ
ಮೆರೆಯುವ ಸುರಗಣ ವಿರೋಧಕೃದ್ಜಲಂಧರವರಕಂ
ದರವಂನರಿ ಯಿಂತರಿದಿಹ
ಹರನ ವಿಲಸವನು ಯಕ್ಷಗಾನದೊಳು ಪೇಳ್ವೆಂ || ೧೦ ||

ಅಂತ್ಯ: ಕಂದ|| ಮರೆಯುತ ವೃಂದಾದುಖ್ಖವ
ವರಧಾತ್ರಿ ತುಲಸಿಯರನು ಜೆರೆಯುತಲಾಗಂ

ಪರಮಾಹ್ಲಾದದಿ ಶೌರಿಯು
ತೆರಳುವ ವೈಕುಂಠದಲ್ಲಿ ಸುಖದಿಂದಿರ್ದನು ॥ ೩೪೬ ॥

X X X X

ಕಂದ॥ ಹುತವಾಹ ವಸು ಹಯ ವಿಧು ಪರಿ ।
ಮಿತ ಶಾಲಿವಾಹನ ಶಕದ ವತ್ಸರದೊಳು ಸಂ
ಗತ ಕಾರ್ತಿಕ ಮಾಸದೊಳ್
ಕೃತಿಯಂ ಪೇಳಿದನು ಶೂರ ಲಿಂಗನರೇಂದ್ರಂ ॥ ೩೫೧ ॥ಶ್ರೀ

ವಿಷಯ: ಜಲಂಧರನ ಕಾಳಗದ ಕಥೆ.

ವಿಶೇಷ: ಸಮಗ್ರ. ಅಲ್ಲಲ್ಲಿ ಹುಳು ತಿಂದಿದೆಯಾದರೂ ಗ್ರಂಥ ಲೋಪವಿಲ್ಲ.

549

ಕೆ. ಬಿ. ೪೦೪	ಜಲಂಧರನ ಕಾಳಗ	ಯಕ್ಷಗಾನ
೮.೨"X೬.೩"	ಲಿಂಗರಾಜ	೧೮೫೦
೧ ೩೩ ಪತ್ರ	೧೭ ಪಂಕ್ತಿ	೧೬ ಅಕ್ಷರ

ಆದಿ: ಶ್ರೀ X X X ಭಾಗವತದೊಳಗಣ ಜಲಂಧರನ ಕಾಳಗ ಬರೆಯುವ
ದಕ್ಕೆ ಶುಭಮಸ್ತು
ನಾಂದಿವೃತ್ತ॥ ಶ್ರೀ ಶರ್ವಾಣೀ ನವರತ
ಕೌಂಶಲ ಸರ್ವಜ್ಞ ಸಾಕ್ಷಿ ಹೃದಯ ಸರೋಜಂ
ದಾಶರ್ವವಿಶಿಕನೂಗ್ರಾ
ವೇಷಂ ಕುಡಲಿಮಗೆ ಸೌಖ್ಯಮಂ ಮೀರೇಷಂ ॥ ೧ ॥

X X X X

ಕಂದ ॥ ಸುರುಚಿರ ಪದ್ಮಪುರಾಣದೆ
ಮೆರೆಯುವ ಸುರಗಣ ವಿರೋಧಕೃದ್ಜಲಂಧರ ವರಕಂ
ದರವಂನರಿಯಿಂತರಿದಿಹ
ಹರನ ವಿಲಾಸವನು ಯಕ್ಷಗಾನದಿ ಪೇಳ್ವೆಂ ॥ ೧೦ ॥

ಅಂತ್ಯ: ಕಂದ ॥ ಮರೆಯುತ ವೃಂದಾದುಃಖವ
ವರಧಾತ್ರಿ ತುಲಶಿಯರನು ಬೆರೆಯುತಲಾಗಂ

ಪರಮಹ್ಲಾದದಿ ಶೌರಿಯು
ತೆರಳುತ ವೈಕುಂಠದಲ್ಲಿ ಸುಖದಿಂದಿರ್ದಂ ॥ ೩೪೩ ॥

X X X X

ಕಂದ ॥ ಹುತವಹ ವಸು ಹಯ ವಿಧು ಪರಿ
ಮಿತ ಶಾಲೀವಾಹ ಶಕದ ವತ್ಸರದೊಳು ಸಂ
ಗತ ಕಾರ್ತಿಕ ಮಾಸದೊಳ್
ಕೃತಿಯಂ ಪೇಳ್ದನು ಸೂರ ಲಿಂಗರಾಜ ಮಹೀಂದ್ರಂ ॥ ೩೪೪ ॥

ಜಲಂಧರನ ಕಾಳಗ ಸಂಪೂರ್ಣ ಶ್ರೀ.

ವಿಷಯ : ಜಲಂಧರನ ಕಾಳಗದ ಕಥೆ.

ವಿಶೇಷ : ಸಮಗ್ರ. ಸ್ವಲ್ಪ ಮೋಡಿ ಬರಹ. ಪತ್ರಗಳ ಕ್ರಮಸಂಖ್ಯೆಯಿಲ್ಲ. ಎಣಿಕೆ ಮಾಡಿ ಕ್ರಮಸಂಖ್ಯೆಯನ್ನು ಹಾಕಿದೆ. ಗ್ರಂಥದ ಕೊನೆಯಲ್ಲಿ ಒಂದು ಹಾಡು ಇದೆ.

550

ಕೆ. ಬಿ. ೪೯೧	**ಜಲಂಧರನ ಕಾಳಗ**	ಯಕ್ಷಗಾನ
೮"×೬.೩"	ಲಿಂಗರಾಜ	೧೮೫೦
೧—೩೬ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಜಲಂಧರ ಕಾಳಗ

ನಾಂದಿಕಂದಾ ॥ ಶ್ರೀ ಶರ್ವಾಣೀನವರತ
ಕೌಶಲ ಸರ್ವಸ್ವಸಾಕ್ಷಿ ಹೃದಯ ಸರೋಜಂ
ದಾಶಾರ್ಹ ವಿಶಿಖನುಗ್ರಾ
ವೇಶಂ ಕುಡಲೆಮಗೆ ಸೌಖ್ಯವಂ ವೀರೇಶಂ ॥ ೧ ॥

X X X X

ಕಂದಾ॥ ಸುರುಚಿರ ಪದ್ಮಪುರಾಣದಿ
ಮೆರೆಯುವ ಸುರಗುಣ ವಿರೋಧಕೃಜ್ಜಲಂಧರವರಕಂ
ಧರವಂ ನರಿಯಿಂತರಿದಿಹ
ಹರನ ವಿಲಾಸವನು ಯಕ್ಷಗಾನದಿ ಪೇಳ್ವೆಂ ॥ ೧೦ ॥

ಅಂತ್ಯ : ವಾರ್ಧಕಾ॥ ಧರೆಯೊಳೀ ಕಾರ್ತೀಕಮಾಸದೊಳ್ ಶ್ರೀವರನ
ನಿರಿಸಿ ತುಲಸಿಯ ಮೂಲದಲ್ಲಿ ಪೂಜಿಸಲತುಳ
ತರ ಪುಂಣ್ಯಮಹುದೆಂನುತಂ ತಂನ ಭವನದಿ ತುಳಸಿಯಂನು ಪರಿಪರಿಯಿಂದಲೀ
ಪರಿ ವರ್ತಿಸುತ್ತಿರಲ್ಕವನ ಮನೆ ಪರಿಶುದ್ಧವಿ
ರರೆ ಯಮಭಟರಲ್ಲಿ ಸುಳಿಯರೆಂದೆಂನುತಂ
ವರಕೀರ್ತಿವಶವರ್ತಿ ಪೃಥುಚಕ್ರವರ್ತಿಗಾ ನಾರದಂ ನುಡಿಯುತಿರ್ದ್ದಂ ॥೩೪೭॥

X X X X

ಪುಂಗವತುಂಗ ತುರಂಗಮುಗೆ
ಸಂಗತ ಗಂಗತರಂಗನಿಗೆ
ಲಿಂಗನೃಪಾಶಯ ಪಂಜರಕೀರಗೆ
ಮಂಗಳಗುಣ ಮಹಲಿಂಗನಿಗೆ ॥ ೩೫೦ ॥

ಕಂದಾ ॥ ಹುತವಹ ವಸ್ಯಹಯ ವಿಧು ಪರಿ
ಮಿತ ಶಾಲೀವಾಹಶಕದ ವತ್ಸರದೊಳು ಸಂ
ಗತ ಕಾರ್ತೀಕದ ಮಾಸದೊಳೀ
ಕೃತಿಯಂ ಪೇಳಿದನು ಶೂರಲಿಂಗಮಹೀಂದ್ರಂ ॥ ೩೫ ॥ ಶ್ರೀ ॥

ಜಲಂಧರ ಕಾಳಗ ಸಂಪೂರ್ಣಂ ॥

ವಿಷಯ : ಪದ್ಮಪುರಾಣದಲ್ಲಿರುವ ಜಲಂಧರನ ಕಾಳಗದ ಕಥೆ.

ವಿಶೇಷ : ಸುದೃಢಪ್ರತಿ, ವಿರಳಾಕ್ಷರ, ಕೊನೆಯಲ್ಲಿ ಹತ್ತು ಶುದ್ಧಪತ್ರಗಳಿವೆ.

551

ಕೆ. ಬಿ. ೪೯೯	ಜಲಂಧರನ ಕಾಳಗ	ಯಕ್ಷಗಾನ
೬.೪"×೩.೮"	ಲಿಂಗರಾಜ	೧೮೫೦
೧—೭೯ ಪತ್ರ	೧೨ ಪಂಕ್ತಿ	೧೨ ಅಕ್ಷರ

ಆದಿ : ಜಲಂಧರನ ಕಾಳಗ ಪ್ರಾರಂಭ

ನಾಂದಿ ಕಂದ ॥ ಶ್ರೀ ಶರ್ವಾಣೀನವರತ
ಕೌಶಲ ಸರ್ವಸ್ವಸಾಕ್ಷಿಹೃದಯ ಸರೋಜಂ
ದಾಶಾರ್ಹವಿಶಿಖನುಗ್ರಾ
ವೇಷಂ ಕುಡಲೆಮಗೆ ಸೌಖ್ಯಮಂ ವೀರೇಶಂ ॥ ೧ ॥

ರಾಗಾ | ನಾಟೀ | ಝುಂಪೆ |

ಜಯಜಯ ಶ್ರೀ ರುದ್ರ | ಭಕ್ತಾವನೋನಿದ್ರ
ಜಯನಿರ್ಜಿತಕ್ಷುದ್ರ | ಕರುಣಾ ಸಮುದ್ರ |

ಅಂತ್ಯ : ವಾರ್ಧಿಕ ||

ಧರೆಯೊಳೀ ಕಾರ್ತೀಕ ಮಾಸದೊಳ್ ಶ್ರೀವರನ
ನಿಲಿಸಿ ತುಲಸೀಮೂಲದಲ್ಲಿ ಪೂಜಿಸಲತುಳ
ಕರಪುಣ್ಯವೆಂನ್ನುತಂ ಯಾವನಾದರು ತಂನ ಭುವನದೊಳ್
ತುಲಸಿಯನ್ನು
ಪರಿವರ್ಧಿಸುತ್ತಿರಲ್ಕವನ ಮನೆ ಪರಿಶುದ್ಧ
ವಿರಬೆ ಯಮಭಟರಲ್ಲಿ ಸುಳಿಯರೆಂದೆಂನುತಂ
ವರಕೀರ್ತಿವಶವರ್ತಿ ಪೃಥುಚಕ್ರವರ್ತಿಗಾ ನಾರದಂ
ನುಡಿವುತಿರ್ದಂ ||೩೫೦||

x x x x

ಕಂದ || ಹುತವಹ ವಸು ಹಯ ವಿಧುಪರಿ
ಮಿತ ಶಾಲೀವಾಹಶಕದ ವತ್ಸರದೊಳು ಸಂ
ಗತ ಕಾರ್ತೀಕಮಾಸದೊಳೀ
ಕೃತಿಯಂ ಪೇಳಿದನು ಶೂರಲಿಂಗಮಹೀಂದ್ರಂ ||೩೫೧||

—ಜಲಂಧರನ ಕಾಳಗ ಸಂಪೂರ್ಣಂ—

ವಿಷಯ : ಜಲಂಧರನ ಕಾಳಗದ ಕಥೆ.

ವಿಶೇಷ : ಕೃತಿ ಸಮಗ್ರವಾಗಿದೆ.

552

ಕೆ. ೨೮೩/೩	ಜಲಶಿಲ್ಪಿ	ಕಂದ, ಟೀಕು
೧೫" × ೧.೫"	?	?
೧೫–೧೭ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಸ್ಥಾವರ ಜಂಗಮವೆಂಬ
ಜೀವಚಯರೆಂತು ನೋಪ್ಪರ್ಪ ಜಮ್ಮನಯೆ

ಜೀವವೆಂದುದಾಗಿ ಕಾರ್ಗಳ
ಕೋವಿದಮಿದನೇ ಸಿಲ್ಪಿಯ ಚ ಪೇಳ ಚಾಳಿತ್ತವನಮಂ ||

ಜಲಸಿಲ್ಪಿ|| ಸ್ತಾವರ ಜಂಗಾಪುವೆ ನಾ
ನಾವರ್ನಂಗಳಿ ಜೀವನಾಲೋಕಕ್ಕೆ ಉದುಕವೆ
ಜೀವನವಾದ ಕಾರಣ ಉದುಕ ಪುಟ್ಟುವ
ಸ್ತಾವರವನೂ ಶ್ಯಾಸ್ತ್ರಮುಖದಲ್ಲಿ ಹೇಳುವನೂ || ೧ ||

ಅಂತ್ಯ : ಕಂದಾ|| ಕದಳಿಯ ಬಸ್ಮವನೊಳುದಿನ
ಮುರಿಯೀತಟು ತದದೊಳು ಕಾದವುಳಿಯ ಹದನನರಿದೂ
ನೀರುಂಣಿಸೆ ಆ ವುಳಿಯು ವ
ಜ್ರದಂತ್ತೆ ಬಲ್ಪಂಗುವವು ||

ಟೀಕೂ|| ಬೆಳಿಯ ಬೂದಿಯಂನ | ಮಜ್ಜಿಗೆಯಲ್ಲಿ ಕದಡಿಯೊಳು ದಿನ ವುರಲಿಟ್ಟೂ ಚೆಂನ್ನಾಗಿ ವುಳಿಯ ಕಾಸಿ, ಕಾದುಳಿಯಂನ ಹದನನಳಿದೂ ನೀರುಂಣಿಸೇ ಟ್ಟವ ಮಾಡಿಸಿ ಆಳಿಯು ವಜ್ರದಂತ್ತೆ ಭಲ್ಲಾಗುವವು.

ಜಲಸಿಲ್ಪಿ ಸಂಪೂರ್ಣ ಮಂಗಳ ಮಹಾಶ್ರೀ

ವಿಷಯ : ಜಲಶಿಲ್ಪ ವಿಚಾರ.

ವಿಶೇಷ : ಇದೇ ಕಟ್ಟನಲ್ಲಿ ಮನೆಕಟ್ಟುವ ಲಕ್ಷಣ, ನಕ್ಷತ್ರ ಚೂಡಾಮಣಿ, ವಿಭೂತಿ ಮಂತ್ರ, ನರಪಿಂಗಲಿ, ರಾಮಧ್ಯಾನ ಎಂಬ ಇತರ ಕೃತಿಗಳಿವೆ.

553

ಕೆ.ಎ ೨೯೨/೨	**ಜಾತಕಚಂದ್ರಿಕಾ, ಕನ್ನಡ ವ್ಯಾಖ್ಯಾನ**	**ಶ್ಲೋಕ, ಟೀಕು**
೧೩"×೮"	?	?
೨೪–೩೯ ಪತ್ರ	**೨೦ ಪಂಕ್ತಿ**	**೨೨ ಅಕ್ಷರ**

ಆದಿ : ಜಾತಕ ಚಂದ್ರಿಕಾವ್ಯಾಖ್ಯಾನ ಬರೆಯುವುದಕ್ಕೆ ನಿರ್ವಿಘ್ನೆಮಸ್ತು||
ಕರುಣಿಸು ವೃಷಭಾರೂಡನೆ
ಕರುಣಿಸು ಖಗಪತಿಯಸುತನ ಗೆಲಿದಾಧೀಶನೆ
ಕರುಣಿಸು ನಿಜಪದವೀವನೆ
ಕರುಣಿಸು ಕವಿ ಹೇರಧೀಶ ಅಧೀಶ್ವರನೆ ||೧||

ಸಿದ್ಧಾಂತವೋಪನಿಷದಂ ಸಿದ್ಧಾಂತಂ ಪರಮೇಷ್ಟಿನಃ।
ಶೋಣಾಧರಮಹಾಕಿಂಚಿತ್ ವೀಣಾಧರಮುಪಾಸ್ಮಹೆ ॥

X X X X

ಟೀಕು॥ ವೀಣಾಧರಂ ವೀಣೆಯ ಹಿಡುಯಿರುವಂತ್ಥಾ ಪರಮೇಷ್ಠಿನಃ ಬ್ರಹ್ಮ ದೇವರಿಗೆ ಸಿದ್ಧಾಂತಂ ರಾಣಿವಾಸವಾದಂತ್ಥಾ ಉಪನಿಷದಂ–ಉಪನಿಷ ದರ್ತ್ಥಗಳಿಂದ ವೋದಲ್ಪಟ್ಟಂತ್ಥಾ ಸಿದ್ಧಾಂತಂ ನಿರ್ನ್ನಯವಾದಂತಾ ಕಿಂಚಿತ್ ವಂದಾನೊಂದು। ಮಹಃ ತೇಜಸ್ಸನ್ನು। ವುಪಾಸ್ಮಹೆ। ವುಪ್ಪ ವಾಸನೆಯು ಮಾಡುತ್ತಾ ಯಿಧೇವೆ। ಶೋಣಧರಂ ವೀಣಾಧರ ಶಬ್ದಗಳಿಂದ್ದ ಆನಂದರಸ ಪಸರಿಸಿದ ಪ್ರಸನ್ನಮುಖ ಯಂತಲು। ಸಿದ್ಧಾಂತ ಶಬ್ಧದಿಂದ ಪರಬ್ರಹ್ಮಯಂತ್ಯಂಬ ತಾತ್ಪರ್ಯ ವಾಗುತ್ತಾಯಿದ್ದೀತಾಗಿ ಪರಿಕರಾಲಂ ಕಾರವೆನಿಸೂದು ॥ ೧ ॥

ಅಂತ್ಯ: ಪಾಪಿನೋ ಯೇ ಗ್ರಹಾಸ್ತೇಷಾಂ ವುಚ್ಚತ್ವೇ ಸತಿಕಂ ಫಲಂ।
ಬಲವತ್ವೇ ಮಾರಕಾಣಾಂ ಯತ್ಫಲಂ ಲಭ್ಯತೇ ಹಿ ತತ್ ॥

ಟೀಕು॥ ಯೇಗ್ರಹಾಃ ಯಾವ ಗ್ರಹಂಗಳು ಪಾಪಿನಃ। ಮೂರು ಆರುಯಂಟು ಹನ್ನೊಂದನೇ ಸ್ಥಾನಗಳಿಗೆ ಅಧಿಪತಿಗಳಾದಂಥಾ ಪಾಪಗ್ರಹಂಗಳು.

X X X X

ಉಚ್ಚ ಸ್ವಕ್ಷೇತ್ರ ಮಿತ್ರಕ್ಷೇತ್ರಗಳಲ್ಲಿ ಬಲಾಡ್ಯರಾಗಿಯಿದ್ದರೆ ಮತ್ತು ನಗೆಯಿಕ್ಕಟ್ಟನ್ನೆ ಮಾಡುವರು ಯೆಂದು ತಿಳಿದುಕೊಂಬುದುಂಟು. ಇತಿ ಜಾತಕ ಚಂದ್ರಿಕಾವ್ಯಾಖ್ಯಾನದಲ್ಲಿ ಪ್ರತಿಲಗ್ನಮುಮಂ ಕೇಳ್ವದು॥ ಐದನೆ ಅಧ್ಯಾಯ ಸಂಪೂರ್ಣ ಮಂಗಳ ಮಹಾಶ್ರೀ॥ ಅಂತು ಅಧ್ಯಾಯಕೆ ಶ್ಲೋಕಗಳು ೭೮ ಶ್ರೀ॥ ಈ ಜಾತಕಚಂದ್ರಿಕಾ ಶ್ಲೋಕ ೭೮ಕ್ಕೆ ಟೀಕು ಸಮೇತವಾಗಿ ನಾನೂರುಮೂವತ್ತು ಗ್ರಂಥ ಪ್ರಮಾಣಯಿಧೆಯೆಂಬುದು ನಿಚ್ಚಿತಾರ್ತ್ಥ ॥ಶ್ರೀ॥

ವಿಷಯ : ಜಾತಕ ಚಂದ್ರಿಕೆಯ ಸಂಸ್ಕೃತ ಶ್ಲೋಕಗಳಿಗೆ ಕನ್ನಡಟೀಕೆ.

ವಿಶೇಷ : ಪತ್ರಗಳ ಎರಡು ಪಕ್ಕಗಳಲ್ಲೂ ಬರೆದಿದೆ. ಅಶುದ್ಧಪ್ರತಿ. ಇದೇ ಪುಸ್ತಕ ದಲ್ಲಿ ಅಬ್ಧಿಕಲ್ಪ ಮತ್ತು ಜಿನೇಂದ್ರಮಾಲಾ ಎಂಬ ಎರಡು ಕೃತಿಗಳಿವೆ. ನೋಡಿ ಅಕ್ಷರ. ೩೧ನೇ ಪತ್ರದ ಎರಡನೇ ಪಾರ್ಶ್ವದಲ್ಲಿ ಬರವಣಿಗೆ ಇಲ್ಲ. ಗ್ರಂಥ ಸಮಗ್ರವಾಗಿದೆ.

554

ಕೆ. ೨೮೫	ಜಾತಕತಿಲಕ	ಕಂದ, ವೃತ್ತ
೯.೫"×೧.೮"	ಶ್ರೀಧರಾಚಾರ್ಯ	೧೦೪೯
೯೫–೧೭೦ ಪತ್ರ	೭ ಪಂಕ್ತಿ	೪೩ ಅಕ್ಷರ

ಆದಿ: ಶ್ರೀ x x

ಶ್ರೀಮದನಂತಚತುಷ್ಟಯು
ಧಾಮುಂ ಜಿತದುರಿತಸಮು ನಿಶ್ರೇಯಸ ಲ
ಕ್ಷ್ಮೀಯುಮಹಿತಂ ತ್ರೈಲೋಕ್ಯಂ
ಸ್ವಾಮಿಜಿನಂ ಮಾಳ್ಕೆ ಸಮಗೆ ಶಾಶ್ವತಪದಮುಂ ||೧||
ಮುಂನಾರು ಜಾತಕದಿಂ
ಕಂನಡದಿಂ ವ್ಯಕ್ತಮಾಗೆ ಪೇಳ್ದನ್ನಿತಂ
ಲ್ಲಿಂನುಂ ಪೇಳ್ದವರಿಲ್ಲು
ತ್ಪಂನಂ ಶ್ರೀದರನೆ ಪೇಳ್ಗುಮೆಂದಾದರದಿಂ ||

ಅಂತ್ಯ: ಧರಣಿ ಗಿರಿ ನಿಧಿ ಶಕಾಬ್ದಂ
ವಿರೋಧಿ ವತ್ಸರದ ಮಾರ್ಗಶಿರ ಷೋಡಶುಕ್ಲೇ
ತರ ಚತುರ್ಥಿದಿವಸದ
ಗುರುಪುಷ್ಯದೊಳೆಸೆದುದಿಳೆಗೆ ಜಾತಕತಿಳಕಂ ||

ವೃ|| ಸಕಳಮಹೀತಳಂ ಬೆಳಗೆ ಧಾತ್ರಿಯನಾಹಮಲ್ಲಭೂಮಿಪಾ
ಳಕನೊಸೆದಾಳ್ಗೆ ಸಾಲೆ ಮಳೆ ಕೊಲ್ಗಿರಿದನೋದುವ ಕೇಳ್ವ ಕಲ್ವ ಭ
ಕೆಕ ಜನಕ್ಕಾಗಳುಂ ಸಮನಿಸಿಕ್ಕೆ ಮನೋರಥಕಾರ್ಯಸಿದ್ಧಿ ಜಾ
ತಕತಿಳಕಂ ಜಗಕ್ಕೆ ಪರದಿಕ್ಕೆ ದಿನೇಶ ಶಶಾಂಕರುಳ್ಳಿನಂ ||೪೩||

ಗದ್ಯ || ಇದು x x x ಶ್ರೀಧರಾಚಾರ್ಯ ಪ್ರಣೀತ ಜಾತಕತಿಳಕದೊಳ್
ನಷ್ಟಜಾತಕ ಪ್ರಕರಣವರ್ನನಂ ಚತುರ್ವಿಂಶತ್ಯಾಧಿಕಾರಃ ||೨೪||
ಜಾತಕತಿಲಕ ಸಂಪೂರ್ನ ಮಂಗಳ ಮಹಾ

ವಿಷಯ: ಜಾತಕಫಲ ನಿರೂಪಣೆ.

ವಿಶೇಷ: ೧೭೧–೧೭೭ ಪತ್ರದವರೆಗೆ ಈ ಗ್ರಂಥಕ್ಕೆ ಸೇರದ ಶ್ರೀಪತಿಪದ್ಧತಿ ಗ್ರಂಥದ ಕೆಲವು ಶ್ಲೋಕಗಳೂ, ಅಷ್ಟಕವರ್ಗದಿಂದ ಆಯುರ್ದಾಯವನ್ನು ತರುವ ಕ್ರಮದ ವಿವರಗಳೂ ಇವೆ.

555

ಕೆ. ಎ. ೨೩೭ | ಜಾತಕತಿಲಕ | ಕಂದ, ವೃತ್ತ
೧೨.೫"×೮" | ಶ್ರೀಧರಾಚಾರ್ಯ | ೧೦೪೯
೧-೧೮೬ ಪತ್ರ | ೧೦ ಪಂಕ್ತಿ | ೨೩ ಅಕ್ಷರ

ಆದಿ: ಕಂದ॥ ಶ್ರೀಮದನಂತಚತುಷ್ಟಯ
ಧಾಮಂ ಜಿತದುರಿತ ಸಮಿತಿ ನಿಶ್ರೇಯಸ ಲ
ಕ್ಷ್ಮೀಮಹಿತಂ ತ್ರೈಲೋಕ್ಯ
ಸ್ವಾಮಿಜಿನಂ ಮಾಳ್ಕೆಮಗೆ ಶಾಶ್ವತ ಪದಮಂ ॥ ೧ ॥

x x x x

ವೃ॥ ಅನವದ್ಯಂ ಕವಿತಾಗುಣಾರ್ಣ್ನವನಿಳಾದೇವಾನ್ವಯಾಬ್ಜಾಂಬುಜಾ
ರಿನಿಭಂ ಪ್ರೌಢವಿಲಾಸಿನೀ ಮನಸಿಜಂ ಶೀಲಭದ್ರಂ ದ್ವಿಷ
ಜ್ಜನದುರ್ಭಾರಗಜಾಂಕುಶಂ ಸುಜನರತ್ನಂ ತಾನೆನಲ್ಕೇಂ ಕ್ರಿಯಾ
ರ್ಥನೊ ಕರ್ನಾಟ ಕವೀಂದ್ರ ಸುದ್ಧಗುಣೌಸಂಜ್ಞಾಧರಂ ಶ್ರೀಧರಂ ॥೫॥

ಅಂತ್ಯ: ಕಂ॥ ಧರಣಿ ಗಿರಿ ನಿಧಿ ಶಶಾಂಕಂ
ವಿರೋಧಿ ವತ್ಸರದ ಮಾರ್ಗಶೀರ್ಷದ ಶುಕ್ಲೇ
ತರ ಚತುರ್ಥಿ ದಿವಸದ
ಗುರು ಪುಷ್ಯದೊಳೆಸೆಮದಿಳೆಗೆ ಜಾತಕತಿಲಕಂ ॥

ಸಕಳಮಹೀತಳಂ ಬೆಳಗೆ ಧಾತ್ರಿಯನಾಹವಮಲ್ಲ ಭೂಮಿಪಾ
ಳಕಮೆಸೆದಾಳ್ಗೆಸಾಲೆ ಹುಳಿ ಕೊಳ್ಗಿದನೋದುವ ಕೇಳ್ವ ಕಲ್ಪ ಭಾ
ಕ್ತಿಕಜನಕಾಗಳುಂ ಸಮನಿಸಿಕ್ಕೆ ಮನೋರಥ ಕಾರ್ಯಸಿದ್ಧಿ ಜಾ
ತಕತಿಲಕಂ ಜಗಕ್ಕೆ ಪರೆದಿಕ್ಕೆ ದಿನೇಶ ಶಶಾಂಕರುಳ್ಳಿನಂ ॥

ಗದ್ಯ—ಇದು x x ಶ್ರೀ ಶ್ರೀಧರಾಚಾರ್ಯ ಪ್ರಣೀತಮಪ್ಪ ಜಾತಕ
ತಿಲಕದೋಳ್ ನಷ್ಟ ಜಾತಕ ಪ್ರಕರಣವರ್ನ್ನನಂ ಚತುರ್ವಿಂಶತ್ಯಧಿಕಾರಂ
ಸಮಾಪ್ತಾ x x x x x ಮಲೆಯೂರ ವಿಜಯಪ್ಪೈಯ್ಯನ
ಕೈಯ್ಯ ಬರಹ ಯಿಾ ಪದ್ಯ. (ಎಂದು ಬರೆದಿದೆ)

ವಿಷಯ: ಜಾತಕಫಲ ನಿರೂಪಣೆ.

ವಿಶೇಷ: ಪತ್ರದ ಒಂದುಕಡೆ ಮಾತ್ರ ಬರೆದಿದೆ. ಶಕಟರೇಫದ ಬಳಕೆಯಿದೆ. ಗ್ರಂಥದ ಆದಿಯ ಬೇರೆ ಮೂರು ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ. ೧೪೧–೧೪೩ ನೇ ಪತ್ರಗಳಲ್ಲಿ ಬರವಣಿಗೆ ಇಲ್ಲದೆ ಗ್ರಂಥ ಲುಪ್ತವಾಗಿದೆ. ಪ್ರತಿ ಶಿಥಿಲವಾಗಿದೆ.

556

[illegible] ಬಿ. ೩೭೬	**ಜಾನಕೀಪರಿಣಯ ನಾಟಕಂ**	ಗದ್ಯ, ಪದ್ಯ
೮.೫″ × ೬.೪″	ಹೆಚ್. ವೆಂಕಟರಾಯ	೧೯೦೬
೧–೧೫೨ ಪತ್ರ	೧೨ ಪಂಕ್ತಿ	೨೨ ಅಕ್ಷರ

ಆದಿ: ಶ್ರೀ x x ಜಾನಕೀ ಪರಿಣಯ ನಾಟಕಂ, ಪ್ರಥಮಾಂಕಂ
ವೃ|| ಶ್ರೀಮತ್ಕ್ಷೀರಾಬ್ಧಿಕನ್ಯಾಘನಕುಚಯುಗಳನ್ಯಸ್ತಕಸ್ತೂರಿಕಾ ಪಂ
ಕಾಮೋದಸ್ಫಾರತಾರಾತರಳವಿಮಳ ಮುಕ್ತಾವಳೀ ಮಂಜುವಕ್ಷಂ
ಭೀಮಾಸ್ತ್ಯೋದ್ಯತ್ಪ್ರತಾಪ ಪ್ರಬಳದಶದಿಶೋತ್ಕಂಠ ದೈತೇಯಕಾಲಂ
ರಾಮಂ ಸೀತಾವರಂ ರಕ್ಷಿಸುಗೆ ದಶಶಿರಪ್ರಾಣನಾಶಂ ರಮೇಶಂ || ೧ ||

ಅಂತ್ಯ: ಆದೊಡಮಿದಕ್ಕೆ ಭರತವಾಕ್ಯಂ |

ವೃ|| ಕರಮೆಂದುಂ ಶುಭಮಕ್ಕೆ ವಿಪ್ರತತಿಗಂ ಗೋವ್ರಗ್ಗಮೀರಾಜ್ಯದೋ
ಳರದಿಂ ಕೃಷ್ಣನರೇಂದ್ರನಾಳ್ಗೆ ಕುಶಲಂ ಸೌಭಾಗ್ಯಮಿರ್ಕುತ್ತಮರ್
ಕರಣರ್ ಸತ್ಕವಿಗಳ್ ರಸಜ್ಞರೊಲವಿಂ ಬಳ್ನೇಹದಿಂ ಬಾಳ್ಗೆ ಮೇಣ್
ಚಿರಮಿರ್ಕೇ ಕವಿರಾಜಭಕ್ತಿ ಪರಮ ಶ್ರೀರಾಮನೊಳ್ ಶಾಶ್ವತಂ || ೭೨ ||
(ಎಂದೆಲ್ಲರುಂ ಪೋಪರ್)

ಸಪ್ತಮಾಂಕಂ ಸಂಪೂರ್ಣಂ

ಇದು ಶ್ರೀಮನ್ಮಹೀಶೂರ ರಾಜಕೀಯ ಪಾಠಶಾಲಾ ಮುಖ್ಯೋಪಾಧ್ಯಾಯ
ಕರ್ಣಾಟಕ ಕವಿರಾಜ ಬಿರುದಾಂಕಿತ ಶ್ರೀವೆಂಕಟರಾಯ ಕವಿಯಿಂ
ಪರಿವರ್ತಿಸಲ್ಪಟ್ಟ ಕರ್ಣಾಟಕ ಜಾನಕೀ ಪರಿಣಯ
ನಾಟಕಂ ಸಮಾಪ್ತಂ.

ವಿಷಯ: ಸೀತಾ ವಿವಾಹ.

ವಿಶೇಷ : ಸಮಗ್ರ, ಆದಿಯ ಬೇರೊಂದು ಪತ್ರದಲ್ಲಿ ೧೯೦೬ ರಲ್ಲಿ ಬರೆದ ಕವಿಯ ವಿಜ್ಞಾಪನೆಯಿದೆ.

557

ಕೆ. ೧೯ | ಜಿನದತ್ತರಾಯನ ಚರಿತ್ರೆ | ಸಾಂಗತ್ಯ
೯.೯″×೧.೯″ | ಪದ್ಮನಾಭ | ಸು ೧೬೮೦
೧–೯೦ ಪತ್ರ | ೧೦ ಪಂಕ್ತಿ | ೪೨ ಅಕ್ಷರ

ಆದಿ : ಪೇಳುವೆ ಧರಣೇಂದ್ರನಸಿಯಕಾವ್ಯನ
ಕೇಳಿರೊ ಸಕಲ ಕೋವಿದರು ||ಪಲ್ಲ||
ಶ್ರೀಸುರ ನರ ನಾಗ ವಂದಿತ ಚರಣಾಬ್ಜ
ಭಾಸುರದಿ ಕೋಟಿತೇಜಾ
ಸಾಸಿರ ನಾಮದೊಡೆಯಗೆ ವಂದನೆ ಮಾಡಿ
ಲೇಸಾಗಿ ನಾನೆರಗುವೆನೂ ||೧||

X X X X

ತಿರುಮಲ ಸಾಮಂತನ್ರುಪನ ಕೋಸಾಧ್ಯಕ್ಷ
ವರಪದ್ಮನಾಭನುನೊಸೆದು
ಪರಮಪಾವನೆ ಪದ್ಮಾವತಿ ಚರಿತವ
ನೊರೆವೆನು ಭಕ್ತಿ ಪೂರ್ವ್ವಕದಿ ||೧೦೪||

ಅಂತ್ಯ : ಅಂಗಜ ವಿಜಯ ಪಾರಿಶ್ವನಾಥನ ಭಕ್ತಿ
ಹಿಂಗದಿರು ಮಹಾಯಕ್ಷೆ
ಹೆಂಗಳ ರಂನೆ ಪದ್ಮಾವತಿ ಚ....ಗೆ
ಮಂಗಳಮಹಾ ಜಯ ಜಯತೂ ||

ಅಂತು ಸಂಧಿ ೧೨ಕ್ಕೆ ಪದನು ೧೫೫ಕ್ಕಂ ಮಂಗಳ ಮಹಾಶ್ರೀ || ದುರ್ಮತಿ ನಾಮಸಂವತ್ಸರದ ಜೇಷ್ಠ ಸುಧ್ಧ ೨ ರವಿವಾರ ಸೂರ್ಯ್ಯೋದಯವಾದ ಜಾವ ೧ದರಲ್ಲಿ ಶ್ರೀಪದ್ಮಾವತಿ ಅಮ್ಮನವರ ಚರಿತ್ರೆ ಸಂಕ್ಕಿಗಟ್ಟದ ಶ್ರೀ ವೀರ ವರ್ಧಮಾನ ಸ್ವಾಮಿಯ ಸಂನಿಧಿಯಲ್ಲಿ ಸಂಪೂರ್ನವಾಡಿ|| ನರಸಿಂಹ ಪುರದ ಪಥುವ್ಯೆಗೆ ಸಂಕಿಗಟ್ಟದ ಬಸ್ತಿಯಾ ರಾಯಪ್ಪನ ಕುಮಾರ ಅನಂತೈಯ ಬರ ಪುಸ್ತಕಕ್ಕೆ ಭದ್ರಂ ಭೂಯಾತ್|| ಶುಭಮಸ್ತು.

ವಿಷಯ: ಪದ್ಮಾವತೀ ಅಮ್ಮನವರ ಚರಿತ್ರೆ.

ವಿಶೇಷ: ಗ್ರಂಥವು ಬಹಳ ಶಿಥಿಲವಾಗಿದೆ. ಅಲ್ಲಲ್ಲಿ ಗರಿಗಳು ಮುರಿದು ತುಂಡಾಗಿವೆ. ೨ನೇ ಸಂಧಿಯಲ್ಲಿ ೫೯ನೆಯ ಪದ್ಯದಿಂದ ೭೭ನೆಯ ಪದ್ಯದವರೆಗೆ ಲುಪ್ತ ವಾಗಿದೆ. ೪ ಮತ್ತು ೧೧ ನೆಯ ಪತ್ರಗಳು ಲುಪ್ತ.

558

ಕೆ. ೩೬೮	**ಜಿನಪತ್ತ್ರರಾಯುನಚರಿತ್ರೆ**	ಸಾಂಗತ್ಯ
೧೦-೭"×೧.೫"	ಪದ್ಮನಾಭ	ಸು ೧೬೮೦
೨–೧೫೫ ಪತ್ರ	೭ ಪಂಕ್ತಿ	೩೭ ಅಕ್ಷರ

ಆದಿ : ... .

ಲೀಲೆಯೊಳಗೆ ನೆಲಸಿದ ಜಿನರಾಜ
ರಾಲಯವನು ಬಲಗೊಂಬೆ ||೧೦||

X X X X

ತಿರುಮಾಲಾಸಾಮಂತ್ತರಾಯನಾ ಕೋಸಾಧ್ಯಕ್ಷಾ
ವರಪದ್ಮನಾಭನನೊಸೆದೂ
ಪರಮಾಪಾವನೆ ಪದ್ಮಾವತೀ ಚರಿತೆಯಾ
ನೊರವೆನೂ ಭಕ್ತಿಪೂರ್ವ್ವಕಾದಿ || ೧೦೭ ||

ಅಂತ್ಯ : ಶ್ರೀಸುರ ನರ ನಾಗಾರಾಜ ಪೂಜಿತಪಾದ
ಭಾಸೂರಾ ಜ್ನಾನಾಪ್ರಕಾಸಾ
ಸಾಸಿರನಾಮದೊಡೆಯಾ ...... ರಿಸ್ವೇಸಾ ನೀ
ಲೇಸಾನಿತ್ಯೆಂಮ ರಕ್ಷಿಪ್ಪುದೂ || ೭೨ ||

ಪದ್ಮಾವತಿಯಂಮನವರ ಚರಿತೆ ಸಂಧಿ ಹಂನೆರಡನೂ ಸಮಾಪ್ತ ಅಂತೂ ಸಂಧಿ ಹಂನೆರಡಕ್ಕಂ ಬರದ ಪದಾ ಸಾವಿರದ ಆರುನೂರಕ್ಕಂ ಮಂಗಲಾಮಹಾಶ್ರೀ ......ಚರದ ಪಾಗ್ಘುಣ ಸದ ೫ ಯೆಲು ಪದ್ಮಾವತಿಅಂಮ್ಮನವರ ಚರಿತೆಯನು ಅಂತಂಣನ ಕೈಯದುಂಡತಿ ಕಾಳಪನಮ್ಮಗ ಬೊಂಮಂಣನು ಬರಸಿದು–ಶ್ರೀ.

ವಿಷಯ: ಪದ್ಮಾವತೀದೇವಿಯ ಚರಿತ್ರೆ.

ವಿಶೇಷ: ಮೊದಲ ಗರಿಯಿಲ್ಲ. ಕೊಂಚಮಟ್ಟಿಗೆ ಶಿಥಿಲ, ಬರಹವು ಅಸ್ಪಷ್ಟ. ಆರಂಭದಲ್ಲಿ ವಿಷಯ ಸೂಚಿಯಿದೆ.

559

ಕೆ. ೫೭೭	**ಜೀನದತ್ತರಾಯನ ಚರಿತ್ರೆ**	ಸಾಂಗತ್ಯ
೮"×೧.೭"	ಪದ್ಮನಾಭ	ಸು. ೧೬೮೦
೨–೧೪೯ ಪತ್ರ	೭ ಪಂಕ್ತಿ	೩೮ ಅಕ್ಷರ

ಆದಿ: ಶ್ರೀ × ×

ಹೇಳುವೆನು ಧರಣೇಂದ್ರನರಸಿಯ ಕಾವ್ಯವ
ಕೇಳಿರೈ ಸಕಲ ಕೋವಿದರು ॥

ಪದ॥ ಶ್ರೀ ಸುರ ನರ ನಾಗರಾಜ ಪೂಜಿತಪಾದ
ಭಾಸುರ ಜ್ಞಾನಪ್ರಕಾಶಾ
ಸಾಸಿರನಾಮುದೊಡೆಯ ಪಾರಿಶ್ವೇಶ
ಲೇಸಾಗಿತೆಂಮ ರಕ್ಷಿಪುದೂ ॥ ೧ ॥

X X X X

ತಿರುಮಲ ಸಾಮಂತನ್ರುಪನ ಕೋಸಾಧ್ಯಕ್ಷ
ವರಸಾಮಂತನೊಸೆದು
ಪರಮ ಪಾವನೆ ಪದ್ಮಾವತಿ ಚರಿತವ
ನೊರೆದು ಭಕ್ತಿ ಪೂರ್ವಕದಿ ॥ ೧೦೭ ॥

ಅಂತ್ಯ: ಅಗಜ ವಿಜೆಯ ಪಾರಿಶ್ವಜಿನರ ಭಕ್ತಿ
ಹಿಂಗದಿರುವ ಮಹಾ ಯಕ್ಷಿ
ಹಂಗನರಂನೆ ಪದ್ಮಾವತಿ ಚರಿತೆಗೆ
ಮಂಗಲ ಶುಭ ಜಯ ಜಯ ಜಯತು ॥ ೭೧ ॥

ಅಂತು ಸಂಧಿ ೧೨ ಕ್ಕಂ ಪದನು ೧೦೦೬೦೦೦ ಕ್ಕಂ ಮಂಗಲ್ಲಮಹಾ ಶ್ರೀ.... ರೂಡಿಡಿರೋದ್ಗಾರಿ ಸಂವ್ವಸ್ತರದ ಶ್ರವಣ ಶುಧ ೫ ಲ್ಲು ಹಾಸನದ ಹೊಂನಪ್ಪ ಶಟ್ಟರ ಪಪೊಹೊತ್ರ ಪಾಯಪ್ಪಶಟ್ಟರ ಪವುತ್ರ ಅಪ್ಪುಶೆಟ್ಟರ ಪುತ್ರ ಪಾಯಪ್ಪನು ತಂನ ಮನೋಪ್ರೀತಿಯಿಂದ ಶ್ರೀ ಪದ್ಮಾವತೀಚರಿತೆ ಬರೆದು ಸಂಪೂರ್ಣ್ಣ ಮಂಗಳ ಮಹಾಶ್ರೀ.

ವಿಷಯ: ಪದ್ಮಾವತೀ ದೇವಿಯ ಚರಿತ್ರೆ.

ವಿಶೇಷ: ಸಮಗ್ರವಾಗಿದೆ. ಗರಿಯ ಅಂಚುಗಳು ಸ್ವಲ್ಪಮಟ್ಟಿಗೆ ಮುರಿದಿವೆ. ಪತ್ರಸಂಖ್ಯೆ ೧೨೩ ರಿಂದ ೧೩೨ ರವರೆಗೆ ಬಿಟ್ಟುಹೋಗಿದ್ದರೂ ಗ್ರಂಥ ಲೋಪವಿಲ್ಲ. ಗ್ರಂಥದ ಆದಿಯ ಬೇರೊಂದು ಪತ್ರದಲ್ಲಿ ವಿಷಯಸೂಚಿ ಯಿದೆ. ೧ನೆಯ ಪತ್ರದಲ್ಲಿ ಜಿನಸ್ತುತಿಯಿದೆ.

560

ಕೆ. ಎ. ೧೪೯	**ಜಿನದತ್ತರಾಯನ ಚರಿತ್ರೆ**	ಸಾಂಗತ್ಯ
೧೪ X ೮.೨	ಪದ್ಮನಾಭ	ಸು. ೧೬೮೦
೧–೪೮ ಪತ್ರ	೩೨ ಪಂಕ್ತಿ	೪೪ ಅಕ್ಷರ

ಆದಿ: ಜಿನದತ್ತರಾಯನ ಚರಿತ್ರೆ – ಸಾಂಗತ್ಯ X X X

ಶ್ರೀ ಸುರ ನರ ನಾಗರಾಜ ಪೂಜಿತಪಾದ
ಭಾಸುರ ಜ್ಞಾನಪ್ರಕಾಶ
ಸಾಸಿರನಾಮದೊಡೆಯ ಪಾರಿಶ್ವೇಶ
ಲೇಸಸಿತೆಂಮ ರಕ್ಷಿಪುದು ॥ ೧ ॥

X X X X

ತಿರುಮಲ ಸಾಮಂತ ನೃಪನ ಕೋಶಾಧ್ಯಕ್ಷ
ವರಪದ್ಮನಾಭನನೊಸೆದು
ಪರಮಪಾವನೆ ಪದ್ಮಾವತಿ ಚರಿತೆಯ
ವರವೆನು ಭಕ್ತಿಪೂರ್ವಕದಿ ॥ ೪ ॥ (3ನೆಯ ಪತ್ರ)

ಅಂತ್ಯ: ಶ್ರೀ ಶೂರ ನರ ನಾಗರಾಜಪೂಜಿತಪದ
ಬೂಸುರ ಗ್ನಾನಪ್ರಕಾಶಾ
ಸಾಸಿರನಾಮದೊಡೆಯ ಪರಿಶ್ವೇಶ
ಲೇಸನಿತೆಂಮ್ಮ ರಕ್ಷಿಪುದೂ ॥ ೫೨ ॥

ಅಂತು: ೧೨ಕ್ಕಾಂ ಪದನೂ ೧೪೭೬ ಕಾಂ ಮಂಗಳಮಹಾ ಶ್ರೀ ಜಿನದತ್ತರಾಯನ ಚರಿತ್ರೆ ಸಂಪೂರ್ನ. ತುಳುದೇಶದ ಮೂಲಿಕೆ ಜೈನರ ಪದ್ಮನಾಭ ವಿರಚಿತ.

ವಿಷಯ: ಪದ್ಮಾವತೀ ದೇವಿಯ ಚರಿತ್ರೆ.

ವಿಶೇಷ : ಸಮಗ್ರ. ಬರಹವು ಸ್ಫುಟವಾಗಿಲ್ಲ. ಈ ಗ್ರಂಥವನ್ನು ಪದ್ಮಾವತೀ ಅಮ್ಮನವರ ಚರಿತ್ರೆಯೆಂದೂ ಕರೆಯುತ್ತಾರೆ.

561

ಕೆ. ಬಿ. ೪೨೬/೨	ಜಿನಭಕ್ತಿಸಾರ	ಭಾಮಿನೀಷಟ್ಪದಿ
ಲ.೨"X೬.೫"	ಚಂದ್ರಸಾಗರವರ್ಣಿ	ಸು ೧೮೧೦
೩೪೪–೩೫೪ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ಶ್ರೀಚಂದ್ರನಾಥಾಯ ನಮಃ॥ x x x x ಜಿನಭಕ್ತಿಸಾರಾ॥
ಶ್ರೀನಿಲಯ ವರಚಂದ್ರಜಿನತ್ರಿಜ
ಗಾನತಶ್ರೀಮುಕ್ತಿಮಾರ್ಗವಿ
ದಾನ ಬೋಧೋದ್ಯಾದಿ ಸಂಸ್ಮಾರ್ಗಗಳ ಭವ್ಯರಿಗೇ
ಸಾನುರಾಗವಗೊಳಿಸಿ ಚತುರ್ಗತಿ
ಲೀನವುಪಹರಗೈವೆ ಪರಮ
ಜ್ಞಾನಮಯ ಪರಮೇಶ ರಕ್ಷಿಸು ನಂಮ್ಮನನವರತಾ ॥ ೧ ॥

ಅಂತ್ಯ : ಭಕ್ತಿಸಾರವ ವಿರಚಿಸಲು ಮನ
ವೆಕ್ತದಿಂ ಶ್ರೀ ಲಕ್ಷ್ಮಿಸೇನರ
ಭಕ್ತಿಯುಲಿ ಶ್ರೀಚಂದ್ರಸಾಗರ ವರ್ಣಿ ವಿರಚಿಸಿದಾ
ಮುಕ್ತಿಮಾರ್ಗ್ಗ ಗ್ರಂಥ ನೂರೆಂ
ಟೂಕ್ತದಲಿ ಸಂಪೂರ್ಣ್ನ ಜನರಾ
ಶಕ್ತವಿಸಲಿ ಅಹೋರಾತ್ರೆಲ್ಲಕನವರತಾ ॥ ೧೦೫ ॥

x x x x

ಮಂಗಲ ಶ್ರೀ ಚಂದ್ರನಾಥಗೆ
ಶಿಂಗರದ ಶಾರದೆಗೆ ಮಂಗಲ
ಮಂಗಲ ಶ್ರೀಲಕ್ಷ್ಮಿಸೇನಗೆ ನಿರುತ ಯಿಾಕ್ರುತಿಗೇ
ಮಂಗಲಿದಕೊಲಿದೋದಿ ಕೇಳ್ವ
ತ್ತುಂಗ್ಗರಿಗೆಯನುಮತದಿಗೀಜಗ
ಜಂಗಮರ ನೆರೆ ಕಾಯ್ದು ಸಲಹಲಿ ಕ್ರುತಿಯು ಅನವರತಾ ॥ ೧೦೮ ॥
ಜಿನಭಕ್ತಿಸಾರ ಸಂಪೂರ್ಣ್ನ ಮಂಗಳಮಹಾಶ್ರೀ॥

ವಿಷಯ: ನೀತಿಯುತ ಜೈನತತ್ತ್ವಗಳು.

ವಿಶೇಷ: ಇದೇ ಪುಸ್ತಕದಲ್ಲಿ ಜಿನರಾಮಾಯಣವೆಂಬ ಮತ್ತೊಂದು ಕೃತಿಯಿದೆ. ಬರಹವು ಸುಂದರ.

562

ಕೆ. ಎ. ೩೩	**ಜಿನಮುನಿತನಯಶತಕ**	ಕಂದ
೧೩"×೮"	ನಾಗಚಂದ್ರ	೧೧೫೦
೧-೧೪ ಪತ್ರ	೨೮ ಪಂಕ್ತಿ	೧೨ ಅಕ್ಷರ

ಆದಿ : ಜಿನಮುನಿತನಯಶತಕ
ಶ್ರೀಮತ್ಪರಮಜಿನೇಂದ್ರಂ
ಕಾಮಾಂತಕನನಿಮಿಷೇಂದ್ರವಂದಿತಪಾದಂ
ಶ್ರೀಮದ್ಭವ್ಯೋತ್ತಮರೊಳು
ಕ್ಷೇಮಪದ ಶ್ರೀಯನೀಗೆ ಜಿನಮುನಿತನಯ ॥ ೧ ॥

ಅಂತ್ಯ: ಜಿನಮುನಿತನೆಯನನೋದಿದೊ
ಡನುದಿನ ಸುಖಸಂಪದಂಗಳಕ್ಕುಮನೋಘಂ
ಘನಮೆನಿಪ ಪಾಪ ಕೆಡಿಗುಂ
ತನೆಯರು ನಂಬಿದಡೆ ಪಡೆಗು ಜಿನಮುನಿತನಯ ॥ ೧೦೩ ॥

॥ ಸಂಪೂರ್ಣಂ ॥

ವಿಷಯ: ನೀತಿಯುತ ಜೈನ ತತ್ತ್ವಗಳು.

ವಿಶೇಷ: ಪತ್ರದ ಒಂದುಕಡೆ ಮಾತ್ರ ಬರೆದಿದೆ.
ಗ್ರಂಥದ ಆದಿಯ ಬೇರೆ ಎರಡು ಪತ್ರಗಳಲ್ಲಿ ಬಿ. ಲೂಯಿಸ್ ರೈಸ್ ಅವರು ಸಂಪಾದಿಸಿರುವ ಕನ್ನಡ ಗ್ರಂಥಗಳ ಹೆಸರು ಮತ್ತು ಕವಿಯ ಹೆಸರು ಕವಿಯ ಕಾಲ ಇವೆಲ್ಲವೂ ಆಂಗ್ಲಭಾಷೆಯ ಅಕ್ಷರದಲ್ಲಿ ಅಚ್ಚಾಗಿವೆ. ಆಮೇಲೆ ನಾಲ್ಕು ಶುದ್ಧ ಪತ್ರಗಳಿವೆ. ಗ್ರಂಥದ ಕೊನೆಯಲ್ಲಿಯೂ ನಾಲ್ಕು ಶುದ್ಧ ಪತ್ರಗಳಿವೆ.

563

ಕೆ ಬಿ ೪೨೬/೧	**ಜಿನರಾಮಾಯಣ**	ಭಾಮಿನೀ ಷಟ್ಪದಿ
೮.೨"×೬.೫"	ಚಂದ್ರಸಾಗರ	ಸು. ೧೮೦೦
೧-೩೪೪ ಪತ್ರ	೨೬ ಪಂಕ್ತಿ	೨೩ ಅಕ್ಷರ

ಆದಿ: ಶ್ರೀ x x

ಶ್ರೀ ದಿವಿಜ ನರ ನಾಗಪತಿನುತ
ಪಾದಸರಸಿಜ ಸಾರುಭಾಶ್ರಿತ
ಪಾದ ನಯನಾನಂದ ಚಿನ್ಮಯ ತ್ರಿಜಗಜನಮೋದಾ
ಬೋಧೆಗೊಳಿಸವ್ಪುತಾಂಗಲಕ್ಷ್ಮಿಯ
ಸಾಧನಾಗಮು ವರಿಪ ಮುಕ್ತಿವಿ
ನೋದನಾಗಿಹ ಚಂದ್ರನಾಥನೆ ರಕ್ಷಿಸನವರತಾ ॥೧॥

ಅಂತ್ಯ : ಕಲಲಹರ ಮುನಿಸುವ್ರತಾಂತ್ಯದಿ
ಚಲಿತರಾದಾ ರಾಮುಲಕ್ಷ್ಮಣ
ರೊಲವನೀ ಕರ್ನಾಟಕಾವ್ಯಕೆ ಶ್ರೀಪ್ಮವೆನಿಸಿರುವ
ಲಲಿತದಲಿ ಶ್ರೀ ಚಂದ್ರಸಾಗರ
ರೊಲಿದು ವಿರಚನೆಗೈದರಿದ ಮನ
ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರು ॥೧॥

ಅಂತೂ ಆಸ್ವಾಸ ೮೫ಕ್ಕಂ ಪದನೂ ೪೯೧೩ ಕ್ಕಂ ಮಂಗಲಮಹಾಶ್ರೀ. ಶಾಲಿವಾಹನ ಶಕಾಬ್ದಾ ೧೭೯೭ ನೆ ಭಾವನಾಮು ಸಂವತ್ಸರೆ ಶರದ್ರುತು ಕಾಲಯುಕ್ತಾಯಾಂ ಕಾರ್ತಿಕಮಾಸೆ ಕೃಷ್ಣಪಕ್ಷೆ ಅಮಾವಾಸ್ಯಾಂ ತಿಥೌ ಭೌಮ್ಯವಾಸರ ಯುಕ್ತಾಯಾಂ ಮಧ್ಯಾಹ್ನಕಾಲೇ ಗೌತಮುಗೋತ್ರೇ ಆದಿಸೂತ್ರೇ ಅಮುರ ಪ್ರವರನಾದ ತೋವಿನಕೆರೆ ಬಸ್ತಿಯಿಂದ್ರವರ್ಗದ ನಾಗಪ್ಪನ ಕುಮಾರ ಪದ್ಮಣ್ಣ ಇವನ ಮುಗ ರಾಯಣ್ಣನು ತನ್ನ ಸ್ವಂತ ಕ್ಕೋಸ್ಕರವಾಗಿ ಶ್ರೀ ಚಂದ್ರನಾಥಸ್ವಾಮಿ ಚೈತ್ಯಾಲಯದಲ್ಲಿ ಬರೆದು ಸಂಪೂರ್ಣಮಾಡಿದಂತಾ ಜಿನರಾಮಾಯಣ ಭದ್ರಂ ಶುಭಂ ಮಂಗಳಂ॥ ಶ್ರೀ.

ವಿಷಯ : ಜೈನಪಂಥಕ್ಕನುಸಾರವಾದ ರಾಮಾಯಣದ ಕಥೆ.

ವಿಶೇಷ : ಗ್ರಂಥದ ಆದಿಯ ಬೇರೆ ಎರಡು ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ.

564

ಕೆ ಎ ೨೮೪/೨	**ಜಿನಾಕ್ಷರಮಾಲೆ**	ಕಂದ
೧೨ ೯' X ೮.೩"	ಪೊನ್ನ	೯೫೦
೧-೪ ಪತ್ರ	೨೨ ಪಂಕ್ತಿ	೨೫ ಅಕ್ಷರ

ಆದಿ : ಜಿನಾಕ್ಷರ ಮಾಲೆ
ಶ್ರೀಮತ್ಸಮಸ್ತಲೋಕ ಶಿ
ಖಾಮಣಿ ನಿಃಕಪಟವಿನಯ ವಿನಮಿತ ಜಳ ಚಿಂ
ತಾಮಣಿ ಜಿನ ನಿನಗೆಜಗೆ ಮ
ಹಾಮಹಿಮ ಪ್ರಾಪ್ತರಪ್ಪರೆಂಬುದು ಲೋಕಂ ॥ ೧ ॥

ಅಂತ್ಯ : ಳಾಂತಂಬರಂಬುದ ಪೊಗ
ಳ್ವಂತಕ್ಕರಮಾಲೆಯಂ ಜಿನಸ್ತವನದೊಳಾ
ರಂತಿರೆ ಪೇಳ್ದಂ ಹಿಮಶ್ರೈ
ಳಾಂತ್ಯನರಂ ಪೊಗಳ್ವಿನಂ ಕುರುಳ್ಗಳೆ ಸವಣಂ ॥ ೩೯ ॥

ವಿಷಯ : ಜಿನಸ್ತುತಿ.

ವಿಶೇಷ : ಶಕಟರೇಫ ಪ್ರಯೋಗವಿದೆ. ಪತ್ರದ ಒಂದುಕಡೆ ಮಾತ್ರ ಬರೆದಿದೆ. ಇದರಲ್ಲಿ ಶ್ರೀ ಪದಾಶೀತಿಯೇ ಮೊದಲಾದ ಇತರ ೧೧ ಗ್ರಂಥಗಳಿವೆ.

565

ಕೆ. ಎ. ೨೯೨/೪	**ಜಿನೇಂದ್ರಮಾಲಾ**	ಕಂದ
೧೪"×೮"	?	?
೪೯–೫೪ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ಶುಭಮಸ್ತು ॥
ಕಂದ॥ ಶ್ರೀಮತ್ಕೇವಲ ಬೋಧೋ
ದ್ದಾಮಂ ಜೈನೇಂದ್ರ ಪಾದಪದ್ಮಂಗಳಿಗಾಂ
ಪ್ರೇಮದೊಳಭಿವಂದಿಸುತಂ
ಭೂಮಿಯೊಳಂ ಪ್ರಶ್ನೆಯಶಾಸ್ತ್ರವಂ ವಿರಚಿಸುವೆಂ ॥ ೧ ॥
ಸ್ವಕ್ಷೇತ್ರಮಿತ್ರವುಚ್ಚದಿ
ಸಿಕ್ಕಿದ ಆರೂಢ ವುದಯ ಕೇಂದ್ರ ಚತುರ್ಥಾದಿ
ತಕ್ಕಷ್ಟು ಗ್ರಂಥಶಾಸ್ತ್ರ ವ
ಚೋತ್ಕಟದಿಂ ಪೇಳ್ದ ಸರ್ವ್ವಜನಕುಪಕಾರಂ ॥ ೨ ॥

ಅಂತ್ಯ : ಆರೂಢ ರಾಶಿಯ ಗ್ರಹಗಳು
ತೋರಿರೆ ಸುತ ಪುತ್ರಿಯೆಂದು ಅರಿವುದು ನಿಜದಿಂ

ಬೇರೆ ಸಂದೇಹವೇತಕೆ
ವೀರಂ ಜಿನಮಾಲೆಯೆಂಬ ರುಷಿಗಳ ಮತದಿಂ ॥ ೨೦೩ ॥
ಆರೂಢ ವುದಯ ಕೇಂದ್ರವು
ತೋರಿದ ವುಭಯದೊಳು ಗ್ರಾಮಜಯ ತಾನಕ್ಕುಂ
ತೋರೆ ತರದಷ್ಟಸೂರೆಯು
ಬೇರದು ಸ್ಥಿರದಲ್ಲಿ ವ್ಯಾದೀರ್ಘ ತಾನಕ್ಕುಂ ॥ ೨೦೪ ॥
ಆರೂಢ ವುದಯ ಕೇಂದ್ರವು
ತೋರಿದು ಗರ್ಭದೊಳು ಗ್ರಾಮಪ್ರಶ್ನೆಯ ಕೇಳಲು
ವೀರ ವಿಕ್ರಮನ ನೆಲಸಿಹ ಗ್ರಾಮಂ
ದ್ವಾರದೊಳು ಮರಣ ಜಿನಪದಭೃಂಗಾ ॥ ೨೦೫ ॥'

ಯಿಲ್ಲಿಗೆ ಪ್ರಶ್ನೆಯ ಶಾಸ್ತ್ರವು ಸಹ ಸಂಪೂರ್ಣವಾದುದಕ್ಕೆ
ಮಂಗಳ ಮಹಾಶ್ರೀ ॥

ವಿಷಯ : ಪ್ರಶ್ನಶಾಸ್ತ್ರ.

ವಿಶೇಷ : ತಪ್ಪು ಬರವಣಿಗೆ ಅಧಿಕ. ಕೆಲವು ಪದ್ಯಗಳ ಕೊನೆಯಲ್ಲಿ ಜಿನಪದಭೃಂಗಾ ಎಂದಿದೆ. ಇದೇ ಪುಸ್ತಕದಲ್ಲಿ ಅಬ್ಧಿಕಲ್ಪ ಮತ್ತು ಜಾತಕ ಚಂದ್ರಿಕಾ ಕನ್ನಡ ವ್ಯಾಖ್ಯಾನ ಎಂಬ ಇತರ ಎರಡು ಗ್ರಂಥಗಳಿವೆ.

566

೧೧೩	**ಜಿನೇಂದ್ರಮಾಲಾ**	ಪದ್ಯ
೧೦.೫"×೧.೮"	?	?
೬—೧೭ ಪತ್ರ	೯ ಪಂಕ್ತಿ	೩೭ ಅಕ್ಷರ

ಆದಿ : ಜ್ಯೋತಿಷ ಸಂಗ್ರಹ ॥ ಪ್ರಶ್ನೆಭಾಗ ॥ ಜಿನೇಂದ್ರಮಾಲೆ॥ ಬರೆವ ಪೊಸ್ತು ಕಕ್ಕೆ ಮಂಗಳಮಹಾ ಶ್ರೀ ॥
ಈಶಾನ್ಯಮಿನಮಾದಿಯು ರಾಸಿಯು ಪ್ರದಕ್ಷಿಣದಿಂವಂ
ರಾಸಿಯ ಪ್ರಶ್ನೆಯ ಕೇಳಲು
ರಾಸಿಯು ಆರೂಢವೆಂದ ಜಿನಪದ ಭೃಂಗಾ ॥ ೧ ॥
ಮೂಡಣದೆಸೆಯೊಳ್ದಿನಪಂ
ನೋಡಿರೆ ತಾನಗ್ನಿಯಲ್ಲಿ ಮಂಗಳನಿಕ್ಕುಂ

ಕೂಡೆ ಬೃಹಸ್ಪತಿಯು ತೆಂಕಲು
ನೋಡಿರೆ ನೈರುತ್ಯನಲ್ಲಿ ಬುಧ ವರ್ತಿಸುಗುಂ ॥ ೨ ॥

ಅಂತ್ಯ : ಆರೂಢಂ ಪಂಚಕಾವ್ಯಂ ಚ ಆರೂಢಂ ಧಾತ ಮೂಲಯೋ ।
ಆರೂಢಂ ದೇಹ ಜೀವಂ ಚಾ ಆರೂಢಂ ಚೋರ ಲಕ್ಷಣಂ ॥ ೧೪೯ ॥
ಆರೂಢಂ ಪ್ರಾಯವೃದ್ಧಂ ಚಾ ಆರೂಢಂ ಜಾತಿ ಭೇದಕಂ ।
ಆರೂಢಂ ಪುತ್ರ ಮಿತ್ರಸ್ಯಾ ಆರೂಢಂ ಸರ್ವತೋ ಫಲಂ ॥ ೧೫೦ ॥
ಜಿನೇಂದ್ರಮಾಲೆ ಸಮಾಪ್ತ ಮಂಗಳ ಮಹಾ ಶ್ರೀ–

ವಿಷಯ : ಪ್ರಶ್ನ ಶಾಸ್ತ್ರ.

ವಿಶೇಷ : ಇದರಲ್ಲಿ ಸ್ವರಚಿಂತಾಮಣಿ ಮತ್ತು ಅಕ್ಷರಕೇವಲಿ ಎಂಬ ಇತರ ಗ್ರಂಥಗಳಿವೆ

567

ಕೆ. ೨೦/೬	**ಜಿನೇಶ್ವರಾಷ್ಟಕ–ಇತ್ಯಾದಿ**	ಪದ
೯.೨ "X೧.೪"	?	?
[illegible] ಪತ್ರ	೬ ಪಂಕ್ತಿ	೩೮ ಅಕ್ಷರ

ಆದಿ : ಶ್ರೀಮದುಜ್ವಲ ಕೇವಲಾಮಲ ಭೋಧ ದೀಧಿತಿ ಭಾಸುವೆ
ಸ್ವಾಮಿ ನೀನಂತರಂಗದೊಳಾಡುತಿರ್ದ್ದಡೆ ನಂನಯಾ
ಭೀಮ ಕಾಮಮುದಾದಿ ಪಾಪಗಳೆಲ್ಲ ನಿಲ್ಲದೋಡುತ್ತಿವೆ
ರಾಮರಾಮ ಮಹತ್ವವೆಂತಂಜು ನಿಂನ ವೀರ ಜಿನೇಶ್ವರಾ ॥ ೧ ॥

ಅಂತ್ಯ : ಶುದ್ಧ ವಂಶ ವಿಶುದ್ಧ ಗಾರ್ಹಸ್ಥ್ಯ ಸನ್ಮುನೀಂದ್ರುತ್ವಮಿಂದ್ರತ್ವಂ
ರುದ್ಧ ಭಕ್ರದರತ್ವಮಾರ್ಹಂತ್ಯ ಬಾರ ನಿರ್ವ್ವಾಣಮೆಂಬಿವು
ಸಿದ್ಧ ಚಿದ್ರೂಪ ನಿಂನ ದರ್ಮ್ಮವ ಹೊತ್ತು ನಿತ್ತರಿಪಾತಂಗೆ
ಸಿದ್ಧಿಯಾಗದುಳಿಯದದ್ಭುತವಲ್ಲ ವೀರ ಜಿನೇಶ್ವರಾ ॥ ೯ ॥
ಸಲೆ ಬೆಳಗುವರ ಇದು ರೋಗು
ನಿಲಲಾಪ್ಪುದೆ ತಮುದ ನೆರವಿ ಆತ್ಮದ್ಯಾನಂ
ನೆಲೆಗೊಂಡು ನಿಂನೊಳೊಂದಿರೆ
ತೊಲಗದೆ ನಿಂದಪುದೆ ಕರ್ಮ್ಮ ನಿರ್ಮ್ಮಲ ಚರಿತಾ ॥ ೧೬ ॥

ವಿಷಯ : ಜಿನೇಶ್ವರ ಸ್ತುತಿ

ವಿಶೇಷ : ಇದೇ ಗ್ರಂಥದಲ್ಲಿ ಹಲವಾರು ವಿಭಾಗಕ್ಕೆ ಸೇರಿದ ಪತ್ರಗಳಿವೆ. ೭೮ರಿಂದ ೧೧೪ರವರೆಗೆ ಪತ್ರ ಸಂಖ್ಯೆಯಿದ್ದು, ಮುಂದೆ ಸಂಕೀರ್ಣ ಓಲೆಗಳಿವೆ. ಇದೇ ಕಟ್ಟನಲ್ಲಿ ಯೋಗಾಮೃತ, ಲೋಕಾಕಾರಸ್ವರೂಪ, ದೇವರಾಜವಲ್ಲ ಭಾಷ್ಟಕ, ಅನುಪ್ರೇಕ್ಷೆ, ಶಾಸ್ತ್ರಸಾರಸಮುಚ್ಚಯವೆಂಬೀ ಗ್ರಂಥಗಳಿವೆ. ಪ್ರಸ್ತುತ ಗ್ರಂಥದಲ್ಲಿ ಷೋಡಶಭಾವನೆಯ ನೋಂಪಿಯ ಸ್ತೋತ್ರಗಳಿವೆ.

568

ಕೆ. ೩೧೧	**ಜೀವಂಧರ ಚರಿತ್ರೆ**	ಭಾಮಿನೀಷಟ್ಪದಿ
೧೧.೨"×೧.೮"	ಭಾಸ್ಕರ	೧೮೨೪
೧-೯೩ ಪತ್ರ	೯ ಪಂಕ್ತಿ	೫೨ ಅಕ್ಷರ

ಆದಿ : ಶ್ರೀ x x ಜೀವಂಧರನ ಷಟ್ಪದ ಬರೆಯುವುದಕ್ಕೆ ಶೋಭನಮಸ್ತು.
ಸೂ॥ ರಾಯ ಮಗಧ ನೃಪೇಂದ್ರ ಚಂದ್ರನ
ಜೇಯನೆನಿಪ ಸುಧರ್ಮಮುನಿಪನು
ವಾಯಿಯಿಂದರುಪಿದನು ಜೀವಂಧರನ ಸುಚರಿತೆಯಾ ॥
ಶ್ರೀಮದಖಿಳೇಂದ್ರೋತ್ತಮಾಂಗ
ಸ್ತೋಮ ಮಣಿ ಮಕುಟಾಂಶು ಚಂಚ
ತ್ಕೋಮಲಾಂಘ್ರಿದ್ವಯನಚಿಂತನಜಾತನದ್ವಿತಯಾ
ಕಾಮಮದಹರನಮಳಮುಕ್ತಿ
ಶ್ರೀ ಮುಖಾಬ್ಜದಿನೇಶನರ್ಹ
ತ್ಸ್ವಾಮಿ ಮುದದಿಂದೀಗೆಮಗೆ ಕೈವಲ್ಯಸಂಪದವಾ ॥ ೧ ॥

ಅಂತ್ಯ : ಶರಗತಿತ್ರಯ ಚಂದ್ರ ಸಂಖ್ಯೆಯ
ವರ ಶಖಾಬ್ದಕ್ರೋಧಿ ಸಂವ
ತ್ಸರದ ಪಾಲ್ಗುನ ಶುದ್ಧದಶಮಿ ದಿನೇಶವಾರದಲೀ
ಮೆರವ ಪೆನಗೊಂಡೆ ಸುಶಾಂತೀ
ಶ್ವರನ ಜಿನವಾಸದಲಿ ಜೀವಂ
ಧರನ ಚರಿತೆಯ ರಚಿಸಿದನು ಜಾಣ್ಮೆಯಲಿ ಭಾಸ್ಕರನೂ ॥ ೧೯ ॥
ಇದು ವಿನಮದಮರೇಂದ್ರ ಶ್ರೀ ಜಿನ
ಪದಕಮಲಷಟ್ಚರಣ ವಾಣೀ
ವದನ ದರ್ಪಣ ಭೂಸುರೋತ್ತಮ ಬಸವಣಾಂಕಸುತಾ

ಚದುರಭಾಸ್ಕರರಚಿತ ಧರ್ಮ
ಪ್ರದನ ಜೀವಂಧರ ಚರಿತೆಯೊ
ಳಿದುವೆ ನಿರ್ವಾಣಾದಿವರ್ಣನೆ ಈ ಪ್ರಬಂಧದಲಿ ॥ ೨೦ ॥

ಅಂತು ಸಂಧಿ ೧೮ಕ್ಕಂ ಪದನು ೧೦೦೦ಕ್ಕ ಮಂಗಳ ಮಹಾ ಶ್ರೀ x x x ಶ್ರೀ ತ್ಪಂಡಿತಯ್ಯನು ಬರೆದುಕೊಟ್ಟ ಜೀವಂಧರ ಷಟ್ಪದಿಗೆ ಭದ್ರಂ ಭೂಯಾತ್ ಸಂನ್ ೧೮೯೧ ಖರನಾಮಸಂವತ್ಸರದ ಆಶ್ವೀಜ ಬಹುಳ ೫ ಗುರುವಾರ ದಲು x x x ಮಹಾ ಶ್ರೀ

ವಿಷಯ : ಜೀವಂಧರನ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

569

ಕೆ.ಬಿ. ೬೫	**ಜೀವಂಧರ ಚರಿತ್ರೆ**	ಭಾಮಿನೀಷಟ್ಪದಿ
೭.೭"×೬.೩"	ಭಾಸ್ಕರ	೧೪೨೪
೧-೧೮೮ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ ಜೀವಂಧರ ಷಟ್ಪದ ಬರೆಯುವದಕ್ಕೆ ನಿರ್ವಿಘ್ನಮಸ್ತು
ಸೂಚನೆ॥ ರಾಯ ಮಗಧನೃಪೇದ್ರಚಂದ್ರನ
ಜೇಯನೆನಿಪ ಸುಧರ್ಮಮುನಿಪನು
ವಾಯಿಯಿಂದರುಹಿದನು ಜೀವಂಧರನ ಸುಚರಿತೆಯಾ

ಪದನೂ॥ ಶ್ರೀಮದಖಿಳೇಂದ್ರೋತ್ತಮಾಂಗ
ಸ್ತೋಮ ಮಣಿಮುಕುಟಾಂಶು ಚಂಚ
ತ್ಕೋಮಲಾಂಘ್ರಿದ್ವಯನಚಿಂತನಜಾತನದ್ವಿತಯಾ
ಕಾಮಮದಹರನಮಳಮಕ್ತಿ
ಶ್ರೀ ಮುಖಾಬ್ಜದಿನೇಶನರ್ಹ
ಸ್ವಾಮಿ ಮುದದಿಂದೀಗೆಮಗೆ ಕೈವಲ್ಯಸಂಪದವಾ ॥ ೧ ॥

ಅಂತ್ಯ : ಶರಗತಿತ್ರಯ ಚಂದ್ರಸಂಖ್ಯೆಯ
ವರ ಶಕಾಬ್ದಾಕ್ರೋಧಿಸಂವ
ತ್ಸರದ ಫಾಲ್ಗುಣ ಶುದ್ಧ ದಶಮಿ ದಿನೇಶವಾರದಲಿ

ಮೆರೆವ ಪೆಸುಗೊಂಡೆಯ ಸುಶಾಂತೀ
ಶ್ವರನ ಜಿನವಾಸದಲಿ ಜೀವಂ
ಧರನ ಚರಿತೆಯ ರಚಿಸಿದನು ಜಾಣ್ಮೆಯಲಿ ಭಾಸ್ಕರನು॥ ೧೯ ॥

ಗದ್ಯ॥ ಇದು ವಿನಮುದಮುರೇಂದ್ರ ಶ್ರೀಜಿನ
ಪದಕಮುಲ ಷಟ್ಚರಣವಾಣೀ
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತಾ
ಚದುರಭಾಸ್ಕರರಚಿತ ಧರ್ಮ
ಪ್ರದನ ಜೀವಂಧರನ ಚರಿತೆಯೊ
ಳಿದುವೆ ನಿರ್ವಾಣಾದಿವರ್ಣನೆ ಈ ಪ್ರಬಂಧದಲಿ

ವಿಷಯ : ಜೀವಂಧರನ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿಯೂ ಸುಂದರವಾಗಿಯೂ ಇವೆ.

570

ಕೆ. ಬಿ. ೧೨೭	**ಜೀವಂಧರ ಚರಿತ್ರೆ**	ಸಾಂಗತ್ಯ
೭.೬"×೬.೪"	ಬ್ರಹ್ಮಸೂರಿ	?
೧–೧೦೨ ಪತ್ರ	೧೬ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಜೀವಂಧರಚರಿತ್ರೆ ಪ್ರಾರಂಭ ....
............ದಿರಲಲ್ಲಿಗೆಯ್ದಿದನಾಪೊತ್ತು ವನಪಾಲನೊರ್ವ ॥ ೧೨ ॥
ಹೊಸ ನನೆ ಪೂಫಲಗಳ ಕಾಣಿಕೆಯಿ
ತ್ತುಸುರಿದ ವೀರಜಿನಪನಾ
ವಸುಧೇಶ ಕೇಳು ಸಮುವಸರಣವು ಬಲೋ
ಪಮುಮುದು ವಿಪುಲಾದ್ರಿಗೆಂದಾ ॥ ೧೩ ॥
ವೀರಜಿನರು ವಿಪುಲಾದ್ರಿಗೆಯ್ದಿದರೆಂಬ
ಸಾರವಚನಗೇಳಿ ಕೊಡುವಾ
ಕಾರುಣ್ಯದಿಂ ವನಪಾಲನಿಗಿತ್ತಂದು
ಭೇರಿಯ ಪೊಯ್ಸಿದನರಸಾ ॥ ೧೪ ॥

ಅಂತ್ಯ: ಬೆಡಗು ಬಿನ್ನಣ ಬಿಂಕ ನವರಸಭರಿತದ
ನುಡಿಗೇಳ್ವುದಖಿಲವರ್ಣಗಳಾ

ಗಡಣದಿಂದ ಪತ್ತು ಸಂಧಿಗಳಿಂ ಕೃತಿ
ಕಡು ರಯ್ಯಮಾಗಿ ಪೂರಿಸಿತು ॥ ೪೩ ॥
ಅಂತು ಸಂಧಿ ೨೦ಕ್ಕಂ ಪದನು ೧೪೪೯ಕ್ಕಂ ಮಂಗಳಮಹಾಶ್ರೀ

ವಿಷಯ: ಜೀವಂಧರನ ಕಥೆ.

ವಿಶೇಷ: ಆದಿಯಲ್ಲಿ ಗ್ರಂಥ ಲುಪ್ತವಾಗಿದೆ.

571

ಕೆ. ಎ. ೯೨	**ಜೀವನ್ಮುಕ್ತಿತತ್ವಬೋಧನಸಾರ**	ಹಾಡು
೧೪"×೯.೨"	ಸುಬ್ಬರಾಯ	?
೧-೩೦ ಪತ್ರ	೨೩ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ x x ಜೀವರ್ನ ಮುಕ್ತಿತತ್ವಬೋಧನಸಾರ ಬರಯುವದಕ್ಕೆ ನಿರ್ವಿಘ್ನೆ ಮಸ್ತೂ॥
ವಂದಿಸುವೆ ನಿಂನ್ನಯ ಚರಣದಲ್ಲಿ ಬಿಂನ್ನೈಸುವೆನು ಗಜಮುಖನೆ
ಯಂನ್ನಯ ವಾಣಿಯಲಿ ಹರಿಭಕ್ತಿ ಹರಿಕಥಾಮ್ರುತಸಾರವನು ಸವಿ
ಸವಿದುಂಡು ಜೀಂವರ್ನಮುಕ್ತರಿಗೆ ಯಿಾ ಕಥೆಯು ನಿರ್ವಿಘ್ನೆದಲ್ಲಿ
ಪಾಲಿಸು ಗೌರೀಸುತನೆ ಮೊರೆಯಿಟೇ ಪ್ರಸನ್ನವೇಣುಗೋಪಾಲ
ವಿಠಲನ ಚರಣದಲ್ಲೀ ॥ ೧ ॥

x x x x

(೨ನೆಯ ಪತ್ರ)
ಬಹುಧಾಂನ್ಯವತ್ಸರದ ಚೈತ್ರ ಶುಕ್ಲ ಪ್ರತಿಪದ
ಸ್ಥಿರವಾರ ಸೂರ್ಯ್ಯೊವುದಯ ಕಾಲದಿ
ಪ್ರುಥುವಿಗೊಡೆಯನು ತಿರುಪತಿಯ ವೇಂಕಟೇಶನ ಸಂನ್ನಿಧಿಯ
ಚೌನರುಷಿಗಳು ದಿಗ್ಗಾವೀ ಶ್ರೀನಿವಾಸಾರ್ಯ್ಯರು
ಯಿಾ ಸ್ತಳದಿ ಮಹಾರಾಜ ಕೃಷ್ಣ ಭೂಪತಿಯ ರಾಷ್ಟ್ರದಲೀ
ಮಾರಿಕಾದ್ರುಷ್ಠಶಕ್ತಿಗಳ ವುಪದ್ರದಲಿ ಜನಗಳು
ಕಷ್ಟ ಪಡುವದು ಕಂಡು ಯಿಾ ಪಟ್ಟಣದ
ಪತಿಗೊಲಿದು ಯಿಾ ರಾತ್ರೆ ಕಾಲದಿ ಯಿಾ ದೇಹ ವಳಬಾಗಿಲೊಳು
ಲೌಕೀಕದೊಳು ಸುಬರಾಯ್ಯನೆಂಬೊ ಅಂಕಿತದಿ

ಬಾಳುವ ಶಕ್ತಿಯನು ಕಳದೂ ಸ್ವಪ್ನದಲಿ ದಿಗ್ಗಾವೀ
ಶ್ರೀನಿವಾಸಾರ್ಯರು ಅನುಗ್ರಹಿಶಿ ಹಸ್ತದಿ ಕೊಟ್ಟ
ಮೂರಂಗಾರ ಮಂತ್ರಾಕ್ಷತೆಯು ಹಣವಂದೂ।

ಅಂತ್ಯ: ಶ್ರಿಷ್ಟಿಗದಿಕ ಪ್ರಸಂನ್ನವೇಣುಗೋಪಾಲ ವಿಠಲನು
ಅವರವರ ಯಿಷ್ಟಾರ್ಥಗಳ ಬೆಂಬಿಡದೆ
ಕೊಡುತಿಹ ಗೋಪಾಲಕೃಷ್ಣಗೆ ಜಯ ಜಯಾ ‖ ೧೨ ‖

ಶೋಭಕೃತು ಸಂವತ್ಸರದ ಆಷಾಡಶುದ್ದ ೫ ರಾತ್ರೆಯಲಿ ಯೀಕಥೆಯ ರಚಿಸುವ ತೆರದಿ ಸ್ವಪ್ನದಿ ಗುರುಸೂಚನೆ ಆಗ್ನ್ಯೆಯಲಿ ಹರಿಪ್ರಸಾದ ವರದಿಂದ ನುಡಿಶಿದ ತೆರದಿ ನಾನು ನುಡಿದೇ‖ ಅಂತ್ತು ಸೂಚುನೆ ...ಕೆ....ಡು೧೨ಕೆ ಮುಂಗಳ ಮಹಾಶ್ರೀ.

x x x x

ರೋಮರೋಮಗೆ ಕೋಟ್ಯ ಲಿಂಗವಥ ಆಶಿದಾ
ಭೀಮನ ನೆನೆದರೆ ಭಯಬಿಟ್ಟು ಹೋಗುವದು ‖ ೨ ‖
ಪುರಂದರ ವಿಠಲನ ಪೂಜೆಯ್ಯ ಮಾಡುವ
ಗುರು ಮಧ್ವರಾಯರ ಸ್ಮರಣೆ ಮಾಡುವರಿಗೆ ಅಂಜಿಕಿಂ ‖ ೩ ‖
ಶ್ರೀ ಶ್ರೀ ಶ್ರೀ ಸುಳಾದಿ ಪ್ರಾರಂಭ

ವಿಷಯ: ಭಕ್ತಿಯ ಹಾಡುಗಳು.

ವಿಶೇಷ: ಪ್ರತಿ ಶಿಥಿಲವಾಗಿದೆ. ೨೪,೨೫ ಖಾಲಿ ಪತ್ರಗಳು. ೨೬ನೆಯ ಪತ್ರದಲ್ಲಿ 'ದೇವರನಾಮ ಬರೆಯುವುದಕ್ಕೆ ನಿರ್ವಿಘ್ನಮಸ್ತು' ಎಂದು ಪ್ರಾರಂಭವಾಗಿ ಕೆಲವು ಸಂಸ್ಕೃತ ಶ್ಲೋಕಗಳಿದ್ದು ಮತ್ತೆ ೩೦ನೆಯ ಪತ್ರದವರೆಗೂ ಹಾಡುಗಳೇ ಇವೆ. ಈ ಗ್ರಂಥವ ಪತ್ರಗಳು ಕೈಯಿಂದ ತಯಾರಿಸಿದವು.

572

ಕೆ ೩೦೪ | ಜೀವಸಂಬೋಧನೆ | ಚಂಪು
೬.೬"×೨.೧' | ಬಂಧುವರ್ಮ | ಸು ೧೨೦೦
೧-೧೪೧ ಪತ್ರ | ೧೧ ಪಂಕ್ತಿ | ೪೦ ಅಕ್ಷರ

ಆದಿ: ....ತ್ರೈಗೀಶ್ವರಾಯ ನಮಃ ‖

ಯೇನ ಸ್ವಯಂಬೋಧಮಯೇನ ಲೋಕಾ ಆಶ್ವಾಸಿತಾಃ.... ...ನ ಮೋಕ್ಷ ಮಾರ್ಗ್ಗೆ ತಮಾಧಿನಾಥಂ ಪ್ರಣಮಾನಿತ್ಯಂ॥

X X X X

ಶ್ರೀ ನಾರೀರಮಣೀಯ ಪಾದಕಮಲಂ ಶುದ್ಧ ಪ್ರಸಿದ್ಧಂ ಲಸ
ದ್ಧಾಜ್ಞಾನಾದಾರಮ ಪಾರಸ್ಪೃಗ್ಜ್ಞಳ ಸುಖಖ್ಯಾತಂ ವಿನೂತಂ ವಿನೇ
ಯಾನೀಕಪ್ರವಿರಾಜಿತಂ ತ್ರಿಭುವನಾದೀಶಂ ಜಿನೇಶಂ ಸಮಾ
ಧಾನ ಪ್ರಾಪ್ತಿಯನೀಗೆ ಭವ್ಯನಿಕರಕ್ಕೌಚಿತ್ಯಮಂ ಸ್ತುತ್ಯಮಂ ॥

X X X X

ಅರಿವಿಲ್ಲದೇತಕ್ಕೆಡೆಯೊ
ಳ್ತರಿಸಲ್ಲದೆ ತೊಡರ್ದ್ದ ನಮೆವ ಜೀವಕ್ಕೆಲ್ಲಂ
ನೆರೆಯೆ ಹಿತಮೆಂದು ಬಗೆದಿದ
ನರಿಪುವೆಸರಿವಂತು ಜೀವ ಸಂಬೋಧನೆಯಂ ॥ ೭ ॥

ಅಂತ್ಯ: ನುತವಂಶೋತ್ತಮ ಬಂಧುವರ್ಮ್ಮರಚಿತಂ ಶ್ರೀ ಜೀವಸಂಬೋಧನೋ
ನ್ನತನಾಮಪ್ರವಿರಾಜಿಯುಂ ನೆಗಳ್ದನುಪ್ರೇಕ್ಷಾದಿರಭ್ಯುಪಾ
ಶ್ರಿತಮಂ ಭಾವಿಸೆ ಧರ್ಮ್ಮ ನಿಲ್ಗುಮದರಿಂದಷ್ಟಾಗಮ ಸಂಬಂಧನ
ಕ್ಷತಿಯಂ ಮಾಡಿ ಗೆಲ್ದು ಪಡೆವರ್ ಸಂಸಿದ್ಧಿಯಂ ಸಿದ್ಧಿಯಂ ॥

X X X

ಯಿದು ಜಿನಶಾ ನ ಪ್ರಭಾಸನ ಶೀಲೋ..........ವಿಧಿತ ಬಂಧುವರ್ಮ್ಮ ನಿರ್ಮ್ಮಿತಮಪ್ಪ ಜೀವಸಂಬೋಧನಾ ಗ್ರಂಥಾವತಾರದೊಳ್ ಧರ್ಮ್ಮಾಭಿದಾನಂ...............ಧಿಕಾರಂ॥ ಯಿಾ ಜೀವಸಂಬೋಧನಾಗ್ರಂಥವು। ಪಟ್ಟಣದ ಆದೀಶ್ವರಸ್ವಾಮಿಯವರ ಚೈತ್ಯಾಲಯದ ಮುಂದಣ ಮಾನಸ್ತಂಭದ ಜಗತಿಮೇಲೆ ಉತ್ತರಮುಖವಾಗಿ ಪ್ರಾರಂಭ ಆ ಬಳಿಯಲ್ಲಿ ಗ್ರಂಥವು ಪೂರ್ನ್ನವಾಯಿತು ರಾಜೈಯ್ಯ ಬರದನೂ। ಭದ್ರಂ ಶುಭಂ ಮಂಗಲಂ ಶ್ರೀ॥

ವಿಷಯ: ನೀತಿ, ವೈರಾಗ್ಯ ವಿವರಣೆಗಳನ್ನೊಳಗೊಂಡ ಜೈನತತ್ವ.

ವಿಶೇಷ: ಸುಂದರ ಬರಹ. ೧–೧೧ ನೆಯ ಗರಿಗಳ ಅಂಚು ಮುರಿದಿದೆ. ೨೭ ನೆಯ ಗರಿಯಿಲ್ಲ.

573

ಕೆ.ಬಿ. ೩ | ಜೀವ ಸಂಬೋಧನೆ | ಚಂಪು
೭.೯″ × ೬.೩″ | ಬಂಧುವರ್ಮ | ಸು. ೧೨೦೦
೧–೧೭೦ ಪತ್ರ | ೧೪ ಪಂಕ್ತಿ | ೨೦ ಅಕ್ಷರ

ಆದಿ: ಶ್ರೀ ಜೀವಸಂಬೋಧನಾ ಗ್ರಂಥ
ಶ್ರೀನಾರೀರಮಣೀಯ ಪಾದಕಮಲಂ ಶುದ್ಧ ಪ್ರಸಿದ್ಧಂ ಲಸದ್
ಜ್ಞಾನಾಧಾರನಪಾರ ದೃಗ್ಬಲ ಸುಖಾಖ್ಯಾತಂ ವಿನೂತಂ ವಿನೇ
ಯಾನೀಕ ಪ್ರವಿರಾಜಿತಂ ತ್ರಿಭುವನಾಧೀಶಂ ಜಿನೇಶಂ ಸ.ಮ
ಧ್ಯಾನ ಪ್ರಾಪ್ತಿಯನೀಗೆ ಭವ್ಯನಿಕರಕ್ಕೌಚಿತ್ಯಮಂ ಸ್ತುತ್ಯಮಂ ॥೧॥

ಅಂತ್ಯ:
ವೃ॥ ಮೃತವೈಶ್ಯೋತ್ತಮ ಬಂಧುವರ್ಮರಚಿತಂ ಶ್ರೀ ಜೀವಸಂಬೋಧನಾ
ನ್ವಿತನಾಮ ಪ್ರವಿರಾಜಿತಂ ನೆಗಳ್ದನುಪ್ರೇಕ್ಷಾಧಿಕಾರಾಭ್ಯುಪ
ಶ್ರುತಮಂ ಭಾವಿಸೆ ಧ್ಯಾನ ನಿಲ್ಪುಮದರಿಂ ದುಷ್ಟಾಘ ಸಂಬಂಧನ
ಕ್ಷತಿಯಂ ನೆಟ್ಟನೆ ಮಾಡಿ ಗೆಲ್ದು ಪಡೆವಿರ್ ಸಂಸಿದ್ಧಿಯಂ
ಶುದ್ಧಿಯಂ ॥ ೧೧೯ ॥
ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ ಬಂಧುವರ್ಮನಿರ್ಮಿತಮಪ್ಪ ಜೀವಸಂಬೋಧನಾ ಗ್ರಂಥಾವತಾರದೊಳ್ ಬೋಧ್ಯಭಿಧಾನಂ ದ್ವಾದಶಾಧಿಕಾರಂ ಸಮಾಪ್ತಂ॥ ಶ್ರಿಯೈ ನಮಃ ಶ್ರೀಃ

ವಿಷಯ: ಜೈನ ಸಿದ್ಧಾಂತ. ಜೀವನಿಗೆ ಅನಿತ್ಯತ್ವಾದಿಗಳನ್ನು ಉಪದೇಶಗೈದು ಶುದ್ಧಿ ಸಿದ್ಧಿಗಳನ್ನುಂಟುಮಾಡುವ ವಿಚಾರ.

ವಿಶೇಷ: ಪ್ರಥಮಾಧಿಕಾರದಿಂದ ದ್ವಾದಶಾಧಿಕಾರ ಪೂರ್ತಿಯಿರುತ್ತದೆ. ರಕ್ಷಾ ಕವಚ ಒಡೆದು ಪತ್ರಗಳು ಶಿಥಿಲವಾಗಿವೆ. ಸ್ಫುಟಾಕ್ಷರ.

574

ಕೆ. ಬಿ. ೧೮೧ | ಜೀವಸಂಬೋಧನೆ | ಚಂಪು
೭.೯″ × ೬.೩″ | ಬಂಧುವರ್ಮ | ಸು ೧೨೦೦
೧–೫೪ ಪತ್ರ | ೧೯ ಪಂಕ್ತಿ | ೩೦ ಅಕ್ಷರ

ಆದಿ: ಜೀವ ಸಂಬೋಧನೆ ಬರೆಯುವುದಕ್ಕೆ ಶುಭಮಸ್ತು
ಯೇನ ಸ್ವಯಂ ಬೋಧಮಯೇನ ಯೇಕಾ
ಆಶ್ವಾಸಿತಾಃ ಕೇಚನ ವಿತ್ತ ಕಾರ್ಯೇ

ಪ್ರಬೋಧಿತಾಃ ಕೇಚನ ಮೋಕ್ಷಮಾರ್ಗೇ
ತಮಾಧಿನಾಥಂ ಪ್ರಣಮಾಮಿ ನಿತ್ಯಂ ॥೧॥ x x
ಶ್ರೀ ನಾರೀರಮಣಿಯು ಪಾಸಕಮಲಂ ಶುದ್ಧ ಪ್ರಸಿದ್ಧಂ ಲಸ
ದ್ಜ್ಞಾನಾಧಾರನಪಾರ ಹೃದ್ಬಳ ಸುಖಖ್ಯಾತಂ ವಿನೂತಂ ವಿನೆ
ಯಾನ್ವಿತ ಪ್ರವಿರಾಜಿತಂ ತ್ರಿಭುವನಾಧೀಶಂ ಜಿನೇಶಂ ಸಮಾ
ಧಾನ ಪ್ರಾಪ್ತಿಯನಗೆ ಭವ್ಯನಿಕರಕ್ಕೌಚಿತ್ಯಮುಂ ಸ್ತುತ್ಯಮುಂ ॥೧॥

ಅಂತ್ಯ : ವ॥ ಆವಾವುವೆಂದೊಡಾಜ್ಞಾವಿಚಯಮುಪಾಕವಿಚಯ ಸಂಸ್ಥಾನ
ವಿಚಯಮೆಂಬ ನಾಲ್ಕುಂ ತೆರದ ಧರ್ಮ್ಯಧ್ಯಾನಮುಂ ನಿಶ್ಚಯಮಾಗಿ
ನಿರಿಸುವುದೂ x x x
ಭವಾರ್ಣವೇ ಜಂತು ಸಮೂಹಮೇನ
ಮಾಕರ್ಷಯಾಮಾಸ ಹಿ ಧರ್ಮ ಹೋತಾತ್
ಮಜ್ಜಂತಮುದ್ದಿಶ್ಯ ಯೇ ಯೇನ ಸೋಪಿ
ತಂದಿರನಾಥಂ ಪ್ರಣಮಾಮಿ ಭಕ್ತ್ಯಾ ॥೩೪॥

ಗದ್ಯಾ॥ ಇದು ಜಿನಶಾಸನ ಪ್ರಭಾಸನ ಶಿಲೋದಿತ ವಿಧಿತ ಬಂಧುವರ್ಮ
ನಿರ್ಮಿತಮಪ್ಪ ಜೀವಸಂಭೋದನಾ ಗ್ರಂಥಾವತಾರದೋಳ್ ಧರ್ಮಾಭಿದಾನಂ
ದ್ವಾದಶಾಧಿಕಾರಂ ॥ ೧೨ ॥ ಶ್ರೀವರ್ಧಮಾನತೀರ್ಥಂಕರಾಯ ನಮಃ ॥ ಶ್ರೀ.

ವಿಷಯ : ಜೀವನನ್ನು ಸಂಬೋಧಿಸಿ ಹೇಳಿರುವ ಜೈನ ಮತದ ತತ್ತ್ವಗಳು.

ವಿಶೇಷ : ಶಿಥಿಲ. ಪತ್ರಗಳು ಬಹು ತೆಳುವಾಗಿವೆ. ಎರಡು ತರಹ ಬರವಣಿಗೆ ಯಿದೆ. ಕೊನೆಯ ಕೆಲವು ಪತ್ರಗಳು ಮೊದಲನೆಯುವಕ್ಕಿಂತ ಸ್ವಲ್ಪ ದೊಡ್ಡವಾಗಿವೆ.

575

ಕೆ ೫೯/೧	ಜೈನ ಕಥೆಗಳು	ಗದ್ಯ
೧೬.೫"×೧.೯"	?	?
೧–೪೬ ಪತ್ರ	೭ ಪಂಕ್ತಿ	೭೫ ಅಕ್ಷರ

ಆದಿ : ನಿಃಶಂಕಿತನಪ್ಪಂಜನಚೋರನ ಕಥೆಯೆಂತೆಂದೊಡೀ ಜಂಬೂದ್ವೀಪದ
ಭರತಕ್ಷೇತ್ರದ ಜನಜನ ... . ಟ್ಟಸುವಂದಂಗಂ ತತ್ಸತಿ ಸುನಂದೆಗಂ
ದನ್ವಂತ್ರಿ ಎಂಬ ಮಗನಾದಂ ಮತ್ತಾ ಪುರಾದಿಪತಿಯ ಪುರೋಮಿತನಪ್ಪ

ಶೋಮಶರ್ಮ್ಮನಿಗಮನಿರೆಗಂ ವಿಶ್ವಾನುಲೋಮನೆಂಬ ತನೆಯನಾದನಾತಂಗಮಾ ದನ್ವಂತರಿಗಂ ಬಾಲಕಾಲ............ತೊಡಗಿ ಪರಮ ಮಿತ್ರತ್ವಮಾಗಿ ಸಲೆ ವಿಟಜನ ಪ್ರಸಂಗದಿಂ ಸಪ್ತವ್ಯಸನಾಭಿಭೂತರಾದರಂ

ಅಂತ್ಯ : ಕಲ್ಪವೃಕ್ಷದ ಪೂಮಳೆಯುಮಂ ದೇವದುಂದುಭಿಗಳಂ ದೇವಾಂಗನಾನೃತ್ಯಮುಮಂ ಜಯ...............ಗಂಗಳುಮಂ ನಿವೇದಿಸುವನಾತನಾಕಿನಿ ನಿಕಾಯಮುಮಂ। ಭೋಂಕೆನೆ ಕಂಡಿದೆಲ್ಲಮೆತ್ತಣದಾನೆತ್ತಣನೆನಿಮಿತ್ತಮಿಲ್ಲ ಪುಟ್ಟಿದೆನೆಂಬುದುಮಾಗಳೆನಗೆ ಭವಪ್ರತ್ಯಯಮಪ್ಪವದಿಜ್ಞಾನಂ ಪುಟ್ಟಲಱಿದೆಂನ ಪೂರ್ವ್ವಭವ..........ಱಿದು ಪೂಜ್ಯಾಮಹಾತ್ಮ್ಯಮಂ ಭವ್ಯಜನಕ್ಕೆಲ್ಲಮ..........ಪಲೆಂದು ಭೇಕಚಿಹ್ನಮಂಮಾಡಿ ಬಂದೆನಾ ಭೇಕ ಕಳೇವರಂ ಪುಷ್ಪಮಂ ಕಚ್ಚಿಕೊಂಡಿರ್ದ್ದುದೆಂಬುದಂ ಕೇಳ್ದು ಸಮಸ್ತಜನಂಗಳೆಲ್ಲಂ ಪೂಜಾನುರಾಗ ಪರಿ............ಕಾಣದಿಂ ಪುಣ್ಯಾರ್ತ್ಥಿಗಳೆಲ್ಲಂ ಜಿನಪೂಜಾನಿರತರಕ್ಕೆಂಬುದು ಕಥಾತಾತ್ಪರ್ಯ್ಯಂ.

ವಿಷಯ : ಜೈನ ನೋಂಪಿಯ ಕಥೆಗಳು.

ವಿಶೇಷ : ಪತ್ರಗಳ ಅಂಚು ಮುರಿದಿದೆ. ಶಕಟರೇಫ ಪ್ರಯೋಗ ಇದೆ.

576

ಕೆ ೫೭೯	**ಜೈನಕಥೆಗಳು**	ಗದ್ಯ
೯.೮"×೧.೭"	?	?
೧–೮೬ ಪತ್ರ	೭ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ X X X ದಂಮಾರ್ಗಮುತದ ನಿಶಂಕೆ ಕಥೆ।
ನಿಃಶಂಕಿತನಪ್ಪಂಜನಚೋರನ ಕಥೆಯಂತೆಂದೊಡೆ ಜಂಭೂದ್ವೀಪದ ಭರತಕ್ಷೇತ್ರದ ಜನಪದ ವಿಷಯದ ಭೂತಿಲಕಪುರಮನಾಳ್ವ ಗುಣಮಾಲಾವಲ್ಲಭನಪ್ಪ ನರಪಾಲಸ್ರೇಷ್ಟಿ ಸುನಂದಗಂ ತತ್ಸತಿ ಸುನಂದೆಗಂ ದಂನ್ವತ್ರಿಯಂಬಮಗನಾದಂ ಮತ್ತಾ ಪುರಾದಿಪತಿಯ ಪುರೋಪೋತನಪ್ಪ ಶೋಮಶರ್ಮ್ಮನಿಗಮಗಿರೆಗಂ ವಿಶ್ವಾನುಲೋಮನೆಂಬ ತನಯನಾದ

ಅಂತ್ಯ : ಭವ್ಯಜನಕ್ಕೆಲ್ಲಮರಿಪಲೆಂದು ಭೇಕಚಿಹ್ನಮಂ ಮಾಡಿ ಬಂದೆನಾ ಬೇಕಕಳೇವರಂ ಪುಷ್ಪಮಂ ಕಚ್ಚಿಕೊಂಡಿರ್ದುದೆಂಬುದಂ ಕೇಳ್ದು ಸಮಸ್ತ

ಜನಂಗಳೆಲ್ಲಂ ಪೂಜಾನುರಾಗ ಪರಿಣತರಾದರದುಕಾರಣದಿಂ ಪುಂಣ್ಯಾ ರ್ತ್ಥಿಗಳೆಲ್ಲಂ ಜಿನಪೂಜಾನಿರತರಕ್ಕೆಂಬುದು ಕಥಾತಾತ್ಪರ್ಯ್ಯಂ ॥ ಶಾಲಿಗ್ರಾಮದಾ ಚಂನ್ನಂಮ್ಮನ ಮಟ್ಟಂನಿಗೆ ನರ್ಸಂಪುರದ ಬಸ್ತಿ ರಾಯುಂಣನು ಬರದುಕೊಟ್ಟ। ಇತಿ ಕಥಾಸಂಗ್ರಹ ಸಂಪೂರ್ಣ್ನ ಮಂಗಲಮಹಾಶ್ರೀ-

ವಿಷಯ : ಜೈನ ನೋಂಪಿಯ ಕಥೆಗಳು

ವಿಶೇಷ : ೫೩ ಮತ್ತು ೬೫ ರ ಎರಡೆರಡು ಪತ್ರಗಳಿವೆ.

577

ಕೆ. ಬಿ. ೩೯/೨	**ಜೈನಪ್ರಕ್ರಿಯಾ ಸಂಕಲನ ಗ್ರಂಥ**	ಪದ್ಯ, ಗದ್ಯ
೭.೮"×೬.೧"	?	?
೭೦-೨೭೮ ಪುಟ	೧೭ ಪಂಕ್ತಿ	೨೦ ಅಕ್ಷರ

ಆದಿ : ದ್ವಾದಶಾನುಪ್ರೇಕ್ಷೆ ।

ದ್ವಾದಶಾನುಪ್ರೇಕ್ಷೆಯನ್ನು ಬರೆಯುವದಕ್ಕೆ ಶುಭಮಸ್ತು ॥

ವೃತ್ತ ॥ ವನರಾಜ್ಯಂ ಸುರಚಾಪ ಬಂಧುಜನಮುಂ ಸಂಧ್ಯಾರುಣಂ ಮತ್ತವಾ
ರಣಮುಂ ವಾಜಿರತ್ನಂ ಪದಾತಿನಿವಹಂ ಶ್ರೀಯಕ್ಕ್ರಳುಂ ಪುತ್ರರುಂ
ಘನಮೇಘಂ ಕೃತಿರೂಪು ಯೌವನಬಲಂ ವಿದ್ಯುಚಲಂ ನೋಳ್ಪಡಂ
ನಿರುತಂ ನಂಬಲುಬ್ಯಾಡ ಜೀವ ನಿನಗಂ ಸಧರ್ಮ್ಮವೊಂದೆ ದ್ರುವಂ ॥ ೧ ॥
ಸುರಲೋಕಂಗಳ ಪೊಕ್ಕಡಂ ಯಿರದೆ ತಾಂ ಪಾತಾಳಮಂ ಪೊಕ್ಕಡಂ
ಗಿರಿದುರ್ಗಂಗಳೊಳಿರ್ದೊಡಂ ಶರಧಿಯಂ ಪಾಯ್ವಲ್ಲಿ ಪೋಗಿದ್ದರ್ಡಂ
ಭರದಿಂ ಪರ್ವ್ವತದರ್ಗದಲ್ಲಿ ಗುಹೆಯಂ ಪೊಕ್ಕಿದ್ದರ್ಡಿಂತೆಲ್ಲಿಯುಂ
ಶರಣಿಲ್ಲಂ ಪೆರತಾವ ಠಾವು ನಿಗಂ ಸದ್ಧರ್ಮ್ಮದುರ್ಗ್ಗಂ ವಿನಾ ॥ ೨ ॥

ಅಂತ್ಯ ತ್ರಿಜಗತ್ಸಾಮಿಗಳಿರ್ದಪರ್ ಧರೆಯೊಳೀಗಳ್ದೂರವಲ್ಲಿದ್ದೊಡೇ
ವಿಜಯಾರ್ದಂ ಹಿಮವದ್ಗಿಯುಂ ನಿಷದಮೆಂಬೀ ನಾಲ್ಕು ಪೆರ್ಗೋಟೆಗಳ್
ಪ್ರಜೆಗಡೈಸಿದ ವೈಸ್ಯಕಾಬ್ನರಿಮಡುತ್ತಾರ್ರಾಧನಂ ಮಾಡಿರೋ
ನಿಜದಿಂದೆಂಮಪರಾಜಿತೇಶ್ವರನುಮಂ ಶ್ರೀಮಂಧರಸ್ವಾಮಿಯುಂ ॥ ೧೨೭ ॥

ಗ್ರಂಥಪ್ರಮಾಣಂ ೩೧೮ ॥ ಯಿಂತಿ ಅಪರಾಜಿತ ಶತಕ ಸಂಪೂರ್ಣಂ

ಮಂಗಳಮಹಾಶ್ರೀ ॥

ವಿಷಯ : ಜೈನವೇದಾಂತ ಪ್ರಕ್ರಿಯೆ.

ವಿಶೇಷ : ಪುಸ್ತಕದ ಆರಂಭದಲ್ಲಿ ದಶಭಕ್ತಿ ಎಂಬ ಸ್ತೋತ್ರವೂ ವಿಷಯ ಸೂಚಿಯೂ ಇದೆ. ಬಳಿಕ ಯೋಗರತ್ನಾಕರವೆಂಬ ಗ್ರಂಥವಿದೆ. ಸಂಕಲನ ಗ್ರಂಥದಲ್ಲಿ ದ್ವಾದಶಾನುಪ್ರೇಕ್ಷೆ, ಪುರಾಣಸ್ತೋತ್ರ, ಗುಣಸ್ಥಾನಭೇದ, ಮಾರ್ಗಣಸ್ಥಾನಭೇದ, ಕರ್ಮಭೇದ, ಸಕಲಸಾರ ಶ್ಲೋಕ ಸಂಗ್ರಹ, ವ್ರತಸ್ವರೂಪ, ಸಮವಸರಣಸ್ತುತಿ, ಶಾಸ್ತ್ರಸಾರ ಸಮುಚ್ಚಯ, ಕ್ಷತ್ರ ಬ್ರಹ್ಮ ವೈಶ್ಯರ ಸೂತ್ರಗೋತ್ರ ವಿಚಾರ, ಕಂತಿಪ ಸಂಗ, ತತ್ತ್ವಾರ್ಥಸೂತ್ರ, ಚವೀಸ ತೀರ್ಥಂಕರಸ್ತುತಿ, ಧರ್ಮಕ್ಷೀಣಿತ ಆಗುವ ಕ್ರಮ, ಅಪರಾಜಿತ ಶತಕ, ಈ ಕೃತಿಗಳಿವೆ. ಕೊನೆಯ ಕೆಲವು ಪುಟಗಳಲ್ಲಿ, ಸೀಸು ಮತ್ತು ಸ್ವಪ್ನ ಫಲವಿದೆ. ತರುವಾಯ ೨೭೮ ರಿಂದ ೨೮೮ ವರೆಗೆ ಜೈನ ಪ್ರಕ್ರಿಯೆಗೆ ಸಂಬಂಧಿಸಿದ ಪತ್ರಗಳಿವೆ.

578

ಕೆ ೨೫	**ಜೈಮಿನಿ ಭಾರತೆ**	ವಾರ್ಧಕಷಟ್ಪದಿ
೧೭.೪″×೧.೫″	ಲಕ್ಷ್ಮೀಶ	ಸು ೧೬೫೦
೨–೧೭೧ ಪತ್ರ	೮ ಪಂಕ್ತಿ	೧೦೦ ಅಕ್ಷರ

ಆದಿ : ....ಭವನಂಣಮುಂಕನ ಸುತಂ ಲ
ಸದ್ವಿಸುತ ಕರ್ಣಾಟಕವಿಚೈತ್ರವನಸೂತ ಲಕ್ಷ್ಮೀಶನೆಂಬೋರ್ವನೂ
ಹೃದ್ವಜನದೊಳ್ ದೇವಪುರದ ಸಿರಿಯರಸನ ಪ
ದದ್ವಯವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಪ ಚಲ್ವಿಂದ ವಿಮಳಜೈಮುನಿ ಭಾರತದ ಕಥೆಯನೂ
|| ೧೨ ||

ಅಂತ್ಯ : ವುಪವನ ತಟಾಕಪ್ರತಿಷ್ಟೆ ದೇವಾಲಯ
ಪ್ರಪಿಗಳ ಸಕಲದಾನ ಧರ್ಮೋಪಕಾರ ವೇ
ದ ಪುರಾಣ ಶಾಸ್ತ್ರ ಶ್ರವಣದ ಪುಂಣ್ಯಕ್ಷೇತ್ರವಾಸ ತೀರ್ಥಸ್ನಾನದಾ
ಜಪಹೋಮ ಸುವ್ರತ ಸಮಾಧಿ ಯೋಗ ಧ್ಯಾನ
ತಪಸುಗಳ ಹರಿಹರಾರ್ಚನೆಯ ಸುಕ್ರುತಂಗಳಾ
ಧಪಊ ಜಯಮಿನಿಭಾರತದೋಳೊಂದು ವರ್ನ್ನವುಂ ಪ್ರೀತಿಇಂ ಕೇಳ್ದವರ್ಗೆ
|| ೪೪ ||

ಅಂತು ಸಂಧಿ ೩೩ಕ್ಕಂ ಪದನು ೧೯೦೩ಕ್ಕಂ ಜಯಮಂಗ್ಗಳ ಮಹಾಶ್ರೀ....ನಳ ಸಂವತ್ಸರದ ಜೇಷ್ಠ ಬ ೧೨ ಸೋಮವಾರ........ಊ ಕಾವಲ ನಾಗಪ್ಪಯ್ಯ ಗಳ ಕುಮಾರರು ಗಿರಿಯಪ್ಪಯ್ಯನವರಿಗೆ ಕಂಚಸಮುದ್ರದ ನಾರಣ್ಣನ........ ಜಯಮಿನಿ ಭಾರತದ ಪುಸ್ತಕಕ್ಕೆ ಸಕಲ ಐಶ್ವರ್ಯ................

ವಿಷಯ : ಭಾರತದ ಅಶ್ವಮೇಧಪರ್ವದ ಕಥೆ.

ವಿಶೇಷ : ಪ್ರತಿ ಶಿಥಿಲವಾಗಿದೆ. ೧,೧೬–೨೬, ೪೮, ೯೫, ೧೦೬, ೧೫೬, ೧೬೦ ಈ ಪತ್ರಗಳು ಇಲ್ಲ. ೮೭ ನೆಯ ಪತ್ರದನಂತರ ಬೇರೆ ಅದೇ ವಿಷಯ ವನ್ನೊಳಗೊಂಡ ಒಂದು ಪತ್ರ ಸೇರಿದೆ. ಎಂದರೆ ಒಂದೇ ವಿಷಯವಿರುವ ಎರಡು ಪತ್ರಗಳಿವೆ.

579

ಕೆ ೮೪/೧	**ಜೈಮಿನಿ ಭಾರತ**	ವಾರ್ಧಕ ಷಟ್ಪದಿ
೧೯"×೨.೧"	ಲಕ್ಷ್ಮೀಶ	ಸು ೧೬೫೧
೧–೧೫೫ ಪತ್ರ	೯ ಪಂಕ್ತಿ	೯೦ ಅಕ್ಷರ

ಆದಿ : ಜಯಮಿನಿ ಭಾರತಾ॥ ವಾರ್ಧಿಕ ಷಟ್ಪದಾ॥ ನಾಂದಿ ಪೀಟಿಕಾಪ್ರಕರಣಾ

ಸೂಚನೆ॥ ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭ
ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ
ತೀವಲಯದಮಳಸೌಭಾಗ್ಯ ರತ್ನಾಕರಂ ಪೇರ್ಚಿನಿಂ ಮೇರೆವರಿಯೇ
ಆವಗಂ ಸೆರಗ ಕರುಣಾಮೃತದ ಕಳೆಗಳಿಂ
ತೀವಿದೆಳೆನಗೆಯ ಬೆಳ್ದಿಂಗಳಂ ಪಸರಿಸುವ
ದೇವಪುರನಿಲಯ ಲಕ್ಷ್ಮೀರಮಣನಾಸ್ಯಚಂದ್ರಾನನಂ ನಮಗೀಯಲೀ ॥೧॥
ವಿದ್ವಸ್ವಭಾವ ಲಯಮರಿಯೆ ವಿರಚಿಸಿದಂ ಭ
ರದ್ವಾಜ ಗೋತ್ರಭವನಂಣಮಾಂಕನ ಸುತ ಲ
ಸದ್ವಿನುತ ಕರ್ನಾಟಕವಿಚೈತ್ರ ಚೂತಲಕ್ಷ್ಮೀಶನೆಂಬೋರ್ವನೂ
ಹೃದ್ವಜನದೊಳ್ ದೇವಪುರದ ಲಕ್ಷ್ಮೀಶನ ಪ
ದದ್ವಯವನಾವಗಂ ದ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಪ ಬಲ್ಪಿಂದ ವಿಮಲ ಜೈಮಿನಿಯ ಭಾರತ
ಕಥೆಯನೂ ॥ ೧೧ ॥

ಅಂತ್ಯ : ಪುಂಣ್ಯಮಿದು ಕ್ರಿಷ್ಣಚರಿತಾಮ್ರುತಂ ಸುಕವೀಂದ್ರ
ಗಂಣ್ಯಮಿದು ಶ್ರುಂಗಾರಕುಸುಮತರು ತುರುಗಿದಾ
ರಂಣ್ಯಮಿದು ನವರಸಪ್ರೌಡಿ ಲಾಲಿತ್ಯನಾನಾ ವಿಚಿತ್ರಂಗಳೀ
ಪುಂಣ್ಯಮಿದು ಶಾರದೆಯ ಸಂಮ್ಮೋಹನಾರಿಗ ಲಾ
ರ್ವಂಣ್ಯವಿ ದು ಭಾವಕರ ಕಿವಿಗೊದವಿದ ಹಿ
ರಂಣ್ಯಮಿದು ಭೂತಳದೊಳೆನೆ ವಿರಾಜಿಪುದು ಲಕ್ಷ್ಮೀಪತಿಯ ಕಾವ್ಯ
ರಚನೇ ॥ ೪೬ ॥

ಅಂತೂ ಸಂಧಿ ೩೩ ಕಾಂ ಪದನೂ ೧೯೩೬ ಕಾಂ ಮಂಗಳಮಹಾಶ್ರೀ x x x x x x ಶಾಲಿವಾಹನಶಕ ವರುಷಂಗಳು ೧೭೭೬ನೆ ಆನಂದ ಸಂವತ್ಸರದ ಮಾರ್ಗಶಿರ ಶುದ್ಧ ೯ ಮಂಗಳವಾರ ಸಾಯಂಕಾಲಕ್ಕೆ ಜೈಮಿನಿ ಸಮಾಪ ಯಿದ ಬರದಾತ ಮೈಸುರು ಸ್ಥಳದ ಅರಮನೆ ಭೊಕಸದ ಗುರಿಕಾರ್ರು ಕಾಡ್ಯೆಯನವರ ಮಕ್ಕಳು ಚಾಮ್ಯೆಯನವರ ಮಗ ಜೇಷ್ಠ ಪುತ್ರನಾದ ನಂಜಪ್ಪನು ಬರದ್ದು ....

ವಿಷಯ: ಭಾರತದ ಅಶ್ವಮೇಧಪರ್ವದ ಕಥೆ.

ವಿಶೇಷ: ೬೨ನೇ ಸಂಖ್ಯೆಯ ಎರಡು ಪತ್ರಗಳಿವೆ. ೭೯ನೆಯದು ಎರಡು ಪತ್ರಗಳಿವೆ; ಇದರಲ್ಲಿ ಒಂದು ಪತ್ರದಲ್ಲಿರುವುದೇ ಮತ್ತೊಂದು ಪತ್ರದಲ್ಲಿಯೂ ಇದೇ ೧೪೮ನೆಯ ಪತ್ರ ಇಲ್ಲದಿದ್ದರೂ ವಿಷಯ ಲೋಪವಿಲ್ಲ. ಇದೇ ಕಟ್ಟನಲ್ಲಿ ನಳಚರಿತ್ರೆ ಎಂಬ ಕೃತಿಯಿದೆ.

580

ಕೆ. ೧೨೪	ಜೈಮಿನಿಭಾರತ	ವಾರ್ಧಕ ಷಟ್ಪದಿ
೨೦"×೨.೨"	ಲಕ್ಷ್ಮೀಶ	ಸು. ೧೬೫೦
೧–೧೪೬ ಪತ್ರ	೧೦ ಪಂಕ್ತಿ	೭೦ ಅಕ್ಷರ

ಆದಿ : ಶುಭ x x ಜಯಿಮುನಿ ಬರೆಯೂದಕ್ಕೆ ನಿರ್ವಿಘ್ನಮಸ್ತು
ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭ
ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ
ತೀವಲಯದಮಲ ಸಉಭಾಗ್ಯ ರತ್ನಾಕರಂ ಪೆರ್ಚೆನಿಂ ಮೇರೆವರಿಯೆ

ಆವಗಂ ಸರಸಕರುಣಾಮೃತದ ಕಲೆಗಳಂ
ಶೀವಿದೆಳೆನಗೆಯ ಬೆಳ್ದಿಂಗಳಂ ಪಸರಿಸುವ
ದೇವಪುರನಿಲಯ ಲಕ್ಷ್ಮೀರಮಣನಾಸ್ಯಚಂದ್ರಾನಂದಮಂ
ನಮಗೀಯಲಿ || ೧ ||

X X X X

ವಿದ್ವತ್ಸಭಾವಲಯಮರಿದೆ, ವಿರಚಿಸಿದಂ ಭ
ರದ್ವಾಜಗೋತ್ರಭವನಂಣಮಾಂಕನ ಸುತ ಲ
ಸದ್ವಿನುತ ಕರ್ನಾಟಕವಿಚೈತ್ರವನಚೂತ ಲಕ್ಷ್ಮೀಶನೆಂಬೊರ್ವನೂ
ಹೃದ್ವನಜದೊಳ್ ದೇವಪುರದ ಸಿರಿಯರಸನ ವಿ
ದದ್ವಯವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಪ ಬಲ್ಪಿಂದ ವಿಮಳಜಯಿಮುನಿ ಭಾರತದ
ಕಥೆಯನೂ || ೧೨ ||

ಅಂತ್ಯ : ೨೬|| ಯನಲವರ ನುಡಿಗೇಳ್ದು ನಸುನಗುತ ಮುರಹರಂ
ವಿನಯದಿಂದರಸಂಗ್ಗೆ ನೇಮಿಸಿದಡಾ ಸಕಲ
ಜನಪತಿಗಳಂ ಧರಾವಲ್ಲಭಂ ಸತ್ಕರಿಸಿ ವಿವಿಧೋಪಚಾರದಿಂದಾ
ಮನವೊಲಿದು ಬಕದಾಲ್ಭ್ಯನಂ ಪೂಜೆಗೈದಖಿಳ
ಮುನಿಗಳಂ ಕೂಡಿಕೊಂಡಧ್ವರೊ ....

ವಿಷಯ: ಭಾರತದ ಅಶ್ವಮೇಧಪರ್ವದ ಕಥೆ.

ವಿಶೇಷ: ೨ ಮತ್ತು ೨೪ನೆಯ ಪತ್ರಗಳು ಮುರಿದುಹೋಗಿವೆ. ೯೨ರಿಂದ ೯೮ ರವರೆಗೆ ಪತ್ರಗಳಿಲ್ಲ. ಗ್ರಂಥವು ೩೦ನೆಯ ಸಂಧಿಯಲ್ಲಿ ೨೬ನೆಯ ಪದ್ಯದವರೆಗಿದೆ.

581

ಕೆ ೨೧೯	ಜೈಮಿನಿಭಾರತ	ವಾರ್ಧಕ ಷಟ್ಪದಿ
೧೬.೨"×೧.೫"	ಲಕ್ಷ್ಮೀಶ	ಸು. ೧೬೫೦
೪೬–೧೪೫ ಪತ್ರ	೮ ಪಂಕ್ತಿ	[redacted] ಅಕ್ಷರ

ಆದಿ : .... ನಾದ್ಯತುಳದಿಂದ ವಂದಿ .. ಳ
ಕಳಕಳದ ... ಭಸದಿಂ ಬಳಸಿದ.... ... ಪುರುಷ ಶ್ರೀ ಸಮೂಹದಿಂದಾ

ಪೊಳಲಂ ಪೊಗಲಾ ಯುಧಿಷ್ಟಿರನರೇಶರಂ
ನಿಳಯಗಳಲಿತಗಳನೆಲ್ಲ ...ತ್ಕರಿಸಿ....
ಕಳುಹಿ ನಿಜಭವನದೊಳ್ ದೇವಪುರ ಲಕ್ಷ್ಮೀಪತಿಯನುಪಚರಿಸು
ತಿರ್ದ್ದನೂ.॥ .. ॥

ಅಂತು ಸಂಧಿ ೭ಕ್ಕಂ ಪದನೂ ೩೮ಲಕ್ಕಂ ಮಂಗಳಮಹಾಶ್ರೀ

ಅಂತ್ಯ : ಕತ್ತಲೆಯ ಮನೆಗೆ ಮಣಿದೀಪವಾದಂತ್ತೆ
ಬತ್ತಿದ ಸರೋವರಕೆ ನವಜಲವೊದವಿದಂತ್ತೆ
ಬಿತ್ತರದ ಕಾವ್ಯರಚನೆಗೆ ದೇವತಾಸ್ತುತಿ ನೆಗಳ್ದಂತ್ತೆ ಭೂತಳದೊಳೂ
ಮತ್ತೆ ಸಂತಾನವಿಲ್ಲದ ಪುಳಿಂದನ ಬಾಳ್ಕೆ
ಗುತ್ತಮ ಕುಮಾ....ನಾದಂ ಚೆಂದ್ರಹಾಸನೆನ
ಲುತ್ತರೋತ್ತರಮಪ್ಪುದಚ್ಚರಿಯೆ ಸುರಪುರದ ಲಕ್ಷ್ಮೀವರನ
ಶರಣರೂ ॥ ೬೩ ॥

ಅಂತು ಸಂಧಿ ೨೭ ಕಂ ಪದನು ೧೫೬೭ ಕಂ ಮಂಗಳಮಹಾಶ್ರೀ

ವಿಷಯ: ಭಾರತದ ಅಶ್ವಮೇಧ ಪರ್ವದ ಕಥೆ.

ವಿಶೇಷ : ಪ್ರತಿಯು ಅಸಮಗ್ರವಾಗಿದೆ, ಶಿಥಿಲವಾಗಿದೆ. ೧೩ನೆಯ ಸಂಧಿಯಲ್ಲಿ ೩೩–೩೪ ಪದ್ಯಗಳು ಬಿಟ್ಟುಹೋಗಿವೆ.

582

ಕೆ ೨೬೪	**ಜೈಮಿನಿ ಭಾರತ**	ವಾರ್ಧಕ ಷಟ್ಪದಿ
೧೪.೫"×೨"	ಲಕ್ಷ್ಮೀಶ	ಸು ೧೬೫೦
೧-೧೯೭ ಪತ್ರ	೯ ಪಂಕ್ತಿ	೬೫ ಅಕ್ಷರ

ಆದಿ : ಶ್ರೀ X X ಭಾರತದಲ್ಲಿ ಜಯಮುನಿ ಬರೆಯುವದಕ್ಕೆ ಶುಭಮಸ್ತು
ಶ್ರೀವದುವಿನಂಬಕ ಚಕೋರಕಂ ಪೊರೆಯೆ ಭ
ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ
ತೀವಲಯದಮಲ ಸೌಭಾಗ್ಯರತ್ನಾಕರಂ ಪೆರ್ಚೆನಿಂ ಮೇರುವರಿಯೇ
ಆವಗಂ ಸರಸ ಕರುಣಾಂಮ್ರುತದ ಕಲೆಗಳಂ
ತೀವಿದೆಳೆನಗೆಯ ಬೆಳ್ದಿಂಗಳಿಂ ಪಸರಿಸುವಾ
ದೇವಪುರಲಕ್ಷ್ಮೀರಮಣನಾಸ್ಯಚೆಂದ್ರಾನಂದಮಂ ನಮಗೀಯ್ಕೆಲಿ ॥ ೧ ॥
X X X X

ವಿದ್ವತ್ಸಭಾವಲಯುಮರಿದೂ ವಿರಚಿಸಿದಂ ಭಾ
ರದ್ವಾಜಗೋತ್ರಭವನಂಣವಾಂಕನ ಸುತ ಲ
ಸದ್ವಿನುತ ಕರ್ನಾಟಕವಿಚೈತ್ರವನಚೂತ ಲಕ್ಷ್ಮೀಶನೆಂದೊರ್ವನೂ
ಹೃದ್ವನಜದೊಳ್ ದೇವಪುರ ಲಕ್ಷ್ಮೀಶನಾ ಪ
ದದ್ವಯವನಾವಗಂ ದ್ಯಾನಿಸುವರಡಿಗಳಂ
ಸದ್ವಿನೆಯದಿಂ ಬಜಿಪ ಭಕ್ತಿಯಿಂ ಮೆರವಾ ಜಯಮುನಿ ಭಾರತದ
ಕಥೆಯನೂ ‖ ೧೨ ‖

ಅಂತ್ಯ: ಪುಣ್ಯಮಿದು ಕೃಷ್ಣಚೆರಿತಾಂಮ್ರುತಂ ಸುಖವೀಂದ್ರ
ಗಣ್ಯಮಿದು ಶೃಂಗಾರ ಕುಸುಮ ತುರುತುರುಗಿದಾ
ರಂಣ್ಯಮಿದನವಂ ಪ್ರೌಡಿಪಾಂಡಿತ್ಯಾನಾನಾಪ ಚಕ್ರಾರ್ಥಂಗಳಾ
ಪುಣ್ಯಮಿದು ಶ್ಯಾರದೆಯ ಸಂನ್ಮೋಹನಾಗ ಲಾ
ವಂಣ್ಯಮಿದು ಭಾವಕರ ಕಿವಿದೊಡವಿಗೊದವಿದ ಹಿ
ರಂಣ್ಯಮಿದು ಭೂತಳದೊಳೆನೆ ವಿರಾಜಿವುದು ಲಕ್ಷ್ಮೀಪತಿಯ
ಕಾವ್ಯರಚನೇ ‖ ೪೬ ‖

ಅಂತು ಸಂಧಿ ೩೩ ಕ್ಕಾಂ ಪದನು ೧೯೦೧ ಕ್ಕಾಂ ಮಂಗಳಮಹಾಶ್ರೀ.
ಶ್ರೀ ಮಹಿಳೆಯರಸನಾದ ಪಾಂಡವಪಕ್ಷ
ಸೋಮರ್ಕ ಕೋಟಿ ಸಂಕಾಶನಹ ಕ್ರಿಷ್ಣಮ
ಹಾಮಹಿತ್ವದ ಭಾರತದ ಕಥೆಯೊಳಶ್ವಮೇದಿಕ ಪರ್ವವಂ ಮುದ ಮಿಗೆ

X X X X

........ಕೊಟ್ಟು ಸಲಹುವನವರಭೀಷ್ಟಮಂ ಜನವರಿಯಲೂ ‖ ೯ ‖

ಸ್ವಸ್ತಿ ಶ್ರೀ ವಿಜಯಾಭ್ಯುದೆಯ ಶಾಲೀವಾಹ ಸಂದ ವರ್ತಮಾನಾವಾದಾ
೧೭೬೦ನೆ ನಳಸಂವತ್ಸರ ವೈಶಾಕ ಬಹುಳ ೧೨ಯಲ್ಲು ಜಯಮುನಿ ಭಾರತದ
ಪಸ್ತುಕ ಸಂಪೂರ್ನಂ ಮಂಗಳ ಮಹಾಶ್ರೀ.

ವಿಷಯ : ಭಾರತದ ಆಶ್ವಮೇಧ ಪರ್ವದ ಕಥೆ.

ವಿಶೇಷ : ೯೧ ನೆಯ ಪತ್ರಸಂಖ್ಯೆ ಇಲ್ಲದಿದ್ದರೂ ವಿಷಯ ಲೋಪವಾಗಿಲ್ಲ. ಪ್ರತಿಯ
ಕೊನೆಯಲ್ಲಿ ಪ್ರತಿಕಾರನು ಬರೆದ ೯ ಪದ್ಯಗಳಿವೆ.

583

ಕೆ ೨೭೨	ಜೈಮಿನಿ ಭಾರತ	ವಾರ್ಧಕ ಷಟ್ಪದಿ
೨೭.೯″×೨.೩″	ಲಕ್ಷ್ಮೀಶ	ಸು. ೧೬೫೦
೧–೧೬೨ ಪತ್ರ	೭ ಪಂಕ್ತಿ	೧೦೫ ಅಕ್ಷರ

ಆದಿ : ಶ್ರೀ x x ಜೈಮಿನಿ ಬರೆಯುವದಕ್ಕೆ ಶುಭಮಸ್ತು
ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭ
ಕ್ತಾವ ....
....
....ಲೆಗಳಂ
ತೀವಿದೆಳೆನಗೆಯ ಬೆಳ್ದಿಂಗಳೊಳಿಂ ಪಸರಿಸುವ
ದೇವಪುರನಿಲಯ ಲಕ್ಷ್ಮೀರಮಣನಾಸ್ಯಚಂದ್ರಾನಂದಮಂ
ನಮಗೀಯಲೀ ॥ ೧ ॥

x x x x

ವಿದ್ವತ್ಸಭಾ .... ಯೆ ವಿರಚಿಶಿದೇಂ ಭ
ರದ್ವಾಜಗೋತ್ರಭವನಂಣಮೂಂಕನ ಸುತ ಲ
ಸದ್ವಿನುತ ಕರ್ನಾಟಕವಿಚೈತ್ರವನಚೂತ ಲಕ್ಷ್ಮೀಶನೆಂಬೊರ್ವನೂ
ಹೃದ್ವನಜದೊಳ್ ದೇವಪುರದ ಶಿರಿಯರಸನ ಪ
ದದ್ವಯವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ವಿರಚಿಪ ಬಲ್ಪಿನಿಂ ವಿಮಲ ಜೈಮುನಿ ಭಾರತದ
ಕಥೆಯನೂ ॥ ೧೧ ॥

ಅಂತ್ಯ : ಪುಂಣ್ಯಮಿದು ಕೃಷ್ಣ ಚರಿತಾಮೃತಂ ಸುಖವೀಂದ್ರ
ಗಂಣ್ಯಮಿದು ಶೃಂಗಾರಕುಸುಮತರು ತುರುಗಿದಾ
ರಂಣ್ಯಮಿದು ಭಾವಕರ ಕಿವಿದೊಡವಿಗೊದವಿಹಮಿಾ ರಂಮ್ಯವಿದು
ಭೂತಳದೊಳೆನೆ ವಿರಾಜಿಪುದು ಲಕ್ಷ್ಮೀಪತಿಯ ಕಾವ್ಯರಚನೇ ॥ ೪೬ ॥
ಅಂತೂ ಸಂಧಿ ೩೪ಕಂ ಪದನೂ ೧೯೯೯ಕಂ ಮಂಗಳಮಹಾಶ್ರೀ

ವಿಷಯ: ಭಾರತದ ಅಶ್ವಮೇಧ ಪರ್ವದ ಕಥೆ.

ವಿಶೇಷ: ೫೪, ೬೯, ೧೦೦, ೧೩೮, ೧೫೫ ಈ ಪತ್ರಗಳು ಮುರಿದುಹೋಗಿವೆ.

584

ಕೆ ೨೯೪	**ಜೈಮಿನಿ ಭಾರತ**	ವಾರ್ಧಕ ಷಟ್ಪದಿ
೯"×೨.೨"	ಲಕ್ಷ್ಮೀಶ	ಸು ೧೬೫೦
೧–೧೮೦ ಪತ್ರ	೧೨ ಪಂಕ್ತಿ	೪೮ ಅಕ್ಷರ

ಆದಿ : ಜೈಮಿನಿಭಾರತವನ್ನು ಬರೆಯುವದಕ್ಕೆ ನಿರ್ವಿಘ್ನಮಸ್ತು । ಪೀಠಿಕೆಯು ॥
ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭ
ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ
ತೀವಲಯುದಮಲಸೌಭಾಗ್ಯರತ್ನಾಕರಂ ಪೆರ್ಚನಿಂ ಮೇರೆವರಿಯೆ
ಆವಗಂ ಸರಸ ಕರುಣಾಮೃತದ ಕಲೆಗಳಿಂ
ತೀವಿದೆಳೆನಗೆಯ ಬೆಳದಿಂಗಳಿಂ ಪಸರಿಸುವ
ದೇವಪುರನಿಲಯ ಲಕ್ಷ್ಮೀರಮಣನಾಸ್ಯಚಂದ್ರಾನಂದ
ನಮಗೀಯಲೀ ॥ ೧ ॥

x x x x

ವಿದ್ವತ್ಸಭಾವಲಯಮರಿಯೆ ವಿರಚಿಸಿದಂ ಭ
ರದ್ವಾಜಗೋತ್ರಭವನಣ್ಣಮಾಂಕನ ಸುತಂ
ಸದ್ವಿನುತ ಕರ್ನಾಟಕವಿಚೂತವನಚೈತ್ರ ಲಕ್ಷ್ಮೀಶನೆಂದೊರ್ವನೂ
ಹೃದ್ವಜನದೊಳ್ದೇವಪುರದ ಲಕ್ಷ್ಮೀಶನ ಪ
ದದ್ವಯವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಪ ಬಲ್ಪಿಂದ ವಿಮಲಜೈಮಿನಿಭಾರತದ
ಕಥೆಯನೂ ॥ ೧೧ ॥

ಅಂತ್ಯ : ಧರಣಿಯೊಳ್ಜೈಮಿನಿ ಮುನೀಂದ್ರನತಿ ಪೆರ್ಮೆಯೋ
ಳ್ಪರಮ ಭಾಗವತದ ಕಥಾಮೃತಾಬ್ಧಿಯೊಳೊಪ್ಪ
ವರದಾಶ್ವಮೇಧಿಕದ ಪರ್ವಮಂ ಸುರಪುರದ ಲಕ್ಷ್ಮೀಶ ಕನ್ನಡದೊಳು
ವಿರಚಿಸಿದ ಕೃತಿಗೆ ಷಚ್ಚರಣದಿಂ ಮಾಧುರ್ಯ
ಸರಸಪದ ಬಂಧಗಳೆಣಿಸಲ್ಕೆ ಶರಧಿಯಂ
ಬರ ನಿಧಿ ಶಶಾಂಕ ಸಂಜ್ಞೆಗಳೈದಲಿದನೊಲಿದು ಭಾವಿಪುದು
ಸರ್ವಜನರು ॥ ೪೭ ॥

ಚತುಸ್ತ್ರಿಂಶತ್ಸಂಧಿ ಸಂಪೂರ್ಣಂ, ಅಂತು ಸಂಧಿ ೩೪ಕ್ಕೆ ಪದ್ಯಗಳು ೧೯೦೭ಕ್ಕೆ
ಮಂಗಳಮಸ್ತು ॥

ವಿಷಯ: ಭಾರತದ ಅಶ್ವಮೇಧ ಪರ್ವದ ಕಥೆ.

ವಿಶೇಷ: ಸುದೃಢವಾದ ಪ್ರತಿ. ಪತ್ರದ ಕ್ರಮಸಂಖ್ಯೆ ೬೩ಕ್ಕೆ ಬದಲು ೧೮೩ ಎಂದಿದೆ.

585

ಕೆ. ಎ. ೨೨೪/೧	ಜೈಮಿನಿ ಭಾರತ	ವಾರ್ಧಕ ಷಟ್ಪದಿ
೧೨.೫"X೭.೮"	ಲಕ್ಷ್ಮೀಶ	ಸು. ೧೬೫೦
೧–೨೦೬ ಪುಟ	೩೦ ಪಂಕ್ತಿ	೩೨ ಅಕ್ಷರ

ಆದಿ : ಜೈಮಿನಿ ಭಾರತ ಪ್ರಾರಂಭ
ಶ್ರೀವಧುವಿನಂಬಕ ಚಕೋರಕಂ ಪೊರೆಯ ಭ
ಕ್ತಾವಳೀ ಹೃತ್ಕುಮುದ ಕೋರಕಂ ಬಿರಿಯೆ ಜಗ
ತೀವಲಯದಮಲ ಸೌಭಾಗ್ಯರತ್ನಾಕರಂ ಪೆರ್ಚೆನಿಂ ಮೇರೆವರಿಯೇ
ಆವಗಂ ಸರಸ ಕರುಣಾಮೃತ ಕಲೆಗಳಿಂ
ತೀವಿದೆಳನಗೆಯ ಬೆಳ್ದಿಂಗಳಂ ಪರಿಸರಿಸುವ
ದೇವಪುರ ನಿಲಯ ಲಕ್ಷ್ಮೀರಮಣನಾಸ್ಯಚಂದ್ರಾನಂದಮಂ ನೀಯಲಿ ||೧||

X X X X

ವಿದ್ವತ್ಸಭಾವಲಯಮುರಿಯೆ ವಿರಚಿಸಿದೆಂ ಭ
ರದ್ವಾಜಗೋತ್ರಭವನಂಣಮಾಂಕನ ಸುತ ಲ
ಸದ್ವಿನುತ ಕರ್ನಾಟಕಕವಿಚೂತವನಚೈತ್ರ ಲಕ್ಷ್ಮೀಶನೆಂಬೋರ್ವನು
ಹೃದ್ವನಜದೊಳ್ ದೇವಪುರದ ಸಿರಿಯರಸನ ಪ
ದದ್ವಯವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಸಿ ಬಲ್ಪಿನಿಂ ವಿಮಲ ಜೈಮಿನಿ ಭಾರತದ
ಕಥೆಯನು || ೧೨ ||

ಅಂತ್ಯ : ಧರಣಿಯೊಳ್ ಜಯಮುನಿ ಮುನೀಂದ್ರನತಿ ಪೇರ್ಮೆಯೊಳ್
ವರಮಹಾಭಾರತ ಕಥಾಮೃತಾಬ್ಧಿಯೊಳೊಪ್ಪುವ
ವರದಾಶ್ವಮೇಧಿಕದ ಪರ್ವಮಂ ಸುರಪುರದ ಲಕ್ಷ್ಮೀಶ ಕಂನಡದೊಳೂ
ವಿರಚಿಸಿದ ಕೃತಿಗೆ ಷಟ್ಚರಣದಿಂ ಮಾಧುರ್ಯ
ಸರಸಪದ ಬಂಧವಳ್ ಗಣಿಸಲ್ಕೆ ಶರಧಿಯಂ
ಬರ ನಿಧಿ ಶಶಾಂಕ ಸೌಂಜ್ಞೆಗಳೈದೆನಿದನೊಲಿದು ಭಾವಿಪುದು
ಸರ್ವಜನರೂ || ೪೭ ||

ಅಂತು ಸಂಧಿ ೩೪ಕ್ಕಂ ಪದನು ೧೯೦೭ಕ್ಕಂ ಮಂಗಳಮಹಾಶ್ರೀ ಶ್ರೀ ಭಾರತ ಜೈಮಿನಿ ಸಂಪೂರ್ನವೂ.

ವಿಷಯ: ಭಾರತದ ಅಶ್ವಮೇಧಪರ್ವದ ಕಥೆ.

ವಿಶೇಷ: ಪ್ರತಿ ಸುದೃಢವಾಗಿದೆ. ಇದರೊಂದಿಗೆ ಶಬರಶಂಕರವಿಲಾಸವೆಂಬ ಮತ್ತೊಂದು ಗ್ರಂಥವಿದೆ.

586

ಕೆ. ಎ. ೨೨೫	ಜೈಮಿನಿ ಭಾರತ	ವಾರ್ಧಕ ಷಟ್ಪದಿ
೧೨.೫"×೮"	ಲಕ್ಷ್ಮೀಶ	ಸು ೧೬೫೦
೧ ೩೫೩ ಪುಟ	೩೩ ಪಂಕ್ತಿ	೨೦ ಅಕ್ಷರ

ಆದಿ : ಜೈಮಿನಿ ಭಾರತವು ೧ ಸಂಧಿ
ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭಕ
ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ
ತೀವಲಯದಮಲ ಸಾಭಾಗ್ಯರತ್ನಾಕರಂ ಪೇರ್ಚಿನಿಂ ಮೇರೆವರಿಯೇ
ಆವಗಂ ಸರಸ ಕರುಣಾಮೃತದ ಕಲೆಗಳಿಂ
ತೀವಿದೆಳನಗೆಯ ಬೆಳದಿಂಗಳಿಂ ಪಸರಿಸುವ
ದೇವಪುರ ನಿಲಯ ಲಕ್ಷ್ಮೀರಮಣನಾಸ್ಯಚಂದ್ರಾನಂದಮಂ
ನಮಗೀಯಲೀ ॥ ೧ ॥

x x x x

ವಿದ್ವತ್ಸಭಾವಲಯುಮರಿಯೆ ವಿರಚಿಸಿದಂ ಭ
ರದ್ವಾಜಗೋತ್ರಭವನಣ್ಣಮಾಂಕನ ಸುತಂ ಲ
ಸದ್ವಿನುತ ಕರ್ನಾಟಕವಿಚೈತ್ರವನಚೂತ ಲಕ್ಷ್ಮೀಶನೆಂಬೋರ್ವನೂ
ಹೃದ್ವನಜದೊಳ್ದೇವಪುರದ ಲಕ್ಷ್ಮೀಶನ ಪ
ದದ್ವಯುವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಪ ಬಲ್ಪಿಂದ ವಿಮಲ ಜೈಮಿನಿ ಭಾರತದ
ಕಥೆಯನೂ ॥ ೧೧ ॥

ಅಂತ್ಯ : ಧರಣಿಯೊಳ್ಜೈಮಿನಿ ಮುನೀಂದ್ರನತಿ ಪೆರ್ಮೆಯೊ
ಳ್ವರಮಹಾಭಾರತ ಕಥಾಮೃತಾಬ್ಧಿಯೊಳೊಪ್ಪ
ವರದಾಶ್ವಮೇಧಿಕದ ಪರ್ವಮಂ ಸುರಪುರದ ಲಕ್ಷ್ಮೀಶ ಕನ್ನಡದೊಳೂ

ವಿರಚಿಸಿದ ಕೃತಿಗೆ....ಟ್ಚರಣದಿಂ ಮಾಧುರ್ಯ
ಸರಸಪದ ಬಂಧಗಳ್ಗೆಣೆಸಲ್ಕೆ ಶರಧಿಯಂ
ಬರ ನಿಧಿ ಶಶಾಂಕ ಸೌಜ್ಞೆಗಳ್ಯೆದೆನಿದುನೊಲಿದು ಭಾವಿಪುದು
ಸರ್ವಜನರೂ ॥ ೪೬ ॥

ಚತುಸ್ತ್ರಿಂಶ ಸಂಧಿ ಸಂಪೂರ್ಣಂ—ಅಂತು ಸಂಧಿ ೩೪ಕ್ಕಂ ಪದ್ಯಂ ೧೯೦೬ಕ್ಕಂ
ಮಂಗಳಂ ಶ್ರೀ

ವಿಷಯ: ಭಾರತದ ಅಶ್ವಮೇಧ ಪರ್ವದ ಕಥೆ.

ವಿಶೇಷ: ಇದು ಮಂಗಳೂರಿನಲ್ಲಿ ೧೮೪೪ರಲ್ಲಿ ಛಾಪಿಸಿದ್ದು- ಕಲ್ಲಚ್ಚಿನ ಪ್ರತಿ. ಪದ್ಯಗಳಿಗೆ ಪಾದವಿಂಗಡಣೆ ಇದೆ.

587

ಕೆ. ಬಿ. ೨೯೩	**ಜೈಮಿನಿ ಭಾರತ**	ವಾರ್ಧಕ ಷಟ್ಪದಿ
೮.೫"X೬.೫"	ಲಕ್ಷ್ಮೀಶ	ಸು ೧೬೫೦
೧—೩೭೮ ಪತ್ರ	೧೬ ಪಂಕ್ತಿ	೧೮ ಅಕ್ಷರ

ಆದಿ: ಶುಭ x x ನಳನಾಮ ಸಂವತ್ಸರದ ಶ್ರಾವಣ ಬ ೧೪ ಶುಕ್ರವಾರದಲ್ಲು
ವೆಂಕೊಲುಗುಬ್ಬೆ....ನವರ ಜಯಮುನಿ ಬರಿಯುವದಕ್ಕೆ ಪ್ರಾರಂಭಾ
ಶ್ರೀವಧುವಿನಂಬಕ ... ಕೋರಕಂ ಪೊರೆಯೆ ಭ
ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜ.
ತೀವಲಯದಮಲ ಸೌಭಾಗ್ಯ ರತ್ನಾಕರಂ....ಮೇರೆವರಿಯೆ
ಆವಗಂ ಸರಸ ಕರು....ತದ ಕಲೆಗಳಿಂ
ತೀವಿದೆಳೆನಗೆಯ ಜೆಳ್ದಿಂಗಳಿಂ ಪಸರಿಸುವ
ದೇವಪುರ ನಿಲಯ ಲಕ್ಷ್ಮೀರಮಣನಾಸ್ಯಚಂದ್ರಾನಂದಮಂ
ನಮಗೀಯಲಿ ॥ ೧ ॥

x x x x

....ದ್ವತ್ಸಭಾವಲಯವುಮಂ....ವಿರಚಿಸಿದೆಂ ಭ
ರದ್ವಾಜಗೋತ್ರಭವನಂಣಮಾಂಕನ ಸುತಂ ಲ
ಸದ್ವಿನುತ ಕರ್ನಾಟಕವಿಚೈತ್ರವನ ಚ್ಯೂತ ಲಕ್ಷ್ಮೀಶನೆಂಬೊರ್ವನೂ
ಹೃದ್ವನಜದೊಳ್ದೇವಪುರ .. ಸಿರಿಯರಸನ ಪ
ದದ್ವಯ ... ನಾಗವ.... ಸುವರಡಿಗಳಂ
ಸದ್ವಿನಯದಿಂ ಭ....ಂದವು ..ಜೈಮಿನಿ ಭಾರತದ ಕಥೆಯನೂ ॥ ೧೧ ॥

ಅಂತ್ಯ : ಧರಣಿಯೊಳ್ ಜೈಮುನಿ ಮುನೀಂದ್ರನತಿಪೆರ್ಮೆಯೊಳೊರೆದ
ವರಮಹಾಭಾರತ ಕಥಾಮೃತಾಬ್ಧಿಯೊಳೊಪ್ಪ
ವರದಶ್ವಮೇಧಿಕ ಪರ್ವಮಂ ಸುರಪುರದ ಲಕ್ಷ್ಮೀಶ ಕಂನಡದೊಳೂ
ವಿರಚಿ....ದ ಕೃತಿಗೆ ಷಟ್ಚರಣದಿಂ
ಸರಸಪದ ಬಂಧಗಳ್ ಗಣಿಸಲ್ಕೆ ಶರಧಿಯಂ
ಬರ ನಿಧಿ ಶಶಾಂಕ ಸವುಜ್ಞಿಗಳೈದ ಭಾವಿಪುದು ಸರ್ವಜ್ಞರೂ ॥ ೪೮ ॥
ಅಂತ್ರೂ ಸಂಧಿ ೩೩ಕಂ ಪದನು....೯೦೭ಕಂ ಮಂಗಳಮಹಾಶ್ರೀ

ವಿಷಯ: ಭಾರತದ ಅಶ್ವಮೇಧಪರ್ವದ ಕಥೆ.

ವಿಶೇಷ: ಪ್ರತಿ ಅತಿ ಶಿಥಿಲವಾಗಿದೆ. ಪತ್ರಸಂಖ್ಯೆ ೨೭,೨೮ ಹಿಂದುಮುಂದಾಗಿವೆ.

588

ಕೆ. ಬಿ. ೩೫೧/೨	**ಜೋಗುಳ ಪದ**	ಜಾನಪದ
೮″ × ೬.೨″	?	?
೯೩–೯೫ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಜೋಯೆಂದು ಶರಣ ಸತಿಯರೆಲ್ಲ ಕೂಡಿ
ಜೋಯೆಂದು ಪಾಡಿದರು ನಲಿನಲೀದಾಡಿ
ತಾಯಿ ನಾಗಂಮ್ಮನಾ ಮಗನ ಕೊಂಡಾಡಿ
ಜೋಯೆಂದು ಚಂನಬಸವನನು ಕೊಂಡಾಡಿ ಜೋ ಜೋ ॥ ೧ ॥

ಅಂತ್ಯ: ಹೆಸರಿಟ್ಟು ಶರಣೆಯರು ತೆರಳಿದರಾಗ
ಬಸವನೀ ತಾವ್ವ ನೀ ಅಳಿಯನೀಗಾಗ
ಅಸುಳನಸಲು ಹುತ್ತ ನಾಗವ್ವ ಬೇಗ
ಶಶಿಧರನೆ ಗತಿಯೆಂದು ಯಿರುತಿರ್ದರಾಗ॥ ಜೋ ಜೋ ॥ ೨೫ ॥
ಗುರುಚಂನ್ನಬಸವಾನ ಜೋಗಾಳ ಪದವಾ
ಹರುಷದಿಂ ಕಿವಿಗೊಟ್ಟು ಕೇಳಿದರಿಂಗೊಲಿವಾ
ಕರುಣಾದಿ ನಡಸುವ ಬೇಡಿದ ವರವಾ
ತುರುವೆ ಗುಡ್ಡದ ಶಿವಲಿಂಗ ಕೊಡುವಾ॥ ಜೋ॥ ಜೋ॥ ಶ್ರೀ॥ ಶ್ರೀ

ವಿಷಯ: ಬಸವೇಶ್ವರನ ಅಕ್ಕ ನಾಗಲಾಂಬಿಕೆಯಲ್ಲಿ ಜನಿಸಿದ ಚನ್ನಬಸವೇಶ್ವರನ ಜೋಗುಳ ಪದ.

ವಿಶೇಷ: ಹಾಳೆಗಳು ತೆಳುವಾಗಿವೆ. ಈ ಗ್ರಂಥದ ಜೊತೆಯಲ್ಲಿ ಗುಂಡು ಬ್ರಹ್ಮಯ್ಯಗಳ ಸುವ್ವಿ, ಬಸವಾಷ್ಟಕ, ಬಸವೇಶ್ವರ ರಗಳೆ, ಗಣಾಷ್ಟಕ, ಬಸವಪವಾಡ, ನುಲಿಯ ಚಂದಯ್ಯಗಳ ವಚನ, ಹಾಡುಗಳು, ಪುರಾತನದೇವಿಯರ ತ್ರಿಪದಿ ನಿರಾಳ ಗುರುಸ್ತೋತ್ರ ಇತ್ಯಾದಿ ಗ್ರಂಥಗಳೂ, ಮಿಶ್ರವಿಷಯಗಳಿಗೆ ಸಂಬಂಧಿಸಿದ ಕೆಲವು ಹಾಳೆಗಳೂ ಇವೆ.

589

ಕೆ.ಎ. ೨೯೩	**ಜ್ಞಾನಚಂದ್ರ ಚಾರುಚರಿತಂ**	ಸಾಂಗತ್ಯ
೧೩"×೮.೧"	ಪಾಯಣವರ್ಣಿ	ಸು. ೧೬೫೦
೧—೫೫೭ ಪುಟ	೨೬ ಪಂಕ್ತಿ	೨೨ ಅಕ್ಷರ

ಆದಿ: ಶ್ರೀ x x x ಜ್ಞಾನಚಂದ್ರನೆಂಬ ಮಹಾಮಂಡಲೇಶ್ವರನ ಚರಿತೆ ಬರೆಯುವದಕ್ಕೆ ನಿರ್ವಿಘ್ನಮಸ್ತು

ಪಲ್ಲವ || ವರಿವೆನು ಜ್ಞಾನ ಚಂದ್ರನ ಚಾರು ಚರಿತೆಯ
ಧರೆಯ ಭವ್ಯರು ಲಾಲಿಪುದು ||

ಪದನೂ || ಮಾರಾರಿ ಶಾಂತಿ ಜಿನೇಂದ್ರನೆಂಬುವ ಸೂರ್ಯ
ನೀ ಮೂಡು ಮನ್ಮನಾದ್ರಿಯೊಳು || ೧ ||
ಸುಖವೇ ಮೈಯಾಗಿ ಸುಜ್ಞಾನೋದರದೊಳ
ಗಖಿಲ ಲೋಕವನಿಂಬಿಟ್ಟು
ಮುಕುತಿವೆಣ್ಣಾಳ್ದ ಸಿದ್ಧರ ಪಾದ ನಖಚಂದ್ರ
ವಿರಸಿಕ್ಕೆ ಮನ್ಮನೋತ್ಪಲವಾ || ೨ ||

ಅಂತ್ಯ : ಇದನೋದಿದವರಿಗೆ ಸರ್ವಾರ್ಥಸಿದ್ಧಿಯು
ಯಿದ ಬರೆಸಿದವರಿಗೆ ಸ್ವರ್ಗ
ಇದ ಕೇಳಿದರಿಗೆ ಸ್ವರ್ಗಾದಿ ಮೋಕ್ಷವು
ಇದ ಬರೆದರು ಧನ್ಯರಹುದು || ೧೫೨ ||

ಗದ್ಯ|| ಇದು ಸುರನರ ಫಣಿಪತಿ ಮಕುಟ ತಟ ವಿಘಟಿತ ಮಾಣಿಕ್ಯ ಮರೀಚಿ ಮಾಲಾಲಂಕೃತ ಕ್ರಮ ಕಮಲ ಯುಗಲ ಶ್ರೀಮಜ್ಜಿನಾಧೀಶ್ವರ ಮತಾಂಬರ ದ್ಯುಮಣಿ ಸ್ಯಾದ್ವಾದ ವಿದ್ಯಾಭರಣ ಭೂಷಿತ ಶ್ರೀಮಚ್ಚಾರುಕೀರ್ತಿ ಪಂಡಿತಾಚಾರ್ಯ ಪದೇಂದೀವರಾನಂದ ಮಂದ ಮಕರಂದ ಸಂದೋಹ ಬಂಧುರ ಕುಸುಮಂಧಯ ಶ್ರೀಮತ್ಪಾಯಣವರ್ಣಿ ವಿರಚಿತಮಪ್ಪ ಜ್ಞಾನ ಚಂದ್ರಚರಿತ ಪುರಾಣದೊಳು ಜ್ಞಾನಚಂದ್ರಮಹಾಮಂಡಳೇಶ್ವರ ಘಾತ್ಯ

ಘಾತಿ ಕರ್ಮ ನಿರ್ಮೂಲನಂಗೆಯ್ದು ಮೋಕ್ಷಾಂಗನಾ ಕೋಮಲ ಭುಜ ಯುಗಲಾಲೀಢ ಕಂಠನಾಗಿ ಕೂಡಿದ ನಿರ್ವಾಣ ಕಲ್ಯಾಣಾಭ್ಯುದಯ ವ್ಯಾವರ್ಣನಂ ಪಂಚಚತ್ವಾರಿಂಶದಾಶ್ವಾಸಂ ॥ ೪೫ ॥

ಅಂತು ಸಂಧಿ ೪೫ಕ್ಕಂ ಪದನು ೬೩೫ಕ್ಕಂ ಗದ್ಯ ೪೫ಕ್ಕಂ ಗ್ರಂಥಪ್ರಮಾಣ.... ಕ್ಕಂ ಜಯ ಮಂಗಳ ಶ್ರೀ x x x ಈ ಚರಿತೆಯನ್ನು ಶುಕ್ಲ ಸಂವತ್ಸರದ ಭಾದ್ರಪದ ಬಹುಳ ೧೨ ಚಂದ್ರವಾರ ಸ್ವ ೧೯೨೯ನೇ ಇಸವಿ ಶಬಲಾಂಬರ ತಾ॥ ಇಂರಲ್ಲು x x ಬರೆದು ಪೂರೈಸಿದ್ದಕ್ಕೆ ಭದ್ರಂ ಭೂಯಾತ್

ವಿಷಯ : ಜ್ಞಾನ ಚಂದ್ರನ ಕಥೆ.

ವಿಶೇಷ : ಮೋಡಿ ಬರಹ.

590

ಕೆ. ೪೧೯	**ಜ್ಞಾನ ಚಂದ್ರೋದಯ**	ವಾರ್ಧಕ ಷಟ್ಪದಿ
೮.೬"X೧೦.೯"	ಕಲ್ಯಾಣ ಕೀರ್ತಿ	೧೪೩೦
೧_೯೯ ಪತ್ರ	೯ ಪಂಕ್ತಿ	೪೩ ಅಕ್ಷರ

ಆದಿ : ಶ್ರೀ x ಜ್ಞಾನ ಚಂದ್ರಃ ರಾಗ–ಮಳಮಂಜರಿ
ವಿನೇಯ ಜಿನವಾರ್ಧಿಗಭಿವೃದ್ಧಿಯಂ ಮಾಡುತಂ
ತನುಕಿರಣ ನಿಕರದಿಂ ತಿಮಿರಮಂ ಕೆಡೆಸುತಂ
ವನಿತೆಯರ ನಯನ ಕುಮುದ ವನಕೆ ಮುದಮಂ ಮಾಡಿ ಜ್ಞಾನ ಚಂದ್ರ
ಕುಮಾರನುದ್ಭವಿಸಿದಂ ॥ಪಲ್ಲ ॥
ಶ್ರೀಮದಮರೇಂದ್ರನತ ಚರಣಯುಗ ನಳಿನನಂ
ತಾಮರಸ ನೇತ್ರನಂ ಭೂತ್ರಯ ಪವಿತ್ರನಂ
ಸೋಮರವಿಕೋಟಿತೇಜೋಧಿಕಾಂಗ ಪ್ರಭಾವಲಯನಂ ಗುಣ ನಿಲಯನಂ
ಸಾಮಜಾರಾತಿ ದೃತದಿಷ್ಟರ ನಿಧಿಷ್ಟನಂ
ಶ್ರೀ ಮಹಾವೀರನಂ ಮೇರುಗಿರಿ ಧೀರನಂ
ಮೂಮೆ ಬಲವಂದು ನಾಂ ಪ್ರೇಮದಿ ಕೈ ಮುಗಿದು ತ್ರಿಸಂಧ್ಯಾಕಾಲದಲಿ ॥

ಅಂತ್ಯ : ಶ್ರೀ ಜಿನರ ನಿಳಯಕೆ ವಿಜನ ಮಾಸದೊಳನುದಿ
ನಂ ಜ್ಞಾನೇಂದುದ್ಭುದಯವೆಂಬ ಕಾವ್ಯಂ
ತಾನಿಂತು ನೆಲಸಿರಲಿ ಭಾನು ಚಂದ್ರಾದಿ ಬೋಧಿ
ಜೈನೇಂದ್ರ ವರಚರಿತಮುಳ್ಳನಕಂ

ಪಿಂದೊಲಿದು ಭಾವಿಸುತ ಬರೆಹ ಲೇಹಕನಿರಿಚದು
ನೆರಡುಸಾಸಿರದ ಮೂನೂರರಿಂದಂ ಪರಿಮಿತಮನೋದು
ವರಿಗುರುಮುದದಿ ಕೇಳ್ದರಿಗೆ ದೊರೆಕೊಳಲಿ ಸಂತತಂ ಶುಭ ಮಂಗಲಂ
॥ ೧೩೪ ॥

ವಿಷಯ : ಜ್ಞಾನಚಂದ್ರನ ಕಥೆ.

ವಿಶೇಷ : ಪ್ರತಿ ಸಮಗ್ರ, ಸ್ಫುಟಾಕ್ಷರ.

591

ಕೆ. ೧೭೧/೧	ಜ್ಞಾನಜ್ಯೋತಿ	ಭಾಮಿನೀಷಟ್ಪದಿ
೧೬.೬"×೧.೪"	?	?
೧–೧೮ ಪತ್ರ	[illegible] ಪಂಕ್ತಿ	[illegible] ಅಕ್ಷರ

ಆದಿ : ಶ್ರೀ X X X ಜ್ಞಾನಜ್ಯೋತಿಯ ಬರವದಕ್ಕೆ ನಿರ್ವಿಘ್ನಮಸ್ತು
ವೇದಗಳು ಅರಸಿದರೆ ಸಿಲುಕದ
ಆದಿಮೂರುತಿ ಅಪ್ರಮೇಯನೆ
ಭೇದವಿಲ್ಲದ ಅದ್ವಯಾನಂತಾನಂದ ವಿಗ್ರಹ....
ನೀ ದಯದಿ ಭವಭಯುಗಳೆಂಬೀ
ಹಾದಿಯನು ತಪ್ಪಿಸಿಯೆ ... ಯು
ಪಾದವನು ಸೇರಿಸಿಯೆ ರಕ್ಷಿಸು ರಕ್ಷಿಸೈ ಯಂನ್ನಾ ॥ ೧ ॥

ಅಂತ್ಯ : ನರಹರಿಯೆ ನಾಗೇಂದ್ರ ಶಯನನೆ
ಗರುಡಗಮನನೆ ಗಜವ ಕಾಯ್ದನೆ
ಸುರಮುನಿಗಳಜಪೂಜಿತಾಂಘ್ರಿಯೆ ಶುದ್ಧವಿಗ್ರಹನೆ
ಅರಿವರಾರೈ ನಿಂನ ಮಹಿಮೆಯ
ನರಸಿ ಕಾಣಾ ಶ್ರುತಿಸ್ಮೃತಿಗಳೂ
ಶಿರಿಯರಸ ಶೇಷಾಚಲವೆಂಕಟನೆ ರಕ್ಷಿಪೂದೂ ॥ ೧೩ ॥
ಅಂತು ಅಧ್ಯಾಯ ೫ಕ್ಕಂ ಪದನು ೨೬೦ಕ್ಕಂ ಮಂಗಳಮಹಾಶ್ರೀ
X X X ಜ್ಞಾನಜ್ಯೋತಿ ಸಂಪೂರ್ನ

ವಿಷಯ: ಭಕ್ತಿ, ಜ್ಞಾನ.

ವಿಶೇಷ: ಪ್ರತಿ ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಇದರೊಂದಿಗೆ ಜ್ಞಾನಬೋಧೆ ಎಂಬ ಮತ್ತೊಂದು ಗ್ರಂಥವಿದೆ.

592

ಕೆ.ಬಿ. ೩೩೧/೩	ಜ್ಞಾನ ಪ್ರದೀಪಿಕೆ	ಗದ್ಯ
೮.೨"×೬"	?	?
೮ ಪತ್ರ	೧೪ ಪಂಕ್ತಿ	೨೦ ಅಕ್ಷರ

ಆದಿ: ಜ್ಞಾನ ಪ್ರದೀಪಿಕೆ ಬರೆಯುವದಕ್ಕೆ ಶುಭಮಸ್ತು x x x ತಮಗೆ ಇಷ್ಟ ದೇವತೆಯಾದ ಗುರುಗಳ ಪಾದಪದ್ಮಂಗಳಿಗೆ ನಮಸ್ಕರಿಶಿ ಗುರುಶಿಷ್ಯ ಸಂವಾದವಾದ ಯಿಾ ಜ್ಞಾನಪ್ರದೀಪಿಕೆಯೆಂಬ ಪ್ರಕರಣ ಲೋಕೋಪ ಕಾರಾರ್ಥವಾಗಿ ಸಕಲರಿಗೂ ತಿಳಿಯುವ ಹಾಗೆ ಹೇಳುತ್ತಾ ಇಧೇವೆ ||

ಅಂತ್ಯ: ಇಂನು ವಿಕಲ್ಪಗಳು ಸಾಕು ನಾನೆ ಬ್ರಂಹ್ಮವು ಯಂದು ನಂನಲ್ಲೆ ಚರಾಚರಾತ್ಮಕವಾದ ಪ್ರಪಂಚವು ನನ್ನಲ್ಲೆ ಇರುವದೆಂದು ಈ ರಹಸ್ಯವು ಯಾರಿಗೆ ತಿಳಿಯುತ್ತಾ ಇಥೆಯೋ ಅವರೇ ಗುರುಗಳು। ಅವರ ಪಾದಪದ್ಮಂ ಗಳನ್ನು ಚಿಂತನೆ ಮಾಡುತ್ತಾ ಇಥೇನೆ

ಇತಿಜ್ಞಾನ ಪ್ರುದೀಪಿಕಾ ಸಂಪೂರ್ಣ ಮಂಗಳ ಮಹಾಶ್ರೀ

ವಿಷಯ: ಗುರುಶಿಷ್ಯ ಸಂವಾದರೂಪ ಪರಬ್ರಹ್ಮಸ್ವರೂಪ.

ವಿಶೇಷ: ಪತ್ರಗಳು ಬಹು ತೆಳುವಾಗಿವೆ. ಈ ಗ್ರಂಥದೊಂದಿಗೆ ಅನುಭವ ಸೂತ್ರ (ಸಂ), ಜ್ಞಾನಯೋಗ ತರಂಗಿಣಿ, ಸದ್ಗುರುವು ಸಚ್ಛಿಷ್ಯನಿಗೆ ಹೇಳುವ ಕ್ರಮ ಈ ಗ್ರಂಥಗಳಿವೆ. ಬರವಣಿಗೆಯಿಲ್ಲದ ಕೆಲವು ಖಾಲಿ ಪತ್ರಗಳಿವೆ. ಪುಸ್ತಕದ ಕೊನೆಯಲ್ಲಿ ಎರಡು ತತ್ತ್ವಪದಗಳಿವೆ. ಪತ್ರಗಳಿಗೆ ಕ್ರಮ ಸಂಖ್ಯೆಯಿಲ್ಲ.

593

ಕೆ. ೧೭೧/೨	ಜ್ಞಾನಬೋಧೆ	ಭಾಮಿನೀಷಟ್ಪದಿ
೧೬.೬"×೧.೪"	?	?
೧–೧೬ ಪತ್ರ	೮ ಪಂಕ್ತಿ	[illegible] ಅಕ್ಷರ

ಆದಿ : ಶ್ರೀ x x x ಜ್ಞಾನಬೋಧನೆಯ ಬರವದಕ್ಕೆ ನಿರ್ವಿಘ್ನಮಸ್ತು
ಶ್ರೀರಮಣ ಸುರರಾಜ ನುತವಿದ
ನೀರಜದ್ವಯ ಚಕ್ರಧರ ಗಂ
ಭೀರ ಗುಣಗಣಭೂಷಣಾಂಗನಹೋಬಲೇಶ್ವರನೆ

ವೀರದಾನವ. ದುಷ್ಟಘೆನ ಸಂ
ಹಾರ....ರಣಧೀರ ನರ ಕಂ
ಠೀರವನೆ ಸಲಹೆಂನ ನಿಂನಯ ದಾಸಕಿಂಕರನಾ ॥ ೧ ॥

ಅಂತ್ಯ: ನಿಗಮದಲಿ ನಿಶ್ಚೈಸಿ ತೆಗದೀ
ಸುಗುರುಶಿಷ್ಯಾಖ್ಯಾನ ... ಸುಮನ
ಸೊಗಸ ಕೇಳಿದ ಜನಕೆ ಭವವಿಲ್ಲಖಿಳ ಪುಂಣ್ಯಗಳೂ
ಅಗಲದಿಹುದಜ್ಞಾನವೆಂದಿಗು
ಹೆ॰ಗದು ಹೃದಯಕೆ ಗರಳ ನಗರದ
ವಿಗಡ ನಂಜುಂಡೇಶ್ವರನವರ ಚರಣಕೃಪೆಯಿಂದಾ ॥ ೮೧ ॥
ಉಭಯ ದೀಪಿಕೆ ೨ಕ್ಕಂ ಪದನು ೧೮೬ಕ್ಕಂ ಮಂಗಳಮಹಾಶ್ರೀ

ವಿಷಯ: ಭಕ್ತಿ, ಜ್ಞಾನ.

ವಿಶೇಷ: ಪ್ರತಿಯನ್ನು ಅಲ್ಲಲ್ಲಿ ಹುಳು ತಿಂದಿದೆ.

594

ಕ. ಎ. ೨೩೫/೨	**ಜ್ಞಾನಭಾಸ್ಕರಚರಿತ್ರೆ**	ಸಾಂಗತ್ಯ
೧೩"×೮"	ನೇಮಣ್ಣ	೧೫೫೯
೧–೩೬ ಪತ್ರ	೧೨ ಪಂಕ್ತಿ	೧೬ ಅಕ್ಷರ

ಆದಿ: ಜ್ಞಾನ ಭಾಸ್ಕರ ಚರಿತ್ರೆಶ್ರೀಮತ್ಪಂಚಗುರುಭ್ಯೋ ನಮಃ॥ ಸಾಂಗತ್ಯ
ಶ್ರೀಯೆಂಬ ಬಿದಿಗೆ ಪರಿಪೂರ್ಣ ಚಂದ್ರನು ನಿಚ್ಚ
ಕಾಯಕರ್ಮಗಳಿಂದವನ
ಆಯದನಾಂತ ಗುಣಗಳ ನಿಜಾತ್ಮನ
ನ್ಯಾಯವನರಿತು ವಂದಿಪೆನೂ ॥ ೧ ॥

x x x x

ಮಾನವರೊಳಗೆ ಯತ್ಯಾಸಂನ ಭವ್ಯರ
ಹೀನ ಮಿಥ್ಯವ ಕೆಡಿಸುವರೂ
ಜ್ಞಾನಭಾಸ್ಕರವೆಂಬ ಚರಿತೆಯನುಸುರೂವೆ
ಧ್ಯಾನದ ರುಚಿಯುಳ್ಳವ॰ಗೆ ॥ ೩ ॥

ಅಂತ್ಯ : ವರಶಖವರುಷ ಸಾವಿರಹ ನಾನೂರೆಂಭ
ತ್ತೆರಡನೆಯಾ ಸಿದ್ಧಾರ್ಥನಾಮ ಸಂವ
ತ್ಸರದಾಶ್ವೀಜದ ಪೌರ್ನಮಿ
ಗಿರದೆ ಯಿಾ ಚರಿತೆ ಸಂಪೂರ್ನ || ೩೨ ||
ಧರೆ ನುತ ಸಮದೊಳ್ಳಿಪುರದೊಳೊಪ್ಪುವ ಶ್ರೀ
ಯಾದಿಜಿನರ ಆಲಯದೊಳು ಗುರು
ಜಿನಸೇನರ ಶಿಷ್ಯ ಸೀಲಾಬ್ಧಿಯ
ವರಶಿಷ್ಯ ನೇಮಂಣನೆಂಬವನೂ || ೩೩ ||
ಜ್ಞಾನ ಭಾಸ್ಕರನ ಚರಿತೆಯು ಸಂಪೂರ್ಣಂ ಮಂಗಳ ಮಹಾಶ್ರೀ

ವಿಷಯ : ಅಧ್ಯಾತ್ಮ, ಶಾಸ್ತ್ರಪಠನ, ಧ್ಯಾನಗಳು ಮೋಕ್ಷಮಾರ್ಗವೆಂದು ತಿಳಿಸುವ ವೇದಾಂತ ವಿಚಾರ.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ. ಇದೇ ಪುಸ್ತಕದಲ್ಲಿ ಮಾಣಿಕ್ಯಸ್ವಾಮಿ ಚರಿತ್ರೆ ಮತ್ತು ವಜ್ರಕುಮಾರ ಚರಿತ್ರೆಗಳಿವೆ. ಆದಿಯ ಒಂದು ಪ್ರತ್ಯೇಕ ಪತ್ರದಲ್ಲಿ ಕಾವ್ಯವಿಚಾರವಿದೆ.

595

ಕೆ. ಬಿ. ೩೩೧/೨	ಜ್ಞಾನಯೋಗ ತರಂಗಿಣಿ	ಗದ್ಯ
೮.೨"×೬"	?	?
೨೭ ಪತ್ರ	೧೫ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ x x x ವುತ್ಪತ್ತಿ ಪ್ರಕರಣ ಆರನೆ ತರಂಗಕ ಕಟಕೀ ಪ್ರಶ್ನೋತ್ತರ ಬರೆಯುವದಕ್ಕೆ ಶುಭಮಸ್ತು || ಬಳಿಕ ಶ್ರೀರಾಮನಂ ಕುರಿತು ವಶಿಷ್ಠನಿಂತೆಂದನೂ || ಯಲೈ ರಾಮಭದ್ರನೆ ಹಿಮೋತ್ಪರ್ವತದ ವುತ್ತರ ಭಾಗದಲ್ಲಿ ಆಕಾರವಂ ಧರಿಶಿದ ಕಜ್ಜಲಗಿರಿಯಂತೆ ಕರ್ಕಟಿಯಂತಲೂ ಅನ್ಯಾಯ ಬಾಧಿಕೆಯಂತಲೂ ಯರಡು ನಾಮಗಳಿಂ ಪ್ರಶಿದ್ಧಳಾದ ವಬ್ಬ ರಾಕ್ಷಸಿ ಇದ್ದಳೂ ||

ಅಂತ್ಯ : ಕಿರಾತ ಮಂಡಲದ ಧೊರೆಗಳು ಪ್ರತಿಮಾರೂಪದಿಂದವಳ ಪ್ರತಿಷ್ಠೆಯಂ ಮಾಡಿ ಪೂಜಿಸುವರು ಇತರ ದೇಶಗಳಲ್ಲಿ ಚಿತ್ರ ಪ್ರತಿಮಾರೂಪದಿಂದ ವಳು ಪರದೇವತೆಯಂತೆ ಪೂಜಿಸಲ್ಪಡುವಳು ಯಂದು ವಶಿಷ್ಠನು ಪೇಳುತ್ತಿದ್ದನೆಂಬಲ್ಲಿಗೆ ಜ್ಞಾನಯೋಗ ತರಂಗಿಣಿಯಲ್ಲಿ ವುತ್ಪತ್ತಿಪ್ರಕರಣದೊಳ್

ಕರ್ಕಟಿಕೋಪಾಖ್ಯಾನ ನಿರೂಪಣವೆಂಬ ಏಳನೆಯ ತರಂಗಕ್ಕೆ ಮಂಗಳ ಮಹಾಶ್ರೀ.

ವಿಷಯ : ಕರ್ಕಟಿಕೀ ಎಂಬ ರಾಕ್ಷಸಿಯ ವೃತ್ತಾಂತ.

ವಿಶೇಷ : ಜ್ಞಾನಯೋಗ ತರಂಗಿಣಿಯಲ್ಲಿ 'ಕರ್ಕಟಿಕೋಪಾಖ್ಯಾನ' ಎಂಬುದು ಒಂದು ಭಾಗವಾಗಿದೆ. ಈ ಗ್ರಂಥದೊಂದಿಗೆ (ಸಂಸ್ಕೃತ) ಶಿವಾನುಭವ ಸೂತ್ರ, ಜ್ಞಾನ ಪ್ರದೀಪಿಕೆ, ಸದ್ಗುರುವು ಸಚ್ಛಿಷ್ಯನಿಗೆ ಹೇಳುವ ಕ್ರಮ ಈ ಗ್ರಂಥಗಳಿರುವುದಲ್ಲದೆ ಪುಸ್ತಕದ ಕೊನೆಯಲ್ಲಿ ಎರಡು ತತ್ತ್ವ ಪದಗಳಿವೆ. ಪತ್ರಗಳು ಬಹು ತೆಳುಪಾಗಿವೆ. ಪತ್ರಗಳಿಗೆ ಕ್ರಮ ಸಂಖ್ಯೆಯನ್ನು ಹಾಕಿಲ್ಲ.

596

ಕೆ. ಎ. ೧೯೮/೪	**ಜ್ಞಾನಸಾರ**	ಕಂದ. ವೃತ್ತ
೧೨.೮"×೮"	?	?
೧—೨೧ ಪತ್ರ	೨೦ ಪಂಕ್ತಿ	೧೮ ಅಕ್ಷರ

ಆದಿ : ಜ್ಞಾನಸಾರ ॥ ಶ್ರೀ ಗುರುಭ್ಯೋ ನಮಃ ॥ ನಿರ್ವಿಘ್ನಮಸ್ತು ॥
ಭಾವದೊಳೆ ಅಷ್ಟಕರ್ಮವ
ನಾಮುಗ ಕೆಡಿಸಿದ್ದರ್ ಮೋಕ್ಷ ಲಕ್ಷ್ಮೀಹೃತ್ಸಂ
ಭಾವದೊಳು ಸುಖದಿಂ
ದಾವಗಮುಳಿಸಿದರ್ ಸಿದ್ಧರೀಗೆಮಗೊಳ್ಪಂ ॥ ೧ ॥

ಅಂತ್ಯ : ಆತ್ಮನೆ ದೇವ ಆತ್ಮನೆ ಸದಾಶಿವನಾತ್ಮನೆ ವಿಷ್ಣುವೆಂದೊಡಂ
ಆತ್ಮನೆ ಸಿದ್ಧಬುದ್ಧನರ್ಹಂ ಪರಮಾತ್ಮನೆ ಬ್ರಹ್ಮನೆಂದೊಡಿಂ
ತಾತ್ಮನ ನಾಮ ಸಂಕುಳಮುಮೆಂಬಿವಕಂ ಗುರುವಾದೆಯೆಂದೊಡಿಂ
ತಾತ್ಮನನೇನ ಬಂಣಿಸುವೆ ನಿತ್ಯನಿರಂಜನ ಬೋಧ ರೂಪನಂ ॥ ೧೩ ॥
ಮೊದಲುತ್ಪತ್ತಿ ವಿನಾಶಮಿಲ್ಲದನಂತಾರಾಧಿಪಂ ಶೂನ್ಯನಂ
ಆದಜಂ ದೃಷ್ಟಿಗಗೋಚರಂ ಸಕಳ ಸಿತ್ಯಾರಾಧನಂ....

ವಿಷಯ : ಜೈನಸಿದ್ಧಾಂತದಂತೆ ಪರಮಾತ್ಮ, ಬಹಿರಾತ್ಮ, ಅಂತರಾತ್ಮರ ವರ್ಣನೆ.

ವಿಶೇಷ : ಗ್ರಂಥವು ಅಪೂರ್ಣವಾಗಿದೆ. ಪತ್ರದ ಒಂದು ಪಾರ್ಶ್ವದಲ್ಲಿ ಮಾತ್ರ ಬರಹವಿದೆ. ಶಕಟರೇಫವಿದೆ. ಅಲ್ಲಲ್ಲಿ ಪದಗಳು ಲುಪ್ತವಾಗಿವೆ.

ಕಂದಗಳೇ ಹೆಚ್ಚಾಗಿದ್ದು ವೃತ್ತವೂ ಒಂದೊಂದು ಕಡೆ ಬಳಸಲ್ಪಟ್ಟಿದೆ. ಇದೇ ಪುಸ್ತಕದಲ್ಲಿ ಚಿಕ್ಕಶ್ರಾವಕಾಚಾರ, ಮುನಿವಂಶಾಭ್ಯುದಯವೆಂಬಿತರ ಗ್ರಂಥಗಳೂ ಇವೆ.

597

■ ೧೫೯	ಜ್ಞಾನಸಿಂಧು	ಭಾಮಿನೀ ಷಟ್ಪದಿ
೨೦.೭"×೨.೪"	ಚಿದಾನಂದಾವಧೂತ	ಸು. ೧೭೫೦
೧–೨೧೯ ಪತ್ರ	‘೯ ಪಂಕ್ತಿ	೪೦ ಅಕ್ಷರ

ಆದಿ: ಶ್ರೀ x x x ಗ್ನಾನ ಸಿಂದು ಬರೆಯುವದಕ್ಕೆ ನಿರ್ವಿಗ್ನಾಮಸ್ತು
ಪರಮಶಿವ ಷಂಣ್ಮುಖಗೆ ಸಕಲಾ
ಚರಣೆಯಂದ.............. ....
ಪರುಶವಿಶಿ ತಿಳುಹಿದನು ತಾ ಗ್ನಾನವಿಂದುವಿಲೀ

ಪದನೂ॥ ಗುರುವರನೇ ಗುರುಮೂರ್ಥಿ ದಯಸಾ
ಗರನೆ ನಿರ್ಮಳ ನಿಷ್ಕಳಂಕ್ಕನೇ
ಪರಮ ಪೂರ್ನಜ್ಯೋತಿ ಆತ್ಮಜ್ಯೋತಿ ಆತ್ಮೇಶಾ
ದುರಿತ ದಾವಾನಲನೆ ಯಂನ್ನಯ
ಹರುಷ ಮಾನಷಮೂರ್ತಿ ತೇಜೋ
ಭರಿತ ವರ ಚಿದಾನಂದಾತ್ಮಗುರು ಮಾಳ್ಕೆಮಗೆ ಮಂಗಳವಾ ॥೧॥
ಸಿದ್ದಪೂರ್ವಕ ವಾಶಿಯೆನಿಸುವ
ಸಿದ್ದಬಗಳಾಮುಖಿಯೇ ತಾನಾ
ಗಿರ್ದು ತುಂಗಾಭದ್ರ ತೀರದಂಹೋದ್ಯಪುರದ ಮದ್ಯದಲೀ
ಯಿದ್ದ ಚಿದಾನಂದಾತ್ಮಗುರು ತಾನಹ
ಜಿದ್ದು ಜ್ಞಾನಸಿಂದು ಗ್ರಂತ್ತವ
ಶಿದ್ದ ಮಾಡಿಯೇ ಕಲ್ಪಿಸಿದ ಚಿದಾನಂದ ಅವದೂತಾ ॥೨॥

ಅಂತ್ಯ: ಮಂಗಳಾಯಿತು ಪ್ರಮತರಿಗೆ ಮಹಾ
ಮಂಗಳಾಯಿತು ಶುರಮುನಿಗಳಿಗೆ
ಮಂಗಳಾಯಿತು ನಾನ ಭುವನಕೇ ಗುಹನ ಜೇಶೆಯಿಂದಾ
ಮಂಗ್ಗಳಾಯಿತು ಕೇಳ್ದವರಿಗೆಯು
ಮಂಗಳಾಯಿತು ಪೇಳ್ದವರಿಗೆಯು
ಮಂಗಳಪ್ರದವೆನದುದೈ ಚಿದಾನಂಥಗುರುದಯದೀ ॥೫೦॥

ಯಿತ್ತಿ ಶ್ರೀಮತ್ಪರಮಹಂಶ ಪರೀವ್ರಾಜಿಕಾಚಾರ್ಯ ಶ್ರೀ ಚಿದಾನಂದ ಗುರು ವರ್ಯ ಚರಣ ಪದ್ಮದ್ವಿರೇಭಾ ಶ್ರೀ ಚಿಧಾನಂದ ಅವಧೂತ ವಿರಚಿತಮಪ್ಪ ಗ್ನಾನಶಿಂದುವೆಂಬ ಗ್ರಂತ್ತದಲ್ಲಿ ನಿರ್ಗುಣಾರಾಧನೆಯಂ ಪೇಳ್ದಲ್ಲಿಗೇ ಅಂತ್ತ್ಯಾ ಅದ್ಯಾಯ ೪೭ ಕಾಂ ಪದನು ೩೫೩೫ ಕಾಂ ಜಯ ಮಂಗಳ ಮಹಾಶ್ರೀ.

ವಿಷಯ : ವೇದಾಂತ ತತ್ತ್ವಗಳು.

ವಿಶೇಷ : ಸಮಗ್ರವಾಗಿದೆ. ೪೩ ನೆಯ ಪತ್ರ ಲುಪ್ತವಾಗಿದೆ.

598

ಕೆ. ಎ. ೨೨೩	ಜ್ಞಾನ ಸಿಂಧು	ಭಾಮಿನೀ ಷಟ್ಪದಿ
೧೨.೫"×೭.೪"	ಚಿದಾನಂದಾವಧೂತ	ಸು. ೧೭೫೦
೧–೫೨೩ ಪುಟ	೨೪ ಪಂಕ್ತಿ	೨೪ ಅಕ್ಷರ

ಆದಿ : ಗ್ನಾನ ಶಿಂಧೂ. ಅಧಿಕಾರ ಲಕ್ಷಣಾ ||

ಸೂಚನೆ || ಪರಮಶಿವ ಷಣ್ಮುಖಗೆ ಸಕಲಾ
ಚರಣೆಯಿಂದಲಿ ಯೋಗ ಬೋಧೆಯ
ಪರುಠವಿಸಿ ಕರುಣಿಸಿದನೀ ಗ್ನಾನ ಸಿಂಧುವಿಲೀ ||

ಪದನೂ || ಗುರುವರನೆ ಗುರುಮೂರ್ತಿ ದಯಾ ಸಾ
ಗರನೆ ನಿರ್ಮಳ ನಿಷ್ಕಳಂಕನೇ
ಪರಮ ಪೂರ್ನಜ್ಯೋತಿ ಆತ್ಮಜ್ಯೋತಿ ಆತ್ಮೇಶಾ
ದುರಿತ ದಾವನಳನೆ ಯಂನಯ
ಹರುಷ ಮಾನಸ ಮೂರ್ತಿ ತೇಜೋ
ಭರಿತ ವರ ಚಿದಾನಂದ ಗುರು ಮಾಳ್ಕೆಮಗೆ ಮಂಗಳವಾ || ೧ ||

ಸಿಧ ಪರ್ವತವಾಸಿಯನಿಸುವ
ಸಿಧ ಬಗಳಾಮುಖಿಯ ತಾನಾ
ಗಿದ್ದು ತುಂಗ್ಗಾಭದ್ರತೀರದಯೋಧ್ಯಾಪುರ ಮಧ್ಯಾ
ಯಿದ್ದು ಚಿದಾನಂದ ಗುರು ತಾ ಸಹ
ಜಿದ್ದು ಗ್ನಾನಸಿಂಧು ಗ್ರಂಥವ
ಶಿದ್ಧಮಾಡಿಯೆ ಕಲ್ಪಿಸಿದ ಚಿದಾನಂದ ಅವಧೂತಾ || ೨ ||

ಅಂತ್ಯ : ಮಂಗ್ಗಳಾಯಿತು ಪ್ರಮಥರಿಗೆ ಮಹ
ಮಂಗ್ಗಳಾಯಿತು ಸುರಮುನಿಗಳಿಗೆ
ಮಂಗ್ಗಳಾಯಿತು ನಾನ ಭುವನಕೆ ಗುಹನ ದೆಸೆಯಿಂದ್ದಾ
ಮಂಗ್ಗಳಾಯಿತು ಕೇಳ್ದವರಿಗೆಯು
ಮಂಗ್ಗಳಪ್ರದವೆಸದುದ್ಯೆ ಚಿದಾನಂದ್ದ ಗುರುದಯದೀ ॥ ೫೧ ॥

ಇತಿ ಶ್ರೀಮತ್ಪರಮಹಂಸ್ಸ ಪರಿವ್ರಾಜಕಾಚಾರ್ಯ ಶ್ರೀ ಚಿದಾನಂದ್ದ ಗುರುವಾರ್ಯ ಚರಣಪದ್ಮದ್ವಿರೇಭ ಶ್ರೀ ಚಿದಾನಂದ್ದಾವಧೂತ ಜ್ಞಾನ ಶಿಂಧು ವೆಂಬ್ಬ ಗ್ರಂಥದಲ್ಲಿ ನಿರ್ಗುಣ ಪೂಜೆ ಸಮಾಪ್ತಃ ॥ ಷಟ್ಟ್ರಿತ್ಪಾರಿಂಶ್ಯತಿ ಮೋಧ್ಯಾಯಃ ॥ ೪೬ ॥ ಗ್ನಾನ ಶಿಂಧು ಸಮಾಪ್ತವೂ ॥

ವಿಷಯ : ವೇದಾಂತ ತತ್ತ್ವಗಳು

ವಿಶೇಷ : ಪ್ರತಿಯು ಸುಸ್ಪಷ್ಟವಾಗಿದೆ. ಪ್ರತಿಯ ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ. ನೀಲಿ ಬಣ್ಣದ ಕಾಗದವನ್ನು ಉಪಯೋಗಿಸಿದೆ.

599

ಕೆ.ಬಿ. ೩೨೪/೩	ಜ್ಞಾನೋಪದೇಶ	ಗದ್ಯ
೮.೩"×೬.೫"	?	?
೧—೩೮ ಪತ್ರ	೧೮ ಪಂಕ್ತಿ	೨೨ ಅಕ್ಷರ

ಆದಿ : ಸ್ ೧೮೮೩ ನೇ ಯಿಸವಿ ಜುಲೈ ತಾರೀಖು ೨೮ ಕ್ಕೆ ಸರಿಯಾದ ಸ್ವಭಾನು ನಾಮ ಸಂವತ್ಸರದ ಆಷಾಡ ಬಹುಳ ೮ ಯಲ್ಲು ಮೈಸೂರು ವೀರಣಗೆರೆಯಲ್ಲಿರುವ ಪರಿವಾರದ ಜಾತಿ ಪಟ್ಟಾದ ವೀರನಾಯ್ಕನ ಮಗ ಮರಿಯಪ್ಪನ ಪುಸ್ತುಕಕ್ಕೆ ಜ್ಞಾನೋಪದೇಶ ಬರೆಯುವದಕ್ಕೆ ಶುಭಮಸ್ತು ।

ಶ್ಲೋಕಾ ॥ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ನಂ ಚತುರ್ಭುಜಂ ।
ಪ್ರಸನ್ನಾ ವದನೋ ದ್ಯಾಯೇ ಸರ್ವವಿಘ್ನೋಪಶಾಂತಯೆ ।
ತಸ್ಮೈ ಶ್ರೀ ಗಣಾಧಿಪತೇ ನಮಃ ॥
ಗುರು ಬ್ರಂಹ್ಮ ಗುರುರ್ವಿಷ್ಣುಂ ಗುರುದೇವೋ ಮಹೇಶ್ವರಃ ।
ಗುರುಸಾಕ್ಷಾತ್ಪರಬ್ರಂಹ್ಮ ತಸ್ಮೈ ಶ್ರೀ ಗುರುವೇ ನಮಃ ॥

ಶ್ರೀ ಕೃಷ್ಣನು ಧರ್ಮರಾಯನಿಗೆ ಹೇಳಿದ ಅರ್ಥವನ್ನು ವೈಶಂಪಾಯನ ಮುನೀಂದ್ರರು ಜನಮೇಜಯಗೆ ಭಾರತಕಥೆಯನ್ನು ಸವಿಸ್ಥಾರವಾಗಿ

ಹೇಳಿದ್ದವರನ್ನು ಜನಮೇಜಯರಾಯನು ಆಶ್ಚರ್ಯಪರ್ವದಲ್ಲಿ ಹರಿವಂಶದಲ್ಲಿ ಯುಧಿಷ್ಠಿರನಿಗೆ ಶ್ರೀಕೃಷ್ಣನು ಪ್ರಸಂನ್ನವಾದ ಮೋಕ್ಷಮಾರ್ಗವನ್ನು ತಿಳುಹಿಸೆಂದು ಪ್ರಾರ್ಥಿಸಲು ವೈಶಂಪಾಯ ಮುನೀಂದ್ರನು ಮುಹುರ್ತಾತ್ರವು ಧ್ಯಾನವಂನ್ನು ಮಾಡಿ ಸಕಲ ಧರ್ಮಂಗಳಂನ್ನು ತಿಳಿದು ಆತನಂ ಕುರಿತು ಯಲೇ ಜನಮೇಜಯ ನರೇಂದ್ರನೆ ಬ್ರಂಹ್ಮವೆತ್ತಲಿಂದ ಹೇಳಲ್ಪಟ್ಟ ಆಶ್ಚರ್ಯಂಗಳನ್ನು ಕೇಳು ॥

ಅಂತ್ಯ : ಯಲೈ ಧರ್ಮರಾಯನೆ ಸತ್ಯವೂ ಪರಮಧರ್ಮವಾಗಿ ದೇವತೆಗಳಿಗೂ ದುರ್ಲಭವಾಗಿ ಯಿರುವದ್ದರಿಂದ ನೀನು ಸತ್ಯಸಂಪನ್ನನಾಗಿ ಧೈರ್ಯವನ್ನೂ ಬಿಡದೆಯಿರೂ । ಸತ್ಯದಿಂದಲೇ ನಿನಗೆ ಸ್ವರ್ಗವುಂಟಾಗುತ್ತಲಿಧೆ । ಯಿದೆಲ್ಲವನ್ನು ಸತ್ಯವೆಂದು ತಿಳುದಿಕೋ । ಬಲುಃವ್ಯಾಖ್ಯಾನವಂನ್ನು ಭಕ್ತಿಪೂರ್ವಕವಾಗಿ ಕೇಳುವಂತಾವರೂ ವೋದುವಂತಾವರೂ ಸಕಲ ಪಾಪ ವಿನಿರ್ಮುಕ್ತರಾಗಿ ಸತ್ಯಲೋಕವನ್ನೈದುವರೂ ಯಂದು ಶ್ರೀ ಕೃಷ್ಣನು ಧರ್ಮರಾಯನಿಗೆ ಹೇಳಿದಾ ಅರ್ಥವನ್ನು ವೈಶಂಪಾಯ ಮುನೀಂದ್ರನೂ ಜನಮೇಜಯ ರಾಯನಿಗೆ ಹೇಳಿದಾ ಶೇಷಧರ್ಮದಲ್ಲಿ ಹರಿವಂಶದಲ್ಲಿ ಆಶ್ಚರ್ಯಪರ್ವದಲ್ಲಿ ೧೦ ನೇ ಅಧ್ಯಾಯ ಅರ್ಥನಿರೂಪಣಕ್ಕೆ ಜಯಮಂಗಳ ಮಹಾಶ್ರೀ ॥ ಇತಿ ಜ್ಞಾನೋಪದೇಶವು ಸಂಪೂರ್ಣವು ॥ ಮರಿಯಪ್ಪನ ಬರಹವು ॥

ವಿಷಯ : ಹರಿವಂಶದ ಆಶ್ಚರ್ಯಪರ್ವದಲ್ಲಿ ಹತ್ತು ಅಧ್ಯಾಯಗಳಿಗೆ ಕನ್ನಡ ತಾತ್ಪರ್ಯ.

ವಿಶೇಷ : ಇದೇಪುಸ್ತಕದಲ್ಲಿ ಪಂಚವಿಂಶತಿಪದ್ಧತಿ ವ್ಯಾಖ್ಯಾ, ಶ್ರೀರಂಗಮಾಹಾತ್ಮ್ಯ, ಶನೈಶ್ಚರದಂಡಕಾ ಎಂಬ ಕೃತಿಗಳಿವೆ. ಕೊನೆಯ ಪುಟದಲ್ಲಿ ಒಂದೆರಡು ಔಷಧಿಗಳ ವಿವರ ಇದೆ.

600

ಕೆ. ಬಿ. ೧೬೯	**ಜ್ಯೋತಿರ್ಮಯ ದೀಕ್ಷಾಬೋಧೆ**	ವಚನ
೭.೫″ × ೬″	ಗುರುಗುಹೇಶ್ವರ ?	?
೩೭ ಪತ್ರ	೧೧ ಪಂಕ್ತಿ	೨೦ ಅಕ್ಷರ

ಆದಿ : ಗುರುಗುಂಹ್ಯೇಶ್ವರರು ವಿರಚಿಸಿದ ಶೈವಸಿದ್ಧಾಂತ ಬರೆವುದಕ್ಕೆ ಶುಭಮಸ್ತು ॥ ಜ್ಯೋತಿರ್ಮಯ ದೀಕ್ಷಾಬೋಧೆ.

ವೀರಶೈವವೆಂಬುದೊಂದು ಅರಂಣ್ಯಮಧ್ಯದಲ್ಲಿ ವಬ್ಬ ಸರ್ವಭಕ್ಷಕನು ಹೇಳಿದುದು ಅಲ್ಲ| ವಬ್ಬ ಮಾಂಸಭಕ್ಷಕನು ಕೇಳಿದುದ ಅಲ್ಲ| ವೀರಶೈವ ವೆಂಬುದು ವೊಂದು ಅರಂಣ್ಯಮಧ್ಯದಲ್ಲಿ ವಬ್ಬ ವಾಯುಭಕ್ಷಕನು ಹೇಳಿದುದು ಅಲ್ಲಾ| ವಬ್ಬ ಸುರಾಪಾನ ಮಾಡುವವನು ಕೇಳಿದ್ದು ಅಲ್ಲ. ವೀರಶೈವವೆಂಬುದೊಂದು ಪರ್ವತದಲ್ಲಿ ವಬ್ಬ ದೇಹಿ ಹೇಳಿದುದೆ ಅಲ್ಲಾ ವಬ್ಬ ದೇಹಧಾರಕನು ಕೇಳಿದ್ದು ಅಲ್ಲಾ| ವೀರಶೈವವೆಂಬುದು ಅನಂತ ಕೋಟಿ ವೇದಶಾಸ್ತ್ರ ಪುರಾಣಾಗಮ ಮಂತ್ರಾರ್ಥಸಾರ ಸುಧಾರಸವ ಪರಮಶಿವ ಪರಮಾತ್ಮ ಪರತತ್ವ ಪರಮಾರ್ಥ ಪರಬ್ರಹ್ಮ ಪರಮಲಿಂಗ ಪರಾಪರವಸ್ತುವಾದ ಪರಮೇಶ್ವರನು ಈ ವೇದಾರ್ಥಸಾರ ಸುಧಾರಸವು ಸೂಕ್ಷ್ಮವಸ್ತುವಾದ ಪರಮೇಶ್ವರನು ಈಗ ಸಾಂಗ್ಯವಾಗಿ ಸಂಗ್ರಹಿಸಿದ ಹನ್ನೆರಡುಕೋಟಿ ಹನ್ನೆರಡುಲಕ್ಷ ಹನ್ನೆರಡುಸಾವಿರ ಪರಮರಹಸ್ಯವ ಮಾಡಿ ಶಂಭುಮೂರ್ತಿಯು ಶಾಂಭವಿಗೆ ವುಪದೇಶವಿತ್ತ ಠಾವು ಯಲ್ಲಿ ಯಂದರೆ—

ಅಂತ್ಯ: ಅಪಾತ್ರಜೀವಿಗಳಾದ ಭವಿಗಳ ನೇತ್ರಂಗಳು ವುಭಯಕರ್ಮಕ್ಕೆ ಅನುಕೂಲ ಮಾದ ಕಾರಣ ತನ್ನ ತಾನರಿಯದ ಕಾರಣ ಗಾಡಾಂಧಕಾರವೆಂದು ಮಿಾನು ಗಳೆಂದು ವಿಷನೇತ್ರವೆಂದು ಮನ್ಮಥನ ಸೇರಿದ ನೀಲೋತ್ಪಲ ಬಾಣವೆಂದು ತಾಮಸಾಗ್ನಿಯಂದು ಶಿವಲಾಂಚನದಾರಿಗಳಾದವರ ಕೆಡಿಸುವ ಮಹಾ ಪಾತಕ ದ್ರಿಷ್ಟಿಯಂದು ವಿಷಗಾಳಿ ಯಂಬ ವುತ್ಪಾತಲಿಂಗವೆಂದು ಲಿಂಗ ವಿಲ್ಲದ ಕಾರಣ ಕನಿಷ್ಟವೆಂದು ಹೇಳಲ್ಪಟ್ಟಿತು ಆದಕಾರಣ ಶಿವಭಕ್ತರು ಗುಹೇಶ್ವರ ಲಿಂಗವನ್ನು ಕಂಡು ಜೋತಿರ್ಮಯ ಶಾಂಭವದೀ ಕಾಂಬದೆ ಸಂಗಮೇಶ ಯಂದು ಹೇಳಲ್ಪಟ್ಟೀ ದೇವರ ಶೈವಸಿದ್ಧಾಂತ ಸಂಪೂರ್ನ ಮಂಗಳಮಹಾಶ್ರೀ

ವಿಷಯ: ಶೈವಸಿದ್ಧಾಂತ ತತ್ತ್ವ.

ವಿಶೇಷ: ಮೋಡಿ ಅಕ್ಷರ.

601

ಕೆ.ಬಿ. ೩೨೦/೩	ಜ್ಯೋತಿರ್ಮಯ ದೀಕ್ಷಾಬೋಧೆ	ವಚನ, ಶ್ಲೋಕ
೩.೩"×೨.೬"	ಪಾಲ್ಕುರಿಕೆ ಸೋಮನಾಥ	?
೫೫—೧೨೩ ಪತ್ರ	೧೧ ಪಂಕ್ತಿ	೧೨ ಅಕ್ಷರ

ಆದಿ : ಜೋತಿರ್ಮಯ ಶಾಂಭವಿ ಜ್ಞಾನದೀಕ್ಷಾಬೋಧೆಯೆಂಬ ಪ್ರಬಂಧಾ ಬರೆಯುವುದಕ್ಕೆ ಶುಭಮಸ್ತು॥ ವೀರಶೈವ ಯೆಂಬುದೊಂದು ಆರಣ್ಯಮಧ್ಯದಲ್ಲಿ। ವಬ್ಬ ಪರ್ನಭಕ್ಷಕ ಹೇಳಿದುದು ಅಲ್ಲಾ। ವಬ್ಬ ಮಾಂಸಭಕ್ಷಕನು ಕೇಳಿದುದು ಅಲ್ಲಾ। ವೀರಶೈವವೆಂಬುದೊಂದು ವನದಲ್ಲಿ ಯಿದ್ದ ವಾಯುಭಕ್ಷಕನು ಹೇಳಿದುದು ಅಲ್ಲಾ। ವಬ್ಬ ಸುರಾಪಾನವ ಮಾಡಿವವನು ಕೇಳಿದುದು ಅಲ್ಲಾ। ವೀರಶೈವವೆಂಬುದೊಂದು। ಪಪ್ಪದಲ್ಲಿ ವಬ್ಬ ದೇಹಿ ಹೇಳಿದುದು ಅಲ್ಲಾ। ವಬ್ಬ ದೇಹಧಾರಕ ಕೇಳಿದದು ಅಲ್ಲಾ। ವೀರಶೈವವೆಂಬುದು ಅನಂತಕೋಟಿ ವೇದಶಾಸ್ತ್ರ ಪುರಾಣಾಗಮ। ಮಂತ್ರಾರ್ಥಸಾರ ಸುಧಾರಸ ಪರಮಶಿವ ಪರಮಾರ್ಥ ಪರತತ್ತ್ವ ಪರಮಾತ್ಮ ಪರಮಬ್ರಂಹ ಪರಮಲಿಂಗ ಪರಮ ಪರವಸ್ತುವಾದಂತಾ ಪರಮೇಶ್ವರನು ಯಿಾ ವೇದಾರ್ಥಸಾರ ಸುಧಾರಸವು ಸೂಕ್ಷ್ಮವಾಗಿ ಸಂಗ್ರಹಿಸಿದ ಹಂನೆರಡುಕೋಟಿ ಹಂನೆರಡುಲಕ್ಷ ಪರಮ ರಹಸ್ಯವಂನ್ನು। ಶಂಭು ಶಾಂಭವಿಗೆ ಉಪದೇಶವಿತ್ತ ಠಾವು ಯಲ್ಲಿ ಯಂದರೆ। ಪರಮ ಚಿದಾಬ್ಧಿಯಂಬ ಸಮುದ್ರಮಧ್ಯದಲ್ಲಿ। ಜ್ಯೋತಿರ್ಮಯವಾದ ಭಾನುಮಂಟಪದಲ್ಲಿ ಅನಂತಕೋಟಿ। ಸಂದಿಸಿರುಪಮವಾದಮಾಣಿಕ್ಯ ಸಿಂಹಾಸನ ಮಧ್ಯದಲ್ಲಿ ವೇದಗಳಿಗೆ ತಾಯಿಯಾದ ಗಾಯಿತ್ರಿಮಂತ್ರವ ಹಾಸಿಕೆಯ ಮಾಡಿ। ಚಿತ್ಪ್ರಣವ ಪಾದದ ಕಡೆಗೆ ಶುದ್ಧಪ್ರಣವ ಮಸ್ತಕದೆಡೆಮಾಡಿ। ಆ ಮಧ್ಯದಲ್ಲಿ ಪರಶಿವನು। ಶಾಂಭವಿಗೆ ನಿರಂಜನ ಪ್ರಣಯುಕ್ತವಾಗಿ। ಉಪದೇಶಿಸಿದ ಪರಮರಹಸ್ಯ ಯಿಾ ರಹಸ್ಯವಂನ್ನು। ಪರಮ ಪರತರ ಪರಮಾರ್ಥ ಪರಬ್ರಂಹ ಪರಶಿವಮೂರ್ತಿಯಾದಲ್ಲಮಾಪ್ರಭು ಕಲ್ಯಾಣ ಪಟ್ಟಣದಲ್ಲಿ ಬಸವಾದಿ ಪ್ರಮಥಗಣಂಗಳಿಗೆ ಯರಡೆಂಬತ್ತು ಕೋಟಿ ಬೆಡಗಿನ ವಚನಗಳಿಂದುಪದೇಶವ ಮಾಡಿದರೂ। ಆ ಪರಮ ರಹಸ್ಯಾರ್ಥವಂನ್ನು। ಪಾಲುಕುರಿಕೆ ಸೊಮನಾಥರು ಸಂಗೈಯ್ಯನೆಂಬ ಶರಣನಿಗೆ ನೂರರವತ್ತು ವಚನವ ಮಾಡಿ ಉಪದೇಶಿಸಿದರೂ। ಗುಹೇಶ್ವರನ ವಾಕ್ಯದಲ್ಲಿ ॥ ೧ ॥

ಅಂತ್ಯ : ಆಸನೇ ಶಯನೇ ಯಾನಿ ಸಂಪರ್ಕೆ ಸಹಭೋಜನೆ।
ಅಸಾಕ್ಷಿಗೋಚರಂ ಕೃತ್ವಾ ರೌರವಂ ನರಕಂ ವ್ರಜೇತ್ ॥ ೧೩೪ ॥
ಇತಿ ಜೋತಿರ್ಮಯ ಶಾಂಭವಿಜ್ಞಾನ ದೀಕ್ಷಾಭೋಧೆ
ಸಮಾಪ್ತಂ ಶ್ರೀ ಶ್ರೀ

ವಿಷಯ : ಎರಡೆಂಭತ್ತುಕೋಟಿ ಬೆಡಗಿನ ವಚನಗಳ ಪರಮ ರಹಸ್ಯಾರ್ಥವನ್ನು ನೂರರವತ್ತು ವಚನಗಳಿಂದುಪದೇಶಿಸಿದ ವೀರಶೈವ ವೇದಾಂತಸಾರಬೋಧೆ.

ವಿಶೇಷ: ಪತ್ರಗಳಿಗೆ ಸಂಖ್ಯೆ ಬರೆದಿಲ್ಲ. ಈ ಗ್ರಂಥಾರಂಭಕ್ಕಿಂತ ಮೊದಲು ನಂಜುಂಡಶತಕ, ಭೂಚಕ್ರದ ವಿವರ, ಕೋಶಪ್ರತಿಕೋಶದ ಟೀಕು ಸಹ ಇವೆ. ಆರಂಭದಲ್ಲಿ ಶಾರದಾ, ಕಲ್ಪವೃಕ್ಷ. ರಾಧಾಕೃಷ್ಣರ ಗ್ರಂಥಗಳೂ ಅನಂತರ ವರ್ಣರಂಜಿತ ಚಿತ್ರಗಳೂ ಕೊನೆಯಲ್ಲಿ ಬಾಲಕೃಷ್ಣನ ವರ್ಣರಂಜಿತ ಚಿತ್ರವೂ ಸಹ ಇವೆ. ಇದರಲ್ಲಿ ಕನ್ನಡ, ಸಂಸ್ಕೃತ, ಆಂಧ್ರ ಭಾಷೆಗಳೂ ಸುಲಲಿತವಾಗಿವೆ.

602

ಕೆ. ೨೭೦	**ಜ್ಯೋತಿಶ್ಶಾಸ್ತ್ರ ಸಂಗ್ರಹ ಟೀಕು**	ಶ್ಲೋಕ, ಟೀಕು
೭.೫"×೧.೨"	?	?
೧–೯೨ ಪತ್ರ	೬ ಪಂಕ್ತಿ	೨೮ ಅಕ್ಷರ

ಆದಿ: ಶ್ರೀಗಣಾಧಿಪತ್ತಾಯೇ ನಮಃ x x x ನಕ್ಷತ್ರ ನಿಗಂಟ್ಟು ಬರೆಯುವದಕ್ಕೆ ನಿವಿರ್ಗ್ನಮಸ್ತು॥

ಅಶ್ವಾಯುಕಾಶ್ವನೀ ದಶ್ಯ ಅಂಶ್ವಂ ವಾಜಿ ಹಯೋ ಹಯಃ ।'
ಆಶ್ವಾಯುೂಲ್ಲ್॥ ಅಶ್ವಿನೀಧಶ್ಯ। ಆಸ್ವ ವಾಜಿ ಹಯೋ ಹಯಃ ತುರಂಗಃ॥
ಯಿರ್ಾ ಆಶ್ವಿನೀ ನಕ್ಷತ್ರದ ಪೆಸರೂ ॥ ೧ ॥

ಅಂತ್ಯ: ಅಷ್ಟೌಪಾದೌ ಬುಧಶ್ಯಾತ್ ನವಧರಣಿಸುತಾ ಸಪ್ತಜೀವೇ ಪದಾನೀ ಗ್ನಾ್ಯಯಾಚೇಕಾದಶಾರ್ತಿ ಶನಿ ಶಶಿ ಭೃಗಸ್ವಾರ್ದಂ ಚತ್ವಾರೀಪಾದಂ ತಸ್ಮಿರ್ಂ ಕಾಲೇನ ಚ ರುಕ್ಷಂ ನ ಚ ತಿಥಿ ವಾರಂ ನೈವ ಲಗ್ನೋೕಪಯೋಗಂ ಯಾತ್ರೋದ್ವಾಹ ಪ್ರವೇಶಂ ಸಕಲಶುಭಕರಂ ಮಂಗಳಂ ಪ್ರಸ್ತುತಾ ಚಾ॥

ವಿಷಯ: ನಕ್ಷತ್ರ ನಿಘಂಟು ಇತ್ಯಾದಿ ಜ್ಯೋತಿಷವಿಚಾರ.

ವಿಶೇಷ: ೮,೮೮ನೆಯ ಗರಿಗಳ ಒಂದೇ ಪಾರ್ಶ್ವದಲ್ಲಿ ಬರೆದಿದೆ.

603

ಕೆ. ೨೮೩/೨	**ಜ್ಯೋತಿಷ ಸಂಗ್ರಹ**	ಶ್ಲೋಕ, ಟೀಕು
೧೫" × ೧.೫"	?	?
೧–೧೫ ಪತ್ರ	೭ ಪಂಕ್ತಿ	[illegible] ಅಕ್ಷರ

ಆದಿ: ಜ್ಯೋತಿಷ್ಯ ಬರೆಯುದಕೆ ನಿರ್ವಿಘ್ನಮಸ್ತೂ॥
ಯಿದು ನಾಡಿ ಕೂಟಾ॥ ಹೆಂಣಿನ ನಕ್ಷತ್ರದಿಂದಾ। ಗಂಡಿನ ನಕ್ಷತ್ರ।

ತನಕ ಯೇಣಿಸೀ ಸೇವ್ಯಾ| ಅಪಸೇವ್ಯಾ ಯೆಣಿಸಿಬೇಕೂ || ಮತ್ತೆ ಗಂಡಿನ ನಕ್ಷತ್ರದಿಂದಾ| ಹೆಂಣಿನ ನಕ್ಷತ್ರತ....ಕ ಯೆಣಿಸಿ| ಮೂರು ಬೆರಳ ಮೇಲೆ ಸೇವ್ಯ| ಅಪಸೇವ್ಯವ ನೋಡುವದೂ ||

ಅಂತ್ಯ : ಹೋರಫಲ| ಗುರುರ್ವಿವೆಹೋಗಾ ಮನೆಶ್ಯುಕ್ರೇಂ ಯುಗ್ಯೇಚಾಸಾರಿಗ್ಲಾಸೇ ಬುದಗ್ಲಾ ಅರ್ಕ ಚೆಂದ್ರಾಭೌಮೇ ನೃಪದರ್ಶಯೇಣೆ ಸಾ ಸರ್ವಾಸು ಕಾಯ್ಯ್ರಂ|| ಷಂಭಶಮುಖಂ || ೧ ||

ಟೀಕು|| ಗುರುವಿನ ಹೋರೆ ಮದುವೆ ಮುಂಜಿ ಶುಭಕಾರ್ಯಕು ಲೇಸೂ|| ಗಮನಕೆ ಶುಕ್ರ ಕಾಳಗಕೆ ಶನಿ| ವಿದ್ಯವ ಕಲಿಯುದಕೆ ಬುದು| ಅರಸುಗಳ ಬೇಟೆಗೆ ಸೂರ್ಯ| ಮಂಗಳ ಹೋದರೆ ಲೇಸು || ಯಿವು ಹೋರದ ಫಲಗಳು || ೮ ||

ವಿಷಯ: ದ್ವಾದಶಕೂಟಗಳು, ಮನೆ ಕಟ್ಟುವುದಕ್ಕೆ ಆಯ ಮೊದಲಾದ ಜ್ಯೋತಿಷ ವಿಚಾರ.

ವಿಶೇಷ : ಇದೇ ಕಟ್ಟಿನಲ್ಲಿ ನೀತಿಸಂಗ್ರಹ, ಜಲಶಿಲ್ಪಿ, ನಕ್ಷತ್ರ ಚೂಡಾಮಣಿ, ವಿಭೂತಿಮಂತ್ರ, ನರಪಿಂಗಲಿ, ರಾಮಧ್ಯಾನ ಈ ಕೃತಿಗಳಿವೆ. ಆರಂಭದ ಒಂದು ಗರಿಯಲ್ಲಿ ಕೆಲವು ರೇಖಾಚಿತ್ರಗಳಿವೆ.

604

ಕೆ. ೨೯೬	**ಜ್ಯೋತಿಷಸಂಗ್ರಹ**	ಶ್ಲೋಕ, ಟೀಕು
೧೧.೮"×೧.೫"	?	?
೧-೭೮ ಪತ್ರ	■ ಪಂಕ್ತಿ	೩೫ ಅಕ್ಷರ

ಆದಿ : ಶ್ರೀ ಗಣಾಧಿಪತಯೆ ನಮಃ || ಶುಭಮಸ್ತು || ಸೂತ್ರಾ ಭರೆಯುವದಕೆ ನಿರ್ವಿಘ್ನೆಮಸ್ತು||

ರುಣಾನುಬಂಧುರೂಪೇಣ| ಪಶುಪತ್ನಿ ಸುತಾಲಯಾ||
ರುಣಕ್ಷಯಕ್ಷಣಂ ಹಂತ್ರಿ| ಕಾ ಕತ್ರ ಪರಿವೇಧನಂ||

ಟೀಕು|| ರುಣಾನು ಸಮಂಧವುಂಟ್ಯಾದ ಪರಿಯಂತ್ರಕ್ಕು| ಪಶುಗಳು ಹೆಂಡತಿಯು ಮಕಳು| ಮನೆಯು ಮೊದಲಾಗಿ| ಚಂನ್ನಾಗಿ ಯಿರುವದು| ರುಣ ತೀರದ

ಮೇಲೆ। ಯಿವು .... ವ್ಯರ್ಥವಾಗಿ ಹೋಗುವದು ಯಿದಕೆ ದುಃಕ ಪಡಬಾರದೆಂದರಿವುದು.

X X X X

೪ನೆಯ ಪತ್ರ ಋತುಪ್ರಕರಣ॥ ಜ್ಯೋತಿಷ ಬರೆಯುವದಕ್ಕೆ ಅವಿಘ್ನಮಸ್ತು॥

ಅಷ್ಟವರ್ಷಾ ಭವೇತ್ಕನ್ಯಾ ನವವರ್ಷಾ ತು ರೋಹಿಣೀ।
ದಶವರ್ಷಾ ಭವೇದ್ಗೌರೀ ಅಥ ಉರ್ಧ್ವಂ ರಜಸ್ವಲಾ॥

ಅಂತ್ಯ: ವ್ಯಾಘ್ರಿಣೋ ವೃಗಮಂಡಲೀ ಕಪಿ ರಥೋಬಭ್ರುದ್ವಯಂ ವಾನರಃ। ಸಿಂಹ್ವಾ ಶ್ವಾ ವೃಗರಾಟ್ಪಶುಃ। ಕರಿಣೀ ಯೋನಿಸ್ತು ಭಾನಾಮಿಯಾಂ ಅಸ್ಯಾ ವಿವರಣಂ॥ ಚಿತ್ರಾತಿಷ್ಯೌ ಶುಭಪ್ರ . ಹಸ್ತಾದಿತ್ಯೌ ವಂಶವೃದ್ಧಿ। ಸ್ತನ್ನಾಶೌ ...ವಾರುಣೌ ಬ್ರಹ್ಮಾಜಪಾದೌ ಪೈತ್ರಾ ಚಾ। ಬಹು....ತ್ವ ಮಾಘ್ನಯಾತ್।

ವಿಷಯ: ಜ್ಯೋತಿಷ್ಯ.

ವಿಶೇಷ: ಆದಿಯಿಂದ ೭೦ರವರೆಗೆ ಗರಿಗಳು ಉತ್ತಮವಾಗಿದ್ದು, ಮುಂದೆ ಇರುವ ಗರಿಗಳು ಶಿಥಿಲವಾಗಿವೆ. ಬರಹವು ಸುಂದರ.

605

ಕೆ. ೩೮೨/೫	ಜ್ಯೋತಿಷ ಸಂಗ್ರಹ	ಪದ್ಯ, ಗದ್ಯ
೯.೩"×೧.೩"	?	?
೫೯—೭೫ ಪತ್ರ	೫ ಪಂಕ್ತಿ	೩೭ ಅಕ್ಷರ

ಆದಿ: ಗರ್ಭಾಧಿಕಾರ ಸೈಗ್ನೆ ನೋಡಿ ಹೇಳುವ ಕ್ರಮಾ॥
ಗರ್ಭಾಧಿಕಾರ॥ ಸತಿ ಯೇನ ಪಡವೆಳೆಂದೆನೆ
ಅತಿಶಯ ಬಲಚೇಷ್ಟದೋರೆ ಗಂಡೆಂದರಿ ನೀಂ
ಸತಿಯಡ ಚೇಷ್ಟೆಯ ಮುಟ್ಟಲು
ಮತಿವಂತ್ರ ಪೆಣ್ಣ ಪಡವಳೆಂಬುದು ಪುಶಿಯೇ॥ ೧॥
ಬಸುರಿವಳೇನಂ ಪಡವಳು
ಬೆಸಗೊಂಡರೆ ಶಶಿನೆವಪ್ಪಯೆಲನಂ ಮುಟ್ಟಲು
ವೊಸುಧೆಯೊಳು ಸಾವ ಪುತ್ರನ
ಶಶಿಮುಖಿ ತಾ ಪಡೆವಳೆಂಬದೇನಂ ಸರಿಯೇ॥ ೨॥

ಅಂತ್ಯ : ಮನೆ ಬಾಗಿಲ ಬಿಡುವ ಕ್ರಮಾ

ಕಾಲುಕಡೆ ಬಾಗಿಲ ಬಿಡೆ ಹೆಂಡತಿ ಸಾವ|ತಲೆಕಡೆ ಬಾಗಿಲ ಬಿಡೆ ಕಂನ್ನಾ ಕೊರೆವರು| ಬೆಂನ್ನಕಡೆ ಬಾಗಿಲ ಬಿಡೆ ರಾಜಭಯಾ | ಹೊಟ್ಟೆಕಡೆ ಬಾಗಿಲ ಬಿಡೆ ಮುಟ್ಟಿದ್ದು ಘನವಾಗಿ ಲಕ್ಷ್ಮೀ ಸೇರುವಳು ಯಿದನರಿತು ತಂನ ಹೆಸರಿನ ಬಾಗಿಲ ಆರುತಿಂಗಳು ಸಾದಿಸಿ ವಳ್ಳೆನಕ್ಷತ್ರ ವಳ್ಳೆದಿವಸ ತನಗೆ ಚೆಂದ್ರಬಲ ಸೂರ್ಯಬಲ ಉಂಟಾದಲ್ಲಿ ಮುಹೂರ್ತಗಂಬವನ್ನಿಕ್ಕುವದೂ || x x x x ೧೯ ಕ್ಕೆ ಮಧ್ಯಮಾ | ೨೦ ಕ್ಕೆ ಲೇಸೂ | ೨೧ ಕ್ಕೆ ಮಧ್ಯಮಾ | ೨೨ ಕ್ಕೆ ಲೇಸೂ | ೨೩ ಕ್ಕೆ ಹೆಂಡತಿ . . .

ವಿಷಯ : ಜ್ಯೋತಿಷದಲ್ಲಿ ಪ್ರಶ್ನೆ ಮತ್ತು ಮುಹೂರ್ತಗಳ ಫಲವಿಚಾರ.

ವಿಶೇಷ : ಅಸಮಗ್ರಪ್ರತಿ. ಓಲೆಗಳು ಮುರಿದಿವೆ. ಇದೇ ಕಟ್ಟಿನಲ್ಲಿ ಸ್ವರಚಿಂತಾಮಣಿ, ಬಾಲಗ್ರಹ ಚಿಕಿತ್ಸೆ, ನರಪಿಂಗಲಿ, ಸಾಮುದ್ರಿಕ ಲಕ್ಷಣ ಎಂಬ ಕೃತಿಗಳಿವೆ.

606

ಕೆ.೪೧೧/೧	**ಜ್ಯೋತಿಷ ಸಂಗ್ರಹ**	ಶ್ಲೋಕ, ಗದ್ಯ
೭.೨"×೨.೨"	?	?
೧–೭೩ ಪತ್ರ	೯ ಪಂಕ್ತಿ	೩೮ ಅಕ್ಷರ

ಆದಿ : ಆಯ ಗುಣಿಸುವ ಲಕ್ಷಣ ಬರವುದಕ್ಕೆ ಶುಭಮಸ್ತು ||

ವಿಸ್ತಾರಾಯಾಮ ರಾಶೌ ವಸುಗುಣಿತಯಿನೈರ್ಭಾಜಿತಂ ಶೇಷಮಾಯಾಃ | ರಾಮುಘ್ನಂ ಮನ್ವವಾಪ್ತಿ ವ್ಯಯಮನಲಗುಣ್ಯೈ : ನಾಗಭಕ್ತಿಸ್ತು ಯೋನಿ ಅ....ಭಿವರ್ಧತೇಷ್ಮಿ ಗಿರಿಕರ (೨೭) ಭಜಿತಂ ಶೇಷಮಶ್ವಾದಿ ಋಕ್ಷಂ ತಿಥಿಘ್ನಂ ತ್ರಿಂಶದಾಪ್ತೇ ನವಹತ ಗ್ರಹ ಸಪ್ತವಾರಾಸ್ತು ಶೇಷಂ ||

ಟೀಕು|| ವಿಸ್ತಾರವಾಗಿ ವುದ್ದ ಅಗಲವನು | ಅಳೆದು ವೊಟ್ಟುಗೂಡಿಕೊಂಡ ಕೋಲು | ಯೆಷ್ಟೊ | ಅದನು ೩ ಹೆಚ್ಚಿ . . . ಅದಂ ೮ ರಿಂ ಬಾಗಿಸಿ ವುಳಿದವು ಆಯಂಗಳು ೧ ವುಳಿದರೆ ಧ್ವಜಾಯ | ೨ ಧೂಮಾಯ |

ಅಂತ್ಯ : ಇಂತಿವೆಲ್ಲ ಶುಭಸ್ವಪ್ನ ಭೇದಂಗಳೂ ಶ್ರೀ ವೀತರಾಗಾಯ ನಮಃ | ಇಂನು ಅಶುಭಸ್ವಪನೆಂತೆನೆ ಪೇಳ್ದಪರು || x x x x ೪೪ ಬಿಂನ ಶಲಾಕೆ | ೪೫ ಸಮಾದಿ ವಿದಿ | ೪೬ ಆಕಾಸಜ್ವಾಲೆ | ೪೭ ವೊಡದಕೆರೆ ೪೮ ನಿರಾಕಾರಿ

(ನಷ್ಟಶರೀರ) ೪೯ ನಾಶಿಕಚ್ಛೇದ ೫೦ ರುಂಡಮಾಲೆ ೫೧ ಶಿಲಾಭೋಜನ ೫೨ ಪಿತೃದರ್ಶನ x x x x ಗರ್ಜಣೆ ಯಿಂತವೆಲ್ಲಾದು : ಸ್ವಪ್ನ ಭೇದಂಗಳೂ.

ವಿಷಯ: ಮನೆಯನ್ನು ಕಟ್ಟಲು ಆಯುಗಳು. ದ್ವಾದಶಭಾವಗಳ ಫಲ, ಪ್ರಶ್ನೆ ಇವುಗಳ ಸಂಗ್ರಹ.

ವಿಶೇಷ : ಇದೊಂದು ಸಂಕಲನ ಗ್ರಂಥ. ಇದರಲ್ಲಿ ಮೊದಲು ಉದ್ದ ಅಗಲಗಳಿಂದ ಬರುವ ಆಯುವನ್ನು ಲೆಕ್ಕಮಾಡಿ ಕೊಟ್ಟಿದೆ. ಬಳಿಕ ಗಾರ್ಗ್ಯಸಂಹಿತೆಯ ಕೆಲವು ಶ್ಲೋಕಗಳೂ ಮತ್ತು ಆ ಶ್ಲೋಕಗಳಿಗೆ ಟೀಕೂ ಇದೆ. ೬೩ನೇ ಪತ್ರದಿಂದ ಮುಂದೆ ಹೈವಳಿಪ್ರಶ್ನೆ, ರಾಹುಚಕ್ರ, ಗ್ರಹಣ ಲಕ್ಷಣ, ದಿಗ್ದ್ರುವಾದಿ ಸ್ವರವ್ಯಂಜನ ಸಂಸ್ಕಾರ ಕೇವಲಜ್ಞಾನ ಹೋರೆಯ ವರ್ಗಾಂತಾಕ್ಷರೋಪದೇಶ, ನಿದಾನ ಮತ್ತು ಸ್ವಪ್ನ ವಿಚಾರ. ೬೩ ರಿಂದ ೭೩ ಪತ್ರಗಳವರೆಗೆ ಹೈವಳಿಪ್ರಶ್ನೆ, ರಾಹುಚಕ್ರ, ಗ್ರಹಣಲಕ್ಷಣ ದಿಗ್ಧ್ರುವಾದಿ ಸ್ವರವ್ಯಂಜನ ಸಂಸ್ಕಾರ ಕೇವಲ ಜ್ಞಾನ ಹೋರೆಯ ವರ್ಗಾಂತಾಕ್ಷರೋಪದೇಶ, ಕಾಲನಿದಾನ ಮತ್ತು ಸ್ವಪ್ನ ವಿಚಾರಗಳಿವೆ. ಇಲ್ಲಿಂದ ಮುಂದಿನ ೬೩ ಓಲೆಯ ವೈದ್ಯವಿಚಾರದಿಂದ ಮುಂದುವರಿಯುತ್ತದೆ. ೭೮ ಪತ್ರದವರೆಗೆ ಕ್ರಮಾಂಕವಿದೆ. ಇದರ ಮೇಲೆ ೧೮೧ ರಿಂದ ೧೮೬ ಓಲೆಯೊಳಗೆ ವೈದ್ಯಾಮೃತದ ಸಕಲಜಂಗಮ ವಿಷಚಿಕಿತ್ಸಾವಿವರವಿರುವ ೨೫ನೇ ಪ್ರಕರಣದ ಒಂದು ಭಾಗವಿದೆ. ಕೊನೆಯಲ್ಲಿ ಕ್ರಮಾಂಕವನ್ನು ಬರೆಯದಿರುವ ೧೪ ಓಲೆಗಳಲ್ಲಿ ಪಂಚಪರಮೇಷ್ಠಿಗಳ ವ್ಯಾಖ್ಯಾ ಎಂಬ ಜೈನಸಿದ್ಧಾಂತಕ್ಕೆ ಸಂಬಂಧಪಟ್ಟ ಗ್ರಂಥವಿದೆ.

607

ಕೆ. ೨೮೧	**ಜ್ಯೋತಿಷ ಸಂಗ್ರಹ**	ಟೀಕು
೧೦"×೧.೫	?	?
೬–೧೧೭ ಪತ್ರ	೮ ಪಂಕ್ತಿ	೪೫ ಅಕ್ಷರ

ಆದಿ : ಶ್ರೀ x x x

ಕುಮಾರನಾಸ್ತುವಿನ ಪುಸ್ತಕಕ್ಕೆ ಶುಭಮಸ್ತು॥

ಬ್ರಂಹ, ಶುಕ್ರೋದಯುಮತ್ಯೇ ವಾ। ಭಾರ್ಗವಾಂಗಿರಿಶೇನೊ ವೃಭೌ ।

ಗೌತಮಸ್ಯಾಪಿ ಗಾರ್ಗೇ......ಮನುರ್ವೇಶೋಭೃಗುಜ್ಜಸಾ। ವಿಶ್ವಕರ್ಮಾದಿ

ನಾ ಚ್ಯೆನಾ ವಾಸ್ತುವಿದ್ಯಾ ವಿಶಾರದಾ ॥ ೧ ॥

X X X ಟೀಕು॥ ವೃಷಭಸಂಕ್ರಾಂತ್ರಿ। ಸಿಂಹ್ಮಸಂಕ್ರಾಂತ್ರಿ। ವ್ರಿಶ್ಚಿಕಸಂಕ್ರಾಂತಿ। ಕುಂಭ ಸಂಕ್ರಾಂತ್ರಿ। ಯಿಾ ನಾಲ್ಕು ಸಂಕ್ರಾಂತ್ರಿಯಲ್ಲು X X X ಮನೆ ಕಟಲಾಗದು.

ಅಂತ್ಯ: ಯೇಳು ವರುಷಾ। ಆದರಿಂದಾ ಲೇಸೂ। ಜ್ಯೋತಿಶಾಸ್ತ್ರ ಬಲ್ಲವರು ಯಿಾ ನಕ್ಷತ್ರ ಚೂಡಾಮಣಿ ತಿಳಿದು ಪೇಳುವದೂ। ಗ್ರಹಗಳ ಫಲ ಚೆಂನ್ನಾಗಿ ತಿಳಿದು ಪೇಳುವದೂ। ಯಿಂತಿ ರೇವತಿಯು ಫಲ ಸಮಾಪ್ತಃ

ವಿಷಯ: ಕುಮಾರವಾಸ್ತು, ಸಂವತ್ಸರಫಲ, ನಕ್ಷತ್ರ ಫಲಗಳು.

ವಿಶೇಷ: ೨೯, ೬೬, ೬೭, ೬೮, ೭೫, ೮೨, ೯೪ ಪತ್ರಗಳು ಲುಪ್ತ. ೩೬ನೆಯ ಪತ್ರ ಎರಡಿವೆ. ೬ನೆಯ ಪತ್ರದಿಂದ ಗ್ರಂಥ ಪ್ರಾರಂಭವಾಗಿದೆ. ಗ್ರಂಥ ಸ್ವಲ್ಪ ಶಿಥಿಲವಾಗಿದೆ. ಗ್ರಂಥಕ್ಕೆ ಸಂಬಂಧಿಸದ ಕೆಲವು ಪತ್ರಗಳು ಆದಿಯಲ್ಲಿವೆ. ಗ್ರಂಥಾಂತ್ಯದ ೧೧೮-೧೨೦ಪತ್ರಗಳಲ್ಲಿ ಕಕ್ಕೋಕಶಾಸ್ತ್ರವು ತೆಲುಗಿನಲ್ಲಿದೆ.

608

ಕೆ. ೧೧೯	ಜ್ವಾಲಾಮಾಲಿನೀಕಲ್ಪ	ಶ್ಲೋಕ, ಟೀಕು
೧೩.೫"×೧.೮"	ಮಲ್ಲಿಷೇಣ	ಸು. ೧೩೦೦
೧-೬೪ ಪತ್ರ	೯ ಪಂಕ್ತಿ	೬೦ ಅಕ್ಷರ

ಆದಿ: ಶ್ರೀ....ಯ ನಮಃ ॥

ಅತಿಹೃಷ್ಟಮತಿ ವಿಷಂಣಂ ಭವಾಂತರ ಸ್ನೇಹವ್ವೈರ ಸಂಬಂದಂ।
ಭೀತಂ ಬಾನ್ಯಮನಸ್ಕಂ ಗ್ರಹಾ ಪ್ರಗೃಹ್ಣಂತಿ ಭು ....

ಪೆರ್ಚಿದನಂ। ಅತಿವಿಷಂಣಂ। ಸತ್ತ ಕೆಟ್ಟ ಅಗಲ್ಕೆಯೊಳೆರ್ದೆಯೊಡೆದು ಮಱುಗುತ್ತಿರ್ದಂ। ಭವಾಂತರ ಸ್ನೇಹವ್ವೈರ ಸಂಬಂದಂ। ಮುಂನಿನ ಭವ ಮೋಹದಿಂದಂ। ಮುಂನಿನ ಭವದ ಪಗೆ ಸಂಮುಂದದಿಂದಂ। ಭೀತಂ। ಅಂಜಿದನುಮಂ। ಅನ್ಯಮನಸ್ಕಂ। ಪೆಱಪೆಱತಂ ಬಗೆಯುತ್ತಿರ್ದ್ದನುಮಂ। ಗ್ರಹಾ। ಗ್ರಹಂಗಳು। ಪ್ರಗೃಹಣ್ಣಂತಿ। ಪಿಡಿವವು। ಭುವಿ। ಪೃಥ್ವಿಯೊಳು। ಮನುಜಂ। ಮನುಷ್ಯನಂ ॥ ೧ ॥

ಅಂತ್ಯ: ತಸ್ಯ। ಆತಂಗೆ। ಕಿಂ। ಯೇನು। ವರ್ನ್ಯತೇ। ಬಂಣಿಸುವುದು। ಅ....। ಶಿಷ್ಯಸ್ತಸ್ಯೇಂದ್ರಣಂದಿವ್ವಿಮಲಗುಣೋದ್ದಾಮ ದಾಮಾಭಿರಾಮಃ X X X X X ಅಯಂ। ಇದು। ಹೇಳಾಚಾರ್ಯನಿಂದಂ।

ಉದಿತಾರ್ಥ। ಪೇಳಿಪಟ್ಟ। ಅರ್ಥಂ। ವ್ಯರಚಿತ! ಮಾಡಿ ಪಟ್ಟುದು। ನಿರುಪಮ। ಉಪಮಿಸಲು ಬಾರದು। ಜ್ವಾಲಿನಿ ಮಂತ್ರವಾದಃ। ಜ್ವಾಲಾಮಾಲಿನಿಕಲ್ಪಂ ॥ ಶ್ರೀ ॥

ಅಷ್ಟಶತಸ್ಯೈಕಷಷ್ಟಿ ಪ್ರಮಾಣ ಶಕವತ್ಸರೇಷ್ವತೀತೇಷು ।
ಶ್ರೀಮಾನ್ಯ ಖೇಟಕಟಕೆ ಪರ್ವ್ವಣ್ಯಕ್ಷಯ ತೃತೀಯಾಯಂ ॥

ಅಷ್ಟಶತಸ್ಯೈಕಷಷ್ಟಿ। ಯೆಂಟುನೂಱ ಅಱುವತ್ತೊಂದು। ಪ್ರಮಾಣ। ಪವಣೇನ। ಶಕವತ್ಸರೇಷು। ಶಕವತ್ಸರಂಗಳು। ಅತಿತೇಷು। ಕಳಿದವಱೊಳು। ಶ್ರೀಮಾನ್ಯ ಖೇಟಕಟಕೆ। ಶ್ರೀಯಿಂದೊಪ್ಪುವ ಮಂನೆಯ ಖೇಟಮೆಂಬ ಕಟಕದೊಳು। ಪರ್ವ್ವಣೀ। ಪರ್ವ್ವದೊಳು। ಅಕ್ಷತೃತೀಯಾಯಂ। ಅಕ್ಷತದಿಗೆಯೊಳು ॥ x x x x

ಇತ್ಥಂ ಪಂಡಿತ ಮಲ್ಲಿಷೇಣ ರಚಿ........ಜ್ವಾಲಿನಿ ದೇವಿಕಾ ಸ್ತೋತ್ರಂ
ಶಾಂತಿಕರಂ ಭಯಾಪಹರಣಂ ಸೌಭಾಗ್ಯ ಸಂಪತ್ಕರಂ।
ಪ್ರಾತಸ್ಮೃಸ್ತ್ರಕ ಸಂನಿವೇಷಿತಕರೋ ನಿತ್ಯಂ ಪಠೇದ್ಯಃ ಪುಮಾನ್
ಶ್ರೀ ಸೌಭಾಗ್ಯಮನೋಭಿವಾಂಛಿತ....ಲೀಲಯಾ ॥ ೯ ॥

ಇತ್ಯಷ್ಟಕಂ ಸಮಾಪ್ತ। ದೊಡತಂಮುಪಾಧ್ಯರು ಬರದ ಜ್ವಾಲಿನೀ ಕಲ್ಪಕ್ಕೆ ಮಂಗಲಮಹಾಶ್ರೀ॥

ವಿಷಯ: ಜ್ವಾಲಾಮಾಲಿನೀ ಸ್ತೋತ್ರ ಮತ್ತು ಮಂತ್ರ.

ವಿಶೇಷ: ಗರಿಗಳ ಅಂಚು ಅಲ್ಲಲ್ಲಿ ಮುರಿದಿದೆ. ಶಕಟರೇಫದ ಬಳಕೆ ಇದೆ. ಸುಂದರಾಕ್ಷರ. ೧೬ ಮತ್ತು ೨೨ನೆಯ ಗರಿಗಳಲ್ಲಿ ಸ್ವಲ್ಪ ಭಾಗವು ಲುಪ್ತವಾಗಿದೆ. ೫೦,೫೧ನೆಯ ಗರಿಗಳು ಮುರಿದು ತುಂಡಾಗಿವೆ. ಇದೇ ಗ್ರಂಥದ ಮೊದಲಲ್ಲಿ ಕ್ರಮಾಂಕವಿಲ್ಲದ ೪ ಗರಿಗಳು ಜ್ವಾಲಮಾಲಿನೀ ಕಲ್ಪದ ಒಂದು ಭಾಗವಾಗಿರಬಹುದು.

609

ಕೆ.ಬಿ. ೪೩೦	**ಡಂಭಾಚಾರಿ ಕಥೆ**	ಪದ್ಯ, ಗದ್ಯ
೮"×೬.೪"	?	?
೧-೬೭ ಪತ್ರ	೧೫ ಪಂಕ್ತಿ	೧೨ ಅಕ್ಷರ

ಆದಿ: ಡಂಭಾಚಾರಿ ಪದಾ ಮಾತು ಬರೆಯುವದಕ್ಕೆ ಶುಭಮಸ್ತು॥
ರಾಗ। ಮೋಹನ। ಆದಿತಾಳ॥

ಡಂಬಾಚಾರಿ ಬಂದಾ
ಕಾಮಕ್ರೋಧ ಲೋಭ ಮೋಹ ಮದ ಮತ್ಸರದಿಂ ||ಪಲ್ಲ||
ಮಂದನಾಗಿ ತಾಯಿ ತಂದೆಗಳನು ಜರಿದಾ
ನಂದ ವೇಶ್ಯರ ಮನೆಯು ಕಂದನಿವನೆಂದು ಜಗದಿ
ಕುಂದನೆ ಸಜ್ಜನರ ತೊರನು ಬಂದು ದುರ್ಜನರ ನೆರದು
ನುುಂದಾಗಿ ಸನ್ಮಾನವನಿಟ್ಟು ಬಂವಲ್ಲಿ ತಂನ್ಮಾನವ ಬಿಟ್ಟು ||ಅನುಪಲ್ಲ||

ಜನಕನು ಘಳಿಸಿದ ಧನ ವನ ಕಾರ್‍ಯದಿ
ಕಳೆವವರಲ್ಲಿ ಶಿಖಾಮಣೀ
ಜನನತರಾಗಿಹ ಸತಿಸುತರಿಗೆ ವೆಥೆಯು
ಘನವ ಮಾಡುವ ಶಿರೋಮಣಿ ||

ಅಂತ್ಯ: ಮಾತು| ಶರಣುಶರಣು ಸ್ವಾಮಿ ಚತ್ರಬ್ರಾಂಹರೆ| ದಂಡವ್ಮೆಂಯ| ವುಲ್ಲಂಘ್ಯ ಶಟ್ಟವಾರು| ಸಲಾಮುವರಿಗಿರದು| ಶೇಕ ... . ಲಚ್ಚೆಯವರೆ ಬನ್ನಿರಿ| ಕುತುಕೊಳ್ಳಿರಿ| ನನಿಗೆ ವಿವೇಕವಿಲ್ಲದ ಕಾಲದಲ್ಲಿ ಸಹಾಯಂ ಮಾಡಿದ ಪುಂಣ್ಯವಂತೆರೆ ಯಿಗೊ ನಿಂಮ ಹಣಗಳೆಲ್ಲಾ ತೆಗೆದುಕೊಂಡು ಹೋಗಿರಿ ಯಿಗೋ ನಿಮಗೆ| ಹತ್ತುಹತ್ತುಸಾವಿರ ರೂಪಾಯಿ| ಯಿನಾಮು ತೆಗೆದು ಕ್ಕೊಳ್ಳಿರಿ| ಅಯ್ಯೊ ಛತ್ರದ ಬ್ರಾಂಹರೆ ನಿವು ಹತ್ತು ಸಾವಿರದ ರೂಪಾಯಿ ಯಿನಾಮೂ| ....ಗದ ಕೊಂಡು ಪೋಗಿ| ಅಜೀ ಶವ್ವಾಜಿ ಯಿಗೊ ನಿನಗೆ ಹತ್ತು ಸಾವಿರ ವರಹಾ ಕೊಡುತ್ತೇನೆ ತೆಗೆದುಕೊಂಡು ಸುಖವಾಗಿ ಯಿರು| ದಾದಿಗಳನ ಕರೆ| ಯೆಲೆ ಗುಣಭೂಷಣಿಗಳ ದಾದಿಗಳೆ ನೀವು ಹತ್ತುಹತ್ತು ಸಾವಿರ ರೂಪಾಯಿ ತೆಗೆದುಕೊಳ್ಳಿರೀ ||ಶ್ರೀ||

ಡಂಭಾಚಾರಿ ಕಥೆ ಸಂಪೂರ್ನ ಮಂಗಳಮಹಾಶ್ರೀ||

ವಿಷಯ: ಡಂಭಾಚಾರಿಯಕಥೆ.

ವಿಶೇಷ: ಪತ್ರಗಳಿಗೆ ಹುಳು ಹಿಡಿದಿರುವುದರಿಂದ ಅಕ್ಷರ ಲೋಪವಿದೆ. ಅರ್ವಾಚೀನ ಗ್ರಂಥ. ಕ್ರಮಸಂಖ್ಯೆ ೧ರಿಂದ ೪೯ ಮತ್ತು ೧ರಿಂದ ೧೮ ಎಂಬುದಾಗಿದೆ. ಗ್ರಂಥದ ಆದಿ ಮತ್ತು ಅಂತ್ಯದಲ್ಲಿ ಕೆಲವು ಶುದ್ಧ ಪತ್ರಗಳಿವೆ.

610

ಕೆ.ಬಿ. ೨೨೨ — **ತತ್ತ್ವಚಿಂತಾಮಣಿ** — **ವಚನ**

ಆ"×೬.೩" — ಚಿದಾನಂದಾವಧೂತ — ಘು. ೧೭೫೦

೧-೩೩ ಪತ್ರ — ೧೪ ಪಂಕ್ತಿ — ೨೬ ಅಕ್ಷರ

ಆದಿ : ಪರಂ ಯಸ್ಯ ಧರಿತ್ರೀ ಜಲಧರಕಲಶಂ ಲಿಂಗಮಾಕಾಶಮೂರ್ತಿಂ ನಕ್ಷತ್ರ ಮಾಲಾ। ಸಂಭೋದನೆ॥

ಐಯ್ಯ ಶಿವನ ಪಂಚಮುಖದಲ್ಲಿ ಪೃಥ್ವಿ ಅಪ್ಪು ತೇಜ ವಾಯು ಆಕಾಶಯೆಂಬ ಪಂಚಭೂತಂಗಳು ಪಂಚೀಕೃತವಾಗಿ ವಂದೊಂದು ಭೂತಕ್ಕೆ ಐದು ಐದರ ಲೆಕ್ಕದಿಂದ ಯಿಪ್ಪತ್ತೈದು ತತ್ವಂಗಳು ಪುಟ್ಟಿದವು. ಅದು ಕೂಡಿ ದೇಹ ವಾಯಿತು। ಐಯ್ಯ ದೇಹವಾದ ವಿವರ ಯಂತೆಂದೊಡೆ ಪಂಚಭೂತವೆ ಸ್ಥೂಲ ಶರೀರವಾಯಿತು।

ಅಂತ್ಯ : ಆತ್ಮನು ಚಿತ್ತವೆಂಬ ಕರಣದೊಡನೆ ಕೂಡಿ ಅಪಾನವಾಯುವಿನಲ್ಲಿ ಬೆರತು ಜಿಂಹ್ವಸ್ಥಳದಲ್ಲಿ ನಿಂತು ಮಧುರ ಆಮ್ಲ ಲವಣ ಹುಳಿ ತಿಕ್ತ ಕಟು ಕಷಾಯ ಯಿವಗಳ ರುಚಿಯು ತಿಳಿವ ಪ್ರಯೋಜನನಾಗಿ ಸರ್ಜನ ವಿಸರ್ಜನಂಗಳ ಗುದಸ್ಥಾನದಿಂದ ವರ್ಜಿಸುತ್ತಿಹನು। ಆತ್ಮನು ಹಂತಾರ ವೆಂಬ ಕರಣದೊಡನೆ ಕೂಡಿ ಪ್ರಾಣವಾಯುವಿನಲ್ಲಿ ಬೆರತು ಘ್ರಾಣದಲ್ಲಿ ನಿಂತು ಸುಗಂಧ ದುರ್ಗಂಧಗಳನರಿವ ಪ್ರಯೋಜನನಾಗಿ ಪಾಯುಸ್ಥಾನ ದಲ್ಲಿ ಯಿರುತ್ತಿಹನು॥ ಯಿತಿ ಶ್ರೀಮತ್ಪರಮ ಪರಿವ್ರಾಜಕಾಚಾರ್ಯ ಚಿದಾನಂದಾವಧೂತ ವಿರಚಿತಮಪ್ಪ ತತ್ವಚಿಂತಾಮಣಿ ದ್ಯಾನಪರತತ್ವ ಚಂದ್ರೋದಯ ಸಮಾಪ್ತ ಮಂಗಳಮಹಾಶ್ರೀ॥

ವಿಷಯ: ವೀರಶೈವತತ್ತ್ವ.

ವಿಶೇಷ: ಮೋಡಿ ಅಕ್ಷರ. ಗ್ರಂಥ ಸಮಗ್ರವಾಗಿದೆ. ಆರಂಭದ ಐದು ಪತ್ರಗಳಲ್ಲಿ ಹುಳು ಹೊಡೆದು ರಂಧ್ರಗಳು ಬಿದ್ದಿವೆ.

611

ಕೆ.ಬಿ. ೪೧೦/೧	**ತತ್ತ್ವಚಿಂತಾಮಣಿ**	ವಚನ
೭.೬"×೬.೧"	ಚಿದಾನಂದಾವಧೂತ	ಸು. ೧೭೫೦
೨೩-೩೧ ಪುಟ	೧೬ ಪಂಕ್ತಿ	೩೭ ಅಕ್ಷರ

ಆದಿ : ಶ್ರೀಮತ್ಸಚ್ಚಿದಾನಂದ ಯೋಗಿಗಳು ವಿರಚಿತವಾದ ಕಂನಡ ಭಾಷೆಯಲ್ಲಿ ತತ್ವಚಿಂತಾಮಣಿಯುಂಬ ಗ್ರಂಥ ಬರಿಯುವದಕ್ಕೆ ಶುಭಮಸ್ತು॥ ಸಂಬೊಧನೆ॥ ಐಯ್ಯಾ। ಶಿವನ ಪಂಚಮುಖದಲ್ಲಿ ಪೃಥುವಿ। ಅಪ್ಪು। ತೇಜ। ವಾಯು। ಆಕಾಶ। ಯಂಬ ಪಂಚಭೂತಂಗಳು ಪಂಚೀಕೃತವಾಗಿ

ವಂದೊಂದು ಭೂತಕ್ಕೆ ಐದುಐದರ ಲೆಕ್ಕದಿಂದಾ ಯಿಪ್ಪತ್ತೈದು ತತ್ವಂಗಳು ಪುಟ್ಟಿದವು। ಅದು ಕೂಡಿ ದೇಹವಾಯ್ತು। ಐಯ್ಯಾ ದೇಹವಾದ ವಿವರಾ ಯಂತೆಂದಡೆ। ಪಂಚಭೂತವೆ ಸ್ಥೂಲಶರೀರವಾಯ್ತು ॥

ಅಂತ್ಯ : ದೇಹಿಯಂಬ ಭ್ರಾಂತಿಯ ಮರತು ಪ್ರಪಂಚಕ್ಕೆ ದೂರನಾಗಿ ಕಾಮಕ್ರೋಧ ವರ್ಜಿತನಾಗಿ ಜನನ ಮರಣಕ್ಕೆ ಅತೀತನಾಗಿ ಲಿಂಗದೇಹಭಂಗವಾಗಿ ಸರ್ವಬ್ರಹ್ಮವಾಗಿ ಸಮಸ್ತನ ಜಗವೆಲ್ಲಾ ತಂನ ವಿಲಾಸವಾಗಿ ಕೇವಲ ಸಮಾದಿಷ್ಟನಾಗಿ ರಾಜಾದಿ ರಾಜಯೋಗವೆಂದೆನಿಸುವ ಆ ಮಹಾರಾಜ ಯೋಗಿ ಲೀಲೆಯಂನಾಡುತ್ತಾ ಸುಸುಮ್ನಾಚಕ್ರವಂನಡರಿ ಶತಕೋಟಿ ಸೂರ್ಯಪ್ರಕಾಶ ಬೆಳಕಿನಲ್ಲಿ ಬೆಳಗುತ್ತಾ ಅವಧೂತನಾಗಿ ಕೇವಲ ಬಯ ಲಾಗಿ ನಿಜದಿ ನಿಂತಡೆ ನಿಜಮುಕ್ತಿ ಕಣಾ ಚಿದಾನಂದ ಸದ್ಗುರುಪ್ರಭುವೆ ॥ ೧೫ ॥ ಯಿತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಚಿದಾ ನಂದಾವಧೂತ ವಿರಚಿತ ಶಿಷಿಭ್ಯಂ ಬೋಧ ಬೋಧಿತ ತತ್ವಚಿಂತಾಮಣಿ ಗ್ರಂಥ ಸಂಪೂರ್ಣ ಮಂಗಳ ಮಹಾ ಶ್ರೀ ॥

ವಿಷಯ : ವೀರಶೈವ ತತ್ತ್ವ.

ವಿಶೇಷ: ಈ ಪುಸ್ತಕದಲ್ಲಿರುವುದು ಪ್ರಥಮಾಧ್ಯಾಯ ಮಾತ್ರ. ಆರಂಭದ ೮ ರಿಂದ ೧೮ ಮತ್ತು ೫೩ ರಿಂದ ೬೮ ಪುಟಗಳಲ್ಲಿ ಕೆಲವು ದೇವರನಾಮುಗಳೂ, ಗುರುಶಿಷ್ಯಬೋಧಾಮೃತವೂ ಕೊನೆಯಲ್ಲಿ ನಂಜುಂಡ ವಿರಚಿತ ಶೂನ್ಯ ಸಿಂಹಾಸನ ನಿರ್ಮಾಣವೆಂಬ ಗ್ರಂಥವೂ ಇವೆ.

612

ಕೆ.ಬಿ. ೪೧೬/೩	**ತತ್ತ್ವಚಿಂತಾಮಣಿ**	ವಚನ
೫.೭"×೫.೪"	ಚಿದಾನಂದಾವಧೂತ	ಸು. ೧೭೫೦
೧೦೪-೧೧೧ಪತ್ರ	೧೦ ಪಂಕ್ತಿ	೧೯ ಅಕ್ಷರ

ಆದಿ : ಗುರುರ್ಬ್ರಂಹ್ಮಾ ಗುರುವಿಷ್ಣು ಗುರುದೇವೋ ಮಹೇಶ್ವರಾ।
ಗುರು ಸಾಕ್ಷಾತ್ ಪರಬ್ರಂಹ್ಮಾ ತಮಸ್ಮೈ ಶ್ರೀ ಗುರುವೇ ನಮಃ ॥
ಚಿದಾನಂದ ಯೋಗಿಗಳು ವಿರಚಿತಮಾದ ಕಂನಡಭಾಷೆಯಲ್ಲಿ ಯೋಗಸಾರದ ತತ್ವಚಿಂತಾಮಣಿಯಂಬ ಗ್ರಂಥ ಬರೆಯುವುದಕ್ಕೆ ಸುಭಮಸ್ತು ಶ್ರೀರಸ್ತು ಐಯ ಶಿವನ ಪಂಚಮುಖದಲ್ಲಿ ಪ್ರುಥ್ವಿ। ವಿ। ಅಪ್ಪು। ತೇಜ। ವಾಯು। ಆಕಾಶವೆಂಬ ಪಂಚಭೂತಂಗಳು ಪಂಚೀಕೃತವಾಗಿ ವಂದೊಂದು ಭೂತಕ್ಕೆ

ಐದ್ಯೆದು ಲೆಖ್ಖದಿಂದ ಯಿಪ್ಪತ್ಯೆದು ತತ್ವಂಗಳು ಪುಟ್ಟಿದವು । ಅದು ಕೂಡಿ ದೇಹವಾಯಿತು ಐಯ ।

ಅಂತ್ಯ : ಸತಿಸುತರು । ಬಾಂಧವರು । ಯಿದೆ ಪ್ರಕಾರ ಸರ್ವರು । ಜನ್ಮಗಳ ತಿರುಗುವರು । ಕಣಾ । ಚಿದಾನಂ ಸದ್ಗುರು ಪ್ರಭುವೇ ॥ ೫ ॥

ಕೇಳ್ಯೆಯ್ಯ ರಸ್ತೆಕಾರರಿಗೆ ರಸ್ತೆ ಮಳಿಗೆಯಲ್ಲಿ ಆದ ಬೇಟ ಅಲ್ಲದೆ ತಿರಿಗಿ ಕಂಡೆನೆಂದರೆ ಕಾಣೋದಕಿಲ್ಲ । ಅಪ್ರ.

ವಿಷಯ : ವೀರಶೈವ ತತ್ತ್ವ.

ವಿಶೇಷ : ಅಸಮಗ್ರಪ್ರತಿ. ಇದೇ ಪುಸ್ತಕದಲ್ಲಿ ಗುಹೇಶ್ವರಾಂಕಿತ ವಚನ, ಲಿಂಗ ಸೂತ್ರ, ಚೆನ್ನಬಸವೇಶ್ವರ ವಚನ ಎಂಬ ಕೃತಿಗಳಿವೆ. ಮಧ್ಯದಲ್ಲಿ ರುದ್ರಾಧ್ಯಾಯಕ್ಕೆ ಸಂಬಂಧಪಟ್ಟ ಎರಡು ಪತ್ರಗಳಿವೆ. ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ. ಇವುಗಳಲ್ಲಿ ಮಧ್ಯೆ ಒಂದೆರಡು ಪತ್ರಗಳಲ್ಲಿ ಹಿಂದಿಯ ಒಂದೆರಡು ಹಾಡುಗಳೂ ಕೆಲವು ತತ್ತ್ವಬೋಧಕ ಹಾಡುಗಳೂ ಅಪೂರ್ಣವಾಗಿ ಇವೆ.

613

ಕೆ.ಬಿ. ೨೩೨	**ತತ್ತ್ವತ್ರಯ ವಿವರಣ**	ಗದ್ಯ
೮″×೬.೬″	?	?
೧–೨೭ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ಶ್ರೀಶೈಲೇಶ ದಯಾಪಾತ್ರಂ ಧೀ ಭಕ್ತ್ಯಾದಿ ಗುಣಾರ್ಣವಂ ।
ಯತೀಂದ್ರ ಪ್ರವಣಂ ವಂದೇ ರಮ್ಯಜಾಮತರಂ ಮುನಿಂ ॥
ಲೋಕಾಚಾರ್ಯಯ ಗುರವೇ ಕೃಷ್ಣಪಾದಸ್ಯ ಸೂನವೇ ।
ಸಂಸಾರಭೋಗಿ ಸಂದಷ್ಟ ಜೀವ ಜೀವಾತವೇ ನಮಃ ॥

ತನಗೆ ಮೋಕ್ಷ ಬೇಕೆಂಬ ಯಿಚ್ಛೆಯುಳ್ಳ ಚೇತನನಿಗೆ ಮೋಕ್ಷ ವುಂಟಾಗುವಲ್ಲಿ ತತ್ವತ್ರಯಗಳ ಚನ್ನಾಗಿ ತಿಳಿಯಬೇಕು । ತತ್ವತ್ರಯ ಮೂರೇನೆಂದಡೆ । ಚಿತ್ತು । ಅಚಿತ್ತು । ಯಿಶ್ವರನು । ಅವರಲ್ಲಿ ಚಿತ್ತೆಂಬುದು ಜೀವಾತ್ಮನು ।

ಅಂತ್ಯ : ಪ್ರಪತ್ತಿಯಲ್ಲಿ ಶಕ್ತಿಯಿಲ್ಲದವನಿಗೆ ಆಚಾರ್ಯಾಭಿಮಾನ ತತ್ವತ್ರಯಾಭಿವಿಚಾರ ಪ್ರಥಮದಲ್ಲಿ ಚೇತನನಿಗೆ ಅನನ್ಯರ್ಹತೆ ಶೇಷತ್ವ ಸ್ವರೂಪವನು ಚಿಗುರಿಸುವದು. ಆಮೇಲೆ ವುಪಾಯಾಧ್ಯವಸಾಯಮನುಂಟುಮಾಡಿ

ಹುವ್ವಾಗುವಂತೆ ಮಾಡುವದು. ಆಮೇಲೆ ಅನಂನ್ಯ ಭೋಗತ್ವಮನುಂ ಆಚಾರ್ಯಾಭಿಮಾನಮೆ ವುತ್ತಾರಕಮೆಂಬ ಅಧ್ಯವಸಾಯವನುಂ ನೆಲೆನಿಲ್ಲಿಸಿ ನಿತ್ಯಂ ಕೈಂಕರ್ಯಯೋಗದಿಂದ ಸ್ವರೂಪಮನುಂ ಫಲಪರ್ಯಂತವಾಗಿ ಮಾಡುವದು। ಪಿಳ್ಳೈಲೋಕಾಚಾರ್ಯರ ತಿರುವಡಿಗಳೆ ಶ್ರೀಶೈಲಗುರುವು ನಿರೂಪಿಸಿದಂತೆ ತತ್ವತ್ರಯ ವಿವರಣ ಸಂಪೂರ್ನ ಮಂಗಳ ಮಹಾ ಶ್ರೀ॥

ವಿಷಯ : ವಿಶಿಷ್ಟಾದ್ವೈತ ವೇದಾಂತ.

ವಿಶೇಷ: ಮೋಡಿ ಅಕ್ಷರ, ಪಿಳ್ಳೈಲೋಕಾಚಾರ್ಯರ ತತ್ತ್ವತ್ರಯ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ವಿವರಿಸಲಾಗಿದೆ.

614

ಕೆ. ೩೫೫/೧೧	**ತತ್ತ್ವ ನಿರ್ಣಯ**	ಶ್ಲೋಕ, ಗದ್ಯ
೮.೫"×೧.೯"	?	?
೧೫೭-೧೬೦ ಪತ್ರ	೧೨ ಪಂಕ್ತಿ	೫೦ ಅಕ್ಷರ

ಆದಿ : ಗೃಜ್ಞಾತೃಸಮಾನ ಶ್ರೋತ್ರಂ ಚ। ಶಬ್ದೋ ವಾ ಗಗನಾಂಶಕಾಃ।
ವ್ಯಾನೋ ಮನ: ಚರ್ಮ ಸ್ಪರ್ಶ ಪಾಣಿಶ್ಚ ಪವನಾಶಕಾಃ।
ಚಕ್ಷುರ್ಬುದ್ಧೋ ದಾನರೂಪ ಪಾದಂ ಚೈತ್ಯನ್ಯಲಾಂಶಕಾಃ।
ರಸಂ ಚಿತ್ತಾಪಾನ ಜಿಹ್ವ ಗುಹ್ಯಂ ಚೈವ ಜಲಾಂಶಕಾಃ।

X X X X

ವ್ಯೋಮಗುಣಮಿತಿ। ನಿತ್ಯಾನಿತ್ಯ ವಸ್ತುವಿವೇಕ ಇಹ ಮುತ್ರಾರ್ಥಫಲ ಭೋಗ ವಿರಾಗ ಸಮಾದಿ ಷಟ್ಕ ಮುಮುಕ್ಷತ್ವವೆಂಬ ಈ ನಾಲ್ಕು ಸಾಧನ ಚತುಷ್ಟಯವೆಂದು ಹೇಳಲ್ಪಟ್ಟವು।

ಅಂತ್ಯ : ....ತತ್ವವ ನೋಡುವಲ್ಲಿ ಆವ ತತ್ವವಂ ಅಧಿದೇವತೆಗಳಂನಱಿದು ನಾಡಿ ಭೇದವಂನಱಿದು ಸ್ವರ್ಗ ಮರ್ತ್ಯ ಪಾತಾಳ ಲಕ್ಷಣಂಗಳನಱಿದು ಘಳಿಗೆ ಪಲ್ಲಟವನಱಿದು ದೇಹವರ್ತನೆಯನಱಿದು ಯಡದ ಕಡೆಯು ನೋಡಲು ಬಲದ ಕಡೆಯು ಹಾಇದು ಬಲಕಡೆಯು ನೊಡಲು ಯಡದ ಕಡೆಗೆ ಹಾಯ್ದಡೆ ಲಿಂಗದಲ್ಲಿ ಐಕ್ಯವಾದೆಹೆನೆಂದಱತಡೆ ಆತ ಲಿಂಗೈಕ್ಯ ತತ್ವಜ್ಞ। ಇಷ್ಟಲ್ಲದೆ ಬಱಿಯ ಮಾತಿನ ತತ್ವಜ್ಞರಿಂದಡೆ ಮೆಚ್ಚ ನಮ್ಮ ಕೂಡಲ ಚೆನ್ನಸಂಗೈಯ್ಯ। ತತ್ವನಿರ್ನಯ ಸಮಾಪ್ತ ಮಂಗಳ ಮಹಾಶ್ರೀ

ವಿಷಯ : ವೀರಶೈವ ತತ್ತ್ವ.

ವಿಶೇಷ : ಶಕಟ ರೇಫದ ಬಳಕೆ ಇದೆ. ಇದೇ ಕಟ್ಟನಲ್ಲಿ ಶಿವಜ್ಞಾನ ಬೋಧೆ ಮೊದಲಾದ ಇತರ ೧೬ ಪುಸ್ತಕಗಳಿವೆ.

615

ಕೆ.೪೪	**ತತ್ತ್ವಪದ**	ಹಾಡು
೭.೯"×೧.೩"	ಗೋಪಾಲಾರ್ಯಶಿಷ್ಯ	?
೧–೧೬೯ ಪತ್ರ	೬ ಪಂಕ್ತಿ	೪೦ ಅಕ್ಷರ

ಆದಿ : ಭೂಮಿಕೆ ಬರೆವದಕ್ಕೆ ನಿರ್ವಿಗ್ನಮಸ್ತು ॥ ಕಂದಪದ್ಯ.
ಮಿತಿಯಿಲ್ಲದ ಭವತಾಪದಿ
ಅತಿದುಃಖಂ ಪಡೆದು ನೊಂದು ಜೀವಂ ವಿಲಸ
ದ್ಗತಿಯಂ ಧೃತಿಯಂ ಸಾಧಿಪ
ಮತಿಯಂ ಕೈವಲ್ಯಮಾರ್ಗಮಂ ನೆರೆ ಸಾರ್ಗಂ ॥ ೧ ॥
ರಾಗ ಕೇತಾರಗಉಳ–ಅಷ್ಟತಾಳಾ—
ಬಹುಜನ್ಮಾರ್ಜಿತ ಪುಣ್ಯಪರಿಪಕ್ವ ಫಲದಿಂದ
ಸಹಜವಿರಕ್ತಿ ಶಾಂತಿ ಶಮೆ ದಮೆಗಳನೈದಿ
ಮುಕ್ತಿಗೆಳಸುವನು ಜೀವ ।
ಭವದಿನೊಂದು ಮುಕ್ತಿಗೆಳಾಸುವನೆ ಜೀವ ॥ ೧
ತಿಳಿದು ಬಲ್ಲವರಿಂದಾ ಉಳಿದು ಕಾಮ್ಯ ನಿಷಿದ್ಧಂಗಳ
ನಿಷ್ಕಾಮಕರ್ಮದ ಬಳಕೆಯಿಂದಳವಟ್ಟು ॥ ೨ ॥
X X X X
ಶ್ರೀಮದ್ಗೋಪಾಲಾರ್ಯನ ನಾಮಕೀರ್ತನೆಗೈಯುತ್ತ
ನೇಮನಿಷ್ಠೆಯಿಂ ಪ್ರಥಮ ಭೂಮಿಕೆಯಿಂದಾಳಾವಟ್ಟು ॥ ೭ ॥

ಅಂತ್ಯ : ಇಂತು ಶ್ರೀಗುರುಗಳ ಪೂರ್ಣಕಟಾಕ್ಷವನಾಂತು ಶಿರದೊಳು ಧನ್ಯ ....
ತಿಸುಖಾಬ್ಧಿಯೊಳೋಲಾಡಿ ಸುಖದಿ ನಿಶ್ಚಿಂತನಾಗಿರ್ದ .... ಯಿಾ
ಷಟ್ಪ್ರಶ್ನೆಗರ್ಥವ ತಿಳಿದರೆ ಯೀಃಷತ್ಪುಣ್ಯ ಪಾತಕವಿಲ್ಲ । ಯೀಃಷಣ ....
ಉತಾನಲೆ ಸಂತೋಷರೂಪಹನು ನಿಶ್ಚಯವಿದು ॥ ೬೫ ॥
ಯೀತತ್ವದ ಸೊಬಗಿ.............. ಯ ಮನದ
ಲೋತು ಪೇಳ್ದ ಕೇಳ್ದ ಜನಕೆಲ್ಲಾ

ಆತುಮಸಾಮ್ರಾಜ್ಯ ಸಂಪದ .. .. ದಲಿ ನಿಶ್ಚಯವಿದು ॥ ೬೬ ॥

X X X X

ಆಗೋಪಾಲಾರ್ಯದೇವಂ ಶ್ರಿತಜನವರದಂ ... . ಯೋಗಾಷ್ಟಾಂಗ
ಪ್ರದಾನ ಸ್ಥಿತಿಕೃತಿ ಚತುರಂ ಯುಕ್ತಯೋಗೀಂದ್ರ ....

ವಿಷಯ: ತತ್ತ್ವಬೋಧಕ ಹಾಡುಗಳು.

ವಿಶೇಷ: ಗ್ರಂಥದ ಕೊನೆಯ ಪತ್ರಗಳು ಶಿಥಿಲ ಮತ್ತು ಅಸ್ತವ್ಯಸ್ತ.

616

ಕೆ.ಬಿ. ೪೧೭/೩	**ತತ್ತ್ವ ಪದಗಳು**	ಹಾಡು
೭.೫"×೫.೭"	?	?
[illegible] ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ: ಧೃಡವಾಗದ ವಿರಳ ನಡೆ ನುಡಿ । ಧೃಡ ॥ ಪ ॥
ಗಡಬಡವಾಂ ಬೆಲೆ ಬಡಮನವೆ ಧೃಡವಾ ॥ ಅ ॥
ಸತ್ಸ ಸದ್ಗುರುವಿನ ತೊತ್ತು ಸೇವೆಗೆ ಮನ
ವಿತ್ತು ತಾ ನಿಜ[illegible]ಕ್ತನಾದೆನೆಂಬೆ
ಕರ್ತು ಶ್ರೀಗುರು ಕರದು ಕಿಂಚಿತ್ಸವನು ಪೇಳೆ
ಹೊತ್ತು ಹೋಯಿತೆಂಬೋ । ಕತ್ತೆಮನವೆ ಧೃಡ ॥ ೧ ॥

ಅಂತ್ಯ: ಶಾಸ್ತ್ರೀಕರದಲ್ಲಿ ಮುರಿಸಾದೆ । ಅದು
ಕವಿಗಳ ಕಂಣ ಕೀಳಿಸದೆ
ಕಿವಿಯೊಳು ನಾಲಗೆ ಚಾಚದೆ
ಗುರು ಬಾದುರ ಮಡಿವಳ ನಾನಾದೆ ॥ ೩ ॥ ಶ್ರೀ

ವಿಷಯ: ವೇದಾಂತ, ತತ್ತ್ವ ಮತ್ತು ನೀತಿಬೋಧಕ ಹಾಡುಗಳು.

ವಿಶೇಷ: ಮೋಡಿ ಬರಹ, ಇದೇಪುಸ್ತಕದಲ್ಲಿ ತತ್ತ್ವಾಭಿನಯ ನಿಘಂಟು, ಕೋಲಾಟ ಪದಗಳೆಂಬ ಕೃತಿಗಳಿವೆ. ಕೊನೆಯಲ್ಲಿ ಭಾಮಿನೀ ಮತ್ತು ವಾರ್ಧಕ ಷಟ್ಪದಿಗಳ ಲಕ್ಷಣಗಳನ್ನು ತಿಳಿಸುವ ಕೆಲವು ಪದ್ಯಗಳಿವೆ.

617

ಕೆ.ಬಿ. ೪೨೦/೪ **ತತ್ತ್ವಪದಗಳು** ಹಾಡು

೭.೮"×೫.೮" ? ?

೧೭೫-೧೯೧ ಪತ್ರ ೧೮ ಪಂಕ್ತಿ ೧೫ ಅಕ್ಷರ

ಆದಿ: ಯೆಲ್ಲಿ ನೋಡಿದಾಡಿಲ್ಲ ಶಿವನು ನಿಂನಲ್ಲಿಹಾನೆ ನೀ ನೋಡಂಣಾ
ಬಲ್ಲ ಜಾಣರು ತಿಳಿದು ನಿಂನೊಳುಲ್ಲಾಸದ ಭಕ್ತಿಯ ಮಾಡಂಣಾ ॥ಪ॥
ಕಾಶಿ ರಾಮೇಶ್ವರ ವ್ಸಾ ಅಂಪೈಯೊಳು ದೇಶ ತಿರಿಗಿದರಿಲ್ಲಂಣಾ
ಮಾಸ ಶ್ರಾವಣ ಶಂಕ್ಕರಾತ್ರಿ ವುಪವ್ಸಾ ಮಾಡಿದರಿಲ್ಲಂಣಾ

ಅಂತ್ಯ: ನಾನುವು ಯಿರುವನಂತೆ ನಾನೆ ಸಾಯುವನಂತ್ತೆ ॥
ನಾನಾಯೋನಿಯ ಜಲ್ಮವು ತಿರಿಗಿ ನಾನೆ ಬೆಂಡಾದೆನಂತೆ ॥ ೩ ॥
ತನುವು ತಂನದಲ್ಲಂತ್ತೆ ತನುವುಯಿಶ್ವರ ತಾನಂತ್ತೆ
ತನುವಿನೊಳಗೆ ಬ್ರಂಹ್ಮಾ ಚಿದಾನಂದ ತಾನೆ ವಿರ್‍ರುಪಾಕ್ಷನಂತ್ತ॥೪॥ ಶ್ರೀಶ್ರೀ

ವಿಷಯ: ತತ್ತ್ವಬೋಧಕ ಹಾಡುಗಳು.

ವಿಶೇಷ: ಕೊನೆಯ ಎರಡು ಪತ್ರಗಳು ಸ್ವಲ್ಪ ಶಿಥಿಲವಾಗಿವೆ. ಮೋಡಿ ಅಕ್ಷರ. ಕಾಗದ ಬಹುತೆಳುವು. ಈ ಪುಸ್ತಕದಲ್ಲೇ ಶಿವನಾಟಕ, ರಾಮರಾವಣ ಯುದ್ಧ. ಮಾರ್ಕಂಡೇಯ ಚರಿತ್ರೆ ಈ ಕೃತಿಗಳಿವೆ.

618

ಕೆ. ೩೫೫/೯ **ತತ್ತ್ವಪ್ರಕಾಶಿಕಾಟೀಕು** ಗದ್ಯ

೮.೫"×೧.೯" ಪರ್ವತೇಶ ಸು ೧೬೦೦

೧೧೧–೧೨೬ ಪತ್ರ ೧೨ ಪಂಕ್ತಿ [illegible]೦ ಅಕ್ಷರ

ಆದಿ: ಶ್ರೀ....ತತ್ವಪ್ರಕಾಶದ ಟೀಕು ಆಚಾರ್ಯನು ಶೈವ ಸಿದ್ಧಾಂತಶಾಸ್ತ್ರಾರ್ಥವನು ಪ್ರಕರಣವಾಗಿ ಮಾಡಲಿಚ್ಛೆಯುಳ್ಳಾತನಾಗಿ ಆ ಪ್ರಕರಣ ಮುಗಿಯಲೋಸ್ಕರವಾಗಿ ಆ ಶೈವಸಿದ್ಧಾಂತ ಶಾಸ್ತ್ರವನು ನಡಸುವದಕ್ಕೆ ಕಾರಣವಾಗಿದ್ದಂಥಾ ಸಕಲತತ್ವಾತೀತವಾಗಿದ್ದಂಥಾ ನಿಷ್ಕಲವಾಗಿದ್ದಂಥಾ ಪರಶಿವನನು ಮೊದಲಾರ‍್ಯವೃತ್ತದಿಂ ಸ್ತೋತ್ರವ ಮಾಡುತ್ತಿದ್ದಾನು ॥

ಚಿದ್ಘನಏಕೋವ್ಯಾಪಿ । ನಿತ್ಯಃ ಸತತೋದಿತಃ ಪ್ರಭುಃ ಶಾಂತಃ
ಜಯತಿ ಜಗದೇಕಬೀಜಂ ಸರ್ವಾನುಗ್ರಾಹಕಃ ಶಂಭುಃ ॥

ಟೀ ॥ ಚಿದ್ಘನಃ । ಜ್ಞಾನ ಕ್ರಿಯಾರೂಪವಾದ ಶಕ್ತಿಎ ಸ್ವರೂಪವಾಗಿ ಯುಳ್ಳಂಥಾತನು । ಕರ್ಮ ಕಾಲ ಮೊದಲಾದವನೂ ಈಶ್ವರನೆಂದು ಹೇಳುವ ವಾದಿಗಳಿಗೆ

ಅಂತ್ಯ : ಶ್ರಗ್ಧರಾವೃತ್ತ ॥
ಆನಂದಂ ಚಿತ್ರಘೋರಾದ್ಯರು ಮೊದಲೊಳು ತತ್ತ್ವ ಪ್ರಕಾಶಕ್ಕೆ ಸದ್ವ್ಯಾಖ್ಯಾನಂಗೆಯ್ದಿರ್ದುದಂ ಷಟ್‌ಸ್ಥಲ ಪರಶಿವನೀ ಚೆಂನವೀರೇಶ ಹಸ್ತ ಜ್ಞಾನಾಂಭೋಜಾತ ಗರ್ಭೋದ್ಭವ ವಿರತನಹೋ ಪರ್ವತೇಶಾಗ್ರಗಣ್ಯಂ ನಾನಾ ಭಕ್ತಾರ್ಥದಿಂ ಕಂನಡಿಸಲಿಳೆಯೊಳೀ ಸಾಧನಂ ಸೇವ್ಯಮಲ್ತೇ ॥
ತತ್ತ್ವಪ್ರಕಾಶಿಕಾ ಟೀಕು ಸಮಾಪ್ತಾ ।

ವಿಷಯ: ವೀರಶೈವತತ್ತ್ವ.

ವಿಶೇಷ: ಪ್ರತಿ ಸುದೃಢವಾಗಿದೆ. ಇದರಲ್ಲಿ ಶತರತ್ನವ್ಯಾಖ್ಯಾನ ಮೊದಲಾದ ಇತರ ಹದಿನಾರು ಪುಸ್ತಕಗಳಿವೆ. ಈ ಕಟ್ಟಿನಲ್ಲಿ ೯೫ನೇ ಪತ್ರಕ್ಕೆ ೯೦ ಎಂದು ಕ್ರಮಾಂಕ ಬರೆದು ಅದನ್ನೇ ಮುಂದುವರಿಸಿದೆ.

619

ಕೆ.ಬಿ. ೧೯೯	**ತತ್ತ್ವ ಮತ್ತು ಭಕ್ತಿಪರ ಕೀರ್ತನೆಗಳು**	ಹಾಡು
೭.೬″ × ೬.೨″	?	೧೯ನೇ ಶತಕ
೧–೧೧೧ ಪತ್ರ	೧೧ ಪಂಕ್ತಿ	೧೮ ಅಕ್ಷರ

ಆದಿ : ತತ್ವಗಳು ಬರೆವರೆ ಶುಭಮಸ್ತು ನಿರ್ವಿಘ್ನಮಸ್ತು ॥
ಕಂದ ॥ ತಡದಾ ರವಿ ಶಶಿ ಗತಿಗಳ
ಬಿಡದಸುವ ಸುಷುಮ್ನ ಬಿಲದೊಳ್ ಪೂಗಿಸಿಂ
ನಡದಾಗ್ನಾ ಚಕ್ರದಿ ನಿಂ
ನೊಡಗೂಡಿದ ಯೋಗಿಯ ಮನೋಂಬುಜವಾಸಾ ॥ ೧ ॥

ರಾಗ ॥ ನಾಟಿ ॥ ವೀಕ್ಷಿಸುತಿರ್ಪ ತಂನೊಳ್ಪನೋದದಿ ಸತತ
ಅಕ್ಷಿಗಳ ದ್ರಿಷ್ಟಿಇಂ ಆತ್ಮನನು ಬಿಡದೆ ॥ ಪ್ಲ ॥

x x x x

ನಿರಘ ನಿರಪಾಧಿಕ ನಿರ್ಲೇಪ ನಿಃಸಂಗ
ನಿರವಂದ್ಯ ನಿರ್ದ್ವಂದ್ವ ನಿರವಶೇಷ
ನಿರವಧಿಕ ನಿಷ್ಕರ್ಮ ನಿರ್ಮಲಾನಂದಮಯ
ವರ ಹೇಮಕೂಟದಲಿ ವಾಸವಾಗಿಹನಾ ॥ ೩ ॥

ಅಂತ್ಯ : ಧರೆಯೊಳು ನಿಮ ಸ್ತುತಿ ತಪ್ಪದೆ ಮಾಡಲು
ಹರ ಸಕಲೈಶ್ವರ್ಯಾ ಯೀವನು ಹರ ಸಕಲೈಶ್ವರ್ಯಾ
ವರಕೃಷ್ಣೇಂದ್ರನೆ ವಸುಧಾಧಿಪನೆ
ಪೊರೆಯ್ಯೆ ಅತಿಮುದದಿ ಯನ್ನನು ಪೊರೆಯ್ಯೆ ಅತಿಮುದದಿ ॥ ೨೬ ॥
ಹೇಮಕೂಟದ ಯಿಾಶನು ಸಂತತ
ಕಾಮ್ಯಾರ್ಥಗಳಿತ್ತು ಕೋಟದ
ಪ್ರೇಮದಿ ಮನದೊಳ್ಬಿಡದೆ
ಭೂಮಿಾಶನೆ ನಿಂಮಾ ಬಿಡದೆ ಭೂಮೀಶನೆ ನಿನ್ನಾ ॥ ೨೭ ॥
ಶ್ರೀ ಕೃಷ್ಣರಾಜಯೋಗಾವಳಿ ಸಂಪೂರ್ಣ ಮಂಗಳ ಮಹಾ ಶ್ರೀ ॥
ಮಂಗಳಾರತಿ ಯತ್ತಿರೇ ಯೋಗಾನಂದಾರ್ಯವರ ಯೋಗಿಂದ್ರಗೆ
ತಿಂಗಳಿನ ಪ್ರಭೆಯಂತೆ ಪ್ರಜ್ವಲಿಸಿ ಹೊಳೆಯುತಿಹಾ
ಮಂಗಳಾಕಾರ ಶಿವಗೆ ॥ ಪ್ಲ ॥

X X X X

ನಿರುಪಮಾಕಾರನಾದ ಚಂನಾರ್ಯ
ವರಪುತ್ರ ಬಸವಾರ್ಯರ
ಕರುಣದಿಂ ಸೇವಕರ ಪೊರೆವ ಯೋಗಾನಂದ
ವರಯೋಗಿಯಾದ ಯತಿಗೆ
ಮಂಗಳಾರತಿ ಯತ್ತಿರೇ ಯೋಗಾನಂದಾರ್ಯವರ ಯೋಗೀಂದ್ರಗೆ
ತಿಂಗಳಿನ ಪ್ರಭೆಯಂತೆ ಪ್ರಜ್ವಲಿಸಿ ಹೊಳೆಯುತಿಹ
ಮಂಗಳಾಕಾರ ಶಿವಗೆ ॥ ಶ್ರೀ ॥ ಶ್ರೀ

ಯೋಗಾನಂದಾರ್ಯವರ್ಯರು ವಿರಚಿಸಿದ ವಚನಗಳು ಸಮಾಪ್ತ ಮಂಗಳ ಮಹಾಶ್ರೀ ॥

ವಿಷಯ: ವೇದಾಂತಪರವಾದ ಹಾಡುಗಳು, ಭಕ್ತಿಪರ ಶಿವಭಜನೆ, ಚಾಮುಂಡೇಶ್ವರಿ ಭಜನೆ, ಕೃಷ್ಣಪರ ಬಾಲಲೀಲೆ, ರಾಮಕೀರ್ತನೆ, ರಂಗನಾಥ ಕೀರ್ತನೆ' ಸಪ್ತರತ್ನಗಳ ಪದ, ಕೃಷ್ಣರಾಜ ಯೋಗಾವಳಿ–ಇವುಗಳ ಸಂಕಲನ.

ವಿಶೇಷ : ಗ್ರಂಥಾರಂಭಕ್ಕೆ ಮೊದಲು ಇರುವ ಆರಂಭದ ಪುಟದಲ್ಲಿ "ಆನೆಗೊಂದಿ ಅರಸಿನವರು ವಿರಚಿಸಿದ ತತ್ತ್ವ ಮತ್ತು ಭಕ್ತಿಪರವಾದ ಕೀರ್ತನೆ ದೇವರ ನಾಮದ ಪುಸ್ತಕ ॥ ಯೋಗಾನಂದ ಸ್ವಾಮಿಗಳೂ" ಎಂದಿದೆ. ಇದರಿಂದ ಮೇಲಿನ ಕೃತಿಗಳೆಲ್ಲ ಯೋಗಾನಂದಸ್ವಾಮಿ ವಿರಚಿತವೇ, ಆನೆಗೊಂದಿ ಆರಸಿನವರಿಂದ ವಿರಚಿತವೇ ? ಎಂಬ ಸಂಶಯ ಅಂಕುರಿಸುತ್ತದೆ. ಕೊನೆಯಲ್ಲಿ ಹೇಳಿರುವ ಯೋಗಾನಂದರ ಮಂಗಳವೂ ಈ ಸಂಶಯವನ್ನು ಬಲಪಡಿಸುತ್ತದೆ. ಈ ಎಲ್ಲ ಕೃತಿಗಳಲ್ಲೂ ಹೇಮಕೂಟದಲ್ಲಿ ವಾಸವಾಗಿರುವ ನಿರ್ಮಲಾನಂದಮಯನನ್ನೂ ಸ್ಮರಿಸಿರುವುದರಿಂದ ಈ ಎಲ್ಲ ಕೃತಿಗಳ ಕರ್ತೃ ಒಬ್ಬನೇ ಎಂದು ಊಹಿಸಬಹುದು.

620

ಕೆ.ಎ. ೩೧೯	**ತತ್ತ್ವರತ್ನಪ್ರದೀಪಿಕೆ**	ಸೂತ್ರ, ಶ್ಲೋಕ, ಗದ್ಯ, ಪದ್ಯ
೧೩.೬"×೮.೩"	ಬಾಲಚಂದ್ರದೇವ	ಸು. ೧೧೫೦
೧–೬೦೮ ಪತ್ರ	೨೧ ಪಂಕ್ತಿ	೨೦ ಅಕ್ಷರ

ಆದಿ : ತತ್ತ್ವರತ್ನ ಪ್ರದೀಪಿಕಾ ॥
ಶ್ರೀ ನಿಧಿ ಸಮನ್ತಭದ್ರನ
ನೂನಬಲಂ ಪೂಜ್ಯಪಾದನಜಿತನಜಂ ವಿ
ದ್ಯಾನಂದಂ ತತ್ತ್ವ ಶ್ರ
ದ್ಧಾನಮನೆಮಗೀಗೆ ಸಮಯಸಾರಂ ವೀರಂ ॥

ಶ್ಲೋ ॥ ನತ್ವಾ ಜಿನೇಶ್ವರಂ ವೀರಂ ವಕ್ಷ್ಯೇ ಕರ್ಣಾಟಭಾಷಯಾ ।
ತತ್ವಾರ್ಥಸೂತ್ರ ಸೂತ್ರಾರ್ಥಂ ಮಂದಬುದ್ಧ್ಯನುರೋಧತಃ ॥

ಅಂತ್ಯ : ಎಂದಿಂತು ಚಿದಾನಂದ ಸ್ವರೂಪ ಜನಿತ ಪರಮಾತ್ಮ ತತ್ವಮಂ ತ್ರಿಕರಣ ಶುದ್ಧನಾಗಿ ಸವಿಕಲ್ಪ ನಿರ್ವಿಕಲ್ಪರೂಪದಿಂ ನಿರಂತರಂ ಚಿಂತಿಸುವುದು ಭಾವನೆ ಯೆಂಬುದು ನಿತ್ಯಾನಂದ ಶ್ರೀಗೃದ್ಧ್ರಪಿಂಛಾಚಾರ್ಯರಭಿಪ್ರಾಯಂ

X X X X

ಗದ್ಯ॥ ಇದು ಕುಮುದ ಚಂದ್ರ ಭಟ್ಟಾರಕ ಪ್ರತಿಬೋಧನಾರ್ಥ ಸಮಸ್ತ ಸೈದ್ಧಾಂತಿಕ ಚಕ್ರವರ್ತಿ ದೇವನಂದನ ವಿನಯ ಜನಾನಂದನ ನಿಜರುಚಿ ಸಾಗರ ನಂದಿ ಪರಮಾತ್ಮದೇವ ಸೇವಾಸಾಧಿತಾತ್ಮ ಸ್ವಭಾವ ನಿತ್ಯಾನಂದ ಬಾಲ ಚಂದ್ರದೇವ ವಿರಚಿತ ತತ್ವರತ್ನ ಪ್ರದೀಪಿಕಾಖ್ಯ ತತ್ವಾರ್ಥ ತಾತ್ಪರ್ಯ

ವೃತ್ತಿಯೊಳ್ಸೂತ್ರನವಕ ಸಂಜಾತ ದಶಮಪ್ರಕರಣಂ x x x

ಗುರವಃ ಪಾಂತು ನೋ ನಿತ್ಯ ಜ್ಞಾನದರ್ಶನ ರಕ್ಷಣಾಃ ।
ಚಾರಿತ್ರಾರ್ಣವ ಗಂಭೀರಾ ಮೋಕ್ಷಮಾರ್ಗೋ ದೇಶಕಾಃ ॥ ೫ ॥

ವಿಷಯ: ಜೈನ ತತ್ತ್ವಾರ್ಥಸೂತ್ರಗಳ ಕನ್ನಡ ಅನುವಾದ.

ವಿಶೇಷ: ಈ ಪ್ರತಿ ಶ್ರವಣಬೆಳಗೊಳದ ಶ್ರೀ ಶ್ರೀ ಚಾರುಕೀರ್ತಿ ಸ್ವಾಮಿಗಳ ಮಠ ದಿಂದ ಬಂದ ಪುಸ್ತಕದ ನಕಲು. ಮೋಡಿ ಅಕ್ಷರ.

621

ಕೆ.ಬಿ. ೪೩೨	ತತ್ತ್ವಸಾರ	ಶ್ಲೋಕ, ಗದ್ಯ
೮.೫"×೬.೫."	ಲಕ್ಷ್ಮೀಕಾಂತ	?
೨೦೭ ಪತ್ರ	೧೬ ಪಂಕ್ತಿ	೩೦ ಅಕ್ಷರ

ಆದಿ : ಹರೇಃ ಪುಣ್ಯಾನಿ ನಾಮಾನಿ ಸರ್ವದಾ ಪರಿಕೀರ್ತಯೇತ್
ಕೃಣ್ವನ್ ಶೃಣ್ವನ್ ಸ್ಪೃಶನ್ ಜಿಘ್ರನ್ ಅಶ್ನನ್ ಗಚ್ಛನ್ ಸ್ವಪನ್ ಶ್ವಸನ್
ಪ್ರಲಪನ್ ವಿಸೃಜನ್ ಗೃಹ್ಣನ್ ಉನ್ಮಿಷನ್ನಿಮಿಷನ್ನಪಿ
ಸಂಸ್ಮರೇದ್ವಿಷ್ಣುಮವ್ಯಗ್ರಸ್ತಲ್ಲೀಲಾಂಶ್ಚಾಪಿ ಚಿಂತಯೇತ್
ಯತೋ ಯತೋ ಮನೋ ಯಾತಿ ಸ್ವಭವಾದೇವ ಚಂಚಲಂ
ತತ್ರ ತತ್ರೈವ ವಿಷಯೇ ವಿಷ್ಣುಮೇವ ವಿಭಾವಯೇತ್
ಕಿಯಚ್ಛವೇನ್ಮನೋ ನೃಣಾಂ ಹರಿಂ ಪೂರ್ಣಂ ಕಥಂ ತ್ಯಜೇತ್
ಮಂದಭಾಗ್ಯಾಸ್ತು ತಂ ತ್ಯಕ್ತ್ವಾ ವಿಷಯಾಂಶ್ಚಿಂತಯಂತಿ ಹಿ ॥
ವಿಷಯಗಳು ಚಿಂತನೆ ಮಾಡಿದರಿಂದ ಯೇನು ಫಲವೆಂದರೆ

ಅಂತ್ಯ : ಬ್ರಹ್ಮೋವಾಚ ॥
ಬಾಹುಭ್ಯಾಂ ಸಾಗರಂ ತರ್ತುಂ ಕ ಇಚ್ಛೇತ ಪುಮಾನ್ಪವಿ ।
ವಾಸುದೇವಮನಾರಾಧ್ಯಂ .. ಮೋಕ್ಷಂ ಗಂತುಮಿಚ್ಛತಿ ॥
ಶಂಕರ ಉವಾಚ ॥ ಕೃತೆ ಪಾಪೆ ೀತು ತಾಪೆ ವೈ ಯಸ್ಯ ಪುಂಸಃ ಪ್ರಜಾಯತೆ
ಪ್ರಾಯಶ್ಚಿತ್ತಂ ತು ತಸ್ಯೋಕ್ತಂ ಹರಿಸಂಸ್ಮರಣಂ ಪರಂ ॥
ಶ್ರೀ ಮಧ್ವೇಶಾರ್ಪಣಮಸ್ತು ॥

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ವಿದ್ಯಾ ಸಂಸ್ಥಾನಾಧಿಪತಿ ಶ್ರೀ ಲಕ್ಷ್ಮೀಕಾಂತರಿಂದ ವಿರಚಿತವಾದ ತತ್ವಸಾರ ॥

ವಿಷಯ : ದ್ವೈತಸಿದ್ಧಾಂತದ ತತ್ತ್ವಗಳ ಸಾರ.

ವಿಶೇಷ : ಕ್ರಮಾಂಕ ೧೭ ರಿಂದ ೨೦ ಪೂರ್ತಿ ನಾಲ್ಕು ಅಂಕಗಳು ಬಿಟ್ಟು ಹೋಗಿರುವುದರಿಂದ ಕೊನೆಯ ಪತ್ರಸಂಖ್ಯೆ ೨೧೧ ಎಂದಿದೆ. ಈ ಪುಸ್ತಕದಲ್ಲಿ ಮೂರುವಿಧ ಕಾಗದಗಳನ್ನು ಬಳಸಿರುತ್ತಾರೆ. ದೇವನಾಗರಿಲಿಪಿ ಸ್ಫುಟಾಕ್ಷರ.

622

ಕೆ ೪೧೭/೧	**ತತ್ತ್ವಾಭಿನಯ ನಿಘಂಟು**	ಕಂದ
೭.೫"×೫.೭"	?	?
೧–೩೯ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಗುರು ಶಂಭುಲಿಂಗ । ಶುಭಮಸ್ತು ॥ ಕಂದ ॥
ಅಸಯ್ಯುತ ಹತ್ತ ಭಾವಲಕ್ಷಣಂ ॥
ಸುಪತಾಕ ತ್ರಿಪತಾಕ
ರ್ಧಪತಾಕಂ ಕರ್ತರೀಮುಖ ಮಯೂರಾಖ್ಯಂ
ಕ್ಷಪಾಕರಾರ್ಧರಾಳಂ
ನಿಪುಣದ ಶುಕತುಂಡ ಮುಷ್ಟಿ ಶಿಖರಕೆ ಲಕ್ಷ್ಯಂ ॥ ೧ ॥

ಅಂತ್ಯ : ಹಾವಗಳೊಳು ಭಾವಗಳೊಳ್
ಗಾವಿಲಾಸ ವಿಭ್ರಮದೊಳು ರಸರೂಪಾಂತಾ
ಭಾವಾತೀತ ಪರಾತ್ಪರ
ಪಾವನ ಕೊಡು ಮಂಗಳಂಗಳಂ ತ್ರೈಜಗಕಂ ॥ ೧೬೫ ॥
ತತ್ವಾಭಿನಯ ನಿಗಂಟು ಮಂಗಳಮಸ್ತು ॥ ಶ್ರೀ ॥

ಸರ್ ೧೮೯೫ ನೆ ಆಗಷ್ಟು ತಾರೀಕು ೨ ನೆ ಶುಕ್ರವಾರ ವರಲಕ್ಷ್ಮೀ ಹಬ್ಬದ ದಿನ ರಾತ್ರಿ ೧॥ ಗಂಟೆಗೆ ಸರಿಯಾಗಿ ಬರೆದು ಮುಗಿದಿರುವುದು.

ಶ್ರೀಮತ್ಪರಾತ್ಪರ ಪಾದಾರವಿಂದ ನತೆ ಜನಾನಂದ ಕೃಪಾ ತುಂದಿಲಾಂತಃಕರಣ ಶೇಷಾಭರಣ ಶ್ರೀ ಶಂಭುಲಿಂಗ ಚರಣಾರವಿಂದಾರ್ಪಣಮಸ್ತು ಶ್ರೀ ॥

ವಿಷಯ : ಹಸ್ತಾಭಿನಯ.

ವಿಶೇಷ : ಮೋಡಿ ಬರಹ. ಇದೇ ಪುಸ್ತಕದಲ್ಲಿ ಕೋಲಾಟದ ಪದಗಳು ಮತ್ತು ತತ್ವದ ಪದಗಳಿವೆ ಮಧ್ಯೆ ಕೆಲವು ಶುದ್ಧ ಪತ್ರಗಳಿವೆ.

623

ಕ ೨೬೧	**ತತ್ತ್ವಾರ್ಥದರ್ಪಣ**	ಗದ್ಯ
೧೨.೩"X೧.೩"	?	ಶು ೧೯೦೦
೧–೧೪೨ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಮತೇ ರಾಮಾನುಜಾಯ ನಮಃ ‖ ತತ್ವಾರ್ಥ ದರ್ಪಣ ‖ ನಂಮಾಳ್ವಾರ್ ತಿರುವಡಿಗಳೇ ಶರಣಂ X X X X ಯಿ ತತ್ವಾರ್ಥ ದರ್ಪಣವ ಯಾರೂ ವೋದುತಾರೇ ಭಕ್ತಿಯಲ್ಲಿ ಯಾರು ಕೇಳುತಾರೆ ಭಕ್ತರಿಗೆ ಯರು ಹೆಳುತಾರೇ । ಜನ್ಮಾತರ ಪಾಪವೆಂಬ ದುಖ್ಖಾಂಬುಧಿಯನು ತರಿಶೀ ನಿಜ ಸಾಮ್ರಾಜ್ಯಯೆಂಬ ಪರಮ ಪದದಲ್ಲಿ ಯಿರುವರೂ. X X X ಯತಿ ರಾಮಾನುಜ ಜೀಯ್ಯರ ಚಾರಿತ್ರ ಸಾಮಾನ್ಯರಿಗೆ ದೊರಕುವುದೇ । X X X X ಯಿಂತ್ತಾ ಮಹಿಮನ ಕಥಾನುಸಾರವನುಸುವೆನೂ ‖ ಮನವಲಿದು ಸಾವಧಾನರಾಗಿ ಕೇಳಿ ‖ ಶ್ರೀಮತೇ ರಾಮಾನುಜಾಯ ನಮಃ । ನಾರಾಯಣಾಯ ನಮಃ ‖

ಪರಮಪದರಾಜನು ಪರಮಪದದಲ್ಲಿ ಶ್ರೀಮಹಾಲಕ್ಷ್ಮಿ ಭೂಪಿರಾಟ ನೀಳಾದೇವಿಯವರೂ ನಿತ್ಯ ಮುಕ್ತ್ಯರು । ಭಕ್ತರು ಸಹಾ ವಾಲಗಂಗೊಟ್ಟು ನಿತ್ಯಾನಂದರಾಗಿಹರು. ಆ ಪರಮಪದ ಯಂತ್ತಾದ ಯಂದರೇ । ಪರಮಪದಕ್ಕೇ ಯೇಳೂತತ್ವವೇ ಯೇಳುಸುತ್ತಿನಾ ಕೋಟೇ । ಸಾರುಪ್ಯಾ । ಸಾಲೋಕ್ಯಾ ಸಾಯುಜ್ಯಾ ಯೆಂಬ ನಾಲ್ಕು ಬಾಗಿಲು । ಸತ್ಯ ಧರ್ಮಯೆಂಬ ಬೀದೀಗಳೂ. X X X X ಯಿಂತ್ತಾ ಪರಮಪದದಲ್ಲಿ ಶ್ರೀಮನ್ನಾನ್ನಾರಾಯಣನೂ ಸಾವಿರ ಹೆಡೇ ಯರಡು ಸಾವಿರ ನಾಲಿಗೆಯುಳ್ಳಾ ಮಹಾಶೇಷನ ಮೇಲೆ ಪವಡಿಸಿಕೊಂಡಿಹನು.

ಅಂತ್ಯ : ಯಿತ್ತಲಾ ಶ್ರೀರಂಗದಲ್ಲಿ ವ್ಯಾಸಪರಾಶರಭಟ್ಟರೂ ಯತಿರಾಜರ ವಿಗ್ರಹವಾನಾನಾಶಾಸ್ತ್ರ ಯುಕ್ತದಲ್ಲಿ ಚಲುವಾದ ರಥದ ಮೇಲೆ ಬಿಜುಮಾಡಿಸಿ ರಂಗರಾಜರಾ ಚತ್ರ ಚಾಮರಂಗಳನೂ ಹಿಡಿಶಿಕೊಂಡೂ ಭೇರಿ ನಿಸ್ಸಾಳ ತಂಮಟ ಗಿಡಿಮಿಡಿ ಕಹಳೆಗಳೂ ಯತಿರಾಜರಾ ಬಿರುದಾವಳಿಯನೂಘೆಡಿಸುತ್ತಾ ಸಕಲಸಾಮಾನ್ಯರೂ ಪ್ರಬಂಧ ರಹಸ್ಯಗಳನುಚ್ಚರಿಸುತ್ತಾ ಗುರುಗಳ ಮೇಗಣ ಭಕ್ತಿಯಿಂದ ನೃತ್ಯಗಳನಾಡುತ್ತಾ ಶ್ರೀರಂಗದ ತಿರುವೀದಿಯಲ್ಲಿ ಉತ್ಸವವಂ ಮಾಡಿಕೊಂಡು ಕಾಶಿ ಕಾವೇರಿಗೆ ಅಧಿಕವಾದಾ ಸ್ಥಳದಲ್ಲಿ ಯತಿರಾಜರ ವಿಗ್ರಹವಂ ನಿಕ್ಷೇಪನೆಯಂ ಮಾಡಿ ವ್ಯಾಪರಾಶರರು ಮುಂತಾದ ಸಕಲ

ಮಾನ್ಯರೂ ಕಾವೇರಿಯಲ್ಲಿ ಸ್ನಾನವಂ ಮಾಡಿ ಶ್ರೀರಂಗರಾಜರ ಸಂನಿಧಿಯಲ್ಲಿ ತೀರ್ಥತಿರುವಧ್ಯಾಯನಂಗಳ ಮಾಡಿ ಮಾಶೀಂಕಗಳಂ ಮನ್ನಿಶಿ ಶ್ರೀಭಾಷ್ಯಕಾರರಾ ತಿರುವಡಿಗಳೇ ಶರಣಂ ಯೆಂದುಕೊಂಡು ವ್ಯಾಸಪರಾಶರ ಭಟ್ಟರು ಮುಂತಾದಾ ಸಕಲ ಮಾಂನ್ಯರೂ ಪ್ರಬಂಧ ರಹಸ್ಯಗಳ ನೋಡಿಕೊಳ್ಳುತ್ತಾ ಶಿಷ್ಯರಿಗು ಉಪದೇಶವ ಮಾಡುತ್ತಾ ಸುಕದಲ್ಲಿದ್ದರು ಯೆಂಬಲಿಗಧ್ಯಾಯಾ ನಾಲ್ವತ್ತೊಂದೂ ೪೧ಕ್ಕಂ ಮಂಗಳಮಹಾಶ್ರೀ.

ವಿಷಯ : ಶ್ರೀರಾಮಾನುಜಾಚಾರ್ಯರ ಚರಿತ್ರೆ.

ವಿಶೇಷ : ತೆಲುಗಕ್ಷರ, ೪೯ರಿಂದ ೫೨ ಪೂರ್ತಿ ಕ್ರಮಾಂಕದ ಎರಡೆರಡು ಓಲೆಗಳಿವೆ. ಕೆಲವು ಓಲೆಗಳಿಗೆ ಹುಳುಹಿಡಿದು ರಂಧ್ರ ಬಿದ್ದಿದೆ. ಪತ್ರಗಳು ಅಸ್ತವ್ಯಸ್ತವಾಗಿವೆ.

624

ಕೆ.ಎ. ೩೩೧	**ತತ್ತ್ವಾರ್ಥಸೂತ್ರ ಕನ್ನಡ ವ್ಯಾಖ್ಯಾನ**	**ಸೂತ್ರ, ಟೀಕೆ**
೧೩.೨"×೮.೩"	ದಿವಾಕರನಂದಿಮುನಿ	?
೧-೩೪೦ ಪುಟ	೨೧ ಪಂಕ್ತಿ	೧೭ ಅಕ್ಷರ

ಆದಿ : ನತ್ವಾ ಜಿನೇಶ್ವರಂ ವೀರಂ ವಕ್ಷ್ಯೇ ಕರ್ನಾಟಭಾಷಯಾ |
ತತ್ತ್ವಾರ್ಥ ಸೂತ್ರ ಸೂತ್ರಾರ್ಥಂ ಮಂದಬುದ್ಧ್ಯನುರೋಧತಃ ||

ಮೋಕ್ಷಶಾಸ್ತ್ರದ ಪ್ರಥಮದೊಳು ಮೋಕ್ಷಮಾರ್ಗೋಪದೇಶಕನಪ್ಪ ಅರ್ಹತ್ಪರಮೇಶ್ವರ ಪರಮಭಟ್ಟಾರಕಂಗೆ ಗೃದ್ಧ್ರಪಿಂಛಾಚಾರ್ಯರ್ಮಂಗಲಾರ್ಥಂ ನಮಸ್ಕಾರಂಗೆಯ್ದಪರು.

ಅಂತ್ಯ : ಈ ಯಂದದ ಮೋಕ್ಷಸುಖದ ಪಡೆವು ತತ್ತ್ವಾರ್ಥ ಭಾವನಾಫಲಮೆಂಬುದು ನಿಶ್ಚಯಿಸುವುದು,

ಇಂತು ತತ್ತ್ವಾರ್ಥದಜೀತಂ ಕಾರಣಮಪ್ಪ ಮೋಕ್ಷಶಾಸ್ತ್ರದೊಳು ಪತ್ತನೆಯಧ್ಯಾಯಮೆಂಬುದು || ೧೦ ||

ಇದು ಸಕಲಾಗಮ ಸಂಪನ್ನ ಶ್ರೀಮಚ್ಚಂದ್ರಕೀರ್ತಿ ಭಟ್ಟಾರಕ ಪದ್ಮನಂದಿ ಸಿದ್ಧಾಂತದೇವ ಶ್ರೀಪಾದ ಪ್ರಸಾದಾಸಾದಿತ ಸಮಸ್ತ ಸಿದ್ಧಾಂತಾಮೃತ ಪಾರಾವಾರಗ ಶ್ರೀಮದ್ದಿವಾಕರ ಭಟ್ಟಾರಕ ಮುನೀಂದ್ರ ವಿರಚಿತ

ತತ್ತ್ವಾರ್ಥ ಸೂತ್ರನುಗತ ಕರ್ಣಾಟಕ ಲಘುವೃತ್ತಿಯೊಳು ದಶಮ ಪ್ರಕರಣಂ ಸಮಾಪ್ತಂ ॥

ವಿಷಯ : ಜೈನಸಿದ್ಧಾಂತದ ತತ್ತ್ವಾರ್ಥಸೂತ್ರದ ಕನ್ನಡ ವ್ಯಾಖ್ಯಾನ.

ವಿಶೇಷ : ಈ ಪ್ರತಿ ಹುಂಚಮಠದ ಪ್ರತಿಯ ನಕಲು. ಶಕಟರೇಫದ ಬಳಕೆಯಿದೆ. ಮೂಲಪ್ರತಿಯಲ್ಲಿ ೮೧ನೇ ಗರಿ ಲುಪ್ತವಾಗಿದೆ.

625

ಕೆ ೬೧೬	**ತಂತ್ರಪ್ರಕಾಶದ ಕನ್ನಡ ಟೀಕೆ**	ಶ್ಲೋಕ, ಟೀಕು
೧೦"×೧.೩"	ನಂಜಿನಾಥಭಟ್ಟ	?
೧-೫೦ ಪತ್ರ	೬ ಪಂಕ್ತಿ	೩೮ ಅಕ್ಷರ

ಆದಿ : ತತ್ರ ಗ್ರಂಥಕರ್ತಾ ಪ್ರಥಮಮವಿಘ್ನೇನ ಗ್ರಂಥಸಮಾಪ್ತ್ಯರ್ಥಂ ಅಭೀಷ್ಟ ದೇವತಾ ನಮಸ್ಕಾರಂ ಕರೋತಿ। ನತ್ವಾ ಕಾಮಿತಿ । ಸ್ಪಷ್ಟಾರ್ಥೋಽಯಂ ಶ್ಲೋಕಃ।

ಸೂರ್ಯಸ್ಯೇಂದು ಗುಣಾಂಶ್ಚ ೩೧ ಶೀತಕಿರಣಃಶ್ಚಾಷ್ಟಾಕ್ಷಿನೋ ಭೂಸುತ
ಸ್ಯೇಕಂ ೧ ಸೌಮ್ಯಚಲಸ್ಯ ಪಾವಕಗುಣಾ ೩೩ ಸ್ತ್ರೀಣೀಂದ್ರವಂದ್ಯಸ್ಯ ಚ
ತಾ....ಶುಕ್ರಚಲಸ್ಯ ೧೦ ಸೂರ್ಯತನಯಸ್ಯೇಕಂ ವಿಧೂಚ್ಚಸ್ಯ ಚ
ಸ್ವರ್ಭಾನೋಶ್ಚ ತಥೈಕಮೇವ ಭಗಣಾಪ್ಯೇತೇ ಗುಣಾ ಸ್ಯುಃ ಪೃಥಕ್ ॥೧॥
ಯಿಾ ಹೇಳಿದ್ದು ಸೂರ್ಯಾದಿ ಗ್ರಹಗಳ ಭಗಣಗಳೂ। ಸೂರ್ಯಾದಿ ಗ್ರಹಗಳಿಗೆ ಮಧ್ಯಾನಯನದಲ್ಲಿ ಅಹಗ್ರಹರ್ಗಣಕಾರಗಳಹವು। ಸೂರ್ಯಾದಿ ಗ್ರಹಗಳ ಸಾವನದಿನ ಶ್ಲೋಕ ॥

ಅಂತ್ಯ : ಅಲ್ಲಿ ಶುಕ್ಲಾಂಗುಲವು ಕರ್ನ್ಣದ ಮೇಲಾಗಿ ಚಂದ್ರಮಂಡ.... ...ಕರ್ಣವ ಮಧ್ಯವ ಮಾಡಿ ಶುಕ್ಲಾಂಗುಲವನಿರಿಶಿ ಧನುವಾಕಾರವಾಗಿ ಬರದ ....ಹಾಗೆ ಯಿಹನು॥ ಯಿತಿ ಶ್ರೀನಾಥಾಚಾರ್ಯಕೃತೇ ತಂತ್ರಪ್ರಕಾಶೇ....ಭಟ್ಟಕೃತ ಕರ್ನಾಟಕಭಾಷಾವ್ಯಾಖ್ಯಾನೇ ಚಂದ್ರಶೃಂಗೋನ್ನತ್ಯಧಿಕಾ........ಶ್ರೀ॥

ವಿಷಯ : ಶ್ರೀನಾಥಾಚಾರ್ಯರು ಬರೆದಿರುವ ತಂತ್ರಪ್ರಕಾಶವೆಂಬ ತಂತ್ರಗಣಿತದ ಕನ್ನಡ ಟೀಕೆ.

ವಿಶೇಷ : ಶಿಥಿಲಪ್ರತಿ, ಅಸಮಗ್ರ. ೩೫ರಿಂದ ೪೮ನೇ ಕ್ರಮಾಂಕದವರೆಗಿನ ಪತ್ರಗಳಿಲ್ಲ. ಹುಳು ಹಿಡಿದಿದೆ. ಕೊನೆಯಲ್ಲಿ ನಂದಿನಾಗರಿಲಿಪಿಯ ನಾಲ್ಕು ಶಿಥಿಲವಾದ ಮತ್ತು ಮುರಿದಿರುವ ಪ್ರಕೃತಗ್ರಂಥಕ್ಕೆ ಸಂಬಂಧಪಡದ ಪತ್ರಗಳಿವೆ.

626

ಕೆ.ಎ. ೧೫	ತಪತೀಪರಿಣಯ	ನಾಟಕ
೧೨.೯"x೭.೯"	ಸರಗೂರು ವೆಂಕಟವರದಾಚಾರ್ಯ	೧೯ನೇ ಶತಕ
[illegible] ಪತ್ರ	೨೦ ಪಂಕ್ತಿ	೩೦ ಅಕ್ಷರ

ಆದಿ : ತಪತೀಪರಿಣಯ ನಾಟಕೇ ಪ್ರಥಮಾಂಕ ಪ್ರಾರಂಭಃ।

ಶಾ॥ ವೃ॥ ಶ್ರೀಮತ್ಪಂಚನಖಾಖ್ಯ ಶೈಲನಿಳಯಂ ಶ್ರೀಭೂಮಿನೀಳಾವೃತಂ
ಶ್ರೀಮಚ್ಛಂಖ ರಥಾಂಗ ಪಂಕಜಧರಂ ಶ್ರೀಕೌಸ್ತುಭಾಲಂಕೃತಂ
ಶ್ರೀಮತ್ಪಂಚಮುಖಾಜಮುಖ್ಯಸುಮನಶ್ಶ್ರೇಣ್ಯರ್ಚಿತಾಂಘ್ರಿದ್ವಯಂ
ಶ್ರೀಮಚ್ಚಾಮಮಹೀಶನಂ ಸಲಹಲಿ ಶ್ರೀವಾಸನಾವಾಗಲುಂ ॥ ೧ ॥

ಕಂ॥ ಶ್ರೀಧರನತುಲಿತ ಮೃಗರಿಪು
ಭೂಧರಶಿಖರಾಗ್ರ ಕಲ್ಪಭೂರುಹನನಿಶಂ
ಈ ಧರೆಯೊಳು ಚಾಮೇಂದ್ರಗೆ
ಸಾದರದಿಂದೊಲುಮೆಯಿತ್ತು ಸಲಹುವನೀಶಂ ॥ ೧ ॥

x x x x

ಸೂತ್ರಧಾರಂ—ಹೌದು ಪೂಜ್ಯಳೇ ನಿನ್ನ ಗಾನದಲ್ಲಿ ದತ್ತಚಿತ್ತನಾಗಿ ಮರತು ಇದ್ದೆನು. ಸುಧಾಕರಕುಲಕಲಶಾರ್ಣವ ಪೂರ್ಣಸುಧಾಕರನಾದ ಋಕ್ಷರಾಜಕುಮಾರನಾದ ಸಂವರಣನೆಂಬ ರಾಜಶಿಖಾಮಣಿಗುಂ ದಿವಾಕರ ಕುಮಾರಿಣಿಯಾದ ಪರಮಪತಿವ್ರತಾ ಸಾವಿತ್ರಿ ಸೋದರಿಯಾದ ತಪತೀದೇವಿ ಎಂಬ ತರುಣೀಮಣಿಗುಂ ಸಂಘಟಿತಮಾದ ಶ್ರೀಮನ್ಮಹಾಭಾರತಾದಿಪರ್ವಾಂತರ್ಗತ ಪಾರ್ಥಗಂಧರ್ವಸಂವಾದರೂಪ ವೈವಾಹಿಕ ಚರಿತ್ರೆಯಂ ಪ್ರಾಜ್ಞರಾದ ಕವಿಗಳಿಂ ಗಣ್ಯರಾದ ಸರಗೂರು ವೇಂಕಟವರದಾಚಾರ್ಯರಿಂದ ರಚಿಸಲ್ಪಟ್ಟಿರುವ ಅಭಿನವ ನಾಟಕವನ್ನೇ ನಟಿಸಬಹುದು.

ಅಂತ್ಯ : ಸೂತ್ರಧಾರಂ॥ ಕಂ॥ ಸಕಲಕಲಾಕೋವಿದರುಂ
ಶುಕನುಸುರುವ ರಾಮ ರಾಮಯಂಬೀ ನುತಿಯಂ

ಸಕುತೂಹಲರಾಗಿ ಕೇಳಿ
ಶುಕನಂ ಸನ್ಮಾನಿಸರೇ ಸುಹೃದಯರಿಳೆಯೊಳು ‖ ೧ ‖

ಸುರಟ—ಮಂಗಳಂ—
ಮಂಗಳಂ ಭವತು ದರರಥಾಂಗ ಪಾಣಿಗೆ ‖ ಪಲ್ಲ ‖
ಇಂದಿರಾ ವಸುಂಧರಾನುಬಂಧಿತಾಂಗಗೆ ‖ ೧ ‖
ಚಾಮರಾಜ ಭೂಮಿಪಾಲ ಕಾಮಪೂರಗೆ ‖ ೨ ‖
ದುರಿತಪಟಲ ಹರಣಚಟುಲ ವರದ ವಿಠಲಗೆ ‖ ೩ ‖

ಐನೇ ಅಂಕವು ಸಂಪೂರ್ಣವು
ತಪತೀಪರಿಣಯ ನಾಟಕವು ಸಂಪೂರ್ಣವಾದುದು.

ವಿಷಯ : ಮಹಾಭಾರತದ ಆದಿಪರ್ವದಲ್ಲಿರುವ ಪಾರ್ಥಗಂಧರ್ವ ಸಂವಾದ ರೂಪವಾದ ವೈವಾಹಿಕ ಚರಿತ್ರೆ.

ವಿಶೇಷ : ಅಕ್ಷರಗಳು ಸುಂದರವಾಗಿದೆ. ನಾಟಕ ಸಮಗ್ರವಾಗಿದೆ. ಶುದ್ಧಪ್ರತಿ ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರೆದಿದೆ.

627

ಕೆ.ಎ. ೨೬೪	**ತರ್ಕಕೌಮುದೀ**	ಸಾಂಗತ್ಯ
೧೨.೯"×೮"	ಚಿಕ್ಕಮಲ್ಲಣ್ಣ	?
೧—೨೫೮ ಪತ್ರ	೨೧ ಪಂಕ್ತಿ	೧೩ ಅಕ್ಷರ

ಆದಿ : ಶ್ರೀರಮೆ ಪದಪಂಕಜದಿ ರಂಜಿಸಿ ವಾಕ್
ಶ್ರೀರಮೆ ಮೊಗದಿ ನಲಿಯಲೂ
ಘೋರಕರ್ಮಂಗಳ ಗೆಲಿದರುಹನ ಪಾದ
ವಾರಿಜಕಾನೆರಗುವೆನೂ ‖ ೧ ‖

ಅಂತ್ಯ : ಅಕ್ಕರಿಂ ಜನರು ಕೇಳ್ದ ಉಬ್ಬಳಿಯ
ಚಿಕ್ಕಮಲ್ಲಣ ವಿರಚಿಸಿದ
ತಕ್ಕ ಕೌಮುದಿಯೊಳು ಪದಿನಾರು ಸಂಧಿ
ಲೆಕ್ಕದಿಂ ತೋರಿದುದು ‖ ೧೧೬ ‖

ಇದು ಪರಜಿನೇಶ್ವರಪ್ರಣುತ ಶ್ರುತಾಂಭೋಧಿಯೊಳೂ ಮಿಥ್ಯಾತ್ವಾಂಧತೆಯಂ ತೊಳ್ದು ಸಮ್ಯಕ್ತ್ವಮಾರ್ಗವಂ ರತ್ನಪ್ರದೀಪದಂತೆ ತೋರ್ಪ ಕೌಮುದಿಯೊಳು ವಿದ್ಯುಲ್ಲತೆ ಪೇಳ್ದ ಕಥಾವರ್ಣನಂ ಷೋಡಶಾಶ್ವಾಸಂ ||

ಹದಿನಾರನೆ ಸಂಧಿ ಸಮಾಪ್ತಂ ||

ವಿಷಯ : ಸಮ್ಯಕ್ತ್ವದ ಕಥೆ.

ವಿಶೇಷ : ಸ್ಫುಟಾಕ್ಷರ, ಕೊನೆಯಲ್ಲಿ ಕೆಲವುಕಡೆ ಅಕ್ಷರಗಳು ಲುಪ್ತವಾಗಿವೆ.

628

ಕೆ. ಎ. ೧೧೯	**ತಾತ್ಪರ್ಯ ನಿರ್ಣಯ**	ಗದ್ಯ
೧೩.೨"×೮.೨"	ಆನಂದತೀರ್ಥ ಮುನಿ	?
೧-೧೦೫ ಪತ್ರ	೩೨ ಪಂಕ್ತಿ	೪೦ ಅಕ್ಷರ

ಆದಿ : ತಾತ್ಪರ್ಯ ನಿರ್ಣಯ ಪ್ರಥಮ ಅಧ್ಯಾಯ ||
ಆನಂದ ತೀರ್ಥರಾದವರು ವೇದವ್ಯಾಸರ ದರ್ಶನಕ್ಕೆ ಮೂರನೆ ಅವರ್ತಿಲಿ ಬದಿರಿಕಾಶ್ರಮಕ್ಕೆ ಹೋಗಿರಲಾಗಿ ವೇದವ್ಯಾಸ ಆನಂದ ತೀರ್ಥರಿಗೆ ಪೇಳಿಯಿದ್ದಾರ್ರೆ. ವೇದಗಳಲ್ಲಿ ವುತ್ತರರಾಮಾಯಣಗಳಲ್ಲಿ ಭಾರತಶಾಸ್ತ್ರಗಳಲ್ಲಿ ಪಂಚರಾತ್ರಗಮುದಲ್ಲಿ ಅಸುರಜನ ಪದಾರ್ಥವಾಗಿ ಶೃತಿ ಸ್ಮೃತಿಗಳಲ್ಲಿ.

ಅಂತ್ಯ : ಸರ್ವದಿಕ್ಕುಗಳಲ್ಲಿ ಸಮುಸ್ತರಾಯರುಗಳ ಗೆದ್ದು ದೃತರಾಷ್ಟರಾಯಗೆ ಕಪ್ಪ ತಂದು ಕೊಡುವಂಥಾವರಾದರು ಯಿವರ ಅಮನುಸ್ಯವಾದಂಥಾ ವ್ಯಾಪಾರಗಳಿಂದ ಸುಪ್ರೀತನಾದನು. ಹಾಗೆಯೆ ಪಟ್ಟಣದಲ್ಲಿ ವಿದೇಶದಲ್ಲಿ ಯಿದ್ದಂಥಾ ಜನರುಗಳು ಹಾಗೆ ಭೀಷ್ಮ ದ್ರೋಣ ಕೃಪಾಚಾರರ್ರು ಸಂಪ್ರೀತರಾಗಿ ಯಿದ್ದರೆಂಬ ತಾತ್ಪರ್ಯನಿರ್ಣಯ ಹದಿನೇಳಕ್ಕೆ ಮಂಗಳ ಮಹಾ ಶ್ರೀ

ವಿಷಯ : ರಾಮಾಯಣ, ಭಾರತದ ಕಥೆಯ ವಿವರಣೆ. ಮಧ್ಯೆ ದಶಾವತಾರದ ಕಥೆಗಳ ಪ್ರಸ್ತಾಪವಿದೆ.

ವಿಶೇಷ : ಗ್ರಂಥದ ಸ್ಥಿತಿ ಸಾಮಾನ್ಯ. ಮೋಡಿ ಅಕ್ಷರ.

629

ಕೆ.ಬಿ. ೧೪೧ **ತಾಮ್ರಧ್ವಜನ ಕಾಳಗ** ಯಕ್ಷಗಾನ

೭.೭"×೬.೧" ? ಸು. ೧೯೦೦

೧-೨೫ ಪತ್ರ ೧೭ ಪಂಕ್ತಿ ೨೨ ಅಕ್ಷರ

ಆದಿ : ತಾಂಮ್ರಧ್ವಜನ ಕಾಳಗ—

ನಾಂದಿ॥ ಶ್ರೀಲಕ್ಷ್ಮೀವದನಾಬ್ಜ ಚಂಚಲತನುಂ ಜ್ಞಾನಪ್ರದಂ ಕೇವಲಂ
ಭೋಗೈಶ್ವರ್ಯ ಸಮಸ್ತ ವೇದನಿಲಯಂ ವಿದ್ಯಾಧರಾರಾಧಿಕಂ
ವೇದಾರ್ಥಸಾರಂ ಹಿತಂ ವ್ಯಾಸಾದಿ ಪ್ರಣತಂ ಸುತೌಘ ವಿನುತಂ
ಮೌನೀ ಹೃದಂ ಶಾಶ್ವಿತಂ
ವಂದೇ ಶ್ರೀ ಗರುಡಧ್ವಜಂ ಭವಹರಂ ಭೂಯಾಮಿ ತುಭ್ಯಂ ನಮಃ ॥ ೧ ॥

x x x x

ಕಡು ಪರಾಕ್ರಮಿ ವಿಜಯನಶ್ವವ
ತಡದು ತಾಮ್ರಧ್ವಜನು ಮುಂದಕೆ
ಬಿಡದೆ ಸತ್ವದಿ । ಕಟ್ಟಿ ಕದನದಿ
ಕಡುಹ ಮೆರೆದ ॥ ೧೮ ॥

ಅಂತ್ಯ : ವಾರ್ಧಿಕ॥ ಜನಪತಿ ಮಯೂರ ಧ್ವಜಾದಿ ಭೂಪಾಲರಂ
ವಿನಯದಿಂದುಪಚರಿಸಿ ಯಜ್ಞಮಂ ಮುಗಿಸಿ ತಂ
ನನುಜಾತರಂ ಕೂಡಿಕೊಂಡಾ ಯುಧಿಷ್ಠರಂ ಧರೆಯನಾಳಿದ ಕಥೆಯನು
ಜನಮೇಜಯಂಗತಿಪ್ರೇಮದಿಂ ಪೇಳ್ದ ಜೈಮಿನಿ
ಮುನಿಪನದರೊಳಗೆ ತಿಳಿದಷ್ಟ ವರ್ನಿಸಿದೆ
ವನಜಬಾಂಧವ ವಿಭೀಷಣ ನಗರ ಮಧ್ಯದೋಳ್ ನೆಲಸಿದೊಡಯನ
ಕರುಣದಿಂದ ॥ ೩೧೩ ॥

ಕಂದಪದ್ಯ ॥ ಈ ಕಥೆ ಮುಗಿದುದು ಕರುಣಾ
ಕೇಕರ ಶ್ರೀ ನರಸಿಂಹನ ಕೃಪೆಯಿಂದಂ ಭೂ
ಲೋಕದ ಜನಗಳ್ ಮುದದಿಂ
ದೀ ಕಥೆಯೋಳ್ ದೋಷಮಿರೆ ತಿದ್ದಲಿ ನಲವಿಂ ॥ ೩೧೪ ॥
ಸಂಪೂರ್ಣಂ ॥

ವಿಷಯ : ಧರ್ಮರಾಯನ ಅಶ್ವಮೇಧಯಾಗದ ಕುದುರೆಯನ್ನು ತಡೆದು ಯುದ್ಧ ಮಾಡಿದ ತಾಮ್ರಧ್ವಜನ ಕಥೆ.

ವಿಶೇಷ : ಪತ್ರಗಳನ್ನು ಅಲ್ಲಲ್ಲಿ ಹುಳು ತಿಂದಿದೆಯಾದರೂ ಗ್ರಂಥದ ವಿಷಯಕ್ಕೆ ಕುಂದಿಲ್ಲ. ಸ್ಫುಟಾಕ್ಷರ.

630

ಕೆ.ಬಿ. ೩೧೨	**ತಾಮ್ರಧ್ವಜನ ಕಾಳಗ**	ಯಕ್ಷಗಾನ
೭.೭"×೬.೩"	?	ಸು. ೧೯೦೦
೧–೨೨ ಪತ್ರ	೧೬ ಪಂಕ್ತಿ	೩೦ ಅಕ್ಷರ

ಆದಿ : ತಾಮ್ರಧ್ವಜನ ಕಾಳಗ ಬರೆಯುವದಕ್ಕೆ ಶುಭಮಸ್ತು

ವೃತ್ತ ॥ ಶ್ರೀಲಕ್ಷ್ಮೀವದನಾಬ್ಜ ಚಂಚಲತನುಂ ಜ್ಞಾನಪ್ರದಂ ಕೇವಲಂ
ಭೋಗೈಶ್ವರ್ಯ ಸಮಸ್ತ ವೇದನಿಲಯಂ ವಿದ್ಯಾಧರಾರಾಧಿತಂ
ವೇದಾರ್ಥ ಸಾರಂ ಹಿತಂ ವ್ಯಾಸಾದಿ ಪ್ರಣತಂ ಮೌನಿ ಹೃದಂ ಶಾಶ್ವತಂ
ವಂದೇ ಶ್ರೀ ಗರುಡಧ್ವಜಂ ಭವಹರಂ ಭೂಯಾಪಿ ತುಂಭ್ಯೋ ನಮಃ ॥೧॥

x x x x

ಕಡು ಪರಾಕ್ರಮ ವಿಜಯನಶ್ವವ
ತಡದು ತಾಂಬ್ರಧ್ವಜನು ಮುಂದಕೆ
ಬಿಡದೆ ಸತ್ವದಿ ಕಟ್ಟಿ ಕದನದಿ । ಕಡುಹ ಮೆರೆದ ॥ ೧೮ ॥

ಅಂತ್ಯ : ವಾರ್ಧಖ ॥ ಜನಪತಿ ಮಯೂರ ಧ್ವಜಾದಿ ಭೂಪಾಲರಂ
ವಿನಯದಿಂದುಪಚರಿಸಿ ಯಜ್ಞ್ಯವುಂ ಮುಗಿಸಿ ತ
ನ್ನನುಜಾತಂ ಕೂಡಿಕೊಂಡಾ ಯುಧಿಷ್ಠರಂ ಧರೆಯನಾಳಿದ ಕಥೆಯನು
ಜನಮೇಜಯುಂಗತಿಪ್ರೇಮದಿಂ ಪೇಳ್ದ ಜೈಮುನಿ
ಮುನಿಪನದರೊಳಗೆ ತಿಳಿದಷ್ಟ ವರ್ನಿಸಿದೆ
ವನಜಬಾಂಧವ ವಿಭೀಷಣ ನಗರ ಮಧ್ಯದೊಳ್ ನೆಲಸಿದೊಡೆಯನ
ಕರುಣದೀ ॥ ೨೭೯ ॥

ವಿಷಯ : ಯುಧಿಷ್ಠಿರನ ಅಶ್ವಮೇಧಯಾಗದ ಅಶ್ವವನ್ನು ಕಟ್ಟಿಹಾಕಿ ಯುದ್ಧ ಮಾಡಿದ ತಾಮ್ರಧ್ವಜನ ಕಥೆ.

ವಿಶೇಷ : ಮೋಡಿ ಬರಹ, ಗ್ರಂಥದಲ್ಲಿರುವ ದೋಷಗಳನ್ನು ಅಲ್ಲಲ್ಲಿ ಸರಿಪಡಿಸಿದೆ.

631

ಕೆ.ಬಿ. ೩೩೦	ತಾರಕ ನಿರಂಜನ	ಹಾಡು
೭.೩"X೫.೭"	ದಾಸ ಚಿನ್ಮಯ	ಸು. ೧೭೫೦
೧-೫೦ ಪತ್ರ	೧೫ ಪಂಕ್ತಿ	೧೪ ಅಕ್ಷರ

ಆದಿ : ತಾರಣ ಸಂವತ್ಸರದ ಶ್ರವಣ ಶ್ದು ೧೫ಲ್ಲು ತಾರಕ ನಿರಂಜನ ಗ್ರಂಥ
ಬರಿಯುವದಕ್ಕೆ ನಿರ್ವಿಗ್ನಮಸ್ತು
ತಾರಕ ನಿರಂಜನ ॥ ಪೀಠಿಕಾ ಅಧ್ಯಾಯ ॥
ಶ್ರೀಮತ್ಸಕಲ ಗುಣಗಳಗಣಿತಗಳಾಗಿರು ವದನ ಕಳಿದುಳಿದಾತ್ಮ
ನಿವರ್ಾಯ ನಿರ್ಗುಣ ನಿತ್ಯ ನಿರಂಜನ । ನಿಜ ನಿತ್ಯಾನಂದಾ ॥

ಪದನೂ ॥ ನಾಮ ರೂಪಾಧಾರ ನಿರ್ಮಳ ನಿ
ರಾಮಯ ಕರ್ಮಸಾಕ್ಷಿ ಗುಣತ್ರಯಂಗಳಿಲ್ಲವು
ಮೀರಿ ತೋರುವ ತಾರಕ ಪರಂಜ್ಯೋತಿ । ಪರಿಪೂರ್ನ ॥ ೦ ॥
ಬ್ರಂಹ್ಮ ವಿಷ್ಣು ಹರನೆಂದು । ನಾಮ ಮಾತ್ರವೆಯಾಗಿ
ಮೂರು ಮೂರ್ತಿಯು ನೇಮದೊಳಗವತರಿಶಿ
ಭೂಮಿಯೊಳು ಪೊಗಳಿಸಿಕೊಳ್ಳುವೆ ನೀನೆ ನಿರ್ಗುಣನೇ ॥ ೧ ॥

X X X X

ತಾರಕ ನಿರಂಜನವೆಂಬ ಗ್ರಂದಃ । ಗೊಡೆಯನಾಗಿಹ
ಶ್ರೀರಂಗಪಟ್ಟಣದ ಶ್ರೀರಂಗನಲ್ಲದೆ ಯನಗೆ ಸ್ವತಂತ್ರಯಿಲ್ಲೆಂದು
ಚಿನುಮಯನೂ ॥ ೦ ॥

ಅಂತ್ಯ :ಬಾಲಕನು ಶ್ರೀ ಗುರುಚರಣದನುಗ್ರಹದೊಳು
ಯಲ್ಲ ಜಗವಾದ ನಿರ್ಗುಣನೊಳು ಕಲಿತು
ಸುಮನಾದ ಬಾಲಕನಾ ॥
ಲೀಲಾನಂದವು ಚಿನುಮಯ ಕಂಡು
ಬಲಿದಿಹುದು ನಿರ್ಗುಣವು ಯಿವಗೆಂದು
ಲಲಿತಾತ್ಮಕನಾದ ಮೂಲಮೂರುತಿ ಶ್ರೀ
ಗುರುಲಿಂಗಾರ್ಯ ಚರಣವನು ನೆನದಾ ॥ ೨೪ ॥
ಯಿತೀ ಶ್ರೀಮತ್ಪರಮಹಂಸಾ ಪರಿವ್ರಾಜಕಾಚಾರ್ಯ ಸಹಜಾನಂದ ಸದ್ಗುರು
ಲಿಂಗಾರ್ಯ ಚರಣ ಸೇವಕದಾಸ ಚಿನುಮಯನು ವಿರಚಿತಮಾದ ತಾರಕ
ನಿರಂಜನ ಗ್ರಂಥದೊಳು ನಿರ್ಗುಣ ಅಧ್ಯಾಯ ಸಂಪೂರ್ಣಮಸ್ತೂ ॥
ಅಂತು ಅಧ್ಯಾಯ ೭ ಕ್ಕಾಂ ಪದನೂ ೨೦೪ ಕ್ಕಂ ಮಂಗಳ ಮಹಾ ಶ್ರೀ

ವಿಷಯ : ವೇದಾಂತ, ಯೋಗ ವಿಚಾರ.

ವಿಶೇಷ : ಸ್ಫುಟಾಕ್ಷರ.

632

ಕೆ.ಬಿ. ೧೧೧	ತಾರಕವಧೆ	ಯಕ್ಷಗಾನ
೭.೬"X೬.೧"	ಅಳಿಯ ಲಿಂಗರಾಜ	೧೮೫೦
೧-೩೩ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ತಾರಕವಧೆ ಕಥೆ.
ನಾಂದಿ ॥ ಶಾರ್ದೂಲ ವಿಕ್ರೀಡಿತ ವೃತ್ತ ॥
ಶ್ರೀಮತ್‌ಕ್ಷ್ಮಾಧ್ರರಜಾ ಚಿರಂತನ ತಪಸ್ಸಂಫುಲ್ಲತಾ ಸತ್ಫಲಂ
ಕಾಮಾಂಗಾತುಲ ತೂಲ ದಾಹದಹನಂ ನಿಶ್ರೇಯಸ್ಯೆಕಾಶ್ರಯಂ
ಸಾಮಾಂಧಾಸುರ ತಾರಕಾರಿ ಜನಕಂ ಭಕ್ತಾವನೋಽನ್ನಿದ್ರಕಂ
ಪ್ರೇಮಂಬೆತ್ತು ಕೃಪಾರ್ಣವಂ ಸಲಹಲೆಮ್ಮಂ ದಕ್ಷ ವಿಧ್ವಂಸಕಂ ॥ ೧ ॥

ಅಂತ್ಯ : ತಾರಕಮಾರಕಸಾರ ಕುಮಾರಾವ
ತಾರಕ ಶಿಕ್ಷಣ ತಾರಕಗೆ
ನಾರಕ ಭೀತಿ ನಿವಾರಕ ನಾಮಗೆ
ಕಾರುಣ್ಯ ಪೂರ್ಣ ಮಹಾಲಿಂಗನಿಗೆ ॥೩೭ ॥
॥ ಗಿರಿಜಾ ಕಲ್ಯಾಣ ತಾರಕವಧಾ ಸಂಪೂರ್ಣಂ ॥
ಕರ ರಸ ರಂಧ್ರ ಪಯೋನಿಧಿ
ಪರಿಮಿತ ಕಲಿ ಕರ್ಷರಂಜಿ ಕಳಿಯಲ್ಕಾಗವ
ತರಿಸಿದ ದುರ್ಮತ್ಯಾಬ್ದದಿ
ವರಗುಹಚರಿತೆಯನು ಲಿಂಗರಾಜನುಸುರ್ದಂ ॥ ೩೮ ॥
ಸಂಪೂರ್ಣಂ.

ವಿಷಯ : ಷಣ್ಮುಖನಿಂದ ವಧೆಯಾದ ತಾರಕಾಸುರನ ಕಥೆ.

ವಿಶೇಷ : ಸ್ಫುಟಬರಹ. ಅಲ್ಲಲ್ಲಿ ಹುಳು ತಿಂದಿದೆಯಾದರೂ ಗ್ರಂಥಲೋಪವಿಲ್ಲ.

633

ಕೆ.ಬಿ. ೫೭	ತಾರಾ ಶಶಾಂಕ ನಾಟಕ	ಯಕ್ಷಗಾನ
೭.೬"×೬.೧"	ಸುಬ್ರಹ್ಮಣ್ಯ	ಸು. ೧೮೩೦
೧-೪೦ ಪತ್ರ	೧೧ ಪಂಕ್ತಿ	೨೬ ಅಕ್ಷರ

ಆದಿ : ತಾರಾಶಶಾಂಕ ನಾಟಕವಂ ಬರಿಯುವುದಕ್ಕೆ ನಿರ್ವಿಘ್ನೆಮಸ್ತು.

ಕಂ ॥ ಗಜಮುಖನಂಘ್ರಿಗೆ ನಮಿಸುವೆ
ನಿಜವಾಣಿಯ ನಿರತ ಮನದಿ ನೆನದತಿಮುದದಿಂ
ಭುಜಗಾರಿಯನೇರುವನಂ
ಭಜಿಸುತ ನಾನಿಂದು ಪೇಳ್ವೆ ಭರದೊಳೀ ಕಥೆಯಂ

ಅಂತ್ಯ : ಪೇಳಲೆ ಅನುಕೂಲ'ಬುಧ ನೀ ವ್ಯಾಳೆ ಶಶಿಗೆ ಬಾಲನು ॥ ೪ ॥
ರತನತಾರೆ ಸಂವುತವಾಗಿ ಬುಧನೆಂಬ । ಸುತನ ಚಂದಿರ
ಹಿತದಿ ಕುಸುಮಾವತಿಗೆ ವೊಯ್ದನು ಗತಿಯಲೀ ॥ ೫ ॥

x x x x

ಶ್ರೀಕೃಷ್ಣರಾಜೇಂದ್ರನಾಜ್ಞಾನುಸಾರದಿಂ ಕಾಳಿದಾಸಾದಿ ಸುಕವಿಬೃಂದವಂ ಸ್ತುತಿಸಿ। ಅಣುಪ್ರಸ್ಥ ಪುರವಾಸ ಬಾಡಾಲವಂಶ ಪ್ರಕಾಶ ನಾರಾಯಣಾರ್ಯ ಸುತ ಸುಬ್ರಂಹ್ಮಣ್ಯ ವಿರಚಿತ ಶೃಂಗಾರ ರಸಪೂರ ತಾರಾ ಶಶಾಂಕ ನಾಟಕ ಪ್ರಬಂಧವಂ ಧರಿಯೊಳಗೆ ಕೇಳಿ ಪೇಳ್ದವರಿಗಿಷ್ಟಾರ್ಥ ಸಂಪದ ಸಂತೋಷವಂನಿತ್ತು ತಿರುಪತಿ ವಡೆಯನಾಥ ಲಕ್ಷ್ಮೀಪತಿ ಕಟಾಕ್ಷದಿಂ ರಕ್ಷಿಸುವನೂ x x x x ರಾಜ ರಾಜನಾಗೀ ಜಗಕೆ ಕವಿಭೋಜ ಧೊರೆ ಕೃಷ್ಣರಾಜನೊಲಿವಗೆ

॥ ಮಂಗಳಾ ॥ ತಾರಾಶಶಾಂಕ ನಾಟಕ ಸಂಪೂರ್ಣ. ಮಂಗಳ ಮಹಾಶ್ರೀ

ವಿಷಯ : ತಾರಾ ಚಂದ್ರರ ಕಥೆ.

ವಿಶೇಷ : ಮೋಡಿ ಅಕ್ಷರ.

634

ಕೆ.ಎ. ೮೫/೩	ತಿರುಪ್ಪಾವೈ	ತಮಿಳುಹಾಡು, ಟೀಕೆ, ವಾರ್ಧಕ ಷಟ್ಪದಿ
೧೨.೮"×೮.೧"	ಶ್ರೀನಿವಾಸದಾಸ	೨೦ನೆಯ ಶತಕ
೩೭-೪೫ ಪತ್ರ	೨೨ ಪಂಕ್ತಿ	೬೨ ಅಕ್ಷರ

ಆದಿ: ಶ್ರೀರಸ್ತು || ಶ್ರೀಶೈಲೇಶ ದಯಾಪಾತ್ರಂ ಧೀಭಕ್ತ್ಯಾದಿ ಗುಣಾರ್ಣವಂ
ಯತೀಂದ್ರ ಪ್ರವಣಂ ವಂದೇ ರಮ್ಯ ಜಾಮಾತರಂ ಮುನಿಂ ||

x x x x

ನೀಳಾತುಂಗಸ್ತನಗಿರಿತಟೀ ಸುಪ್ತಮುದ್ಬೋಧ್ಯಕೃಷ್ಣಂ |
ಪಾರಾರ್ಥ್ಯಂ ಸ್ವಂ ಶ್ರುತಿಶತ ಶಿರ ಸಿದ್ಧಮಧ್ಯಾಪಯಂತಿ ||
ಸ್ವೋಚ್ಛಿಷ್ಟಾಯಾಂ ಸ್ರಜನಿಗಳಿತಂ ಯಾ ಬಲಾತ್ಕೃತ್ಯ ಭುಙ್ತೇ
ಗೋದಾ ತಸ್ಯೈ ನಮ ಇದಮಿದಂ ಭೂಯ ಏವಾಸ್ತು ಭೂಯಃ || ೧ ||

ವಾರ್ಧಿಕ ಷಟ್ಪದಿ |
ಮೆರೆವ ನೀಳಾ ತುಂಗಕುಚ ಗಿರಿಯ ತಪ್ಪಲೊಳ
ಗೊರಗಿರ್ಪ ಕೃಷ್ಣನನ್ನೆಳ್ಚರಿಸುತಾತ್ಮೀಯ
ಪರತಂತ್ರಮಂ ನಿಗಮಮೌಳಿ ಶತಸಿದ್ಧಮಂ ಬಿನ್ನವಿಸಿ ತಾಂ ಸೂಡಿದ
ಸುರುಚಿರಸ್ರಜ ನಿಗಳಿತನ ಬಲಾತ್ಕಾರದಿಂ
ದಿರದೆ ಭೋಗಿಸಿದಳಾರಾ ನೀಳೆಗೀ ನಮ್ಮ
ವರ ನಮಸ್ಕಾರಗಳ್ಚಿರಮಕ್ಕೆ ಮತ್ತುಮಂ ತಾವೈದೆ ನಿರತಮಕ್ಕೆ || ೧ ||

ಅಂತ್ಯ: ಪ್ರ-ಪ.
ಓಙ್ಗ-ಉದ್ದವಾಗಿ, ಉಲಗು-ಲೋಕವನ್ನು, ಅಳಂದ-ಅಳೆದ, ಉತ್ತಮರ್-ಉತ್ತಮನ, ಪೇರ್-ನಾಮವನ್ನು, ಪಾಡಿ-ಕೀರ್ತಿಸಿ, ನಾಙ್ಗಳ್-ನಾವ್ಗಳು, ನಮ್ಬಾವೈಕ್ಕು-ನಮ್ಮ ನೋಂಪಿಗೆ, ಶಾತ್ತಿ-ನೆಪವಿಟ್ಟು, ನೀರಾಡಿನಾಲ್-ಮಿನ್ದರೆ, ತಿಙ್ಗನ್ರಿ-ಅನಾವೃಷ್ಟಿದೋಷ ತೊಲಗಿ, ನಾಡೆಲ್ಲಾಂ-ದೇಶಗಳಲ್ಲೆಲ್ಲ, ತಿಙ್ಗಳ್-ಮಾಸದಲ್ಲಿ, ಮುಮ್ಮಾರಿ-ಮುರುಸೂಳ್ಕಳೆ, ಪೈಯ್ದು-ಕರೆದು, ಉಡು-ಮಧ್ಯಪ್ರದೇಶದಲ್ಲಿ, ಕಯಲ್-ಮೀನು, ಉಗಳ-ಸಿಡಿಮಿಡಿಗೊಳ್ಳುವಂತೆ, ಶನ್ನೆಲ್-ಕೆಂಭತ್ತವು, ಓಙ್ಗುವೆರುಂ-ವೃದ್ಧಿಯಾಗುವದು | ಪೂಙ್ಗುವಳೈಪ್ಪೋದಿಲ್.

ವಿಷಯ: ತಮಿಳು ಪ್ರಬಂಧ ತಿರುಪ್ಪಾವೈಯ ಕನ್ನಡ ಪದ್ಯಾನುವಾದ ಮತ್ತು ಪ್ರತಿಪದಾರ್ಥ.

ವಿಶೇಷ: ಅಸಮಗ್ರಪ್ರತಿ. ಇದೇ ಪುಸ್ತಕದಲ್ಲಿ ಮುಕುಂದಮಾಲಾ ತಾತ್ಪರ್ಯ, ಮತ್ತು ಪ್ರಾಭೋದಕೀ ಸೂಕ್ತಿಮಾಲೆ ಎಂಬ ಕೃತಿಗಳಿವೆ. ಗ್ರಂಥಾರಂಭದಲ್ಲಿ ಅವತಾರಿಕೆ ಇದೆ.

635

ಕೆ.ಬಿ. ೧೬	ತಿರುವೇಂಗಡಾರ್ಯ ಶತಕ	ವಾರ್ಧಕ ಷಟ್ಪದಿ
೮.೧"×೬.೫"	ಕೇಶವ	ಸು. ೧೭೫೦
೧-೧೩೩ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ವಾರ್ಧಿಕ ಷಟ್ಪದಿ ।

ಶ್ರೀಮದ್ರಮಾ ಭೂಮಿ ನೀಳಾ ಮುಖಾಂಗನಾ
ಪ್ರೇಮಯುತ ವಿಲಸದ್ವಿಭವ ಭವದ್ರುಹಿಣ ಸು
ತ್ರಾಮಾದ್ಯಖಿಲ ದೇವತ ಜನ್ಮಕಾರಣ ಮಹಿಮ್ನ ಮಾಂಗಲ್ಯರೂಪಾ
ಸಾಮಾದಿ ವೇದ ಸಂಸ್ತವಮಗೋಚರ ಪುಂಣ್ಯ
ನಾಮ ಪರವಸ್ತು ಪರಬೊಮ್ಮ ವರಸೂರಿಗಣ
ರಾಮಣೀಯಕ ಪರಮಪದವಾಸ ಆದಿಕೇಶವರಾಯ ಮಾಂ ಪಾಲಯ ॥೧॥

X X X X

ಪರಿಮಳ ಸುಗಂಧ ಲೇಪಿತವಾದ ದೇಹದೊಳ್
ಆರಸುತಂ ವ್ರಣದಿ ತಿರುಗುವ ಮಕ್ಷಿಗಳಂತೆ
ಪರತತ್ವನಿರ್ಣಯಂ ಗುರುವರಸ್ತೋತ್ರಮಂ ವಿರಚಿಸಿದ ಈ ಕವಿತೆಯೊಳ್
ನೆರೆ ಲಕ್ಷಣಾ ಲಕ್ಷಣಂಗಳಂ ಕ್ಷಣಕ್ಷಣಕೆ
ಪುರುಡಿಸಿಯೆ ನೋಡುತಿಹ ಕುಕವಿಯ ಮಕ್ಕಳಕೆ
ತಿರುವೆಂಕಟಾಚಾರ್ಯ ಚರಿತೆಯಿದು ಅಗ್ನಿಯೊಲು ಇರೆ ಬಂದು ಮುಟ್ಟಲಳವೆ
॥ ೧೨ ॥

ಅಂತ್ಯ : ಜಯತು ತಿರುವೇಂಗಡಾಚಾರ್ಯ ಮುನಿಜನವರ್ಯ
ಜಯತು ವೇಂಕಟಾಚಲಪಾತ್ರ ಸದ್ಗುರೋ ಪಾತ್ರ
ಜಯತು ಸಿಂಗಮೊದರಾಂಬೋಧಿ ವರಚಂದ್ರಸಾತ್ವ ನಿಜ ಸತ್ಯ ಸಾಂದ್ರಾ
ಜಯತು ಗುರುಪುತ್ರ ಹೃದಯಾಂಭೋಜರವಿತೇಜ
ಜಯತಾದಿಕೇಶವಸ್ತವ ಪ್ರೇಮ ಸುಕ್ಷೇಮ
ಜಯತು ಆಶ್ರಿತ ಶರಣರಘಹರಣ ನಿಷ್ಕರುಣ ಜಯ ಜಯತು ಜಯತು
ಜಯತೂ ॥ ೧೦೭ ॥

ಇತಿ ಸಮಸ್ತ ಕಮಲಭವಾಂಡ ಮಂಡಲ ಹರೀಕೃತ ಗರ್ಭಪ್ರತಿರಹಿತ
ಶ್ರೀಯಃಪತಿ ಪರಮ ಪದವಾಸ ಆದಿಕೇಶವ ಪಾದಪದ್ಮ ಮಕರಂದ ಮತ್ತ
ಮಧುಕರಚೇತಸ ಗುರುಸುತ ಕೇಶವಾಖ್ಯ ವಿರಚಿತ ತಿರುವೇಂಗಡಾರ್ಯ

ಶತಕ ಪಂಚಮೋಪಾಯ ಅಕಾರಾದಿ ಮಾರ್ಗನಿರ್ಣಯಂ ಪಂಚಶತಕೆ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ :ವಿಶಿಷ್ಟಾದ್ವೈತ ವೇದಾಂತ.

ವಿಶೇಷ : ಸುಂದರಾಕ್ಷರ.

636

ಕೆ. ೫೩	**ತೊರವೆ ರಾಮಾಯಣ**	ಭಾಮಿನೀ ಷಟ್ಪದಿ
೧೬.೫"×೧.೬"	ಕುಮಾರ ವಾಲ್ಮೀಕಿ	ಸು. ೧೫೮೦
೧-೧೬೬ ಪತ್ರ	೧೩ ಪಂಕ್ತಿ	೧೦೫ ಅಕ್ಷರ

ಆದಿ : ರಾಮಾಯಣದ ಪುಸ್ತಕಕ್ಕೆ ಶುಭಮಸ್ತು |ಭಾಮಿನೀ ಷಟ್ಪದಿ |
ಶ್ರೀಜನಕಜಾರಮಣ ವಿಮಲ ಸ
ರೋಜ ಸಂಭವ ಜನಕನನುಪಮ
ರಾಜಶೇಖರ ವಿನುತ ನಿಖಿಳಾಮರ ಕಿರೀಟಿ ಚಯಾ
ರಾಜಿತಾಮಲ ಲಲಿತಪದ ಪಂ
ಕೇಜನಾನತ ಜನ ....ಯಾಸುರು
ಭೂಜ ತೊರವೆಯ ರಾಯ ನರಹರಿ ಪಾಲಿಸುಗೆ ಜಗವ || ೧ ||

x x x x

ಚಾರುತರ ಕರ್ನಾಟಕದ ವಿ
ಸ್ತಾರ ರಾಮಾಯಣಕೆ ಕರ್ತು ಕು
ಮಾರ ವಾಲ್ಮೀಕಿಯೆ ಕಥಾಪತಿ ತೊರವೆಯಧಿನಾಥಾ
ವೀರ ನರಹರಿಯೆನಲು ಮೆಚ್ಚಬೆ
ರಾರು ಸತ್ಕವಿತಾ ವಿಲಾಸದ
ಸೂರಿಗಳ ಹೃದಯಾಕರುಷಣ ಕಥಾ ಕುತೂಹಲವಾ || ೯ ||

ಅಂತ್ಯ : ಕಳಷ ಕಂನ್ನಡಿ ನಿಹಿತ ಶೋಭಾ
ಕಲಿತ ವೈಭವದಿಂದಿದಿರ್ಗೊಂ
ಡಳು ಮಹಾ ಸಂಭ್ರಮದಿಯವನಿಜೆ ಸಹಿತ ರಾಘವನಾ
ಯಿಳಿದು ತೊಡೆಯಿಂದರಸನಾ ....

ವಿಷಯ : ರಾಮಾಯಣ ಯುದ್ಧಕಾಂಡದ ಕಥೆ.

ವಿಶೇಷ : ಕೊನೆಯ ಒಂದೆರಡು ಗರಿಗಳಿಲ್ಲ. ಅಸಮಗ್ರಪ್ರತಿ. ಮೊದಲ ಗರಿ ಮುರಿದಿದೆ. ಶಕಟ ರೇಫದ ಬಳಕೆ ಕೆಲವುಕಡೆ ಇದೆ. ಶಿಥಿಲ ಪ್ರತಿ.

637

ಕೆ. ಬ೫	ತೊರವೆ ರಾಮಾಯಣ	ಭಾಮಿನೀ ಷಟ್ಪದಿ
೧೫.೫"×೧.೪"	ಕುಮಾರ ವಾಲ್ಮೀಕಿ	ಸು. ೧೫೮೦
೧-೧೯೯ ಪತ್ರ	೭ ಪಂಕ್ತಿ	೭೫ ಅಕ್ಷರ

ಆದಿ : ಶ್ರೀ ವಾಲ್ಮೀಕಿಯೆ ನಮಃ । ರಾಮಾಯಣದ ಪುಸ್ತಕಕ್ಕೆ ನಿರ್ವಿಘ್ನಮಸ್ತು ॥
ಶ್ರೀ ಜನಕಜಾರಮಣ ವಿಮ ....
ರೋಜ ಸಂಭವ ಜನಕನನುಪಮ
ರಾಜಸೇಖರ ವಿ....ತ ನಿಖಿಳಾಮರ ಕಿರೀಟಿ ಚಯಾ
ರಾಜಿತಾಮರ ಲಲಿತಪದ ಪಂ
ಕೇಜನಾನತ ಜನ ದಯಾಸುರ
ಭೂಜ ತೊರವೆಯ ರಾಯ ನರಹರಿ ಪಾಲಿಸುಗೆ ಜಗವಾ ॥ ೧ ॥

x x x x

ಚಾರುತರ ವಿಸ್ತಾರ ಕರ್ನಾಟಕ
ದ ರಾಮಾಯಣಕೆ ಕರ್ತೃ ಕು
ಮಾರವಾಲ್ಮೀಕಿಯೆ ಥಾಪತಿ ತೊರವೆಯದಿನಾಥಾ
ವೀರ ನರಹರಿಯನಲು ಮೆಚ್ಚದ
ರಾರು ಸತ್ಕವಿತಾ ವಿಲಾಸಕೆ
ಸೂರಿಗಳ ಹೃದಯಾಕರುಷಣ ಕಥಾ ಕುತೂಹಲಲೂ ॥ ೯ ॥

ಅಂತ್ಯ : ಅಂತೂ ಸಂಧಿ ೭೨ಕ್ಕೆ ಪದನೂ ೨೫೩೮ ಕಂ ಮಂಗಳಮಹಾಶ್ರೀ
ಅಂಕ್ಕದಲಿ ಬಲ ಬಲಸಹಿತ ನಿ
ಶ್ಯಂಕ್ಕ ರಘುಪತಿ ಬಂದುಬಿಟ್ಟನು
ಲಂಕ್ಕೆಯೊತ್ತಿನಲಸುರಪತಿ ನೆರಹಿದನು ನಿಜಬಲವಾನೂ
ಕುಶನೆ ಕೇಳ್ಪೆ ಪುಷ್ಯಶುಧ
ದಶಮಿ ದಿವಸದ ಮುಖದಲಾರಂ
ಬಿಸಿತು ಮುಗಿದುದು ಸೇತು ದಿನನಾಲ್ಕರ ಸಮಾಪ್ತಿಯಲಿ ॥

ವಿಷಯ : ರಾಮಾಯಣ ಯುದ್ಧಕಾಂಡದ ಕಥೆ.

ವಿಶೇಷ : ಪ್ರತಿ ಶಿಥಿಲವಾಗಿದೆ. ಅಪೂರ್ವವಾಗಿ ಶಕಟರೇಫ ಪ್ರಯೋಗವಿದೆ.

638

ಕೆ. ೧೩೪ **ತೊರವೆ ರಾಮಾಯಣ** ಭಾಮಿನೀ ಷಟ್ಪದಿ
೧೭″×೧.೯″ ಕುಮಾರ ವಾಲ್ಮೀಕಿ ಸು ೧೫೮೦
೨–೧೧೮ ಪತ್ರ ೧೧ ಪಂಕ್ತಿ ೧೦೦ ಅಕ್ಷರ

ಆದಿ : .... ನಕುಲದ ಕುಶಲವ ಕುಮಾರಕರಾ ॥ ೧೦ ॥
ವಂದುದಿನ ಬಳಿಕವರು ಮುನಿಗಭಿ
ವಂದನಂಗೆಯೆದುಚಿತ ವಚನವ
ರೆಂದರೆಲೆ ಮುನಿನಾಥ ಚಿತ್ತೈಸೆಂಮುವನು ಪಡದಾ
ತಂದೆಯಾರೆಂಮುಂನ್ವಯವದೇ
ನೆಂದು ಬಿಂನಹ ಮಾಡೆ ಮುನಿ ಸಾ
ನಂದದಲಿ ಪೇಳಲ್ಕೆ ತೊಡಗಿ ...

ಅಂತ್ಯ : ಅಂತು ಸಂಧಿ ೭೩ಕ್ಕೆ ಪದ ೩೦೨೩ಕ್ಕಂ ಮಂಗಳಮಹಾಶ್ರೀ
ಪಲ್ಲ ॥ ಅಮರರಿಪು ದೂಂಮ್ರಾಕ್ಷ ರಣನಿ
ರ್ಗಮುಬಲಾವ್ವಿತ ವಜ್ರದಂಷ್ಟ್ರರ
ಸಮರದಲಿ ಗೆಲಿದರು ಸಮಿರಜ ವಾಲಿನಂದನರು

x x x x

....ಲತರಾದರೆ ರಾಮಲಕ್ಷ್ಮಣ
ರಳವ ಮುರಿವೆವು ಬಿಜಯಮಾತಿದು
ಫಲಿಸದಿರ್ದರೆ ಪತಿಕರಿಸಬೇಡೆಂದರಸುರಂಗೆ ॥ ೧೦ ॥
ಖಳ ಬಳಿಕ ಖಳರಿಬ್ಬರಿಗೆ ಬ
ಟ್ಟಲಲಿ ವೀಳಯವಿತ್ತು ಬೀಳ್ಕೊಡೆ
ಕಲಹಕನುವಾಗಿರ್ದು ಚಾತುರ್ಬಲದ ಗಡಣದಲಿ
ಯಿಳಿದರಂದಾ ದುರ್ಗವನುಡಿಗು
ವ........ ....

ವಿಷಯ : ರಾಮಾಯಣ ಯುದ್ಧಕಾಂಡದ ಕಥೆ.

ವಿಶೇಷ : ಶಿಥಿಲಪ್ರತಿ. ಪತ್ರಗಳು ಅಸ್ತವ್ಯಸ್ತವಾಗಿವೆ.

639

ಕೆ. ೧೫೮ | ತೊರವೆ ರಾಮಾಯಣ | ಭಾಮಿನೀಷಟ್ಪದಿ
೧೫.೮" × ೧.೬" | ಕುಮಾರ ವಾಲ್ಮೀಕಿ | ಸು. ೧೫೮೦
೩೩೫-೪೮೧ ಪತ್ರ | ೬ ಪಂಕ್ತಿ | ೭೦ ಅಕ್ಷರ

ಆದಿ : ನಗರದಧಿಪತಿ ಹಾರವಿಸೆ ಹತ್ತಿದರು ಲಗ್ಗೆಯಲೀ ॥ ೭೨ ॥
ಅಂತು ಸಂಧಿ ೨೩ಕಂ ಪದನೂ ೧೧೪೦ಕಂ ಮಂಗಳಮಹಾಶ್ರೀ
......ಪರಂಜೋತಿ ಸ್ವರೂಪ ತೊರವೆಯ ಶ್ರೀ ನರಸಿಂಹ್ಯ ಚರಣಾರವಿಂದ ಮಕರಂದ ಪುಂಣ್ಯ ವಚೋಃಷಟ್ಪದಿ ನಿಕಾಯ ಕುಮಾರವಾಲ್ಮೀಕಿ ಯತೀಂದ್ರ ವಿರಚಿತಮಪ್ಪ ಭಾಮಿನಿಷಟ್ಪದಿಯ ಕರ್ನ್ನಾಟ ರಾಮಾಯಣ ಮಹಾಪ್ರಬಂಧದೊಳು ಸುಂಧರಖಾಂಡ ಸಂಪೂರ್ಣಂ॥

ಸೂಚನೆ ॥ ಯುದ್ಧಖಾಂಡಾ ಪ್ರಾರಂಭ ।
ಅಗ್ಗಳೆಯ ಕಪಿಸೇನೆ ಸಮರದ
ಲಗ್ಗೆಯಲಿ ಲಂಕಾಪುರದ ಬಲು
ದುರ್ಗವನು ಕೆಡೆನೂಕಿ ಕೆಣಕಿದರಸುರವಲ್ಲಭನಾ ॥ ಪದನೂ ॥

ಅಂತ್ಯ : ಕೇಳಿದಡೆ ಪಾತಕದ ಮೂಲೋ
ಲ್ಮೂಲನವಲ್ಲಾ ಕೇಳಿ ಮನದೊಳ
ಗಾ....ಸಿದಡೆಡೆಗೊಂಡ ತಾಪತ್ರಯಕೆ ಪರಿಹಾರ
ನಾಲಗೆಯ ಕೊನೆಗೊಂಮೆ ನಾಮದ
ಗಾಳಿ ನಸುಸೋಂಕಿದಡೆ ಕಾಲ
ವ್ಯಾಳ ವಿಷ ಶೌರ್ಯೋಪ . ಗ್ಗಾರುಡವಲಾ ಯಂದ ॥ ೭೪ ॥
ಅಂತು ೮೫ಕ್ಕಂ ಪದ್ಯಂ ೨೪೦೫ ಇತಿ..........ಜುಂಮ್ಲಾ ಸಂಧಿ ೧೧ ಕ್ಕಂ ಪದ್ಯಂಗಳು ೫೨೪೪ ಕ್ಕಂ ಮಂಗಳಮಸ್ತು ಶ್ರೀ.

ವಿಷಯ : ರಾಮಾಯಣ ಯುದ್ಧಕಾಂಡದ ಕಥೆ.

ವಿಶೇಷ : ೩೫೩ ನೆಯ ಸಂಖ್ಯೆಯ ಎರಡು ಗರಿಗಳಿವೆ. ಹುಳು ಹೊಡೆದು ಪತ್ರಗಳಲ್ಲಿ ರಂಧ್ರ ಬಿದ್ದಿದೆ.

640

ಕೆ. ೨೪೯ | ತೊರವೆ ರಾಮಾಯಣ | ಭಾಮಿನೀ ಷಟ್ಪದಿ
೧೮.೮"×೨" | ಕುಮಾರ ವಾಲ್ಮೀಕಿ | ಸು. ೧೫೮೦
೧-೨೧೬ ಪತ್ರ | ೧೦ ಪಂಕ್ತಿ | ೯೦ ಅಕ್ಷರ

ಆದಿ : ....ತ ನಿಖಿಳಾಮರ ಕೀರಿಟಚಯಾ
ರಾಜಿತಾಮಳ ಲಲಿತಪದ ಪಂ
ಕೇಜನಾನತಜನ ದಯಾಸುರ
ಭೂಜ ತೊರವೆಯ ರಾಯ ನರಹರಿ ಪಾಲಿಸುಗೆ ಜಗವಾ ॥ ೧ ॥

X X X X

ಚಾರುತರ ಕರ್ನಾಟಕದ ವಿ
ಸ್ತಾರ ರಾಮಾಯಣಕೆ ಕರ್ತ್ರು ಕು
ಮಾರ ವಾಲ್ಮೀಕಿಯೆ ಕಥಾಮ್ರುತ ತೊರವೆಯದಿನಾಥಾ
ವೀರನರಹರಿ ಯನಲು ಮೆಚ್ಚದ
ರಾರು ಸತ್ಕವಿತಾ ವಿಲಾಸರ
ಶೂರಿಗಳ ಹ್ರುದಯಕರುಷಣ ಕಥಾಕುತೂಹಲವಾ ॥ ೧೧ ॥

ಅಂತ್ಯ : ವರಕುಮಾರವ್ಯಾಸ ಘನಬಂ
ಧುರದ ಭಾರತಕೃತಿಗೆ ಕರ್ತನು
ನಿರುತ ರಾಮಾಯಣಕೆ ಸುಕವಿ ಕುಮಾರ ವಾಲ್ಮೀಕಿ
ಧೊರೆ ವಿಚಾರವದೇನು ಹೇಳ
ದಿರೆರಡು ಕಾವ್ಯಕೆ ಮಿಕ್ಕ ಶಬ್ದಾ
ಕ್ಷರ ದರಿದ್ರರ ಬಂಧ ಬಂಧುರ ರಸವಿವರ್ಜಿತರಾ ॥ ೬೮ ॥

ಅಂತ್ತು ಸಂಧಿ ೧೧೩ಕ್ಕಂ ಪದನು........ಕ್ಕಂ ಮಂಗಳ ಶ್ರೀ

ವಿಷಯ : ರಾಮಾಯಣದ ಕಥೆ.

ವಿಶೇಷ : ಮೊದಲ ಗರಿಯ ಅಂಚು ಮುರಿದಿದೆ. ೧೫ನೆಯ ಸಂಖ್ಯೆಯ ಎರಡು ಗರಿಗಳಿವೆ. ೩೦,೩೧ ಎರಡು ಗರಿಗಳಿಲ್ಲ. ೩೭ನೆಯ ಸಂಖ್ಯೆಯ ಮೂರು ಗರಿಗಳಿವೆ. ೬೭ರಿಂದ ೭೬ ರವರೆಗೆ ಸಂಖ್ಯೆ ಪುನರುಕ್ತಿಯಾಗಿದೆ. ೭೮ ಮತ್ತು ೮೧ನೆಯ ಸಂಖ್ಯೆಗಳು ಬಿಟ್ಟು ಹೋಗಿವೆ. ೨೦೩ನೆಯ ಸಂಖ್ಯೆಯ ಎರಡು ಗರಿಗಳಿವೆ. ಒಟ್ಟಿನಲ್ಲಿ ಎಲ್ಲವನ್ನು ಕೂಡಿ ಕಳೆದರೆ ಕೊನೆಯ 'ಗರಿಯ ಸಂಖ್ಯೆ ೨೧೬ ಎಂದಿದ್ದರೂ ೨೨೫ ಗರಿಗಳಾಗುತ್ತವೆ. ಶಕಟರೇಫದ ಪ್ರಯೋಗ ಅಶುದ್ಧವಾಗಿದೆ.

641

ಕೆ. ೫೪೯/೧	ತೊರವೆ ರಾಮಾಯಣ	ಭಾಮಿನೀ ಷಟ್ಪದಿ
೧೮.೧"×೨.೩"	ಕುಮಾರ ವಾಲ್ಮೀಕಿ	ಸು. ೧೫೮೦
೧-೨೧೯ ಪತ್ರ	೧೨ ಪಂಕ್ತಿ	೧೦೦ ಅಕ್ಷರ

ಆದಿ : ಶ್ರೀಜನಕಜಾರಮಣ ವಿಮಲ ಸ
ರೋಜಸಂಭವ ಜನಕನನುಪಮ
ರಾಜಶೇಖರ ವಿನುತ ನಿಖಿಳಾಮರ ಕಿರೀಟಚಯಾ
ರಾಜಿತಾಮಲ ಲಲಿತಪದ ಪಂ
ಕೇಜನಾನತಜನ ದಯಾಸುರ
ಭೂಜ ತೊರವೆಯ ರಾಯ ನರಹರಿ ಪಾಲಿಸುಗೆ ಜಗವಾ ॥ ೧ ॥

X X X X

ಚಾರುತರ ಕರ್ನಾಟಕದ ವಿ
ಸ್ತಾರ ರಾಮಾಯಣಕೆ ಕರ್ತೃ ಕು
ಮಾರ ವಾಲ್ಮೀಕಿಯೆ ಕಥಾಪತಿಯೆ ತೊರವೆಯಧಿನಾಥಾ
ವೀರನರಹರಿ ಯನಲು ಮೆಚ್ಚದ
ರಾರು ಸತ್ಕವಿತಾ ವಿಲಾಸದ
ಸೂರಿಗಳ ಹೃದಯಾಕರುಷಣ ಕಥಾಕುತೂಹಲವಾ ॥ ೧೦ ॥

ಅಂತ್ಯ : ವದಉದಘ ಸಂಹತಿಯು ತಲೆದೋ
ರಿದಡೆ ತವಿಸುಉದೆಡರನೌಕಿದ
ಡದುಹಿ ಬಿಸುಡುಉದುನ್ಮದ ಪ್ರಳಯ ಪ್ರಪಂಚಕವಾ
ಮುದವನಿಹದಲಿ ಕೊಡುಉದಚ್ಯುತ
ಪದವ ಪರದೊಳಗೀಉದಿದು ನಿಗ
ಮದ ರಹಸ್ಯ ಪುರಾಣಸಿದ್ಧವಿದೆಂದು ಮುನಿ ನುಡಿದಾ ॥ ೭೧ ॥

ಅಂತು ಸಂದಿ ೧೧ಳಕ್ಕಂ ಪದ ೫೧೩೨ ಕ್ಕಂ ಮಂಗಳ ಮಹಾಶ್ರೀ X X X

ಈ ರಾಮಾಯಣದ ಪುಸ್ತಕವನ್ನು ಬರೆದಾತ ಘಟ್ಟದ ಕೆಳಗಣ ಕೊಡೆಯಾಲದ ಹೋಬಳಿ ಪೊಮಾಂಜೂರ ಮಾಗಣ ಸೇನಭೋಗ ಕೃಷ್ಣಯ್ಯ ಸೇನಭೋಗನ ಪುತ್ರ ರಾಮಯ ಸೇನಭೋಗರ ಪುತ್ರ ಸೋಮನ ಪಾಲಲ್ಲುಯಿಹ ನಾರಾಯಣ ಯೆಂಬಾತನು ಕೊಪ್ಪದ ಹೋಬಳಿಗೆ ಶ್ರೇಷ್ಠರಾದ ಕೊಪ್ಪದ ಸೀಮೆವಳಗೆ ಸೂರ್ಯ.... ಬಲರಾಮಯ್ಯನಾಯ್ಕರ ಮಗ ಕಾಳಯ್ಯನಾಯ್ಕರಿಗೆ ದಾಶಾಪ್ಪ ಪುರಾಣಕಥಿಕ ಪುಣ್ಯಕಥೆಯಾದ ರಾಮಾಯಣ....

ವಿಷಯ : ರಾಮಾಯಣದ ಕಥೆ.

ವಿಶೇಷ : ೧೪೧, ೨೦೪ ಸಂಖ್ಯೆಯ ಎರಡೆರಡು ಗರಿಗಳಿವೆ. ಈ ಕಟ್ಟಿನಲ್ಲಿ ಐರಾವಣ ಮಾರೀಮುಖನ ಕಾಳಗವೂ ಇದೆ. ಕೊನೆಯಗರಿ ತ್ರುಟಿತ.

642

ಕೆ. ೬೩೨/೧	**ತೊರವೆ ರಾಮಾಯಣ**	ಭಾಮಿನೀ ಷಟ್ಪದಿ
೧೯.೨"×೨.೨"	ಕುಮಾರ ವಾಲ್ಮೀಕಿ	ಸು. ೧೫೮೦
೧-೨೧೪ ಪತ್ರ	೧೧ ಪಂಕ್ತಿ	೧೦೦ ಅಕ್ಷರ

ಆದಿ : ಶ್ರೀ .... ವಾಲ್ಮೀಕಿ ರಾಮಾಯಣ ಬರವುದಕ್ಕೆ ನಿರ್ವಿಘ್ನಮಸ್ತು
ಭಾಮಿನೀ ಷಟ್ಪದಿ ॥
ಶ್ರೀ ಜನಕಜಾರಮಣ ವಿಮಲ ಸ
ರೋಜಸಂಭವ ಜನಕನನುಪಮ
ರಾಜಶೇಖರ ವಿನುತ ನಿಖಿಳಾಮರ ಕೀರಿಟಜಯಾ
ರಾಜಿತಾಮಲ ಲಲಿತಪದ ಪಂ
ಕೇಜನಾನತಜನ ದಯಾಸುರ
ಭೂಜ ತೊರವೆಯ ರಾಯ ಪಾಲಿಸುಗೆ ಜಗವಾ ॥ ೧ ॥

X X X X

ಚಾರುತರ ಕರ್ನ್ನಾಟಕದ ವಿ
ಸ್ತಾರ ರಾಮಾಯಣಕೆ ಕರ್ತ್ತೃ ಕು
ಮಾರ ವಾಲ್ಮೀಕಿಯೆ ಕಥಾಪತಿ ತೊರವೆಯಧಿನಾಥಾ
ವೀರ ನರಹರಿಯೆನಲು ಮೆಚ್ಚದ
ರಾರು ಸತ್ಕವಿತಾ ವಿಲಾಸದ
ಸೂರಿಗಳ ಹೃದಯಾಕರುಷಣ ಕಥಾ ಕುತೂಹಲವಾ ॥ ೯ ॥

ಅಂತ್ಯ : ಭವಭವಾರ್ಜಿತ ದುರಿತ ಕೋಟಿಯ
ತವಿಸುವಗ್ಗದ ನಾಮ ಸರಸಿಜ
ಭವಭವಾಚ್ಯುತರಮಲ ಪದವಿಯನೀವ ಗುಣನಾಮಾ
ಶಿವನ ಮೆಚ್ಚಿನ ನಾಮ ಗಿರಿಸಂ
ಭವೆಯ ನೇಮದ ನಾಮ ....
.... ನ ನಾಮ ಸೀತಾಪತಿಯ ಸಿರಿನಾಮಾ ॥ ೭೮ ॥
ಅಂತು ಸಂಧಿ ೧೧೩ಕ್ಕೆ ಪದ ೫೨೪೫ಕ್ಕೆ ಮಂಗಳ ಮಹಾ ಶ್ರೀ X X X X
ಯೆಪ್ಪತ್ತು ನಾಲ್ಕು ವರುಷದ
ಮುಪ್ಪಿನವಂ ಬರದ ಬರಹವಿದರೊಳಗೊಂದರೆ
ತಪ್ಪು ತಡೆಯಿದ್ದರೆಲ್ಲವ
ನೊಪ್ಪದಿ ತಿದ್ದುವದು ನೋಡಿ ವಿದ್ಯಾವಂತರು ॥

ವಿಷಯ : ರಾಮಾಯಣದ ಕಥೆ.

ವಿಶೇಷ : ಪ್ರತಿ ಶುದ್ಧವಾಗಿದೆ. ಪಾಠಗಳು ಉತ್ತಮವಾಗಿವೆ. ೨೦೮, ೨೦೯ನೇ ಪತ್ರಗಳು ಮುರಿದಿವೆ. ಈ ಕಟ್ಟಿನಲ್ಲಿ ಕಪೋತ ಚರಿತೆ, ಐರಾವಣ ಕಾಳಗ ಈ ಕೃತಿಗಳೂ ಇವೆ.

643

ಕೆ.ಬಿ. ४೭೬	**ತೊರವೆ ರಾಮಾಯಣ**	ಭಾಮಿನೀ ಷಟ್ಪದಿ
೯.೭"×೭.೯"	ಕುಮಾರ ವಾಲ್ಮೀಕಿ	ಸು. ೧೫೮೦
೧–೩೮೮ ಪತ್ರ	೩೩ ಪಂಕ್ತಿ	೩೫ ಅಕ್ಷರ

ಆದಿ : ಶ್ರೀ ....ರಾಕ್ಷಸನಾಮ ಸಂವತ್ಸರದ ಮಾರ್ಗಶಿರ ಶುದ್ಧ ೫ ಲ್ಲು ಕರ್ನಾಟಕ ರಾಮಾಯಣ ಪುಸ್ತಕಾ ಬರೆಯುವುದಕ್ಕೆ ಪ್ರಾರಂಭಾ ಭಾಮಿನಿ ಷಟ್ಪದಿ ||

ಶ್ರೀಜನಕಜಾರಮಣ ವಿಮಲ ಸ
ಸರೋಜಸಂಭವ ಜನಕನನುಪಮ
ರಾಜಶೇಖರ ವಿನುತ ನಿಖಿಳಾಮರ ಕಿರೀಟಚಯಾ
ರಾಜಿತಾಮಳ ಲಲಿತಪದ ಪಂ
ಕೇಜನಾನತ ಜನ ದಯಾಸುರ
ಭೂಜ ತೊರವೆಯ ರಾಯ ನರಹರಿ ಪಾಲಿಸುಗೆ ಜಗವಾ || ೧ ||

x x x x

ಚಾರುತರ ಕರ್ನಾಟಕದ ವಿ
ಸ್ತಾರ ರಾಮಾಯಣಕೆ ಕರ್ತೃ ಕು
ಮಾರ ವಾಲ್ಮೀಕಿಯೆ ಕಥಾಪತಿ ತೊರವೆಯಧಿನಾಥಾ
ವೀರ ನರಹರಿಯನಲು ಮೆಚ್ಚದ
ರಾರು ಸತ್ಕವಿತಾ ವಿಲಾಸಕೆ
ಸೂರಿಯರ ಹೃದಯಾಕರುಷಣ ಕಥಾಕುತೂಹಲರಾ || ೯ ||

ಅಂತ್ಯ : ಅಂತು ಸಂಧಿ ೧೧೧ಕ್ಕಂ ಪದನೂ ೫೦೫೪ ಕ್ಕಂ ಮಂಗಳ ಮಹಾ ಶ್ರೀ ಸೂಚನೇ || ರಾಜಾರಾಜಾಧೀಶ ರಘುಕುಲ
ರಾಜ ಪರಮೇಶ್ವರನು ನಿಮಿಕುಲ
ರಾಜ ನಂದನೆ ಸಹಿತ ರಾಜ್ಯಂಗೈದನೊಲವಿನಲೀ

x x x x

ಬಳಿಕ ರಾಘವರಾಯನಾ ಕೌ
ಸಲೆ ಸುಮಿತ್ರಾದೇವಿ ಕೈಕಾ
ಲಲನೆಯರಿಗೆರಗಿದನು ಕಾಣಿಕೆಯಿತ್ತು ಹರುಷದಲಿ ॥ ೪ ॥
ಗುರು ವಸಿಷ್ಟನ ವಾಮದೇವನ
ವರಮುನಿಪ ಜಾಬಾಲಿಯಂಘ್ರಿಗೆ
ದರುಶನವ ನೀಡಿದನು ವಿನಮಿತನಾದನೊಲವಿನಲಿ ।
.... ॥

ವಿಷಯ: ರಾಮಾಯಣದ ಕಥೆ.

ವಿಶೇಷ : ಇದು ಕೈಯಿಂದ ಮಾಡಿದ ಕಾಗದದ ಪ್ರತಿ. ಯುದ್ಧಕಾಂಡದ ಕೊನೆಯ ಸಂಧಿಯಲ್ಲಿ ಕೆಲವು ಪದ್ಯಗಳಿಲ್ಲ. ಬರವಣಿಗೆ ಅಲ್ಲಿಗೆ ನಿಂತು ಮುಂದೆ ಶುದ್ಧ ಪತ್ರಗಳಿವೆ. ಶಿಥಿಲ ಪ್ರತಿ.

644

ಕೆ. ಬಿ. ೭೯೩	ತ್ರಿಪುರದಹನದ ಕಥೆ	ಯಕ್ಷಗಾನ
೭.೮"×೫.೮"	ನಂಜಯ್ಯ ?	ಸು. ೧೮೬೦
೧-೪೦ ಪತ್ರ	೧೫ ಪಂಕ್ತಿ	೧೫ ಅಕ್ಷರ

ಆದಿ : ತ್ರಿಪುರದಹನದ ಕಥಾ । ಶುಭಮಸ್ತು ನೃತ್ತಾ ॥
ಶ್ರೀಮಚ್ಚಂದ್ರಕಲಾವತಂಸಯಮಿ ಹೃತ್ಪಾಥೋಜ ಸದ್ಧಂಸನೀಂ
ಸ್ವಾಮಿನ್ ಶ್ರೀ ವರಪದ್ಮ ಸಂಭವಮುಖ ಪ್ರಸ್ತೂಯ ಮಾನಾಂಘ್ರಿಯೇ
ವಾಮೋತ್ಸಂಗ ವಿರಾಜಮಾನ ಗಿರಿಜಾವಕ್ತ್ರೇಂದು ಸಂವೀಕ್ಷಣ
ಪ್ರೇಮಾಯತ್ತನೆ ಕಾವುದೆಂಮ ಸತತಂ ಕಾಳೀ ಮನೋವಲ್ಲಭಂ ॥೧ ॥

ಅಂತ್ಯ : ಕಂದ॥ ಯಿದು ಪುರಹರ ಚರಿತೆಯು ಸಂ
ಪದಮೊದಗುವದಿಹಪರಂಗಳೊಳ್ ಕೇಳ್ದವರಿಂ
ಗಿದು ನಿರ್ಮಲಕರವೆಂನುತ
ಮುದದಿಂ ಸೂತಾಖ್ಯ ಶೌನಕರ್ಗಿಂತೆಂದಂ ॥ ೩೧೬ ॥

X X X X

ತ್ರೈಲೋಚನನಿಗೆ । ಬಾಲೇಂದುಧರನಿಗೆ । ವ್ಯಾಳಕುಂಡಲಪ್ರಮಥೇಶಗೆ ।
ಯಿಾಶಗೆ ॥೩೨೦ ॥

ಕೆಂಜೆಡೆಯವನಿಗೆ । ಮಂಜುನಾಥನಿಗೆ । ರಂಜಿಪ ಪಶುಪತಿ । ನಾಮಗೆ।
ಭೀಮಗೆ । ॥ ೩೨೧ ॥ ಶ್ರೀ

ವಿಷಯ : ಈಶ್ವರನು ಪಾಶುಪತಾಸ್ತ್ರದಿಂದ ತ್ರಿಪುರಗಳನ್ನು ಸುಟ್ಟ ಕಥೆ.

ವಿಶೇಷ : ತೆಳುವು ಕಾಗದ.

645

ಕೆ ಬಿ ೪೮೬/೧	**ತ್ರಿಪುರದಹನದ ಕಥೆ**	ಯಕ್ಷಗಾನ
೮″×೬.೫″	ನಂಜಯ್ಯ ?	ಸು. ೧೮೬೦
೧-೫೨ ಪತ್ರ	೧೨ ಪಂಕ್ತಿ	೧೮ ಅಕ್ಷರ

ಆದಿ : ತ್ರಿಪುರದಹನದ ಕಥೆ.

ವೃತ್ತಾ ॥ ಶ್ರೀಮಚ್ಚಂದ್ರಕಲಾವತಂಸ ಯಮಿಹೃತ್ಪಾಥೋಜ ಸದ್ಧಂಸನೀಂ
ಸ್ವಾಮಿ ಶ್ರೀ ವರಪದ್ಮ ಸಂಭವ ಮುಖ ಪ್ರಸ್ತೂಯಮಾನಾಂಘ್ರಿಯೇ
ವಾಮೋತ್ಸಂಗ ವಿರಾಜಮಾನ ಗಿರಿಜಾವಕ್ತ್ರೇಂದು ಸಂವೀಕ್ಷಣ
ಪ್ರೇಮಾಯತ್ತನೆ ಕಾವುದೆಮ್ಮ ಸತತಂ ಕಾಳೀಮನೋವಲ್ಲಭಂ ॥ ೧ ॥

X X X X

ಕಂದ ॥ ಸ್ಮರಹರ ಲೀಲಾ ಚರಿತೆಯ
ಧರೆಯೊಳ್ವಿಸ್ತರಿಪೆನೆಂಬ ಕೌತುಕದಿಂದಂ
ವಿರಚಿಪೆನು ಯಕ್ಷಗಾನದಿ
ದುರಿತಾಪಹಮಾ ತ್ರಿಪುರ ವಿಜಯದ ಕಥೆಯಂ ॥ ೧೩ ॥

ಅಂತ್ಯ : ಕಂ॥ ಯಿದು ಪುರಹರ ಚರಿತೆಯು ಸಂಪದ
ಮೊದಗುವದಿಹಪರಂಗಳೋಳ್ ಕೇಳ್ದವರಿಂ
ಗಿದು ನಿರ್ಮಲಕರವೆನುತ
ಮುದದಿಂ ಸೂತಾಖ್ಯ ಶೌನಕರ್ಗಿಂತೆಂದಂ ॥ ೩೧೫ ॥

X X X X

ಕೆಂಜೆಡೆಯುವನಿಗೆ ಮಂಜುನಾಥನಿಗೆ
ರಂಜಿಪ ಪಶುಪತಿನಾಮಗೆ ಭೀಮಗೆ ॥ ಮಂಗಳಾರತಿ ॥ ೫ ॥ ಶ್ರೀ ॥
ತ್ರಿಪುರದಹನದ ಕಥಾ ಸಂಪೂರ್ಣ ಮಂಗಳ ಮಹಾ ಶ್ರೀ ॥

ವಿಷಯ : ಈಶ್ವರನು ಪಾಶುಪತಾಸ್ತ್ರದಿಂದ ತ್ರಿಪುರಗಳನ್ನು ಸುಟ್ಟ ಕಥೆ.

ವಿಶೇಷ : ೨೫ ನೇ ಪತ್ರ ಪೂರ್ತಿ ಒಂದು ವಿಧವಾದ ಲಿಪಿ ಇದ್ದು ಬಳಿಕ ಬೇರೆ ವಿಧವಾದ ಬರಹವಿದೆ. ಆರಂಭದಿಂದ ೨೫ ಪತ್ರಗಳಲ್ಲಿ ಏಳು ಪಂಕ್ತಿಗಳು ಮಾತ್ರ ಇದ್ದು ಅಕ್ಷರಗಳು ಗುಂಡಾಗಿಯೂ ದಪ್ಪನಾಗಿಯೂ ಇವೆ. ಗ್ರಂಥಾರಂಭ ಮತ್ತು ಅಂತ್ಯಗಳಲ್ಲಿ ಕೆಲವು ಶುದ್ಧ ಪತ್ರಗಳಿವೆ. ಇದೇ ಪುಸ್ತಕದಲ್ಲಿ ರುದ್ರಮುನಿ ಸ್ವಾಮಿಗಳ ಕಾಲಜ್ಞಾನವೆಂಬ ಮತ್ತೊಂದು ಕೃತಿ ಇದೆ.

646

ಕೆ.ಬಿ. ೪೮೭	**ತ್ರಿಪುರದಹನದ ಕಥೆ**	ಯಕ್ಷಗಾನ
೮"×೬.೫"	ನಂಜಯ್ಯ ?	ಸು ೧೮೬೦
೧೪೬ ಪತ್ರ	೧೨ ಪಂಕ್ತಿ	೧೬ ಅಕ್ಷರ

ಆದಿ : ಶುಭಮಸ್ತು । ನಿರ್ವಿಘ್ನಮಸ್ತು । ತ್ರಿಪುರದಹನದ ಕಥಾ।
ಶ್ರೀಮಚ್ಚಂದ್ರಕಲಾವತಂಸಯಮಿಹೃತ್ಪಾಥೋಜಸದ್ಧಂಸನೀಂ
ಸ್ವಾಮಿ ಶ್ರೀವರ ಪದ್ಮಸಂಭವಮುಖ ಪ್ರಸ್ತೂಯಮಾನಾಂಘ್ರಿಯೇ
ವಾಮೋತ್ಸಂಗ ವಿರಾಜಮಾನ ಗಿರಿಜಾವಕ್ತ್ರೇಂದು ಸಂವೀಕ್ಷಣ
ಪ್ರೇಮಾಯತ್ತನೆ ಕಾವುದೆಂಮ ಸತತಂ ಕಾಳೀಮನೋವಲ್ಲಭಂ ॥ ೧ ॥

X X X X

ಕಂದ ॥ ಸ್ಮರಹರ ಲೀಲಾಚರಿತೆಯ
ಧರೆಯೊಳ್ವಿಸ್ತರಿಪೆನೆಂಬ ಕೌತುಕದಿಂದಂ
ವಿರಚಿಪೆನು ಯಕ್ಷಗಾನದಿ
ದುರಿತಾಪಹಮಾ ತ್ರಿಪುರವಿಜಯದಾ ಕಥೆಯಂ ॥ ೧೩ ॥

ಅಂತ್ಯ : ಕಂದ ॥ ಯಿದು ಪುರಹರ ಚರಿತೆಯು ಸಂ
ಪದಮೊದಗುವದಿಹಪರಂಗಳೊಳ್ ಕೇಳ್ದವರ್ಗಿ
ಗಿದು ನಿರ್ಮಲಕರವೆಂನುತ
ಮುದದಿಂ ಸೂತಾಖ್ಯ ಶೌನಕರ್ಗಿಂತೆಂದಂ ॥ ೩೧೫ ॥

X X X X

ಕೆಂಜಡೆಯವನಿಗೆ ಮಂಜುನಾಥನಿಗೆ
ರಂಜಿಪ ಪಶುಪತಿ ನಾಮಗೆ ಭೀಮಗೆ ॥ ೩೨೦ ॥

ತ್ರಿಪುರದಹನದ ಕಥಾ ಸಂಪೂರ್ಣ ಮಂಗಳ ಮಹಾಶ್ರೀ

ವಿಷಯ : ಈಶ್ವರನು ಪಾಶುಪತಾಸ್ತ್ರದಿಂದ ತ್ರಿಪುರಗಳನ್ನು ಸುಟ್ಟ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿಯೂ ವಿರಳವಾಗಿಯೂ ಇವೆ.

647

ಕೆ.ಬಿ. ೧೪೯/೧	**ತ್ರಿಪುರದಹನದ ಚರಿತ್ರೆ**	ಸಾಂಗತ್ಯ
೭.೭″×೬.೨″	ಶಿಶುಮಾಯಣ	ಸು. ೧೨೩೩
೧-೧೯ ಪತ್ರ	೧೬ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಸುರ ನರರುರಗರು ನೆರೆ ಪೂಜಿಪಾ
ಧೀಶನ ಪದಪದ್ಮವನು
ಮಾಸದ ಭಕ್ತಿಯಿಂದಾನು ವಂದಿಪೆ ಭವ
ಪಾಶ ಪರಿದು ಪೋಗಲೆಂದು ॥ ೧ ॥

x x x x

ಜನನ ಜರಾ ಮರಣಗಳೆಂಬ ಪೆಸರಿನ
ಘನತರವಹ ಮೂರು ಪುರವ
ಅನಿಮಿಷ ನರ ನಾಗಲೋಕಕಚ್ಚರಿಯಾಗಿ
ನೆನಹಿಗೆ ನಿಲುಕದಂತಿಹುದು ॥ ೩೬ ॥

ಅಂತ್ಯ : ಆದಿಯೊಳಾಧೀಶ್ವರ ತ್ರಿಪುರವ ಸುಟ್ಟ
ಭೇದವ ನೆರೆ ಕೇಳ್ದವರ
ನೆಯ್ದಿದ ಪಾತಕವಿರದು ಮತ್ತವರುಗ
ಳೆಯ್ದುವರಪವರ್ಗವನು ॥ ೨೫೬ ॥

ತ್ರಿಪುರದಹನ ಚರಿತ್ರಂ ಸಂಪೂರ್ಣಂ ಶ್ರೀ ॥

ವಿಷಯ : ತ್ರಿನೇತ್ರನು ಜನನ ಜರಾ ಮರಣಗಳೆಂಬ ಮೂರು ಪುರಗಳನ್ನು ದಹಿಸಿದ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ನಿರ್ವಾಣಲಕ್ಷ್ಮೀಪತಿ ನಕ್ಷತ್ರಮಾಲಿಕೆ ಎಂಬ ಇನ್ನೊಂದು ಗ್ರಂಥವಿದೆ.

648

ಕೆ.ಎ. ೩೩೦	**ತ್ರಿಭಂಗಿಸಾರ**	ಗಾಹೆ, ಟೀಕು
೧೩.೧″×೮″	?	?
೧-೧೩+೧-೮೨ ಪುಟ	೨೧ ಪಂಕ್ತಿ	೨೦ ಅಕ್ಷರ

ಆದಿ: ಕ್ಷಪಕೋಪಶಮುಕ ಸಂಯತನಲ್ಲಿ ವ್ಯುಚ್ಛಿತ್ತಿಯಕ್ಕುಂ ಪಣ–ಅನಿವೃತ್ತಿಕರಣ ಕ್ಷಪಕೋಪಶಮುಕ ಸಂಯತನಲ್ಲಿ ೫ ವ್ಯುಚ್ಛಿತ್ತಿಯಕ್ಕುಂ, ಸೋಳಸ ಸೂಕ್ಷ್ಮಸಾಂಪರಾಯಕ್ಷಪಕೋಪಶಮುಕ ಸಂಯತನಲ್ಲಿ ‖ ೧೬ ‖

X X X X

ಗಾಹೆ‖ ಮಿಚ್ಛತ್ತಂ ಹುಂಡ ಸಂಢಾಸಂ ಪತ್ತೇಯಕ್ಖಥಾವರಾದಾವಂ|
ಸಹುಮತಿಯಂ ವಿಯಳಿಂದಿಣಿರಯದುಣಿರಿ ಯಾವುಗಂ ಮಿಚ್ಛೆ ‖

ಅಂತ್ಯ: ಬಂಧೋದಯ ಸತ್ವಪ್ರಕೃತಿ ವಿನಾಶದತ್ತಣಿಂ ಪಡೆಯಲ್ಪಡುವ ಪರಿಣತಿ ವಿಶೇಷಮುಂ ಪೇಳಲ್ವೇಡಿ ಅಂತ್ಯಮಂಗಲ ನಿಮಿತ್ತಮಿಾಗಾಥೆಯಂ ಪೇಳ್ದಪರು
ಗಾಹೆ‖ ಸೋಮೆ ತಿಹುವಣಮುಹಿಯೋ ಸಿದ್ಧೋ ಬದ್ಧೋ
ಣಿರಂಜಣೋ ಣಿಚ್ಚೋ
ದಿಸದುವರಣಾಣಲಾಹಂ ಚರಿತ್ತ ಸಿದ್ಧಿಂ ಸಮಾಹಿಂ ಚ ‖
‖ ನಮಃ ಸಿದ್ಧೇಭ್ಯಃ ‖ ಪಂಚಪರಮೇಷ್ಟಿಗಳ ಚರಣಮೆ ಶರಣು ‖

ವಿಷಯ: ಆತ್ಮ ವಿಚಾರ, ಜೈನತತ್ತ್ವ.

ವಿಶೇಷ: ಅಸಮಗ್ರಪ್ರತಿ. ಆದಿ ಮತ್ತು ಅಂತ್ಯದಲ್ಲಿ ಗ್ರಂಥಲೋಪವಿದೆ. ಇದನ್ನು ಹುಮುಚದ ಶ್ರೀ ಸರಸ್ವತೀ ಭಂಡಾರದ ಓಲೆಯಿಂದ ಪ್ರತಿಮಾಡಲಾಗಿದೆ. ಆದಿಯಲ್ಲಿ ಪ್ರತಿಕಾರರು ೮ ಪುಟ ಮುನ್ನುಡಿ ಬರೆದಿದ್ದಾರೆ. ಇದನ್ನು ೧೫–೩–೧೯೫೦ರಲ್ಲಿ ಪ್ರತಿ ಮಾಡಿದೆ.

649

ಕೆ.೧೨೧/೨	**ತ್ರಿಭುವನ ಕೋಶ**	ಗದ್ಯ
೬.೩″×೧.೫″	?	ಸು. ೧೪೦೦
೧–೧೪೪ ಪತ್ರ	೮ ಪಂಕ್ತಿ	೨೮ ಅಕ್ಷರ

ಆದಿ: ತ್ರಿಭುವನಕೋಶ ‖
ತ್ರಿಭುವನ ಚೂಡಾಮಣಿ ಜಿನ
ಶುಭ ಪಾದಪಯೋಜ ಯುಗಮುಂ ವಂದಿಸಿ ಮು
ತ್ತುಭಯ ಜಗದ್ಧಿತವೆನಿಸಿ
ತ್ರಿಭುವನ ಕೋಶ ಸ್ವರೂಪಮಂ ವಿರಚಿಸುವೆಂ ‖
ಇಂತಿ ಇಷ್ಟದೇವತಾ ನಮಸ್ಕರಮುಂ ಮಾಡಿ ಸಕಲಾಸಂನ ಭವ್ಯಜನಂಗಳ್ಗೆ ತ್ರಿಭುವನಸ್ವರೂಪಮುಂತುಂಟೆಂತುಟೋ ಯೆಂಬ ಸಂಸಯ ಜ್ಞಾನಾಂಧಕಾರ ದ್ಯುಮಣಿಯನಿಪ

ಅಂತ್ಯ: ಸಮುಂತಣಾಣದಂಸಣವೀರ್ಯ್ಯ ಸುಹುಮುಂತಹೆವ ಅವಗಹಣಂ ।
ಲಗುರು ಗುಹುಗಮು ಬಾಹಂ ಅಂತಾಗುಣಾ ಹಾಂತಿ ಸಿದ್ಧಾಣಂ ॥
ಯಿಂತೀ ಶ್ರೀಮದರ್ಹತ್ಪರಮೇಶ್ವರ ಪ್ರಣೀತ ಪರಮಾಗಮಸಾರಾಮೃತಾಭಿ ಯೊಳೊಗೆದ ತ್ರಿಭುವನ ಕೋಶವೆಂಬ ಗ್ರಂಥ ಸಮಾಪ್ತ ಮಂಗಳ ಮಹಾ ಶ್ರೀ॰

ವಿಷಯ: ಪರಮಾಗಮಸಾರದಲ್ಲಿರುವ ತ್ರಿಭುವನ ಸ್ವರೂಪದ ವಿವರಣೆ.

ವಿಶೇಷ : ಗರಿಗಳು ಅಂಚಿನಲ್ಲಿ ತ್ರುಟಿತವಾಗಿವೆ. ಶಕಟರೇಫದ ಬಳಕೆ ಇದೆ. ಇದೇ ಕಟ್ಟನಲ್ಲಿ ನಿರ್ದುಃಖ ಸಪ್ತಮಿಾ ನೋಂಪಿಯ ಕಥೆ ಇದೆ.

650

ಕೆ. ಎ. ೧೨೩	**ತ್ರಿಭುವನ ತಿಲಕ**	ಸಾಂಗತ್ಯ
೧೩.೧"×೮.೨"	ವಿರುಪರಾಜ	೧೫೧೯
೧–೩೬ ಪತ್ರ	೩೨ ಪಂಕ್ತಿ	೩೫ ಅಕ್ಷರ

ಆದಿ : ತ್ರಿಭುವನ ತಿಲಕ । ಕೋಗಿಲೆ ತಳಿತಾ ಮಾಕಂದವೆ ।
ಕೋಗಿಲೆ ತಳಿತಾ ಮಾಕಂದವೆ ॥ ಪಲ್ಲ ॥
ಶ್ರೀಕಾರಾ ಶಂಕರ ಶುಭಕರ ವಿಪುಳ ಕೃ
ಪಾಕಾರ ತರುಣೇಂದುಶೇಖರ
ನಾಕಾದಿ ಭುವನ ರಕ್ಷಾಕಾರ ಘನಮಹಿ
ಮಾಕಾರ ಮಲ್ಲಿಕಾರ್ಜುನ ಜಯ ।' ೧ ॥

ಅಂತ್ಯ : ಚತುರ ಚಕೋರ ಜೀವಿಸೆ ಸೂರಿ ನಿಲಾಬ್ಜ
ವಿತತಿಗಿಂಬಾಗೆ ರಾಗೋತ್ಕರಾ
ಕ್ಷಿತಿನಾಥ ಹೊಂನೋರ್‍ರ್ರೆ ವಿರುಪರಾಜೇಂದ್ರನ
ಕೃತಿ ಚಂದ್ರ ಬೆಳಗುಗೆ ಭುವನವಾ ॥ ೭೨ ॥

X X X X

ಚರಮ ಶರಣಾಗ್ರಣಿಯ ಕೃತಿಯ ವಿ
ಸ್ತಾರವ ಮಾಳ್ಪರಾದರಿಪರಾ
ತಾರಾರ್ಕರುಳಂತೆ ವರ ಮಲ್ಲಿಕಾರ್ಜುನ
ನೋರಂತೆ ಪಾಲಿಪನೊಲವಿಂದೆ ॥ ೭೫ ॥
ತ್ರಿಭುವನ ತಿಲಕ ಯಿಪ್ಪತ್ತ್ರೇಳನೆ ಸಂಧಿಗೆ ಸಮಾಪ್ತ ಮಂಗಳ ಮಹಾ ಶ್ರೀ

ಹೊಂನೋರೆ ವಿರುಪರಾಜ ವಿರಚಿತಮಪ್ಪ ತ್ರಿಭುವನ ತಿಲಕ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ : ಶಿವಭಕ್ತರಲ್ಲೊಬ್ಬನಾದ ಚೇರಮಾಂಕ ನೃಪನ ಕಥೆ.

ವಿಶೇಷ : ಮೋಡಿ ಅಕ್ಷರ.

651

ಕೆ.ಎ. ೩೦೪ ತ್ರಿಭುವನ ಮೋಹಿನಿ ವಾರ್ಧಕ, ಪರಿವರ್ಧಿನಿ ಷಟ್ಪದಿ
೧೩.೨"×೮.೧" ಹಿರಿಯ ಮಲ್ಲೇಂದ್ರ ೧೬೬೪
೧-೧೦೬ ಪತ್ರ ೨೪ ಪಂಕ್ತಿ ೧೦ ಅಕ್ಷರ

ಆದಿ : ತ್ರಿಭುವನ ಮೋಹಿನಿ ಎಂಬ ಕಾವ್ಯವು ಬರೆವುದಕ್ಕೆ ಶುಭಮಸ್ತು ||
ಪರಿವರ್ಧಿನೀ ||
ಶ್ರೀಮದಹರದಯದಿಂ ಶ್ರೀಪತಿಗಳ್
ಭೂಮಿಯೋಳ್ ಚಂದ್ರಾಕಾರ ಪ್ರೇಮಾಲತೆ
ನಾಮಗಳಿಂದೀರ್ವರು ಜೆನಿಸಾ ಮೇಲ್ಲಿವನಂ ಕೂಡಿದರು || ಪಲ್ಲ ||
ಶ್ರೀಮದ್ಗುರುವರ ಹರಕರ ಶಿರಧರ
ಕಾಮಾಂದಾಹನ ವೃಷಭ ಗಮನ ಗಣ
ಸಮೂಹಂ ನತಪದ ಪ್ರೇಮಂ ಭಕ್ತಭಿರಾಮಂ ಧರೆವೆರೆಯಾ
ಹ್ರೀಮಂತ ಸತಿ ಸುತಿಯಳ ಆಸ್ಯಂ
ಕಮಲಂ ಭಾಸ್ಕರ ವಿಧುವನಲಾಂಬಕ
ಯೋಮಂಕೇಶನ ಭೀಮಂನನು ನಿಸ್ಸೀಮಾನನು ನುತಿಪೆ || ೧ ||
ಧರವೈವತ್ತಾರ್ದೇಶಕೆ ಮೆರೆವರ
ಪುರ ನವಿಲೆಯ ದೇಸಾಯಿ ಮುದಕೇಂದ್ರನ
ವರ ಗರ್ಭಾಂಬುಧಿ ಚಂದ್ರನು ಬಿಕ್ಕಾದ್ವೇಪಂ ನೃಪತನುಜಾ
ಸ್ಮರರೂಪನು ಹಿರಿಮಲ್ಲೇಂದ್ರನು ತಂ
ನ್ನರಸಿ ಬಲಾಂಕಿಯಳಧ್ವಯ ಕರ್ನ
ಕ್ಕೊರದನು ಕರುಣಾಮೃತ ರಸಗಾವ್ಯ್ಯವ ಧ್ವಯಪಟ್ಪದಿಯಿಂದಾ || ೨ ||

ಅಂತ್ಯ : ಶಾಲಿವಾಹನ ಶಕ ಸಾವಿರದಾ
ಮೇಲ್ಯೆನೂರ್ತೊಂಬತ್ಸಂವತ್ಸರ
ಕೀಲಕ ಭಾದ್ರಪದ ಶುದ್ಧ ಸಪ್ತಮಿಯು ಗುರುವಾರದ ವುದಯಾ

ಕಾಲದಿ ತ್ರಿಭುವನ ಮೋಹಿನಿಯೆಂಬಾ
ಲಲಿತಾ ಕಾವ್ಯವ ಮುಗಿದುದನಂ
ಲಾಲಿಸಿ ಪಾಲಿಸಿ ಶಿವಭಕ್ತರು ಯಿದುಯಿನ ಥರೆಯಯುಳ್ಳನಕಾ ‖ ೫೪ ‖
ಹುತನಯನನ ಭಕತನ ಕಥಾಮೃತ
ಕಥೆಯಿದು ಕೇಳ್ದಡೆ ಬರದಿನ್ನಟಿಸುತೆ
ಸ್ತುತಿಸಿದ ಮನುಜರು ಅತಿಶಯಿ ಭಕ್ತಿಯ ಪಥದಡರಿನ್ನುಂದೇ
ಸಿತಕಂಠನ ಶ್ರೀ ಚರಣವ ಸಾರ್ವರು
ಚತುರಾಶ್ಯನು ಬರದತ್ಕದವಳಿಗುಂ
ಕ್ಷಿತಿಗಧಿಕವು ತ್ರಿಭುವನಮೋಹಿನೀ ಚತುರ್‍ತ್ರಿಂತಿ ಸಂದ ನಮಸ್ತೇ ‖ ೫೫ ‖

ಅಂತು ಸಂಧಿ ೭ಕ್ಕಂ ಪದನು ೫೫೫ಕ್ಕಂ ಮಂಗಳ ಮಹಾಶ್ರೀ ಬರದವರು ಆರು ಯೆಂದ ಕಲ್ಯಾಣ ಬಸವಣ್ಣನ ಮಠದ ಗುರುಪಾದಪ್ಪನವರ ವರ ತನುಜನಾದ ಚನ್ನಬಸಪ್ಪನವರ ಸುಕುಮಾರನಾದ ಗುರುಶಿದ್ದಪ್ಪ ಪಟ್ಟದ್ದೇವರ ಅನುಜನಾದ ಅಂತ್ಯವಾಸಿ ವಿರೂಪಾಕ್ಷಯ್ಯನು ಸ್ವತೇವ ಬರಕೊಂಡಿದ್ದಾನು ‖ ತಪ್ಪು ತಡಿಯಿದ್ದರೆ ಬಲ್ಲಂತವರು ತಿದ್ದಿಕೊಂಬುದು‖ ಶಾಲಿವಾಹನಶಕ ೧೭೯೦ ವಿಭವ ನಾಮಸಂವತ್ಸರ ಭಾದ್ರಪದ | ಭ ೧೨ ಆದಿತ್ಯವಾರ ಯರಡು ತಾಸು ಶುಕ್ರನ ಹೋರ್ಯದಲ್ಲಿ ಮುಗಿಯಿತು.

ವಿಷಯ : ಕಾಳರಾತ್ರಿಯು ಪತಿಸಹಿತ ಕೈಲಾಸವನ್ನು ಸೇರಿದ ಕಥೆ.

ವಿಶೇಷ : ಅಲ್ಲಲ್ಲಿ ಹುಳುಗಳು ಪತ್ರಗಳನ್ನು ಕೊರೆದಿದ್ದರೂ ಗ್ರಂಥಲೋಪವಿಲ್ಲ.

652

ಕೆ.ಬಿ. ೧೮೩	**ತ್ರಿಲೋಕ ಶತಕಂ**	ಕಂದ, ವೃತ್ತ
೮.೧″×೬.೫″	?	?
೧—೧೮ ಪುಟ	೧೯ ಪಂಕ್ತಿ	೨೩ ಅಕ್ಷರ

ಆದಿ : ತ್ರಿಲೋಕ ಶತಕ ಬರೆಯುವದಕ್ಕೆ ಶುಭಮಸ್ತು ‖
ಪೂರ್ವವಿದೇಹದೊಳೆಸಕಂ
ಗೋರ್ವಂಗಪರಾಜಿತೇಶ್ವರಂಗೆ ನಮಃ
ಪೂರ್ವಕದಿ ನಮಿಸಿ ಪೇಳ್ವೆಂ
ಪೂರ್ವಾಚಾರ್ಯನುಮತದಿ ಲೋಕಸ್ಥಿತಿಯಂ ‖ ೧ ‖

ಅಂತ್ಯ : ಮತ್ತಾ ಜಿನನಣ್ಣ ದೊಳೇಣಾ ಪುರಾಂಕದೊಳ್ ಸೃಜಿಸಿದ
ರತ್ನಾಕರಾರ್ಯಂ ನಿಕ್ಷ್ನೇಣ ತಾತ್ಪರ್ಯವಿತಿ ತ್ರಿಳೋಕ
ಶತಕಂ ತಾನೀ ಪಗಲ್ತೊಟ್ಟು ಮುಂದಣ ವೀರಾಂ
ಗದೆಯೋಗಿ ಮೆಟ್ಟಲೀಲೆಯೊಳ್ ಸಲ್ಲೀಲೆಯುಂ ರೂಢಿಯೊಳ್ ||
ಸಪಾದ ಶತಕಸ್ಯ ಭದ್ರಂ ಶುಭಂ ಮಂಗಲಂ ಭೂಯಾತ್ ಮಂಗಳ ಮಹಾ ಶ್ರೀ.

ವಿಷಯ : ಜೈನಸಿದ್ಧಾಂತದಂತೆ ಮೂರು ಲೋಕಗಳ ವರ್ಣನೆ.

ವಿಶೇಷ : ಪ್ರತಿಯ ಕಾಲ ೨೫–೧೨–೯೨ ಎಂದಿದ್ದು ಬಳಿಕ 'ವ್ಯಸನೇ ಲಿಖಿತಂ' ಎಂದಿದೆ.

653

ಕೆ.ಎ. ೧೧೩	**ತ್ರಿಷಷ್ಟಿ ಪುರಾತನರ ಚರಿತ್ರೆ**	ಚಂಪು
೧೨.೮"×೭.೮"	ಸುರಂಗ	ಸು. ೧೫೦೦
೧-೭೩೩ ಪುಟ	- ೨೮ ಪಂಕ್ತಿ	೧೮ ಅಕ್ಷರ

ಆದಿ : ತ್ರಿಷಷ್ಟಿ ....
ಶ್ರೀಗುರು ಸಂಗಮೇಶಾಯ .... ಗ್ರಣಿಯೆನಿಸುತ್ತೆಸೆವ ನಂಬಿ.........
ಮಹಾ ಗುಣನಿಧಿ ಸೋಮೇ .... ಸುಕರಾಮೃತಾಬ್ಧಿಯಂ
ಮಥಿಯ .... ಪೂವಿಗೆ ಪೋದನರ್ತಿಯಿಂ || ೨ ||
ವ || ಅಂತು ಸದಾಶಿವನ ಪ್ರತಿಬಿಂಬವೇ ರೂಪಾದ ಸಲ್ಮೆಯ ಪುತ್ರನಪ್ಪ ಪುಷ್ಪದತ್ತಂ ಗಿರಿಜಾವರನ ಸಿರಿಮುಡಿಗೆ ಕಂಪಿನ ಪೂಗೊಯ್ಯಲೆಂದು ಕೇಳೀವನಮಂ ಪೊಕ್ಕಾಗಳ್.

ಅಂತ್ಯ : ಮ || ವರ ಕೈಲಾಸ ವಿರಾಜಮಾನಸನಿಶಂ ಸಂಗೀತಸಾರಪ್ರಿಯಂ
ಗಿರಿಜಾತಾ ಕುಚಕುಂಕುಮಾಂಕಿತ ವಿಶಾಲೋರಸ್ಥಳಂ ಸದ್ಗುಣಾ
ಭರಣಂ ಚಂದ್ರಧರಂ ಸುರಂಗ ವರದ ಶ್ರೀ ಸೋಮನಾಥಂ ಸುರಾ
ಸುರಪೂಜ್ಯಂ ನಮಗೀಗೆ ಸತ್ಕರುಣದಿಂ ಸದ್ಭಕ್ತಿಯುಂ ಮುಕ್ತಿಯಂ || ೨೩ ||
ಗದ್ಯ || ಇದು ಸಕಲ ಸುರನಿಕರ ಮಕುಟ ಮಾಣಿಕ್ಯ ಮಾಲಾಮರೀಚಿ ಪುಂಜ ರಂಜಿತ ಪಾದ ಪಂಕಜ ಶ್ರೀಮತ್ಪುಲಿಗೆರೆಯ ಪುರಾಧಿಪ ಶ್ರೀ ಸೋಮನಾಥ ಭಕ್ತಿಯುಕ್ತ ಕರ್ನಾಟಕ ಕವಿಚಕ್ರವರ್ತಿ ವಿರಚಿತಮಪ್ಪ ತ್ರಿಷಷ್ಟಿ ಪುರಾತನರ ಚಾರಿತ್ರದೊಳ್ ಕಾರಿಕಾಲಂಮೆ ಪಿರುಮಳಲಿಯ ಕುರುಂಬರು ಚಾರಮ

ರಾಜ ಸೌಂಧರ ಪೆರುಮಾಳಿ ಮಾಹೇಶ್ವರರ್ಗೆ ಗಣಪದಮಂ ಕೊಟ್ಟಾ ವೃತ್ತಾಂತಂ ದ್ವಯೋತ್ತರ ಷಷ್ಠಾಶ್ವಾಸಂ ಸಂಪೂರ್ಣಂ. ಅಂತು ಆಶ್ವಾಸಂ ೬೨ ಕ್ಕಂ ಕಂದ ವೃತ್ತಂಗಳು ೩೧೦೦ ಕ್ಕಂ ಮಂಗಳಮಸ್ತು.
ತ್ರಿಷಷ್ಟಿ ಪುರಾತನರ ಚಾರಿತ್ರ ಸಂಪೂರ್ಣಂ.

ವಿಷಯ : ಅರುವತ್ತು ಮೂವರು ಪುರಾತನರ ಚರಿತ್ರೆ.

ವಿಶೇಷ : ಒಂದನೆಯ ಆಶ್ವಾಸ ಇಲ್ಲ. ಪ್ರತಿಯ ಕೆಲವು ಪತ್ರಗಳು ಶಿಥಿಲವಾಗಿವೆ. ಪ್ರತಿಯ ಕೊನೆಯಲ್ಲಿ "ಅರವತ್ಮೂರ ಆಶ್ವಾಸಕ್ಕೆ ವಂದು ಆಶ್ವಾಸ ಯಿದರಲ್ಲೆ ಅಡಕವಾಗಿ ಪ್ರತಿಯಲ್ಲಿ ಬರದಿರುವ ಪ್ರಕಾರಕ್ಕೆ ಬರಿಯಲಾಯಿತು"ಎಂದಿದೆ.

654

ಕೆ.ಬಿ. ೩೬೫	**ತ್ರಿಷಷ್ಠಿಪುರಾತನರ ಚರಿತ್ರೆ**	ಚಂಪೂ
೭.೮"×೬.೨"	ಸುರಂಗ	ಸು ೧೫೦೦
೨೬೧-೪೦೦ ಪತ್ರ	[illegible] ಪಂಕ್ತಿ	೨೩ ಅಕ್ಷರ

ಆದಿ : ಜ ಭಕ್ತಿಯಿಲ್ಲದೆ ಬರುಭಸಿತಕೆ ಬರುಜಪಕ್ಕೆ ಬರುಮಂತ್ರಕ್ಕಂ
ಬರುಹೂಜಿಗೆ ಬರುಘಂಟೆಗೆ ಬರಿದಾನೊಲ್ವವನೆ ಗಿರಿಜೆಗೆಂದಂ
ಗಿರಿಶಂ ॥ ೧೪೪ ॥

ವ ॥ ಎಂದಾಗಿ ಗಿರಿಶಂ ಡಂಬಕ ದ್ವಿಜನಂ ನಿರಾಕರಿಸಿ ಮತ್ತಮಿಂತೆಂದಂ

ಕಂ ॥ ಮನೆಯಂ ನಿಜವಲ್ಲಭೆಯಂ
ವನಚರನಿಕರಮನೆ ಪಿರಿದು ಬಿಟ್ಟಿಂನಂ ನೆ
ಟ್ಟನೆ ಮೆಚ್ಚಿಪ್ಪನಿರುಳ್ ಪಗ
ಲೆನುತ ಭವಕಂಣಪ್ಪಯ್ಯನೊಳ್ಪಂ ಪೇಳ್ದಂ ॥ ೧೪೫ ॥

ಅಂತ್ಯ : ಮ ॥ ವರ ಕೈಲಾಸವಿರಾಜಮಾನನನಿಶಂ ಸಂಗೀತ ಸಾರಪ್ರಿಯಂ
ಗಿರಿಜಾತಾ ಕುಚಕುಂಕ್ಕುಮಾಂಕಿತ ವಿಶಾಲೋರುಸ್ಥಳಂ ಸದ್ಗುಣಾ
ಭರಣಂ ಚಂದ್ರಧರಂ ಸುರಂಗ ವರದ ಶ್ರೀ ಸೋಮನಾಥಂ ಸುರಾ
ಸುರ ಪೂಜ್ಯಂ ನಮಗೀಗೆ ಸತ್ಕರುಣದಿಂ ಸದ್ಭಕ್ತಿಯಂ ಮುಕ್ತಿಯಂ ॥೨೩॥

ಗದ್ಯ ॥ ಇದು ಸಕಲ ಸುರನಿಕರ ಮಕುಟ ಮಾಣಿಕ್ಯ ಮಾಲಾ ಮರೀಚಿಪೂಜ
ರಂಜಿತ ಪಾದಪಂಕಜ ಶ್ರೀಮತ್ಪುಲಿಗೆರೆಯ ಪುರಾಧಿಪ ಶ್ರೀ ಸೋಮನಾಥ

ಭಕ್ತಿಯುತ ಕರ್ನಾಟಕ ಕವಿಚಕ್ರವರ್ತ್ತಿ ವಿರಚಿತಮಪ್ಪ ತ್ರಿಷಷ್ಟಿ ಪುರಾತನರ ಚಾರಿತ್ರದೊಳ್ ಕಾರಿಕಾಲಂಮೆ ಪಿರುಮಳಲಿಯು ಕುರುಂಬರು ಚಾರಮರಾಜ ಸೌಂಧರ ಪೆರುಮಾಳೆ ಮಹೇಶ್ವರ್ಗ್ಗೆ ಗಣಪದಮಂ ಕೊಟ್ಟ ವೃತ್ತಾಂತ ದ್ವಯೋತ್ತರ ಷಷ್ಟ್ಯಾಶ್ವಾಸಂ ಸಂಪೂರ್ನ್ನಂ॥ ಅಂತು ಆಶ್ವಾಸಂ ೬೨ಕ್ಕಂ ಕಂದ ವೃತ್ತಂಗಳು ೧೦೦ಕ್ಕಂ ಮಂಗಳಮಸ್ತು ಶ್ರೀ

ವಿಷಯ : ಅರವತ್ತು ಮೂವರು ಪುರಾತನರ ಚರಿತ್ರೆ.

ವಿಶೇಷ : ಪ್ರತಿ ಅಸಮಗ್ರವಾಗಿದೆ. ಆದಿಯ ೨೫ ಆಶ್ವಾಸಗಳು ಇಲ್ಲ. ಪ್ರತಿಯ ಕೊನೆಯಲ್ಲಿ "ಅರುವತ್ತು ಮೂರು ಆಶ್ವಾಸಕ್ಕೆ ಒಂದು ಆಶ್ವಾಸ ಯಿದರಲ್ಲೆ ಅಡಕವಾಗಿ ಪ್ರತಿಯಲ್ಲಿ ಬರದಿರುವ ಪ್ರಕಾರಕ್ಕೆ ಬರಿಯಲಾಯಿತು" ಎಂದಿದೆ.

655

ಕೆ. ೫೦೦	**ತ್ರೈಲೋಕ್ಯ ಚಿಂತಾಮಣಿ**	ಗದ್ಯ
೧೩.೫"×೨.೧"	ಮಹತ್ತು ದೇವಯೋಗಿ	ಸು. ೧೭೦೦
೨-೧೩೧ ಪತ್ರ	೧೧ ಪಂಕ್ತಿ	೭೦ ಅಕ್ಷರ

ಆದಿ : ಇದು ಶ್ರೀ....ತ್ರೈಲೋಕ್ಯ ಚಿಂತಾಮಣಿ। ಉಮಾಮಹೇಶ್ವರ ಸಂವಾದೆ ॥ ಶ್ರೀ ಸಿತ್ಥ್ಯೋತ್ಸವ ಕಲ್ಯಾಣ ಮಂಟಪದಲ್ಲಿ ದಿವ್ಯ ಸಿಂಹಾಸನಾರೂಢರಾದ ಶ್ರೀಗುರು ಮಹಾದೇವನಂ ಮಹೇಶ್ವರೀಯೆಂಬ ಜಗನ್ಮಾತೆ ಬೆಸಗೊಂಬಾಗ ವಿಭೂತಿಯ ಧಾರಣಂಗಳಿಂದೀ ರುದ್ರಾಕ್ಷಾಭೂಷಣಂಗಳಿಂದೆ ಪಂಚಾಕ್ಷರಿಯ ವುಚ್ಚಾರಣಂಗಳಿಂದೆ ಶಕ್ತಿ ಸ್ವರೂಪರಾದ ಮಂತ್ರವೆ ಮೂರ್ತಿಗಳಾದ ಕ್ರಿಯಾಶಕ್ತಿ ಜ್ಞಾನಶಕ್ತಿ ಯಿಚ್ಛಾಶಕ್ತಿ ಆದಿಶಕ್ತಿಯರು ಮೊದಲಾದ ಷೋಡಶ ಸಹಸ್ರ ಮಂತ್ರಶಕ್ತಿಯರು ಭಯಭಕ್ತಿಯುಕ್ತಿ ಸಹಿತವಾಗಿ ಕೇಳುತಿರ್ದ್ದರೂ ॥

ಅಂತ್ಯ :... ರುದ್ರಗಣಮುಂ ಭದ್ರಗಣಮುಂ ಮನುಗಣಮುಂ ಮುನಿಗಣಮುಂ ನಾಗಗಣಮುಂ ಭೋಗಗಣಮುಂ ಮಂತ್ರಜಪಕ್ರಿಯಾ ಸಮಯೋಚಿತೇ ಮಹಾಲಿಂಗೇ ಸಮರಸಭಾವಿನಾ ಮಹತ್ತ ದೇವಯೋಗಿನಾ ವಿರಚಿತೇ ತ್ರೈಲೋಕ್ಯ ಚಿಂತಾಮಣೌ ಮಂತ್ರ ಮಹಿಮಾ ಅಷ್ಟಮಸ್ಥಲಂ ಜಾತಂ॥ ಶಿವನು ಸ್ವಪ್ನದಲ್ಲಿ ಪ್ರಸಂನವಾಗಿ ಯಿ ಶಾಸ್ತ್ರಕ್ಕೆ ತ್ರೈಲೋಕ್ಯ ಚಿಂತಾಮಣಿಯೆಂದು ಹೆಸರಿಟ್ಟರು। ಯಿದು ತ್ರೈಲೋಕ್ಯ ಚಿಂತಾಮಣಿ। ಅದು ಹೇಗೆಂದರೆ ತ್ರೈಲೋಕ್ಯವೆಂದು

ಮೂಱು ಲೋಕಂಗಳು। ಅವಾವವೆಂದರೆ। ದೇವಲೋಕ। ಮರ್ತ್ಯಲೋಕ। ಪಾತಾಳಲೋಕಂಗಳು। ದೇವಲೋಕವೆಂದರೆ ಸದಾಶಿವಲೋಕ ಮೊದಲಾಗಿ X X X X ಅಷ್ಟಾವರಣವನೆ ಕೊಂಡಾಡುತಿಪ್ಪವು। ಇದಕ್ಕೆ ಸೇರಿದ ಗ್ರಂಥ ಗುರುಮಹಿಮೆ ಸ್ಥಲಕ್ಕೆ ॥ ೫೧ ॥ ವಚನ ೫೧ ॥ ಲಿಂಗಮಹಿಮೆ ಸ್ಥಲಕ್ಕೆ ಗ್ರಂಥ ೧೧೧॥ ವಚನ ೫೫ ॥ ಜಂಗಮ ಮಹಿಮೆ ಸ್ಥಲಕ್ಕೆ ಗ್ರಂಥ ೧೧೧॥ ವಚನ ೫೩ ॥ ಪಾದೋದಕ ಮಹಿಮೆ ಸ್ಥಲಕ್ಕೆ ಗ್ರಂಥ ೩೧ ॥ ವಚನ ೩೧ ॥ ಪ್ರಸಾದ ಮಹಿಮೆ ಸ್ಥಲಕ್ಕೆ ಗ್ರಂಥ ೫೧ ॥ ವಚನ ೩೧॥ ವಿಭೂತಿಯ ಮಹಿಮೆ ಸ್ಥಲಕ್ಕೆ ಗ್ರಂಥ ೮೧ ॥ ವಚನ ೨೭ ॥ ರುದ್ರಾಕ್ಷೆಯ ಮಹಿಮೆಯ ಸ್ಥಲಕ್ಕೆ ಗ್ರಂಥ ೩೭ ॥ ವಚನ ೨೧ ॥ ಮಂತ್ರ ಮಹಿಮೆಯ ಸ್ಥಲಕ್ಕೆ ಗ್ರಂಥ ೨೫೫ ॥ ವಚನ ೪೭ ॥ ಅಂತು ಗ್ರಂಥ ೭೩೦ ॥ ವಚನ ೩೧೬ ॥

ವಿಷಯ : ವೀರಶೈವ ವೇದಾಂತ.

ವಿಶೇಷ : ೫೨, ೫೭, ೧೧೩ ಮತ್ತು ೧೨೨ನೆಯ ಪತ್ರಗಳು ಲುಪ್ತವಾಗಿವೆ. ೮೨ ನೆಯ ಪತ್ರ ಇಲ್ಲವಾದರೂ ವಿಷಯ ಲೋಪವಿಲ್ಲ. ಶಕಟರೇಫ ಪ್ರಯೋಗ ಇದೆ. ಕ್ರಮಾಂಕ ೧೦೧ಕ್ಕೆ ಪ್ರತಿಯಾಗಿ ೧೧೦ ಎಂದಿದೆ. ಮಧ್ಯೆ ಬಿಟ್ಟಿರುವ ಪತ್ರಗಳಲ್ಲೊಂದರ ಅರ್ಧಭಾಗ ಕೊನೆಯಲ್ಲಿದೆ.

656

ಕೆ. ೫೨೪	**ತ್ರೈಲೋಕ್ಯ ಚಿಂತಾಮಣಿ**	ಗದ್ಯ
೧೩.೮"×೧.೮"	ಮಹತ್ತು ದೇವಯೋಗಿ	ಸು. ೧೭೦೦
೧-೧೩೩ ಪತ್ರ	೧೦ ಪಂಕ್ತಿ	೬೩ ಅಕ್ಷರ

ಆದಿ : ಶ್ರೀ ...... ಶ್ರೀ ತ್ರೈಲೋಕ್ಯ ಚಿಂತಾಮಣಿ ಶಾಸ್ತ್ರಂ ಲಿಖಿತುಮವಿಘ್ನ ಮಸ್ತು। ವುಮಾಮಹೇಶ್ವರ ಸಂವಾದೇ ॥ ಶ್ರೀ ನಿತ್ಯೋತ್ಸವ ಕಲ್ಯಾಣ ಮಂಟಪದಲ್ಲಿ ದಿವ್ಯ ಸಿಂಹಾಸನಾರೂಢರಾದ ಶ್ರೀ ಗುರು ಮಹಾದೇವನಂ ಮಹೇಶ್ವರಿಯೆಂಬ ಜಗನ್ಮಾತೆ ಬೆಸಕೊಂಬಾಗ ವಿಭೂತಿಯ ಧಾರಣಂ ಗಳಿಂದೆ। ರುದ್ರಾಕ್ಷಾ ಭೂಷಂಗಳಿಂದೆ। ಪಂಚಾಕ್ಷರಿಯ ವುಚ್ಚಾರಂಗಳಿಂದೆ ಶಕ್ತಿಸ್ವರೂಪರಾದ ಮಂತ್ರವೆ ಮೂರ್ತಿಗಳಾದ.......

ಅಂತ್ಯ : ... ಮಂತ್ರಜಪಕ್ರಿಯಾ ಸಮಯೋಚಿತೆ ಮಹಾಲಿಂಗೆ ಸಮರಸಭಾವಿನಾ ಮಹತ್ತ್ರ ದೇವಯೋಗಿನಾ ವಿರಚಿತೆ ತ್ರೈಲೋಕ್ಯ ಚಿಂತಾಮಣೌ ಮಂತ್ರ

ಮಹಿಮಾ ಅಷ್ಟಮಸ್ಥಲಂ ಜಾತಂ ॥ ಶಿವನಂ ಸ್ವಪ್ನದಲ್ಲಿ ಪ್ರಸಂನವಾಗಿ ಯಿಾ ಶಾಸ್ತ್ರಕ್ಕೆ ತ್ರೈಲೋಕ್ಯ ಚಿಂತಾಮಣಿಯೆಂದು ಹೆಸರಿಟ್ಟರು । ಯಿದು ತ್ರೈಲೋಕ್ಯ ಚಿಂತಾಮಣಿ x x x x ಅಷ್ಟಾವರಣವನೆ ಕೊಂಡಾಡುತಿಪ್ಪುರ್ವು. ಇದಕ್ಕೆ ಸೇರಿದ ಗ್ರಂಥ ಗುರುಮಹಿಮೆ ಸ್ಥಲಕ್ಕೆ ಗ್ರಂಥ ೫೧ ॥ ವಚನ ೫೧ ॥ ಲಿಂಗಮಹಿಮೆ ಸ್ಥಲಕ್ಕೆ ಗ್ರಂಥ ೧೧೧ ॥ ವಚನ ೫೫ ॥ ಜಂಗಮ ಮಹಿಮೆ ಸ್ಥಲಕ್ಕೆ ಗ್ರಂಥ ೧೧೧ ॥ ವಚನ ೫೩ ॥ ಪಾದೋದಕ ಮಹಿಮೆ ಸ್ಥಲಕ್ಕೆ ಗ್ರಂಥ ೩೧ ॥ ವಚನ ೩೧ ॥ x x x x ಮಂತ್ರ ಮಹಿಮೆ ಸ್ಥಲಕ್ಕೆ ಗ್ರಂಥ ೨೫೫ ॥ ವಚನ ೪೬ ॥ ಅಂತು ಗ್ರಂಥ ೬೩೦ ॥ ವಚನ ೩೧೬ ॥

ವಿಷಯ : ವೀರಶೈವ ವೇದಾಂತ.

ವಿಶೇಷ : ೬೦, ೬೮ನೇ ಪತ್ರಗಳು ಇಲ್ಲ. ೬೦ ನೆಯ ಕ್ರಮಾಂಕದ ಎರಡು ಪತ್ರಗಳಿವೆ. ೩೫ನೇ ಪತ್ರ ತ್ರುಟಿತ. ಶಕಟ ರೇಫವನ್ನು ಬಳಸಿದೆ.

657

ಕೆ. ಎ. ೨೮೪/೫	**ತ್ರೈಲೋಕ್ಯ ಚೂಡಾಮಣಿ ಸ್ತೋತ್ರಂ**	ವೃತ್ತ
೧೨.೯"×೮.೨"	ಬ್ರಹ್ಮಶಿವ	ಸು.೧೨೦೦
೧_೮ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ತ್ರೈಲೋಕ್ಯ ಚೂಡಾಮಣಿ ಸ್ತೋತ್ರಂ.
ಶ್ರೀಯಂ ವಿಷ್ಣುಗೆ ಪದ್ಮಜಂಗೆ ಮತಿಯಂ ಸೂರ್ಯಂಗೆ ತೇಜತ್ವಮಂ
ಮಾಯಾಮಾರ್ಗ್ಗಮನೀಶ್ವರಂಗೆ ಹರಿಗೊಲ್ದಿಂದ್ರತ್ವಮಂ ನಾಕಲೋ
ಕಾಯತ್ತಂ ಫಣಿರಾಜ ರಾಜಿತ ಫಣೀಂದ್ರಂಗಿತ್ತಿರಿಂ ದೇವ ನಿಂ
ನೀಯೊಂದದ ಪೆಂಪನೇವೊಗಳ್ವೆನಾಂ ತ್ರೈಲೋಕ್ಯ ಚೂಡಾಮಣೀ ॥ ೧ ॥

ಅಂತ್ಯ : ಯೆಡೆಯಾಡುತ್ತವನೂನ ಜೈನಭವನಕ್ಕಾನಂದದಿಂದಂ ತಳ
ರ್ನಡೆಗಲ್ತೆಂ ಪರಮಾಗಮಭ್ಯಸನದಿಂದಾಪೊತ್ತುವಾಗಳ್ತೊದ
ಳ್ನುಡಿಗಲ್ತೆಂ ಕಿಱಿಯಂದು ಪುಣ್ಯವಶದಿಂದಾ ರಾಜ್ಯಪೂಜ್ಯಸ್ಪದಂ
ಬಡೆದಾಗಳ್ಕವಿಚಕ್ರವರ್ತಿ ಪೆಸರಂ ತ್ರೈಲೋಕ್ಯ ಚೂಡಾಮಣೀ ॥ ೩೮ ॥

ವಿಷಯ : ಸ್ತುತಿ.

ವಿಶೇಷ: ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಶಕಟರೇಫದ ಪ್ರಯೋಗವಿದೆ ಇದರಲ್ಲಿ ನಿರ್ವಾಣ ಲಕ್ಷ್ಮೀಪತಿ ಸ್ತೋತ್ರವೇ ಮೊದಲಾದ ಇತರ ೧೧ ಗ್ರಂಥಗಳಿವೆ.

658

ಕೆ.ಎ. ೨೮೪/೮ **ತ್ರೈಲೋಕ್ಯ ರಕ್ಷಾಮಣಿ ಸ್ತೋತ್ರಂ** ವೃತ್ತ
೧೨.೯″×೮.೩″ ? ?
೧–೩ ಪತ್ರ ೨೧ ಪಂಕ್ತಿ ೨೦ ಅಕ್ಷರ

ಆದಿ: ತ್ರೈಲೋಕ್ಯ ರಕ್ಷಾಮಣಿ ಸ್ತೋತ್ರಂ
ಶ್ರೀಯುಂ ಜವ್ವನಮುಂ ವಿಳಾಸದೊದಮಂ ಸೌಭಾಗ್ಯಮುಂ ವ್ಯೈಮೆಯುಂ
ಮಾಯುಂ ಮಂಜಿನ ಪುಂಜಮಿಂದ್ರ ಧನುವಿದ್ಯುಲ್ಲೇಖೆ ಸಂಧ್ಯಾರುಣ
ಶ್ರೀಯೆಂಬಂತಿರೆ ನಿಷ್ಠೆಯಾಗಿರದಿವಕ್ಕಾಂ ಪ್ರಾರ್ಥಿಸೆಂ ಶಾಶ್ವತ
ಶ್ರೀಯುಂ ದೇವರ ದೇವ ಕೂರ್ತು ದಯೆಗೆಯಲ್ ತ್ರೈಲೋಕ್ಯ ರಕ್ಷಾ
ಮಣೀ ‖ ೧ ‖

ಅಂತ್ಯ: ವಿಪುಳ ಶ್ರೀ ಕೊಪಣಾದಿ ತೀರ್ಥನಿಳಯಂ ನಾಗೇಂದ್ರವಂದ್ಯಂ ಬುಧಾ
ಧಿಪರಿಂದಾಲಿಸಿ ಮೆಚ್ಚೆ ಪೇಳ್ದತಿಶಯ ಸ್ತೋತ್ರಂಗಳಿಂದಂ ಜಿನಾ
ಧಿಪ ನಿನ್ನಂ ಸ್ತುತಿಗೆಯ್ಯುತಿಪ್ಪೆನಗೆ ನೀಂ ಚಂದ್ರಪ್ರಭ ಸ್ವಾಮಿ ಮಾ
ಡುಪಮಾತೀತಮೆನಿಪ್ಪ ಮುಕ್ತಿ ಸುಖಮಂ ತ್ರೈಲೋಕ್ಯರಕ್ಷಾಮಣೀ ‖೧೨‖

ವಿಷಯ: ಸ್ತೋತ್ರ.

ವಿಶೇಷ: ಪತ್ರದ ಒಂದು ಕಡೆ ಬರೆದಿದೆ. ಶಕಟರೇಫ ಪ್ರಯೋಗ ಇದೆ. ಇದರಲ್ಲಿ ಚಂದ್ರನಾಥಾಷ್ಟಕಂ ಮೊದಲಾದ ಇತರ ೧೧ ಗ್ರಂಥಗಳಿವೆ.

659

ಕೆ.ಬಿ. ೨೧೨ **ದಕ್ಷಾಧ್ವರ** ಯಕ್ಷಗಾನ
೮″×೬.೩″ ನಂಜಭೂಪಾಲ ಸು. ೧೭೪೦
೧–೩೫ ಪತ್ರ ೧೫ ಪಂಕ್ತಿ ೨೨ ಅಕ್ಷರ

ಆದಿ: ಶ್ರೀ ...... ದಕ್ಷಾಧ್ವರದ ಕಥಾ ಪ್ರಾರಂಭಃ —
ನಾಂದಿವೃತ್ತಾ ‖

ಶ್ರೀಮಚ್ಚಾಮುಂಡಿಕಾಂಬಾ ವಿಧಿಮುಖ ವಿಬುಧಸ್ತೋಮ ಸಂಸೂಯಮಾನಂ
ಭೀಮ ಸ್ಫೂರ್ಜತ್ತ್ರಿಶೂಲ ಪ್ರಮಥಿತ ಮಹಿಷಾಕಾರ ಘೋರಾಮರಾರಿಃ
ಕಾಮಂ ಪ್ರತ್ಯರ್ಥಿ ನೇತ್ರ ತ್ರಿತಯ ಸುಖಕರಾಮೋಗ ಪೀಯೂಷವೃಷ್ಟಿ
ಚಾಮಕ್ಷೋಣೀಶ ಪುತ್ರಂ ಚಿರತರಮವತಾನ್ನಂಜ ಭೂಪಂ ಸುರೂಪಂ ॥ ೧ ॥

X X X X

ವಾರ್ಧಕಾ॥ ಧರಣಿತಲ ವಿಖ್ಯಾತ ಕರ್ನಾಟದೇಶದೊ
ಳ್ಮೆರೆವ ಮಹಿಷೂರಪುರ ಸಿಂಹ್ಮಾಸನಾಂಬುಜಾಂ
ತರ ರಾಜಹಂಸನಹ ಕೃಷ್ಣನೃಪತನಯ ಸದ್ಗುಣಸಾಂದ್ರ ಚಾಮೇಂದ್ರನ
ತರುಣಿಮಣಿ ಕೆಂಪನಂಜಾಂಬಿಕಾ ಗರ್ಭ ಸಾ
ಗರ ಸುಧಾಕರ ನಂಜಭೂಮಿಪತಿ ಕುಂಜರಂ
ಪುರವೈರಿ ರಚಿತ ದಕ್ಷಾಧ್ವರ ಧ್ವಂಸವಂ ಹಸನಾಗಿ ತಾನುಸುರುವಂ ॥ ೯ ॥

ಅಂತ್ಯ : ಕುಂಜಧಾರಿಪ ಮಂಜುಗಾಮಿನಿ
ರಂಜಿತಾಶ್ರಿತ ಪುಂಜಪಾಲಿನಿ
ಗುಂಜದುರು ಮಂಜೀರ ನೂಪುರೆ
ನಂಜನೃಪ ಕರಕಂಜ ಪೂಜಿತೆ ॥ ೪೦೩ ॥
ದಕ್ಷಬ್ರಹ್ಮನ ಕಥೆ ಸಮಾಪ್ತಕ್ಕೆ ಮಂಗಳ ಮಹಂ ಶ್ರೀ.

ವಿಷಯ : ದಕ್ಷಯಜ್ಞದ ಕಥೆ.

ವಿಶೇಷ : ಹುಳುತಿಂದು ಪತ್ರಗಳಲ್ಲಿ ರಂಧ್ರ ಬಿದ್ದಿದೆ.

660

ಕೆ.ಬಿ. ೩೮೮	ದಕ್ಷಾಧ್ವರ	ಯಕ್ಷಗಾನ
೭.೯"X೬.೨"	?	?
೧-೨೩ ಪತ್ರ	೨೦ ಪಂಕ್ತಿ	೧೫ ಅಕ್ಷರ

ಆದಿ : ಶ್ರೀ....ಭಾಗವತದೊಳಗಣ ದಕ್ಷನ ವದೆ ಬರಿಯುವದಕ್ಕೆ ಶುಭಮಸ್ತು॥
ನಾದನಾಮಕ್ರಿಯ ಯೇಕ
ರಕ್ಷಿಸಬೇಕು ಸಾಂಬಾ ಕರುಣಾವಲಂಬಾ॥
ಜಯಜಯಾ ಗಣನಾಥಾ
ಜಯಲೋಕ ಖ್ಯಾತಾ ॥ ಪ ॥

X X X X

ದ್ವಿಪದೆ ॥ ವರಮಹಾಭಾಗವತ ಪೌರಾಣದೊಳಗೇ
ಹರನರಸಿ ದಕ್ಷನೆಜ್ಞದೊಳಂಮನರೆಗೇ ॥ ೫ ॥
ಗಿರಿರಾಜನುದರದಲಿ ಜನಿಸಿ ಮತ್ತಂದೂ
ಗಿರೀಶನಿಗೆ ಸತಿಯಾದ ಕಥೆಯ ನಾನಿಂದೂ ॥ ೬ ॥
ವರವೆನಿದನರಿತಂತೆ ಯಕ್ಷಗಾನದಲೀ
ಧರೆಯ ಸಜ್ಜನರಿದನು ಕೇಳಿ ಲಾಲಿಸಲಿ ॥ ೭ ॥

ಅಂತ್ಯ : ಭಾಮಿನಿ ॥ ಯಿನಿತು ಸಂತಸದಿಂದಲಾ ಮಹ
ವನಿತೆ ದಿನದಿನ ಬೆಳವುತಿರುತಿರೆ
ಮನದಿ ಯೋಚಿಸುತಿರಲು ಗಿರಿರಾಜೇಂದ್ರ ತಂನೊಳಗೆ
ತನುಜೆಯನು ತಾನ್ಯಾರಿಗೀವುದೊ
ಯೆನುತಿರಲು ಪುರದೊಳಗೆ ಮತ್ತಾ
ಮುನಿಪ ನಾರದ ತಿಳಿದು ನಡೆತಂದನು ಸಗಾಡದಲೀ ॥ ೩೭೬ ॥

ದಕ್ಷಧ್ವರ ಸಂಪೂರ್ಣಂ.

ವಿಷಯ : ದಕ್ಷಯಜ್ಞದ ಕಥೆ.

ವಿಶೇಷ : ತೆಳುವು ಕಾಗದ. ಸುಂದರಾಕ್ಷರ.

661

ಕೆ. ೧೭೩	**ದಶಕುಮಾರ ಚರಿತ್ರೆ**	**ಚಂಪು**
೧೫.೫"×೨.೧"	ಚೌಂಡರಸ	ಸು. ೧೨೪೦
೧-೧೦೬ ಪತ್ರ	೧೧ ಪಂಕ್ತಿ	೭೮ ಅಕ್ಷರ

ಆದಿ : ದಶಕುಮಾರನ ಕಥೆ.

ಶ್ರೀಯನುದಾರದಿಂದುರದೊಳೊಪ್ಪಿರೆ ತಾಳ್ದ ದಶಾವತಾರ ಸಂ
ದಾಯಕದಿಂ ವಿರೋಧಿಬಲಮಂ ತವೆ ಗೆಲ್ದಮರಾನಿಕಾಯಮಂ
ಸ್ವಾಯತ ಸತ್ವಮಂ ಪೊರೆದ ಲೋಕಜನಸ್ತುತಿವೆತ್ತ ಪಂಡರಿ
ರಾಯನಭಂಗವಿಠಲನಲಂಪಿನೊಳೀಗೆಮಗಿಷ್ಟಸಿದ್ಧಿಯಂ ॥ ೧ ॥

x x x x

ಮೊದಲೊಳ್ ದಂಡಿಕವೀಶ್ವರಂ ದಶಕುಮಾರಖ್ಯಾತ ಚಾರಿತ್ರಮಂ
ಪದಪಿಂ ಸೌಂಸ್ಕೃತ ಭಾಷೆಯಿಂದ ರಚಿಸಿದಂ ಧಾತ್ರಿಜನಸ್ತೋತ್ರಮಂ

ಮದನಪ್ಪಂತು ಪ್ರಸಿದ್ಧಮಾಗಿಯವತಾರಾಕಾರಮಂ ತಾಳ್ದಿಸ
ರ್ವಿಥಿತಂ ರಂಗದೊಳಾಡಿತೋರ್ಪ್ಪ ತೆಱದಿಂ ಪೇಳ್ದೆಂ ಸುಕರ್ನ್ನಾಟದಿಂ ||೧೭||

ಅಂತ್ಯ : ಕನಸಿನ ರಾಜ್ಯದಂತೆ ಮುನಿಲೊಡ್ಡಿನ ರೂಪುಗಳಂತೆ ವಾರ್ದ್ದಿ .... ಲ್ಲ ಕಿ
ಚ್ಚಿನ ಸಿರಿಯಂತೆ ಜೋಡೆಯರರಂದವೆಂದಱಿದು ಸತ್ಪಥದೊಳ್ಕಳಾ
ವಿದಂ || ೬೨ ||

ವಿಷಯ : ಹತ್ತು ಜನ ರಾಜಕುಮಾರರ ಕಥೆ.

ವಿಶೇಷ : ಆಶ್ವಾಸ ೧೫, ಪದ್ಯ ೬೨ರವರೆಗೆ ಮಾತ್ರವಿದೆ. ಗರಿಗಳು ಅಲ್ಲಲ್ಲಿ ತ್ರುಟಿತ;
ಅಂಚುಗಳು ಮುರಿದಿವೆ. ಶಕಟರೇಫದ ಬಳಕೆಯಿದೆ.

662

ಕೆ. ೪೭೧/೧	**ದಶಕುಮಾರ ಚರಿತ್ರೆ**	ಚಂಪು
೧೮"×೧.೭"	ಚೌಂಡರಸ	ಸು. ೧೨೪೦
೧_೯೧ ಪತ್ರ	೯ ಪಂಕ್ತಿ	೪೩ ಅಕ್ಷರ

ಆದಿ : ದಶಕುಮಾರ ಚರಿತ್ರ.
ಶ್ರೀಯನುದಾರದಿಂದುರಮೊಳೊಪ್ಪಿರೆ ತಾಳ್ದ ದಶಾವತಾರ ಸಂ
ದಾಯಕದಿಂ ವಿರೋಧಿ ಬಲಮಂ ತವೆ ಗೆಲ್ದ ಮದುಗ್ನಿಕಾಯಮಂ
ಸ್ಟಾಯಕ ಸತ್ವದಿಂ ಪೊರೆದ ಲೋಕ ಜನಸ್ತುತಿವೆತ್ತ ....
....ಗ ವಿಶಲಗಲಂಪಿನೊಳೀಗೆಮಗಿಷ್ಟಸಿದ್ಧಿಯಂ ||

X X X X

ಮೊದಲೊಳ್ದಂಡಿ ಕವೀಶ್ವರಂ ದಶಕುಮಾರಾಖ್ಯಾತ ಚಾರಿತ್ರಮಂ
ಪದಪಿ ಸಂಸ್ಕೃತ ಭಾಷೆಯಿಂ ರಚಿಸಿದಂ ದಾತ್ರಿಜನ ಸ್ರೋತ್ರ ಸಂ
ವದವಪ್ಪಂತದನಾಂ ಪ್ರಸಿದ್ಧಿಯವತಾರಾಕಾರಮಂ ನಟ್ಟುವ
ರ್ವಿದಿತ ರಂಗದೊಳಾಡಿ ತೋರ್ಪ ತೆರದಿಂ ಪೇಳ್ದೆಂ ಸುಕರ್ನಾಟ ದಿಂ ||೧೭||

ಅಂತ್ಯ : ಕನಸಿನ ರಾಜ್ಯದಂತೆ ಮುಗುಲೊಡ್ಡಿನ ರೂಪುಗಳಂತೆ ವಾರ್ದಿಯೊ
ಗ್ಗಿನ ತೆರೆಯಂತೆ ಗಾಳಿಗಿದಿರೊಡ್ಡಿದ ಕೆಂಜೊಡರಂತೆ ಪುಲ್ಲಕಿ
ಚ್ಚಿನ ಸಿರಿಯಂತೆ ಜೋಡೆಯರಂದವೆಂದರಿದು ಸತ್ಪಥದೊಳ್ಕಾಳಾ
ವಿದಂ || ೬೨ ||

ವಿಷಯ : ಹತ್ತು ಜನ ರಾಜಕುಮಾರರ ಕಥೆ.

ವಿಶೇಷ : ಅಸಮಗ್ರ. ಆಶ್ವಾಸ ೧೫ ಪದ್ಯ ೬೨ ರ ವರೆಗೆ ಮಾತ್ರ ಇದೆ. ಗರಿಗಳು ಅಲ್ಲಲ್ಲಿ ತ್ರುಟಿತ, ಶಕಟ ರೇಫವಿದೆ. ಅಕ್ಷರವು ಸುಂದರವಾಗಿದೆ. ಇದೇ ಗ್ರಂಥದಲ್ಲಿ ಯಾದವಗಿರಿ ಮಹಾತ್ಮ್ಯೆ ಮತ್ತು ಪಶ್ಚಿಮ ರಂಗಕ್ಷೇತ್ರ ಮಹಾತ್ಮ್ಯೆ ಎಂಬೀ ಗ್ರಂಥಗಳಿವೆ.

663

ಕೆ.ಎ. ೧೧೧ | **ದಶಕುಮಾರ ಚರಿತ್ರೆ** | ಚಂಪು

೧೨.೫"×೬.೮" | ಚೌಂಡರಸ | ಸು. ೧೨೪೦

೧-೧೪೨ ಪತ್ರ | ೧೬ ಪಂಕ್ತಿ | ೨೯ ಅಕ್ಷರ

ಆದಿ : ಅಭಿನವ ದಶಕುಮಾರ ಚರಿತ್ರೆ ಪ್ರಾರಂಭಃ ||

ಶ್ರೀಮುರಯರನುದಾರದೆಂಮುರದೊಳೊಪ್ಪಿರೆ ತಾಳ್ದ ದಶಾವತಾರ ಸಂ
ದಾಯಕದೆಂದಿರದೋದಿ ಬಾಲನುಂ ತವೆ ಗೆಲ್ದನು ಮುನ್ನಿಕಾಯಮುಂ
ಸಾಯಕಸತ್ವದಿಂ ಪೊರೆದ ಲೋಕ ಜನಕ್ಕುತಿವೆತ್ತಾ ಪಂಡರಿ
ರಾಯನಭಂಗವಿಠ್ಠಲನಲಂಪಿನೊಳಗೆತ್ಪ್ರಸಿದ್ಧಿಯಂ ||೧||

X X X X

ಮೊದಲೊಳ್ದಂಡಿ ಕವೀಶ್ವರಂ ದಶಕುಮಾರಾಖ್ಯಾತ ಚಾರಿತ್ರಮಂ
ಪದಪಿಂ ಸಂಸ್ಕೃತ ಭಾಷೆಯಿಂ ರಚಿಸಿದಂ ಧಾತ್ರಿಜನಸ್ತ್ರೋತ್ರ ಸಂ
ಮುಂದವಪ್ಪಂತದನಾಂ ಪ್ರಸಿದ್ಧಿಯವತಾರಾಕಾರಮುಂನದು ಪ
ರ್ಬಿದೀ ತೆರಂದೊಳಾದಿತೊಪ್ಪುತೆರದಿಂ ಪೇಳ್ವೆಂ ಸುಕರ್ನಾಟದಿಂ ||೧೭||

ಅಂತ್ಯ : ಕಂದ|| ಇಹಲೋಕ ನಿಂದಿಪರ ಪರ
ರರ್ಥಕಂ ಕೈಗೈವರ ಲೋಬದಿಂ ತನುವಂನ
ರಳಿಸುವರು ಪರಲೋಕಹಿತಂ
ತನಗಪ್ಪುದೆಂದು ನುಡಿವುದಂ ಕೇಳ್ದನಭಂವಿಗತಲಭೃತ್ಯಂ ||

ಗದ್ಯ|| ಯಿದು ನಿಖಿಳ ಬುಧಜನ ಮನೋವನಜ ವನ ದಿವಾಕಿರಣ ಪ್ರತಿಮ ಪ್ರಸಂನ ಶ್ರೀಮುದಭಂಗ ವಿಠಲ ಪದಾಂಭೋಜ ಮತ್ತಮದುಸೂದನ ನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ ಚತುರ್ಥಾಶ್ವಾಸ ಪದ ೬೫ ಕಾಂ ಮಂಗಳ ಮಹಾ ಶ್ರೀ.

ವಿಷಯ : ಹತ್ತುಜನ ರಾಜಕುಮಾರರ ಕಥೆ.

ವಿಶೇಷ : ೧೪ ಆಶ್ವಾಸಗಳು ಸಂಪೂರ್ಣವೆಂದಿದೆ. ಆದರೆ ೧೪ ನೇ ಆಶ್ವಾಸವಿಲ್ಲ. ೧೫ ನೇ ಆಶ್ವಾಸವಿದೆ. ನೋಡಿ ಬರಹ.

664

ಕೆ.ಎ. ೨೨೧/೧	**ದಶಗ್ರಂಥಿ**	ಶ್ಲೋಕ, ಟೀಕು, ಗದ್ಯ
೧೨.೭"×೭.೯"	ವೀರಣಾಚಾರ್ಯ	ಸು. ೧೫೦೦
೧-೧೦೨ ಪತ್ರ	೨೦ ಪಂಕ್ತಿ	೨೮ ಅಕ್ಷರ

ಆದಿ : ದಶಗ್ರಂಥಿ ಕರ್ಣಾಟಕ ಪ್ರತಿಪದಟೀಕಾ। ವೀರಣಾರ್ಯ ರಚಿತಾ। ದಶಗ್ರಂಥಿ
ಶ್ರೀಮಚ್ಛಿದ್ರೂಪಂ ಸಹ
ಜಾಮಲದೇಕಂ ಸಮಸ್ತಕಾರಣನೀಶಂ
ಪ್ರೇಮಂಬೆತ್ತೀ ಜಗಮಂ
ಕಾಮಿತ ಫಲವಿತ್ತು ರಕ್ಷಿಸುಗೆಯನವರತಂ ॥ ೧ ॥

ಅಂತ್ಯ : ಇಂತೆಂದು ಕಾಮಿಕಂ। ತ್ರಿಮಲಾಪಕಮವ್ಯಕ್ತ ಶಿವಸಾಮ್ಯತ್ವಲಕ್ಷಣಂ ಆತ್ಮರೂಪಂ ಚಿದಾನಂದಮಯಂ ಸಾಯುಜ್ಯಂ ನಾಮಕಂ ಕೈವಲ್ಯಂ ದೀಕ್ಷಯಾ ಸಾಧ್ಯಂ ಸಿದ್ಧಾಂತೇ ಪ್ರತಿಪಾದಿತಂ ॥

ಇದು ಸಕಲ ಶಿವಾಗಮ ಪ್ರತಿಪಾದಿತಾರ್ಥ ಪ್ರತಿಷ್ಠಾಚಾರ್ಯನುಂ ಶ್ರೀ ವೀರಶೈವಪುತಾಚಾರ್ಯನುಂ, ಖಲಕುಠಾರ ವಿಶ್ವನಾಥಾಚಾರ್ಯ ಪುತ್ರ ವೀರಣಾರ್ಯ ವಿರಚಿತಮಪ್ಪ ದಶಗ್ರಂಥಿಯ ದೀಪಿಕೆಯೊಳು ಸ್ವಪ್ನಾಹ್ನಿಕಂ ಶ್ರೀ.

X X X X

ಸ್ವಸ್ತಿ ಶ್ರೀ ವಿಜಯಾಭ್ಯುದಯ ಕಲಿಯುಗ ಪ್ರಮಾಣ ೪೩೨೦೦೦ ವರುಷಕ್ಕೆ ಸಂದ ಕಲಿವರ್ಷ ೪೯೫೫ ಶಾಲಿವಾಹನ ಶಕವರ್ಷ ೧೭೮೦ ಸಂದ ವರ್ತಮಾನ ಕಾಳಾಯುಕ್ತ ಸಂವತ್ಸರದ ಆಷಾಢ ಬಹುಳ ೭ ಗುರುವಾರ ದಲ್ಲೂ ಶ್ರೀಮತ್ಸಜ್ಜನ ಶುದ್ಧ ಶಿವಾಚಾ ಜ್ಞಾನವೈರಾಗ್ಯ ಸಂಪನ್ನರಾದ ಭೋಗೋದಿ ಮಠದ ಪಚ್ಚೆ ಕಂತೆ ದೇವರಿಗೆ ತಗಡೂರು ಬಸವರಸ ವುಪಾಧ್ಯಾಯರ ಮಗ ತಮ್ಮಪ್ಪನು ಬರೆದು ಮುಗಿಸಿದ ದಶಗ್ರಂಥಿಯು ವ್ಯಾಖ್ಯಾನಕ್ಕೆ ಆಚಂದ್ರಾರ್ಕರುಳ್ಳಂಬರಂ ಸ್ಥಾಯಿಕೆರ್ ಮಂಗಲ ಮಹಾಶ್ರೀ.

ವಿಷಯ : ವೀರಶೈವ ತತ್ತ್ವ ವಿಚಾರ.

ವಿಶೇಷ : ಬರಹವು ಸ್ಫುಟವಾಗಿದೆ. ಇದೇ ಪುಸ್ತಕದಲ್ಲಿ ಸಿದ್ಧಾಂತ ದೀಪಿಕಾ ಎಂಬ ಇನ್ನೊಂದು ಸಂಸ್ಕೃತ ಗ್ರಂಥವಿದೆ.

665

ಕೆ.ಬಿ. ೯೮	**ದಶಾವತಾರದ ಚರಿತ್ರೆ**	ಚಂಪು
೮.೧″×೬.೪″	ಮಲ್ಲರಸಾಂಕ	ಸು ೧೬೮೦
೧-೧೧೬ ಪತ್ರ	೨೨ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ......ದಶಾವತಾರ ಚರಿತ್ರೆ॥

ವೃ॥ ಶ್ರೀಪದಸೇವಕೋನ್ನತ ಯಶೋಜ್ವಲ ನಿರ್ಮಲನಬ್ಜನೇತ್ರ ಸ
ಲ್ಲಾಪ ಕಲಾಪ ಸಾಧುಜನ ಹೃನ್ಮಯನೀಶ ವಿನಾಯಕೋತ್ಸವ
ವ್ಯಾಪಿತಗೋತ್ರ ಧರ್ಮಯುತ ಭೋಗಿವಿಲಾಸ ಸುರೇಂದ್ರವಂದ್ಯನಿ
ರ್ಲೇಪನುಮಾಧವಂ ಕೃಪೆಯಿನಾವಗ ರಕ್ಷಿಸುವಂ ಧರಿತ್ರಿಯಂ ॥ ೧ ॥

X X X X

ವೃ॥ ಹರಿಪದಪದ್ಮ ಭೃಂಗನವನೀಸುರ ಸದ್ಗುರುಸೇವ್ಯ ನವ್ಯವಿ
ಸ್ತರ ಶುಭಚಿತ್ತನುತ್ತಮ ಚರಿತ್ರ ಲಸನ್ಮೃದುವಾಕ್ಯ ಭಾವ ಬಂ
ಧುರ ರಸ ರೀತಿ ಮಾರ್ಗ ವರ ಸಜ್ಜನ ಬಂಧು ವಿಲಾಸಮೂರ್ತಿ ಭಾ
ಸುರತರ ಕಲ್ಪಭೂರುಹ ಲಸತ್ ಕವಿಮಲ್ಲ ರಸಾಂಕ ಪಂಡಿತಂ ॥ ೨೫ ॥

ಅಂತ್ಯ : ಕಂ॥ ವರಚಿಕ್ಕುಪಾಧ್ಯರಾಯಂ
ಸಿರಿಯಂಸ ದಶಾವತಾರ ಚರಿತಮನೊಲವಿಂ
ಬರೆಯೆಂದಾಜ್ಞಾಪಿಸೆ ತಾಂ
ಬರೆದಂ ಲಕ್ಷ್ಮೀನೃಸಿಂಹನುರೆ ಭಕ್ತಿಯೊಳುಂ ॥ ೪೦ ॥

ಗದ್ಯ॥ ಇದು ವೃಂದಾರಕವೃಂದ ಮಣಿಮುಕುಟ ರಂಜಿತ ಶ್ರೀಮದಾದಿ ನಾರಾಯಣ ಶ್ರೀಚರಣ ಸರಸೀರುಹ ಮಕರಂದ ಷಟ್ಚರಣ ಸಲ್ಲಲಿತ ಮಲ್ಲರಸಾಂಕ ವಿರಚಿತಮಪ್ಪ ದಶಾವತಾರ ಚರಿತ ಮಹಾಪ್ರಬಂಧದೊಳ್ ಕಲ್ಕ್ಯವತಾರೋದ್ಯೋಗಂ ಏಕಾದಶಾಶ್ವಾಸಂ ಶ್ರೀ ದಶಾವತಾರ ಚರಿತ ಪ್ರಬಂಧಂ ಸಂಪೂರ್ಣಂ.

ವಿಷಯ : ದಶಾವತಾರದ ಕಥೆ.

ವಿಶೇಷ : ಪದ್ಯಗಳಿಗೆ ಪಾದವಿಂಗಡಣೆ ಇದೆ. ಮಧ್ಯೆ ಕೆಲವು ಪತ್ರಗಳು ಶಿಥಿಲ. ಸುಂದರಾಕ್ಷರ.

666

ಕೆ.ಬಿ. ೮೬/೨	**ದಾನವ್ರತಕಥೆ**	ಯಕ್ಷಗಾನ
೮.೨"×೬.೫"	?	?
೪೮-೫೭ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ದಾನಾವ್ರತ ಕಥೆ ಬರಿಯುವದಕ್ಕೆ ಶುಭಮಸ್ತು॥
ದ್ವಿಪದೆ ॥ ಶ್ರೀಹರಿಯ ಚಲುವ ಸತ್ರಾಜಿತನ ಮಗಳೂ
ಸ್ನೇಹದಿಂ ಪತಿದಾನವಿತ್ತುದ ವಿಲಾಸದೊಳೂ ॥
ನಾ ಪೇಳ್ವೆ ವಿಘ್ನಪಾತಕವು ಪರಿಹರವೂ
ಚೋಹವಲ್ಲಿದು ಸರ್ವಮಂಗಳ ಪ್ರದವೂ ॥
ನಳಿನನೇತ್ರನ ಚಿತ್ರವೃತ್ತಿಯ ಶಳದು ಮೆಚ್ಚಿಸಿಕೊಂಡೆ ಸುರತದಿ
ಭಳಿರೆ ರುಕ್ಮಿಣಿಗಿಂತ ತಾನತಿ ಚೆಲ್ವೆ ಕೋವಿದೆಯೂ ॥

ಅಂತ್ಯ : ತತ್ಸಮಯದಿ ಭರದಿ ರುಕ್ಮಿಣಿ ತಂದದಳಲೀ ಹರಿಯ ಸಂತೋಷಿದೆತು
ಯೇನೆದೊದವೆ ವೆಂಕಟಗೆ ಪರಮ ಪವಿತ್ರವೊ
ಶ್ರೀತುಳಶಿ ಭುವನದಲೀ ॥ ಮಂಗಳಾ ॥ ಜಲದೊಳಾಡಿಪ ಮತ್ಸ್ಯನಿಗೇ ॥
ದಾನಾವ್ರತ ಕಥಾ ಸಂಪೂರ್ಣಂ ॥

ವಿಷಯ : ಸತ್ಯಭಾಮೆಯು ಶ್ರೀ ಕೃಷ್ಣನನ್ನು ರುಕ್ಮಿಣಿಗೆ ದಾನಮಾಡಿದ ಕಥೆ.

ವಿಶೇಷ : ಇದೇ ಪುಸ್ತಕವಲ್ಲಿ ಪ್ರಹಲ್ಲಾದ ಚರಿತ್ರೆ, ಶ್ರೀ ಪ್ರಸನ್ನ ಕೃಷ್ಣ ಕೊರವಂಜಿ, ಸಮುದ್ರ ಮಥನ ಎಂಬ ಕಥೆಗಳಿವೆ.

667

ಕೆ ಎ. ೨೭	**ದಾಸರ ಪದಗಳು**	ಹಾಡು
೧೩.೨"×೮.೨"	ಹರಿದಾಸರು	ಸು. ೧೫೦೦
೧-೧೫೮ ಪುಟ	೩೩ ಪಂಕ್ತಿ	೧೫ ಅಕ್ಷರ

ಆದಿ : ದಾಸರ ಪದಗಳು.
೧ ॥ ರಾಗಾಮುಖಾರಿ ಝಂಪೆ ತಾಳಾ ॥
ಆರು ಹಿತವರು ನಿನಗೆ ಮೂರು ಮಂದಿಗಳೊಳಗೆ
ನಾರಿಯೋ ಧಾರುಣಿಯೊ ಬಲುಧನದ ಸಿರಿಯೊ॥ ॥ ಪಲ್ಲ ॥

ಅನ್ಯರಲಿ ಜನಿಸಿರ್ದ ಅಂಗನೆಯು ಕರತಂದು
ತನ್ನ ಮನೆಗವಳ ಯಜಮಾನಿ ಯನಿಸಿ
ಭಿನ್ನವಿಲ್ಲದೆಯರ್ಧದೇಹವೆನಿಸುವ ಸತಿಯು
ಕಣ್ಣಿನಲಿ ನೋಡಲಂಮಳು ಕಾಲವಶದಿ ॥ ೧ ॥

ಅಂತ್ಯ : ಸ್ವಾಮಿ ಪುಷ್ಕರಣಿಯು ವಾಸನಿಗೆ
ಭೂಮಿ ವರಾಹ ತಿಮ್ಮಪ್ಪನಿಗೆ
ಪ್ರೇಮದಿ ಜಗವನು ಸಲಹುವ ನಾಮದ
ಸೋಮ ಸನ್ನಿಭನಾದ ವೇಂಕಟಗೆ ॥ ೭ ॥

ವಿಷಯ : ದಾಸರ ಹಾಡುಗಳು.

ವಿಶೇಷ : ಕಲ್ಲಚ್ಚು ಪ್ರತಿ. ಇದು ೧೮೫೦ ರಲ್ಲಿ ಮಂಗಳೂರಿನಲ್ಲಿ ಛಾಪಿಸಿದ್ದು.

668

ಕೆ. ೪೩೨	ದಿವ್ಯಸೂರಿ ಚಾರಿತ್ರ	ಚಂಪು
೧೩.೯"×೧.೭"	ಚಿಕ್ಕುಪಾಧ್ಯಾಯ	೧೬೭೨
೧-೬೫ ಪತ್ರ	೮ ಪಂಕ್ತಿ	೭೦ ಅಕ್ಷರ

ಆದಿ : .... ನೈಷಿಸುಮನೋ
ಗೋತ್ರಾವನೋದ್ಯತ್ಸಮುಲ್ಲಾಸಂ ಸಂಮ್ಯಗನಂತಭೋಗ
.... ದ್ರವಮುಂ ॥ ೧ ॥
ಕಂ ॥ ಶ್ರೀಮದ್ದುಗ್ಧಾಂಬುಧಿ ಕಂನ್ಯಾಮಾನ
.... ದಾಮನೀಗೆ ಮಗೊಳ್ಪಂ

ಅಂತ್ಯ : ರಂಗಪತಿ ರಂಗಶಾಯಿಾ
ರಂಗಾಧಿಪ ರಂಗನಿವಾಸಾ
ಮಂಗಳ ಜಯ ಶುಭ ಶಿವ ಭ
ದ್ರಂಗಳ್ ಪೇಳ್ವಾಲಿಪರ್ಗೆ ವರ್ಧಿಕಜಸ್ರಂ ॥ ೧೩೪ ॥
ಗದ್ಯ ॥ ಯಿಮ ನಮಿತ ಹಿಮಕರಚೂಡ ಕಮಲಭವಪ್ರಮುಖ ಸುರಸ ಮುದಯ ಮೌಳಿ ಮಣಿಗಣ ಪ್ರಾಣಿ ಸಂಧ್ಯಾರಾಗಾನುಗುಣ ಪ್ರಚುರ ರುಚಿರ ತಾರಕಾಯಮಾನ ರಂಗವಿಭು ಚರಣ ಯುಗಳ ನಖ ಮಯೂಖ

ಸುಧಾಪೂರ ವಿಹಾರ ಮದ ಮರಾಳಿಭೂತ ಮಹಿಷಪುರವರ ಸಾಮ್ರಾಜ್ಯ ಸಂಪಂನ ರಾಜಾಧಿರಾಜ ರಾಜ ಪರಮೇಶ್ವರಾಪ್ರತಿಮ ಪ್ರೌಢ ಪ್ರತಾಪ ಸತ್ಯ ವಿಕ್ರಮ ಬಿರುದೆಂತೆಂಬರ ಗಂಡ ಯದುಕುಲ ನಳಿಸ ದಿನಕರನಾದ ಚಿಕದೇವ ಮಹಾರಾಯ ಪ್ರಸಾದ ಪರಿಪೂರ್ನ ಸಚಿವ ನಿಚಯ ತಿಲಕ ಶ್ರೀ ಚಿಕುಪಾಧ್ಯಾಯ ವಿರಚಿತಮಪ್ಪ ಪಂನಿದ್ರಾಳ್ವಾರ ಚರಿತ್ರಮೆಂಬ ಮಹಾಪ್ರಬಂಧದೊಳ್ ಶೇಷಾಂಶ ಭವರಾದ ಶ್ರೀ ಭಾಷ್ಯಕಾರ ಬೌದ್ಧ ವಿಜಯ ಯಾದವಗಿರಿ ನಾರಾಯಣ ದೇವರ ಜೀರ್ನೋದ್ಧರಣ ವೈಕುಂಠ ಯಾತ್ರಾದಿ ವರ್ನನಂ ಚತುರ್ದಶಾಶ್ವಾಸಂ ಸಂಪೂರ್ಣಂ॥ ಅಂತು ಆಶ್ವಾಸಗಳಕ್ಕಂ ಪದ್ಯ .... ಕ್ಕಂ .... ಮಂಗಳ ಮಹಾ ಶ್ರೀ ॥

ವಿಷಯ : ಆಳ್ವಾರುಗಳ ಚರಿತ್ರೆ.

ವಿಶೇಷ : ಮೊದಲನೆಯ ಪತ್ರದಲ್ಲಿ ಅರ್ಧಭಾಗ ಮಾತ್ರ ಇದೆ. ೩೦–೩೧ ಪತ್ರಗಳ ಮಧ್ಯೆ ಇರುವ ಒಂದು ಪತ್ರಕ್ಕೆ ಕ್ರಮಸಂಖ್ಯೆ ಇಲ್ಲ. ಕೊನೆಯ ಪತ್ರ ಸಂಖ್ಯೆ ೬೫. ಶಕಟರೇಫದ ಬಳಕೆ ಇದೆ. ಮಧ್ಯೆ ಒಂದೆರಡು ಓಲೆಗಳ ಅಂಚು ಮುರಿದಿದೆ.

669

ಕೆ.ಬಿ. ೪೫	**ದಿವ್ಯಸೂರಿ ಚಾರಿತ್ರ**	ಚಂಪು
೭.೭"×೬.೨"	ಚಿಕ್ಕುಪಾಧ್ಯಾಯ	೧೬೭೨
೧-೧೨೬ ಪತ್ರ	೧೧ ಪಂಕ್ತಿ	೨೯ ಅಕ್ಷರ

ಆದಿ : ಆಳ್ವಾರು ಚರಿತ್ರೆ ಬರಿಯುವದಕ್ಕೆ ಶುಭಮಸ್ತು ।
ಶ್ರೀಸತ್ಕಾಂಚಿ ಸದಾ ನವಾರಿ ವಿಭವಂ ಕಲ್ಯಾಣದೀವ್ಯನ್ಮಹಾ
ವಾಸಂ ಗೋಪರಿಪಾಲನೈಷಿ ಸುಮನೋ ಗೋತ್ರಾವನೋದ್ಯತ್ಸಮು
ಲ್ಲಾಸಂ ಸಮ್ಯಗನಂತ ಭೋಗ ಲಸದಂಗಂ ರಾಜಹಂಸಾಶ್ರಯೋ
ದ್ಭಾಸಂ ಸತ್ಯ ಪರಕ್ರಮಾಪ್ರತಿಮನೆಂಮುಂ ಪಾಲಿಕಾಚಂದ್ರಮುಂ ॥ ೧ ॥
ಕಂ ॥ ಶ್ರೀಮದ್ದುಗ್ಧಾಂಬುಧಿ ಕ
ನ್ಯಾ ಮಾನಸೈಕ ಖೇಲನಹಂಸಂ
ಸಾಮಜವರದಂ ಜಲದ
ಶ್ಯಾಮಂ ಶ್ರೀರಂಗಧಾಮನೀಗೊಳ್ಪಂ ॥ ೨ ॥

ಅಂತ್ಯ : ರಂಗಪತಿ ರಂಗಶಾಯಿ
ರಂಗಾಧಿಪ ರಂಗಧಾಮ ರಂಗನಿವಾಸಾ
ಮಂಗಳ ಜಯ ಶುಭ ಶಿವಭ
ದ್ರಂಗಳ್ ಪೇಳ್ವಲಿಪರ್ಗೆ ವರ್ಧಿಕಜಸ್ರಂ || ೧೩೪ ||

ಗದ್ಯ || ಇದು ನಮಿತ ಹಿಮಕರ ಚೂಡ x x x x ಶ್ರೀ ಚಿಕ್ಕುಪಾಧ್ಯಾಯ್ಯ ವಿರಚಿತಮಪ್ಪ ದಿವ್ಯಸೂರಿ ಚಾರಿತ್ರಮೆಂಬ ಮಹಾ ಪ್ರಬಂಧದೊಳ್ ಶೇಷಾಂಶಭವರಾದ ಶ್ರೀ ಭಾಷ್ಯಕಾರ ಬೌದ್ಧ ವಿಜಯ ಯಾದವಗಿರಿ ನಾರಾಯಣ ದೇವಾಗಾರ ಜೀರ್ಣೋದ್ಧರಣ ವೈಕುಂಠ ಯಾತ್ರಾದಿ ವರ್ಣನಂ ಚತುರ್ದಶಾಶ್ವಾಸಂ ಸಂಪೂರ್ಣಂ || ಅಂತೂ ಆಶ್ವಾಸ ೧೪ ಕ್ಕಂ ಮಂಗಳ ಮಹಾ || ಪ್ರಥಮಾಶ್ವಾಸ ೧ ಕ್ಕೆ|| ವೃ ೫೦ || ಕಂ ೪೭ || ವ ೯ || ಅಂತೂ ೧೦೭ || x x x ಚತುರ್ದಶಾಶ್ವಾಸಕ್ಕೆ ವೃ ೪೮ ಕಂ ೭೭ ||ವ ೯|| ಅಂತೂ ೧೩೪ || ಅಂತೂ ಆಶ್ವಾ ೧೪ ಕ್ಕೆ|| ವೃ ೧೫೭ || ಕಂ ೩೭೦ || ವ ೧೦೧ || ಅಂತೂ ೮೩೪ ಕ್ಕಾಂ ಮಂಗಳ ಮಹಾ ಶ್ರೀ ||

ವಿಷಯ : ಆಳ್ವಾರುಗಳ ಚರಿತ್ರೆ.

ವಿಶೇಷ : ಈ ಪ್ರತಿಯನ್ನು ಪ್ರತ್ಯಂತರದೊಡನೆ ತಾಳೆನೋಡಿ ಕಂಡುಬಂದ ವಿಶೇಷ ಗಳನ್ನು ಕೆಂಪು ಶಾಯಿಯಿಂದ ಗುರ್ತಿಸಿದೆ. 27–3–1901 ರಲ್ಲಿ ಇದನ್ನು ತಾಳೆ ನೋಡಿ ಮುಗಿಸಿರುತ್ತಾರೆ.

670

ಕೆ. ೬೧೮	**ದಿವಾಕರ ಪದ್ಧತಿ ಪ್ರದೀಪಿಕಾ**	ಶ್ಲೋಕ, ಟೀಕು
೧೪.೪'×೧.೪"	ತಿಮ್ಮರಾಯ	?
೧–೬೨ ಪತ್ರ	೭ ಪಂಕ್ತಿ	೫೫ ಅಕ್ಷರ

ಆದಿ : ಶುಭಮಸ್ತು.
ಆದೀತ್ಯ ಜ್ಯೋತಿಷಂ ಶಾಸ್ತ್ರಮಪ್ರಮೇಯಾನ್ಮಃ ಗುರೋಃ |
ತಸ್ಮಾದ್ಧೋರಾವಿದಾಮ್ ಶ್ರೇಷ್ಟಾತ್ ಭಾರಧ್ವಾಜಾ ಕುಲೋದ್ಭವಾತ್ ||
ತ್ರಿಸ್ಕಂದ ಶಾಸ್ತ್ರ ಕಲಶಾಂಬುಧಿ ಮಂದರೇಣ
ದೈವಜ್ಞ ಮತ್ತಗಜ ಕೇಸರಿಣಾ ಚ
ಟೀಕಾ || ಶ್ರೀ ತಿಮ್ಮರಾಯ ವಿದುಷಾ ಕೃಪಯಾ ಹರೇಸ್ತು |
ಸನ್ತ್ರತನ್ಯತೇ ಮೃದು ದಿವಾಕರ ಪದ್ಧತೇಸ್ಯ ||

ಶ್ರೀಮಚ್ಛಿವಾಕ್ಯಂ ಗುಣಿತಜ್ಞ ಚಕ್ರ
ಚೂಡಾಮಣಿಂ ಸಜ್ಜನ ಬೃನ್ದವನ್ದ್ಯಮ್
ವಿದುರ್ವಿದೋಯಮ್ ಧಿಷಣೇನ ತುಲ್ಯಂ
ತನ್ನೌಮಿ ನಿತ್ಯಂ ಧಿಷಣಾಪ್ತಿ ಹೇತೋಃ ॥

ಈ ಶ್ಲೋಕದ ಅಭಿಪ್ರಾಯ ಯಾವನೊಬ್ಬನು ಶಿವನೆಂಬ ಜ್ಯೋತಿಷನ್ನು ವಿದ್ವಾಂಸರುಗಳು ಬೃಹಸ್ಪತಿಯೊಡನೆ ಸಮಾನವಾಗಿ ಹೇಳುವರು. ಆ ಸಜ್ಜ ಸಮೂಹಗಳಿಂದ ವಂದ್ಯನಾದ ಜ್ಯೋತಿಷರುಗಳ ಸಮೂಹಕ್ಕೆ ಶಿರೋರತ್ನವಾದ ಶಿವನೆಂಬ ಜ್ಯೋತಿರ್ವಿತ್ತುವನ್ನು ಬುದ್ಧಿಪ್ರಾಪ್ತಿಗೆ ಆವಾಗಲೂ ನಮಸ್ಕರಿಶಿಯೇನು ಎಂಬುದರ್ಥ.

ಅಂತ್ಯ : ಈ ಅರ್ಥಕ್ಕೆ ಮನುವಿನ ವಚನ.
ಆಚಾರಾಲ್ಲಭತೇಪ್ಯಾಯುರ್ರಾಚಾದೀಪ್ಸಿತಾಃ ಪ್ರಜಾಃ
ಆಚಾರಾದ್ಧನಮಕ್ಷಯ್ಯಮಾಚಾರೋ ಹನ್ತ್ಯಲಕ್ಷಣಂ
ಈ ಅರ್ಥಕ್ಕೆ ತಾನೆ ಆಶ್ವಲಾಯನ ವಚನ. X X X
ಇತಿ ಶ್ರೀ ತಿಮ್ಮರಾಯ ವಿರಚಿತಾಯಾಂ ಜಾತಕಾಲಂಕಾರಖ್ಯೇ ಕರ್ನ್ನಾಟ ಭಾಷಾಯಾಂ ದಿವಾಕರಪದ್ಧತಿಪ್ರದೀಪೇ ಆಯುರ್ದಾಯ ಸಾಧಾನಾಧ್ಯಾಯಃ ಪಂಚಮಃ ಶ್ರೀ

ವಿಷಯ : ಜ್ಯೋತಿಷಫಲ ಗ್ರಂಥ.

ವಿಶೇಷ : ಗ್ರಂಥಲಿಪಿ. ಭಾಷೆ ಸಂಸ್ಕೃತ. ಇದಕ್ಕೆ ಟೀಕು ಕನ್ನಡಭಾಷೆಯಲ್ಲಿದೆ. ಐದು ಅಧ್ಯಾಯಗಳಿವೆ.

671

ಕೆ.ಎ. ೨೭೫	**ದಿವಾಕರಪದ್ಧತಿ ಪ್ರದೀಪಿಕಾ**	ಶ್ಲೋಕ, ಟೀಕು
೧೩.೩"×೮.೩"	ತಿಮ್ಮರಾಯ	?
೧-೪೫ ಪತ್ರ	೨೨ ಪಂಕ್ತಿ	೨೫ ಅಕ್ಷರ

ಆದಿ : ಅಧೀತ್ಯ ಜ್ಯೋತಿಷಂ ಶಾಸ್ತ್ರಮಪ್ರಮೇಯಾನ್ಮಹಾಗುರೋಃ ।
ತಸ್ಮಾದ್ಧೀರಾವಿದಾಂ ಶ್ರೇಷ್ಠಾದ್ಭಾರದ್ವಾಜ ಕುಲೋದ್ಭವಾತ್ ॥ ೧ ॥
ತ್ರಿಸ್ಕನ್ಧಶಾಸ್ತ್ರಕಲಶಾಮ್ಬುಧಿ ಮನ್ದರೇಣ
ದೈವಜ್ಞ ಮತ್ತಗಜ ಕೇಸರಿಣಾಚ ಟೀಕಾ

ಶ್ರೀ ತಿಮ್ಮರಾಯ ವಿದುಷಾ ಕೃಪಯಾ ಹಾರೇಸ್ತು
ಸನ್ತನ್ಯತೇ ಮೃದು ದಿವಾಕರ ಪದ್ಧತೇಸ್ಸಾ ॥
ಶ್ರೀಮಚ್ಛಿವಾಖ್ಯಂ ಗಣಿತಜ್ಞಚಕ್ರಚೂಡಾಮಣಿಂ ಸಜ್ಜನ ಬೃನ್ದವನ್ದ್ಯಮ್
ವಿದುರ್ವಿದೋಯಂ ಧಿಷಣೇನ ತುಲ್ಯಾಂ ತನ್ನಾಮ ನಿತ್ಯಂ ಧಿಷಣಾಪ್ತಿ ಹೇತೋಃ ॥

ಈ ಶ್ಲೋಕದ ಅಭಿಪ್ರಾಯ ಒಬ್ಬಾನೊಬ್ಬ ಶಿವನೆಂಬ ಜ್ಯೋತಿಷ್ಕನು ವಿದ್ವಾಂಸರುಗಳ ಬೃಹಸ್ಪತಿಯೊಡನೆ ಸಮಾನವಾಗಿ ಹೇಳುವರು.

ಅಂತ್ಯ: ಸರ್ವಸಂಪನ್ನಸಂ ಮರ್ತ್ಯಸ್ಸದಾಚಾರಪರೋ ಲಭೇತ್ ॥
ತ್ರಿಸ್ಕಂಧ ಶಾಸ್ತ್ರ ಕಲಶಾಂಬುಧಿ ಮಂದರೇಣ
ದೈವಜ್ಞ ಮತ್ತಗಜ ಕೇಸರಿಣಾ ಚ ಟೀಕಾ ।
ಶ್ರೀ ತಿಮ್ಮರಾಯ ವಿದುಷಾ ಕೃಪಯಾ ಹಾರೆಸ್ಮ
ಸಂತನ್ಯತೇ ಮೃದು ದಿವಾಕರ ಪದ್ಧತೆಸ್ಸಾ ॥
ಇತಿ ಶ್ರೀ ತಿಮ್ಮರಾಯ ವಿರಚಿತಾಯಾಂ ಜಾತಕಾಲಂಕಾರಾಖ್ಯೆ ಕರ್ಣಾಟಕ ಭಾಷಾಯಾಂ ದಿವಾಕರ ಪದ್ಧತಿ ಪ್ರದೀಪೆ ಆಯುರ್ದಾಯ ಸಾಧನಾ ಧ್ಯಾಯಃ ಪಂಚಮಃ ॥
ಶ್ರಾವಣೆ ಶುಕ್ಲ ಸಪ್ತಮ್ಯಾಮಬ್ಧೆ ಮನ್ಮಥಸಂಜ್ಞಿತೆ ।
ಲಿಖಿತಂ ತಿರುಮಲಾಖ್ಯೇನ ಪ್ರೀತ್ಯೈ ಭೂಯಾದ್ರಮಾಪತೇಃ ॥

ವಿಷಯ : ಜ್ಯೋತಿಷ ಫಲಗ್ರಂಥ.

ವಿಶೇಷ : ಸ್ಫುಟಾಕ್ಷರ. ಪ್ರತಿಯಕಾಲ ೧೭-೫-೨೨ ಎಂದಿದೆ.

672

ಕೆ. ೧೬೬/೬	**ದೀಕ್ಷಾಬೋಧೆ**	ಕಂದ, ವೃತ್ತ, ರಗಳೆ
೧೦.೧"×೨"	ಕೆರೆಯ ಪದ್ಮರಸ	ಸು. ೧೧೬೦
೮೩—೧೪೬ ಪತ್ರ	೧೦ ಪಂಕ್ತಿ	೫೦ ಅಕ್ಷರ

ಆದಿ : ದೀಕ್ಷಾಬೋಧೆ.
ಶ್ರೀಮದಗಜೇಶ ಕರುಣಿ ಸು
ಧಾಮಯ ನತಜನ ಚಕೋರಚಯ ಹಿಮಕರ ಸು
ತ್ರಾಮುಕಹರಿಸಿ ವಿತಗುಣ
ನಾಮನೆ ಸಲಹೆಂನ ವಿಶ್ವನಾಥ ಪ್ರಭುವೇ ॥ ೧ ॥

ಅಂತ್ಯ : ಶರಣು ಸದ್ಗುರುವೆ ವರಗುರು
ಶರಣು ಶರಣು ಶರಣು ಶರಣನವರತಂ
ಶರಣೆಂಬ ಭಕ್ತಿ ಮುಕ್ತಿಯು
ಕರುಣಿಸಿದನು ತಾನು ವಿಶ್ವನಾಥ ಕೃಪೆಯಿಂ ||
ಇಂತೀ ದೀಕ್ಷಾಬೋಧೆಯು
ನಂತುವನಜುವರ್ಗ್ಗೆ ಪೇಳ್ವ ಕೇಳ್ವಾರ್ತ್ಥರಿಗಂ
ಅಂತರ್ಮಲಭವ ಹರೆಗುಂ
ಸಂತತ ನಿಜಮುಕ್ಕು ವಿಶ್ವನಾಥ ಕೃಪೆಯಿಂ ||
ದೀಕ್ಷಾಬೋಧೆ ಸಮಾಪ್ತ.

ವಿಷಯ : ವೀರಶೈವ ತತ್ತ್ವ.

ವಿಶೇಷ : ಸಮಗ್ರವಾಗಿದೆ.

673

ಕೆ.ಬಿ. ೮೯	**ದೀಕ್ಷಾಬೋಧೆ**	ಕಂದ, ವೃತ್ತ, ರಗಳೆ
೭.೮"×೬.೪"	ಕೆರೆಯ ಪದ್ಮರಸ	ಸು. ೧೧೬೦
೧–೨೫೧ ಪುಟ	೧೨ ಪಂಕ್ತಿ	೨೨ ಅಕ್ಷರ

ಆದಿ : ದೀಕ್ಷಾಬೋಧೆ
ಕಂದ || ಶ್ರೀಮದಗಜೇಶ ಕರುಣಿ ಸು
ಧಾಮಯ ನತಜನ ಚಕೋರಚಯ ಹಿಮಕರ ಸು
ತ್ರಾಮಕ ಹರಿಸೇವಿತಗುಣ
ನಾಮನೆ ಸಲಹೆನ್ನ ವಿಶ್ವನಾಥಪ್ರಭುವೇ || ೧ ||

x x x x

ಮತಿಯ ಚಮತ್ಕೃತಿಯಲ್ಲಿದು
ಶ್ರುತಿ ಶಾಸ್ತ್ರಾಗಮ ಪುರಾಣ ರಹಸ್ಯಾದಿಗಳೊಳ
ಗತಿಶಯ ಯುಕ್ತಾರ್ಥಂ ಸ
ಮ್ಮತವೆನೆ ಪೇಳಿದೆನು ಚಿತ್ತವಿಸಿ ಭಕ್ತಜನಂ || ೭ ||

ಅಂತ್ಯ : ಕಂದ || ಶರಣು ಸದ್ಗುರುವೆ ವರಗುರು
ಶರಣು ಸದಾಶರಣು ಶರಣನವರತಂ

ಶರಣೆಂಬೆ ಭಕ್ತಿಯುಕ್ತಿಯು
ಕರುಣಿಸಿದನು ತಾನು ವಿಶ್ವನಾಥಂ ಕೃಪೆಯಿಂ ॥
ಇಂತೀ ದೀಕ್ಷಾಬೋಧೆಯ
ನಂತುವನರಿವರ್ಗೆ ಪೇಳ್ದೆ ಕೇಳ್ದಾರ್ತ್ರರಿಗಂ
ಅಂತರ್ಮಲ ಭವ ಹರಗುಂ

ವಿಷಯ : ವೀರಶೈವತತ್ತ್ವ.

ವಿಶೇಷ : ಅಸಮಗ್ರ ಪ್ರತಿ. ಮಧ್ಯೆಮಧ್ಯೆ ಕೆಲವು ಸಂಸ್ಕೃತ ಸಾಕ್ಷಿಗಳಿವೆ.

674

ಕೆ.ಬಿ. ೧೭೯/೫	**ದೂರ್ವಾಸ ಚರಿತ್ರೆ**	ಭಾಮಿನೀ ಷಟ್ಪದಿ
೮"×೬.೪"	?	?
೪೬–೫೩ ಪತ್ರ	೧೪ ಪಂಕ್ತಿ	೩೨ ಅಕ್ಷರ

ಆದಿ : ದೂರ್ವಾಸ ರುಷಿಯ ಚಿಕ್ರರಿಟೆದ ಸಂಧಿ
ಪಲ್ಲ॥ ಚಕ್ರಲುತಿ ಬೆನ್ನಟ್ಟೆ ಭರಲಂ
ದಕ್ರಮದ ಪಲಿದಲ ಪಲಾಯನ
ಚಕ್ರವರ್ತಿ ಮುನೀಂದ್ರನೈದಿದನಚ್ಯುತನ ಪುರವಾ ॥
ಪದನೂ ॥ ಅರಸ ಕೇಳು ಮುಕುಂದ ದಾಸರು
ಪರಿಭವಕೊಳಗಹರೇ ಬಂದುದು
ಪರಮಪುರುಷನ ಚಿಕ್ರವದು ಸಂಕಲದಾ ಲಾಕ್ಷಣಿಕೆ
ವುರುವ ಕೃತ್ಯಯ ನಟ್ಟೆ ಸುಟ್ಟುದು
ಸುರರು ಭಾಪೆನೆ ದಾರೆಗಳ ದ
ಳ್ಳುರಿಯ ಚೂಣಿಯಲಿ ಚುಂಬಿಸುದುದಂಬರವಾ ॥ ೧ ॥

ಅಂತ್ಯ : ಯಿದು ಪರಮಮಂಗಳ ಮಹೋದಯ
ಯಿದು ಸಾಧಯಿಷ್ಟಾರ್ಥವರ್ದನ
ವಿದು ಮುಕುಂದ ಪದಾಬ್ಜ ಭಕ್ತಪ್ರದಾ ಸುಖಃಪ್ರದವೂ
ವಿದಿತ ಭಾಗವತಾನುಭಾವವ
ನಿದನು ಕೇಳಿ ಪೇಳುವ ಸದು
ಹೃದೆಯರನು ಪಾಲಿಸುವನಾ ನಿತ್ಯತ್ಮ ಮುರವೈರಿ ॥ ೩೧ ॥

ಅಧ್ಯಾಯ ಸಂಪೂರ್ನ ಅಧ್ಯಾಯ ೩ ಕಾಂಮ ಮಂಗಳ ಮಹಾಶ್ರೀ ಜಯನು
೧೨೩ ಕಾಪುಂ ಮಂಗಳ ಮಹಾಶ್ರೀ

ವಿಷಯ : ದೂರ್ವಾಸನ ಚರಿತ್ರೆ.

ವಿಶೇಷ : ಇದರಲ್ಲಿ 'ಲ' ಎನ್ನುವ ಲಿಪಿ ವಿಚಿತ್ರವಾಗಿದೆ. ಈ ಗ್ರಂಥದೊಂದಿಗೆ ವಿರೂಪಾಕ್ಷ ಶತಕ, ಸದಾಶಿವ ಶತಕ, ಪ್ರಾಣೇಶ್ವರ ಶತಕ, ಅಂಬರೀಶ ಚರಿತ್ರೆ, ಧ್ರುವ ಚರಿತ್ರೆ, ಗುರುಶಿಷ್ಯ ಸಂವಾದ ಎಂಬೀ ಗ್ರಂಥಗಳಿವೆ.

675

ಕೆ.ಬಿ. ೪೦೩/೨	ದೂರ್ವಾಸ ಭೋಜನ	ಯಕ್ಷಗಾನ
೮.೩"×೬.೪"	?	?
೧೮–೧೯ ಪತ್ರ	೨೦ ಪಂಕ್ತಿ	೨೩ ಅಕ್ಷರ

ಆದಿ : ದೂರ್ವಾಸ ಭೋಜನ ಬರಿಯುವದಕ್ಕೆ ನಿರ್ವಿಘ್ನ । ಭಾಮಿನಿ ಷಟ್ಪದಿ
ಎನಲು ಕೇಳುತ ಹರುಷದಿಂದಲಿ
ಜನಪತಿಯು ಸತ್ಕರಿಸುತಾತನ
ಮುನಿಪನೀ ಬಹುಬಳಲಿದೆಯ ಸಾಕ್ಷಾತ್ ಸ್ಥಾಣುವಲಾ
ನಿನಗೆ ಯೀ ಪರಿಶ್ರಮಗಳಾದುದೆ
ವಿನುತ ಕರಲಾಘವವನಿತ್ತಾ
ಮುನಿಯ ಕರದೊಯ್ದಾಗ ಕುಳ್ಳಿರಿಸಿದನು ಪಾರಣೆಗೆ ॥ ೧ ॥

ರಾಗ ಯರಕಲ ಕಾಂಭೋದಿ ಆದಿತಾಳ
ಚಂದದಿಂದ ಕುಳ್ಳಿರಿಸುತಲೆತಿವರಗೆ
ಬಂದಿಹ ಶಿಷ್ಯರಿಗೇ
ತಂದು ಶಾಖಗಳನು ಅಂದು ಬಡಿಸೆ
ಯೆಂದೆಂದೂ ಕಾಣಲಿಲ್ಲೆಂದು ಹರುಷಿಸಲೂ ॥ ಪ ॥

ಅಂತ್ಯ : ಪಾವನಾತ್ಮಕನಾದ ದೇವದೇವೋತ್ತಮಗೆ
ಭಾವಿಸಲ್ಕರಿಯದದ ಭಾವನಿಂಗೆ
ಭಾವಜಾರಿಸ್ತುತ್ಯಸೀಯ್ಯೆ ಭಕ್ತರಿಗಿಷ್ಟ
ಕೋವಿದನು ಶ್ರೀವಾಸುದೇವನಿಂಗೆ ॥ ೩ ॥

ದೂರ್ವಾಸ ಭೋಜನಮ್ ಸಮಾಪ್ತಮ್ ॥

ವಿಷಯ : ದೂರ್ವಾಸ ಋಷಿಯ ಭೋಜನಕ್ಕೆ ಬಡಿಸಿದ ಪದಾರ್ಥಗಳ ವಿವರ.

ವಿಶೇಷ : ಇದೇ ಪುಸ್ತಕದಲ್ಲಿ ಪುತ್ರಕಾಮೇಷ್ಟಿ, ಕನಕಾಂಗೀಕಲ್ಯಾಣ, ಅಂಬರೀಷ ಚರಿತ್ರೆ, ಮಾರ್ಕಂಡೇಯ ಚರಿತ್ರೆ ಎಂಬ ಇತರ ನಾಲ್ಕು ಕೃತಿಗಳಿವೆ.

676

ಕೆ.ಬಿ. ೪೪೬	**ದೇವರದಾಸಿಮಯ್ಯನ ಪುರಾಣ**	ಭಾಮಿನೀಷಟ್ಪದಿ
೮.೩"×೬.೫"	ವಿರೂಪಾಕ್ಷ ದೇಶಿಕ	?
೧—೧೮೧ ಪತ್ರ	೨೨ ಪಂಕ್ತಿ	೧೩ ಅಕ್ಷರ

ಆದಿ : ಶ್ರೀದೇವರದಾಸಿಮ್ಮೈಯ್ಯನವರ ಪುರಾಣವು (ವಿರೂಪಾಕ್ಷ ದೇಶಿಕ ಕೃತವು)
ಬರೆಯುವದಕ್ಕೆ ನಿರ್ವಿಘ್ನಮಸ್ತು ||

ಭಕ್ತಿಸ್ಥಲೊಂನತೀ ಸಿದ್ಧಾಂತ ಶಿಖಾಮಣಿಯಂ

ಶ್ಲೋಕ || ಬ್ರಹ್ಮವಿಷ್ಣುಸುರಾಧೀಶಾ ಜಗತ್ಕಾರಣ ತಾರಣಂ |
ದೇವದೇವ ಜಗಂನಾಥ ವಂದೇ ಮಾನ ಪದಾಂಬುಜಾ ||

x x x x

ಪಲ್ಲವಾ || ದೇವನಪ್ಪಣೆಗೊಂಡು ಮುದದಿಂ
ಭೂವಳಿಯ ಪಾವನ ನಿಮಿತ್ಯದಿ
ದೇವಗಣವರನವತರಿಸಿದನು ಕೇಳಿ ಸಜ್ಜನರು ||

x x x x

ಶರಣ ದೇವರದಾಸಿಮ್ಮೈಯ್ಯನ
ಚರಿತೆ ಮೊದಲಿರಲೀತ ಪೇಳ್ವುದು
ಮರುಳತನವೆಂನ್ನದಿರಿ ಪೇಳುವೆನವನ ವಂಶೀಕರು
ಕರಮುಗಿವುತೀ ಕ್ರುತಿಯು ಸಂಸ್ಕೃತ
ವಿರಲದನು ಕರ್ನಾಟ ಭಾಷೆಯೊ
ಳೊರೆಯನಲು ಪೇಳಿದೆನು ಕೇಳ್ವದು ಸಕಲ ಸಜ್ಜನರು || ೧೩ ||

ಅಂತ್ಯ : ಮೊದಲು ಸಕ್ಕದಮಿರಲು ಕರ್ನಾ
ಟದ ಬಗೆಯ ಮೃದು ಮಧುರ ಸರಸಾ
ಸ್ಪದವೆನಿಸಿ ಮುದನೂರದಾಸನ ಕೃತಿಯು ಹರುಷದೊಳು

ಸದಮಲೋತ್ತಮ ಮತಿಯುತಂ ನೀಂ
ಪ್ಪದ ಗುಣಾಂಕಂ ಲಿಂಗಗುರುಚರ
ಪದಭಜಕ ವಿರುಪಾಕ್ಷ ದೇಶಿಕನು ಪೇಳಿದನು ಸಂತಸದಿ ॥ ೨೨ ॥

X X X X

ಸಂಧಿ ಹದಿನೇಳಕ್ಕೆ ಪದನು ೧೧೭೭ಕ್ಕೆ ಮಂಗಲಮಹಾಶ್ರೀ

ಇತಿ ಶ್ರೀ ದೇವರದಾಸಿಮಯ್ಯನವರ ಪುರಾಣ ಸಂಪೂರ್ಣ ಶಕ ೧೭೯೨ ಪ್ರಮೋದನಾಮ ಸಂವತ್ಸರ ಮಾಸಮಿತಿ ಆಶ್ವಯುಜ ಕೃಷ್ಣಪಕ್ಷ ೧೩ ಉತ್ತರಾನಕ್ಷತ್ರಯ್ಯೆಯಿಂದ್ರ ನಾಮಯೋಗ ಗಜಕರ್ಣ ಶನಿವಾರ ದಿವಸ ತೀನ ಪಹರಕ್ಕೆ ಸಮಾಪ್ತ ಮಂಗಲಮಹಾ

X X X X

ಭಂಕಾಪುರ ರುದ್ರಪ್ಪನ ಪುತ್ರನಾದ ಶಿವಯೋಗಪ್ಪನು ತಮ್ಮ ಭಕ್ತಿಗೋಸ್ಕರ ವಾಗಿ ಬರಸಿದರು ಯಿನ್ನು ಯೇಕೆಂದರೆ ವಾಲೆಗಳು ೧೪೧॥ ಈ ಪುಸ್ತಕವ ಬರೆದಂತವ ಯಾರೆಂದರ ಹರಸೂರ ಬಯ್ಯನು ಬರದ ಸತ್ಯ.

ವಿಷಯ : ದೇವರ ದಾಸಿಮಯ್ಯನ ವಿಚಾರ.

ವಿಶೇಷ : "ಶ್ರೀಮಾನ್ ಎಂ. ಎಸ್. ಬಸವಲಿಂಗಯ್ಯನವರು ಉತ್ತರ ಕರ್ಣಾಟಕಕ್ಕೆ ಸಂಚಾರ ಹೋಗಿದ್ದಾಗ ಅಕ್ಕಲಕೋಟೆಯ ನ್ಯಾಯಾಧೀಶ ಮಿ॥ ಕಾಪಸೆ ಯವರ ಮೂಲಕ ಅಕ್ಕಲಕೋಟೆಯ ಸಾಹುಕಾರ್ ಮ॥ ಮಹಾಂತಪ್ಪ ಕೊಂಪ ಇವರಿಂದ ಎರವಾಗಿ ತಂದಿದ್ದ ಕೈಬರಹದ ಕಾಗದದ ಪುಸ್ತಕದ ಪ್ರತಿ. ಶಿವಂ ಭೂಯಾತ್" ಎಂದು ಕೊನೆಯ ಪತ್ರದಲ್ಲಿದೆ.

677

ಕೆ. ೨೦/೩	ದೇವರಾಜ ವಲ್ಲಭಾಷ್ಟಕ ಇತ್ಯಾದಿ	ಕಂದ, ರಗಳೆ
೯.೨"×೧.೪"	?	?
೨೯—೩೪ ಪತ್ರ	೬ ಪಂಕ್ತಿ	೩೮ ಅಕ್ಷರ

ಆದಿ : ಲೋಕಾಕಾರಮೆನಿತುಂ
ಏಕೈಕಧ್ಯಾನದಿಂದ ಭಾಪಿಸುವವರುಂ
ಶ್ರೀಕರಮೆನಿಸುವ ಶಾಶ್ವತ
ಲೋಕೋತ್ತರಮೆನಿಪ ಸುಖದ ಕಣಿಯುನಿಪ್ಪರುಂ ॥

ಕಾಲಮೂಱು ಕರ್ಮ್ಮವೆಂಟು ಬೀಳದೋಷದವಯವಂಗ
ಕೋಳಿಯೊಳಗೆ ಸಿಕ್ಕಿ ನಾನು ಸೇದಿಬಡುತಲಿರ್ದ್ದೆನಾಂ
ಲೀಲೆಯಿಂದ ಉಚ್ಚನೀಚ ಕುಲದೊಳೆಲ್ಲ ಭ್ರಮಿಸಿದೇಂ
ಕಾಲಕರ್ಮ್ಮ ವಿಜಯ ಸಲಹು ದೇವರಾಜ ವಲ್ಲಭಾ ॥ ೧ ॥

ಅಂತ್ಯ : ಜಯದುರಿತ ವಿಪಿನ ದಹನಾ
ಜಯ ನಿರ್ಮ್ಮಲ ಚರಿತ ವಿಮಲ ಕೇವಲಬೋಧಾ
ಜಯತಯ ಗುಣಸಿಂದೋ ಜಯ
ಜಯ ಪರಮಾತ್ಮ ಪ್ರಣೀತ ಸದ್ಭಾವಾ

ವಿಷಯ :ದೇವರಾಜವಲ್ಲಭ ಸ್ತುತಿ.

ವಿಶೇಷ : ಸಮಗ್ರ. ಶಕಟರೇಫ ಪ್ರಯೋಗವಿದೆ. ಇದರಲ್ಲಿ ಇನ್ನೂ ಒಂದೆರಡು ಸ್ತುತಿಗಳಿವೆ. ಆದರೆ ಅಂತ್ಯವನ್ನು ೨೬ ನೆಯ ಪತ್ರದಿಂದ ಗ್ರಂಥಕ್ಕೆ ಸಂಬಂಧಿಸಿದಂತೆ ಇಲ್ಲಿ ಕೊಟ್ಟಿದೆ. ಇದಲ್ಲದೆ ಯೋಗಾಮೃತ, ಲೋಕಾಕಾರ ಸ್ವರೂಪ, ಅನುಪ್ರೇಕ್ಷೆ, ಶಾಸ್ತ್ರಸಾರಸಮುಚ್ಚಯ, ಜಿನೇಶ್ವರಾಷ್ಟಕ ಎಂಬ ಗ್ರಂಥಗಳು ಇದೇ ಕಟ್ಟಿನಲ್ಲಿವೆ.

678

ಕೆ.ಎ. ೩೦೯	**ದೇವಾಂಗದಾಸಿಮಯ್ಯನ ಪುರಾಣ**	ಸಾಂಗತ್ಯ
೧೩.೨"×೮.೩"	ರಾಘವಾಂಕ	ಸು. ೧೧೬೫
೧-೧೪೯ ಪತ್ರ	೨೨ ಪಂಕ್ತಿ	೧೩ ಅಕ್ಷರ

ಆದಿ : ದೇವಾಂಗದ ಪುರಾಣ ಬರೆವುದಕ್ಕೆ ಶುಭಮಸ್ತು—ಸಾಂಗತ್ಯ ಗ್ರಂಥ.
ಶ್ರೀ ಶೈಲಾದಾಗತೋ ಭಕ್ತಃ ಪಂಚದಂಡ ಪ್ರದಾಪಯೇತ್ ।
ಸರ್ವಸಿದ್ಧಿಮವಾಪ್ನೋತಿ ದಂಡೇನಾಪಂಡಿತಃ ಫಲಂ ॥ ೧ ॥

ಪಲ್ಲವ॥ ಹರನ ನೆನದು ಸುಖಿಯಾಗೆಲೆ ಮನವೆ
ನೆರದಭವವನೊಪ್ಪಿಸೀಗಾ ॥

X X X X

ಸುರನರವುರಗ ಮುಂತಾದಭಿನಾನವ
ದೊರಕೊಂಡು ಕಾಯಿದ ಚರಿತೆಯಾ

ವಿರಚಿಸಿದನು ಹಂಪಿಯ ಹರಿದೇವನ
ವರಸುತ ರಾಘವಾಂಕುಸುರೆ ॥ ೧೨ ॥
ಕೃತಿನಾಮ ದೇವಾಂಗ ಪುಣ್ಯ ಚಾರಿತ್ರವು
ಕೃತಿಯ ಪೇಳ್ದಾತನಾರೆನಲೂ
ಯತಿರಾಮ ಮಾದಿಯ್ಯ ಮತಿಗೆ ಪ್ರಬೋಧತೆ
ನುತ ರಾಘವನು ಪೇಳ್ದೀ ಕೃತಿಗೆ ॥ ೧೩ ॥ (ಎರಡನೆಯ ಸಂಧಿ)

ಅಂತ್ಯ : ಯಲ್ಲ ದೇವರದೇವ ಯರಡೊಂದು ನೇತ್ರನೆ
ಸಲ್ಲಲಿತನೆ ಪ್ರಘಟಾ
ವುಲ್ಲಾಸದಿಂ ನಿಂನ ಪದಧ್ಯಾನದಿಂ ಪೇಳೆ
ಮಲ್ಲಿಕಾರ್ಜುನ ಸಲಹೆನ್ನಾ ॥ ೮೮೧ ॥
ಅಂತೂ ಸಂಧಿ ೭ ಕ್ಕಂ ಪದನು ೧೭೦೭ ಕ್ಕಂ ದೇವಾಂಗ ದಾಸ್ತ್ಮೈಯ್ಯನ
ಪುರಾಣ ಸಮಾಪ್ತ ಮಂಗಳಮಹಾಶ್ರೀ.

x x x x

ದೇಶಕಧಿಕವಾದ ಮುದನೂರ ಸ್ಥಳದಂಗೆ
ಯೀಶದೇವರ ದಾಸ್ತ್ಮೈಯ್ಯನಿಗೆ
ಭಾ...........ಲಿಪಗುರು ಪರಶಿವಮೂರ್ತಿಗೆ
ದಾಸ ಅಬ್ದುಲಪುರ ಗಣ ಶಿವಗೆ ॥ ೯ ॥
ದಾಸ್ತ್ರಿಯ್ಯನ ಮಂಗಳಾರತಿ ಸಮಾಪ್ತ ಶ್ರೀ.

ವಿಷಯ : ದೇವಾಂಗದಾಸಿಮಯ್ಯನ ಕಥೆ.

ವಿಶೇಷ : ಪತ್ರ ೧ ರಲ್ಲಿ ಈ ರೀತಿ ಬರೆದಿದೆ. "ಹೂಬ್ಲಿ ಮೂರು ಸಾವಿರ ಮಠದಿಂದ ಕ್ಯೂರೇಟರವರು ತಂದ ಪುಸ್ತಕದ ಪ್ರತ್ಯಂತರ" "ಪತ್ರ ೧೪೯ ರಲ್ಲಿ compared by Mr. Pandit Chakravarti Srinivasachar and Mr. Pandit S. . itarama sastri. 8-3-39" ಎಂದಿದೆ.

679

ಕೆ. ೩೫೫/೧೩	ದೇವೀಕಾಲೋತ್ತರ ವ್ಯಾಖ್ಯಾನ	ಗದ್ಯ
೮.೫"×೧.೯"	?	?
೧೬೨-೧೮೩ ಪತ್ರ	೧೨ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ .... ದೇವೀಕಾಲೋತ್ತರ ವ್ಯಾಖ್ಯಾನ

ವೃ॥ ವಂದೇ ಚಿದಂಬರಮಣಿಪ್ರಭು ಚೆಂನವೀರ
ಪಾದದ್ವಯಂ ವಿಹಿತ ಚಿತ್ತಿಮಿರಾಪನೋದಂ।
ಶುದ್ಧಾಯನಾಚಾಶಿರಃ ಕೃತ ಸಂವಿಹಾರಂ
ಲೋಕ ಪ್ರಕಾಶಕಮನಂತಸುಖಾರ್ಥ ಬೋಧಂ॥
ಪರಮೇಶ ಮುಖೋದ್ಭೂತಿ ದೇವೀಕಾಲೋತ್ತರಾಭಿಧೆ।
ತತ್ರೆ ಲೋಕೋತ್ತರೇ ಶುದ್ಧ ಜ್ಞಾನಾಚಾರ ಪ್ರಬೋಧಃ॥
ಪಟಲಃ॥ ಪ್ರತಿ ಸಾಯುಜ್ಯ ಪೇಕ್ಷಾಕಾನ್ಸರ್ವ ಸಂಹಿತಾಃ।
ವ್ಯಾಖ್ಯಾಸ್ಯತೇ ಮಯಾಲೋಢ್ಯ ನಮ್ಯಕ್ಕರ್ನಾಟಭಾಷಯಾ।
ದೇವ್ಯುವಾಚ। ಪರಶಿವ ಮುಖೋದ್ಭೂತವಾದ ದೇವೀಕಾಲೋತ್ತರವೆಂಬ ದಿವ್ಯಾಗಮದ ಜ್ಞಾನವಾದದಲ್ಲಿ। ಪಾರ್ವತಿದೇವಿಯರು। ಮುಮುಕ್ಷು ಜನಾನುಗ್ರಹಾರ್ಥವಾಗಿ ಕೃಪಾಶಬ್ದ ಸೂಚಿತಾಂತರಂಗಕೃತ ಪರಮೇಶ್ವರ ನಮಸ್ಕಾರೆಯಾಗಿರ್ಪ।

ಅಂತ್ಯ : ...ಅನ್ಯತ್। ಪೂರ್ವಪ್ರತಿಪಾದಿತೆನ್ಯವಾಗಿದ್ದಂಥಾ। ಕಿಂ। ಯೇನನು। ಪರಿಪೃಚ್ಛತಿ। ಬೆಸಗೊಳ್ಳುತ್ತಿದ್ದೆ॥ ೮೫॥ ಇತಿ ಶ್ರೀಮದನಂತ ಮುಕ್ತಿ ಸೀಮಂತಿನಿ ಸೀಮಂತ ಸರಣಿ ವಿಹಾರಲೋಲ ಯೋಗೀಂದ್ರ ಪರಶಿವಾ ನೃತಾ ಯೋಗಯೋಜನೇನ। ಪುರಾ

X X X X

...... ಏಕಧಾ। ವೊಂದೇ ಪ್ರಕಾರವಾದುದು ಸ್ವಯಮೇವ। ತಾನೆ। ತ್ರಿಧಾ। ಮೂಱು ಪ್ರಕಾರವಾದುದಾಗಿ। ಷಡ್ಧಾ। ಆಱು ಪ್ರಕಾರವಾದುದಾಗಿ ನವಧಾ ಚ। ವೊಂಭತ್ತು ಪ್ರಕಾರವಾದುದಾಗಿಯೂ। ಪ್ರವರ್ತತೇ। ಪ್ರವರ್ತಿಸುತ್ತಿಹುದು। ತತಃ। ಅಪ್ಪುಱಿಂದಂ ಮೇಲೆ। ಅನ್ಯಃ। ಮತ್ತೊಂದು। ಕಿಂಚಿತ್। ವೊಂದಿಪ್ಪು। ನಚ। ಇಲ್ಲ॥ ೭॥

ವಿಷಯ : ವೀರಶೈವ ವೇದಾಂತ.

ವಿಶೇಷ : ಅಸಮಗ್ರಪ್ರತಿ. ಶಕಟರೇಫ ಇದೆ. ಈ ಕಟ್ಟಿನಲ್ಲಿ ಶ್ರೀ ರುದ್ರಪ್ರಸಾದ ಸ್ತೋತ್ರ (ಸಂ), ವೇದಾಂತ ವಿಚಾರ ಶ್ಲೋಕಗಳೇ ಮೊದಲಾದ ಇತರ ೧೬ ಗ್ರಂಥಗಳಿವೆ.

680

ಕೆ. ೩೨೫/೧೯	ದೇವೀನಾಂದ್ಯ	ವೃತ್ತ
೯.೫"×೨"	?	?
[illegible] ಪತ್ರ	೧೧ ಪಂಕ್ತಿ	[illegible] ಅಕ್ಷರ

ಆದಿ : ಶ್ರೀ ದೇವೀನಾದ್ಯವ ಬರವುದಕ್ಕೆ ಶುಭಮಸ್ತು.
ತೋಟಕ ॥ ಕರಿರಾಣ್ಮುಖ ಷಣ್ಮುಖ ಮಾತೆ ಮನೋ
ಹರ ಮಂದರ ಮಂದಿರೆ ಶೌರಿನತೇ
ತರುಣಾರುಣ ಭಾಸುರ ಕಾಂತಿಯುತೇಂ
ಶರಣಾಗೆನಗಂಬಿಕೆ ಶೈಲಸುತೇ ॥ ೧ ॥

ಅಂತ್ಯ : ಪೃಥ್ವೀ ವೃತ್ತಂ ॥
ಸುಪರ್ಣ ರಥ ಪೂಜಿತೇ ಸುಕರ ಕೀರ್ತಿ ವಿಭ್ರಾಜಿತೇ
ಕೃಪಾಕರ ತರಂಗಿಣೀ ಕುಪಿತ ದೈತ್ಯ ಸಂಹಾರಿಣೀ
ಕಪರ್ದಿ ಹೃದಯಪ್ರಿಯೆ ಕನಕವರ್ಣೇ ಸಚ್ಚಿನ್ಮಯೇ
ಜಟಾಸುಮರುಚಿ ವ್ರಜೇ ಜನನಿ ಪಾಲಿಸದ್ರೀಂದ್ರಜೇ ॥ ೪೨ ॥
ದೇವೀನಾದ್ಯ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ದೇವಿಯ ಮಹಾತ್ಮ್ಯೆ.

ವಿಶೇಷ : ಇದೇ ಕಟ್ಟಿನಲ್ಲಿ ವೃಷಭೇಂದ್ರ ಲಲಿತ, ಲಿಂಗ ಸ್ತೋತ್ರದ ಪದಗಳೆಂಬ ಇತರ ೨೪ ಗ್ರಂಥಗಳಿವೆ.

681

ಕೆ.ಬಿ. ೩೨೨	ದೇವೀ ಮಾಹಾತ್ಮ್ಯೆ	ಗದ್ಯ
೭.೭" × ೬.೪	ಮುಮ್ಮಡಿ ಕೃಷ್ಣರಾಜ	೧೮೦೦
೧-೯೩ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ಶ್ರೀರಸ್ತು ॥ ಶ್ರೀ ಮಾರ್ಕಂಡೇಯ ಪುರಾಣದಲ್ಲಿ ಪ್ರಸಿದ್ಧವಾದ ದೇವೀ ಮಾಹಾತ್ಮ್ಯೆ ಪ್ರಕಾಶಕವಾದ ಸಪ್ತಶತಿಯೆಂಬ ಮಹಾ ಮಂತ್ರಾರ್ಥವಂ ಕರ್ನಾಟಕ ಭಾಷೆಯೊಳ್ ಬರೆಯುವದಕ್ಕೆ ಶುಭಮಸ್ತು ॥

ಶ್ಲೋಕ ॥ ಭವ್ಯಾಸ್ಯವ್ಯಾಹೃತಾನಿ ಪ್ರವಿಶತು ಜಗತಾಮೀಶಿತುಃ ಶ್ರೀಸಖಸ್ಯ ।

ಪ್ರಖ್ಯಾತಾ ಯೋಗನಿದ್ರೆದ್ಯುತತರವಿಭವಾಮಂಕ್ಷು ಚಾಮುಂಡಿಕಾ ನಃ ||

X X X X

ಶ್ರೀಚಾಮುಂಡಿಕಾಂಬಾ ವರಪ್ರಸಾದೋದ್ಭವರಾದ ಶ್ರೀ ಕೃಷ್ಣರಾಜ ವಡೆಯರವರು ಬುಧಜನ ಸಂಮತಿಯಿಂದ ಶ್ರೀ ಮಾರ್ಕಂಡೇಯ ಪುರಾಣದಲ್ಲಿ ಪ್ರಸಿದ್ಧವಾದ ದೇವೀಮಹಾತ್ಮ್ಯೆ ಪ್ರಕಾಶಕವಾದ ಸಪ್ತಸತೀಯೆಂಬ ಮಹಾ ಮಂತ್ರಾರ್ಥವಂ ಕರ್ನಾಟಭಾಷಾ ರೂಪವಾದ ವಚನ ರಚನೆಯುಳ್ಳ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಅಂಕಿತದಿಂದ ವಿಸ್ತರಿಸುವರದೆಂತೆಂದರೆ ಪೂರ್ವದಲ್ಲಿ ಜೈಮಿನಿ ಋಷಿಯು ಮಾರ್ಕಂಡೇಯ ಮಹಾ ಮುನೀಶ್ವರರಂ ಕುರಿತು ಸಪ್ತಶತಿ ಮಹಾಮಂತ್ರಾರ್ಥವಂ ನಿರೂಪಿಸಬೇಕೆಂದು ವಿಜ್ಞಾಪಿಸಲು ಮಾರ್ಕಂಡೇಯ ಋಷಿಯು ಮೊದಲು ವಂದುವ್ಯಾಳೆ

ಅಂತ್ಯ : ಮಾರ್ಕಂಡೇಯ ಋಷೀಶ್ವರನು ಕ್ರೊಷ್ಟುಕಿ ಮುನಿಯಂ ಕುರಿತು ನಿರೂಪಿಸಿದರ್ಥವನ್ನೆ ವಿಂಧ್ಯಾಚಲ ವಾಸಿಯರಾದ ಪಿಂಗಾಕ್ಷ ಅನಿರೋಧ ಸುಪುತ್ರ ಸುಮುಖರೆಂಬ ನಾಲ್ವರಾದ ಧರ್ಮಪಕ್ಷಿಯರು ಜೈಮಿನಿ ಮುನಿಗೆ ವಿಸ್ತರಿಸಿದರೆಂದು ಸೂತ ಪೌರಾಣೀಕನು ನೈಮಿಷಾರಣ್ಯ ವಾಸಿಯರಾದ ಶೌನಕಾದಿ ಋಷೀಶ್ವರರಂ ಕುರಿತು ವಿವರಿಸಿದನೆಂಬಲ್ಲಿಗೆ X X X X

ಶ್ರೀ ಕೃಷ್ಣರಾಜ ವಾಣೀವಿಲಾಸದಲ್ಲಿ ದೇವಿಯು ವೈಶ್ಯನೃಪರಿಗೆ ವರವನ್ನಿತ್ತ ತ್ರಯೋದಶಾಧ್ಯಾಯಕ್ಕೆ ಮಂಗಳ ಮಹಾ ಶ್ರೀ.

X X X X

ಶಾಲಿವಾಹ ಶಕೆ ಗಜಾಗ್ನಿ ಮುನಿ ಭೂಪರ್ವೇಷು ಯಾತೇಷ್ವಿಹ
ಪ್ರೋದ್ಯದ್ಧಾತೃ ಕುಬೇರ ಮಾರ್ಗ ತುಹಿನ ತ್ವಷ್ಟೆ ಸಹಸ್ಯೇಸಿತೇ ।
ಪಕ್ಷೇ ಶ್ರೀ ಮಹಿಶೂರ ಕೃಷ್ಣನೃಪತೇರ್ವಾಣೀವಿಲಾಸಶ್ಶುಭಃ
ಪೂರ್ಣಸ್ಸಪ್ತಶತೀ ಪ್ರಕಾಶನ ಪರಃ ಕರ್ನಾಟ ಭಾಷೋಜ್ವಲ॥ ಶ್ರೀ.

ವಿಷಯ : ದೇವೀ ಭಾಗವತದಲ್ಲಿರುವ ಸಪ್ತಶತೀ ಮಹಾ ಮಂತ್ರದ ವಿವರಣೆ.

ವಿಶೇಷ : ಆದಿ–ಅಂತ್ಯದ ಕೆಲವು ಪತ್ರಗಳ ಅಂಚುಗಳನ್ನು ಹುಳು ತಿಂದಿದೆ. ಕೆಲವು ಕಡೆಗಳಲ್ಲಿ ಕೆಂಪು ಮಸಿಯಿಂದ ತಪ್ಪುಗಳನ್ನು ತಿದ್ದಿದೆ.

682

ದೇವೀ ಮಾಹಾತ್ಮ್ಯೆ

ಕೆ. ಬಿ. ೪೦೯		ಯಕ್ಷಗಾನ
೭.೬"X೫.೮"	?	?
೧–೧೫ ಪತ್ರ	೨೦ ಪಂಕ್ತಿ	೧೪ ಅಕ್ಷರ

ಆದಿ: ಮಾರ್ಕಂಡೇಯ ಪೌರಾಣದಲ್ಲು ಯಕ್ಷಗಾನ ದೇವೀ ಮಹಾತ್ಮ್ಯೆ ಬರೆಯು
ವದಕ್ಕೆ ಶುಭಮಸ್ತು ||

ವೃತ್ತ|| ಶ್ರೀನಾಥಂ ಮಧುಕೈಟಭಾಸುರಹರಂ ಸಾಂಮ್ರಾಜ್ಯ ಮೋಕ್ಷಪ್ರದಂ
ವಿನಾನಾಂಕಾರಿ ಮುಖಾಮರೌಘ ವರದಂ ಮಾಯಾಂಗನಾನಾಯಕಂ |
ಭೂನಾರೀಶಮುದಾರ ಕೌಂಸ್ತುಭಧರಂ ಭೀಮಂ ಖಗೇಂದ್ರಧ್ವಜಂ
ಸಾನಂದಾಂಗಮನಂತ ಸೂರ್ಯ ಸದೃಶಂ ಶ್ರೀ ಪದ್ಮನಾಭಂ ಭಜೇ || ೧ ||

X X X X

ದ್ವಿಪದೆ.| ಮೆರೆವ ಮಾರ್ಕಂಡೇಯ ಪೌರಾಣದೊಳಗೇ
ಪರಮ ಮಂಗಳವೆನಿಪ ಕಥೆಯ ಮನದೊಳಗೇ
ಗ್ರಹಿಶಿ ಕೊಂಡಾಡಿ ದೇವೀ ಮಹಾತ್ಮೆಗಳಾ
ವಿದಿತಮನನಾಗಿ ಯೆಕ್ಷಗಾನಗಳಂ || ೧೪ ||

ಅಂತ್ಯ: ಗಿರಿ ಗುಂಹೆಗಳಲಿ ನಾವೂ ಮತ್ತಡಗಿಕೊಂ
ಡಿರದೆ ಜೀವಿಶಿ ಕೊಂಡೆವೂ
ಪರಿ ಪರಿ ದುಃಖವನನುಭವಿಶಿದೆವು ವಿ
ಸ್ತರಿಸಲೆಂಮಳವಲ್ಲ ಕೋಳುಗೊಂಡುದನೆಲ್ಲಾ ||೮೧||
ನಂಮ ರಾಜ್ಯವ ಸುರರೂ ಹೆಚ್ಚಿದೆವೆಂದು
ಹೆಂಮೆಯಿಂದಾಳುವ ....

ವಿಷಯ: ದೇವಿಯ ಮಾಹಾತ್ಮ್ಯೆ

ವಿಶೇಷ: ಅಸಮಗ್ರ, ತೆಳುವುಕಾಗದ, ಶಿಥಿಲ ಪ್ರತಿ.

683

ಕೆ.ಬಿ. ೪೫೭	ದೇವೀ ಮಾಹಾತ್ಮ್ಯೆ	ಭಾಮಿನೀ ಷಟ್ಪದಿ
೮.೩"×೬.೫"	ಚಿದಾನಂದಾವಧೂತ	ಸು. ೧೭೫೦
೧-೧೬೯ ಪತ್ರ	೧೨ ಪಂಕ್ತಿ	೧೩ ಅಕ್ಷರ

ಆದಿ: ಶ್ರೀ ದೇವೀ ಮಹಾತ್ಮ್ಯೆ ಶ್ರೀಕೃಷ್ಣನು ಮಧುಕೈಟಭರನ್ನು ಕೊಂದದ್ದು-
ಮಾಯುದಧಟನಲೆಸೆವ ಮಾರ್ಕಾಂ
ಡೇಯಮುನಿ .... ಜಯಮುನಿಗೆ ತಿಳುಹಿದ ಭಾಮಿನೀವೃತ್ತದಲೀ ||

ಪದನೂ|| ಶ್ರೀಮಹಾದೇವಿಯರ ತೊಡೆಯೊಳು
ಪ್ರೇಮದಿಂ ಲೆ ಥರಿಸಿರಂಜಿಪ
ಕಾಮ ಭತ್ಮ ಭೂಷಣನಾಗಿ ಫಣೀಂದ್ರಕುಂಡಲವಾ
ರಾಮಣೀಯಕ ಪಂಚಮುಖದಿಂ
ಸೋಮ ಸೂರ್ಯನವೊಲ್ ವಿರಾಜಿಪ
ಭೀಮ ಭರ್ಗನೆ ಸಲಹು ವರ ಕಳಸೇಶ ಸದ್ಗುರುವೇ || ೧ ||

ಅಂತ್ಯ : ಮಾಯೆ ಮಾಯೆಯ ಪೀಳಿಗೆಯ ನೆಲೆ
ಪೇಳಿದನು ಮುನಿಪ್ರಿಯ ಸುರತ ನೃ
ಪಾಲಕನವೋಲಾಯಸವ ಪರಿಹರಿಸದಂದವನಾ ಮನೋರಥವಾ
ನಿಯತವಿದಲಾ ಭಯಭರಿತ ಭ
ಕ್ತಿಯಲಿ ಬಸಲು ಬೇಗದೊಳಗೆ
ನಿಂನಂದ ಮಿಗಿಲಿಲ್ಲವೆಲೆ ಮಹಿಮನೆಂದನು ಸುಮೇಧಮುನೀ || ೧೭ ||

ಅಂತೂ ಸಂಧಿ ೧೦ಕ್ಕಂ ಪದನೂ ೬೭೫ಕ್ಕಂ ಜಯಮಂಗಳ ಮಹಾಶ್ರೀ.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನಶಕ ವರ್ಷಂಗಳು ೧೭೭೩ ನೆ ವರ್ತಮಾನ ಪ್ರಮಾದೀಚನಾಮ ಸಂವತ್ಸರದ ಆಷಾಢ ಬಹುಳ ೧೦ ಸ್ಥಿರವಾರ ಈ ದಿವ್ಸ ಬರದು ಪೂರ್ತಿಯಾಯಿತು. ಬರದಾತ ಯಡೆಹಳ್ಳಿ ಗುರುವೆಗೌಡನ ಮಗ ಬಸವೆಗೌಡ ತನಗೆ ಓದುಕೊಳ್ಳುವುದಕ್ಕಾಗಿ ಕಾಪೀ ಮಾಡಿರುತ್ತಾನೆ.

ವಿಷಯ : ದೇವಿಯ ಮಹಾತ್ಮ್ಯೆ.

ವಿಶೇಷ : ಮಧ್ಯೆ ಮಧ್ಯೆ ಗ್ರಂಥಲೋಪವಿದೆ.

684

ಕೆ. ೧೭೯/೧೪	**ದೇವೀಸ್ತುತಿ**	**ವೃತ್ತ**
೯.೬"×೨"	?	?
೬೦-೬೪ ಪತ್ರ	೧೦ ಪಂಕ್ತಿ	೫೦ ಅಕ್ಷರ

ಆದಿ : ದೇವೀಸ್ತುತಿ.

ವೃ ॥ ವ್ಯಾನವ್ರಾಮರ ಕಾಮಿನೀಜನಗಳಧ್ಧಮ್ಮಿಲ್ಲ ಪುಷ್ಪಾಸವಂ
ತಾನೊಕ್ಕೊಪ್ಪಿರೆ .... ದ ಪೀಠದೋಳವಂ ತಳ್ತುಂಬು ಭೃಂಗಾಳಿ ಬೆ
ಳ್ಪಾನುತ್ತ್ರಂ ನಖರೋಚಿಯಿಂ ತೊಳಪವೊಲ್ಗೆಯ್ದಾನತವ್ರಾತದೋ
ಷಾನಿಕಾಪನಯ ಪ್ರದರ್ಶಿನಿಯೆನಿಪ್ಪಿತಾನಿಗಾಂ ವಂದಿಪೇಂ ॥ ೧ ॥

ಅಂತ್ಯ : ಪೃಥ್ವೀ ವೃತ್ತ॥
ಸುಪರ್ಣ್ನರಥಪೂಜಿತೇ ಸುತರ ಕೀರ್ತ್ತಿ ವಿಭ್ರಾಜಿತೇ
ಕೃಪಾರಸ ತರಂಗಿಣೀ ಕುಪಿತ ದೈತ್ಯ ಸಂಹಾರಿಣೀ
ಕಪರ್ದ್ದಿನೀ ಹೃದಯ ಪ್ರಿಯೇ ಕನಕ ವರ್ಣ್ನೇ ಸಂಚಿನ್ಮಯೇ
ಜಟಾಸುಮರುಚಿ ವ್ರಜೇ ಜನನಿ ಪಾಲಿಸದ್ರಿಂದ್ರಿಜೇ ॥ ೪೫ ॥
ದೇವಿಸ್ತುತಿಃ ಸಂಪೂರ್ಣಂ ಮಂಗಳ ಮಹಾಶ್ರೀ.

ವಿಷಯ : ದೇವಿಯ ಮಹಾತ್ಮ್ಯೆ.

ವಿಶೇಷ : ಇದೇ ಕಟ್ಟಿನಲ್ಲಿ ವೃಷಭೇಂದ್ರ ಪುರಾಣದ ಸ್ತೋತ್ರದ ನಾಂದ್ಯ, ವೃಷಭೇಂದ್ರ ಸ್ತುತಿಗಳೆಂಬ ಇನ್ನೂ ೨೩ ಗ್ರಂಥಗಳಿವೆ.

685

ಕೆ. ೧೬೪/೨ **ದ್ರಾಕ್ಷಾದಿಚೂರ್ಣ, ಇತ್ಯಾದಿ** ಗದ್ಯ
೨೦.೩"X೨.೩" ? ?
೧.೧೦ ಪತ್ರ ೧೨ ಪಂಕ್ತಿ ೯೬ ಅಕ್ಷರ

ಆದಿ : ದ್ರಾಕ್ಷಾದಿ ಚೂರ್ನಾ ॥ ದ್ರಾಕ್ಷೆ ಹಂಣು । ಹಿಪ್ಪೆ ಹುವು । ಯಷ್ಟಿ ಮಧುಕ ಲೋದ್ರಾ । ಗುಳ್ಳದ ಬೇರು । ಸೊಗದೇ ಬೇರು । ಭದ್ರಮುಸ್ತೆ । ನೆಲ್ಲಿಚೆಟ್ಟು । ಲಾಮಂಚಾ । ಮುಡಿವಾಳಾ । ತಾವರೆ ಕುಸುಮಾ । ಪದ್ಮಕಾ । ತಾವರೆ ಗೆಣಸೂ । ನೈದಿಲೆ ಗೆಡ್ಡೆ । ಖರ್ಜೂರ । ಶ್ರೀಗಂಧಾ । ಯಿಾ ಬಗೆ ವಂ ೧ ದಕ್ಕೆ ವರಹಾತೂಕ । ಯಿದರ ಸಮ ಸಖರೆ ॥

ಅಂತ್ಯ : ಸರ್ವ ರೋಗಗಳಿಗೆ ಔಷಧಾ ॥ ವುತ್ತ್ರಣೆ ಬೂದಿ । ಯಕ್ಕದ ಬೂದಿ । ಕಬಸದ ಬೂದಿ । ಮಂಗುರವಳೀ ಬೂದಿ । ಯೆಳ್ಳು ಕವಗೆ ಬೂದಿ । ಕಡಲೆ ಹೊಟ್ಟಿನ ಬೂದಿ । x x x x ದೇಹಾನುಗುಣ್ಯವರಿತು ಕೊಡೆ ಯಂಭತ್ತು ತೆರದ ವಾತಾ ಇಪ್ಪತ್ತುವಂದು ತೆರದ ಶ್ಲೇಷ್ಮ ದೋಷ ।

ಯಿಪ್ಪತ್ತು ತೆರದ ಪ್ರಮೇಹ । ಇಪ್ಪತ್ತು ನಾಲ್ಕು ತೆರದ ವಾತದೋಷ। ಅಜೀರ್ಣ। ಉಂನ್ಮಾದ । ಮಂದಾಗ್ನಿ। ನೀರು ಕೊಂಬು। ವಾತ ಶೂಲೆ। ಆಮಶೂಲೆ।ಗೆಂಡೆ। ಗುಲ್ಮದ ಕಚ್ಚು । ಮಹೋದರ । ಪಾಂಡು। ಕ್ಷಯಾ। ಶ್ವಾಸಾ । ಖಾಸಾ ಪೀನಸಾ! ಅರೋಚಕಾ। ಅಸ್ತಿಶ್ರಾವ । ಅನದ್ಗರಾ। ಹರಿಮುಖಾ। ವೆಂಬ ಗ್ರಂಥಿ ಮುಂತಾಗಿ ಪರಿಹರವಾಗುವದು ॥ ಕೃಷ್ಣಾಭ್ರಕ ಭಸ್ಮಾ ಮಾಡೋ ಕ್ರಮಾ ॥

ವಿಷಯ : ಚೂರ್ಣಾದಿ ಔಷಧಿಗಳ ತಯಾರಿಕೆ ಮತ್ತು ಅವುಗಳನ್ನು ಉಪಯೋಗಿಸುವ ವಿಧಾನ.

ವಿಶೇಷ : ಅಸಮಗ್ರ ಪ್ರತಿ. ಇದೇ ಕಟ್ಟಿನಲ್ಲಿ ಮೊದಲು ವೈದ್ಯನಿಘಂಟು ಎಂಬ ಗ್ರಂಥವಿದೆ.

686

ಕೆ.ಎ. ೧೦೭/೨	**ದ್ರೌಪದೀ ಕಲ್ಯಾಣ**	ಯಕ್ಷಗಾನ
೧೨.೨"X೭.೮"	ಮಧ್ವೇಂದ್ರ (?)	?
೧೫-೩೧ ಪತ್ರ	೩೩ ಪಂಕ್ತಿ	೩೦ ಅಕ್ಷರ

ಆದಿ : ದ್ರವುಪದಿ ಕಲ್ಯಾಣ ಬರೆಯುವದಕ್ಕೆ ಶುಭಮಸ್ತು ॥
ನಾಂದೀ ವೃತ್ತಾ ॥
ಶ್ರೀ ದುರ್ಗಾವದನಾಂಬುಜಃ ಸ್ತಿರರತೀಂ ಶ್ರೀಶೈಲನಾಥಂ ಶಿವಂ
ಶ್ರೀ ದಾತಾರಸಖಂ ಜಗತ್ರ್ಯಯನತಂ ಶ್ರೀಕಂಠ ವಿಾಶಂ ಮ್ರುಢಂ
ಶ್ರೀದಂ ಶಾಂತ ಕಲಾನಿಧಿಂ ಸುಲಲಿತಂ ಶ್ರೀ ವತ್ಸರಾಶಾಕಂ
ಶ್ರೀ ಧರ್ಮಸ್ತಳ ಮಂದಿರಂ ಶುಭಕರಂ ಶ್ರೀ ಮಂಜುನಾಥಂ ಭಜೇ ॥ ೧ ॥

X X X X

ಬಕನ ಮುರಿದನಿಲಜಾದ್ಯರು ಸುಭೀಕ್ಷೆಯಲಿ
ಪ್ರಕಟಿಸದೆ ಬಂದೂ ದ್ರುಪದಜೆಯ ಪ್ರೇಮದಲೀ ॥೧೪ ॥
ವರಿಸೀದ ಕಥೆಯ ನಾನೆಕ್ಷಗಾನದಲಿ
ವರೆವೆನ್ನೈ ಮಧ್ವೇಂದ್ರ ಕೃಷ್ಣನೊಲುಮೆಯಲಿ ॥ ೧೫ ॥

ಅಂತ್ಯ : ಕಡಬು ಕಜ್ಜಾಯಗಳನಗಡಿಸುವಾ
ದ್ರುಢ ಭಕ್ತರ ಪೊರವಗೆ ಮಂಗಳಂ
ಬಿಡದೆ ಪಶ್ಚಿಮ ದಿಕ್ಕಿನೊಳು ಪ್ರಜ್ವಲಿಸುವ
ಕಡು ಮದ ಗಣನಾಥಗೆ ಮಂಗಳಾ ॥ ೫೫ ॥

ದುರಿತ ವಿದೂರಗೆ ಕರುಣ ಸಾಗರನೀಗೆ
ನಿರತ ಪಾಂಡವರ ರಕ್ಷಗೆ ಮಂಗಳಂ
ವೂರುತರನಾಗಿ ವುಂನ್ನತದುಡುಪಿನ ನಂಮ್ಮ
ಗುರುಮಧ್ವಪತಿ ಕೃಷ್ಣಗೆ ಮಂಗಳಾ । ಮಂಗಳಂ ಜಯಮಂಗಳಂ ॥೫೫೬॥
ಅಂತು ಸಂಧಿ ೧೫ಕ್ಕಂ ಪದನೂ ಐನೂರು ಐವತ್ತಾರಕ್ಕಂ ಮಂಗಳ ಮಹಾ ಶ್ರೀ ॥

ವಿಷಯ : ದ್ರುಪದನ ತನುಜೆಯಾದ ದ್ರೌಪದಿಯ ವಿವಾಹ ಪ್ರಸಂಗ.

ವಿಶೇಷ : ಈ ಪುಸ್ತಕದಲ್ಲಿ ಐರಾವತ, ಸುಭದ್ರೆಕಲ್ಯಾಣ, ಕನಕಾಂಗೀಕಲ್ಯಾಣ, ಸಭಾಪರ್ವ, ಇಂದ್ರಕೀಲ, ಚಿತ್ರಸೇನನ ಕಾಳಗ ಮತ್ತು ೧೧೧ ನೇ ಪತ್ರದಲ್ಲಿ ವಿರಾಟಪರ್ವದ ಆರಂಭದ ಒಂದೇ ಒಂದು ಹಾಡು, ಗೌಳೀಫಲ ನಿರ್ಣಯ ಎಂಬ ಇತರ ಗ್ರಂಥಗಳಿವೆ.

687

ಕೆ–ಬಿ. ೭೯	**ದ್ರೌಪದೀ ವಸ್ತ್ರಾಪಹರಣ**	ನಾಟಕ
೭.೯"×೬.೩"	ಚಂದ್ರಶೇಖರಶಾಸ್ತ್ರಿ	ಸು. ೧೮೫೦
೧-೪೮ ಪತ್ರ	೨೦ ಪಂಕ್ತಿ	೧೨ಅಕ್ಷರ

ಆದಿ : ಸೂತ್ರಧಾರಂ (ಪ್ರವೇಶಿಸಿ)

ವೃತ್ತಂ॥ ಶ್ರೀ ಚಂಚತ್ಸುಮಹಾಬಲಾಚಲ ಚಲಚ್ಛೃಂಗಾರಶೃಂಗಾಗ್ರದೋ
ಳ್ನೀಚಾರಾತಿಯ ಗೆಲ್ದು ನಿಂತಿಹ ಮಹಾಚಾಮುಂಡಿ ಸುಪ್ರೀತಿಯಿಂ
ಶ್ರೀ ಚಾಮಕ್ಷಿತಿ ಚಕ್ರವರ್ತಿಗೆ ಜಯೋತ್ಸಾಹಂಗಳನ್ನಿತ್ತು ತಾ
ನಾಚಂದ್ರಾರ್ಕವು ರಾಜ್ಯಮಾಳಿಸುಗೆ ಧರ್ಮಾರ್ಥಂಗಳನ್ನೀಡುತಂ ॥

X X X X

ಕಂ॥ ತರುಣಿಯೆ ಕೇಳತಿ ಮೃದುಪದ
ಸರಣಿಗಳಿಂ ಬಾಲಚಂದ್ರಕವಿಕೃತಮಾದೀ
ಕರುಣ ರಸಭರಿತ ಪಾಂಡವ
ಚರಿತವ ಕರ್ಣಾಟ ಭಾಷೆಯಿಂದಾಡಿಸುವೆಂ ॥

ಅಂತ್ಯ: ಕಂ ॥ ಈ ಚಾತುರ್ವರ್ಣಕ್ಕೆ ಸ
ದಾಚಾರೋ ಭ್ರಾಯಭಕ್ತಿ ಸಂತೋಷಗಳಂ

ಶ್ರೀ ಚಾಮರಾಜ ನೃಪಮಣಿ
ಗಾಚಂದ್ರಾರ್ಕಾಧಿಪತ್ಯಮದ್ರಿಜೆ ಕುಡುಗೆ

X X X X

ತಾಯೆ ಚಾಮರಾಜ । ಗಾಯುರರ್ಥವಿತ್ತು
ತಾಯೆ ಶಂಕರನ । ಚಾಯೆ ಚಿತ್ಸಹಾಯೆ ॥ ೩ ॥ ಶ್ರೀ

ವಿಷಯ : ದ್ರೌಪದಿಯ ವಸ್ತ್ರಾಪಹರಣ ಮತ್ತು ಪಾಂಡವರ ಅರಣ್ಯವಾಸ ಕಾಲದಲ್ಲಿ ಧರ್ಮರಾಯ ಯಕ್ಷರ ಸಂಭಾಷಣೆ.

ವಿಶೇಷ : ಸುಂದರಾಕ್ಷರ. ಇದು ಬಾಲಚಂದ್ರಕವಿ ಕೃತವಾದ ಪಾಂಡವಚರಿತೆಯ ಕನ್ನಡ ಅನುವಾದ.

688

ಕೆ.ಬಿ. ೩೬೨	ದ್ರೌಪದೀ ವಸ್ತ್ರಾಪಹಾರ	ಯಕ್ಷಗಾನ
೬.೩"×೫ ೬"	?	?
೧-೫೬ ಪತ್ರ	೧೭ ಪಂಕ್ತಿ	೧೪ ಅಕ್ಷರ

ಆದಿ : ದ್ರೌಪದಿ ವಸ್ತ್ರಾಪಹಾರ ಬರಿಯುವದಕ್ಕೆ ಆರೋಗ್ಯಮಸ್ತು ॥
ನಾಂದೀ ॥ ವೃತ್ತಾ ॥
ಶ್ರೀಲೋಲಂ ಕರುಣಾರ್ಣವಂ ಗುಣನಿಧಿಂ ಶಾಂತಂ ಉಮಾವಲ್ಲಭಂ
ಬಾಲಾರ್ಕಾನಿಭಕೋಟಿ ಸೂರ್ಯಸದೃಶಂ ಸರ್ವೇಶ್ವರಂ
ಸಾಲಂಕಾರಮುದಾರ ಮಂಗಳಕರಂ ಶ್ರೀ ವತ್ಸ ವಕ್ಷಸ್ಥಳಂ
ಕ್ಷೀರಾಂಭೋನಿಧಿವಾಸ ಶೇಷಶಯನಂ ಶ್ರೀ ವೆಂಕಟೇಶಂ ಭಜೇ ॥ ೧ ॥

ಅಂತ್ಯ : ಯಾರು ಪೇಳ್ವರು ಕೇಳ್ವರವರನು
ಶ್ರೀರಮರಣ ದಯವಿತ್ತು ರಕ್ಷಿಪ
ಚಾರು ಮಂಗಳ ಭಾಗ್ಯತರ ಸಂಪತ್ತು ಸುಖವಹುದು
ಧಾರಣೀ ಜನರಿಂಗೆ ಧರ್ಮದ
ಸಾರವಿದು ಹರಿಭಕ್ತರಿಂಗೆಯು
ಕಾರಣವು ಪಾಂಡವರವರ ಕಥೆ ಸುಧೆಯ ತೆರನಂತೆ ॥ ೪೧೬ ॥

X X X X

ಕ್ಷೀರಾಬ್ಧಿಯ ಮಥಿಸಿದ ಮಹಿಮಗೆ
ವಾರಿಜನಾಭಗೆ ಶ್ರೀ ಕೃಷ್ಣಗೆ
ನಾರಿ ರುಕ್ಮಿಣಿಯು ಸಹಿತಲಿ
ಸಹಿತಲಿ ಕರುಣಾನಿಧಿ ಹರಿಗೆ
ನೀರೆರದಾರಾತೀಯ | ಬೇಳಾಗೀರೆ | ಶೋಭಾನೆ ॥ ೪೨೧ ॥
ಸಂಪೂರ್ಣಕ್ಕೆ ಮಂಗಳ ಮಹಾ ಶ್ರೀ

ವಿಷಯ : ದ್ರೌಪದಿಯ ವಸ್ತ್ರಾಪಹರಣದ ಕಥೆ.

ವಿಶೇಷ : ಸ್ಫುಟಾಕ್ಷರ, ತೆಳುವು ಕಾಗದ.

689

ಕೆ ೫೬೪/೨	**ದ್ರೌಪದಿ ಸೀರೆ ಸೆಳೆದ ಹಾಡು**	ಹಾಡು
೧೦.೨"×೧.೮"	ಕೆ. ಅನಂತರಾಮಯ್ಯ (?)	೧೯ನೇ ಶತಕ
೪-೫ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ದ್ರಉಪದಿ ಶೀರೆ ಶಳದ ಉದೆಯರಾಗ ಬರುವುದಕ್ಕೆ ನಿರ್ವಿಘ್ನಮಸ್ತು ॥
ಹರಿಯೇ ವಾಸುದೇವಾಯಂನ್ನಮೋ ॥
ವಾಸುಕಿಯೊಳ್ಳೆಯನಾಯು
ವಾಸವಾದ್ಯಖಿಳ ಮುನಿನಮಿತ ಪಾದಾಂಬೋಜ
ಭೂಸುರ ಪ್ರಿಯನೆ ಭಜಕರನೆ ಪಾಲಿಸುವ
ಕೇಶವ ಮುಕುಂದ ನೀನೊಲಿದು ॥
ಹರಿಯೇ ವಾಸುದೇವಾಯಂನ್ನಮೊ ॥ ಪಲ್ಲ ॥
ಶುಂಡಾಲ ಪುರದೊಳಗೆ ದುರುಳ ದುರ್ಯೋಧನರು
ಪಾಂಡುನಂದನರೊಳಗೆ ಕಪಟ ಜೂಜುಗಳಾಡಿ
ಗಂಡರೈವರ ಮುಂದೆ ದ್ರುಪದ ಸುತೆಯಳ ಶರಗ ಪಿಡಿ
ದಂಡಲದು ಶೀರೆಯನು ಸುಲಿವುತಿರೆ
ಕಂಡು ಮನದಲಿ ಬೆದರಿ ಪರಮಾತ್ಮ ಪರಿಪೂರ್ಣ
ಪುಂಡರೀಕಾಕ್ಷ ರಕ್ಷಿಪುದೆಂದು ಮೊರೆಯಿಡಲು
ಲಂಡ ಚತುರಂಗ ಬಂದುದಾಗಾ ॥ ಹರಿಯೇ ವಾಸು ॥ ೧ ॥

ಅಂತ್ಯ : ಆವನಿದನೊಬ್ಬನುದಯಕಾಲದೊಳಿದ್ದು ಪಾರಾಯಣವ ಮಾಳ್ಪ ಸುಜನರ್ಗೆ
ಸಾವಿರ ಜನ್ಮದ ಸಂಚಿತಾರ್ಥದ ಪಾಪ ತಾನೆಹಹವಹುದೆಂದು ಮುಕುಂದ
ನಿಗೊಪ್ಪಿಸಿದರು
ಭಾವೆ ಕೇಳೆಂನ್ನ ಮುಂದೆ ಭಾಷೆಯನು ಅರ್ಜುನಗೆ ಸಾರಥಿಯಾಗಿ
ಸಲಹುವೆನುಲಿವರೆಂನ್ನ
ಜೀವ ಪಾಂಡವರೆಂಸನೂ ॥ ಹರಿಯೇ ವಾಸುದೇವಾಯಂನ್ನಮೊ ॥ ೧೩ ॥
ಮಂಗಳಂ ಭವಹರಗೆ ಮಂಗಳಂ ಮುರಹರಗೆ
ಮಂಗಳಂ ತರಳೆ ಅಭಿಮಾನವನು ಕ್ಯೊದವಗೆ
ಮಂಗಳಂ ಕನಕಾದ್ರಿ ನರಸಿಂಹ್ನಗೆ
ಮಂಗಳಂ ಜಯ ಮಂಗಳಂ ಸದಾ ಶುಭ ಮಂಗಳಂ ॥ ಶ್ರೀ ॥

ವಿಷಯ: ದ್ರೌಪದಿಯು ವಸ್ತ್ರಾಪಹರಣ ಕಾಲದಲ್ಲಿ ಕೃಷ್ಣನಿಗೆ ಮೊರೆ ಇಡುವುದು.

ವಿಶೇಷ : ಈ ಕಟ್ಟನಲ್ಲೇ ಅಜಾಮಿಳನ ಮೋಕ್ಷ, ಉದಯರಾಗ ಎಂಬ ಇತರ ಹಾಡುಗಳಿವೆ. ಕೊನೆಯಲ್ಲಿ ಇಂದ್ರಕೀಲ ಯಕ್ಷಗಾನ ಪ್ರಾರಂಭ ಮಾಡಿರುವ ಒಂದು ಓಲೆ ಇದೆ.

690

ಕೆ.ಬಿ. ೭೭	**ದ್ರೌಪದೀ ಸ್ವಯಂವರ**	ನಾಟಕ
೮×೬.೪"	ಗಿರಿಭಟ್ಟರ ತಮ್ಮಯ್ಯ	?
೧—೪೬ ಪತ್ರ	೧೯ ಪಂಕ್ತಿ	೧೮ ಅಕ್ಷರ

ಆದಿ : ಸೂತ್ರಧಾರಂ॥
ವೃತ್ತ॥ ಶ್ರೀಮನ್ಮಂಗಳದೇವತಾ ಮುಖಸರೋಜಾತಾರ್ಕ ಬಿಂಬಂ ದಯಾ
ಧಾಮಂ ಪನ್ನಗರಾಜ ಮಂಚಶಯನಂ ಪಂಕೇಜ ಸಂಭೂತ ಸು
ತ್ರಾಮಾದ್ಯಾಮರ ಮುಖ್ಯವಂದಿತಕರಂ ಭಕ್ತಾಂತರಂಗ ಪ್ರಿಯಂ
ಚಾಮೋರ್ವೀಪತಿಗೀಗೆ ಭದ್ರತತಿಯಂ ದಾಮೋದರಂ ಸುಂದರಂ ॥

x x x x

ಕಂ ॥ ಶೌರಿಯ ದಯದಿಂ ಲಾಕ್ಷಾ
ಗಾರದೆ ಕಂಟಕವ ಪರಿಹರಿಸಿಕೊಳ್ಳುತಲೀ
ವೀರ ಪಾಂಡವರು ದೃಪದ ಕು
ಮಾರಿಯ ಕೈವಿಡಿದ ಕಥೆಯನಾಡಿಪೆನೀಗಳ್ ॥ ೧೫ ॥

ಅಂತ್ಯ : ಎಲ್ಲರೂ ರಾಗ ||
ಸ್ಥಿರವಾಗಿರಲಿ ವಧೂವರರೂ | ಸರಸ ಗುಣಾನ್ವಿತರು | ಮಾನಿತರು || ಪ ||
ವರಸುಕುಮಾರರ ಪಡೆಯುತೆ ಮುದದಿ
ಧರಣಿಯೊಳಧಿಕಾನಂದವ ಪೊಂದಿ || ಅ ||
ಶ್ರೀ ವಾಸುದೇವಾನುಗ್ರಹದಿಂದ
ದೇವೇಶಗಮು ವೈಭವದಿಂದ
ಯಾವಾಗಲು ಮಹಿತೋತ್ಸವದಿಂದ
ಭೂವಲಯುವ ಸಲಹುತ ಸುಖದಿಂದ || ೧ ||

(ಎಲ್ಲರೂ ತೆರಳುವರು) ಷಷ್ಠಾಂಕಂ ಸಂಪೂರ್ಣಂ||

ವಿಷಯ : ದ್ರುಪದನ ಮಗಳಾದ ದ್ರೌಪದಿಯು ಅರ್ಜುನನನ್ನು ವರಿಸುವ ಪ್ರಸಂಗ.

ವಿಶೇಷ : ಸ್ಫುಟಾಕ್ಷರ. ಕೊನೆಯಲ್ಲಿ ಬರೆಯದ ಕೆಲವು ಪತ್ರಗಳಿವೆ.

691

ಕೆ.ಬಿ. ೧೬೫	ದ್ರೌಪದೀ ಸ್ವಯಂವರ	ಯಕ್ಷಗಾನ
೭.೬"×೬.೨"	ಲಿಂಗರಾಜ	೧೮೫೦
೧-೫೮ ಪತ್ರ	೧೧ ಪಂಕ್ತಿ	೧೮ ಅಕ್ಷರ

ಆದಿ : ದ್ರೌಪತಿ ಸ್ವಯಂವರ ಬರ್ರಿವರೆ ಶುಭಮಸ್ತೂ ||
ಶಾರ್ದೂಲ ವಿಕ್ರೀಡಿತ ||
ಶ್ರೀಮದ್ಬ್ರಹ್ಮಮುಖಾಮರಾರ್ಚಿತ ಪದಂ ಸುಜ್ಞ್ಹಾನ ಕಲ್ಪದ್ರುಮಂ
ಸೋಮಾದಿತ್ಯ ಸಹಸ್ರತೇಜಸದೃಶಂ ಸ್ವಾನಂದ ಭಾಗ್ಯೋದಯಂ
ಭೀಮಂ ಸತ್ವಸಮಾನ ಶೌರ್ಯಮದಿಕಂ ತ್ರೈಲೋಕ್ಯ ರಕ್ಷಾಮಣಿಂ
ಹೇಮಾಲಂಕೃತ ಶೋಭಿತಂ ಗುಣಯುತಂ ಶ್ರೀ ವೇಂಕಟೇಶಂ ಭಜೇ ||

X X X X

ಕಂದ || ಹರ ಕೃಪೆಯೊಳು ಪಾಂಡುಕುಮಾ
ರರು ಕಳಿಯುತ ಚತುಭವನಮುಪಥದೊಳ್ಖಲರಂ
ತರಿದು ದ್ರೌಪತಿಯಂ ತಾಂ
ಪರಿಣಯವಂ ಪಡದ ನರನ ಕಥೆಯ ಪೇಳ್ವೆಂ || ೧೪ ||

ಅಂತ್ಯ : ಕಂದ ॥ ಹರಿ ಬಹು ಸಿದ್ಧಿ ರವಿ ಹಯ
ವರ ವಿಧುಮಿತ ದುಂದುಭಿಯೊಳಗೇಳನೆ ಮಾಸಂ
ತೆರಳುವನಿತರೊಳು ಪೇಳ್ದಂ
ಹರುಷದೊಳೀ ಕಥೆಯನೊಲಿದು ಲಿಂಗನರೇಂದ್ರಂ ॥ ೪೨೬ ॥
ಅಂತು ಸಂಧಿ ೪೨೬ ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ದ್ರೌಪದಿಯು ಅರ್ಜುನನನ್ನು ವರಿಸಿದ ಕಥೆ.

ವಿಶೇಷ : ಸ್ಫುಟಾಕ್ಷರ.

692

ಕೆ.ಬಿ. ೪೮೩/೨ **ದ್ರೌಪದೀ ಸ್ವಯಂವರ** **ಯಕ್ಷಗಾನ**
೭.೬"×೬" ಲಿಂಗರಾಜ ೧೮೫೦
೭೨–೧೧೯ ಪತ್ರ ೧೪ ಪಂಕ್ತಿ ೧೯ ಅಕ್ಷರ

ಆದಿ : ದ್ರೌಪತಿ ಸ್ವಯಂವರದ ಕಥೆ ॥ ನಾಂದಿ ಕಂದ ॥
ಶ್ರೀಕರ ಪದಯುಗ ಭಜನಾ
ಸ್ತೋಕ ವಿಪಧ್ವಂಸಕಂ ಹಿಮಾಚಲತನಯಾ
ನೇಕ ತಪಃಫಲರೂಪಂ
ಬೇಕಾದಿಷ್ಟವನು ಕುಡಗೆ ಕಾಳೀನಾಥಂ ॥ ೧ ॥

X X X X

ಕಂದಾ ॥ ಹರಕೃಪೆಯೊಳು ಪಾಂಡುಕುಮಾ
ರರು ಕಳಿಯುತ ಜತುಭವನಮು ಪಥದೋಳ್ಬಳರಂ
ತರಿದು ದ್ರೌಪದಿಯಂ ತಾಂ
ಪರಿಣಯವಂ ಪಡದ ನರನ ಕಥೆಯಂ ಪೇಳ್ವೆಂ ॥ ೧೪ ॥

ಅಂತ್ಯ : ವಾರ್ಧಕ ॥ ಚರರ ಮುಖದಿಂದಲೀ ವಾರ್ತೆಯಂ ಕೇಳುತ್ತ
ತೆರಳೆ ಕೌರವರವರ ಸಂತೈಸುತಂದು ನೃಪ
ನಿರದೆ ವಿದುರನ ಕಳುಹಿ ಕರತರಿಸಿ ಪಾಂಡವರ ಕರುಣದಿಂ ಸಂತೈಸುತ
ಹರುಷದಿಂ ಮೆರೆಯುವಿಂದ್ರಪ್ರಸ್ಥಪುರವೀಯೆ
ವರ ಪಾಂಡುಸುತರು ಸುಖದಿಂದಿರ್ದರೆಂದಾಗ
ಧರಣೀಶತಿಲಕ ಜನಮೇಜಯಗೆ ಪೇಳಿದಂ ಮುನಿಪ ವೈಶಂಪಾಯನು
॥ ೪೨೧ ॥

X X X X

ಸಂಗತ ಕರುಣಾಪಾಂಗ
ಲಿಂಗಭೂಪಾಲಾಂತರಂಗ
ರಂಗನರ್ತ್ರಕ ಮಹಲಿಂಗ । ಶುಭ ಮಂಗಳಂ ॥ ೪೨೪ ॥

ಕಂದಾ ॥ ಹರಿಬಾಹು ಸಿದ್ಧಿ ರವಿ ಹಯ
ವರ ವಿಧುಮಿತ ದುಂಧುಭಿಯೊಳಗೇಳನೇ ಮಾಸಂ
ತೆರಳುವನಿತರೊಳೆ ಪೇಳ್ದಂ
ಹರುಷದೊಳೀ ಕಥೆಯನೊಲಿದು ಲಿಂಗನರೇಂದ್ರಂ ॥ ೪೨೫ ॥

ಸಂಪೂರ್ಣಂ॥ ಶ್ರೀ॥ ವಾರ್ಧಕ ೨೮ ಭಾಮಿನಿ ೨೧, ಕಂದಾ ೩೫–೪೮ ।

ವಿಷಯ : ದ್ರೌಪದಿಯು ಅರ್ಜುನನನ್ನು ವರಿಸಿದ ಕಥೆ.

ವಿಶೇಷ : ಸ್ಫುಟಾಕ್ಷರ, ತೆಳವುಕಾಗದ. ಇದೇ ಪುಸ್ತಕದಲ್ಲಿ ಕುಶಲವರ ಕಥೆ ಎಂಬ ಮತ್ತೊಂದು ಕೃತಿ ಇದೆ. ಕೊನೆಯಲ್ಲಿ ೧೯ ಶುದ್ಧ ಪತ್ರಗಳಿವೆ.

693

ಕೆ.ಬಿ. ೫೦೧	**ದ್ರೌಪದೀ ಸ್ವಯಂವರ**	ಯಕ್ಷಗಾನ
೮″ × ೬.೨″	ಲಿಂಗರಾಜ	೧೮೫೦
೧–೭೮ ಪತ್ರ	೯ ಪಂಕ್ತಿ	೧೮ ಅಕ್ಷರ

ಆದಿ : ದ್ರೌಪದೀಸ್ವಯಂವರದ ಕಥೆ X X X

ನಾಂದಿ॥ ಕಂದ॥ ಶ್ರೀಕರಪದಯುಗಭಜನಾ
ಸ್ತೋಕಲಿಪ ಧ್ವಂಸಕಂ ಹಿಮಾಚಲತನಯಾ
ನೇಕ ತಪಃ ಫಲರೂಪಂ
ಬೇಕಾದಿಷ್ಟವನು ಕುಡುಗೆ ಕಾಳೀನಾಥಂ ॥ ೧ ॥

ರಾಗ ॥ ನಾಟಿ ॥ ಆದಿತಾಳ ॥
ಜಯ ಜಯ ದಕ್ಷನೆ ದಕ್ಷಶಿಕ್ಷಕನೆ ॥ ಪ್ಲ ॥
ವಾರಣವಾರಣ ದುರಿತನಿವಾರಣ
ಮಾರವಿದಾರಣ ಗೌರೀರಮಣ ॥ ೨ ॥

X X X X

ಕಂದ ॥ ಹರಕೃಪೆಯೊಳು ಪಾಂಡುಕುಮಾ
ರರು ಕಳಿಯುತ ಜತುಭವನನು ಪಥದೊಳ್ಳಳರಂ
ತರಿದು ದ್ರೌಪದಿಯಂ ತಾಂ
ಪರಿಣಯವಂ ಪಡದ ನರನ ಕಥೆಯಂ ಪೇಳ್ವೆಂ ॥ ೧೪ ॥

ಅಂತ್ಯ : ಕಂದ ॥ ಹರಿ ಬಾಹು ಸಿದ್ಧಿ ರವಿ ಹಯ
ವರ ವಿಧುಮಿತ ದುಂದುಭಿಯೊಳಗೇಳನೆ ಮಾಸಂ
ತೆರಳುವನಿತರೊಳೆ ಪೇಳ್ದಂ
ಹರುಷದೊಳೀ ಕಥೆಯನೊಲಿದು ಲಿಂಗನರೇಂದ್ರಂ ॥ ೪೨೫ ॥

ಸಂಪೂರ್ಣಂ ಶ್ರೀ॥ ವಾರ್ಧಕ ೨೮, ಭಾಮಿನಿ ೨೧, ಕಂದ ೩೫–೮೪ ಸಂವತ್ಸರ ೮
ಮಾಸ ೮ ಪಕ್ಷ ೧ ದಿನ ೪ರಲ್ಲೂ ಬರದದ್ದೂ॥

ವಿಷಯ : ದ್ರೌಪದಿಯು ಅರ್ಜುನನನ್ನು ವರಿಸಿದ ಕಥೆ.

ವಿಶೇಷ : ಅಕ್ಷರಗಳು ಗುಂಡಾಗಿ ವಿರಳವಾಗಿವೆ.

694

ಕೆ.ಬಿ. ೪೦೬	**ದ್ರೌಪದೀ ಸ್ವಯಂವರ**	ಯಕ್ಷಗಾನ
೮.೨"×೬.೭"	ಮಧ್ವೇಂದ್ರ ?	?
೧–೩೫ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ದ್ರೌಪದಿ ಸ್ವಯಂವರ ಬರಿಯುವದಕ್ಕೆ ಶುಭಮಸ್ತು ॥
ಶಾರ್ದೂಲವೃತ್ತ॥ ಶ್ರೀದುರ್ಗಾವದನಾಂಬುಜಸ್ಥಿರರತಿಂ ಶ್ರೀಶೈಲನಾಥಂ ಶಿವಂ
ಶ್ರೀದಾಕಾರ ಸಖಂ ಕರೀಂದ್ರವರದಂ ಶ್ರೀಕಂಠವಿಾಶಂ ಮೃಡಂ
ಶ್ರೀದಂಶಾರತಕಲಾನಿಧಿಂ ಸುಲಲಿತಂ ಶ್ರೀವತ್ಸರಾಶಾಕರಂ
ಶ್ರೀ ಧರ್ಮಸ್ಥಳ ಮಂದಿರಂ ಶುಭಕರಂ ಶ್ರೀ ಮಂಜುನಾಥಂ ಭಜೇ ॥ ೧ ॥
ಬಕನ ಮುರಿದನಿಲಜಾಧ್ಯರು ಸುಭಿಕ್ಷೆಯಲಿ
ಪ್ರಕಟಿಸದೆ ಬಂದು ದೃಪದಜೆಯ ಪ್ರೇಮದಲಿ ॥ ೧೦ ॥
ವರಿಸಿದಾ ಕಥೆಯಂನು ಯಕ್ಷಗಾನದಲಿ
ವರವೆನ್ನೈ ಮಧ್ವೇಂದ್ರ ಕೃಷ್ಣ ಸೊಲುಮೆಯಲಿ ॥ ೧೧ ॥

ಅಂತ್ಯ : ಪುಣ್ಯಪುರುಷ ರಂಗಧಾಮನಿಗೆ
ಮಂಗಳಂ ಲಕ್ಷ್ಮಿಯರಸನಿಗೆ ॥ ೫ ॥

ಅಂತು ಸಂಧಿ ೧ಕ್ಕಾಂ ಪದನೂ ೪೪೬ ಪ್ರಥಮಾಧ್ಯಾಯ ೧೪೬ ಅಂತು ೫೯೨ ಕಾಂ ಮಂಗಳಮಹಾಶ್ರೀ.
ಪ್ಲವ ಸಂ। ಮಾರ್ಗಶಿರ ಬ ೭ ಬುಧವಾರ ಸ್ಶ ೧೯೦೨ನೆ ಯ್ಸಿವಿ ಜನವರಿ ತಾರೀಕು ೧ಲ್ಲು–ದ್ರೌಪದಿಯ ಸ್ವಯಂವರ ಸಂಪೂರ್ಣಃ.

ವಿಷಯ : ದ್ರೌಪದಿಯು ಅರ್ಜುನನನ್ನು ವರಿಸಿದ ಕಥೆ.

ವಿಶೇಷ : ಅಕ್ಷರಗಳು ಸುಂದರವಾಗಿವೆ.

695

ಕೆ.ಎ. ೧೮೩/೫	ದ್ವಾದಶ ಮಂಜರಿ (ಭಜಗೋವಿಂದ ಸ್ತೋತ್ರ)	ಶ್ಲೋಕ, ಟೀಕು
೧೧″×೮″	?	?
೧೭೦–೧೭೪ ಪತ್ರ	೨೧ ಪಂಕ್ತಿ	೨೭ ಅಕ್ಷರ

ಆದಿ : ದ್ವಾದಶ ಮಂಜರಿ—
ಸಂಸಾರೆ ಸಂನಿಹಿತೇ ಕಾಲೆ ನಹಿ ನಹಿ ರಕ್ಷತಿ ಡ್ರು ಕಿಂ ಹಿ ಕರಣೆ।
ಭಜ ಗೋವಿಂದಂ ಭಜ ಗೋವಿಂದಂ ಭಜ ಗೋವಿಂದಂ ಮೂಢಮತೆ॥
ದಿನಮಪಿ ರಜನಿ ಸಾಯಂ ಪ್ರಾತಃ ಶಿಶಿರ ವಸಂತೌ ಪುನರಾಯಾತಃ।
ಕಾಲಃ ಕ್ರೀಡತಿ ಗಚ್ಛತ್ಯಾಯುಃ ತದಪಿ ನ ಮುಂಚತ್ಯಾಶಾಪಾಶಃ॥
ಭಜಗೋವಿಂದಂ ॥ ೧ ॥

ಟೀ॥ ಹಗಲು ರಾತ್ರೆಯು ಸಾಯಂಕಾಲ ಪ್ರಾತಃಕಾಲವು ಶಿಶಿರ ವಸಂತಾದಿ ರುತುಗಳು ಮರಳಿ ಮರಳಿ ಬರುತ್ತಲವೇ ಆಯುಸ್ಸು ಕಳೆದು ಹೋಗುತಲದೆ। ಆದಾಗ್ಯು ಆಶೆಯು ಬಿಡುವುದಿಲ್ಲಾ। ಯಲೈ ಮೂಢಬುದ್ಧಿಯುಳ್ಳವನೇ ಗೋವಿಂದನಂನು ನಿರಂತ್ತರದಲ್ಲೂ ಭಜಿಸು ॥ ೧ ॥

ಅಂತ್ಯ : ಯೋಗರತೋ ವಾ ಭೋಗರತೋ ವಾ
ಸಂಗರತೋ ವಾ ಸಂಗವಿಹೀನಃ।
ಕಿಂಚಿದ್ಬ್ರಹ್ಮಣೆ ರಮತೇ ನಿತ್ಯಂ
ನಂದತಿ ನಂದತಿ ನಂದತ್ಯೇವಂ ॥ ಭಜಗೋವಿಂದಂ ॥ ೨೫ ॥
ಶ್ರೀಮತ್ಪರಮಹಂಸ ಶ್ರೀಮಚ್ಛಂಕರಾಚಾರ್ಯ ವಿರಚಿತವಾದ ದ್ವಾದಶ ಮಂಜರಿ ಸಂಪೂರ್ಣಂ ಮಂಗಳಮಹಾಶ್ರೀ.

ವಿಷಯ : ಶ್ರೀ ಶಂಕರಾಚಾರ್ಯ ವಿರಚಿತ ದ್ವಾದಶ ಮಂಜರೀ ಸ್ತೋತ್ರದ ಟೀಕು.

ವಿಶೇಷ : ಇದೇ ಪುಸ್ತಕದಲ್ಲಿ ಅನುಭವಾಮೃತ, ವೇದಾಂತಡಿಂಡಿಮ, (ಸಂ) ನಕ್ಷತ್ರಮಾಲಿಕಾ, (ಸಂ) ಅಪರೋಧ ಸ್ತೋತ್ರದ ಟೀಕು, ಭಗವದ್ಗೀತಾ ಎಂಬ ಕೃತಿಗಳಿವೆ.

696

ಕೆ. ೨೩/೩	ದ್ವಾದಶಾನುಪ್ರೇಕ್ಷೆ	ಸಾಂಗತ್ಯ
೧೬.೪"×೧.೯"	ವಿಜಯಣ್ಣ	೧೪೪೮
೧-೫೬ ಪತ್ರ	೮೨ ಪಂಕ್ತಿ	೬೦ ಅಕ್ಷರ

ಆದಿ : ದ್ವಾದಶಾನು .... ಭವ್ಯರು
ಸಾಧಿಸಿ ಸ್ವರ್ಗ ಮೋಕ್ಷವನೂ ॥ ಪಲ್ಲವ ॥
ಶ್ರೀಮದಮರನಂ ಜ್ಯೋತಿಷ್ಕ ಮಕುಟ
....
.... ದಿಸುವೆ ॥ ೧ ॥
ದುರ್ದ್ಧರವೆನಿಪೆಂಟು ಕರ್ಮಂಗಳ ಗೆಲ್ದು
ಶುದ್ಧರೆನಿಪ ಸಿದ್ಧರಿಗೆ
ಸಿದ್ಧಪದವಿಯಾಗಬೇಕೆಂಬ ಬಗೆಇಂದ
ಶುದ್ಧ ಮನದಿ ವಂದಿಸುವೆ ॥ ೨ ॥

ಅಂತ್ಯ : ತ್ರಿಜಗದಭ್ಯುದಯ ಪದವ ನಿಜದಿ ಶಾಸ್ತ್ರ
ಸುಜನರು ಭಾವಿಸುವವರಿಗೆ
ಅಜರಾಮರವಿಗು ಜಿನಭಾಷೆ ತಪ್ಪದು
ವಿಜಯಂಣಗಳು ಹೇಳಿದರೂ ॥ ೩೨೦ ॥

X X X X

ಇತಿ ಶ್ರೀಮದ್ದೇವೇಂದ್ರ ವೃಂದ ಮಣಿಮುಕುಟ ಕಿರಣರಂಜಿತ ಪಾದಾರವಿಂದ .... ಭಗವದರ್ಹತ್ಪರಮೇಶ್ವರ ಮುಖಕಮಲ ವಿನಿರ್ಗ್ಗತ ದ್ವಾದಶಾನುಪ್ರೇಕ್ಷೆಯೊಳು ಭೋದಿ ದುರ್ಲ್ಲಭಾನುಪ್ರೇಕ್ಷೆ ನಿರೂಪಣಂ ದ್ವಾದಶಃ

ಇತಿ ದ್ವಾದಶಾನುಪ್ರೇಕ್ಷಾ ಸಮಾಪ್ತಃ ॥ ಶ್ರೀ ॥

ವಿಷಯ : ಜೈನ ಮತದ ದ್ವಾದಶಾನುಪ್ರೇಕ್ಷೆಗಳ ವಿಚಾರ.

ವಿಶೇಷ: ಆದಿ ಅಂತ್ಯಗಳ ಕೆಲವು ಗರಿಗಳು ತ್ರುಟಿತ. ಶಕಟರೇಫವಿದೆ. ಧರ್ಮ ಪರೀಕ್ಷೆ, ನೋಂಪಿಯ ಕಥೆಗಳೆಂಬ ಎರಡು ಕೃತಿಗಳು ಇದೇ ಕಟ್ಟಿನಲ್ಲಿವೆ.

697

ಕೆ. ೧೨೩	ದ್ವಾದಶಾನುಪ್ರೇಕ್ಷೆ	ವೃತ್ತ
೧೬.೬" × ೧.೭"	?	?
೧-೭೧ ಪತ್ರ	೭ ಪಂಕ್ತಿ	೭೫ ಅಕ್ಷರ

ಆದಿ: ಶ್ರೀಯುಂ ನಿರ್ಮಲವಂಶಮುಂ ವಿಭುತೆಯುಂ ಸಾಸ್ತ್ರಾರ್ಥ ವೇದಿತ್ವಮುಂ
ಕಾಯಾಯು ಸ್ಥಿರಭಾಮುಂ ಮನುಜನಾವಂಗಾಡೊಡಂ ಮತ್ತುಪಾ
ದೇಯಂ ಹೇಯಮಿದೆಂದು ತಾಂ ಸ್ವಪರ ತತ್ತ್ವಾತತ್ತ್ವಮಂ ಕಾಣದಂ
ದಾಯಲ್ಲಂ ವಿಫಲಂಗಳೆಂದಱಿಪಿದೈ. ನಿರ್ವಾಣ ಲಕ್ಷ್ಮೀಪತೀ ॥ ೧ ॥

ಅಂತ್ಯ: ವರರಾಜ್ಯಂಗಳ....... ....ಸಾದಿಸಲು ಬಕ್ಕುಂ
ಚಕ್ರವರ್ತಿತ್ವಮುಂ........ಳ್ಗಂ ಸಲೆ ಬೋದಿರತ್ನಮೇ ಕರಂ
ನೋಡಲ್ಕಾಹಾ ದುರ್ಲಭಂ ॥
ಗದ್ಯ ॥ ಇತಿ ಶ್ರೀಮದ್ದೇವೇಂದ್ರ ವೃಂದವಮ .....ಭಾನುಪ್ರೇಕ್ಷಾ ನಿರೂಪಣಂ
ದ್ವಾದಶತಮ ಪರಿಚ್ಛೇದಂ ॥ ಇತಿ ದ್ವಾದಶಾನುಪ್ರೇಕ್ಷಾಸ್ಸಮಾಪ್ತಃ ॥....
ಪಾದವೆ ಶರಣಲ್ಲದೆ ಅನ್ಯತ್ರ ಶರಣಂ ನಾಸ್ತಿ ಯೆನ್ನಗುರು ಅಕಲಂಕದೇವರ
ಪದಕ್ಕೆ ಸದಾಕಾಲವೂ ನಮೋಸ್ತು ॥ ವೀತರಾಗಾಯ ನಮಃ ....

ವಿಷಯ: ಜೈನಮತದ ದ್ವಾದಶಾನುಪ್ರೇಕ್ಷೆಗಳ ವಿಚಾರ.

ವಿಶೇಷ: ಶಿಥಿಲಪ್ರತಿ. ಮಧ್ಯದಲ್ಲಿ ಗ್ರಂಥಪಾತವಿದೆ. ಶಕಟರೇಫದ ಬಳಕೆ ಇದೆ.

698

ಕೆ.ಎ. ೪೫/೨	ದ್ವಾದಶಾನುಪ್ರೇಕ್ಷೆ	ಕಂದ, ವೃತ್ತ
೧೨.೯"×೭.೯"	?	?
೬೦-೬೪ ಪತ್ರ	೨೩ ಪಂಕ್ತಿ	೨೪ ಅಕ್ಷರ

ಆದಿ: ದ್ವಾದಶಾನುತ್ಪ್ರೇಕ್ಷೆ ಪ್ರಾರಂಭಾ ॥
ವರರಾಜ್ಯಂ ಸುರಚಾಪ ಬಂಧುಜನಮುಂ ಸಂಧ್ಯಾರುಣಂ ಮತ್ತಾವಾ
ರಾಣಮುಂ ವಾಜಿರಥಂ ಪದಾತಿನಿವಹಂ ಸ್ತ್ರೀಯರ್ಕಳುಂ ಪುತ್ರರುಂ

ಘನಮೇಘಾಕೃತಿ ರೂಪು ಯೌವನಬಲಂ ವಿದ್ಯುಚ್ಚಲಂ ನೋಳ್ಪಡಂ
ನಿರುತಂ ನಂಬಲುಬೇಡ ಜೀವ ನಿನಗಂ ನದ್ಧರ್ಮಮೊಂದೇ ಧ್ರುವಂ ॥ ೧ ॥
ಸುರಲೋಕಂಗಳ ಪೊಕ್ಕಡಂ ಇರದೆ ತಾಂ ಪಾತಾಳಮಂ ಪೊಕ್ಕಡಂ
ಗಿರಿದುರ್ಗ್ಗಂಗಳೊಳಿರ್ದ್ದೊಡಂ ಶರಧಿಯಂ ಪಾಯ್ದಲ್ಲಿ ಪೋಗಿರ್ದ್ದಡಂ
ಭರದಿಂ ಪರ್ವತಾಗ್ರದಲ್ಲಿ ಗುಹೆಯಂ ಪೊಕ್ಕಿರ್ದ್ದದಿಂತೆಲ್ಲಿಯುಂ
ಶರಣೆಲ್ಲಂ ಪೆರತಾವ ಠಾವು ನಿನಗಂ ಸದ್ಧರ್ಮದುರ್ಗ್ಗಂ ವಿನಾ ॥ ೨ ॥

ಅಂತ್ಯ : ಕಂದಾ ॥ ಪರಮುಸಯೋಗಿ ಆಯೋಗಿಗ
ಳರದೆಡೆಯೊಳು ನೋಡಲಿಂತು ಹಂನೆಂದೆಡೆಯೊಳು
ಪಿರಿದಪ್ಪ ಕರ್ಮ ಬಂಧನ
ನಿರುತಮುಸಂಖ್ಯಾತ ಗುಣದಿ ನಿರ್ಜರೆಯಕ್ಕುಂ ॥ ೨೭ ॥

ವಿಷಯ : ಜೈನಮತದ ದ್ವಾದಶಾನುಪ್ರೇಕ್ಷೆಗಳ ವಿಚಾರ.

ವಿಶೇಷ : ಅಸಮಗ್ರ. ೨೭ ಪದ್ಯಗಳಿವೆ. ಮೋಡಿ ಅಕ್ಷರ. ಇದೇ ಪುಸ್ತಕದಲ್ಲಿ ಯೋಗರತ್ನಾಕರ ಮತ್ತು ಲೋಕಸ್ವರೂಪ ಎಂಬ ಕೃತಿಗಳಿವೆ.

699

ಕೆ. ೩೬೬/೫	**ಧನಂಜಯ ನಿಘಂಟು (ಸಟೀಕಾ)**	ಶ್ಲೋಕ, ಟೀಕು
೮.೭″ × ೨.೩″	?	?
೬೪–೯೮ ಪತ್ರ	೧೧ ಪಂಕ್ತಿ	೪೦ ಅಕ್ಷರ

ಆದಿ : ಧನಂಜಯ—

ತಂ ನಮಾಮಿ ಪರಂಜ್ಯೋತಿರವಾಗ್ಮನಸಗೋಚರಂ।
ವುನ್ಮೂಲಯತ್ಯವಿದ್ಯಾಂ ಯದ್ವೇದ್ಯ ಮುನಿರ್ಲಯತ್ಯಪೆಯತ್ ॥

ಆವನಾನೊರ್ವ್ವ ಪರಮೇಶ್ವರನ ಕೇವಲಜ್ಞಾನವು ಅವಿದ್ಯಾ ಅಗ್ನಾನವನು। ವುನ್ಮೂಲಯತಿ । ಬೇರ್ವೆರಸಿ ಕಿತ್ತು ವಿದ್ಯಾಂ। ಸುಜ್ಞಾನವನು। ವುನ್ಮೂಲ ಯತಿ । ಪ್ರಕಾಶಮಂ ಮಾಳ್ಪೆ। ಅಹಿ ಮತ್ತೆಯುಂ। ಅವಾಗ್ಮನಸಗೋಲರಂ ವಾಕ್ಕಿಂಗೂ ಮನಸ್ಸಿಂಗೂ ಗೋಚರಮಲ್ಲದ। ತತ್ ಅಂತಪ್ಪ ಜ್ಯೋತಿ ಸ್ವರೂಪಕ್ಕೆ ನಮಾಮಿ। ನಮಸ್ಕಾರಮಂ ಮಾಳ್ಪೆ ॥ ೧ ॥

ಅಂತ್ಯ : ಸೃಂಗಾರಾದೌ ಕಷಾಯಾದೌ ಘೃತಾದೌ ಚ ವಿಷೇ ಜಲೇ।
ನಿರ್ಯ್ಯಾಸೇ ಪಾರದೇ ರಾಗೆ ವೀರ್ಯ್ಯೇ ಚ ರಸಯಿಷ್ಯತೇ॥

ಟ್ಕೊ॥ ಸೃಂಗಾರಾದೌ। ಶೃಂಗಾರಾದಿಯಾದ ನವರಸಂಗಳಲ್ಲಿ । ಕಷಾಯಾದೌ। ಕಷಾಯ ಕಟು ತಿಕ್ತ ಮಧುರ ಆಮ್ಲ ಲವಣ ಯಿಾ ೬ಱಲ್ಲಿ। ಘೃತಾದೌ। ತುಪ್ಪ ಮೊದಲಾದ ರಸಂಗಳಲ್ಲಿ ವಿಷೇ। ವಿಷೇಷದಲ್ಲಿ। ಜಲೇ। ನೀರಿನಲ್ಲಿ। ವಿಯರ್ಯ್ಯಸೆ। ಷಗಿನದಲ್ಲಿ। ಪಾರದೆ। ಪಾದರದಲ್ಲಿ। ರಾಗೆ। ರಾಗದಲ್ಲಿ। ವೀಯ್ರ್ಯ। ವೀಯ್ರ್ಯದಲ್ಲಿ। ರಸಃ। ರಸಶಬ್ದವು। ಯಿಸ್ಯತೆ। ಪೇಳಲ್ಪಟ್ಟುದು ॥ ೩೦ ॥

ಧನಂಜಯ ನಿಘಂಟು ಸಮಾಪ್ತ ಮಂಗಳಮಹಾಶ್ರೀ॥

ವಿಷಯ : ನಿಘಂಟು (ಧನಂಜಯ ನಿಘಂಟಿನ ಸಂಸ್ಕೃತ ಶ್ಲೋಕಗಳಿಗೆ ಕನ್ನಡ ಟೀಕೆ)

ವಿಶೇಷ : ಮಧ್ಯದಲ್ಲಿ ೬೭,೬೯,೭೦,೭೬,೮೧.೮೩,೯೨ ಈ ಕ್ರಮಾಂಕದ ಓಲೆಗಳಿಲ್ಲ. ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ಶಬ್ದಾರ್ಥ ರತ್ನಾಕರ, ಪದ್ಯನಾನಾರ್ಥ, ಏಕಾಕ್ಷರ ನಿಘಂಟು, ನಾನಾರ್ಥರತ್ನಾಕರ (ಸಟೀಕಾ), ಭಾರತನಿಘಂಟು, ಕರ್ಣಾಟಕ ಶಬ್ದಮಂಜರಿ ಎಂಬ ಕೃತಿಗಳಿವೆ. ಕೊನೆಯಲ್ಲಿ ಈ ಕಟ್ಟಿಗೆ ಸಂಬಂಧಪಡದ ೧೦೪ರಿಂದ ೧೧೦ ವರೆಗಿನ ಕ್ರಮಾಂಕವುಳ್ಳ ಆರು ಓಲೆಗಳಲ್ಲಿ ಕೆಲವು ಪದಗಳಿಗೆ ಅರ್ಥವಿದೆ. ಇದೂ ಅಪೂರ್ಣ.

700

ಕೆ.ಬಿ. ೨೯೦/೬	**ಧನಂಜಯ ನಿಘಂಟು** (ಸಟೀಕು)	ಶ್ಲೋಕ, ಟೀಕು
೭.೬"×೬.೩"	?	?
೩೪–೭೩ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ: ಧನಂಜಯನಿಗಂಟು ಬರೆಯುವದಕ್ಕೆ ನಿರ್ವಿಘ್ನಮಸ್ತು ॥

ಶ್ಲೋಕ ॥ ತಂ ನಮಾಮಿ ಪರಂಜೋತಿರವಾಗ್ಮನಸಗೋಚರಂ ।
ವುಂನ್ಮೂಲಯತ್ಯವಿದ್ಯಾಂ ಯದ್ವಿದ್ಯಾಮುಂನ್ಮೀಲಯತ್ಯಃ ॥

ಟೀ॥ ಆವದಾನೊಂದು ಪರಂಜೋತಿಸ್ವರೂಪವು। ಅವಿದ್ಯಾಂ। ಅಗ್ನಾನವಂನ್ನು ವುಂನ್ಮೂಲಯತಿ। ಬೇರುವೆರಶಿ ಕೀಳ್ವುದೂ। ವಿದ್ಯಾಂ। ಸದ್ವಿದ್ಯೆಯಂನು। ವುಂನ್ಮೀಲಯತಿ। ಪ್ರಕಾಶವಂ ಮಾಳ್ಪುದೂ॥ ಅಪಿ। ಮತ್ತೆ। ಅವಾಕ್ಮನಸಗೋಚರಂ । ವಾಕ್ಕುಗಳಿಗೂ । ಮನಸ್ಸಿಗೂ । ಅಗೋಚರಂ। ಗೋಚರಮಲ್ಲದಂತಪ್ಪ। ತತ್। ತತ್ಪರಂಜೋತಿಃ। ಅಪರಂಜೋತಿಸ್ವರೂಪವಂನೂ। ಅಹಂ। ನಾನೂ। ನಮಾಮಿ। ನಮಸ್ಕಾರವಂ ಮಾಡ್ವೆನು ॥೧॥

ಅಂತ್ಯ : ಪ್ರಮಾಣ ಕಮಲಂ । ಕಸ್ಯ ಪೂಜ್ಯಪಾದಸ್ಯ ಲಕ್ಷಣಂ
ದ್ವಿಸಂದಾನಂ ಕವೇಃ ಕಾವ್ಯಂ ರತ್ನತ್ರಯಮುಃಜ್ಷಿಮಂ ।
ತಂ ಕಾವ್ಯಮನುಜಾ ಯಸ್ಯ ತರವಿಂಸಂ ಶಿರೋಮಣಿಃ
ಪ್ರಮಾಣಂ ನಾಮಮಾಲೈ। ಶ್ಲೋಕಾನಾಂಚ ಶತದ್ವಯಂ ॥೧೬೪॥
ಧನಂಜಯ ನಿಘಂಟು ಸಂಪೂರ್ಣ ಮಂಗಳ ಮಹಃ ॥ ಶ್ರೀ ॥

ವಿಷಯ : ನಿಘಂಟು (ಧನಂಜಯ ನಿಘಂಟಿನ ಸಂಸ್ಕೃತ ಶ್ಲೋಕಗಳಿಗೆ ಕನ್ನಡ ಟೀಕೆ.)

ವಿಶೇಷ: ತೆಳುವುಕಾಗದ. ಇದರೊಡನೆ ಶಬ್ದರತ್ನಾಕರ, ಪದ್ಯನಾನಾರ್ಥ, ಕರ್ಣಾಟಕ ಧಾತುಗಳು, ಭಾರತ ನಿಘಂಟು, ಕನ್ನಡ ಶಬ್ದಮಂಜರಿ ಎಂಬ ಗ್ರಂಥ ಗಳಿವೆ.

701

ಕೆ. ೬೪೪ ಧನವಾಸ್ತು ನಿರ್ಣಯ (ಭೂಗರ್ಭ ದ್ರವ್ಯ) ಗದ್ಯ

೧೪"×೧.೫" ? ?

೧-೨೧೪ ಪತ್ರ ■ ಪಂಕ್ತಿ ೬೦ ಅಕ್ಷರ

ಆದಿ : ಶ್ರೀ ಜಗದ್ಗುರುವರ ನಮುಸ್ಕಾರಂ ॥ ಶತತ್ರಿದರುಶನ ಸ್ಥಾಪಕ ಜಗದ್ಗುರುವರ ನೀನೆ ಬಲ್ಲೆಯಿಾ ಕೃತಿ ಆಗಮುವ ನಿನಗೆ ನಮುಸ್ಕಾರ। ಯಿಾ ಚತುರ್ದಶ ಭುವನಂಗಳಲ್ಲಿರ್ಪ ದನಂಗಳಿಗೆ ಮನು ಬ್ರಾಂಹ್ಮಣ ಮಾಡಿದ । ಧನ ವಾಸ್ತುವನು ಬರೆಯುವದಕ್ಕೆ ಆಯುವದಕ್ಕೆ ಆಯುರಾರೋಗ್ಯ ಐಸ್ವರ್ಯ ಮಸ್ತು ॥ ಶ್ರೀರಸ್ತು x x x

ಶ್ಲೋಕ ॥ ಸರ್ವವಿಸ್ವಾಂ ಕ್ರುತಂ ಚ ನಿರ್ಗುಣ ವಿಶ್ವಕಾರಂ ಚ ।
ವಿಶ್ವವಿಶ್ವಾನಿ ಕ್ರುತಂ ಚ। ಜಗದ್ರಾಜಂ ವಿಶ್ವಕಾರಂ ಚ ॥

ಟೀಕು ॥ ಸರ್ವ ವಿಶ್ವಕ್ರುತಂ ಚ। ಸರ್ವಭೂಮಿಗು ಕರ್ತುವಾದಂತ ಮನು ಬ್ರಂಹ್ಮನು। ವಿಶ್ವ ಯಿಾ ಕ್ಷಿತಿಗೆ ಆತನೆ ಕಾರಣಕರ್ತನಾದ ಕ್ರುತಂ ಹದಿನೆಂಟ್ಟು ಯುಗಂಗಳಿಂದಾಲು। ಬಾ। ಯಿಾ ಜಗಕ್ಕೆ ಶ್ರಿಷ್ಟಿ ಸ್ತಿತಿ ಲಯಕ್ಕೆ ಕರ್ತುವಾದ ನಿರ್ಗುಣಾಕಾರ ಪುರುಷನಾದ ಮನುಬ್ರಂಹ್ಮನು x x x x ಯಿಾ ಗುಣಾಕಾರದ ಭಾಗಾಂಶವನು ನೋಡಿ। ವಿಂಗಡಿಸಿ ಕೊಂಡು ಯಿಾ ಪ್ರುಥ್ವಿಯ । ಜಾಕಾರಿಸುತ್ತ ಬರುವದೆಂದರಿಉದು ॥

ಅಂತ್ಯ : ಆ ಪುರದ ಪೂರ್ವಬಾಗವದಲ್ಲಿ ಕಾವೇರಿ ತೀರದ ಅಗ್ನಿದಿಕ್ಕಿಗೆ ಸಾಲುವನಂ ಯಿರುವದು । ಅಲ್ಲಿ ಐಮುಮಂಟಪ ಯಿರುವವೂ । ಆ ಮಂಟಪದ ಮಧ್ಯ ಮಂಟಪದಲ್ಲಿ । ವಂದು ವೃಷಬ ಯಿರುವದು ಅದರ ಕೆಳಗೆ ವಂದು ಲಕ್ಷ ದನಂ ಯಿರ್ಪುದೂ ಅದರಾಯು....... ದುವರೆ ಸಾವಿರ ವರುಷಾ । ಅದಕ್ಕೆ ಬಲಿ ನೂರುಮಾನ ನೆಲ್ಲಕ್ಕಿ ಅಂನ ಹಂಣು ಕಾಯಿ ದೂಪ ದೀಪ ಚಂದನ ಗಂದಾಕ್ಷತೆ ತಾಂಬೂಲದಿಂ । ಮೂರು ಬಗೆ ಪುಷ್ಪ ವಂದು........ರನಬಲಿ .... ದಲ್ಲಿ ಸಮಾಲಿಕೆಯಂಬ ದೇವತೆಯಿರುವಳು x x x ಬತ್ತಿ ಮಾಡಿ ಹತ್ತಿಸಿ ಕಾಡಿಗೆ ಹಿಡಿದು ಆ ಕರುಕು ಯಿಾ ಕಾಡಿಗೆಯಲ್ಲಾ ಕೂಡಿಸಿ ನುಂಣಗೆ

ವಿಷಯ : ಭೂಮಿಯೊಳಗಿರುವ ಗುಪ್ತ ಧನದ ವಿಚಾರ.

ವಿಶೇಷ : ೧೨, ೧೩, ೪೧–೪೩, ೯೨, ೯೫–೯೪, ೧೦೯–೧೧೨, ೧೩೩–೧೩೫, ೧೫೪–೧೯೦, ೧೯೪–೨೧೪ರ ಗರಿಗಳು ತ್ರುಟಿತ. ೧೫೩ನೆಯ ಕ್ರಮಾಂಕದ ತುಂಡು ಗರಿಯಿದೆ. ಅಸಮಗ್ರಪ್ರತಿ.

702

ಕೆ.ಎ. ೨೫೬/೧	**ಧನ್ಯಕುಮಾರ ಚರಿತ್ರೆ**	ಸಾಂಗತ್ಯ
೧೨.೪"×೭.೯"	ಆದಿಯಪ್ಪ	೧೬೫೦
೧–೧೩೪ ಪತ್ರ	೧೦ ಪಂಕ್ತಿ	೧೭ ಅಕ್ಷರ

ಆದಿ : ಧನ್ಯಕುಮಾರ ಚರಿತೆ ಬರಿಯುವದಕ್ಕೆ ಶುಭಮಸ್ತು ॥

ಶ್ರೀಮುದಮರ ನರಪತಿ ನತ ಪದಯುಗ
ಕಾಮುಜಾರಿ ಚಿದ್ವರದಾ
ಕಾಮಿತಫಲವನಿತ್ತೆನೆಗೆ ಕರುಣದಿಂದ
ಸ್ವಾಮಿ ಸಲಹೋ ಜಿನರಾಜಾ ॥ ೧ ॥
ಧನ್ಯಕುಮಾರನ ಕಥೆಗೇಳಿ ಸರ್ವಾರು
ಧನ್ಯರಾಪ್ತರೆ ಜಗದೊಳಗೆ
ಮನ್ನಣೆ ಮಹಿಮೆ ಸುಗತಿಯನಾರಸುವರೂ
ಸಂನದ್ಧರಾಗಿ ಲಾಲಿಪುದೂ ॥ ೨ ॥

ಅಂತ್ಯ : ಅಂತು ಸುತರ ನಾಲ್ವರ ಪಡೆದವರೊಳ
ತ್ಯಂತ ಕಿರಿಯನಾದಿಪವನೂ

ಚಿಂತಿತ ಸಿದ್ಧಿಯಕೆಂದೀ ಕೃತಿಯನೂ
ಸಂತೋಷದಿ ರಚಿಸಿದೆನೂ ॥ ೪೦೫ ॥

x x x x

ಧಾರುಣಿಯೊಳಗಾಚ್ಚರಿ ತುಳುದೇಶದ
ಗೇರಸಪ್ಪೆಯ ನೃಪವರನೂ
ಭೈರವರಾಯನ ವರಗುರು ಸುರತರು
ಧೀರ ಸೇನಾ ಮುನಿವರನೂ ॥ ೪೦ ॥
ಈ ಧನ್ಯಕುವರನ ಚರಿತೆಯು ಮಾಡಬೇಕೆಂದು
ಆ ಧನ್ಯ ಮುನಿ ಬೆಸಸಿದಡೆ
ನಾ ಧನ್ಯನಾಗಬೇಕೆಂದು ಹೇಳಿದೆ ಕೇಳಿ
ಸಾಧಾನ್ಯರಾಗಿ ನೀವೆಲ್ಲಾ ॥ ೪೧೦ ॥

x x x x

ಶಾರದೆ ಕರುಣಕಟಾಕ್ಷದಿ ಮತಿಯಿತ್ತು
ಬರದೆನು ಪ್ರತಿಯೊಳಿದ್ದಂತೆ
ಆ ಧನ್ಯಕುವರನ ಚರಿತೆಯೊಳಿದ್ದಂತೆ
ನಾನೀ ಧನ್ಯಚರಿತೆ ಬರೆದೆನು
ನಾ ಧನ್ಯನಾಗಬೇಕೆಂದು ಬರೆದೆ ಕೇಳಿ
ಸಾಧಾನ್ಯರಾಗಿ ನೀವೆಲ್ಲಾ ॥ ೪೧೩ ॥

ಧನ್ಯಕುಮಾರ ಚರಿತೆ ಸಮಾಪ್ತಂ ಮಂಗಳಮಹಾಶ್ರೀ ॥ ಕೊಲ್ಲಸ ಉರದ್ಮನೆ ಸಿಚಿ ಮಾರ ೨೦ ಸದು ಸುಕ್ರವರ ಕರ ಸಂಹಕ್ಸರದಲ್ಲಿ ಬರದು ಪೂರುತಿ ಆಯ್ತು. ಕೊಳುಕೊಟ್ಟೆ ಅಣ್ಣೆಯ್ಯವಸ್ಯನ ಮಗ ಚಂದ್ರಂಣ ಬರದ ಧನ್ಯಕುಮಾರನ ಚರಿತೆಗೆ

x x x x

ಬುದ್ಧಿ ವಿವೇಕಿಗಳಾದಂತವರ ಅಡಿಗಳಿಗೆ ತ್ರಿಕಾಲದಲ್ಲು ಭಕ್ತಿಯಿಂದ ಯೆರಗುತ್ತಾ ಯಿಧೇನೆ. ಶ್ರೀ—

ವಿಷಯ : ಧನ್ಯಕುಮಾರನ ಚರಿತೆ.

ವಿಶೇಷ : ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ. ಆರಂಭದ ನಾಲ್ಕು ಪ್ರತ್ಯೇಕ ಪತ್ರಗಳಲ್ಲಿ ಗ್ರಂಥಸೂಚಿ, ಕಥಾಸಾರಾಂಶಗಳಿವೆ. ಪ್ರತಿಯಕಾಲ ೧೯೦೯. ಇದೇ ಪುಸ್ತಕದಲ್ಲಿ ಕೊರವಂಜಿ ಕಥೆಯೆಂಬ ಇನ್ನೊಂದು ಕೃತಿಯಿದೆ.

703

ಕೆ. ೧೭ | ಧರ್ಮನಾಥ ಪುರಾಣ | ಚಂಪೂ
ಅ.೭"X೨" | ಮಧುರ | ೧೩೮೫
೧–೭೬ ಪತ್ರ | ೧೧ ಪಂಕ್ತಿ | ೩೭ ಅಕ್ಷರ

ಆದಿ : ಶ್ರೀಭಾಸ್ವ ....ಯಿಸಿ ದಶ ಧರ್ಮಕ್ಕಡಪ್ಪಾರ್ದ ತೇಜೋ
ಭಾ ಭಾಸ್ವದ್ಧರ್ಮಚಕ್ರಂ ಸಮನಿಸೆ ಸುಮನೋಧರ್ಮನಂ ಧರ್ಮನಂ ಧಾ
ತ್ರೀಭಾಗಂ ಚಾಗೆನಲ್ ಚಾಳಿಸೆ ಚತುರತೆಯಿಂ ಗೆಲ್ದ ಕೈವಲ್ಯಲಕ್ಷ್ಮೀ
ಲಾಭಾಯತ್ತಾತ್ಮಧರ್ಮಂ ಸಲಹುಗೆ ಸಲೆ ಸದ್ಧರ್ಮಮಂ ದರ್ಮನಾಥಂ
॥ ೧ ॥

X X X X

ಕಂ ॥ ಕವಿ ಮದುರನ ಮಾತುಗಳೀಂ
ಸವಿಯೊ ಮದಪ್ಲವಕೆ ಮೊರೆವ ಮಱುದುಂಬಿಗಳಂ
ತವೆ ತೊಲಗಿಸಿ ತಂನಯ ಮೊಱ
ಗಿವಿಯಿಂ ಮೊಗಮೊಗದು ಸುಮುಖನಾಸ್ವಾದಿಸುವಂ ॥ ೭೪ ॥

ಅಂತ್ಯ : ವ॥ ಅಂತು ಸಕಲ ಪರಿಗ್ರಹನಿವೃತ್ತನಾಗಿ ರಾಜತ್ವಮಂ ಬಿಟ್ಟ ಸನ್ಮಾರ್ಗ್ಗಾ
ವಲಂಬಮಂ ಬಿಡದೆ ಸರ್ವ್ವಜ್ಞ ಚೂಡಾಮಣಿಯೆನಿಸಿ ನೂರ್ವ್ವರುರ್ವೀಶ್ವರ
ರ್ವೆರಸು ವನಮಂ ಪೊಕ್ಕು ಅಚಲಿರ ದೀಕ್ಷಾಪ್ರದಾನವಿದಾನಂ ಉತ್ತರಾಭಿ
ಮುಖನಾಗಿ ಪಂಚಪದಂಗಳಂ ಸ್ಮರಿಯಿಸಿ ಜಾತರೂಪಮನಂಗೀಕರಿಸಿದಾಗಳ್

ಕಂ ॥ ಮುಂ ಪಂಚಗುರುಪದಾಕ್ಷರ
ಚಂಪಕವಾಸನೆ ನಿಜಾಸ್ಯ ....

ವಿಷಯ : ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಕಥೆ.

ವಿಶೇಷ : ಪ್ರತಿಯು ಅಸಮಗ್ರವಾಗಿದೆ. ೧ನೆಯ ಪತ್ರ ಮುರಿದಿದೆ. ಶಕಟರೇಫ ಪ್ರಯೋಗ ಇದೆ.

704

ಕೆ.ಎ. ೨೯೬ | ಧರ್ಮನಾಥ ಪುರಾಣ | ಚಂಪು
೧೩.೨"X೮.೩" | ಬಾಹುಬಲಿ ಪಂಡಿತ | ೧೩೫೨
೧–೭೨೦ ಪುಟ | ೨೦ ಪಂಕ್ತಿ | ೨೨ ಅಕ್ಷರ

ಆದಿ: ಶ್ರೀ ಬಾಹುಬಲಿ ಪಂಡಿತ ವಿರಚಿತಮಪ್ಪ ಧರ್ಮನಾಥಪುರಾಣಂ

ವೃ॥ ಶ್ರೀಮದ್ದೇವೇಂದ್ರ ವೃಂದ ಸ್ಫುರದುರುಮುಕುಟಶ್ರೇಣಿ ಮಾಣಿಕ್ಯರೋಚಿ
ಸ್ತೋಮಾಂಬೋಧೌತ ಪಾದಂ ನಿರವಧಿಸುಖ ದೃಗ್ಬೋಧ ವೀರ್ಯ
ಸ್ವರೂಪಂ
ವಾವಾಷ್ಟಪ್ರಾತಿಹಾರ್ಯಪ್ರಕಟಿತ ಪರಮಾರ್ಹನ್ತ್ಯಲಕ್ಷ್ಮೀಪ್ರಭಾವೋ
ದ್ದಾಮಂ ಮಾಳ್ಕಿಷ್ಟ ಸಂಸಿದ್ಧಿಯನೆಮಗನಿಶಂ ಧರ್ಮನಾಥಂ ಜಿನೇಂದ್ರಂ ॥

X X X X

(12ನೆಯ ಪುಟ)

ವೃ॥ ಮೊದಲೊಳ್ಸಂಸ್ಕೃತ ಭಾಷೆಯಿಂ ಬುಧಜನಂ ಕೊಂಡಾಡುತಿರ್ಪಂತೆ ಸಂ
ಮದದಿಂ ಗುಮ್ಮಟನಾಥ ಸಚ್ಚರಿತವೆಂಬೀ ಕಾವ್ಯಮಂ ಪೇಳ್ದು ಮಾ
ಣದೆ ಕರ್ನಾಟಕದಿಂದೆ ಮತ್ತೆ ರಚಿಸಿ ಶ್ರೀಧರ್ಮನಾಥ ಪ್ರಬಂ
ಧದ ಪೆರ್ಚಂ ತಳೆದಂ ಸಮಂತುಭಯಭಾಷಾ ಕಾವ್ಯ ಕರ್ತೃತ್ವಮಂ ॥
ನಯವಿದರೆಲ್ಲರುಂ ಪೊಗಳೆ ಜಾಣ್ನುಡಿ ಮಿಕ್ಕರೆ ಕಾವ್ಯಮಂ ಗುಣೋ
ದಯವರಮಾಗೆ ಮಾಡಿ ನಯಕೀರ್ತಿ ಯತೀಶ್ವರರಗ್ರಶಿಷ್ಯನಿಂ
ತಯಯುತನಪ್ಪ ಬಾಹುಬಲಿಪಂಡಿತ ದೇವನಭೀಷ್ಟುತಂ ಮಹೋ
ಭಯ ಕವಿಚಕ್ರವರ್ತಿ ಪೆಸರಿಂದೆಸೆದಂ ಜಗದೊಳ್ನಿರಂತರಂ ॥

ಅಂತ್ಯ: ಸ್ವಸ್ತಿಶ್ರೀ ಶಕವತ್ಸರಂ ಸಲೆ ಚತುಸ್ಸಪ್ತದ್ವಯೈಕಾಂ ಕವಿ
ನ್ಯಸ್ತಂ ನಂದನ ವರ್ಷದಲ್ಲಿ ಮಧುಮಾಸ ಶ್ವೇತಪಕ್ಷಾಷ್ಟಮೀ
ವಿಸ್ತಾರೀಕೃತ ಸೋಮವಾರದೊಳಿದಂ ಸಂಪೂರ್ಣಮಂ ಮಾಡಿದಂ
ಪ್ರಸ್ತುತ್ಯಂ ಪ್ರತಿಭಾಪರಂ ಭುಜಬಲಿ ಪ್ರಖ್ಯಾತಯೋಗೀಶ್ವರಂ ॥
ಪಿರಿದುಂ ಸಂತೋಷಮಂ ತಾಳ್ದಿದನತಿಶಯವತ್ಕಾವ್ಯಮಂ ಮಾಡಿ ತೇಜ
ಸ್ಫುರಣಂ ವಿದ್ಯಾಸಮುದ್ರಾಮೃತಮಯಕಿರಣಂ ವಂದಿಮಂದಾರ ರೂಪಂ
ಸ್ಮರರೂಪಂ ನೀರಜಂ ಬಾಹುಬಲಿ ಸುಕವಿರಾಜಂ ವಿಪಶ್ಚಿತ್ಸಹಾಯಂ
ಧರಣೀಶೋಲ್ಲಾಲನೀಯಂ ಘನಗುಣನಿಳಯಂ ಚಾತುರೀಜನ್ಮಗೇಹಂ ॥

ಗದ್ಯ ॥ ಇದು ಸಕಳ ಭುವನ X X X X ಬಾಹುಬಲಿಪಂಡಿತ ದೇವ
ಪರಿನಿರ್ಮಿತಮಪ್ಪ ಧರ್ಮನಾಥಪುರಾಣದೊಳ್ ಧರ್ಮತೀರ್ಥಕರ ನಿರ್ವಾಣ
ಗಮನ ಪರಿವ್ಯಾವರ್ಣನಂ ಷೋಡಶಾಶ್ವಾಸಂ ॥

ಶ್ರೀ ಮಲ್ಲಲಿತ ಕೀರ್ತಿಮುನಯೆ ನಮಃ

ಸ್ವಸ್ತಿ ಶ್ರೀಮತ್ ಶಕವರ್ಷ ೧೩೪೨ನೆಯ ಶಾರ್ವರಿ ಸಂವತ್ಸರದ ಜೇಷ್ಠ ಬಹುಳ
ಪಂಚಮೀ ಶನಿವಾರದಂದು ಸ್ವಸ್ತಿಯನವರತ X X X ಕಲಿಕಾಲಗಣ

ಧರರುಮಪ್ಪ ಶ್ರೀಮಲ್ಲಲಿತಕೀರ್ತಿ ಮಲಧಾರಿ ದೇವರ ಪ್ರಿಯ ಗುಡ್ಡ ಆಹಾರ ಅಭಯಭೈಷಜ್ಯ ಶಾಸ್ತ್ರದಾನ ದತ್ತಾವಧಾನನುಂ ಜಿನಗಂಧೋದಕ ಪವಿತ್ರೀಕೃತೋತ್ತಮಾಂಗನುಂ ಜಿನಮುನಿ ಪದಾಂಭೋಜಾತ ಭೃಂಗನುಮಪ್ಪ ಭಂಡಾರಿದೇವರು ಸೆಟ್ಟಿ ತನಗೆ ಕೇವಲಜ್ಞಾನಪರಿಪ್ರಾಪ್ತಿ ನಿಮಿತ್ತವಾಗಿ ಕಾರಕಳದ ಶಾಂತಿನಾಥ ಸ್ವಾಮಿಗಳ ಬಸ್ತಿಗೆ ಬರಸಿಕೊಟ್ಟ ಧರ್ಮನಾಥ ಪುರಾಣಕ್ಕೆ ಮಂಗಳಮಹಾ.

ವಿಷಯ : ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಚರಿತ್ರೆ.

ವಿಶೇಷ : ಬರಹ ಸುಂದರವಾಗಿದೆ. ಶಕಟರೇಫದ ಬಳಕೆಯಿದೆ. ತಪ್ಪುಗಳನ್ನು ತಿದ್ದಿದೆ. ಆರಂಭದ ಪತ್ರದಲ್ಲಿ ಬಾಹುಬಲಿಪಂಡಿತ ವಿರಚಿತಮಪ್ಪ ಧರ್ಮನಾಥಪುರಾಣಂ ಶ್ರೀಮರ್ಾ ಮೂಡಬಿದರೆ ಲೋಕನಾಥ ಶಾಸ್ತ್ರಿಗಳಿಂದಾ ಬಂದ ಪುಸ್ತಕದಿಂದಾ ಕಾಫಿಯಾಗಿರುತ್ತೆ ಎಂದು ಬರೆದಿದೆ. ಗ್ರಂಥದ ಆದಿಯಲ್ಲಿ ಮೊದಲ ಪತ್ರವನ್ನು ಎಣಿಸದೆ ಮುಂದಿನ ಪತ್ರಗಳಿಗೆ ಸಂಖ್ಯೆಯನ್ನು ಕೊಟ್ಟಿರುವುದರಿಂದ ಒಟ್ಟು ಪುಟಗಳಸಂಖ್ಯೆ ೭೨೦ ಆಗುತ್ತದೆ.

705

ಕೆ ೩೬೯/೨	ಧರ್ಮನೀತಿ	ಭಾಮಿನೀ ಷಟ್ಪದಿ
೮.೮"×೧.೨"	?	?
೩೦–೪೧ ಪತ್ರ	೫ ಪಂಕ್ತಿ	೩೦ ಅಕ್ಷರ

ಆದಿ : ಶುಭಮಸ್ತು ॥ ಧರ್ಮನೀತಿಯ ಬರೆಯುವದಕ್ಕೆ ನಿರ್ವಿಘ್ನಮಸ್ತು ॥
ಗಜಮುಖನೆ ಮೆರೆವೇಕದಂತನೆ
ನಿಜಗುಣಾನ್ವಿತ ಪರಶುಧಾರನೆ
ರಜತಗಿರಿಗೊಡೆಯನ ಕುಮಾರನೆ ವಿದ್ಯವಾರುಧಿಯೆ
ಅಜನು ಹರಿ ರುದ್ರಾದಿಗಳು ನಿಂಮ್ಮನು ನೆರೆ
ಭಜಿಸುತಿಹ ಅನವರತ ನಿಂಮ್ಮ
ತ್ರಿಜಗವಂದಿತ ಗಣಪ ಸಲಹೈ ಮತಿಗೆ ಮಂಗಳವಾ ॥ ೧ ॥
ಸುರಪತಿಯ ಚರಣಕ್ಕೆ ನಮಿಸಿಯೆ
ಸುರರೊಡೆಯ ನಂದನಗೆ
ವಿರಚಿಸಿದ ಯಮಸೂನು ವೇದ ಪುರಾಣ ಸಾರಗಳಾ ॥

ಪದನೂ ॥ ಕೇಳು ಪಾರ್ಥ ಮುಕುಂದ ತಂನ್ನಯ
ಮೇಲೆ ಕೃಪೆಯಂಕುರಿಶಿ ನೀತಿಯ
ಪಾಲಿಶಿದ ನಂಧನಗೆ ಪೇಳುವೆ ಕೇಳು ಮನವೆರಸಿ
ಮೇಲು ಬುದ್ಧಿಯನಿತ್ತುಪಾಯುವ
ಮೇಲೆ ದುರಿತಾರಾಂಣ್ಯ ಪಾವಕ
ಲಾಲಿಸೈ ವಿಸ್ತಾರವನರುಪುವೆನೆಂದನಾ ಭೂಪಾ ॥ ೨ ॥

ಅಂತ್ಯ : ಬೀಳುಗೊಂಡರ್ಜುನನು ಚಕ್ರದ
ಕೀಲು ಕಳೆಯದೆ ಮುಂದೆ ಶುಭಮಂ
ಪೇಳುತಿರೆ ಲಾಲಿಸುತ ನಡದನು ಪೂರ್ವಮುಖವಾಗಿ
ಮೇಲೆ ಮೇಲುತ್ಸಳಿಪ ಹರುಷದಿ
ಕಾಲ ಕಲ್ಪಣೆಗಳಿದು ಜಯಗುಣ
ಶೀಲ ಬಂದನು ಯಿಂದ್ರಕೀಲಕ್ಕೆ ಮುನಿಯನುಜ್ಞ್ಯೆಯಲ್ಲಿ ॥ ೪೪ ॥
ಧರ್ಮರಾಯರೂ ಅರ್ಜುನಗೆ ಹೇಳಿದ ಧರ್ಮನೀತಿ ಸಂಪೂರ್ಣ ಮಂಗಳ ಮಹಾ ಶ್ರೀ ॥ ವಿಭವ ಸಂವತ್ಸರದ ಭಾದ್ರಪತ್ತ್ರ ಶು ೪ ಉ ಗಳಿಗೆ ೧೨ನೆ ಗಳಿಗೆಯಲ್ಲಿ ಬರೆದು ಮುಗಿತ್ತು ॥

ವಿಷಯ : ಧರ್ಮರಾಜನು ಅರ್ಜುನನಿಗೆ ಉಪದೇಶಸಿದ ಧರ್ಮನೀತಿ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಇದೇ ಕಟ್ಟನಲ್ಲಿ ಕನಕದಾಸರ ಹರಿಭಕ್ತಿಸಾರ ಎಂಬ ಕೃತಿ ಇದೆ

706

ಕೆ. ಎ ೧೯೦/೪	**ಧರ್ಮನೀತಿ**	ಭಾಮಿನೀ ಷಟ್ಪದಿ
೧೨.೬"×೮"	?	?
೮೯ ಪತ್ರ	೩೦ ಪಂಕ್ತಿ	೩೨ ಅಕ್ಷರ

ಆದಿ : ಧರ್ಮನೀತಿಯಂ ಬರೆಯುವದಕ್ಕೆ ಶುಭಮಸ್ತು ॥
ಮುರಹರನ ಚರಣಕ್ಕೆ ವಂದಿಸಿ
ಸುರರೊಡೆಯ ನಂದನಗೆ ನೀತಿಯಾ
ವಿರಚಿಸಿದ ಯಮಸೂನು ವೇದ ಪುರಾಣ ಸಾರವನೂ ॥
ಪದನೂ ॥ ಕೇಳು ಪಾರ್ಥ ಮುಕುಂದ ತಂನಯ
ಮೇಲೆ ಕೃಪೆಯಂ ಕರಿಸಿ ನೀತಿಯ
ಪಾಲಿಸಿದೆನಾ ನಿನಗೆ ಪೇಳುವೆ ಕೇಳು ಮನವವೆರಸೀ ॥

ವೇಲು ಬುದ್ಧಿಯನಿತ್ತು ಪಾಯುವ
ಸಾರ ದುರಿತಾರಂಣ್ಯ ಪಾವನ
ಲಾಲಿಸೈ ವಿಸ್ತರದಲರುಹುವೆನೆಂದನಾ ಭೂಪಾ ॥೧॥

ಅಂತ್ಯ : ಬೀಳುಕೊಂಡರ್ಜುನನು ಯಿಂದ್ರನ
ಕೀಲಿಗ್ರೈತರೆ ಮುಂದೆ ಶಕುನವ
ಹೇಳುತಿರೆ ಲಾಲಿಸುತ ನಡದರು ಪೂರ್ವಮುಖವಾಗಿ
ಮೇಲು ಮೇಲೊದಗಿರ್ದ ಶಕುನವ
ಕಾಲುಖಂದರಜೀವ ಮುನಿಗಳು
ದೇವ ಜಯ ಜಯವೆನುತ ನಡದರು ಪೂರ್ವಮುಖವಾಗಿ ॥ ೨೯ ॥
ಧರ್ಮನೀತಿ ಸಂಪೂರ್ನಂ ಜಯಮಂಗಳ ಮಹಾ ಶ್ರೀ ॥

ವಿಷಯ : ಧರ್ಮರಾಜನು ಅರ್ಜುನನಿಗೆ ಬೋಧಿಸಿದ ನೀತಿ.

ವಿಶೇಷ : ಇದೇ ಪುಸ್ತಕದಲ್ಲಿ ಸಂಕ್ಷೇಪ ರಾಮಾಯಣ, ಸಂಕ್ಷೇಪ ಭಾರತ ಸೋಮೇಶ್ವರ ಶತಕ, ವಿಭೀಷಣನ ಬುದ್ಧಿ, ಗೋವಿನ ಹಾಡು, ವಿಷ್ಣು ಭಕ್ತಿಸಾರ, ಸುಭಾಷಿತ ಗ್ರಂಥ, ನಳಚರಿತ್ರೆ, ಹರಿಶ್ಚಂದ್ರೋಪಾಖ್ಯಾನ, ರುದ್ರ ಭಾರತ ಎಂಬೀ ಕೃತಿಗಳಿವೆ.

707

ಕೆ. ಎ. ೨೫೦/೩	**ಧರ್ಮನೀತಿ**	ಭಾಮಿನೀ ಷಟ್ಪದಿ
೧೩"×೮"	?	?
೧-೯ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಧರ್ಮ್ಮನೀತಿ॥ ಭಾಮಿನಿ ಷಟ್ಪದಿ ॥
ಸಿರಿಪತಿಯ ಚರಣಕ್ಕೆ ನಮಿಸುತ
ಸುರಪತಿಯ ನಂದನಗೆ ತಿಳುಹಿದ
ಧರಣಿಪತಿ ಯಮಸೂನು ವೇದ ಪುರಾಣ ಧರ್ಮವನೂ ॥ ಪ ॥
ಕೇಳು ಪಾರ್ಥ ಮುಕಂದ ತಂನಯು
ಮ್ಯಾಲೆ ಕೃಪೆಯುಂಕುರಿಸಿ ನೀತಿಯ
ಪಾಲಿಸಿದೆ ನಾ ನಿನಗೆ ಪೇಳುವೆ ಕೇಳು ಮನವಲಿದು ॥

ಮೇಲು ಬುದ್ಧಿಯನಿತ್ತುಪಾಯದಿ
ಸಾಲ ದುರಿತಾರಂಣ್ಯಪಾವಕ
ಲಾಲಿಸೈ ವಿಸ್ತರದಲರುಪುವೆನೆಂದನಾ ಭೂಪ ॥ ೧ ॥

ಅಂತ್ಯ : ಮುಗ್ಧದಿರು ಮಾಯೆಯಲಿ ಮೋಹದ
ಅಗ್ಗಳಿಯತನಕಳುಕದಿರು ಬಹು
ಹಿಗ್ಗದಿರು ಮದಗಳಲಿ ಅರಿಗಳನಾರ ಪರಿಹರಿಸಿ
ವೆಗ್ಗಳದ ಯೋಗದಲಿ ನೀ ಮನ
ವಗ್ಗಯಿಶ್ವರ ಧ್ಯಾನದಿಂದಪ
ವರ್ಗ್ಗಕಧಿಪತಿಯಾಗು ನೀನೆಲೆ ಪಾರ್ಥ ಕೇಳೆಂದಾ ॥ ೨೫ ॥
ಇತಿ ಧರ್ಮನೀತಿ ಸಂಪೂರ್ಣ ಮಂಗಳ ಮಹಾ ॥

ವಿಷಯ : ಧರ್ಮರಾಜನು ಅರ್ಜುನನಿಗೆ ಭೋಧಿಸಿದ ನೀತಿ.

ವಿಶೇಷ : '೨೧ ನೆಯ ಪದ್ಯ ಮಾತೃಕೆಯಲ್ಲಿ ಬರದಿಲ್ಲ' ಎಂದು ಪ್ರತಿಕಾರರು ಬರೆದಿದ್ದಾರೆ. ಪತ್ರದ ಒಂದು ಪಾರ್ಶ್ವದಲ್ಲಿ ಬರೆದಿದೆ. ಇದರಲ್ಲಿ 'ನೀತಿ ವಾರ್ಥಿಕಾ' ವೇ ಮೊದಲಾದ ಇತರ ೧೦ ಗ್ರಂಥಗಳಿವೆ.

708

ಕೆ. ೨೩/೧	**ಧರ್ಮ ಪರೀಕ್ಷೆ**	ವೃತ್ತ, ಕಂದ
೧೬.೭"×೨"	ವೃತ್ತವಿಲಾಸ	ಸು. ೧೧೬೦
೧-೪೩ ಪತ್ರ	೯ ಪಂಕ್ತಿ	೭೩ ಅಕ್ಷರ

ಆದಿ : ಧರ್ಮ ಪರೀಕ್ಷೆ॥
ಶ್ರೀಮದ್ಭವ್ಯಾಳಿ.....ಚಕ್ರ ಪ್ರಕರ ಹಿತಕರಂ ಸರ್ವ್ವಮಿಥ್ಯಾಂಧಕಾರ
ಸ್ತೋಮ ಪ್ರಧ್ವಂಸಿ ಬೋಧಾಮಳ ಕಿರಣಗಣೋದ್ಭಾಸಿ ಮೋಕ್ಷೋ.......
............ಪೂರ್ವಾಚಲ ಸಮುದಿತನಾಶ್ಚರ್ಯ ವೃತ್ತಾಭಿರಾಮಂ
ಹೇಮಾಂಗಂ ವರ್ದ್ಧಮಾನಾಂ ಹಿಮಕರನತಿ ನಿರ್ದೊಷಮಂ ಮಾಳ್ಕೆ
ನಮ್ಮೊಳ್ ॥ ೧ ॥

ಅಂತ್ಯ : ಅಂತು ನೇಸಮ್ಮೂಡುವುದುಂ
ಪರಹಿತಮೆ ಬೆಸನೆಯುರ್ಹ
ಚ್ಚರಣ ದ್ವಯಭಕ್ತಿ ಚಿತ್ತವೃತ್ತಿ ದಯಾ ಸ

ಚ್ಚರಿತಂ ತನಗೆನೆ ಸುಖ ಸುಖ
ಕರನೆಸೆದಂ ದಾತ್ರಿಯಲ್ಲಿ ವೃತ್ತವಿಲಾಸಂ ||

ಗದ್ಯ|| ಇದು ವಿನದಮರ ಮಕುಟ ತಟ ಘಟಿತ ಮಣಿಗಣ ಮರೀಚಿ ಮಂಜರೀ ಪುಂಜರಂಜಿತ ಪಾದಾರವಿಂದ ಭಗವದರ್ಹತ್ಪರಮೇಶ್ವರವದನ ವಿನಿರ್ಗ್ಗತ ಸ್ರುತಾಂಬೋಧಿವರ್ಧನ ಸುದಾಕರಂ ಶ್ರೀಮದಮರಕೀರ್ತಿ ರಾವುಳ ಬ್ರತೀಶ್ವರ ಚರಣ ಸರಸಿರುಹಸಟ್ಪದಂ ವತ್ತ್ರವಿಲಾಸ ವಿರಚಿತಮಪ್ಪ ಧರ್ಮ್ಮ ಪರೀಕ್ಷೆಯೊಳು ರಾವಣನ ಕುಲೋತ್ಪತ್ತಿ ಬಾಲಿಸುಗ್ರೀವರಾದಿ ಕಪಿ ನಾಯಕರ ಜನನ ಭೇದ ತ್ರಿಷಷ್ಠಿ ಶಲಾಕಾಪುರುಷರ ಕ್ರಮಂ ರಾಮ ಲಕ್ಷ್ಮೀಧರರ ಸಾಮರ್ಥ್ಯನಿರೂಪಣಂ ಅಷ್ಟಮಾಶ್ವಾಸಂ ||

ವಿಷಯ : ಜೈನಧರ್ಮದ ತತ್ತ್ವಗಳು.

ವಿಶೇಷ : ಶಕಟರೇಫದ ಬಳಕೆ ಇದೆ. ಮೋಡಿ ಅಕ್ಷರ. ಗರಿಗಳ ಅಂಚು ಮುರಿದಿದೆ. ಇದೇ ಕಟ್ಟನಲ್ಲಿ ದ್ವಾದಶಾನುಪ್ರೇಕ್ಷೆ, ನೋಂಪಿಯ ಕಥೆಗಳೆಂಬ ಎರಡು ಕೃತಿಗಳಿವೆ.

709

ಕೆ ೧೩೩	**ಧರ್ಮಪರೀಕ್ಷೆ**	**ಕಂದ, ವೃತ್ತ**
೧೭.೧"×೧.೫"	**ವೃತ್ತವಿಳಾಸ**	**ಸು. ೧೧೬೦**
೧-೮೯ ಪತ್ರ	**೬ ಪಂಕ್ತಿ**	**೬೦ ಅಕ್ಷರ**

ಆದಿ : ಶ್ರೀ x x ದಮ್ಮ ಪರೀಕ್ಷೆಯ ಬರೆವುದಕ್ಕೆ ನಿರ್ವಿಜ್ಞಮಸ್ತು ||
ಶ್ರೀಮದ್ಭವ್ಯಾಳಿಚಕ್ರಪ್ರಕರ ಸುಖಕರಂ ಸರ್ವಮಿಥ್ಯಾಂಧಕಾರ
ಸ್ತೋಮ ಪ್ರಧ್ವಂಸಿ ಬೋಧಾಮಲಕಿರಣ ಗಣೋದ್ಭಾಸಿ ಮೋಕ್ಷಾಬ್ಧಿನೀ ಸು
ಪ್ರೇಮಂ ಸ್ಯಾದ್ವಾದಪೂರ್ವಾಚಲ ಸಮುದಿತನಾಶ್ಚರ್ಯ ವೃತ್ತಾಭಿರಾಮಂ
ಹೇಮಾಂಗಂ ವರ್ದ್ಧಮಾನಾಹಿಮಕರನತಿ ನಿರ್ದೋಷಮಂ ಮಾಳ್ಕೆ
ಯಂಮೊಳ್ || ೧ ||

x x x x

ಕಂ || ಮಹಿಪತಿಗಳ ಸಭೆಯೊಳು ಚಿ
ಕ್ಕ ಹೇಮದೇವಾರ್ಯ್ಯನೊಂಮೆ ನುಡಿದೊಡೆ ತಾಕ್ಷ್ಯಂ

ಗಹಿಪತಿ ಸೆಡೆವಂತಂಜಿದ
ರ ಹಂಮನುಳಿದುರ್ಕ್ಕನೊಕ್ಕರತಿತರ್ಕ್ಕಜ್ಞರ್ ॥ ೨೭ ॥

x x x x

ವೃ ॥ ಸಾರದೆ ದುರ್ಜ್ಜನ ಪ್ರಕರದಾನನಮುಂ ಶಠರಾಸ್ಯಮಂ ದುರಾ
ಚಾರರ ತುಂಡಮಂ ಕ್ರುಪೆವಿಹೀನರ ದುರ್ಮ್ಮೊಗಮಂ ನಿರಸ್ತ ಭೂ
ಭಾರಕರಪ್ಪರಾ ಲಪನಮುಂ ಮನಪೊಂದಳಿಂದೆ ಸಂತತಂ
ಸಾರದೆ ಬಂದು ನರ್ತ್ತಿಸುಗೆ ವೃತ್ತವಿಳಾಸನ ವಕ್ತ್ರಪದ್ಮದೊಳ್ ॥ ೨೮ ॥

ಅಂತ್ಯ : ವೃ ॥ ಜಿನಪದಸೇವಕಂ ಜಿನಮುನೀದ್ರ ಪದಾರ್ಚಕನನ್ಯದೇವ್ಯಮಂ
ಕನಸಿನೊಳಾವಗಂ ನೆನೆಯದುತ್ತಮಚಿತ್ತನುಧಾರ ಮೇರು ಸ
ಜ್ಜನನಿಧಿ ಸತ್ಯ ಶೌಚ ಗುಣದಾಗರವಾಜ್ಞೆಯ ಜನ್ಮಭೂಮಿಯೆಂ
ದನುನಯದಿಂದೆ ಕೀರ್ತ್ತಿಪುದು ವೃತ್ತವಿಳಾಸನನೀ ಜಗಜ್ಜನಂ ॥ ೯೪ ॥

ಗದ್ಯ॥ ಇದು ವಿನಮದಮರ ಮಕುಟತಟಗಟಿತ ಮಣಿಗಣ ಮರೀಚಿ ಮಂಜರೀ ಪುಂಜರಂಜಿತ ಪಾದಾರವಿಂದ ಭಗವದರುಹತ್ಪರಮೇಶ್ವರ ವದನವಿನಿರ್ಗತ ಶ್ರುತಾಂಬೋಧಿವರ್ಧನ ಸುಧಾಕರಂ ಶ್ರೀಮದಮರಕೀರ್ತಿ ರಾವುಳ ವ್ರತೀಶ್ವರ ಚರಣ ಸರಸೀರುಹಷಟ್ಪದಂ ವೃತ್ತವಿಳಾಸ ವಿರಚಿತಮಪ್ಪ ಧರ್ಮ್ಮಪರೀಕ್ಷೆಯೊಳುಪವನವೆ....... ......ಲಾಗಿ ಸಕಲ ವಿಪ್ರಜನಂಗಳ ವ್ರತಾನಿರೂಪಣವರ್ನನಂ ದಶಮಾಸ್ವಾಸಂ ॥ ೯೫ ॥

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೭೬ನೆ ಭಾವನಾಮ ಸಂವತ್ಸರದ ವೈಶಾಕ ಶುದ್ಧ ೧೫ ಸೋಮವಾರ ದಿವಸದಲ್ಲು ಮಹಿಶೂರ ಅಠವಣೆ ಚಾವಡಿಯ ಕರಣಿಕ ದೇವರಸೈಯನವರ ಮಗ ಪದುಮಣ್ಣೈಯನು ಧರ್ಮ್ಮಪರೀಕ್ಷಯ ಬರೆದುಕೊಟ್ಟುಯಿರುವಂತಾ ಪುಸ್ತುಕವನೋದಿದವರ್ಗೆ ಮನಮುಟ್ಟೆ ಕೇಳಿದವರ್ಗೆ ವೋದಿಸಿ ಕೇಳಿದವರ್ಗೆ ಸದ್ಧರ್ಮಾಭಿವೃದ್ಧಿರಸ್ತು ॥

ವಿಷಯ : ಜೈನಧರ್ಮದ ತತ್ತ್ವಗಳು.

ವಿಶೇಷ : ದಪ್ಪಕ್ಷರ. ಶಕಟರೇಫದ ಬಳಕೆಯಿದೆ. ಅಂತ್ಯದಲ್ಲಿರುವ ಕ್ರಮಾಂಕವಿಲ್ಲದ ಒಂದು ಪತ್ರದಲ್ಲಿ "ಹದಿಮೂರನೆಯ ವಾಲೆಯಲ್ಲಿ ಪ್ರಥಮಾಧ್ಯಾಯ । ಯಿಪ್ಪತ್ತಮೂರನೆಯ ವಾಲೆಯುಲ್ಲಿ ಯೆರಡನೆಯ ಅಧ್ಯಾಯ । ಮೂವತ್ತ

ಮೂರನೆಯ ವಾಲೆಯಲ್ಲಿ ಮೂರನೆಯ ಅಧ್ಯಾಯ । ನಾಲ್ವತ್ತಮೂರನೆಯ ವಾಲೆಯಲ್ಲಿ ನಾಲ್ಕನೆಯ ಅಧ್ಯಾಯ । ನಾಲ್ವತ್ತೆಂಟನೆಯ ವಾಲೆಯಲ್ಲಿ ಅಯಿದನೇ ಅಧ್ಯಾಯ । ಅಯಿವತ್ತಾರನೇ ವಾಲೆಯಲ್ಲಿ ಆರನೇ ಅಧ್ಯಾಯ । ಅರುವತ್ತಯೆರಡನೆಯ ವಾಲೆಯಲ್ಲಿ ಯೇಳನೇ ಅಧ್ಯಾಯ । ಅರುವತ್ತಯೆಂಟನೇ ವಾಲೆಯಲ್ಲಿ ಯೆಂಟನೇ ಅಧ್ಯಾಯ । ಯಪ್ಪತ್ತ ಯೇಳನೇ ವಾಲೆಯಲ್ಲಿ ವಂಭತ್ತನೇ ಅಧ್ಯಾಯ । ಯಿಾ ಧರ್ಮ ಪ್ರಸಂಗ ಸಂಪೂರ್ನಕ್ಕೆ ಜಯಮಂಗಳ ಮಹಾ ಶ್ರೀ ॥ ಎಂದಿದೆ. ಕೆಲವು ಗರಿಗಳಲ್ಲಿ ಹುಳು ತಿಂದು ಸಣ್ಣ ರಂಧ್ರಗಳು ಬಿದ್ದಿವೆ. ಕೆಲವು ಗರಿಗಳ ಅಂಚು ಮುರಿದಿದೆ.

710

ಕೆ.ಎ. ೪೭	**ಧರ್ಮ ಪರೀಕ್ಷೆ**	ಚಂಪು
೧೨.೬"×೭.೯"	ವೃತ್ತವಿಳಾಸ	ಸು. ೧೧೬೦
೧–೧೫೬ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ.......... ಧರ್ಮಪರೀಕ್ಷೆ ಬರೆಯುವದಕ್ಕೆ ನಿರ್ವಿಘ್ನಮಸ್ತು ॥
ಶ್ರೀಮದ್ಭವ್ಯಾಳಿ ಚಕ್ರ ಪ್ರಕರ ಸುಖಕರಂ ಸರ್ವಮಿಥ್ಯಾರ್ಥಕಾರ
ಸ್ತೋಮ ಪ್ರಧ್ವಂಸಿ ಬೋಧಾಮಲಕಿರಣ ಗಣೋದ್ಭಾಸಿ ಮೋಕ್ಷಾಬ್ಜಿನೀ ಸು
ಪ್ರೇಮಂ ಸ್ಯಾದ್ವಾದ ಪೂರ್ವಾಚಲ ಸಮುದಿತನಾಶ್ಚರ್ಯ ವೃತ್ತಾಭಿರಾಮಂ
ಹೇಮಾಂಗಂ ವರ್ಧಮಾನಾ ಹಿಮಕರನತಿ ನಿರ್ದೋಷಮಂ ಮಾಳ್ಕೆ
ಯೆಂಮ್ಮೊಳ್ ॥ ೧ ॥

x x x x

ಕಂ ॥ ವ್ರತ ಗುರುಗಳಮರ ಕೀರ್ತಿ
ವ್ರತಿಪತಿಗಳ್ಚಾರುಶೂಕ್ತಿ ಮುಕ್ತಾಭರಣ
ಶ್ರುತ ಗುರುಗಳೆಂಬ ಮಹಿಮೋ
ನ್ನತಿಯಿಂ ಕೃತಕೃತ್ಯನಲ್ತೆ ವೃತ್ತವಿಳಾಸಂ ॥ ೩ ॥

ಅಂತ್ಯ : ವೃ ॥ ಜಿನಪದಸೇವಕಂ ಜಿನಮುನೀಂದ್ರ ಪದಾರ್ಚಕನನ್ಯದೈವಮಂ
ಕನಸಿನೊಳಾವಗಂ ನೆನೆಯದುತ್ತಮನುದಾರ ಮೇರು ಸಜ್ಜ
ನನಿಧಿ ಸತ್ಯ ಶೌಚಗುಣದಾಗರದಾಜ್ಞೆಯ ಜನ್ಮಭೂಮಿಯೆಂದ
ನುನಯದಿಂದೆ ಕೀರ್ತಿಪುದು ವೃತ್ತವಿಳಾಸನನೀ ಜಗಜ್ಜನಂ ॥ ೯೧ ॥

ಗದ್ಯ ॥ ಇದು ವಿನಮದಮರ x x x x ವೃತ್ತವಿಳಾಸ ವಿರಚಿತಮಪ್ಪ ಧರ್ಮ್ಮಪರೀಕ್ಷೆಯೊಳು ಪವನವೇಗಂ ಮೊದಲಾಗಿ ಸಕಲ ವಿಪ್ರಜನಂಗಳ ವ್ರತನಿರೂಪಣ ವರ್ನನಂ ದಶಮಾಶ್ವಾಸಂ ॥

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನ ಶಖ ವರುಷ ೧೬೭೬ನೆ ಭಾವನಾಮ ಸಂವತ್ಸರದ ವೈಶಾಖ ಶುದ್ಧ ೧೫ ಸೋಮವಾರದ್ದಿವ್ಸದಲ್ಲೂ ಮಹಿಶೂರ ನಗರದ ಅಠವಣೆ ಚಾವಡಿಯ ಕರಣೀಕ ದೇವರಸೈಯ್ಯನವರ ಮಗ ಪದುಮಂಣ್ಣೈಯ್ಯನು ಧರ್ಮಪರೀಕ್ಷೆಯ ಬರದುಕೊಟ್ಟ ಯಿರೂ ವಂತ್ಥಾ ಪುಸ್ತುಕವನೋದಿದವರ್ಗ್ಗೆ...............ಶುಭಮಸ್ತು.

ವಿಷಯ : ಜೈನಧರ್ಮದ ತತ್ತ್ವಗಳು.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಮಧ್ಯೆ ಮಧ್ಯೆ ಕೆಂಪು ಮಸಿ ಯಿಂದ ತಪ್ಪುಗಳನ್ನು ತಿದ್ದಿದೆ. ೧೪–೧೫ ಪತ್ರಗಳ ಮಧ್ಯದಲ್ಲಿ ಕ್ರಮಾಂಕವಿಲ್ಲದ ಪದ್ಯ ಕ್ರಮಗಳ ವ್ಯತ್ಯಾಸವನ್ನು ತಿಳಿಸುವ ಒಂದು ಪತ್ರವಿದೆ.

711

ಕೆ. ಎ. ೨೧೭	ಧರ್ಮಪರೀಕ್ಷೆ	ಚಂಪು
೧೩"×೮.೩"	ವೃತ್ತವಿಳಾಸ	ಸು. ೧೧೬೦
೧–೫೫ ಪತ್ರ	೨೩ ಪಂಕ್ತಿ	೨೩ ಅಕ್ಷರ

ಆದಿ : ॥ ವಚನ ॥ ಅಂತು ಕಲುಷಿತರಾಗಿ ಮನೆಯಂ ಪೊರಮ........ನೆಯಿಂ ಬರುತ್ತಾ ಭಿರಯತಿ ಶಾಂತರದೊಳ್ ಶ್ರುಂಗಾರನೆ ....ಯಮಂ ಪೊಕ್ಕು ॥

ಉತ್ಸಾಹಾ ॥ ಕರಿಯಜ ಗೋಕರಾಸಿಯೊಂದ ನೋಡಿ ನಂಮನಾ ಯ ಮೆಣಸ
ನಂತ ರಾಸಿಯಪ್ಪವೆಂಮೊಡೀತಗೀ
ಧರೆಯನಿಳಿಕೆಗೆಯ್ದು ಕೋಪಿಸುತ್ತೆ ವೆಯ್ದೆ ಬಂದರೆ
ಬರವನನೋವದೆಂದು ಗುದ್ದನಿಕ್ಕೆ ನೂಂಕಿದರ್ ॥

ಅಂತ್ಯ : ॥ ವೃ ॥ ಜಿನಪದಸೇವಕಂ ಜಿನಮುನೀಂದ್ರ ಪದಾರ್ಚಕನನ್ಯ ದೇವ್ಯಮಂ
ಕನಸಿನೊಳಾವಗಂ ನೆನೆಯದುತ್ತಮನುದಾರ ಮೇರು ಸ
ಜ್ಜನನಿಧಿ ಸತ್ಯ ಶೌಚ ಗುಣದಾಗದಾಗ್ನ್ಯೆಯ ಜಂನ್ಮಭೂಮಿಯಾ
ದನುನಯದಿಂದೆ ಕೀರ್ತ್ತಿಪುದು ವೃತ್ತವಿಳಾಸನನೀ ಜಗಜ್ಜನಂ ॥ ೯೫ ॥

ಗದ್ಯ ॥ ಇದು ವಿನಮದನುರತಟ ಘಟ್ಟಿತ ಮಣಿಗಣ ಮರೀಚಿ ಮಂಜರೀ ಪುಂಜರಂಜಿತ ಪಾದಾರವಿಂದ ಭಗವದರುಹತ್ಪರಮೇಶ್ವರ ವದನವಿನಿರ್ಗತ ಶ್ರುತಾಂಬೋಧಿವರ್ಧನ ಸುಧಾಕರಂ ಶ್ರೀಮದಮರಕೀರ್ತಿ ರಾಉಳ ವ್ರತೀಶ್ವರ ಚರಣ ಸರಸಿರುಹ ಷಟ್ಪದಂ ವೃತ್ತವಿಳಾಸ ವಿರಚಿತಮಪ್ಪ ಧರ್ಮ್ಮಪರೀಕ್ಷೆಯೊಳು ಪವನವೇಗಂ ಮೊದಲಾಗಿ ಸಕಲ ವಿಪ್ರಜನಂಗಳ ವ್ರತನಿರೂಪಣ ವರ್ನ್ನನಂ ದಶಮಾಸ್ವಾಸಂ ॥ ೯ ॥

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಖ ವರುಷ ೧೬೭೬ನೆ ಭಾವನಾಮ ಸಂವತ್ಸರದ ವೈಶಾಖ ಶುದ್ಧ ೧೫ ಸೋಮವಾರದಿವ್ಸದಲ್ಲೂ ಮೈಹಿಶೂರ ಅಠವಣೆ ಚಾವಡಿಯ ಕರಣೀಕ ದೇವರಸೈಯ್ಯನವರ ಮಗ ಪದುಮಂಣೈಯ್ಯನು ಧರ್ಮ್ಮಪರೀಕ್ಷೆಯ ಬರದು ಕೊಟ್ಟುಯಿರುವಂತ್ಥಾ ಪುಸ್ತುಕವನೋದಿದವರ್ಗ್ಗೆ ಮನಮುಟ್ಟೆ ಕೇಳಿದವರ್ಗ್ಗೆ ವೋದಿಸಿ ಕೇಳಿದ ವರ್ಗ್ಗೆ ಸದ್ಧರ್ಮ್ಮಾಭಿವೃದ್ಧಿರಸ್ತು ॥ ಶೋಭನಮಸ್ತು ॥ ಆಯುರಾರೋಗ್ಯ ವೈಸ್ವರ್ಯಮಸ್ತು ಶ್ರೀ ಶ್ರೀ.

ವಿಷಯ : ಜೈನಧರ್ಮದ ತತ್ತ್ವಗಳು.

ವಿಶೇಷ : ಮೊದಲಲ್ಲಿ ೪ ಪತ್ರಗಳು ಅಲ್ಪ ಸ್ವಲ್ಪ ತ್ರುಟಿತವಾಗಿವೆ. ದ್ವಿತೀಯಾಶ್ವಾಸದ ಅಂತ್ಯಭಾಗದಲ್ಲಿ ಸ್ವಲ್ಪಭಾಗದಿಂದ ಆರಂಭವಾಗಿ ದಶಮಾಶ್ವಾಸ ಪೂರ್ತಿಯಿದೆ. ಪತ್ರಗಳ ಕ್ರಮಸಂಖ್ಯೆ ಸರಿಯಾಗಿಲ್ಲ.

712

ಕೆ.ಎ. ೩೧೫	**ಧರ್ಮಪರೀಕ್ಷೆ ವ್ಯಾಖ್ಯಾನ**	**ಗದ್ಯ**
೧೩.೧"×೧.೪"	ಚಂದ್ರಸಾಗರ ವರ್ಣಿ	೧೮೦೦
೧-೨೨೫ ಪುಟ	೨೧ ಪಂಕ್ತಿ	೧೮ ಅಕ್ಷರ

ಆದಿ : ಧರ್ಮ ಪರೀಕ್ಷೆ ವ್ಯಾಖ್ಯಾನ, ಶುಭಮಸ್ತು ॥

ಶ್ರೀಮದ್ಭವ್ಯಾಳಿ ಚಕ್ರಂ ಪ್ರಕರ ಸುಖಕರಂ ಸರ್ವಮಿಥ್ಯಾಂಧಕಾರಂ
ಸ್ತೋಮ ಪ್ರಧ್ವಂಸಿ ಬೋಧಾಮಲ ಕಿರಣ ಗುಣೋದ್ಭಾಸಿ
ಮೋಕ್ಷಾಬ್ಜನೀ ಸು
ಪ್ರೇಮಂ ಸ್ಯಾದ್ವಾದ ಪೂರ್ವಾಚಲ ಸಮುದಿತನಾಶ್ಚರ್ಯ ವೃತ್ತಾಭಿರಾಮಂ
ಹೇಮಾಂಗಂ ವರ್ಧಮಾನಂ ಹಿಮಕರನತಿ ನಿರ್ದೋಷಮಂ
ಮಾಳ್ಕೆ ನಮ್ಮೊಳ್ ॥

X X X X

ಅಪ್ಪಣೆಯಾಮದರಿಂದ । ಆ ಆಚಾರ್ಯರಿಗು । ಕೊಲ್ಲಾಪುರದ ಸ್ವಾಮಿಗಳಿಗೂ। ಸಾಷ್ಟಾಂಗ ಪ್ರಣುತನಾಗಿ । ಚಂದ್ರಸಾಗರವರ್ಣಿ ವಿರಚಿಸಲ್ತೊಡಗಿದಾನ ದೆಂತನೆ । ಕುಳೀರ । ಕರ್ಕಟ । ಮಕರ । ದರ್ದುರ । ಫಣಿ । ಮೀನು । ಮೊಸಳೆ । ನೀರಾನೆ ।

ಅಂತ್ಯ : ಜಿನಪಾದ ಶೇವಕನುಂ ಮುನಿಪಾದಾರ್ಚನನುಂ ಅನ್ಯದ್ವೈವಮುಂ ಕನರಿ ನೋಳ್ಕಾಣದುತ್ತಮಚಿತ್ತಸುಧಾರ ಮೇರು ಸಜ್ಜನನಿಧಿ ಸತ್ಯಶೌಚ ಗುಣದಾಗಾರನಾದ ಮನೋವಗನುಂ ಶ್ರೀಮುಕ್ತಿ ಮನೋವಲ್ಲಭನಾದನು ಮಿತ್ರನಾದ ವಾಯುವೇಗ ಸಮ್ಯಕ್ತ್ವ ರತ್ನಾಕರನೆನಿಸಿ ಅಚ್ಯುತೇಂದ್ರನು ॥ ಗದ್ಯಾ ॥ ಇದು ವಿನಮದಮರ ಮುಗುಟತಟ ಘಟಿತ ಮಣಿಗಣ ಮರೀಚಿ ಮಂಜರೀ ಪುಂಜರಂಜಿತ ಪಾದಾರವಿಂದ ಭಗವದರ್ಹತ್ಪರಮೇಶ್ವರ ವದನ ವಿನಿರ್ಗತ ಶೃತಾಂಬೋಧಿ ವರ್ಧನ ಸುಧಾಕರಮ್ ಶ್ರೀಮಚ್ಚಾರುಕೀರ್ತಿ ಪಂಡಿತಾಚಾರ್ಯರನುಜ್ಞೆಯಿಂ ಶ್ರೀಮಚ್ಚಂದ್ರಸಾಗರವರ್ಣಿ ವಿರಚಿತಮಪ್ಪ ಧರ್ಮಪರೀಕ್ಷೆಯೊಳು ಪವನವೇಗಂ ಮೊದಲಾಗಿ ಸಕಲ ವಿಪ್ರಜನಂಗಳ್ಗೆ ವ್ರತನಿರೂಪಣ ವರ್ಣನಂ ದಶಮಾಶ್ವಾಸಂ ಸಂಪೂರ್ಣಮ್.

ವಿಷಯ : ಜೈನ ಧರ್ಮದ ತತ್ತ್ವ.

ವಿಶೇಷ : ಪ್ರತಿ ಸುದೃಢವಾಗಿದೆ. ಸ್ಫುಟಾಕ್ಷರ.

713

ಕೆ. ೬	**ಧರ್ಮಾಮೃತ**	ಚಂಪು
೨೧"×೨.೧"	ನಯಸೇನ	೧೧೧೨
೧-೧೭೩ ಪತ್ರ	[illegible] ಪಂಕ್ತಿ	೭೮ ಅಕ್ಷರ

ಆದಿ : ಶ್ರೀ.... ಶ್ರೀಮದ್ಧರ್ಮಾಮೃತ ಕಥಾ।
ಶ್ರೀರಾಮಾ ರಮಣೀಯ ಪಾದ ಸರಸೀಜಾತಂ ನಿಳಿಪೇಂದ್ರ ವೃಂ
ದಾರಾದ್ಯಂ ಭುವನತ್ರಯ ಪ್ರಭು ವಿನೇಯಾನೀಕ ಕಲ್ಪದ್ರುಮಂ
ಧೀರಂ ನಿತ್ಯಸನಂತನಕ್ಷಯ ಸುಖಂ ಮುಕ್ತ್ಯಂಗನೇಶಂ ಜಗ
ತ್ಸಾರಂ ವೀರ ಜಿನೇಂದ್ರನೀಗೆಮಗೆ ಮುಕ್ತಿ ಶ್ರೀ ಸುಖಾವಾಪ್ತಿಯಂ ॥

X X X X

ಎನಿತೊಳವು ತರ್ಕ್ಕಶಾಸ್ತ್ರಮ
ವನಿತುಮನತಿಶಯದಿನೆಸೆಯೆ ನಯಸೇನ ಮುನೀಂ
ದ್ರನೆ ಬಲ್ಲನೆಂದು ಧಾರಿಣಿ
ಮನದಾದರದಿಂದೆ ಪೊಗಳೆ ಕೀರ್ತಿಯನಾಂತಂ ॥ ೨೨ ॥

ಅಂತ್ಯ : ಜಿನಧರ್ಮಂ ಸಕಲಾವನೀತಳಮುಮಂ ಪರ್ವಿಕ್ಕೆ ಭೂಪಾಲಕ
ಜ್ಜನಮಂ ನ್ಯಾಯದೊಳೊಂದಿ ರಕ್ಷಿಸುಗೆ ಭೂಲೋಕಕ್ಕೆ ಸಂತೋಷಮ
ಪ್ಪಿನೆಗಂ ಪೆರ್ಮಳೆ ಕೊಳ್ಗೆ ಭವ್ಯನಿಕರಕ್ಕಾನಂದಮಂ ಪೆಳ್ವ ಕಾಂ
ಚನಮುಂ ಕೀರ್ತ್ತಿಯುಮಕ್ಕೆ ದಿವ್ಯಸುಖಮಂ ಭದ್ರಂ ಶುಭಂ ಮಂಗಲಂ ॥
ಗದ್ಯ ॥ ಯಿದು ನಿಖಿಲ ದಿವಿಜ ಪರಿವೃಢ ಮಕುಟ ಘಟ್ಟಿತ ಮಣಿಗಣ ವಿಲುಳಿತ ಚುಂಬನೀಯ ಪರಮ ಜಿನ ಚರಣಯುಗಳ ಸರಸೀರುಹ ಮತ್ತ ಮಧುಕರ ನಿರುಪಮ ಸಹಜ ಕವಿಜನ ಪಯಃ ಪಯೋಧಿ ಹಿಮಕರನುತ ಭಾವಯುತ ದಿಗಂಬರ ದಾಸ ನೂತ್ನ ಕವಿತಾ ವಿಳಾಸಂ ಶ್ರೀಮನ್ನಯಸೇನ ದೇವ ವಿರಚಿತ.... ...
ಶ್ರೀಮದ್ರಾಕ್ಷಸ ವತ್ಸರೇ ವಿಮಲಿನೇ ಮಾಸೇ ಪುನಃ ಫಾಲ್ಗುನೇ
ವಾರೇ ದೇವಗುರೋಸ್ಸುಕಾರ್ಯ ವಿಹಿತೇ ಶ್ರೀ ಪೌರ್ನ್ನಮಾಸ್ಯಾಂ ತಿಥೌ
ಆದಿ ಶ್ರೀ ಯತಿ ಪುಂಗವಾಯುಜ ....
....ಸ್ವಯಮಾದರೇಣ ಲಿಖಿತಂ ದತ್ತೇಸ್ಮ ಧರ್ಮ್ಮಾಮೃತಂ ॥

ವಿಷಯ : ಜೈನತತ್ತ್ವಪ್ರತಿಪಾದಕ ಕಥೆಗಳು.

ವಿಶೇಷ : ಎರಡು ಪತ್ರಗಳನ್ನುಳಿದು, ಎಲ್ಲಾ ಪತ್ರಗಳೂ ಚೆನ್ನಾಗಿವೆ ಬರವಣಿಗೆ ಸ್ಫುಟವಾಗಿದೆ. ೩ನೇ ಪತ್ರ ಮುರಿದಿದೆ. ಗ್ರಂಥಾರಂಭಕ್ಕೆ ಮೊದಲು ಕ್ರಮಾಂಕವಿಲ್ಲದ ಒಂದು ಪತ್ರದಲ್ಲಿ ವಿಷಯಸೂಚಿ ಇದೆ. ಇದರಲ್ಲಿ ಚಿತ್ರವಿದೆ.

714

ಕೆ. ಎ. ೩೭	**ಧರ್ಮಾಮೃತ**	ಚಂಪು
೧೨.೯"×೮"	ನಯಸೇನ	೧೧೧೨
೧–೩೯೧ ಪುಟ	೩೧ ಪಂಕ್ತಿ	೨೭ ಅಕ್ಷರ

ಆದಿ : ಮತ್ತೇಭ ॥ ಶ್ರೀ ರಾಮಾರಮಣೀಯಪಾದಸರಸೀಜಾತಂ ನಿಳಿಂಪೇಂದ್ರವೃಂ
ದಾರಾಧ್ಯಂ ಭುವನತ್ರಯ ಪ್ರಭು ದಿನೇಯಾನೀಕ ಕಲ್ಪದ್ರುಮಂ

ಧೀರಂ ನಿತ್ಯನನಂತನಕ್ಷಯಸುಖಂ ಮುಕ್ತ್ಯಂಗನೇಶಂ ಜಗ
ತ್ಸಾರಂ ವೀರಜಿನೇಂದ್ರನೀಗೆಮಗೆ ಮುಕ್ತಿಶ್ರೀ ಸುಖಾವಾಪ್ತಿಯಂ ‖ ೧ ‖

ಅಂತ್ಯ : ಪರಚಕ್ರಾದಿ ಸಲಚ್ಚತುರ್ದಶ ಮಹಾರತ್ನಂಗಳಂ ತಾಳ್ದಿ ನಿಂ
ದರಮೋಘಂ ನುತಚಕ್ರವರ್ತಿ ಪದದೊಳ್ನಿಲ್ವಂತೆ ಸದ್ದರ್ಶನಾ
ದ್ಯುಮದೇವಾನತ ಸಚ್ಚತುರ್ದಶ ವಿದಗ್ಧ ಪ್ರೀತಿಯಪ್ಪೀ ಕಥೋ
ತ್ಕರಮಂ ತಾಳ್ದಿದರುಂ ವಿಶೇಷಪದದೊಳು ನಿಲ್ವರ್ಮಹೋತ್ಸಾಹದಿಂ
‖ ೩೮೬ ‖

ಗದ್ಯ ‖ ಇದು ನಿಖಿಲ ದಿವಿಜಪರಿವೃಢ ಮುಕುಟಘಟ್ಟಿತ ಮಣಿ ಕಿರಣ ವಿಲುಳಿತ ಚುಂಬನೀಯ ಪರಮಜಿನ ಚರಣಯುಗಳ ಸರಸೀರುಹ ಮತ್ತಮಧುಕರ ನಿರುಪಮ ಸಹಜಕವಿಜನ ಪಯಃ ಪಯೋಧಿ ಹಿಮಕರನುತ ಭಾವಯುತ ದಿಗಂಬರ ದಾಸ ನೂತ್ನಕವಿತಾವಿಳಾಸಂ ಶ್ರೀಮನ್ನಯಸೇನದೇವ ವಿರಚಿತಮಪ್ಪ ಧರ್ಮಾಮೃತದೊಳು ನಿಃಪರಿಗ್ರಹ ವ್ಯಾವರ್ಣನಂ ಚತುರ್ದಶಾಸ್ವಾಸಂ ‖

ಧರ್ಮಾಮೃತದ ಪೊಸ್ತಕಕ್ಕೆ ಮಂಗಳ ಮಹಾಶ್ರೀ.

ವಿಷಯ : ಜೈನತತ್ತ್ವಪ್ರತಿಪಾದಕ ಕಥೆಗಳು.

ವಿಶೇಷ : ಈ ಪುಸ್ತಕವನ್ನು ಶ್ರವಣಬೆಳಗುಳದ ಪ್ರತಿಯನ್ನು ನೋಡಿ ನರಸಿಂಹ ಶಾಸ್ತ್ರಿಗಳು ೧೮೭೩ ರಲ್ಲಿ ಪ್ರತಿಮಾಡಿರುತ್ತಾರೆ. ಆರಂಭದ ೪೦ ಪುಟಗಳಲ್ಲಿ ಕೆಂಪು ಮಸಿಯಿಂದ ತಪ್ಪುಗಳನ್ನು ತಿದ್ದಿರುತ್ತಾರೆ. ಶಕಟರೇಫದ ಬಳಕೆಯಿದೆ. ೩೮೩, ೩೮೪ನೇ ಪತ್ರಗಳಲ್ಲಿ ಬರವಣಿಗೆಯಿಲ್ಲ.

715

ಕೆ. ೪೬೧/೧	**ಧೂಮ್ರಪತ್ರ ಪ್ರಸಂಗ**	ಯಕ್ಷಗಾನ
೮.೯"×೨.೧"	?	?
೧–೮ ಪತ್ರ	೧೨ ಪಂಕ್ತಿ	೩೫ ಅಕ್ಷರ

ಆದಿ : ಶ್ರೀ ………… ದೂಂಮ್ರ ಪತ್ರ ಪ್ರಸಂಗ ಬರೆಯುುವದಕೆ ಶುಭಮಸ್ತು

ವೃತ್ತ ‖ ಶ್ರೀ ವತ್ಸಕವಿಶಾಲ ಕೌಸ್ತುಭಮಲಂ ನೀಲಂ ಕೃಪಾಸಾಗರಂ
ದೇವೇಶಂ ದುರಿತಂದಕಾರಮಿಹಿರಂ ಗೋಪೀ ಸಮೂಹಸ್ಮರಂ
ಗೋವರ್ದಾದ್ರುತ ಶಂಭರಾರಿ ಜನಕಂ ಕಾತ್ಯಾಯಿನೀ ಸೋಧರಂ
ಭಾವಂ ನಿತ್ಯಭವಾಂಮ್ಯಹಂ ತವಪದಂ ಧಾರ್ವೀಕರಾಧೀಶ್ವರಂ ‖ ೧ ‖

ಅಂತ್ಯ : ಶೇಷಗಿರೀಷ ಬ್ರಹ್ಮೇಶನಿಗೆ
ಜಗದಿ ಶರ್ಕಭಾಸವಿಲಾಸನಿಗೇ ಮಂಗಲ ॥ ೩ ॥

ಯಿತಿ ಶ್ರೀ ಬ್ರಂವೋತ್ಕಂದ ಪುರಾಣದಲ್ಲಿ ಸೂತಮುನಿ ಸವುನರ್ಕಾದ್ಯರಿಗೆ ಹೇಳಿದ ಮೋಹಿನೀ ಪ್ರಸಂಗ ಸಂಪೂರ್ನಂ. ಶಾಲೀವಾಹನ ಶಕ ವರ್ಶ ೧೭೭೩ನೆ ಸಲುವ ವಿರೋದಿಕ್ರುತು ಸಂವತ್ಸರದ ಶ್ರವಣ ಬಹುಳ ೧೦ ಶುಕ್ರವಾರ ಸಮಾಪ್ತ ॥ ಉಡುಪಿ ದೇವಪ್ಪೈಯ್ಯನೂ ॥

ವಿಷಯ : ತಂಬಾಕು ಪ್ರಸಂಗ.

ವಿಶೇಷ : ಈ ಕಟ್ಟಿನಲ್ಲಿ ಮಾರ್ಜಾಲ ಮುಸಿಕತೆಯೂ ಇದೆ.

716

ಕೆ.ಬಿ. ೧೭೯/೬	**ಧ್ರುವ ಚರಿತ್ರೆ**	ಭಾಮಿನೀ ಷಟ್ಪದಿ
೮″ × ೬.೪″	?	?
೫೩–೫೫ ಪತ್ರ	೧೪ ಪಂಕ್ತಿ	३೨ ಅಕ್ಷರ

ಆದಿ : ಧೃವ ಚರಿತ್ರೆ॥ ದೃವಗತಿಯನಾರ್ಚಿಸುವ ಭರದಲಿ
ದೃವನು ನಾರದಮುನಿಪನುಪದೇ
ಶವನು ಮರದಲ್ಲಿ ದರಿಸಿ ಹೊಕ್ಕನು ವರ ತಪೋವನವಾ ॥
ವಿಧುರ ಕೇಳೈ ಸಕಲ ಲೋಕಂ
ಭೂದಯ್ಯ ನಿಶ್ರಯರೆನಿಪ ಸುಗತಿಗಳಿಗಾ
ಮೊದಲ ಸಾಧನವೆನಿಪ ಮನುವಂಶದ ಪರಂಪರೆಯಾ
ಸುದತಿಯರ ಸಂತಾನವನು....
.... ಹೇಳುವೆನು ತತ್ಪುತ್ರೋತ್ಪಲಾಲಿತ
ಸದಮಳ ಚರಿತವನು ಹೇಳುವೆನು ಕೇಳೆಂದಾ ॥ ೧ ॥

ಅಂತ್ಯ : ಆಳಲಿ ಪಲವೆ ಸಾವ್ಸು ಕೊಲುವಡೆ
ಸಲವುವದೆ ಮುರವೈರಿಯಲ್ಲದೆ
ಹೊಲುವ ಸಮರ್ಥರಾರೆಲೆ ತಾಯೆ ಜಠರದಲೀ
ಸಲಹದವರರಾತನೇ ನೆರೆ
ಸಲಹುವನು ನೀನಂಜದಿರು
.... ॥ ೨೭ ॥

ವಿಷಯ : ಧ್ರುವನ ಕಥೆ.

ವಿಶೇಷ : ೨೭ನೆಯ ಪದ್ಯದ ೬ನೆಯ ಪಾದದಿಂದ ಮುಂದಕ್ಕೆ ಗ್ರಂಥವಿಲ್ಲ. ಈ ಗ್ರಂಥದೊಂದಿಗೆ ವಿರೂಪಾಕ್ಷ ಶತಕ, ಸದಾಶಿವ ಶತಕ, ಪ್ರಾಣೇಶ್ವರ ಶತಕ, ಅಂಬರೀಶ ಚರಿತ್ರೆ, ಗುರುಶಿಷ್ಯ ಸಂವಾದ ಎಂಬ ಗ್ರಂಥಗಳಿವೆ.

717

ಕೆ.ಬಿ. ೩೫೪/೪ **ಧ್ರುವ ಚರಿತ್ರೆ** **ಯಕ್ಷಗಾನ**
೭.೧"×೫.೮" ? ?
೧–೬೭ ಪತ್ರ ೧೨ ಪಂಕ್ತಿ ೨೦ ಅಕ್ಷರ

ಆದಿ : ಯಕ್ಷಗಾನದಲ್ಲಿ ಧೃವ ಚರಿತ್ರೆ ಬರೆಯುವುದಕ್ಕೆ ಶುಭಮಸ್ತು ||

ಕಂದ || ಶ್ರೀವನಿತೆಯನಾಳ್ವಂ ಸುರ
ಸೇವಿತ ವಿಮಲಾಂಘ್ರಿಯುಗಳಂನತುಳಚರಿತ್ರಮಂ
ತಾವರೆಗಣ್ಣಂ ಸಲಹುಗೇ
ಭಾವಿತರ ವರಭಕ್ತ ಜನರಮಂ ಪ್ರತಿದಿನದಿಂ || ೧ ||

ರಾಗಾ || ನಾಟೀ || ರೂ ||
ಜಯ ಜಯ ಗಜಮುಖ ಗೌರೀ
ನಯನ ಚಕೋರಕ ಸ್ಮರಶತಶಯ ಕವಿತ ಸುಪಾಷಾಂಕ್ಕುಷ
ಪ್ರಿಯಭಕ್ತೋಲ್ಲಾಸಾ
ನಿಯಮಿಜನಾರ್ಚಿತ ಪಾದಾದ್ವಯ ಪಾವನ ಚರಿತ ಕುಸೇ
ಶಯಭವ ಮುಕ್ತ್ಯವೃಂದಾರಕ ಸಂಸ್ತುಪಾತ್ರಾ
ಜಯ ಜಯಾ || ೧ ||

ಅಂತ್ಯ : ಶರದೇಂದು ಭಾಸನಿಗೆ ಶರಣು ಜನಪೋಷನಿಗೆ
ನಿರುಪ ಭ್ರುಂಗಾಳಕಿಗೆ ಗುಣಪೂರ್ನೆಗೇ
ಶರರುಹಾಸನನ ಪಟ್ಟದ ರಾಣಿ ಶಾರದೆಗೆ
ಶರದ ವಾಹನ ಮುಖ್ಯ ಸುರಮಿತ್ರೆಗೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ || ೪೫೫ ||

ಅಂತ್ರೂ ಧ್ರುವ ಚರಿತ್ರೆ ಸಂಪೂರ್ನಕಾಂ || ಪದನೂ ೪೫೫|| ಕಾಂ ಮಂಗಳ ಮಹಾ ಶ್ರೀ || ರವುದ್ರೀನಾಮ ಸಂವತ್ಸರ ಭಾದ್ರಪದ ಬಹುಳಯಲ್ಲೂ ಸಂಪೂರ್ಣ.

ವಿಷಯ: ಧ್ರುವನ ಕಥೆ.

ವಿಶೇಷ : ಕ್ರಮಾಂಕವನ್ನು ಹಾಕಿಲ್ಲ. ಇದೇ ಪುಸ್ತಕದಲ್ಲಿ ಚಿತ್ರಸೇನನ ಕಾಳಗ, ವಿರಾಟಪರ್ವ, ಕರ್ಣಾರ್ಜುನರ ಕಾಳಗ, ಐರಾವತ ಎಂಬ ನಾಲ್ಕು ಕೃತಿಗಳಿವೆ.

718

ಕೆ.ಪಿ. ೪೦೫	**ಧ್ರುವಚರಿತ್ರೆ**	ಯಕ್ಷಗಾನ
೮"X೬.೧"	?	?
೧೫೦—೧೮೬ ಪತ್ರ	೨೫ ಪಂಕ್ತಿ	೧೫ ಅಕ್ಷರ

ಆದಿ : ಶ್ರೀ....ಯಕ್ಷಗಾನದ ಧೃವ ಚರಿತ್ರೆ ಬರಿಯುವದಕ್ಕೆ ಶುಭಮಸ್ತು ||

ಕಂದ || ಶ್ರೀವನಿತೆಯರಾಣ್ಮಂ ಸುರ
ಶೇವಿತ ವಿಮಲಾಂಘ್ರಿಯುಗಳನತುಳ ಚರಿತ್ರಂ
ತಾವರೆಗಂಣಂ ಸಲಹುಗೆ
ಭಾವಿತರಹ ಭಕ್ತಜನರಮಂ ಪ್ರತಿದಿನದಿಂ || ೧ ||

x x x x

ದ್ವಿಪದೆ || ವರಮಹಾಭಾಗವತ ಪೌರಾಣದೊಳಗೆ
ಹರಿಭಕ್ತಧೃವನ ಚಾರಿತ್ರವನು ಧರೆಗೆ || ೪ ||
ಸೃಜಿಸುವೆನು ಸಂಗ್ರಹಿಶಿ ಯಕ್ಷಗಾನದಲೀ
ವ್ರಜಪುನಾಧಿಪ ಲೋಕನಾಥನೊಲವಿನಲಿ || ೫ ||

ಅಂತ್ಯ : ಯಿದು ಸಮಸ್ತಪಾಪಹರಗ
ಳಿದುವೆ ಪುಂಣ್ಯಕೀರ್ತಿತರುಗ
ಳಿದು ಸಮಸ್ತಕಾಮಿತಾರ್ಥವುದಯ ಪೂರವೂ
ಯಿದನು ಪೇಳಿ ಕೇಳ್ವ ಸ
ದ್ವೃಧಯರಂನೂ ಗೋಷ್ಟನಗರ
ಸದನ ಲೋಕನಾಥ ಪೊರವನೊಲಿದು ಕೃಪೆಯೊಳೂ || ೪೮೩ ||
ದೃವಚರಿತೆ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಧ್ರುವನ ಕಥೆ.

ವಿಶೇಷ : ತೆಳುವು ಕಾಗದ.

719

ಕೆ.ಬಿ. ೧೧೯ | ಧ್ರುವನ ಹುಟ್ಟು | ಹಾಡು
೭.೬"×೯.೧ | ? | ?
೧—೧೨ ಪತ್ರ | ೧೭ ಪಂಕ್ತಿ | ೧೮ ಅಕ್ಷರ

ಆದಿ : ಧೃವನ ಹುಟ್ಟು ॥
ಗೌರಿಯ ಮೋಹದ ಕುಮಾರನ ಚರಣ ಕಮಲಕೆ
ಎರಗಿ ಬೇಡುಕೆ ವರಮತಿಯೆನಗೊಲಿದು
ಪಾಲಿಸು ವರದ ಗಣಪ ॥ ೧ ॥
ಇಕ್ಷುಖಂಡವು ನಾರಿಕೇಳವು
ಭಕ್ಷ್ಯನೋದಕ ಚಿಗುಳಿಯನು ತಂದರ್ಪಿಸುವೆ
ನಾ ನಿಮ್ಮ ಉದರದೆ ಶಕ್ತಿಗಣಪ ॥ ೨ ॥

ಅಂತ್ಯ : ಹತ್ತುವತಾರನಿಗೆ ಪರ್ವತವು ಎತ್ತಿದವಗೆ
ಭಕ್ತವತ್ಸಲಗೆ ಭಕ್ತರ ಭಾಗ್ಯಗೆ
ಸತ್ಯಭಾಮೇಗಂಜಿ ಸುರಪಾರಿಜಾತ
ವೃಕ್ಷವದೆ ತಂದಿಟ್ಟ ಅಚ್ಯುತಾನಂತ ಶ್ರೀಹರಿಗೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ೧೩೮ ॥
ಕಂದ॥ ಪೊಡವಿಯೊಳೀ ಕಥೆಯೋದಲು
ಕಡು ಪಾತಕಿಯಾದೊಡಮವನುಂ ತಾಂ
ಬಿಡುಗಡೆವೊಂದತಿ ಸುಖವಂ
ಪಡೆವನು ಹರಿಸಾಯುಜ್ಯವ ಶ್ರೀಹರಿಕೃಪೆಯಿಂ ॥ ೧೩೯ ॥
ಮಂಗಳಮಸ್ತು॥

ವಿಷಯ : ಧ್ರುವನ ಕಥೆ.

ವಿಶೇಷ : ಪತ್ರಗಳನ್ನು ಹುಳು ಹೊಡೆದು ರಂಧ್ರ ಬಿದ್ದಿದೆ.

720

ಕೆ.ಎ.೮೬/೧ | ಧ್ರುವೋಪಾಖ್ಯಾನ | ಯಕ್ಷಗಾನ
೧೭.೪"×೧೦.೮ | ಶ್ರೀನಿವಾಸಯ್ಯಂಗಾರ್ | ೧೯ ನೇ ಶತಕ
೧—೮ ಪತ್ರ | ೩೮ ಪಂಕ್ತಿ | ೨೯ ಅಕ್ಷರ

ಆದಿ: ಧೃವೋಪಾಖ್ಯಾನ ಪ್ರಾರಂಭಃ ||

ವೃತ್ತಂ || ಶ್ರೀ ಕಾಂತಾ ಕುಚ ಕುಂಕುಮಾಂಕಿತ ಲಸದ್ವಕ್ಷಸ್ಥಲೋದ್ಭಾಸಿತಂ
ಲೋಕೇಶಾರ್ಚಿತ ಪಾದ ಪದ್ಮನನಘಂ ಭಕ್ತಾರ್ತಿಪಭೇದಕಂ |
ರಾಕಾ ಚಂದ್ರ ನಿಭಾನಸಂ ದರ ಗದಾ ಚಕ್ರಾಂಬುರುಡ್ಭೂಷಿಕಂ
ಸಾಕಲ್ಯೇಷ್ಟದನೋವುದಾಶ್ರಿತರನುಂ ಶ್ರೀ ಶ್ರೀನಿವಾಸಂ ಸದಾ || ೧ ||
ರಾಗಾ || ಪೊರೆಯೊ ಕರುಣಾಶರಧಿ | ಹರಿ ನೀ || ಪ ||
ಕುವಲಯ ಲೋಚನ | ಭವಭಯ ಭಂಜನ | ದಿವಿಷದಾನಂದ ಪಾ |
ವನ ಚರಿತ || ೧ ||

ಅಂತ್ಯ: ವ— ಇಂತು ನೀಂಗೈದುಪಕಾರಕಾನೆನಿತು ಜನ್ಮಂ ಕೃತಜ್ಞನಾಗಿರ್ದೊಡಂ ತೀರಲಾರದು || ವಿನಲನಿಶರುಂ ಪರರುಂ ಸಂದಭರಿತರಾಗಿ ಪರಮಾತ್ಮನಡಿಗೆ ಮಂಗಳಾಶಾಸನಂಗೈದರಾಗಳ್ ||

x x x x

ಶ್ರೀ ಶ್ರೀನಿವಾಸಾರ್ಯ ಸಂಸೇವ್ಯ ಪಾದಾಬ್ಜ ಶೇಶಾಚಲಾಧೀಶ ಕೀಶೇಶನುತೆ ||
ಶ್ರೀ ಶ್ರೀನಿವಾಸ ಮಹಾ ಗುರುವೇ ನಮಃ || ಧೃವೋಪಾಖ್ಯಾನಂ ಸಂಪೂರ್ಣಂ

ವಿಷಯ: ಧ್ರುವನ ಕಥೆ.

ವಿಶೇಷ: ಬರಹ ಮೋಡಿ. ಸುಲಭವಾಗಿ ತಿಳಿಯುವುದಿಲ್ಲ. ಇದೇ ಪುಸ್ತಕದಲ್ಲಿ ವನಮಾಲೀ ವಿಲಾಸವೆಂಬ ಇನ್ನೊಂದು ಗ್ರಂಥವಿದೆ. ಪುಸ್ತಕದ ಆರಂಭದಲ್ಲಿರುವ ಕ್ರಮಾಂಕವಿಲ್ಲದ ಎರಡು ಪತ್ರಗಳಲ್ಲಿ ಮುಕುಂದ ಮಾಲಾಸ್ತೋತ್ರದ ಕೆಲವು ಶ್ಲೋಕಗಳಿಗೆ ಗದ್ಯ ಪದ್ಯಾತ್ಮಕವಾದ ಕನ್ನಡ ಅನುವಾದವಿದೆ.

721

ಕ. ೨೮೩/೬	ನಕ್ಷತ್ರ ಚೂಡಾಮಣಿ	ಶ್ಲೋಕ, ಟೀಕು
೧೫"×೧.೫"	?	?
೨೮—೪೭ ಪತ್ರ	೭ ಪಂಕ್ತಿ	೭೦ ಅಕ್ಷರ

ಆದಿ: ನಕ್ಷತ್ರ ಚೂಡಾಮಣಿ ಬರೆಯುದಕ್ಕೆ ನೆರ್ವಿಘ್ನಮಸ್ತೂ ||
ವಸವಸಂತ್ರ ತಿಲುಕಾ | ವೃತಾ
ಹಸ್ಯ ಬಂದುರದಯಾ ನ ಪುರುಷ ವೇಶಂ

ಭೇಷಜ್ಯೇ ಮಂತ್ರ ಗೃಹ ವರ್ಮ್ಯವನ ಪ್ರಪ್ಯಯಂತ್ರಾ
ಭೀಷೇಖಮದಿ ಲಕ್ಷಣ ಜಲಾವತಾಂಜಿಕೂರ್ವಂ ಶಂತಿಕಾ।
ವಿಧನೇ ಮಹಾಸ್ವಿ ನೀನೂ ॥

ಟೀಕೂ ॥ ಚೂ ಚೇ ಚೋ ಲಾ ಅಶ್ವಿನೀ ಕಪ್ಪುವರ್ನ। ಮೂರುತಾರೇ।
ಕುದುರೆ ಮುಖದಾಕಾರ। ಪುರುಷನು ದೇವಗಣಾ।

ಅಂತ್ಯ : ೬೦ ವರುಷಕೆ ಅಪಮೃತ್ಯು ಯಿಷ್ಟು ಪರಿಹರವಾದರೇ। ೮೬ ವರುಷಕೆ ಪರಮಾಯೂ। ಹುಟ್ಟಿದ ಲಗ್ನಕೆ। ಶನೀ ರಾಹು ಯಿ ಗ್ರಹಂಗಳೂ ಲಗ್ನಕೆ ಹೀನಾ। ವಾಗಿ ಯಿದರೇ। ಕೊಂನುಡು ಗಾ ಕುಂಟ ಕುರೆಡ್ರಾ ಕೆಟ್ಟಿ ಕೆಟ್ಟು ಮನಶಿನವ ಕಿವಡಾ ಮೊಂಡಾ ಮೂಕೆರೆಯಾ । ಯಿ ಪರಿಹಾರವಾದರೆ । ಯಿಂತೀ ನಕ್ಷತ್ರ ಚಿಂತ್ತಾಮಣಿ ೨೭ ನಕ್ಷತ್ರ ಸಮಾಪ್ತ ಮಂಗಳ ಮಹಾ ಶ್ರೀ ॥

ವಿಷಯ : ಅಶ್ವಿನಿ ಮೊದಲು ರೇವತಿವರೆಗಿನ ೨೭ ನಕ್ಷತ್ರಗಳ ವಿವರ.

ವಿಶೇಷ : ಇದೇ ಕಟ್ಟಿನಲ್ಲಿ ನೀತಿ ಸಂಗ್ರಹ, ಜಲಶಿಲ್ಪಿ, ಮನೆ ಕಟ್ಟುವ ಲಕ್ಷಣ, ನರಪಿಂಗಲಿ, ರಾಮಧ್ಯಾನ ಎಂಬ ಇತರ ಕೃತಿಗಳಿವೆ.

722

ಕೆ. ೬೨೯/೨	**ನಕ್ಷತ್ರ ಚೂಡಾಮಣಿ**	ಗದ್ಯ
೮.೫"×೨"	?	?
೬–೩೩ ಪತ್ರ	೧೨ ಪಂಕ್ತಿ	೪೩ ಅಕ್ಷರ

ಆದಿ : ನಕ್ಷತ್ರ ಚೂಡಾಮಣಿಯಾ ಬರವುದಕ್ಕೆ ಶುಭಮಸ್ತು ॥
ಚು ಚೆ ಚೋ ಲ ಅಶ್ವಿನಿ 3 ತಾರೆ ಕುದುರೆ ಮೋರೆಯಾಕಾರ। ಕರಿಯ ವರ್ನ। ದೇವಗಣ। ಕುಲದಲ್ಲಿ ವೈಸ್ಯ। ೪ ಪಾದ। ಯೋನಿಯಲ್ಲಿ ಹೆಂಣು। ಬಡ ದೃಷ್ಟಿ। ಸಮವಾರೆ। ವಾಯು ಮಂಡಲ ಮುಟ್ಟಿಮರ। ಪಕ್ಷಿ ಭೇರುಂಡ।

ಅಂತ್ಯ : ಕ್ರುರಗ್ರಹವಿರಲು ಬಹುಹೀನ।
ಕಂದ ॥ ಕೂನಂ ಹೊರಡಂ ಪಂಗಳ
ಹೀನದರೊಳು ಗಾಗಳು। ಕುಷ್ಟಂ ನಷ್ಟಂ ತಟಂ

ಗ್ನೇನಹರ ಬದಿರಂದಂ
ಕಾಕುಂ ಕುರುಡ ವೊಡನಾಸಿಕ ನಾಶಂ ॥ ೨೭ ॥
ನಕ್ಷತ್ರ ಚೂಡಾಮಣಿ ಜೊತಿಸ ಶಾಸ್ತ್ರ ಬದ್ರ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಅಶ್ವಿನಿ ಮೊದಲು ರೇವತಿವರೆಗಿನ ೨೭ ನಕ್ಷತ್ರಗಳ ವಿವರ.

ವಿಶೇಷ : ನಕ್ಷತ್ರ ಚೂಡಾಮಣಿಯು ೭ ರಿಂದ ೨೫ ವರೆಗಿನ ಗರಿಗಳಲ್ಲಿ ಮುಗಿಯುತ್ತವೆ. ಮುಂದೆ ೩೭ ವರೆಗಿನ ಗರಿಗಳಲ್ಲಿ ಶಕುನ ಇತ್ಯಾದಿ ಜ್ಯೋತಿಷ ವಿಚಾರ ಸಂಗ್ರಹವಿದೆ. ಒಂದೆರಡು ಗರಿಗಳು ತ್ರುಟಿತವಾಗಿವೆ. ಇದೇ ಕಟ್ಟಿನಲ್ಲಿ ಬೆಡಗಿನ ಸ್ವರ ಪದಗಳು ಎಂಬ ಮತ್ತೊಂದು ಕೃತಿಯಿದೆ.

723

ಕೆ.ಬಿ. ೨೪೭	**ನಕ್ಷತ್ರ ಚೂಡಾಮಣಿ**	**ಗದ್ಯ**
೮″×೬.೬″	?	?
೧೨ ಪತ್ರ	೨೫ ಪಂಕ್ತಿ	೩೦ ಅಕ್ಷರ

ಆದಿ : ನಕ್ಷತ್ರ ಚೂಡಾಮಣಿ ಜೋತಿಷ್ಯ ॥
ಮರಣ ಕಂಟಕದ ಶಾಸ್ತ್ರ ॥ ಅಶ್ವಿನಿ ನಕ್ಷತ್ರದ ಲಕ್ಷ್ಮ್ರಣಾ ॥ ಚೂ ಚೆ ಚೊ ಲ ಅಶ್ವಿನಿ ॥ ಅದು ಕುದುರೆಯ ಮೊಕದ ಹಾಗೆ ಯಿಹುದು ಅದರ ವೃಕ್ಷ ಯಿಟ್ಟೆಯ ವೃಕ್ಷಾ । ಪಕ್ಷಿ ಹಾಲ್ಪುವಕ್ಕಿ । ವೊನಿ ಕುದುರೆ । ರಾಸಿ ಮೇಷ ರಾಸಿ ದೇವಗಣ । ಅಶ್ವಿನಿದೇವರು । ಅಕ್ಷರ । ಆ ಅನಾಲ್ಕು ಘಳಿಗೆಯ ಮ್ಯಾಲೆ ತ್ಯೆಜ್ಯ । ಚೈತ್ರ ತಿಂಗಳಲ್ಲು ಶೂಂನ್ಯ ಹೋಸ ಸೇಲೆಯನುಡಲು ಭಂಗಾರವನಿಕ್ಕಲು ಒಳಿತ್ತ ಮಾಡಲು । ಬೀಜವ ಬಿತ್ತಲು । ಞಯಿದು ಚೈತ್ರ ಮೊದಲು ದಿನವುದಿ ಅರೆತಿಗಳಲು ಆವುದೊಂದು ಕಾರ್ಯವಾಗದು ।

ಅಂತ್ಯ : ಆದಿತ್ಯನುದಯ ಕಳ್ಳನಹನು ಚಂದ್ರನುದಯ ವೆದಿಷ್ಟನಹನು ಮಂಗಳನುದಯ ಕುಷ್ಟ ಪಡೆವನು ಬುದನುದಯ ಕುರೂಪಿಯಹನ್ನು ಗೋವುದಯ ಅಲ್ಪವಿದ್ಯವಂತನಹನ್ನು ಶುಕ್ರನುದಯು ಕುರುಡನಹನೂ ಶನಿವುದಯ ಕಷ್ಟಪಡುವನ್ನು ಯಿಾ ನಕ್ಷತ್ರಂ ಪಿಡದರಿ ಯರಡೇ ಕವಿಗಳಿಗೆಯಲ್ಲಿ ಹೊಟ್ಟೆ ಶೂಲದಲ್ಲಿ ಮೃತವನೈದುವನೂ ॥ ೨೭ ॥ ಅಂತು ರೇವತಿ ನಕ್ಷತ್ರದ ಫಲ ಸಂಪೂರ್ಣ ಮಂಗಳ ಮಹಾ ಶ್ರೀ॥

ವಿಷಯ : ಅಶ್ವಿನಿ ಮೊದಲು ರೇವತಿವರೆಗಿನ ೨೭ ನಕ್ಷತ್ರಗಳ ವಿವರ.

ವಿಶೇಷ : ಮೋಡಿ ಲಿಪಿ.

724

ಕೆ.ಬಿ. ೧೩	ನಂಜುಂಡ ಶತಕಂ	ಕಂದ
೮.೪" × ೬.೬"	ಕಪಿನಿ	ಸು. ೧೮೦೦
೧–೧೮ ಪತ್ರ	೧೧ ಪಂಕ್ತಿ	೧೪ ಅಕ್ಷರ

ಆದಿ : ಶ್ರೀ ನಂಜುಂಡ ಶತಕಂ ||
ನಂಜುಂಡ ಶತಕ ನೀತಿಯ
ಮಂಜುಳ ಭಾಷೆಯನು ಸಕಲ ಸಜ್ಜನರಾಲಿಸಿ
ನಂಜುಂಡನೆಂತ್ರವಾಹನನು
ಭಂಜಿಕೆಯಾನುಸುರ್ವೆ ನಾಥನಪ್ಪಣೆವಿಡಿದುಂ || ೧ ||

X X X X

ವರ ಸಂಸ್ಕೃತ ಶ್ಲೋಕಂಗಳ
ಪರಿಮಳದಲರುಗಳ ಕಂದ ಪದ್ಯಾಂತರದೊಳ್
ಸರಗಟ್ಟುವೆ ಸುಜನರ ಕಿವಿ
ದುರುಬಿಗೆ ನಂಜುಂಡಲಿಂಗ ನತಜನ ಸಂಗಾ || ೬ ||

ಅಂತ್ಯ : ಗರಳಪುರೀಶನು ಕಪ್ಪಿನಿ
ಗೊರವಿತ್ತಿದನುಸುರಿಸಿದ ಶತಕ ಸುನೀತಿಯನುಂ
ಬರದೋದಿ ಕೇಳಿದವರನು
ಪೊರೆವನು ನಂಜುಂಡ ಲಿಂಗ ನತಜನಸಂಗಾ || ೧೦೩ ||
ನಂಜುಂಡ ಶತಕಂ ಸಮಾಪ್ತಂ|| ಶ್ರೀ.||

ವಿಷಯ : ನೀತಿ.

ವಿಶೇಷ : ಪ್ರತಿ ಪದ್ಯವೂ " ನಂಜುಂಡಲಿಂಗ ನತಜನ ಸಂಗಾ " ಎಂದು ಮುಗಿಯುತ್ತದೆ.

725

ಕೆ.ಬಿ. ೩೨೦/೧	**ನಂಜುಂಡ ಶತಕ**	ಕಂದ
೩.೩"×೨.೬"	ಶ್ರೀಕೃಷ್ಣರಾಜ ಮಹಾರಾಜ ಕಂಠೀರವ	೧೮೫೦
೧–೨೨ ಪತ್ರ	೧೧ ಪಂಕ್ತಿ	೧೨ ಅಕ್ಷರ

ಆದಿ : ಶ್ರೀ॥ ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರಿಂದಾ ವಿರಚಿತಮಾದ ನಂಜುಂಡ ಶತಕವಂ ಬರೆಯುವದಕ್ಕೆ ನಿರ್ವಿಘ್ನಮಸ್ತು॥ ಶ್ರೀ ಚಾಮುಂಡಾಂಬಿಕಾಯ್ಯೈ ನಮಃ॥

ಶ್ರೀ ಗೌರಿಯನರ್ಧಾಂಗದೆ
ರಾಗದೆ ಗಂಗಾತರಂಗಮಂ ಮಸ್ತಕದೊಳ್
ಬೇಗದೆ ಚಂದ್ರನ ಧರಿಸಿದ
ನಾಗಾಜಿನ ವಸ್ತ್ರ ಸಲಹು ಶ್ರೀ ನಂಜುಂಡಾ ॥ ೧ ॥

ಅಂತ್ಯ : ಚಾಮುಂಡಾ ಪದಭಕ್ತನು
ಚಾಮೇಂದ್ರ ನರೇಶಪುತ್ರ ಕೃಷ್ಣನೃಪಾಲಂ
ನೇಮದೆ ಗರಪುರದರಸನ
ಕೋಮಲ ಶತಕವನು ರಚಿಸಿದಂ ಮುದದಿಂದಂ ॥
ಆವವನೀ ಗರಳಪುರೀ
ದೇವನ ಶತಕವನು ಭಕ್ತಿಯೊಳು ಭಜಿಸುತಿಹಂ
ಕಾವನು ಮುದದಿಂದವನಂ
ಪಾವನ ವರವೀಯ್ಯುತೀಗ ಶ್ರೀ ನಂಜುಂಡಂ ॥

ಶಾರ್ದೂಲವೃತ್ತಂ॥ ಶಾಲಿವಾಹನ ಶಕಾಬ್ದಗಳ್ ಗಗನಾವಾರಶ್ಶೀಂದು ಸಂಖ್ಯಾಗಳ್
ಮೇಲಾಗುತ್ತಿರೆ ಕೀಲಕಾಬ್ದ ಶುಭಸಾಹಸ್ಯ ದ್ವಿತೀಯ್ಯಾಯುತ
ಪ್ರಾಲೇಯಾಂಶುಜವಾರದೊಳ್ ಶತಕಮಂ ಸಂಪೂರ್ಣಮಂ ಗೈದಿಹಂ ಶ್ರೀ
ಲೋಲ ಕ್ಷಿತಿಪಾಲಜಾಲ ನುತ ಪಾದಾಂಭೋಜ ಕೃಷ್ಣೇಂದ್ರನುಂ॥

ಶ್ರೀ ದುಂದುಭಿನಾಮ ಸಂವತ್ಸರದ ಕಾರ್ತಿಕ ಶುದ್ಧ ಭಾನುವಾರ ಶ್ರೀ ನಂಜುಂಡ ಶತಕಂ ಸಂಪೂರ್ಣಂ ಜಯ ಮಂಗಳಂ ಮಹಾ ॥ ಶ್ರೀ

ವಿಷಯ : ನಂಜನಗೂಡು ನಂಜುಂಡೇಶ್ವರನ ಸ್ತೋತ್ರ.

ವಿಶೇಷ: ಪತ್ರಗಳಿಗೆ ಕ್ರಮಾಂಕವಿಲ್ಲ. ಪ್ರಾರಂಭದಿಂದ ಹದಿನೇಳು ಪತ್ರಗಳನ್ನು ಹುಳು ತಿಂದಿದೆ. ಆರಂಭದ ಎರಡು ಪತ್ರಗಳಲ್ಲಿ ಶ್ರೀ ಶಾರದಾಂಬಾ, ಕಲ್ಪವೃಕ್ಷ, ರಾಧಾಕೃಷ್ಣ ಈ ಮೂರು ವರ್ಣರಂಜಿತ ಚಿತ್ರಗಳಿವೆ. ಈ ಪುಸ್ತಕದಲ್ಲಿಯೇ ಭೂಚಕ್ರದ ವಿವರ, ಜ್ಯೋತಿರ್ಮಯ ಶಾಂಭವೀ ಜ್ಞಾನ ದೀಕ್ಷಾಬೋಧೆ, ಕೋಶ ಪ್ರತಿಕೋಶದ ಟೀಕು—ಈ ಗ್ರಂಥಗಳೂ ಇವೆ. ಇದರಲ್ಲಿ ಗ್ರಂಥದೊಳಗಿನ ಕಾಲಕ್ಕೂ ಕೊನೆಯಲ್ಲಿ ನಮೂದಾಗಿರುವ ಕಾಲಕ್ಕೂ ಪರಸ್ಪರ ಸಂಬಂಧವಿಲ್ಲದೆ ಇರುವುದರಿಂದ ಮೊದಲನೆಯ ಕಾಲವು ಗ್ರಂಥರಚನಾಕಾಲ, ಎರಡನೆಯದು ಪ್ರತಿಮಾಡಿದ ಕಾಲವೆಂದು ಊಹಿಸಬಹುದು. ಕೊನೆಯಲ್ಲಿ ಬಾಲಕೃಷ್ಣನ ಮತ್ತು ಶ್ರೀ ಲಕ್ಷ್ಮಿಯ ವರ್ಣರಂಜಿತ ಚಿತ್ರಗಳಿವೆ.

726

ಕೆ.ಬಿ. ೨೫೩	**ನಂಜುಂಡೇಶ್ವರ ಚರಿತ್ರೆ**	ಭಾಮಿನೀ ಷಟ್ಪದಿ
೮"×೬.೭"	?	?
೧೧ ಪತ್ರ	೨೫ ಪಂಕ್ತಿ	೩೫ ಅಕ್ಷರ

ಆದಿ: ನಂಜುಂಡೇಶ್ವರ ಚರಿತ್ರೆ ॥ ಭಾಮಿನಿ ಷಟ್ಪದೀ ॥

ಶ್ರೀರಜತ ಗಿರಿವಾಸ ವಾಸವ
ವಾರಿಜಾಸನ ಮುಖ್ಯಸಂನುತ
ಚಾರುಚರಣಾಂಭೋಜ ಗಂಗಾಜೂಟ ಶಶಿಮೌಳೀ
ಭೂರಿ ಮಹಿಮೋದ್ಧಾರ ಶಂಕರ
ವಾರಣಾಸ್ಯನ ಜನಕ ಧೂರ್ಜಟಿ
ಮೇರುನಗಕೋದಂಡ ಜಯ ಜಯ ಸ್ವಾಮಿ ನಂಜುಂಡಾ ॥ ೧ ॥

X X X X

ಯೋಗ ವ್ಯಾಸತ್ಕೃತಿಯ ಕಥೆಗಭಿ
ದಾನವೇನೆಸೆ ಮುಂನ ದೂರ್ಜಟಿ
ಮಾನಿನೀ ಮಣಿಯನಿಪ ತಂನಯ ರಮಣಿ ಗಿರಿಸುತೆಗೆ
ಸಾನುರಾಗದೊಳೊಪ್ಪಿ ಪೇಳ್ದ ನ
ವೀನ ನಂಜುಂಡೇಶ ಚರಿತೆ ಮ
ಹಾನುಭಾವರು ಕೇಳ್ವು ಲಾಲಿಸಿ ಭಕ್ತಿಪೂರ್ವಕದೀ ॥ ೧೩ ॥

X X X X

ರಾಜಿಸುವ ಪೌರಾಣಮೊಳ್ಳಿಗೆ
ತೇಜವಾಂತಿಹ ಸ್ತ್ರಳದ ಮಹಿಮೆಯ
ಸೋಜಿಗವ ವಿಸ್ತರಿಪೆನುರು ಷಟ್ಪದಿಯ ಮಾರ್ಗದಲೀ
ಭೂಜನರು ನಲಿವಂತೆ ಸುಜನಸ
ಮಾಸವಾಸಂದಿಸಲು ಮುದದಿಂ
ರಾಜಸೇಖರನೊಪ್ಪುಗೊಳಲೀ ಕೃತಿಯ ಬಿಂನಣಕೆ || ೧೭ ||

ಅಂತ್ಯ : ಯಂದು ಸೂತನು ನೈಮಿಷದ ಮುನಿ
ವೃಂದಗಳಿಗರುಹಿದನು ಶೈಲಜೆ
ಗಂದು ಧೂರ್ಜಟಿಯುಸುರ್ದ ನಂಜುಂಡೇಶ ಚರಿತೆಯನೂ
ಕುಂದನೆಣಿಸದೆ ಭಕ್ತಿಪೂರ್ವಕ
ದಿಂದ ಲಾಲಿಸಿ ಸುಜನರಧಿಕಾ
ನಂದಮಯ ಸಂಮುಂದಿ ರಾಜಿಸಲೈದನೆಯ ಸಂದಿ || ೪೭ ||
ಅಂತು ಸಂಧಿ ೫ ಕಂ ಪದಸೂ ೨೦೦ ಕಂ ಮಂಗಳ, ನಂಜುಂಡೇಶ್ವರ ಚರಿತ್ರೆ ಸಂಪೂರ್ನ.

ವಿಷಯ : ನಂಜುಂಡೇಶನ ಚರಿತ್ರೆ.

ವಿಶೇಷ : ಮೋಡಿ ಅಕ್ಷರ. ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ.

727

ಕೆ.ಬಿ. ೨೬೯	**ನಂದಿಕೇಶ್ವರ ಅಕ್ಷರ ಪ್ರಶ್ನೆ, ಇತ್ಯಾದಿ**	ಗದ್ಯ
೮.೩"×೬.೬"	?	?
೨೫ ಪತ್ರ	೨೫ ಪಂಕ್ತಿ	೨೮ ಅಕ್ಷರ

ಆದಿ : ನಂದೀಶ್ವರ ಅಕ್ಷರ ಪ್ರಶ್ನೆ .... ನಂದಿಕೇಶ್ವರ ಮತದ ವಿವರ। ನಂದಿಕೇಶ್ವರ ದೇವರು ಹನುಮಂತನಿಗೆ ಹೇಳಿದ ವಿವರ। ಅದೆಂತೆಂದರೆ ಯಿೂ ಪ್ರಸ್ನೆಯ ಲಕ್ಷಣಮಂ ನಿರೂಪಿಸಿದ ಯಂದು ಬಿಂನೈಸಲು ಚದುರಕ್ಷರವೆಂಬ ಪ್ರಶ್ನೆ ಯಿದು। ಭೂತಭವಿಷ್ಯದ್ವರ್ತಮಾನ ಲಕ್ಷಣಂಗಳನರಿದು ಕ್ರಮವ ಪೇಳುವೆನೂ। ನಂದಿಕೇಶ್ವರ ದೇವರ ವಚನ। ಬಿಲ್ಪಪತ್ರೆ ಬಡಗ ಹರಿದ ಬೇರು ತಂದು ಶುಭಮುಹೂರ್ತದಲ್ಲು ತರುವಾಗ ಅಷ್ಟವಿದಾರ್ಚನೆಯಂ ಮಾಡಿ ಓಂ। ಶ್ರೀಂ। ಸ್ರಿಂ। ಸ್ರಿಂ। ಸ್ವಾಹಾ ಯಂದು ಯಿೂ ಪ್ರಕಾರವಾಗಿ ನೂರೆಂಟು ಬಾರಿ ಜಪಿಸುವದೂ

ಅಂತ್ಯ : ಶಿಶುಗಳಿಗೆ ಹಲ್ಲುವುಟ್ಟಿದ ಫಲದ ವಿವರಾ—

ಮಕ್ಕಳು ಹುಟ್ಟುವಾಗ ಹಲ್ಲು ಬೆರಶಿ ಹುಟ್ಟಲು ವಂಶಕ್ಷಯ ಯರಡನೆ ತಿಂಗಳಿಗೆ ಬಂದರೆ ತಾಯಿತಂದೆಗೆ ಹೊಲ್ಲಾ। ಮೂರನೆ ತಿಂಗಳಿಗೆ ಬಂದರೆ ಲೇಸೂ ನಾಲ್ಕನೆ ತಿಂಗಳಿಗೆ ಹಲ್ಲು ಬಂದರೆ ಅಂಣತಂಮುಂದಿರಿಗೆ ಹೊಲ್ಲಾ। ಐದನೆ ತಿಂಗಳಿಗೆ ಬಂದರೆ ಭಾಗ್ಯವಂತನಾಗುವನು ಆರನೆ ತಿಂಗಳಿಗೆ ಬಂದರೆ ಮೊದಲಿದ್ದ ಭಾಗ್ಯವೆಲ್ಲ ಹೋಗಿ ದಾರಿದ್ರ್ಯ ಸಂಭವಿಸುವದೂ ಯೇಳನೆ ತಿಂಗಳಿಗೆ ಬಂದರೆ ಕಲಹಕ್ಕೆ ಕುದಿವ ಯಂಟು ತಿಂಗಳಿಗೆ ಬಂದರೆ ಧನ ದಾನ್ಯ ಪುತ್ರ ಮಿತ್ರಕಳತ್ರ ಸಹ ಕೆಡುಗು ವಂಬತ್ತನೆ ತಿಂಗಳಿಗೆ ಬಂದರೆ ರೋಗಭಾಗ್ಯವಂತನಾಗುವನು ಯಿಂತಿ ವಂಬತ್ತು ಲಕ್ಷಣ ॥

ನಂದೀಶ್ವರ ಅಕ್ಷರ ಪ್ರಶ್ನೆ–ದೂತಚೇಷ್ಟೆ ಪ್ರಶ್ನೆ–ನವರತ್ನ ಚಿಂತಾಮಣಿ ಪ್ರಶ್ನೆ ಸಂಪೂರ್ನ ಮಂಗಳಮಹಾ॥ ಸ್ವರಚಿಂತಾಮಣಿ ಪ್ರಸ್ನೆ—

ವಿಷಯ : ಜ್ಯೌತಿಷ (ಪ್ರಶ್ನಶಾಸ್ತ್ರ).

ವಿಶೇಷ : ನೋಡಿ ಅಕ್ಷರ. ೫ನೆಯ ಪತ್ರದಲ್ಲಿ ಸ್ವಸ್ಥಿ ವಿಜಯಾಭ್ಯುದಯ ಶಾಲಿಶಕ ವರ್ಷ ೧೭೬೯ ಪ್ರಮಾದಿ ಸಂವತ್ಸರದಲ್ಲಿ ಜೇಷ್ಠ ಶುದ್ಧ ಬುದುವಾರ ದೊಡ್ಡ ಬೇಲೂರು ಕೊಟ್ಟೂರು ದೇವರ ಮಾತರು ನಂದಿಕೇಶ್ವರದ ಮತಪ್ರಶ್ನೆ ಸಂಸ್ಕೃತ ಭಾಷದಲ್ಲಿ ಯಿದ್ದದ್ದನು ಕನ್ನಡಿನಲ್ಲಿ ಪ್ರಕಟಿಸಿದರು. ಸರ್ವೋಪಕಾರಾರ್ಥವಾಗಿ ರಚಿಸಿದರು ಎಂದಿದೆ. ೬ ನೇ ಪತ್ರದಲ್ಲಿ ಅಂಗಲಕ್ಷಣ ದೂತಪ್ರಶ್ನೆ ಎಂಬ ಕೃತಿ ಮುಗಿದು ಸ್ವರ ಚಿಂತಾಮಣಿ ಎಂಬ ಕೃತಿ ಆರಂಭವಾಗಿದೆ. ೮ನೇ ಪತ್ರದಲ್ಲಿ ಈ ಗ್ರಂಥ ಮುಗಿದು ನಂದಿಕೇಶ್ವರ ನವರತ್ನ ಚಿಂತಾಮಣಿ ಎಂಬ ಗ್ರಂಥವು ಆರಂಭವಾಗಿದೆ.

728

ಕೆ.ಎ. ೩೬	**ನಂದಿಛಂದಸ್ಸು**	ಕಂದ, ವೃತ್ತ
೧೩.೪"×೮.೪"	?	?
೧೨ ಪತ್ರ	೨೮ ಪಂಕ್ತಿ	೧೮ ಅಕ್ಷರ

ಆದಿ : ನಂದಿ ಛಂದಸ್ಸು.

೧. ಒಂದು ಚಿಟಕೆಯನ್ನು ಹಾಕುವಷ್ಟು ಕಾಲಕ್ಕೆ ಮಾತ್ರೆಯೆಂದು ಹೆಸರು. ಒಂದು ಮಾತ್ರೆಯು ಉಚ್ಚರಿಸುವಷ್ಟು ಕಾಲದಲ್ಲಿ ನುಡಿಯುವ ಅಕ್ಷರವು

ಲಘುವೆಂತಲೂ, 2 ಮಾತ್ರೆಗಳ ಕಾಲದಷ್ಟು ಹಿಡಿಯುವ ಅಕ್ಷರವು ಗುರುವೆಂತಲೂ ಹೇಳಲ್ಪಡುವವು.

ಅಂತ್ಯ : ಮಹಾಶ್ರೀವೃತ್ತಂ ||
ಶ್ರೀಮಹಿತಭಕ್ತಹಿತ ಶಿಷ್ಟಜನ ಸೇವಿತ ವಿ| ಶಿಷ್ಟ ಗುಣಮಂಗಳ ಮಂಗಳ ಮಹಾಶ್ರೀ
ನಾಮವನು ನಂಬಿಸಲೆ ನಾಂ ಪೊಗಳ್ವೆ ನಿತ್ಯದಲಿ ನಾರಿ ನೆರೆ ಕೇಳ್ವುದಿದರಂದಂ
ಸೋಮಹಿಸರಾನಿಲ ವಸುಂಧರದ ವಾರಿ ವಿಧು ಸೂರ ಮದುದಿಂದ್ರಭವ ದ್ವಂದ್ವಂ
ನೇಮದ ವಿರಾಮವಿದು ನೀ ತಿಳಿಯೆನಂದದಲಿ ನೀರಜದಳಾಕ್ಷೀ ||
ಇಲ್ಲಿಗೆ ಸಮವೃತ್ತ ರಗಳೆ ಮುಗಿದುದು. ೨೬ ಅಕ್ಕರದ ಮೇಲೆ ರಗಳೆ ಮುಂತಾದವಿದೆ.

ವಿಷಯ : ಕನ್ನಡ ಛಂದಸ್ಸು.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಎರಡೆರಡು ಪತ್ರಗಳಿಗೆ ಒಂದರಂತೆ ಕ್ರಮಾಂಕವಿದ್ದು ಕೊನೆಯ ಪತ್ರ ಸಂಖ್ಯೆ ೬ ಎಂದಿದೆ ಗ್ರಂಥಾರಂಭಕ್ಕೆ ಮೊದಲು "ಮೂಲಪ್ರತಿಯಲ್ಲಿ ಮೊದಲು ಕೆಲವು ಪದ್ಯಗಳಿದ್ದವು. ಪ್ರತಿ ಬರೆದವನು ಅವುಗಳನ್ನು ಬಿಟ್ಟು ತಾತ್ಪರ್ಯವನ್ನು ಮಾತ್ರ ಬರೆವಂತೆ ತೋರುತ್ತೆ" ಎಂದೂ 6ನೇ ಪತ್ರಾಂತ್ಯದಲ್ಲಿ "ಷರಾ–ಮೂಲಪ್ರತಿಯು ಸಮಗ್ರವಾದದ್ದು ದೊರಕಲಿಲ್ಲ. ದೊರೆತಮಟ್ಟಿಗೆ ಯಥಾಪ್ರತಿಮಾಡಿ ಬರೆದಿದ್ದೇನೆ. ತಾ. 5–8–91 ಕ್ಲೋಸ್‌ಪೇಟೆ ಕೆ. ರಾಮಸ್ವಾಮ್ಯೆಂಗಾರ್" ಎಂದೂ ಇದೆ. ಕ್ರಮಾಂಕವಿಲ್ಲದ ಮತ್ತೊಂದು ಪತ್ರದಲ್ಲಿ ಇದನ್ನು ಗುಬ್ಬಿಯಲ್ಲಿರುವ ಪುಸ್ತಕದಿಂದ ಪ್ರತಿ ಮಾಡಿರುವಂತೆ ತಿಳಿದುಬರುತ್ತದೆ ಎಂದಿದೆ.

729

ಕೆ ೩೬೦/೧	ನಂದಿಮಾಹಾತ್ಮ್ಯೆ	ವಾರ್ಧಕ ಷಟ್ಪದಿ
೧೦"×೨.೨"	ಗೋಪ	ಸು. ೧೬೫೦
೧–೧೫೫ ಪತ್ರ	೧೨ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ ... ನಂದಿಕಾವ್ಯ ಬರವುದಕ್ಕೆ ಶುಭಮಸ್ತು । ಆಂಗಿರಸ ಸಂ ಕಾರ್ತಿಕ ಶು ೧ಳ ಸೋಮವಾರ ಪ್ರಾರಂಭಾ ||

ವಾರ್ಧಿಕ ಷಟ್ಪದಿ ॥ ಪದನೂ ॥ ರಾಗ ನಾಟಿ ॥
ಶ್ರೀನಗಸುತಾವಾಕ್ಪಿಕಾಲಾಪದಿಂ ಶಿವಾ
ಕಾನಕ ಲತಾಂಗ ಪರಿಜನಕ ಕೂಟಳ ವಿ
ತಾನದಿಂ ಪಾರ್ವತೀ ಲಲಿತ ಮೃದುಚರಣ ವರ ಹಂಸೆಗಮನೋತ್ಸಾಹದಿಂ
ಮೇನಾತ್ಮಜಾತಾಂಬಕಾ ಭ್ರಮದಿಂದಂ ಭ
ವಾನಿಯ ಸವೀನತರಮಾದವರ ಯವ್ವನೋ
ಧ್ಯಾನದೋಳ್ ಕ್ರೀಡಿಸುವ ನಂದೀಶ ಚೈತ್ರನೋಲೀಗೆ ನಮಗಿಷ್ಟಾರ್ಥಮಂ
॥ ೧ ॥

ಅಂತ್ಯ: ಧಾರುಣಿ ಜಲಾಗ್ನಿ ಮರುತಾಂಬರುಗಳುಳ್ಳಂನ
ತಾರಾಳಿ ಚೆಂದ್ರಾರ್ಕ್ಕಬಿಂಬ ಬಿಂಬಿಸುವಂನ
ವಾರುಧಿಗಳೇಳ ಸದ ನದೀವ್ರಾತವಿಪ್ಪಂನ ಗ್ರಹಚಕ್ರ ಚಲಿಸುವಂನ್ನಾ
ಮೇರುಮಂದರವು ಹಿಮಶೈಲ ರಜತಾದ್ರಿಗಳ್
ತೋರುವಂನಬರ ಲೋಕ ಪ್ರಸಿದ್ಧತೆಯಾಗಿ
ರಾರಾಜಿಸಲಿ ಗೋಪಕವಿ ಪೇಳ್ದ ನಂದಿಯ ಮಹಾತ್ಮೆ ಭೂಭಾಗದಲ್ಲಿ
॥ ೩೨ ॥

X X X X

ವಿನುತ ದ್ರೋಣಜನಾಯು ದಶರಥನ ಸಿರಿ ರಾಘ
ವನ ವಿಪಕ್ಷಕ್ಷಯಂ ನಹುಷನೈಶ್ವರ್ಯ ಪವ
ನನ ಗತಿ ಸುಯೋಧನನ ಮಾನ ಭೀಷ್ಮನ ಶೌರ್ಯ್ಯ ಬಲನ ಭುಜ
ಬಲದೇಳಿಗೆ ॥
ಜನಪ ಧರ್ಮಜನ ಸತ್ಯಂ ವಿದುರ ಸುಜ್ಞಾನ
ಮನುದಿನಂ ದೊರಕೊಳ್ಳು ನಂದಿಯ ಮಹಾತ್ಮೆಯಂ
ಘನ ಭಕ್ತಿಯಿಂದ ಕೇಳಿದ ಸಜ್ಜನರ್ಗ್ಗೆ ನಂದೀಶ್ವರನ ಕರುಣದಿಂದಾ ॥೩೩॥

ಅಂತ್ಯಾ ಸಂಧಿ ೨೫ ಕ್ಕಂ ಪದನೂ ೧೨೨೫ ಕ್ಕಂ ವಲೆ ೧೫೫ ಕ್ಕಂ ಮಂಗಳ ಮಹಾಶ್ರೀ.

ವಿಷಯ: ನಂದಿಯ ಕಥೆ.

ವಿಶೇಷ: ೮೦, ೮೪ ಸಂಖ್ಯೆಯ ಎರಡೆರಡು ಪತ್ರಗಳಿವೆ. ವಿಷಯ ಪುನರುಕ್ತಿಯಾಗಿದೆ. ಇದೇ ಕಟ್ಟಿನಲ್ಲಿ ರಟ್ಟಶಾಸ್ತ್ರವೆಂಬ ಗ್ರಂಥವಿದೆ.

730

ಕೆ.ಎ. ೧೨೧ | ನಂದಿ ಮಾಹಾತ್ಮ್ಯೆ | ವಾರ್ಧಕ ಷಟ್ಪದಿ
೧೩.೧"×೮.೧" | ಗೋಪ | ಸು. ೧೬೫೦
೬೨ ಪತ್ರ | ೩೨ ಪಂಕ್ತಿ | ೩೫ ಅಕ್ಷರ

ಆದಿ : ನಂದಿಮುಹಾತ್ಮೆ ಪದ್ಯಕಾವ್ಯ ॥ ವಾರ್ದಿಕ ಷಟ್ಪದಿ ॥
ಶ್ರೀನಗಸುತಾ ವಾಕ್ಪಿಕಲಾಪದಿಂ ಶಿವಾ
ಕಾನಕಲತಾಂಗ ಪರಿಜಸಿತ ಕುಚಕೂಟ್ಮಲ ವಿ
ತಾನದಿಂ ಪಾರ್ವತೀ ಲಲಿತ ಮೃದುಯಾನ ವರಹಂಸಗಮನೋತ್ಸಾಹದಿಂ
ಮೇನಾತ್ಮಜಾತಾಂಬಕ ಭ್ರಮರದಿಂದಂ ಭ
ವಾನಿಯ ನವೀನತರವಾದ ವರ ಯವ್ವನೋ
ದ್ಯಾನದೊಳ್ಕ್ರೀಡಿಸುವ ನಂದೀಶ ಚೈತ್ರನೊಲ್ದೀಗೆ ನಮಗಿಷ್ಟಾರ್ಥಮಂ
॥ ೧ ॥

ಅಂತ್ಯ : ಧರಣೀಜಲಾಗ್ನಿ ಮರುದಾಂಬರಗಳುಳ್ಳಂನ
ತಾರಾಳಿ ಚಂದ್ರಾರ್ಕ ಬಿಂಬ ಬಿಂಬಿಸುವಂನ್ನ
ವಾರಿದಿಗಳೆಳ್ನದಿನದ ವ್ರಾತಮಿಪ್ಪಂನ ಗ್ರಹಚಕ್ರ ಚರಿಸುವಂನಾ
ಮೇರು ಮಂದರ ಹಿಮಶ್ಯೆಲ ರಜತಾದ್ರಿಗ
ಳ್ತೋರುವಂನಬರ ಲೋಕಪ್ರಶಿದ್ಧತೆಯಾಗಿ
ರಾರಾಜಿಸಲಿ ಗೋಪಕವಿ ಪೇಳ್ದ ನಂದಿಯ ಮಹಾತ್ಮೆ ಭೂಭಾಗದಲ್ಲಿ
॥ ೩೨ ॥

X X X X

ವಿನುತ ದ್ರೋಣಜನಾಯು ದಶರಥನ ಸಿರಿ ರಾಘ
ವನ ವಿಪಕ್ಷಕ್ಷಯಂ ನಹುಶನೈಶ್ವರ್ಯ ಪವ
ನನತಿ ಸುಯೋಧನ ಮಾಂನ್ಯ ಭೀಷ್ಮನ ಶೌರ್ಯ ಬಲನ ಭುಜಬಲದೇಳಿಗೆ
ಜನಪ ಧರ್ಮಜನ ಸತ್ಯಂ ವಿದುರ ಸುಜ್ಞಾನ
ಮನುದಿನಂದ ದೊರಕೊಳ್ಗು ನಂದಿಯ ಮಹಾತ್ಮೆಯಂ
ಘನಭಕ್ತಿಯಿಂದ ಕೇಳಿದ ಸಜ್ಜನರ್ಗೆ ನಂದೀಶ್ವರನ ಕರುಣದಿಂದಾ ॥ ೩೫ ॥
ಅಂತು ಸಂದಿ ೨೫ ಕಾಂ ಪದ ೧೨೨೨ ಕಾಂ ಮಂಗಳಮಹಾಶ್ರೀ ॥

ವಿಷಯ : ನಂದಿಯ ಕಥೆ.

ವಿಶೇಷ : ಮೋಡಿ ಅಕ್ಷರ.

731

ಕೆ.ಎ. ೩೦೬	**ನಂದಿಯಾಗಮ ಲೀಲೆ**	ಭಾಮಿನೀ ಷಟ್ಪದಿ
೧೩.೩"×೮.೩"	ವೀರ ಸಂಗಯ್ಯ	೧೫೮೯
೨೭೮ ಪುಟ	೨೪ ಪಂಕ್ತಿ	೧೫ ಅಕ್ಷರ

ಆದಿ : ಶ್ರೀಮನ್ನಂದಿಯಾಗಮ ಲೀಲೆ ಬರೆಯುವುದಕ್ಕೆ ಅವಿಘ್ನಮಸ್ತು ....
ನಂದಿಯಾಗಮ ಬರೆಯುವುದಕ್ಕೆ ಶುಭಮಸ್ತು.

ಸ್ತೋತ್ರ ॥ ಶಿವನೆನ್ನದ ನಾಲಿಗೆ । ಶಿವಸ್ತೋತ್ರವಂ ಕೇಳದ ಕರ್ಣ ।
ಶಿವನನೀಕ್ಷಿಸಿ ನೋಡದ ಕಂಗಳು । ಶಿವನ ಶರಣರಿಗೆ ಯೆರಗದ ಫಣೆ ।
ಶಿವನ ಸತ್ಕರಿಸಿ ಪೂಜಿಸದ ಹಸ್ತ । ಶಿವಾಲಯಕೆ ನಡೆಯದ ಪಾದ ।
ಶಿವಾರ್ಚನೆಗೆ ಮನವಿಟ್ಟು ಮಾಡದ ಭಾವ । ಬದ್ಧಾಭವಿಯಂದ ಶ್ರೀನಂದಿ
ಶಿವದ್ಭಾವ

ಸೂಚನೆ ॥ ಬಸವಸದ್ಗುರು ಶಿಖಾಮಣಿಯೋ
ವೊಸುಧಿಯನು ನಿರ್ಮಿತವ ಮಾಡಲು
ಅಸವಲ್ಲದಾ ಮಹಾ ಪ್ರಳಯದೊಳಗೆ ಉಳವಿಸಿರ್ವರನೂ ॥ ಪಲ್ಲ ॥
ಶ್ರೀಗುರುವೆ ಸಕಲಥಿತದೇವನೆ
ಯೋಗಿಜನ ಹೃತ್ಕಮಲವಾಸನೆ
ಅಂಗುಮಾಸ್ಮ್ರುತಿ ಶಾಸ್ತ್ರ ಪುರಾಣಕ್ಕೆ ನಿಗುಮ ಗೋಚರನೆ
ತ್ರಿಜಗವ ಪಾಲಿಸುವ ಕರ್ತನೆ
ಯೀಗ ನಿನ್ನಯ ಚರಣ ಕೃಪಿಯಲಿ
ಸಾಗಿಸುವುದು ಈ ಕೃತಿಯ ಕಪ್ಪಡಿಯ ಸಂಗಮೇಶ್ವರನೇ ॥ ೧ ॥

ಅಂತ್ಯ : ಕೊಡಿಯ ಕಲ್ಲೊಳಗಿಪ್ಪ ಬಸವನ
ವಡಲ ಜನಿತ ಸಂಗಯ್ಯ ದೇವರು
ಪಡದ ಸುತನು ಅಪ್ಪಜಯ್ಯನ ಮಗನು ಸಂಗಯ್ಯನೂ
ಮಡದಿ ಲಿಂಗಾಜಮ್ಮನ ಸುತನು
ನುಡಿದ ವೀರ ಸಂಗಯ್ಯನಾಗಮ
ಷಡಗರದ ಮಾಹಾತ್ಮೆಯನು ಸುಜನರು ಕೇಳಿ ಸುಖಿಯಾಗಿ ॥ ೪೯ ॥
ರುದ್ರಬಿಸತಿಯಲ್ಲಿ ಸಂವತ್ಸರ
ಯಿದ್ದಮ್ದು ವಿರೋಧಿ ವಿಕೃತಿ
ಮಧ್ಯ ಕಾರ್ತಿಕವದಿ ಚತುರ್ದಶಿ ಸೌಮ್ಯವಾರದಲಿ

ಶುದ್ಧನಕ್ಷತ್ರವು ಅನೂರಾಧಿಯೊಳ್
ಮದ್ಗುರುವಿನ ಲೀಲೆ ಸಮಾಪ್ತವು
ಬದ್ಧ ಪದಿನ್ಯೆದು ಸಂಧಿ ಸಹಸ್ರಶತ ಹತ್ರಿ ಪದಗಳಲಿ ॥ ೫೦ ॥
ಬಂದ ದುರಿತವ ದೂರ ಮಾಡುವ
ಚಂದ್ರ ರವಿಗಳು ಯಿರುವ ಪರಿಯಲಿ
ಕಂದುಗೊರಳನು ಕೃಪೆಯ ಮಾಡುವ ಸಂಧಿಯಿದು ಮುಗಿಯೆ ॥ ೫೨ ॥
ಅಂತು ಸಂಧಿ ೧೫ ಕಂ ಪದನು ಹನ್ನೊಂದುನೂರು ಕಂ ಮಂಗಳ ಮಹಾ ಸಮಾಪ್ತ ಶಕೆ ೧೮೨೨ ಶಾರ್ವರಿ ಸಂವತ್ಸರಮಿತಿ ಮಾಘ ಶುದ್ಧ ೧೦ ಮಂಗಳವಾರ ೯ ತಾಸಿಗೆ ಮುಗಿಯಿತು .... ಯಿಂತೀ ನಂದಿಯಾಗಮ ಸಮಾಪ್ತವು.

ವಿಷಯ : ನಂದಿ ಬಸವಣ್ಣನ ಚರಿತ್ರೆ.

ವಿಶೇಷ : ಅಕ್ಷರಸ್ಖಾಲಿತ್ಯ ಬಹಳವಿದೆ. ಪ್ರತಿಯ ಕೊನೆಯಲ್ಲಿ ಬಸವಣ್ಣನ ಮೇಲಿನ ಕೆಲವು ಬೇರೆ ಪದ್ಯಗಳಿವೆ. ಇದರ ಅಂತ್ಯದಲ್ಲಿ "8-8-3೧ರಲ್ಲು ಸಮಪ್ರತಿಯಾಗಿದೆ." ಎಂದಿದೆ.

732

ಕೆ. ೧೯೬	**ನನ್ನಯ್ಯಗಳ ಚರಿತ್ರೆ**	ಚಂಪು
೧೧"×೧.೭"	ಮಾದಣ್ಣ	ಸು. ೧೬೫೦
೧-೧೪೦ ಪತ್ರ	೮ ಪಂಕ್ತಿ	೪೬ ಅಕ್ಷರ

ಆದಿ : ನಂನಯಿಯ್ಯನ ಚಾರಿತ್ರ.
ಶ್ರೀಮುಂನಂನ್ಯೆಯ್ಯಗಳ ಚಾರಿತ್ರಮೆಂಬುದು ಪರಳುಮಾತ್ರ್ಥಮಲ್ಲದೆ ಲವುಕಿತಮಲ್ಲ । ಮದೆಂತೆನೆ ॥ ಕಥಾಗರ್ಭ ॥

ಮೊಡ್ಡಿಯ ದೇಶಮೆಂಬ ಪುರುಷನ ಹ್ರುತ್ಕಮಲ ಮಧ್ಯದೊಳುದ್ಭವಿಸಿದ ಕರ್ನಿ ಎಂಬ ಪಟ್ಟಣಕ್ಕೆ । ಮೂಲಾಧಾರಮಪ್ಪುದಱಿಂ ಆಧಾರಮೆಂಬ ಕೋಂಟೆ ಯಿಂ । ದ್ರುತಮಪ್ಪುದಱಿಂ । ಸ್ವಾದಿಷ್ಟಾನಮೆಂಬ ಭೂಸ್ಥಳದಲ್ಲಿ ಮಾಡಿದ ಮಣಿಪೂರಕಮೆನಿಸಿ ರತ್ನಂಗಳರೆವಣಿಸಿ ಮಾಡಿದ x x x x ಸುಜ್ಞಾನಿಗಳ ಭ್ರುತ್ಯಂ ಸುಜನ ಜನಮಿತ್ರನೆನಿಪ ವಾಮಶಿರಪುರದ ಮಾದಂಣನು ಬಿಂನ್ಯೆಸಿದ ನಂನಯಿಯ್ಯಗಳ ಚಾರಿತ್ರಮದೆಂತೆನೆ—

ಅಂತ್ಯ : ಶ್ರೀ ದಿವಿಜೇಂದ್ರ ವಂದಿತ ಪದಂಬುಜನಾಗತಹೃತ್ಪಯೋಜಮಿ
ತ್ರೋದಯ ನವ್ಯಮಾನಸಕಲಾಗಮ ಶಾಸ್ತ್ರ ವಿರಾಜ ತೇಜ ಭೋ
ದೋದಯನುಂನತೋಕ್ಷವದಯಾಂಚಿತ ಧರ್ಮಸುದಾಬ್ಧಿ ಪೂರ್ಣಚಂ
ದ್ರೋದಯವಾದನಾದಿ ಪರಮೇಶ್ವರನೀಗೆಮಗಿಷ್ಟಸಿದ್ಧಿಯಂ ॥
ಆಶ್ವಾಸ ೧೨ ಸಂಧಿ ೫ಕ್ಕಂ ಕಂದ ವೃತ್ತ ಸಹವಾಗಿ ೧೨೮೬ಕ್ಕಂ ಶ್ಲೋಕ
೩೦ಕ್ಕಂ ನಂನಯ್ಯಗಳ ಚಾರಿತ್ರ ಸಮಾಪ್ತ ಸರ್ವ್ವಪಾಪವಘಹರ ಮಂಗಳ
ಮಹಾ ಶ್ರೀ

ವಿಷಯ : ನನ್ನಯ್ಯನೆಂಬ ಶಿವಭಕ್ತನ ಕಥೆ.

ವಿಶೇಷ : ಶಕಟರೇಫವಿದೆ. ಕೆಲವು ಕಡೆ ಪತ್ರಗಳನ್ನು ಹುಳು ಹೊಡೆದಿದೆ.

733

ಕೆ. ೩೩೩/೨	**ನನ್ನಯ್ಯಗಳ ಚರಿತ್ರೆ**	ಚಂಪು
೧೦.೩"×೧.೮"	ಮಾದಣ್ಣ	ಸು ೧೬೫೦
೭೫—೧೮೫ ಪತ್ರ	೧೦ ಪಂಕ್ತಿ	೫೬ ಅಕ್ಷರ

ಆದಿ: ನನ್ನಯ್ಯಗಳ ಚಾರಿತ್ರ । ಕಥಾಗರ್ಭ್ಭ ಪ್ರಕರಣಂ ॥
ಶ್ರೀ ನಂನಯ್ಯಗಳ ಚಾರಿತ್ರವೆಂಬುದು ಪರಮಾರ್ತ್ಥವಲ್ಲದೆ ಲೌಕಿಕಮದಲ್ಲ
ಮದೆಂತೆಂದೆನೆ ॥ ವಚನ ॥ ವಾಗ್ದಂಬಿಲ್ಲದುದಱಿಂ ವೊಡ್ಡಿಯದೇಶವೆಂಬ
ಪುರುಷನ ಹೃತ್ಕಮಲದೊಳುದ್ಭವಿಸಿದ ಕರ್ನಿಕೆ ಎಂಬ ಪಟ್ಟಣಕ್ಕೆ X X X
ಶಿವಪುರದ ಮಾದಂಣ್ಣಂ ಬಿಂನವಿಸಿದ ನಂನಪ್ಪನ ಚಾರಿತ್ರಮದೆಂತೆಂದೆನೆ
ಕಥಾಗರ್ಭಪ್ರಕರಣ ಸಂಪೂರ್ನ ಮಂಗಳ ಮಹಾ ಶ್ರೀ
ಕಂದ ॥ ಶ್ರೀಮದ್ಗುರುಪದ ಕಮಲ
ಪ್ರೇಮಾಂದೋಳನ ಮಧುವ್ರತಂ ಗುರುಭಕ್ತ್ಯ
ದ್ಧಾಮಂ ನಂನಯ್ಯನು ಮೆಱ
ದಾ ಮಹಿಮೆಯು ಪೇಳ್ವೆ ಕೇಳ್ವುದಖಿಳ ಜನಂಗಳು ॥ ೧ ॥

ಅಂತ್ಯ : ಯಿಲ್ಲಿರುತಿರ್ದ್ದ ಮೂವರ ಶರೀರವದೃಶ್ಯಮದಾಗೆ ಕಾಣುತಂ
ತೆಲ್ಲರು ಕೌತುಕಂಬೆರಸು ಕೇಳಿದೊ....ಬಸವಂಣನಾ ಕಳಾ
ವಲ್ಲಭನಂತರಿಕ್ಷದೊಳು ಪೊಣ್ಮಿದ ಪುಷ್ಪಕ ಯುಗ್ಮಕೆಯಿದಾ
ಸಲ್ಲಲಿತಾಂಗರಂ ನಲಿದು ತೋಱಿಸಿದಂ ಶರಣಾಳಿಗ ... ...

ವಿಷಯ : ಶಿವಶರಣ ನನ್ನಯ್ಯನ ಕಥೆ.

ವಿಶೇಷ : ಶಕಟ ರೇಫದ ಪ್ರಯೋಗವಿದೆ. ೧೮೫ ನೆಯ ಪತ್ರ ಕೊನೆಯಲ್ಲಿ ತ್ರುಟಿತವಾಗಿದೆ. ಗ್ರಂಥ ಸಮಾಪ್ತಿಯ ಭಾಗ ಲುಪ್ತವಾಗಿದೆ. ಗ್ರಂಥದ ಮೊದಲನೆಯ ಪತ್ರದಲ್ಲಿ ಎರಡು ಚಿತ್ರಗಳಿವೆ. ಈ ಕಟ್ಟನಲ್ಲಿ ಭೈರವೇಶ್ವರ ಕಾವ್ಯವಿರುವುದಲ್ಲದೆ ಬೆಡಗಿನ ಕೋಲಪದಗಳಿಗೆ ಸಂಬಂಧಿಸಿದ ೬ ಪತ್ರಗಳೂ ಇವೆ.

734

ಕೆ.ಬಿ. ೧೫೩	**ನನ್ನಯ್ಯಗಳ ಚರಿತ್ರೆ**	ಚಂಪೂ
೭.೫"×೬.೧"	ಮಾದಣ್ಣ	ಸು. ೧೬೫೦
೧೫೬ ಪತ್ರ	೧೨ ಪಂಕ್ತಿ	೨೧ ಅಕ್ಷರ

ಆದಿ : ನನ್ನಯ್ಯಗಳ ಚಾರಿತ್ರ ಪ್ರಾರಂಭಃ ॥
ಶ್ರೀಮರ್ದ ನನ್ನಯ್ಯಗಳ ಚಾರಿತ್ರವೆಂಬುದು ಪಾರಮಾರ್ಥಮಲ್ಲದೆ ಲೌಕಿಕಮಲ್ಲಮದೆಂತೆನೆ ॥

ಒಡಿಯ ದೇಶವೆಂಬ ಪುರುಷನ ಹೃತ್ಕಮಲ ಮಧ್ಯದೊಳುದ್ಭವಿಸಿದ ಕರ್ನ್ನಿಕೆಯೆಂಬ ಪಟ್ಟಣಕ್ಕೆ ಮೂಲಾಧಾರಮಪ್ಪದರಿಂ । ಆಧಾರವೆಂಬ ಕೋಂಟೆ ದೃಢಮಪ್ಪುದರಿಂ । ಸ್ವಾಧಿಷ್ಠಾನವೆಂಬ ಭೂಸ್ಥಳದಲ್ಲಿ । ಮಾಡಿದ ಮಣಿಪೂರಕವೆಂಬ ರತ್ನಂಗಳ್ಗೆ ಮುನಿಸಿ । ಮಾಡಿದ ಹೊಂಗೆಲಸದರಮನೆಯಿಂ ।

ಅಂತ್ಯ : ಇತ್ತಲು ಕಲ್ಯಾಣದ ಸ
ದ್ಭಕ್ತರು ಬಸವಣ್ಣ ಪೇಳ್ದ ಕಥೆಯಂತದೊಳುಂ
ಚಿತ್ರದೊಳನೇಕ ಕೌತುಕ
ವೆತ್ತಲೆದೇನೆಂಬೆನೆಮ್ರ ಬಸವನ ಘನಮುಂ
ನನ್ನೈಯ್ಯನ ಚಾರಿತ್ರಕ್ಕಂ
ನೀನತಕವಿ ಮಾದಣಾಂಕನೇನು ಕೃತಾರ್ಥನೋ ॥ ೯೬ ॥
ಶ್ರೀ ಗುರು ನಿರೂಪದಿಂದ
ಬಾಗಿಸದಾ ಭೋಗಿ ಗುರುನತ ನನ್ನಯ್ಯನ
ನಾಗಮೊಕ್ತ್ರರ್ಥ ಚರಿತಮನೀ ಧರೆಗಿರಲೆಂದು ಬರದನೇನು ಕೃತಾರ್ಥನೋ ॥
ನನ್ನಯ್ಯಗಳ ಚಾರಿತ್ರ ಸಂಪೂರ್ಣ ಶ್ರೀ ॥

ವಿಷಯ : ನನ್ನಯ್ಯನೆಂಬ ಶಿವಭಕ್ತನ ಕಥೆ.

ವಿಶೇಷ : ಪತ್ರ ೧೨೮, ೧೪೮, ೧೪೯ ರಲ್ಲಿ ಪದ್ಯಗಳು ಇಲ್ಲ. ಆ ಭಾಗಗಳು ಈ ಗ್ರಂಥದಲ್ಲಿ ಲುಪ್ತ. ಸುಂದರಾಕ್ಷರ.

735

ಕೆ.ಬಿ. ೪೫೦	**ನನ್ನಯ್ಯನ ಕಾವ್ಯ**	ಸಾಂಗತ್ಯ
೮.೩"×೬.೫"	ಪರ್ವತದೇವರು	೧೫೭೭
೨೧೪ ಪತ್ರ	೧೬ ಪಂಕ್ತಿ	೧೩ ಅಕ್ಷರ.

ಆದಿ : ನನ್ನಯ್ಯ ಕಾವ್ಯ ॥
ಭಕ್ತವತ್ಸಲ ದೇವ ಭಕ್ತರ ಮನಪ್ರಿಯ
ಭಕ್ತ ಚಕೋರ ಹಿಮಕರನೆ
ಮುಕ್ತಿದಾಯಕ ನರವಿಮುಕ್ತಿಗೆ ನಿಲುಕದ
ಕರ್ತೃಹರ ಸಲಹು ಮೂಜಗವ ॥ ೧ ॥

X X X X

ವರಗುರು ವಿರೂಪಾಕ್ಷ ದೇವರ ಕರಪದ್ಮ
ದಿರದಿಯುದ್ಭವಿಸಿ ಮರ್ತ್ಯದಲ್ಲಿ
ಚರಲಿಂಗದೊಳಗೊಪ್ಪಿ ಪರ್ವತದೇವರು
ವರದ ಸತ್ಕೃತಿಯ ಲಾಲಿಪುದು ॥ ೩೫ ॥

ಅಂತ್ಯ : ಗುರುಭಕ್ತ ನನ್ನಯ್ಯ ಚರಿತ್ರವನಾರು
ಹರುಷದಿಂದಲಿ ಕೇಳ್ದರಿಗೆ
ಸಿರಿಯಕ್ಕುವನೇಕ ಪುಣ್ಯಸಿದ್ಧಿಸುವವು
ವಿರೂಪಾಕ್ಷನೊಲಿದು ರಕ್ಷಿಸುವಾ ॥ ೧೧೭ ॥
ಕುಂದಿಲ್ಲದೆ ಸಾಸಿರದೇಳ್ನೂರು ತ್ರಿದಶವೈದು ಪದ ನೋಡೆ
ಸಂಧಿ ಪದಿನಾಲ್ಕದರೊಳಗೆ
ಪೊಂದಿರ್ದ ಕಥೆಗಳು ನೂರುಯಪ್ಪತ್ತು ನನ್ನಯ್ಯನಾ
ಸಂದದ ಕಾವ್ಯಕೆ ಶರಣಾರ್ತಿ ॥ ೧೧೮ ॥
ಅಂತು ಸಂಧಿ ೧೪ ಕ್ಕಂ ಪದನೂ ೧೭೩೫ ಕ್ಕಂ ಮಂಗಳ ಮಹಾ ಶ್ರೀ ॥

ವಿಷಯ : ನನ್ನಯ್ಯನೆಂಬ ಶಿವಶರಣನ ಕಥೆ.

ವಿಶೇಷ: ಪ್ರಥಮ ಸಂಧಿಯಲ್ಲಿ ೧೩ ನೆಯ ಪದ್ಯದಿಂದ ೬ ಪದ್ಯಗಳಿಲ್ಲ. ಗ್ರಂಥಾಂತ್ಯದಲ್ಲಿ 27-10-38 ಎಂದಿರುವುದು ಈ ಗ್ರಂಥವನ್ನು ಪ್ರತಿ ಮಾಡಿದ ಕಾಲವಿರಬಹುದು.

736

ಕೆ.ಎ. ೬೨	ನಂಬಿಯಣ್ಣನ ರಗಳೆ, ಇತ್ಯಾದಿ	ರಗಳೆ
೧೨.೬" × ೭.೬"	ಹರಿಹರ (?)	೧೩೦೦
೧-೪೦೩ ಪುಟ +೧೬೫ ಪತ್ರ	೨೮ ಪಂಕ್ತಿ	೧೫ ಅಕ್ಷರ

ಆದಿ: ನಂಬಿಯಂಣನ ರಗಳೆ ಸವೃತ್ತ॥
ಸುರರುಂ ದೈತ್ಯಾಳಿಯುಂ ಮಾಳ್ಪಮೃತಮಥನದೋಳ್ ಪುಟ್ಟಿದುದ್ಯದ್ವಿಷಕಂ
ಕರಮಂ ನೀಂ ಅಂಗೈಯೊಳಗೆ ತೊಳಗೆ ನೋಡಲ್ಪ್ರತಿಭಾಯೆಯಿಂ ವಿ
ಸ್ತರನಾದಾ ಪುಷ್ಪದಂತಾಖ್ಯನಿಳಿಯಜಿಯಲ್ ನಂಬಿಯೆಂದಿಟ್ಟು ಮತ್ತಂ
ಹರ ನೀನೊಲ್ದಾ ಕಥಾಸಾರವನವಧರಿಸ್ಯೆ ಶ್ರೀ ವಿರೂಪಾಕ್ಷಲಿಂಗಾ॥
೧॥ ರಗಳೆ॥ ಶ್ರೀ ಸಕಲ ಸುರರಸೂರರೊಂದು ಕಾರಣದಿಂದ
ಆಸುರದ ದುರ್ವಾಸನಿತ್ತ ಶಾಪದಿ ನಿಂದ
೨॥ ಸುರಪತಿಯ ಕೆಟ್ಟ ಸಂಪದವಂ ತರಲ್ಕೆಂದು॥
ಉರವಣಿಸಿ ತೊಡಗಿದರು ಕಡಲ ಕಡೆಯಲ್ಕೆಂದು॥

ಅಂತ್ಯ: ಪ್ರಮಥ ನಾಯಕನೊಪ್ಪಿದಂ ದೇವನೊಪ್ಪಿದಂ
೨೪॥ ನಮಿತ ದೇಶಿಕನೊಪ್ಪಿದಂ ಸ್ವಾಮಿಯೊಪ್ಪಿದಂ
ಸುಖಿಯೊಪ್ಪಿದಂ ಸದಾಸುಖಿ ಸುಲಭನೊಪ್ಪಿದಂ
೨೫॥ ಮುಖಮುದನ ವೈರಿ ಶಂಕರಲಿಂಗನೊಪ್ಪಿದಂ

ಕಂದ॥ ಕಡೆತನಕ ಹಿಡಿದ ಛಲಮಂ
ನಡಸಿ ಮಹಾಪ್ರಭುವನೊಲಿಸಿ ನಿಜಗುಣಪದಮಂ
ಪಡದ ಗಣನಾಥನೆಂಬನ
ಅಡಿಯೊಳಗಿರಿಸೆನ್ನ ಶಂಕರೇಶ ಪ್ರಭುವೇ॥
ಕಲಿಗಣನಾಥನ ರಗಳೆ ಸಮಾಪ್ತಮಾದುದೂ॥ ಮಂಗಳಮಸ್ತೂ॥

ವಿಷಯ: ಶಿವಶರಣರ ಚರಿತ್ರೆ.

ವಿಶೇಷ: ಈ ಪುಸ್ತಕದಲ್ಲಿ ನಂಬಿಯಣ್ಣ, ಬಸವೇಶ್ವರ ದೇವರು, ಮಹಾದೇವಿ ಯಕ್ಕಗಳು, ರೇವಣಾ ಸಿದ್ಧೇಶ್ವರ ದೇವರು, ಆದಯ್ಯ, ಸಾನಂದ ಗಣೇಶ್ವರ ಗಂಗೋತ್ಪತ್ತಿ, ಮಲುಹಣದೇವ, ಮಳಿಯದೇವರಾಜ, ಅಮ್ಮವ್ವೆ, ಚೆನ್ನಯ್ಯ ಸಾಮವೇದಿ, ವೊಲಘಾಂಡ ಮೂರ್ತಿ, ನಮುಶ್ಶಿವಾಯ, ಮುರುಹರು, ರುದ ಪಶುಪತಿ, ತಿರುಸಾಳ್ವೋವರ, ತಿರುಕುರುಂಪೆ, ಕಳಚೆಂಗ ಪೆರುಮಾಳ್, ಪಗಲ್ಪೋಳ, ಪುನರ್ದೀಕ್ಷೆ, ಚೋಳಿಯಕ್ಕ, ಮೊನೆಯಿಡುವರ, ಶಂಕರದಾಸಿ ಮಯ್ಯ, ದಕ್ಷಾಧ್ವರ, ಭಕ್ತಿಬಿನಹ, ಕೋಳೂರ ಕೊಡಗೂಸು, ಗುಣಸ್ತೋತ್ರ, ಉದ್ಭಟದೇವ, ಹಲಾಯುಧದೇವ, ಪ್ರಸಾದ, ಇಳಿಯಾಂಡ ಗುಡಿಮಾರ, ನಗೆಯ ಮಾರಿತಂದೆ, ಕನ್ನಪ್ಪ ದೇವರು, ಕಲಿಕಾಮದೇವ, ಪಿಂಡೋತ್ಪತ್ತಿ, ಕಲಿಗಣನಾಥ ಈ ೩೬ ಮಂದಿ ಶಿವಶರಣರ ರಗಳೆಗಳಿವೆ. ಶಕಟರೇಫದ ಬಳಕೆ ಇದೆ. ಕ್ರಮಾಂಕವಿಲ್ಲದ ಆರಂಭದ ೫ ಪತ್ರಗಳಲ್ಲಿ ಈ ೩೬ ರಗಳೆಗಳ ಸಂಕ್ಷೇಪ ಕಥೆ ಇದೆ. ೪೦೩ ನೇ ಪುಟ ಪೂರ್ತಿ ಕ್ರಮಾಂಕವಿದೆ. ಮುಂದೆ ಮೂರು ಪುಟಗಳಲ್ಲಿ ಬರವಣಿಗೆಯಿಲ್ಲ. ಬಳಿಕ ಕ್ರಮಾಂಕವಿಲ್ಲದ ೧೬೫ ಪತ್ರಗಳಿವೆ. ಪಾದವಿಂಗಡಣೆ ಇದೆ. ಮಧ್ಯೆ ಕೆಲವು ಪತ್ರಗಳಲ್ಲಿ ಬರವಣಿಗೆಯಿಲ್ಲ. ಮತ್ತೆ ಕೆಲವು ಪತ್ರಗಳಲ್ಲಿ ಅರ್ಧ ಮಾತ್ರ ಬರವಣಿಗೆ ಇದೆ. ೩೬೧, ೩೭೪, ೩೭೫ ನೇ ಪುಟಗಳು ಎರಡೆರಡಿವೆ.

737

ಕೆ. ೨೮೩/೮	**ನರಪಿಂಗಲಿ**	ಶ್ಲೋಕ, ಟೀಕು
೧೫"×೧.೫"	?	?
೪೯—೫೦ ಪತ್ರ	೬ ಪಂಕ್ತಿ	೬೫ ಅಕ್ಷರ

ಆದಿ: ನರಪಿಂಗಲಿ ಶ್ಯಾಸ್ತ್ರ ॥

ಶ್ಲೋಕಾ ॥ ದ್ವಜೇ ಕೃತಾತೆ ದೂಮ್ರ್ಯೇಂ ಚ ಮರಣೇಸಿರತೋಜಯಂ।
ಸ್ವಾನವಾನಂತ್ತರೋಗಂ ವೃಷಬೆಂ ಸುರಾಜ್ಯಂ ಕರೇಸುದುಃಖ
ಗಜಾಸುಖಂ ವಾಯಸ್ತ್ರೀನಿಲ್ಪಲಂ ಭವೇತ್ ॥

ಟೀಕು॥ ದ್ವಜಾವೆಂದಡೆ ಮೂಡಲೂ ದೂಮ್ರವೆಂದಡೆ ಅಗ್ನಿ x x x ಕಾಗೆ ಯಂದಡೆ ಯಿಾಶ್ಯಾಂನ್ಯ ಯಿವಿಷ್ಟು ಅಷ್ಟದಿಕ್ಕಿನ ವಿವರಾ ॥

ಅಂತ್ಯ: ಬಸುವನ ಮುಟ್ಟಲು ದನಲಾಭಾ ಕತ್ತೆಯ ಮುಟ್ಟಲು ವ್ಯಾದಿ ಆನೆಯ ಮುಟ್ಟಲು ಧನ ಸೇರುವದು ಕಾಗೆಯ ಮುಟ್ಟಲು ಕೆಡುದೂ ನರಪಿಂಗಲಿ ಸಮಾಪ್ತಿ ಮಂಗಳ ಮಹಾ ಶ್ರೀ ॥

ವಿಷಯ : ಶಕುನ ಫಲ.

ವಿಶೇಷ : ಇದೇ ಕಟ್ಟನಲ್ಲಿ ನೀತಿ ಸಂಗ್ರಹ, ಮನೆ ಕಟ್ಟುವ ಲಕ್ಷಣ, ನಕ್ಷತ್ರ ಚೂಡಾಮಣಿ, ಶಿವಲಿಖಿತ, ರಾಮಧ್ಯಾನಗಳೆಂಬ ಇತರ ಕೃತಿಗಳಿವೆ.

738

ಕೆ. ೩೮೨/೨	**ನರಪಿಂಗಲಿ**	ಕಂದ
೬.೩"×೧.೩"	ಮಾಧವ ?	?
೨೭–೩೪ ಪತ್ರ	[illegible] ಪಂಕ್ತಿ	೩೮ ಅಕ್ಷರ

ಆದಿ: ನರಪಿಂಗಲಿಗ್ರಂಥಾ ||
ಪರಮಜಿನೇಂದ್ರನ ಪಾದಾಂ
ಬುರುಹಾಂಕ್ಕಿಕನಚಿಂ.....ದ ಮೇರೆವರಿಯೆ ಮಾಧವ
ಧರೆಗಜಿವಂತುಟು ನರಪಿಂ
ಗಲಿಯಂ ನಾಂ ಪೇಳ್ದಿ ಪೊಚ್ಚ ಪೊಸ ಕಂನ್ನಡದಿಂ || ೧ ||
ವಿಕಟಾಂಗಂ ಕ್ಷುದ್ರಕ್ಷ್ಣಂ ಯೆನೆ ಚಂಚಿತಂ ರೋಗಿ ಕಾಮಾತುರಂ
ವಿಕಲಂ ಕ್ರೋಧಿ ನಪುಂಸ್ಸಕಂ ಕಷ್ಟನರಂ ನಿದ್ರೊಪೆರಿಕ್ಷನಾಲಸ್ಯನಂ
ಅಕುಲೀನಂ ವಿಷಯಾತ್ರ್ತನ್ವೃದ್ಧಿ ತರುಣಂ ಪೈಶಾಚಿ ಹೀನಾಂಗನಂ
ನಕುಲಂ ನೋಡಲಿಕಾಗದೆಂದುಪಿದಂ ಸಮ್ಯಕ್ತ್ವರತ್ನಾಕರಂ || ೨ ||
ಯಂತ್ರದೊಳಂ ಮಂತ್ರದೊಳಂ
ತಂತ್ರದೊಳಂ ಗೇಯರಸ ಸಭಾಮಂಡಲದೊಳು
ಸಂತರ ಶಕುನವಿಚಾರಮ
ನೆಂತ್ತುಂ ನೆರೆ ಪೇಳಬಲ್ಲ ಮಾಧವದೇವಾ || ೩ ||

ಅಂತ್ಯ : ವಿಶೇಷ........ಸೋಲ ಗೆಲವದ
ಪೆಸರ್ಗೊಂಡವ ಸೋಲುಗೆಲುವನೆಂದಡೆಯುಂನ್ನಂ
ಉಸುರಿದವ ಗೆಲುವ ಬಳಿಕಿನ
ಪೆಸ....ಚವಸೋಲ್ಲುಮೆಂದ ನರಪಿಂಗಲಿಯೊಳೂ || ೧೬ ||
ಆರಮನೆಯೆಡೆಗಂ ಪರಿಭವಕ್ಕಂ
ದುರದೊಳೆಯಿದೆ ....

ವಿಷಯ : ಪ್ರಶ್ನಶಾಸ್ತ್ರ.

ವಿಶೇಷ: ಓಲೆಗಳಲ್ಲಿ ರಂಧ್ರಬಿದ್ದು ಅಕ್ಷರಗಳು ಲುಪ್ತವಾಗಿವೆ. ಗ್ರಂಥ ಸಮಗ್ರವಾಗಿಲ್ಲ. ೩೫ನೇ ಪತ್ರದಲ್ಲಿ ರಾಶಿಗಳಿಗೆ ಜಾತಿಯ ವಿಭಾಗವನ್ನು ಕೊಟ್ಟಿದೆ. ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ಸ್ವರಚಿಂತಾಮಣಿ, ಬಾಲಗ್ರಹ ಚಿಕಿತ್ಸೆ, ಸಾಮುದ್ರಿಕಾ ಲಕ್ಷಣ ಮತ್ತು ಜ್ಯೋತಿಷ ಸಂಗ್ರಹ ಎಂಬ ಗ್ರಂಥಗಳಿವೆ.

739

ಕೆ. ೧೨೨/೨	**ನವಚಕ್ರದ ವಚನ**	ವಚನ
೫"×೧.೩'	ಹಡಪದಪ್ಪಣ್ಣ	ಸು. ೧೧೬೦
೧-೨೦ ಪತ್ರ	೬ ಪಂಕ್ತಿ	೨೦ ಅಕ್ಷರ

ಆದಿ: ಹಡಪದಂಪ್ಪಂಣಗಳ ನವಚಿಕ್ರ್ರದ ವಚನ। ಗುಥಸ್ಥಾನದಲ್ಲಿ ಆಧಾರ ಚಿಕ್ರ್ರ। ಪೃತ್ವಿಯೆಂಬ ಮಹಾಭೂಥ। ಆ ಭೂಥ ಪೀತವರ್ನ। ಚಿತುಃ ಕೋಣೇ ಚೌಧಳ। ಪದ್ಮ। ಆ ಪದ್ಮ। ಸುವರ್ನದ ವರ್ನ। ಆ ದಳದಲ್ಲಿ। ವಾಶಷಸ। ವೆಂಬಾ ನಾಲ್ಕಕ್ಷರ। ಆ ಕರ್ನಿಕ ಮಧ್ಯದಲ್ಲಿ। ನಕಾರವೆಂಬೊ ಬೀಜಾಕ್ಷರ।

ಅಂತ್ಯ: ಯಂಬ ಶ್ರೀ ಕ್ಸ್ನರ ಕ್ರಯಾ ಕ್ರತುವಾಗಿಹವು ಯಿವು ಸ ೨೮ ಸಹ ಸಂಬವನು। ಅನಾದಿ ಭಕ್ತ ಮೊದಲಾದ। ಕೆಲವು ಧಾರಣೆಗಳಲ್ಲಿ ಸಂಧಿಸುವುದು ನವಚಿಕ್ರ ಉಧರಣೆಯ ಸಂಬಂಥ ಸಮಾಪ್ತ ಮಂಗಳಮಹಾಶ್ರೀ.

ವಿಷಯ: ವೀರಶೈವ ಯೋಗ ವಿಚಾರ.

ವಿಶೇಷ: ಇದೇ ಕಟ್ಟಿನಲ್ಲಿ ಸಕಲಾಗಮ ಸಿದ್ಧಾಂತ ಶಿಖಾರತ್ನವೆಂಬ ಮತ್ತೊಂದು ಗ್ರಂಥವಿದೆ.

740

ಕೆ.ಎ ೩೦೫	**ನವಮೋಹನ ತರಂಗಿಣೀ**	ವಾರ್ಧಕ ಷಟ್ಪದಿ
೧೩.೧"×೮.೨	ಶಂಕರದೇವ	೧೭೭೪
೫೮೮ ಪುಟ	೨೧ ಪಂಕ್ತಿ	೨೧ ಅಕ್ಷರ

ಆದಿ: ಶಂಕರದೇವರು ನಿರೂಪಿಸಿದ ನವಮೋಹನ ತರಂಗಿಣೀ ಬರೆವುದಕ್ಕೆ ಶುಭಮಸ್ತು॥ ವಾರ್ಧಿಕ ಷಟ್ಪದಿ॥

ಪಲ್ಲ ॥ ಶ್ರೀರುರುವಿನಮಳ ಕೋಮಲ ಪಾದಪಂಕಜ ಪ
ರಾಗ ಷಟ್ಚರಣ ಶಂಕರನಾಮಧೇಯನನು
ರಾಗದಿಂ ಶಿವನೊಲವ ಪಡೆದವರ ಸತ್ಕಥೆಯ ಬಿತ್ತರಿಸು ಚಿತ್ಕಾಂತನೆ ॥

ಪದ ॥ ಸ್ತ್ರೀ ಕುಲಕರಾಣಿ ಪಲ್ಲವಪಾಣಿ ಮೃದುವಾಣಿ
ರಾಕೇಂದುವಕ್ತ್ರೆ ರಮಣೀಯ ಕಾನಕಗಾತ್ರೆ
ಶ್ರೀಕರ ಶ್ರೋತ್ರೆ ಸುಸ್ತಿರದ ಸಾವಿತ್ರೆ ಸುಚರಿತ್ರೆ ಕೇಳ್ಮತ್ಕಳತ್ರೆ
ಆಕಾಶಮಧ್ಯೆ ಮನ್ಮಥ ಕಳಾ ಬೋಧ್ಯೆವುಳ
ಕೋಕ ಮಿಥುನ ಪೀನ ಪೀವರಸ್ತನಯುಗಳೆ
ಸಾಕಾರರತಿ ಸರಸವತಿ ಸಕಲಗುಣಯುತೆ ಸನ್ಮಾನಿ ದಾನಿ ಜ್ಞಾನಿ ॥ ೧ ॥

ಅಂತ್ಯ : ಪರಮ ಚಾಣಾಖ್ಯ ಸಾಯೋಜ್ಯ ಪ್ರಬಂಧ ಬಂ
ಧುರ ಶಾಲಿವಾಹನಶಖ ಸಾವಿರದ ಆರುನೂ
ರರ ಮೇಲೆ ತೊಂಬತ್ತರಾರನೆಯ ಸ್ಮರ ಸಂವತ್ಸರದ ಫಾಲ್ಗುಣ ಶುದ್ಧದಿ
ಮೆರವ ತದಿಗೆಯಲಿ ರೇವತ್ಯ ನಕ್ಷತ್ರದೊಳು
ಪರಿಪೂರ್ಣವಾದುದಿದ ಲಾಲಿಸಿದ ಬುಧಜನರು
ಜರಿಯದೆ ತಮ್ಮ ಬಾಲಕರ ತೊದಲ್ನುಡಿಯಂದೆ ತಿದ್ದಿ ಪಸಗೊಳಿಸಲಹುದು
॥ ೪೫ ॥

X X X X

ಇದುವೆ ಚಾಣಕ್ಯ ಸಾಯೋಜ್ಯ ಪ್ರಬಂಧ ಮ
ತ್ತಿದುವೆ ನವಮೋಹನತರಂಗಿಣೀಯಭಿಧಾನ
ಯಿದನು ಶ್ರೀ ಕೋಳೂರ ರಾಮೇಶ ನುಡಿಸಿದೊಡೆ ಪೇಳ್ದ ಶಂಕರನುನಲಿದು
ಇದನು ಸರಸೋಕ್ತಿಯಿಂ ಬರದೋದಿ ಪೇಳ್ಕೇಳ್ವ
ಸದುಹೃದಯಣದ ಸತ್ಪುರುಷರಿಗೆ ಸಂತಸದಿ
ಕುಧರನರ್ಧಾಂಗ ಸೌಭಾಗ್ಯಸಂಪದ ಸೌಖ್ಯವಿತ್ತು ರಕ್ಷಿಸುವ ಬಿಡದೆ ॥೧೮॥
ವಸುಧೆಯೊಳು ಹೊನ್ನ ಕೋಳೂರ ರಾಮೇಶ್ವರನ
ಬೆಸನವುಮನಾಂತು ಯತಿ ಪುಣ್ಯ ದಂಪತಿಗಳಹ
ಬಸವರಸ ನಾಗಾಂಬೆಯರ ಗರ್ಭಸುಕ್ಷೀರವಾರ್ಧಿ ವರ್ಧಿಸುವ ಪೂರ್ಣ
ಶಶಧರನುಯೆನಿಪ ಶಂಕರನುಸುರ್ದನೀ ನವ
ಪೆಸರಾಂತ ಮೋಹನ ತರಂಗಿಣಿ ಸತ್ಕಾವ್ಯ
ರಸಿಕರಾದವರು ಕುಂದೊಂದಿರಲು ತಿದ್ದಿ ಭೂತಳದೊಳು ಮೆರಸದಿಹರೇ
॥ ೪೬ ॥

X X X X

ಅಂತು ಸಂಧಿ ೩೩ಕ್ಕೆ ಪದನು ೨೦೧೧ಕ್ಕಂ ಮಂಗಳ ಮಹಾ । ಶಾಲಿವಾಹನ ಶಕ ೧೭೦೧ ನೆಯ ಪ್ಲವ ಸಂ । ಶ್ರಾವಣ ಬ ॥ ೫ ॥ ಭಾರ್ಗವಾರಕ್ಕೆ ಸಮಾಪ್ತಂ ॥ ಕಂಬಳ ಕೊಟೂರಪ್ಪನ ಸ್ವದಸ್ತೂರಿ–

ವಿಷಯ: ಬಾಣನು ಶಿವನೊಲುಮೆಯನ್ನು ಪಡೆದು ಗಣಪದವಿಯನ್ನು ಗಳಿಸಿದ ಕಥೆ.

ವಿಶೇಷ: ಸಮಗ್ರ, ಆದರೆ ಅಲ್ಲಲ್ಲಿ ಲುಪ್ತ. ಬರಹ ಸುಂದರವಾಗಿದೆ. ೩೪೪ನೆಯ ಪುಟದಿಂದ ಎರಡು ಪತ್ರಗಳು ಹಿಂದುಮುಂದಾಗಿವೆ. "ಬಳ್ಳಾರಿ ಶ್ರೀ ಶ್ರೀ ಮರಿಸ್ವಾಮಿಗಳ ಮಠದಿಂದ ಕ್ಯೂರೇಟರವರು ತಂದ ವೋಲೆ ಪುಸ್ತಕದ ಮೇಲೆ ಕಾಪಿ ಮಾಡಿಸಿರುತ್ತೆ" ಎಂದು ಪುಸ್ತಕದ ಮೊದಲಿನಲ್ಲಿ ಬರೆದಿದೆ.

741

ಕೆ. ೩೪೧	**ನವರತ್ನ ಚಿಂತಾಮಣಿ**	ಗದ್ಯ
೫.೫"×೧.೨"	?	?
೧—೧೦೪	■ ಪಂಕ್ತಿ	೨೦ ಅಕ್ಷರ

ಆದಿ: ನವರತ್ನ ಚಿಂತಾಮಣಿ ನಿಮಿತ್ಯವಾ ನೋಡುವ ಕ್ರಮ. ಆದಿತ್ಯವಾರ ಶುಕ್ರವಾರ । ಪಡುವಣ ಮುಕವಾಗಿ ಕುಳಿತ್ತು ನೋಡುವದು ।

X X X X

ಯೀಗ ಚಿಂತಿಶಿದ ಕಾರ್‍ಯ ಹೋಹುದೂ
ಯೀಗಾ ನೀನೂ ತಪ್ಪಿಸಬಾರದು ಭವನದಲ್ಲಿಯಿಟ್ಟು
ಯಿದಾರೆ . . ಯೀತ ತೆಗೆದು....ದು ಖರೆಯಾ
ಯೀ ಹೆಂಡತ್ರಿ ಮಕ್ಕಳ ಪಡದು ಸಾವಳೂ ।

ಅಂತ್ಯ: ಯಿಲ್ಲೆಯಿಲ್ಲಾ ಪ್ರಾಣಾಂತಿಕವಾಗಿ । ಯಿದಾರೆ । ಯೀ ವಸ್ತು ಮಾರಿತ್ತೂ ಲಾಬವುಂಟ್ಟೂ ಲೇಸು । ಯೀತಗೆ ಮ್ರುತ್ಯು ಪಾಪಶೇಷವುಂಟೂ ಯನುತಾ ಚಿತ್ತೂ ಸಮಾಪ್ತ ಮಂಗಳ ಮಹಃ ಶ್ರೀ ॥

ವಿಷಯ: ಪ್ರಶ್ನಶಾಸ್ತ್ರ.

ವಿಶೇಷ: ಗ್ರಂಥವು ಸ್ವಲ್ಪಮಟ್ಟಿಗೆ ಶಿಥಿಲ, ೧೭ನೇ ಕ್ರಮಾಂಕದ ಒಂದು ಪತ್ರ ಆದಿಯಲ್ಲಿದ್ದು ಬಳಿಕ ಕ್ರಮವಾಗಿ ೧ರಿಂದ ಸಂಖ್ಯೆಗಳಿವೆ.

742

ಕೆ.ಬಿ. ೧೯೦	**ನಳಕೂಬರ ವಿಳಾಸ**	ಯಕ್ಷಗಾನ
೭.೫"×೬"	ಲಿಂಗರಾಜ	೧೮೫೦
೩೧ ಪತ್ರ	೧೧ ಪಂಕ್ತಿ	೧೯ ಅಕ್ಷರ

ಆದಿ : ನಳಕೂಬರ ವಿಲಾಸ ಪ್ರಾರಂಭವು ||

ಕಂ || ಶ್ರೀ ತುಹಿನಾಚಲಜಾಮುಖ
ಶೀತಾಂಶು ಮಯೂಖ ಮುದಿತ ನಯನ ಚಕೋರಂ
ಭೂತಾದಿನಾಥನಧಿಕ
ಪ್ರೀತಿಯೊಳೆಂಮಂನು ಪೊರೆಯಲೀ ವೀರೇಶಂ || ೧ ||

ವೃ || ಕ್ಷಿತಿಪಾಲೋತ್ತಮ ಕೃಷ್ಣರಾಜ ಧರಣೀಕಾಂತಾಂಘ್ರಿಯಂ ಲೋಕ ಸಂ
ಮತ ಕಲ್ಯಾಣ ಗುಣಾಭಿರಾಮ ವಿಲಸಲ್ಲಿಂಗಾಂಬಿಕಾ ಪಾದಮಂ
ಮತಿಯಿಂ ವಂದಿಸಿ ಲಿಂಗರಾಜ ತನಯಂ ಶ್ರೀ ಕೆಂಪದೇವಾಂಬಿಕಾ
ಸುತಗರ್ಭಾಂಬುಧಿ ಚಂದಿರಂ ನಲವಿನಿಂ ಶ್ರೀ ಲಿಂಗರಾಜಂ ಕರಂ || ೨ ||

ಅಂತ್ಯ : ಸುರದನುಜಾದಿ ವಂದಿತ ಮನೋಹರಪಾದಪಯೋಜ ರಂಜಿತೆ
ಪುರಹವರಾಂಕಪೀಠ ಪರಿಶೋಭಿತೆ ಭಕ್ತಸುರಾವನೀರುಹೆ
ದುರುಳಹ ಚಂಡ ಮುಂಡ ಪರಿಮರ್ದಿನಿ ಕಾಳಿಯೆ ದೀನರಕ್ಷೆ ನೀಂ
ವರಕರುಣಾಂಬುರಾಶಿ ನಲಿದೀಕ್ಷಿಸಿ ಪಾಲಿಪುದೆಂನನಂಬಿಕೆ || ೧೩೯ ||

ಗ || ಇದು ಸಾಲ್ವಿಡಿದು ಮೇಲ್ವಾಯ್ವ ನಾಲ್ಬೊಳವೆಟ್ಟು ಪಗೆಯ ಸಾರದೆ
ಯಾಣ್ಮರ್ಮುಲಿಕಾಕೊಂಡು ಮೊಗ್ಗರಂಗೊಂಡು x x x ಮಹೀಶೂರೊ
ಳುದ್ದವಾದ ಗದ್ದುಗೆಯೋಳ್ಕಂಡಿಸಿ ಮುಂನೆಯರ ಗಂಡರಗಂಡನಾದ ಕೃಷ್ಣ
ರಾಜಂಗೆ ಕೊರ್ಮೆಯಳಿಯನಾಗಿ ದೊಡ್ಡಲಿಂಗರಾಜನ ಮಡದಿ ಕೆಂಪ
ದೇವಾಂಬೆಯ ಗಬ್ಬ ಪಾಲ್ಗಡಲ್ಗೆ ಪುಣ್ಣಮೆ ತಣ್ಗದಿರನಾಗಿ ಸಿರಿನುಡಿ
ವೆಣ್ಗೊಳೊಡೆವೆರೆದ ಲಿಂಗರಾಜನುಸುರಿದ ನಳಕೂಬರ ವಿಳಾಸೊಲ್ಲಾಸಂ
ಸಂಪೂರ್ಣಂ ||

ವಿಷಯ : ನಳಕೂಬರನ ಚರಿತ್ರೆ.

ವಿಶೇಷ : ೫೫, ೫೬, ೬೧, ೬೨ನೆಯ ಪದ್ಯಗಳು ಲುಪ್ತವಾಗಿವೆ.

743

ಕೆ.ಬಿ. ೩೫೫/೭	**ನಳಕೂಬರ ವಿಳಾಸ**	ಯಕ್ಷಗಾನ
೮.೩"X೬.೫"	ಲಿಂಗರಾಜ	೧೮೫೦
೧-೩೩ ಪತ್ರ	೧೫ ಪಂಕ್ತಿ	೨೨ ಅಕ್ಷರ

ಆದಿ : ಕಾಳಾಯುಕ್ತೀ ನಾಮ ಸಂವತ್ಸರದ ಆಶ್ವೀಜ ಶ ೭ಯಲ್ಲು ನಳಕುವರವಿಲಾಸ ಯಕ್ಷಗಾನದಲ್ಲಿ ಬರೆಯುವದಕ್ಕೆ ಶುಭಮುಸ್ತು ||

ಶ್ರೀ ತುಹಿನಾಚಲಜಾಮುಖ
ಸೀತಾಂಶುಮಯೂಖ ಮುದಿತನಯನ ಚಕೋರಂ
ಭೂತಾಧಿನಾಥನಧಿಕ
ಪ್ರೀತಿಯೋಳೆಂಮಂನು ಪೊರೆ್ರಯಲೀ ವೀರೇಶಂ ||

X X X X

ವೃತ್ತಾ|| ಕ್ಷಿತಿಪಾಲೋತ್ತಮಕೃಷ್ಣರಾಜಧರಣೀ ಕಾಂತ್ತಾಖ್ರ್ಯಯಂ ಲೋಕ ಸಂ
ಮತ ಕಲ್ಯಾಣ ಗುಣಾಭಿರಾಮಾ ವಿಲಾಸಲ್ಲಿಂಗಾಂಬಿಕಾ ಪಾದಮಂ
ಮತಿಯಿಂ ವಂದಿಸಿ ಲಿಂಗರಾಜತನೆಯಂ ಶ್ರೀ ಕೆಂಪ್ಪದೇವಾಂಬಿಕ
ನುತ ಗರ್ಭಾಂಬುಧಿ ಚೆಂದಿರಂ ನಲವಿಂ ಶ್ರೀ ಲಿಂಗರಾಜೇಂದ್ರನುಂ ||೧೩||

ಅಂತ್ಯ : ಕವಿಯೊಳ್ಸಖಿ ವಿಸಿಖ ಗ್ರಹ ಜಲನಿಧಿ
ಮಿತ ವತ್ಸರಾಂತ್ಯಮಾಸದಾರಾಕ
ವಿಲಸಿತ ದಿನದೊಳುಸುರ್ದಂ
ನಳಕೂಬರ ಚರಿತಮುಂನು ಲಿಂಗಮಹೇಂದ್ರಂ || ೧ ||
|| ಯಕ್ಷಗಾನದ ನಳಕೂಬರ ವಿಲಾಸಂ ಸಂಪೂರ್ಣಂ ||

ವಿಷಯ : ನಳಕೂಬರನ ಚರಿತ್ರೆ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಇದರೊಂದಿಗೆ ಚಂದ್ರಾವಳೀ ಕಥೆ ಮತ್ತು ಕೃಷ್ಣಾರ್ಜುನರ ಕಾಳಗವೆಂಬ ಗ್ರಂಥಗಳಿವೆ.

744

ಕೆ. ೨೮	**ನಳಚರಿತ್ರೆ**	ಭಾಮಿನೀ ಷಟ್ಪದಿ
೧೬.೩"X೧.೩"	ಕನಕದಾಸ	ಸು ೧೫೦೦
೧-೩೮ ಪತ್ರ	೬ ಪಂಕ್ತಿ	೮೧ ಅಕ್ಷರ

ಆದಿ : ....

ಶ್ರೀರಮಣ ಸರಸಿಜದಳಾಕ್ಷ ಮು
ರಾರಿ ಸಚರಾಚರ ಭರಿತ ದುರಿ
ತಾರಿ ನಿತ್ಯಾನಂದ ನಿರ್ಜಿತ ನಿಕರ ದಾತಾರಾ
ವಾರಿಜಾಂಬಕ ....
.... ಪಿತ ವೇದಾಂತನುತ ವರಪುರ
.... ದ ಕಂಸಾ ||
ಸುರಮಥನ ಸುರಮೌಳಿವಂದಿತ
ಗಿರಿಧರಚ್ಯುತ ವೇಣುನಾದ ವಿನೋದ ಭವಸುರಾ
ಸರಸಿಜೋದ್ಭವ ನಮಿತ ದಯಾಸಾ
ಗರ ಮುರಾಂತಕ ದೇವ ವರಪುರ
ದರಸ ಚೆಂನಿಗರಾಯ .. ...

X X X X

....
....ಯನಿಗೆ ರೋಮಸ ಮಹಾಮುನಿ
ರಾಯ ವಿಸ್ತರಿಸಿದನು ನಳಭೂವರನ ಚರಿತ್ರೆಯನೂ
ಪ್ರೀಯದಿಂದಾಲಿಸುವ ಸುಜನರಿ
ಗೀ ಮಹಾಕತೆಯ ಶ್ರೀಯರಸ
ವರಪುರದರಸ ಚೆಂನಿಗರಾಯಗಂಕಿತವಾಗಿ ಪೇಳುವೆನೂ || ೬ ||

ಅಂತ್ಯ : ದೇವಮುನಿಗಳು ನೀವು ನಂಮ್ಮನು
ಪಾ .... ಸ ಬ್ಯಾಡ ನೀನೆಂದಾ || ೬೫ ||
ಯಲೆ ಯುಷ್ಠಿರ ಕೇಳು ಲೋಕದ
ಲಲನೆಯರ ಪರಿಯಲ್ಲ ನಾಲ್ವರು
....

X X X X

ಲೋಕಪಾವನ ನಳನ ಕಥೆಯ ನಿ
ರಾಕರಿಸಿದವರಧಿಕ ....
ರ ವಂದಿತನಾದಿ ನಾರಾಯಣನು ಸಲಹುವ .... ಶ್ರೀ ||

ವಿಷಯ : ನಳದಮಯಂತಿಯರ ಕಥೆ.

ವಿಶೇಷ: ಅತ್ಯಂತ ಶಿಥಿಲಪ್ರತಿ. ಪತ್ರಗಳಲ್ಲಿ ಹುಳು ಹೊಡೆದು ರಂಧ್ರಗಳು ಬಿದ್ದಿರುವುದರಿಂದ ಗ್ರಂಥಪಾತ ಅಧಿಕ. ಅಂತ್ಯದಲ್ಲಿ ಕ್ರಮಾಂಕ ತಿಳಿಯದ ಒಂದು ತುಂಡು ಪತ್ರವಿದೆ. ಅಂಚು ಮುರಿಯದ ಪತ್ರವಿಲ್ಲ. ೧ನೇ ಪತ್ರ ಲುಪ್ತ.

745

ಕೆ ೮೪/೨	ನಳಚರಿತ್ರೆ	ಭಾಮಿನೀ ಷಟ್ಪದಿ
೧೯"×೨.೧"	ಕನಕದಾಸ	ಸು. ೧೫೦೦
೧–೩೬ ಪತ್ರ	೭ ಪಂಕ್ತಿ	೯೦ ಅಕ್ಷರ

ಆದಿ: ಶ್ರೀ .... ನಳಚರಿತ್ರೆ ಬರೆಯುವದಕ್ಕೆ ನಿರ್ವಿಘ್ನಮಸ್ತು ||
ರಾಗ | ನಾಟಿ
ಜಯಜಯ ಸರ್ವಲೋಕಾಧ್ಯಕ್ಷ
ಜಯಜಯ ಸರ್ವಲೋಕಾಡಾರ
ಜಯಜಯ ಸರ್ವಮಂಗಳೆಯರಸ
ಜಯಜಯ ಸರ್ವ ಸರ್ವೇಶಾ ||
ಗರ್ವಿತಾಸುರ ಮಥನ ಜಯಜಯ
ದುರ್ವಿದಗ್ಧ ದುಃರಾಪ ಜಯಜಯ
ಪರ್ವತಾಧಿಪದೇವ ಜಯ ಜಯತೂ || ಸೂಚ ||
ಶ್ರೀರಮಣ ಸರಸಿಜದಳಾಕ್ಷ ಮು
ರಾರಿ ಸಚರಾಚರ ಭರಿತ
ನಿತ್ಯಾನಂದ ನಿರ್ಜಿತ ನಿಕರ ದಾತಾರಾ
ವಾರಿಜಾಂಬಕ ವರಗುಣತ್ರಯ
ಮಾರಪಿತ ವೇದಾಂತನುತವರ
ಪುರದರಸ ಚೆಂಗಿರಾಯ ಪಾಲಿಸು ಯನಗೆ ಸತ್ಕ್ರುಪೆಯಾ || ೧ ||

ಅಂತ್ಯ: ಮೇಧಿನಿಯೊಳೀ ಪುಂಣ್ಯ ಚರಿತೆಯ
ನಾಧರಿಸಿ ಬರದೋದಿ ಕೇಳುವ
ಸಾಧು ಸಜ್ಜನರಾದವರಿಗಹುದಖಿಳ ಕೈವಲ್ಯಾ
ವೇದಗೋಚರ ಕ್ರೀಷ್ಣ ವರಪುರ
ದಾದಿಕೇಶವನವರವಂದಿತ
ಆದಿನಾರಾಯಣನು ಸಲಹುವನಖಿಳ ಸಜ್ಜನರಾ || ೭೧ ||

ಅಂತ್ತು ಸಂಧಿ ೯ಕಂ ಪದನು ೪೮೩ ಕಂ ಮಂಗಳ ಮಹಾಶ್ರೀ ||

ವಿಷಯ : ನಳಮಹಾರಾಜನ ಕಥೆ.

ವಿಶೇಷ : ೨೧ನೆಯ ಕ್ರಮಾಂಕದ ಪತ್ರಗಳು ಎರಡಿವೆ. ಇದೇ ಕಟ್ಟಿನಲ್ಲಿ ಜೈಮಿನೀ ಭಾರತ ಎಂಬ ಕೃತಿ ಇದೆ.

746

ಕ [illegible]	ನಳಚರಿತ್ರೆ	ಭಾಮಿನೀ ಷಟ್ಪದಿ
೧೫"×೨.೪"	ಕನಕದಾಸ	ಸು. ೧೫೦೦
೭೭–೧೧೦ ಪತ್ರ	೧೧ ಪಂಕ್ತಿ	೬೨ ಅಕ್ಷರ

ಆದಿ : ನಳಚಕ್ರವತಿ ಚರ್‍ರಿತ್ರೆ ಬರವುದಕ್ಕೆ ಶುಭಮಸ್ತು||
ಪಲ್ಲ|| ಶ್ರೀರಮಣ ಸರಸಿಜದಳಾಕ್ಷ
ಮುರಾರ್‍ರಿ ಸಚರಾಚರ ಭರಿತ
ದುರ್‍ರಿತಾರ್‍ರಿ ನಿತ್ಯಾನಂದ ನಿರ್ಜರ ನಿಕರ ದಾತಾರಾ ||
ಪದಾ|| ವಾರ್‍ರಿಜಾಂಭಕ ವರಗುಣಾಶ್ರಯ
ಮಾರಪಿತ ವೇದಾಂತನುತ ಸಾ
ಕಾರ ಚಂನ್ನಿಗರಾಯ ಪಾಲಿಸು ಜಗಕೆ ಮಂಗಲವಾ || ೧ ||

X X X X

ರಾಯರೊಳಗಗ್ಗಳಿಯನಾ ಕಂಉ
ತೇಯನಿಗೆ ರೋಮಷ ಮಹಾಮುನಿ
ರಾಯ ವಿಸ್ತರ್‍ರಿಸಿದನು ನಳಭೂವರನ ಚರ್‍ರಿತವನೂ
ಶ್ರೀಯ್ಯರಸ ವರಪುರದ ಚೇನ್ನಿಗ
ರಾಯನಂಕಿತವಾಗಿ ಪೇಳುವೆ
ಪ್ರೀಯ್ಯದಿಂದಾಲಿಸುವ ಜನರ್‍ರಿಂಗೀ ಮಹಾಕಥೆಯಾ || ೬ ||

ಅಂತ್ಯ : ಲೋಕಪಾವನ ನಳನ ಕಥೆಯನು ನಿ
ರಾಕರ್‍ರಿಸಿದವರಧಿಕ ನರಕದೊಳಿರದೆ
ಆಳುವರೆಂದು ರೋಮಜ ಮಹಾಮುನಿ ನುಡಿದನರಸಂಗೇ

ಮೇದಿನಿಯೊಳೀ ಪುಣ್ಯಚರಿತೆಯು
ಸದಾವಕಾಲದಿ ಬರದು ಕೇಳ್ದಡೆ
ಸಾದು ಸಜ್ಜನವರವರ್‍ರಿಗಹ ಕೈವಲ್ಯ ಪದವಿಗಳೂ ॥ ೬೮ ॥
ದೇವಘೋತ್ರ್ರದ ಕ್ರುಷ್ಣ ಚರ್‍ರಿತೆಯ
ದೇವವರ ಪುರದಾದಿ ಕೇಶವ
ನವರವಂದಿತ ಆದಿನಾರಾಯಣನು ಸಲಹುವನಕಿಳ ಸಜ್ಜನರಾ ॥ ೬೯ ॥

ಅಂತೂ ಸಂಧಿ ೯ಕ್ಕಂ ಪದ ೪ಕ್ಕಂ ಪದ ೪೯೬ಕ್ಕಂ ಮಂಗಳ ಮಹಾಶ್ರೀ. ನಳ ಚರಿತ್ರೆ ಸಮಾಪ್ತ ಮಂಗಳಮಹಾ ॥ ಸ್ವಭಾನುವರ್ಷ ಸಂವತ್ಸರ್‍ರದ ಚೈತ್ರ ಶು ೫ ಯು ಗುರುವಾರ್‍ರ ಗುರುವಳ್ಳಿ ಐಗಳು ಸೂರಾಲು ವೆಂಕಟಸೆಟ್ಟೀಯು ಬರದು ಸಂಪೂರ್ಣವಾದ ಪುಸ್ತಕಕ್ಕೆ ಶುಭಾಮಸ್ತು.

ವಿಷಯ : ನಳಮಹಾರಾಜನ ಕಥೆ.

ವಿಶೇಷ : ಬರಹವು ಚೆನ್ನಾಗಿದೆ.

747

ಕೆ.ಎ. ೧೯೦/೯	**ನಳಚರಿತ್ರೆ**	ಭಾಮಿನೀ ಷಟ್ಪದಿ
೧೨.೬"×೮"	ಕನಕದಾಸ	ಸು. ೧೫೦೦
೨೬–೫೦ ಪತ್ರ	೨೬ ಪಂಕ್ತಿ	೩೨ ಅಕ್ಷರ

ಆದಿ : ನಳಚರಿತ್ರೆಯಂ ಬರಯುವದಕ್ಕೆ ಶುಭಮಸ್ತು॥
ಶ್ರೀರಮಣ ಸರಸಿಜದಳಾಕ್ಷ ಮು
ರಾರಿ ಸಚರಾಚರ ಭರಿತ ದುರಿ
ತಾರಿ ನಿತ್ಯಾನಂದ ನಿರ್ಜಿತ ಸಿಖರ ದಾತಾರ
ವಾರಿಜಾಂಬಕ ವರಗುಣತ್ರಯ
ಮಾರಪಿತ ವೇದಾಂತ ನುತವರ
ಪುರದರಸ ಚಂನಿಗರಾಯ ಪಾಲಿಸು ಯನಗೆ ಸತ್ಕ್ರುಪೆಯಾ ॥ ೧ ॥
ಶರಧಿ ಶಯನ ಮುಕುಂದ ಕಂಸ್ಸಾ
ಸುರ ಮಥನ ಸುರಮೌಳಿವಂದಿತ
ಗಿರಿದರಚ್ಯುತ ವೇಣುನಾದ ವಿನೋದ ಬವದೂರಾ

ಸರಸಿಜೋದ್ಭವನಮಿತ ದಯಸಾ
ಗರ ಮುರಾಂತಕ ದೇವ ವರಪುರ
ದರಸ ಚಂನಿಗರಾಯ ಪಾಲಿಸು ಸಕಲ ಸಜ್ಜನರಾ ॥ ೨ ॥

ಅಂತ್ಯ : ಮೇದಿನಿಯೊಳಿದು ಪುಣ್ಯಚರಿತೆಯ
ನಾದರಿಶಿ ಬರದೋದಿ ಕೇಳುವ
ಸಾದು ಸಜ್ಜನರಾದವರಿಗಹುದಕಿಳ ಕೈವಲ್ಯಾ
ವೇದಗೋಚರ ಕ್ರಿಷ್ಣ ವರಪುರ
ದಾದಿಕೇಶವನಮರವಂದಿತ
ಆದಿನಾರಾಯಣನು ಸಲಹುವನಕಿಳ ಸಜ್ಜರಾ ॥ ೭೧ ॥
ಅಂತು ಸಂದಿ ೯ ಕಾಂ ಪದನು ೪೧೭ ಕಾಂ ಮಂಗಳ ಮಹಾಶ್ರೀ ॥

ವಿಷಯ : ನಳಮಹಾರಾಜನ ಕಥೆ.

ವಿಶೇಷ : ಈ ಪುಸ್ತಕದಲ್ಲಿ ಸೋಮೇಶ್ವರ ಶತಕ, ಸಂಕ್ಷೇಪ ರಾಮಾಯಣ, ಸಂಕ್ಷೇಪ ಭಾರತ, ಧರ್ಮನೀತಿ, ವಿಭೀಷಣನ ಬುದ್ಧಿ, ಗೋವಿನ ಹಾಡು, ವಿಷ್ಣು ಭಕ್ತಿಸಾರ, ಸುಭಾಷಿತ ಗ್ರಂಥ, ಹರಿಶ್ಚಂದ್ರೋಪಾಖ್ಯಾನ, ರುದ್ರಭಾರತ ಎಂಬ ಕೃತಿಗಳಿವೆ.

748

ಕೆ. [illegible]	ನಳಚರಿತ್ರೆ	ಚಂಪೂ
೧೮.೧"×೧.೭"	ಚೌಂಡರಸ	ಸು. ೧೨೪೦
೧–೩೬ ಪತ್ರ	೪ ಪಂಕ್ತಿ	೧೦೪ ಅಕ್ಷರ

ಆದಿ : ನಳಚರಿತ್ರೆ ॥
ಶ್ರೀ ಸತಿ ತಂನ ಪೇರುರಮುನಾವಗಮುಪ್ಪಿರಲಂಘ್ರಿಯಂ ಧರಿ
ತ್ರೀಸತಿ ಸಾರ್ದಿರಲ್ಕದನ ಮೋಹನ ಕೇಳಿಯನೊಲ್ದು ಸತ್ಯಭಾ
ಮಾಸತಿ ಪೆರ್ಚಿಸಲ್ ಸೊಬಗುವೆತ್ತು ಜಗತ್ಪತಿ ತಂನ ಮಾನಸೋ
ಲ್ಲಾಸದಿನೆಲ್ಲರಂ ಪೊರೆಗೆ ಮಂಗಳಮೂರ್ತಿಯಭಂಗ ವಿಠ್ಠಲಂ ॥ ೧ ॥

ಅಂತ್ಯ : ಯಿಾಕೃತಿಯಂ ಮನಂ ಬಯಿಶಿ ಕೇಳ್ವಜನರ್ಗೆ ಸಮಸ್ತಶಾಶ್ವತ
ಶ್ರೀಕ್ರುಪೆ ಪಿಂಗದಿರ್ಕೆ ಸತತಂ ಪರಮೋತ್ಸವ ನಿತ್ಯವೈಭವ
ಶ್ರೀಕ್ರುತದೇಳ್ಗೆ ರಂಜಿಸುಗೆ ಕಲ್ಪಶತಂ ಕಲಿ ಪೊರ್ದದಿರ್ಕೆ ಶೋ
ಭಾಕ್ರುತಿಯೊಂದಿ ನಿಲ್ಕೆ ಧರೆ ಮೇರು ಮಹೀಧರಮೊಪ್ಪುರ್ತಿರ್ಪಿನಂ ॥

ಕಂ॥ ಬಾಣಾಸುರ ವಿಜಯಂ ಕ
ಲ್ಯಾಣನಳಖ್ಯಾತಿ ದಶಕುಮಾರ ಚರಿತಂ
ಕ್ಷೋಣೀಜನಕರ್ಣ್ನಮನಃ
ಪ್ರೀಣನವಿವು ಚೌಂಡರಾಜವಿರಚಿತ ಕೃತಿಗಳ್ ॥ ೮೧೦ ॥

ವಿಷಯ : ನಳಮಹಾರಾಜನ ಕಥೆ.

ವಿಶೇಷ : ಶಕಟರೇಫದ ಬಳಕೆ ಇದೆ. ೧ ಮತ್ತು ೩೩ನೇ ಗರಿಗಳು ಮುರಿದು ಎರಡು ತುಂಡುಗಳಾಗಿವೆ. ೨೦ನೇ ಕ್ರಮಾಂಕದ ಒಂದು ಪತ್ರ ಅಂತ್ಯದಲ್ಲಿದೆ

749

ಕೆ. ೬೧೪	**ನಳಚರಿತ್ರೆ**	ಯಕ್ಷಗಾನ
೧೭.೪" × ೧.೪"	ಕೆಂಪಯ್ಯ	?
೧—೧೫೦ ಪತ್ರ	೬ ಪಂಕ್ತಿ	೫೪ ಅಕ್ಷರ

ಆದಿ : ... ರಿತ್ರೆ ಬರೆಯುವದಕ್ಕೆ ಶುಭಮಸ್ತು ॥ ... ... ಮಂನ್ಮತ ....
ದ್ವಿಪದೆ ॥ ಶ್ರೀ ಜಾನಕೀವಾಸ ಶ್ರೀಗಿರಿವಾಸ
ಭಾನುಕೋಟಿಪ್ರಕಾಶ ಭಕ್ತಜನಪೋಷ
ಬಾಳನೇತ್ರನಸಕ ....

X X X X

ಕಂದ ಪದ್ಯಾ ॥ ಧರೆಯೊಳಗರ್ರಿವ ಸುಜಾಣರೂ
ಯಿಾ ಕೃತಿಯಂ ಪೇಳ್ದನೆಂದು ನಿಂದ್ಯವ ಮಾಡದೆ
ಹರಿಯ ವರಶಿಷ್ಯನಾದ
ನಳಕಥೆಯನು ನಾನು ಪೇಳ್ವೆ ಲಾಲಿಸಿ ರಸಿಕರೂ ॥ ೧ ॥

ಅಂತ್ಯ : ಲಲನಾರತುನವೆಂಬನಾ ತಿಂಮಮಾಂಬ ಗರ್ಬಾಬ್ಧಿ ಸಲೆ
ಚಂದ್ರನೆನಿಪ ಸರೆಜಾಣ ಕೆಂಪೈಯನೀತ ...
ಯಕ್ಷಗಾನವ ಮಾಡೀ ಆದಿಕ ಟೀವಿಯೊಳೂ

X X X X

ದರೆಯೊಳಗೆ ನಳಚಕ್ರವರ್ತಿ ಕತೆಯಂನ್ನು ರವಿಶಿಶಿಯುವುಳ್ಳ ತನಕ ಭು
ಚಕ್ರದಲ್ಲಿ ರಾಮಭಕ್ತನಾದಂತ್ತ । ನಳರಾಜ ಚಂದ್ರಾನ ಕತೆಯ ಯಿಳೆ

ಯೊಳಗೆಲ್ಲಾ । ಆಚಂದ್ರತಾರಾರ್ಕವಾಗಿವಪ್ಪುವ ....ನಳಚಕ್ರವರ್ತಿ ಕತೆ ಯಕ್ಷಗನ ಸಂಪೂರ್ನ. ದುರ್ಮತಿ ಸಂವಚ್ಚರದ । ಜೇಷ್ಠ ಬಹುಳ ೨ ಬುದುವಾರದ ಮದ್ಯನದ ಕಾಲದ ಬಳಿಗೆ ಸಂಪೂರ್ನ ಮಂಗಳಂ ಮಹಾಶ್ರೀ ॥

ವಿಷಯ : ನಳಮಹಾರಾಜನ ಕಥೆ.

ವಿಶೇಷ : ಹುಳು ಹೊಡೆದು ಗರಿಗಳು ಅಲ್ಲಲ್ಲಿ ತ್ರುಟಿತವಾಗಿವೆ.

750

ಕೆ.ಬಿ. ೧೩೬	ನಳಚರಿತ್ರೆ	ಯಕ್ಷಗಾನ
೭.೭"×೬.೨"	ಅಳಿಯ ಲಿಂಗರಾಜ	೧೮೫೦
೩೭ ಪತ್ರ	೧೭ ಪಂಕ್ತಿ	೨೨ ಅಕ್ಷರ

ಆದಿ: ನಳಚರಿತ್ರೆ ॥ ನಾಂದಿ ಕಂದ ಪದ್ಯ ॥

ಶ್ರೀವರ ಹಿಮಶೈಲಸುತಾ
ಪೀವರ ಕುಚ ಕುಂಭ ಕುಂಕುಮಾಂಕಿತವಕ್ಷಂ
ಸೇವಕ ಜನತಾ ಭಾವುಕ
ದೇವದ್ರುಮುನಿರದೆ ಪೊರೆಗೆ ಶ್ರೀ ವೀರೇಶಂ ॥ ೧ ॥

X X X X

ಸೌರಾಷ್ಟ್ರ। ತ್ರಿವುಡೆ ॥

ಕೇಳು ಧರ್ಮಜ ನಿಷಧದೇಶ । ನಾಳುತಿಹ ವರವೀರಸೇನಗೆ ।
ಕೇಳಿ ಮಿಗೆ ಜನಿಸಿದನು ನಳಭೂಪಾಲನೆಂದು ॥ ೧೬ ॥

ಅಂತ್ಯ: ಹರಿಯ ಕಾರುಣ್ಯದಿಂದಖಿಳ ರಾಜ್ಯವ ನೀನು
ಪೊರೆಯುತಿಹೆ ಸುಖದಿಂದಲೀ ಕಥೆಯುನಾರಾಗೆ
ಬರದೋದೆ ಕಲಿಬಾಧೆ ಬರದೆಂದು ಧರ್ಮಜಗೆ ಬೃಹದಶ್ವಮುನಿ
ನುಡಿದನು ॥ ೪೨೧ ॥

X X X X

ಕಂದ ಪದ್ಯ ॥ ಸ್ಮರ ಶರ ವಸು ಮುನಿ ಶಶಿವಿತ
ವರ ದುಂದುಭಿವತ್ಸರ ದ್ವಿತೀಯದ ಮಾಸಂ

ತೆರಳುತ್ತಿರೆ ನಳಚರಿತೆಯ
ಪರಮಾಹ್ಲಾದದೊಳು ಲಿಂಗನೃಪತಿಯುಸುರ್ದಂ ॥ ೪೨೬ ॥
ನಳಮಹಾಚರಿತ್ರೆಯು ಸಂಪೂರ್ಣಂ.

ವಿಷಯ : ನಳಮಹಾರಾಜನ ಕಥೆ

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

751

ಕೆ.ಬಿ. ೪೦೨	**ನಳಚರಿತ್ರೆ**	ಯಕ್ಷಗಾನ
೭.೮" × ೬.೨"	ಶೇಷದಾಸ	?
೩೨ ಪತ್ರ	೧೮ ಪಂಕ್ತಿ	೧೭ ಅಕ್ಷರ

ಆದಿ : ವೈಕುಂಠ ನಳಚರಿತ್ರೆ ಬರಿಯುವದಕ್ಕೆ ಶುಭಮಸ್ತು ॥

ದ್ವಿಪದೆ॥ ಶ್ರೀಯರಸ ದಯವಿರಿಸೊ ಶೃಷ್ಟಿಜನಪಾಲಾ
ಅಂಬುಧಿಗೆ ಪತಿಯಾಗಿ ಧರಣಿ ಪಿತನಾದೆ ॥ ೧ ॥

X X X X

ಪೇಳುವಾ ಹರಿಯೊಳದಿನೇಳನೇ ಕಥೆಯಾ
ಕೇಳಿರೈ ಸಜ್ಜನರು ವಾಲಾಯವಾಗೀ ॥ ೧೪ ॥

ಅಂತ್ಯ : ವಚನ ॥ ಯಿಂತೆಂದು ನಳರಾಯನು ದಮಯಂತಿ ಸಹ ವರಪದವಿಯೊಳು
ಶ್ರೀಹರಿಯ ಧ್ಯಾನದೊಳಿರುತಿರ್ದರದೆಂತೆನೆ ॥ ೫೮೧ ॥

X X X X

ವರ ಕವೀವರರಡಿಯ ಪಾದ .... ನೂ
ಚರಣಪಂಡಿತ ಶೇಷದಾಸನೂ ಪೇಳ್ದಾ ॥ ೬೦೫ ॥

X X X X

ಯಿಳೆ ಅರ್ಕಚಂದ್ರರು ಯಿಲ್ಲ ಪರಿಯಂತ್ರಾ
ಆಚಂದ್ರಿತಾರಾರ್ಕವಾಗಿ ವಪ್ಪಿಹೂ ॥ ೬೦೭ ॥
ವೈಕುಂಠನಳ ಚರಿತ್ರೆ ವುತ್ತರ ಭಾಗಾ ಸಂಪೂರ್ಣವೂ ॥

ವಿಷಯ : ನಳಚಕ್ರವರ್ತಿಯು ಸುಖವಾಗಿ ರಾಜ್ಯವಾಳಿದ ಮೇಲೆ ವೈಕುಂಠವಾಸಿಯಾದ ಕಥೆ.

ವಿಶೇಷ : ವೈಕುಂಠ ನಳಚರಿತ್ರೆ, ಉತ್ತರ ನಳಚರಿತ್ರೆ ಎಂದು ಈ ಕೃತಿಗೆ ಎರಡು ಹೆಸರುಗಳಿವೆ. ಕೊನೆಯ ಎರಡು ಪತ್ರಗಳ ಮೇಲಿನ ಮೂಲೆಯಲ್ಲಿ ಹರಿದಿದೆ. ತೆಳುವು ಕಾಗದ.

752

ಕೆ.ಎ. ೧೭೨	**ನಳನಾಟಕ**	ನಾಟಕ
೧೧.೧″ × ೮.೬″	ವೀರನಗರೀ ಪುಟ್ಟಣ್ಣ	?
೧—೧೧೬ ಪತ್ರ	೨೦ ಪಂಕ್ತಿ	೧೬ ಅಕ್ಷರ

ಆದಿ : ನಳನಾಟಕ ಬರೆಯುವದಕ್ಕೆ ಶುಭನುಸ್ತು ||
ಸೂತ್ರಧಾರ ಬಂದು ಸಭೆ ಕಡೆ ಕೈಮುಗಿದು
" ನಾಟೀರಾಗದಲ್ಲಿ ಹೇಳತಕ್ಕ ನಾಂದೀ ವೃತ್ತ "

ಶ್ರೀ ರಾಮಾವರ ರಾಜಿತಾಂಘ್ರಿಯುಗಳಂ ರಾಧಾಮನೋವಲ್ಲಭಂ
ನೀರೇಜೇಕ್ಷಣ ನೀಲವರ್ನ ನಿಖಿಲಾಲೋಕಾವನೈಕಾಸ್ಪದಂ ||
ಕಾಲಾತೀತ ಕಲಾಬ್ಧಿ ವರ್ಧನಕರಂ ಕಾಲಾರಿಮಿತ್ರಂ ಸದಾ
ಭೂರಾಜೇಂದ್ರನಿಗೀಗೆ ಸೌಖ್ಯಮು ಸದಾ ಕ್ರಿಷ್ಣಾವನೀಪಾಲನಂ || ೧ ||

ರಾಗ || ಕಾಂಭೋದಿ || ಆದಿತಾಳ || ಕರುಣಿಸೊ ರಂನಭೂ || ಯಂಬಂತೆ ||
ಜಯ ಜಾನಕೀ ಧವ | ಜಯದೇವ ದೇವ || ಪಲ್ಲ ||
ನಿಯಮಿಸು ಮೋದವ || ಭಯದೂರ ದೇವ || ಅನುಪಲ್ಲ ||
ವಾರಣಪಾಲಕ | ನೀತೀಜಾಂಬಕ | ಧಾರುಣಿ ಪಾಲಕ | ಶ್ರೀರಘುನಾಯಕ ||

ಅಂತ್ಯ : ವೃತ್ತ || ಸೊಗದಿಂ ಬಾಳುಗೆ ಲೋಕಮೆಲ್ಲ ಸುಗುಣರ್ ಸ್ನೇಹಂಗಳಿಂ ಪೇರ್ಚಲೀ
ನಗಜಾತಾವರನೆಂದು ನೋಡೆ ಪರಮೋಲ್ಲಾಸಂಗಳಿಂ ಕಾಯಲೀ
ಮುಗುದರ್ಮೊಡರು ಜಾಣರಕ್ಕೆ ಮಳೆಯಿಂ ಧಾನ್ಯಾಧಿಕಂದೋರಲೀ
ಜಗದೊಳ್ಕಾವ್ಯಮಿದೊಪ್ಪುತಿರ್ಕೆ ರುಚಿಯಿಂದಾಚಂದ್ರಮಾತಾರಕಂ ||~||
ನಳನಾಟಕ ಸಮಾಪ್ತಂ || ಯೀ ಗ್ರಂಥ ಕರ್ತನಾದ ಕವಿಯ ಹೆಸರು.

ಕಂದ ॥ ವರಶಂಭುಲಿಂಗ ಚರಣಾಂ
ಬುರುಹಾರ್ಚಿತ ವೀರನಗರಿ ಪುಟ್ಟಂಣಾಖ್ಯಂ
ದೊರಸಲ್ಪಮತಿಯೊಳೀ ನಳ
ಧರಣೀಶನ ಚರಿತೆಯೊರೆದ ಮೆಚ್ಚುಗೆ ವಿಭುದರ್ ॥ ೧ ॥

ವಿಷಯ : ನಳಮಹಾರಾಜನ ಕಥೆ.

ವಿಶೇಷ : ೧ ರಿಂದ ೧೧೦ ಪತ್ರಗಳಲ್ಲಿ ಒಂದೇ ಕಡೆ ಬರವಣಿಗೆಯಿದೆ. ೧೧೧ ರಿಂದ ೧೧೫ ಪತ್ರ ಪೂರ್ತಿ ಎರಡು ಕಡೆಯೂ ಬರವಣಿಗೆಯಿದೆ. ಮೊದಲಿನ ೧೨ ಪತ್ರಗಳ ಒಂದೆಡೆ ಹುಳು ಹೊಡೆದು ರಂಧ್ರ ಬಿದ್ದಿದೆ. ತೆಳುವು ಕಾಗದ.

753

ಕೆ.ಎ. ೮೭/೬	**ನಳೋಪಾಖ್ಯಾನ**	ಯಕ್ಷಗಾನ
೧೫.೫"×೯.೫"	ಶ್ರೀನಿವಾಸ (?)	?
೯೫—೧೨೩ ಪತ್ರ	೨೪ ಪಂಕ್ತಿ	೨೭ ಅಕ್ಷರ

ಆದಿ : ನಳಚರಿತ್ರೆ.

ಶ್ಲೋಕಂ ॥ ಶ್ರೀಮಚ್ಛೇಷಾಚಲಸ್ಥಂ ಮಣಿಗಣನಿಚಿತೈರ್ಭೂಷಣೈರ್ಮಂಡಿತಾಂಗಂ
ಬ್ರಹ್ಮೇಶಾಂಭೋಜದವಾಹಾದ್ಯಮರನತ ಪದಾಂಭೋಜಯುಗ್ಮಂ ರಮೇಶಂ
ಯಂ ಸಂಸೇವ್ಯಾತಿದುಃಖಾಂಬುಧಿ ತರಣ ಚಣಾಃ ಪ್ರಾಪ್ತಸೌಖ್ಯಾ ಮಹೀಶಾ
ಸ್ತಂ ವಂದೇ ಶ್ರೀನಿವಾಸಂ ನತ ಜನ ನಯನಾನಂದಸಂದಾಯಿ ಚಂದ್ರಂ ॥ ೧ ॥

ರಾಗ ಕೇದಾರಗೌಳ ॥ ಚಾಪು ॥

ಪರಿಪಾಲಿಸದಂ ಕಂಜದಳನೇತ್ರ ॥ ಪಲ್ಲ ॥
ಶಿರಿನಿವಾಸನೆ ಯನ್ನ ಪರಿಪೂರ್ಣ ಕೃಪೆಯೆಂದ ॥ ಅನು ॥
ಕರಯುಗದೊಳು ಶಂಖಚಕ್ರವ ತಾಳುತ
ಧರಿಸಿ ಕೋಮಲ ತುಲಸಿಯ ಮಾಲೆಯ
ವರ ಪೀತವಸನ ಕೌಸ್ತುಭಗಳನೊಂದುತ
ತಿರುಪತಿಯೊಳು ತೀರ್ಥಪಾವನನೆನಿಸಿಹೆ ॥ ೧ ॥

ಅಂತ್ಯ : ಕಂದಂ ॥ ಚರಿತೆಯನಿದ ಭೂಧರದೊಳ್
ಬರದೋದಿದ ಕೇಳ್ದ ಜನರಿಗಿಹಪರಸುಖಮುಂ

ಮುರರಿಪು ಕರುಣಿಸಿ ಪೊರೆವಂ
ಹರಿಭಕ್ತರ ಮೈಮೆ ಜಗದಿ ಯೇನದ್ಭುತವೋ ॥ ೧ ॥
ಶ್ಲೋ॥ ಕಾರ್ಕೋಟಕಸ್ಯ ನಾಗಸ್ಯ ದಮಯಂತ್ಯಾ ನಳಸ್ಯ ಚ ।
ರುತುಪರ್ಣಸ್ಯ ರಾಜಋರ್ಷೇಃ ಕೀರ್ತನಂ ಕಲಿನಾಶನಂ ॥ ೧ ॥
ವಟ್ಟು ೫೧೩ ಪದಗಳು ॥ ನಳೋಪಾಖ್ಯಾನ ಮುಗಿದ ಸ್ಥಳಕ್ಕೆ
ಮಂಗಳಮಹಾಶ್ರೀ ॥

ವಿಷಯ : ನಳಮಹಾರಾಜನ ಕಥೆ.

ವಿಶೇಷ : ಇದರೊಂದಿಗೆ ಸಮುದ್ರಮಥನ, ಪ್ರಹ್ಲಾದ ಚರಿತ್ರೆ, ಗಿರಿಜಾಪರಿಣಯ, ಕಿರಾತಾರ್ಜುನೀಯ ಹರಿಶ್ಚಂದ್ರವಿಳಾಸ, ಹರಿಲೀಲಾವಿಲಾಸವೆಂಬ ಗ್ರಂಥಗಳೂ ಇವೆ.

754

ಕೆ. ೨೨೬	**ನಾಗಕುಮಾರ ಚರಿತೆ**	ಸಾಂಗತ್ಯ
೧೧.೩" × ೨.೨"	ಬಾಹುಬಲಿ ವರ್ಧಮಾನ	ಸು. ೧೫೬೦
೧-೧೧೩ ಪತ್ರ	೧೦ ಪಂಕ್ತಿ	೬೨ ಅಕ್ಷರ

ಆದಿ : ನಾಗಕುಮಾರನ ಚರಿತೆ ಬರಉದಕೆ ಸುಬಮಸ್ತು ॥
ಪೇಳುವೆ ನಾಗಕುಮಾರನ ಚರಿತೆಯ
ಕೇಳಿರೊ ಶಖಲ ಕೋವಿದರೂ ॥
ಶ್ರೀ ಸೇನಾಗ್ರರ್ಗ ಪ್ರಕಾಸ ಸುಜ್ಞಾನಾಂಭು
ರಾಪಿ ವರ್ಧನ ಸರ್ವ್ವ ಶಾಂತ
ಲೇಸುದೋರೆಂನ್ನ ಹ್ರುತ್ಕುವಲಯಕಮುರ್ತ್ತಕ
ಳೇಸ ಶ್ರೀ ನೇಮಿಜಿನೇಸಾ ॥ ೧ ॥

X X X X

ಹಣ ಹೊಂನು ತ್ರುಣವೆಂದು ಬಗೆದು ಮೋಕ್ಷಕೆ ಸಂದ
ಪಣಿಕುಮಾರನ ಕಥೆಯಾ
ಹಣ ಹೊಂನಿಗಾಟಿಸಿ ಪೇಳ್ವವ ನಾನಲ್ಲ
ಗುಣಪಕ್ಷವಿಡಿದು ಪೇಳುವೆನೂ ॥ ೫೮ ॥

ಅಂತ್ಯ : ನೀತಿಕೋವಿದ ಕವಿತಾಮನೋಹರ ಗುಣ
ವ್ರಾತಸುಧಾರನೆಂದೆನಿಸಿ
ಖ್ಯಾತಿಗೆ ವಡೆದು ನೆರವಾದನೀ ಕೃತಿಗೆ ಸ
ಗೀತ ಶುದಾಬ್ಧಿ ಚಂದ್ರಮನೂ ॥ ೨೦೦ ॥

ಯಿದು ವಿದಿತ ವಿವಿಧ ಪ್ರಬಂಧವನವಿಹಾರಪರಿಣತ ಜಿನವದನ ಕುಲಶೈಲೋಚಯೋದ್ಭೂತ ಪ್ರವಚನ ಗಂಗಾತಟಾತ್ಪರಂಜತ್ಪುಂಜಾಯಮಾನಾನೂನ ಪುಂಣ್ಯ ಸೈಕತಾಪ್ರಿಯ ವಿಭುದ ಜನಸ್ತುತ್ಯ ಸತ್ಪೂಜಿತ ಪ್ರಕರ ಕವಿರಾಜ ಹಂಸ ಬಾಹುಲಿ ವರ್ಧಮಾನ ಕವಿ ವಿರಚಿತಮುಮಪ್ಪ ನಾಗಕುಮಾರನ ಚರಿತಾ ಪುರಾಣದೊಳಿಮವೆ ಕಲ್ಯಾಣಾಭ್ಯುದಯವರ್ನ್ನನಂ ॥

ಅಷ್ಟಮಾಸ್ವಾಸಂ। ಅಂತು ಸಂಧಿ ೩೨ಕ್ಕಂ ಪದಂ ವಚನ ಗದ್ಯ ಅಷ್ಟಕ ಸಹಾ ೪೦೦೫ಕ್ಕಂ ಮಂಗಲಂ ಮಹಾಶ್ರೀ.

ವಿಷಯ : ಫಣಿ (ನಾಗ) ಕುಮಾರನ ಭವಾವಳಿಗಳು.

ವಿಶೇಷ : ಮೊದಲ ಮತ್ತು ಕೊನೆಯ ಗರಿಗಳು ತ್ರುಟಿತ ಮತ್ತು ಆ ಪತ್ರಗಳಲ್ಲಿ ಎರಡು ಚಿತ್ರಗಳಿವೆ. ಎಲ್ಲ ಗರಿಗಳ ಅಂಚುಗಳು ಮುರಿದಿವೆ. ಬರಹ ಸುಂದರವಾಗಿದೆ.

755

ಕೆ.ಎ. ೧೨೦	**ನಾಗಕುಮಾರ ಚರಿತೆ**	ಸಾಂಗತ್ಯ
೧೩.೧″ × ೮″	ಬಾಹುಬಲಿ ವರ್ಧಮಾನ	ಸು. ೧೫೬೦
೧–೯೧ ಪತ್ರ	೩೨ ಪಂಕ್ತಿ	೩೫ ಅಕ್ಷರ

ಆದಿ : ನಾಗಕುಮಾರ ಚರಿತ್ರೆ ಬರೆವುದಕ್ಕೆ ಶುಭಮಸ್ತು।
ರಾಗ ॥ ಸಾಂಗತ್ಯ ॥
ಪೇಳುವೆ ನಾಗಕುಮಾರನ ಚರಿತೆಯ
ಕೇಳಿರೊ ಸಕಲಕೋವಿದರೂ ॥

ಪದನೂ ॥ ಶ್ರೀ ಸಂನ್ಮಾರ್ಗ ಪ್ರಕಾಶ ಸುಜ್ಞಾನಾಂಬು
ರಾಶಿವರ್ದನ ಸರ್ವಶಾಂತಾ
ಲೇಸುದೋರೆಂನ ಹೃತ್ಕುವಲಯಕಮೃತವ
ಗ್ನೀಶ ಶ್ರೀ ನೇಮಿಜಿನೇಶಾ ॥ ೧ ॥

X X X X

ಹಣ ಹೊಂನು ತೃಣವೆಂದು ಬಗೆದು ಮೋಕ್ಷಕೆ ಸಂದ
ಪಣಿಕುಮಾರನ ಸತ್ಕಥೆಯಾ
ಹಣ ಹೊಂನಿಗಾಶಿಸಿ ಪೇಳ್ದವ ನಾನಲ್ಲ
ಗುಣಪಕ್ಷವಿಡಿದೆ ಪೇಳಿದೆನೂ ॥ ೫೮ ॥

ಅಂತ್ಯ : ನೀತಿಕೋವಿದ ಕವಿತಾಮನೋಹರ ಗುಣ
ವ್ರಾತನುದಾರನೆಂದೆನಿಪಾ
ಖ್ಯಾತಿ ಪಡೆದು ನೆರವಾದನೀ ಕೃತಿಗೆ ಸಂ
ಗೀತ ಸುದಾಬ್ಧಿ ಚಂದ್ರಮನೂ ॥ ೯೮ ॥

ಗದ್ಯ ॥ ಯಿದು ವಿವಿತ ವಿವಿಧ ಪ್ರಬಂಧವನವಿಹಾರ ಪರಿಣತ ಜಿನವದನ ಕುಲ ಸೈಲೋಚ್ಚಯೋದ್ಭೂತ ಪ್ರವಚನ ಗಂಗಾತಟೋಪರಂಜತ್ಪುಂಜಯ ಮಾನಾನು ಪುಂಣ್ಯ ಸೈಕಥಪ್ರಿಯ ವಿಭುದ ಜನಸ್ತುತ್ಯನಕ್ಕುಜಿತ ಪ್ರಕರ ಕವಿರಾಜಹಂಸ ವರ್ಧಮಾನ ಕವಿ ವಿರಚಿತಮುಮಪ್ಪ ನಾಗಕುಮಾರನ ಚರಿತ ಪುರಾಣದೊಳಿದೂವೆ ನಿರ್ವಾಣ ಕಲ್ಯಾಣಾಭ್ಯುದಯ ವರ್ನನಂ ಅಷ್ಟಮಾಸ್ವಾಸಂ. ಅಂತು ಅಸ್ವಾಸ ೮ಕಾಂ ಸಂಧಿ ೩೨ಕಾಂ ಪದನು ೩೬೦೦ಕಾಂ ಮಂಗಳ ಮಹಾ ಜಿನ ಮಂಗಳ ಮಹಾಶ್ರೀ ॥

ವಿಷಯ : ಫಣಿ (ನಾಗ) ಕುಮಾರನ ಭವಾವಳಿಗಳು.

ವಿಶೇಷ : ಮೋಡಿ ಅಕ್ಷರ, ಮೊದಲನೇ ಪತ್ರದಲ್ಲಿ ಒಂದು ಪಾರ್ಶ್ವದ ಅರ್ಧ ಭಾಗದಲ್ಲಿ ಬೇರೆ ಕಾಗದದ ಮೇಲೆ ಬರೆದು ಅದನ್ನು ಅಲ್ಲಿ ಅಂಟಿಸಿದೆ.

756

ಕೆ.ಬಿ. ೨೯೬	ನಾಡೀಸ್ವರಶಾಸ್ತ್ರ	ಗದ್ಯ
೮″ × ೬.೪″	ಗಿರಿಯಾಚಾರ್ಯ	?
೬ ಪತ್ರ	೨೭ ಪಂಕ್ತಿ	೩೨ ಅಕ್ಷರ

ಆದಿ : ನಾಡಿಸ್ವರಶಾಸ್ತ್ರ ಶಿಲ್ಪಿ ಗಿರಿಯಾಚಾರ್ಯ ವಿರಚಿತ॥ ಆಗತಲನಾಗತ ವರ್ತಮಾನ ಪರಿಚರ್ಯ ನಾಡಿಶಾಸ್ತ್ರ ಶಿಲ್ಪಿನಿಯಾಮಹಾ ಬರೆವರೆ ನಿರ್ವಿಘ್ನಮಸ್ತು ಶುಭಮಸ್ತು ॥

ಶ್ಲೋಕ॥ ಪೂರ್ವನಾಥಾಶನಾಡ್ಯಸ್ತು ದಶಪಾದಸ್ತಿತಃ ಪುನಃ।
ದ್ವೇ ದ್ವೇ ತಿರ್ಯಗ್ಗತಾ ನಾಡೀ ಚತುರ್ವಿಂಶತಿ ವಾಯುಭಿಃ॥
ಚಾಯಾಸೂಕ್ಷ್ಮಾಮುಖಾ ನಾಡೀ ಸಪ್ತ ಸಪ್ತ ಶತಾನಿ ಚಾ।
ಪ್ರದಾನ ದಶನಾಡ್ಯಸ್ತು ದಶವಾಯುವವಾಹನಃ॥
ಯೇತಂ ನ್ಯಾಸಂ ಪ್ರವಕ್ಷ್ಯಾಮಿ ನಾಡೀ ವಾಯುಕ್ರಮೇಣ ಚಾ।

X X X X

ಅಯ್ಯಾ ಗುಣಗರಿಷ್ಠರು ಕೇಳುವದು ಯೆಂತೆಂದರೆ ನಡಿಯುವ ಸಂವತ್ಸರ ಚೈತ್ರ ಶುದ್ಧ ಪಾಡ್ಯವಿಾ ಬಿದಿಯೆ। ತದಿಯೆ। ಯಿಾ ಮೂರು ದಿನವುಂನು ನಿದ್ರೆಹೋಗಿ ವುದಯವು ಯೇಳುವಾಗ್ಯೆ ಚಂದ್ರಸ್ವರವು ನಡಿಯಬೇಕೂ॥

ಅಂತ್ಯ: ಅಆ ಈಇ ಉಊ ಋೠ ಌೡ ಎಐ ಓಔ ಅಂ ಅಃ ಕಂ ಖಂ। ಗಂ ಘಂ ಙಂ ಚಂ ಛಂ ಜಂ ಝಂ ಞಂ ಟಂ ಠಂ ಡಂ ಢಂ ಣಂ ತಂ ಥಂ ದಂ ಧಂ ನಂ।ಪಂ ಫಂ ಬಂ ಭಂ ಮಂ ಯಂ ರಂ ಲಂ ಶಂ ಷಂ ಸಂ ಹಂ ಳಂ ಕ್ಷಂಕ್ಷಃ

ಯಿತಿ ಶ್ರೀಮದ್ವಿಶ್ವಕರ್ಮವಂಶ ಪಯಃಪಾರಾವಾರ ರಾಕಾಸುಧಾಕರಹ ಭುವನ ಸಗೋತ್ರ ಪವಿತ್ರ ಆರ್ಯಜನ ಸ್ತೋತ್ರ ಪಾತ್ರ ಶ್ರೀಮದ್ವೀಪುರಿ ವೆಂಕಟಾರ್ಯ ಗುರುಗರ್ಭ ಸಂಜಾತರಾದ ಶ್ರೀವರ್ಮಾ ಪುರಾಣಗಿರ್ಯಾಚಾರ್ಯ ಸಹೋದರ ಶೇಲ್ಮ ಜಿಲ್ಲಾ ಕೃಷ್ಣಗಿರಿ ತಾಲೋಕು ದಕ್ಷಿಣ ಪಿನಾಕಿನಿ ನದಿ ತೀರಸ್ಥಾ ಶ್ರೀಮತ್ಕಾವೇರಿ ಪಟ್ಟಣ ನಿವಾಸ ಶ್ರೀ ನರಸಾಂಬ ಗರ್ಭ ಸಂಭೂತ ಶ್ರೀಮತ್ಪದ ಗಿರ್ಯಾಚಾರ್ಯ ಗುರುಸ್ವಾಮಿಗಳಿಂದ ಪ್ರಚುರಿಸಲ್ಪಟ್ಟು ಸ್ವರಶಾಸ್ತ್ರ ಪಂಚತತ್ವ ಸಾದನ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ: ಚಂದ್ರಸೂರ್ಯ ನಾಡಿಗಳಿಂದ ಶುಭಾಶುಭ ಫಲಜ್ಞಾನ.

ವಿಶೇಷ: ಈ ಪುಸ್ತಕದಲ್ಲಿ ಕೃತಿಗೆ ಸಂಬಂಧಪಟ್ಟ ಕೆಲವು ಚಕ್ರಗಳಿವೆ. ನೋಡಿ ಅಕ್ಷರ.

757

ಕೆ. ೩೧೭	**ನಾಂದ್ಯದ ಪುಸ್ತಕ**	ವಿವಿಧ ಷಟ್ಪದಿ
೧೨.೨″ × ೨.೩″	ಗುಬ್ಬಿಯ ಮಲ್ಲಣಾರ್ಯ ಮೊದಲಾದವರು	?
೧—೮೫ ಪತ್ರ	೧೦ ಪಂಕ್ತಿ	[illegible]೦ ಅಕ್ಷರ

ಆದಿ ; ಶ್ರೀಗುರು ಬಸವಲಿಂಗಾಯ ನಮಃ॥ ನಾದ್ಯದ ಪುಸ್ತಕ ಬರವುದ ಶುಭಮಸ್ತು॥ ನೀಲಾಂಬಿಕ ಲಲಿತ ಸ್ತೋತ್ರ॥

ಭಾವಿಪದ ॥ ಶ್ರೀಮದತುಳಾನಂದೆ ಶುಭಕರೆ
ವಾಮಲೋಚನೆ ವರದೆ ವಂದಿತೆ
ರಾಮಕುಂತಳೆ ರಸಿಕ ಮೇದುರೆ ರಾಜ ಮಂತ್ರಾಂಗಿ
ಸೋಮಮುಖಿ ಸನ್ಮಾನೆ ಸುಗುಣ
ಸ್ತೋಮ ಮಂದಿರೆ ಸಾರಸೌಂಧರೆ
ಸೋಮಗಂಧಿನಿ ನೀಲಲೋಚನೆ ಪಾಲಿಸೆಲೆ ತಾಯೆ ॥ ೧ ॥

ಅಂತ್ಯ : ಗುರುಚೆಂನಮಲ್ಲೇಶ ಪಾರ್ವತೀಶ್ವರ ಶುಭ
ಕರಚರಿತೆ ನಾಂದ್ಯಗಳ ಬರದೋದಿ ಕೇಳಿದವರ್ಗ್ಗೆ
ದೊರಕುವದಭಿಷ್ಟಾರ್ತ್ಥ ಸಿದ್ದಿ ಸಿದ್ದಿಸುಗು ಭವದುರಿತ ಕಂಟಕವಳಿವುದೂ
ಪರಮ ಪಂಚಾಕ್ಷರಿಯ ಸ್ಮರಿಸುತ್ತಲಾವಾಗ
ಗುರು ಲಿಂಗ ಜಂಗಮದ ಪಾದತ್ತೀರ್ತ್ಥಾಮೃತವ
ನೆರದು ರಕ್ಷಿಸುವಮಮ ಕರ್ತ್ತ ಮದ್ಗುರು ಚೆಂನ ಮಲ್ಲೇಶ ಪಾರ್ವತೀಶಾ ॥ ೭೧ ॥

ಮಲ್ಲೇಶ್ವರ ನಾಂದ್ಯ ಸಮಾಪ್ತ ಮಂಗಳ ಮಹಾಶ್ರೀ ॥

ವಿಷಯ : ವಿವಿಧ ಕಾವ್ಯಗಳ ನಾಂದಿಯ ಪದ್ಯಗಳು.

ವಿಶೇಷ : ಕೆಲವೆಡೆ ಶಕಟರೇಫವಿದೆ. ನೀಲಾಂಬಿಕಾ ಸ್ತೋತ್ರ, ಮಹಂತಸ್ವಾಮಿಗಳು ನಿರೂಪಿಸಿದ ಭಾವಿನಿ ವರ್ನ್ನಕದ ಷಟ್ಪದ, ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ, ಚೇರಮನ ಕಾವ್ಯದ ನಾಂದ್ಯ, ಷಟ್ಸ್ಥಲ ತಿಲಕದ ನಾಂದ್ಯ, ಭಾವಚಿಂತಾ ರತ್ನದ ನಾಂದ್ಯ, ಆದಯ್ಯಗಳ ಕಾವ್ಯದ ನಾಂದ್ಯ, ಸೌಂಧರ ಪುರಾಣದ ನಾಂದ್ಯ, ಸಿದ್ಧೇಶ್ವರನ ಸ್ತೋತ್ರದ ಪದ, ದೇವಿಸ್ತುತಿ, ಶಿವಲಿಂಗನಾಂದ್ಯ, ವೃಷಭೇಂದ್ರ ಲಲಿತಪದ ನಾಂದ್ಯ, ಷಟ್ಸ್ಥಲದ ಜ್ಞಾನ ಸಾರಾಯಾ, ಮಣ್ಣೇಶ್ವರನ ಕಾವ್ಯದ ನಾಂದ್ಯ, ಸಿದ್ಧೇಶ್ವರನ ಪುರಾಣದ ನಾಂದ್ಯ, ಸೋಮೇಶ್ವರನ ಪುರಾಣದ ನಾಂದ್ಯ, ಕಪ್ಪಿನ ನಂಜಯ್ಯನವರು ಮಾಡಿದ ನಾಂದ್ಯ, ಲಿಂಗಪುರಾಣದ ನಾಂದ್ಯ, ಬಸವೇಶ್ವರ ಪುರಾಣದ ನಾಂದ್ಯ, ಚೆಂನಬಸವೇಶ್ವರ ದೇವರ ಪುರಾಣದ ನಾಂದ್ಯ, ಪ್ರಭುದೇವರ ಪುರಾಣದ ನಾಂದ್ಯ, ಶಂಕರಸಂಹಿತೆಯ ನಾಂದ್ಯ ಮತ್ತು ಮಲ್ಲೇಶ್ವರನ ನಾಂದ್ಯಗಳೆಂಬ ವಿವಿಧ ಕಾವ್ಯಗಳ ನಾಂದಿಯ ಪದಗಳಿವೆ.

758

ಕೆ. ೨೨೩/೩ ನಾನಾರ್ಥಕಂದ ಕಂದ
೧೧" × ೧.೮" ಚನ್ನ ಸು. ೧೬೦೦
೩೫–೩೭ ಪತ್ರ ೮ ಪಂಕ್ತಿ ೪೪ ಅಕ್ಷರ

ಆದಿ : ನಾನಾರ್ಥಕಂದ ಬರವುದಕ್ಕೆ ಶುಭಮಸ್ತು॥
ಭಾರಧ್ವಜಸುಗೋತ್ರವದ
ಧೀರ ದ್ರಾವಿಡನು ರಾಮುಚಾರಿತ್ರಂಗಳ
ಧಾರುಣಿಗೆ ಪೇಳ್ದ ಚನ್ನಿಗ
ವೀರಂ ನಾನಾರ್ಥ ಕಂದಪದ್ಯವ ಪೇಳ್ದಂ ॥ ೧ ॥
ಹರಿ ಗಿರಿ ಜಲ ಪಾರ್ವತಿ ವಟ
ತರು ಪುಳಿನಂ ದ್ವಿಪಲಿ ವಾಣಿ ಶುಕ ನರಿ ದಟ್ಟಂ
ನೊರೆ ಪುಣ್ಯ ಪಾವು ಶುಭ ಸುಖ
ವರಸಿತ ಪದಿನೆಂಟು ನಾಮ ಶಿವಶಬ್ದಂಗಳ್ ॥ ೨ ॥

ಅಂತ್ಯ : ವಾಸುಗಿ ರುದ್ರ ಧನಂಜಯು
ವಾಸವನತಿಧೀರ ಶಾಂತನನಿ ಪೀಯೂಷಂ
ಭಾಸುರಜಿಷ್ಣುವೆನಿಕ್ಕು
ಯೀಸವಂ ಕೇಳು ನಾಮು ಸುಕವಿಕರ್ನಾಭರಣಾ ॥ ೧೮ ॥
ಸಭೆ ತುಂಬೆ ಯಂಚೆ ಚಲ್ವಿಕೆ
ಯಿಭ ಸದ್ವಕ್ತಾರು ಮಂಡಾಳಿ ಶಬ್ದ ಭೂ
ನಭ ಸಗ್ಗಂ ಪೇಭೂರ್ತಂ
ವುಭಯ ದ್ವಯನಾಮನಾಕಾಶಬ್ದಂ ಧರೆಯೊಳ್ ॥ ೧೫ ॥

ವಿಷಯ . ನಾನಾರ್ಥಪದಗಳು (ನಿಘಂಟು)

ವಿಶೇಷ : ಇದಾದಮೇಲೆ ಕೆಲವು ಸಂಸ್ಕೃತ ಸುಭಾಷಿತ ಪದ್ಯಗಳು ೨ ಪತ್ರಗಳಲ್ಲಿವೆ. ಈ ಗ್ರಂಥದೊಂದಿಗೆ ಭರ್ತೃಹರಿಶತಕ ಟೀಕೆಯೂ ಇದೆ.

759

ಕೆ.ಬಿ. ೪೨೯/೪ ನಾನಾರ್ಥಕಂದ ಕಂದ
೭.೭" × ೬" ಚನ್ನ ಸು. ೧೬೦೦
೧–೯ ಪತ್ರ ೨೫ ಪಂಕ್ತಿ ೨೦ ಅಕ್ಷರ

ಆದಿ : ಭಾರದ್ವಾಜ ಸುಗೋತ್ರದ
ಧೀರ ದ್ರಾವಿಡನು ರಾಮಚಾರಿತ್ರಗಳಂ
ಧಾರುಣಿಗೆ ತೋರ್ಪ ಚಂನ ಗ
ಭೀರ ನಾನಾರ್ಥ ಕಂದಪದ್ಯ ಪೇಳ್ದಂ ॥ ೧ ॥
ಹರಿ ಗಿರಿ ಜಲ ಪಾರ್ವತಿ ವಟ
ತರು ಪುಳಿನ ದ್ವಿಪ ಲೇಪವಾಣಿ ಶುಕ ನರಿದಲ್ಲುಂ
ಗೊರೆ ಪುಂಣ್ಯಶುಮಿಾ ಶುಭ ಸುಖ
ವರಶಿಕ ಪದಿನೆಂಟು ನಾಮ ಶಿವಶಬ್ದಂಗಳ್ ॥ ೨ ॥

ಅಂತ್ಯ : ಕತ್ತಲೆ ಶೋಕ ಗುಣತ್ರಯ
ಕೃತ್ತಿಮು ಗುಣ ಮೂಢ ದೋಷವಿವುಯೆಂಬಂ
ತತ್ತಮಿರದ ಶಬ್ದಂಗಳು
ಡೊತ್ತಮ ವಾರುವವಿದೆಂಡು ಕಾರ್ತಿಕಶಬ್ದಂ ॥ ೩೭ ॥
ನಾನಾರ್ಥ ಸಂಪೂರ್ಣಃ

ವಿಷಯ : ನಾನಾರ್ಥ ಪದಗಳು. (ನಿಘಂಟು)

ವಿಶೇಷ : ಈ ಗ್ರಂಥ ಮುಗಿದಮೇಲೆ ಮುಂದಿನ ಏಳು ಪತ್ರಗಳು ಖಾಲಿಯಿವೆ. ಇದರೊಂದಿಗೆ ಭಾರತ ನಿಘಂಟು, ಕನ್ನಡ ಧಾತು ಪಾಠ, ಶಬ್ದರತ್ನಾಕರ, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ, ಚತುರಾಸ್ಯ ನಿಘಂಟು, ಕರ್ನಾಟಕದ ಧಾತು ನಿರ್ಣಯ ಎಂಬ ಗ್ರಂಥಗಳಿವೆ.

760

ಕೆ.ಬಿ. ೧೮೬	**ನಾನಾರ್ಥ ಗುರುಬೋಧಸಾರ**	ಗದ್ಯ
೭.೫"×೬.೧"	ಯೋಗೀಂದ್ರ	ಸು. ೧೭೫೦
೧–೧೩೬ ಪತ್ರ	೧೧ ಪಂಕ್ತಿ	೧೫ ಅಕ್ಷರ

ಆದಿ : ನಾನಾರ್ಥ ಗುರುಬೋಧಸಾರ.

ಶ್ರೀಸದ್ಗುರು ಪರಾಶರ। ಪರಮ ಪುರುಷ ಪರಮೇಶ್ವರ ಪರಮ ಪಾವನ ಪರಶಿವ ಪರಬ್ರಂಹ್ಮ ಪರಾಶರ ಪ್ರಶಾದಿಯಾದಂತ। ಶಂಕರಃ ಶಂಕರ ಸಾಕ್ಷಾದ್ವ್ಯಾಸೋ। ನಾರಾಯಣೊ ಹರಿಃ। ವ್ಯಾಸೋ ಕಾಸಿ ನಿವಾಸ। ವರಮೋಪಾಸ। ಭಾಸುರವಾಸ ನಿರುಪಮ ನಿಗಮಾಭ್ಯಾಸ। ಸಂನ್ಯಾಸ ಪರಮೇಶ ಸರ್ವಲೋಕೇಶ ॥

ಅಂತ್ಯ : ಅನಂತರದಲ್ಲಿ ಮೌನಿ ವೈಯಾಕರಣೀ ಯಂದು ಲಕ್ಷಣವನ್ನು ನಾವು ರೂಪುಕ್ರಿಯಗಳ ಅರ್ಥಸಾರವನ್ನು ನಿರೂಪಿಸಿ ಕಡೆಗೊಳಿಸಿದ ಗುರು ರಾಯನಿಗೆ ಸಮಸ್ತ ರಾಜೋಪಚಾರ ದೇವೋಪಚಾರ ಪೂಜಾ ಸಮರ್ಪಿಸಿದೆ ಯಂಬಲ್ಲಿಗೆ

ಗದ್ಯ॥ ಯಿತಿ ಶ್ರೀಮತ್ಪರಾಶರ ಪರಿವ್ರಾಜಕಾಚಾರ್ಯ ವ್ಯಾಸಬಟ್ಟರ ಮುಕುಂದ ಗುರುವರ್ಯ ಪಾದಕಮಲ ಭೃಂಗಾಯಮಾನ ಪೂರ್ವಾಂತರಂಗ ಯೋಗೀಂದ್ರ ವಿರಚಿತಮಪ್ಪ ನಾನಾರ್ಥ ಗುರುಬೋದಸಾರವೆಂಬಲ್ಲಿಗೆ ಯೇಕಾದಶವೋದ್ಯಾಯ ಸಮಾಪ್ತ ಮಂಗಳ ಮಹಾಶ್ರೀ

ವಿಷಯ : ವೇದಾಂತ ತತ್ತ್ವಬೋಧೆ..

ವಿಶೇಷ : ಸ್ಫುಟಾಕ್ಷರ, ಆರಂಭದ ಕೆಲವು ಪತ್ರಗಳನ್ನು ಹುಳು ಹೊಡೆದಿದೆ.

761

ಕೆ.ಬಿ. ೩೩೭	**ನಾನಾರ್ಥ ಗುರುಬೋಧಸಾರ**	ಗದ್ಯ
೬.೬″ × ೪.೧″	ಯೋಗೀಂದ್ರ	ಸು. ೧೭೫೦
೨–೧೯ ಪತ್ರ	೧೦ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ x x x ನಾನಾರ್ಥ ಗುರುಬೋಧಾ....ಂಬ ಗ್ರಂಥವಂನು ಬರವದಕ್ಕೆ ನಿರ್ವಿಘ್ನಮಸ್ತುx x ಶ್ರೀ ಪರಶರ....ರಮ ಪುರುಷ ಪರಶಂಪರ ಪರಮೇಶ ಪರಮ ಪಾವನ ಪರಶಿವ ಪರಬ್ರಂಹ್ಮಾಂತರಂಗ ಪರಾಶರ ವರ ಪ್ರಸಾದಿ ಯಾದಂಥಾ। ಶಂಕರಃ ಶಂಕರ ಸಾಕ್ಷಾದ್ವ್ಯಾಸೋ ನಾರಾಯಣೋ ಹರಿಃ।

x x x x

ನೀನ್ಯಾರೆಂದರೆ ಎಂದಿಗೂ ಕೇಡಿಲ್ಲದ ನಿಷ್ಕಲಂಕ ಬ್ರಂಹ್ಮವೇ ನೀನೆಂದು ಶ್ರೀ ಗುರು ಶಿಷ್ಯಂಗೆ ನಿರೂಪಿಶಿದನೆಂಬದಲ್ಲಿಗೆ ಪ್ರಥಮಾಧ್ಯಾಯ। ಇತಿ ಶ್ರೀ ಪರಾಶರ ಪರಿವ್ರಾಜಿಕಾಚಾರ್ಯ ವ್ಯಾಸಭಟಾರ ಮುಕುಂದ ಗುರುವರ್ಯ ಪಾದಕಮಲ ಭೃಂಗಾಯಮಾಸ ಪೂರ್ವಾಂತರಂಗ ಯೋಗೇಂದ್ರ ವಿರಚಿತ ನಾನಾರ್ಥ ಗುರುಬೋಧಾಸಾರವೆಂಬ ಅಧ್ಯಾಯ॥

ಅಂತ್ಯ : ವು .... ವೇಶಿತ್ತು ಬೀಜಪಾದಾರಿಂದಾ .... ಂಥಾ ಅಕಾರಾಕ್ಷರ ಪುರುಷನು ....ಷಥ ಅರಿವೂ ಯಂಬ ರಸಸ್ವಾದನ....ಂದಾ ಕಾ ...ರನಾಗಿವುಕಾರವೆಂಬ

ವಿಷಯ : ವೇದಾಂತ ತತ್ತ್ವಬೋಧೆ.

ವಿಶೇಷ : ಪ್ರತಿಯು ತುಂಬಾ ಶಿಥಿಲ ಮತ್ತು ಅಸಮಗ್ರ.

762

ಕೆ.ಬಿ. ೩೬೦	**ನಾನಾರ್ಥ ಗುರುಬೋಧಸಾರ**	ಗದ್ಯ
೭.೬´×೫.೯´´	ಯೋಗೀಂದ್ರ	ಸು. ೧೭೫೦
೧-೫೬ ಪತ್ರ	೧೮ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ವಿರೋಧಿಕೃತು ಸಂವತ್ಸರದ ಕಾರ್ತಿಕ ಶುದ್ಧ ೬ ಗುಋುವಾರದಲ್ಲು ನಾನಾರ್ಥ ಗುರುಬೋಧಾಸಾರವೆಂಬ ಗ್ರಂಥವನ್ನು ಬರೆಯುವದಕ್ಕೆ ಶುಭಮಸ್ತು ....

ನಾನಾರ್ಥ ಗುರುಬೋಧಸಾರ ಪ್ರಾರಂಭಾ ॥
ಸದ್ಗುರು ಪರಾಶರ ಪರಮ ಪುರುಷ। ಪರಾಶರಂ ಪರ ಪರಮೇಶ್ವರ ಪರಮ ಪಾವನ ಪರಶಿವ ಪರಬ್ರಂಹ್ಮ। ಪರಾಶರ ಪ್ರಸಾದಿಯಾದಂತ್ಥಾ ಶಂಕರ ಶಂಕರ ಸಾಕ್ಷಾದ್ವ್ಯಾಸೋ ನಾರಾಯಣೋ ಹರಿಃ। ವ್ಯಾಸೋ ಕಾಶೀ ನಿವಾಸ ಪರಮೋಪವಾಸ। ಭಾಸುರವಾಸ। x x x x ವ್ಯಾಸಮುನೀಂದ್ರರವರ ಪ್ರಸಾದಿಗಳಾದ ಹರಿಮುಕುಂದ ಗುರುಗಳಾದ ನಾಮಕ್ಕೆ ಅರ್ತ್ಥ ವೆಂತೆಂದಡೆ

ಅಂತ್ಯ: ಅನಂತ್ತರದಲ್ಲಿ ಮೌನಿ ವೈಯ್ಯಾಕರಣಿಯಂದು ಲಕ್ಷಣವಂನ್ನು ನಾಮರೂಪು ಕ್ರಿಯೆಗಳ ಅರ್ಥಸಾರವನ್ನು ನಿರೂಪಿಸಿ ಕಡೆಗೊಳಿಸಿದ ಗುರುರಾಯನಿಗೆ ಸಮಸ್ತ ರಾಜೋಪಚಾರ ದೇವೋಪಚಾರ ಪೂಜಾ ಸಮರ್ಪಿಸಿದೆನೆಂಬಲ್ಲಿಗೆ॥

ಗದ್ಯ ॥ ಇತೀ ಶ್ರೀಮತ್ಪರಾಶರ ಪರಿವ್ರಾಜಕಾಚಾರ್ಯ ವ್ಯಾಸ ಭಟ್ಟಾರಕ ಮುಕುಂದ ಗುರುವರ್ಯ ಪಾದಕಮಲ ಭೃಂಗಾಯಮಾನ ಪೂರ್ವಾಂತರಂಗ ಯೋಗೀಂದ್ರ ವಿರಚಿತಮಪ್ಪ ನಾನಾರ್ಥ ಗುರುಬೋಧಾಸಾರವೆಂಬಲ್ಲಿಗೆ ಯೇಕಾದಶೋಧ್ಯಾಯ ಸಮಾಪ್ತ ಮಂಗಳ ಮಹಾಶ್ರೀ

x x x x

೧೧ ಮೌನಿ ವೈಯ್ಯಾಕರಣಿ ನಾಮಾಕ್ಷರ ಅರ್ಥಸಾರ ನಿರ್ಣಯಾ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಖಾಬ್ಧ ೧೭೩೪ನೆ ಸಂದ ವರ್ತಮಾನವಾದ ವಿರೋಧಿಕೃತು ನಾಮಸಂವತ್ಸರದ ಪುಷ್ಯ ಬಹುಳ ೬ ಚಂದ್ರವಾರ ದಿವ್ಸ ಹಗಲು ೫ ಘೆಂಟ್ಯೆಯಲ್ಲಿ ನಾನಾರ್ಥ ಗುರುಬೋಧಸಾರ ಸಮಾಪ್ತ.

ವಿಷಯ : ವೇದಾಂತ ತತ್ತ್ವಬೋಧೆ.

ವಿಶೇಷ : ಸುಂದರಾಕ್ಷರ. ಈ ಪುಸ್ತಕದಲ್ಲಿ ಮೂರುವಿಧವಾದ ಕಾಗದಗಳಿವೆ.

763

ಕೆ. ೬೩/೧	**ನಾನಾರ್ಥರತ್ನಾಕರ**	ವೃತ್ತ
೧೩"×೧.೨"	ದೇವೋತ್ತಮ	ಸು. ೧೬೦೦
೨–೨೪ ಪತ್ರ	೭ ಪಂಕ್ತಿ	೪೯ ಅಕ್ಷರ

ಆದಿ : .... ಮರಾಳಚಂದ್ರಮುನಿ ಕತ್ತಲೆ ವಾರಿ ವೃ .... ಖ್ಯೆ ೬॥ ಲೋಕಸಾ
ಗರ ಸಲಿಲಾಂಬರಂ ವಿಪಿನಮಿಂತಿವಕಂ ಭುವನಾಭಿದಾನಾ ೫॥ ಸಂ
ಗರ ಬಲಪರ್ಣವಾದಮಿವಕಂ ದಳ ಶಬ್ದ ೪॥ ಕತ್ತಲೆ ಮಧುರ ಸಿದ್ಧ ಶಂ
ಕರವಮೃತಾಕ್ಷರಂ ವಿಷಯ ಮುಕ್ತಿಗಳೆಂಬಿವಕಕ್ಷಯಾಂಕಿತಂ ॥ ೭೬ ॥

ಅಂತ್ಯ : ಮುನಿಶುಂ ಪ್ರಶ್ನೆ ಪುನರ್ವಚಂಗಳ ವಿಶಬ್ದಂ ಹಾಸ್ಯ .... ಯೆಂಬಿವು
ಕ್ಕಾಸಂನಮುಂ ಪಾಡ್ಯಸ.... ದ್ಧುಸಿತಾ ಸಂಚಯುವೆಯ್ದೆ ಪತಿವರ್ತಾಖ್ಯಾನ
ಮುಂ ಘೆನ ವಿಸ್ನೇಹಗಳೆಂಬಿವಿಂತ .... ನಾನಾರ್ಥ ರತ್ನಾಕರಂ ॥ ೧೬೩ ॥
ಜಗದೊಳ್ ಜಾಣರ ಸತ್ಕವೀಶ್ವರ ಸಮೂಹಕ್ಕೆಯ್ದೆ ತಾಯ್ನಿವಾಡು ವಾ
ಗ್ನಿಗಳಾ ... ಧಿವಾಸ ಗಮಕಿ ಸಂತಾನ ಕುತ್ಪ್ರೀತಿ ವಾ
ದಿಗಳಾವಾಸ ವಿಧಾನ ದುರ್ಜನ ಜನಾಂಭೋಜಾತ ಶುಭ್ರಾಂಶು
... ವ್ರಾತದಿ ಪೆಂಪುವೆತ್ತುದೊಲವಿಂ ನಾಃನಾರ್ಥ್ಥರತ್ನಾಕರಂ ॥ ೧೬೪ ॥

ಉಭಯಂ ವೃ ೧೭೦ಕ್ಕೆ ಅಂತು ಸಂಧಿ .... ೧೬೪ಕ್ಕಂ ಮಂಗಳಮಹಾಶ್ರೀ
.... ನಾಗಮುಂಗಲದ ಸ್ತಳದ ಸೇನಬೋಗ ಕುಕ್ಕೆ ಲ್ಲಿಂಗರಸರ ಕುಮಾರ
ವೆಂಕಪ್ಪ ಬರದ ನಾನಾರ್ಥ ರತ್ನಾಕರ

ವಿಷಯ : ಸಂಸ್ಕೃತ ಶಬ್ದಗಳ ನಾನಾರ್ಥ.

ವಿಶೇಷ : ಶಕಟರೇಫದ ಬಳಕೆ ಇದೆ. ಮೊದಲನೆಯ ಗರಿ ಇಲ್ಲ. ಕೊನೆಯ ಮೂರು ಗರಿಗಳು ಒಂದು ಕಡೆಯಲ್ಲಿ ಸ್ವಲ್ಪಸ್ವಲ್ಪ ಮುರಿದಿವೆ. ಈ ಕಟ್ಟಿನಲ್ಲಿ ಪ್ರಭುನಟನ ತಾರಾವಳಿ, ಶಂಕರದೇವರ ಕಂದ, ಎಲ್ಲಾ ಪುರಾತನರತ್ರಿವಿಧಿ, ಗುರುರಗಳೆ ಎಂಬ ಗ್ರಂಥಗಳಿವೆ

764

ಕೆ. ೧೧೩ ನಾನಾರ್ಥರತ್ನಾಕರ (ಸಟೀಕಾ) ವೃತ್ತ, ಟೀಕು

೧೪.೩"X೧.೪" ದೇವೋತ್ತಮ ಸು. ೧೬೦೦

೨೧–೬೪ ಪತ್ರ ೬ ಪಂಕ್ತಿ ೬೦ ಅಕ್ಷರ

ಆದಿ : ಭಟಾಗ್ರಣಿ ಭಯಂಕರ ಶಂಕರ ಭೀಮವಾಚಕಂ ॥ ಟೀಕು ॥ ಸರಸ್ವತಿ । ಮಂಡೆ ಕೂದಲು । ಮರ । ಪಶು । ಉದಕ । ಭೂಮಿ । ವಜ್ರ ಕಂಣು । ಬಾಣ । ಕಿರಣ । ಸೀರಥೆರೆ । ದಿಕ್ಕು । ಪರ್ವತ । ಹೊಟ್ಟೆ । ಕುಕ್ಷಿ । ಕೋಡುಗಳಲ್ಲಿ । ಸ್ವರ್ಗ । ಈ ೧೭ ಗೋಶಬ್ದ ॥ ಯಮ । ಭೀಮ । ಶಕ್ತಿವಂತನಲ್ಲಿ । ಭುಜದಲ್ಲಿ । ವೀರಭಟನಲ್ಲಿ । ಭಯಂಕರದಲ್ಲಿ । ರುದ್ರನಲ್ಲಿ । ಈ ೭ ಭೀಮಶಬ್ದ ॥

ವೃ॥ ಶುಕಜಲಫೇನ ಶಂಕರ ಸರಸ್ವತಿ ಸಾಂದ್ರಫಣೀಂದ್ರ ಪುಣ್ಯಕೀ
ಲಕಮುಭಯಾದ್ರಿಜಾಮಳಕಭದ್ರ ಸುಖಂ ಧವಳಂ ಸೃಗಾಲವಂ
ಸಿಕತ ವಟಾದಿಗಳ್ ಶಿವಯೆನಿಕ್ಕನಲೆಂದು ಪತಂಗದೈತ್ಯ ಬಾ
ಲಕರು ವಿರೋಚನಾಖ್ಯ ನಯನಾಭ್ರಕುಜಾಂಬುಧಿಗಳ್ಪಯೋಧರಂ॥

ಟೀ ॥ ಗಿಳಿ ಉದಕ । ನೊರೆ । ಈಶ್ವರ । ಸರಸ್ವತಿ । ದಟ್ಟದಲಿ । ಫಣಿ । ಪುಣ್ಯ । ಪರ್ವತ । ಅಣಿವೆ । ಪಾರ್ವತಿ । ನೆಲ್ಲಿ । ಶುಭ । ಸುಖ । ಬಿಳಿದು । ನರಿ । ಮಳಲು । ಆಲದಮರ । ಈ ೧೮ ಶಿವಶಬ್ದ.

ಅಂತ್ಯ : ಜಗದೊಳ್ಜಾಣರ ಮೆಚ್ಚು ಸತ್ಕವಿ ಸಮೂಹಕ್ಕೆಯ್ದೆ ತಾಯಿಬ್ಬಾಡು ವಾ
ಗ್ಮಿಗಳಾನಂದ ರಸಾಧಿವಾಸ ಗಮಕಿ ಸಂತಾನಕ ಪ್ರೀತಿ ವಾ ।
ದಿಗ .... ವಾಸ ನಿಧಾನ ದುರ್ಜ್ಜನ ಜನಾಂಭೋಜಾತ ಶುಭ್ರಾಂಶುವೆಂ
ಬ ಗುಣವ್ರಾತದಿ ಪೆಂಪುವೆತ್ತು ಮೆಱೆಗುಂ ನಾನಾರ್ತ್ಥ ರತ್ನಾಕರಂ ॥೧೬೮॥
ಇತಿ ನಾನಾರ್ತ್ಥ ರತ್ನಾಕರಂ ಸಂಪೂರ್ಣಂ ಮಂಗಳ ಮಹಾ ಶ್ರೀ ॥

ವಿಷಯ : ಕನ್ನಡ ಪದಗಳ ನಾನಾರ್ಥ.

ವಿಶೇಷ : ಮೊದಲಿನಲ್ಲಿ ೭ ಪದಗಳಿಲ್ಲ. ಶಕಟರೇಫದ ಬಳಕೆ ಇದೆ. ಕೊನೆಯಲ್ಲಿ ಕ್ರಮಾಂಕ ೧ ರಿಂದ ೫ ಪತ್ರಗಳಲ್ಲಿ ಪ್ರತಿ ಪದ್ಯದಲ್ಲೂ ಬರುವ ಪದಕ್ಕಿರುವ ನಾನಾರ್ಥಗಳೆಷ್ಟು ಎನ್ನುವುದನ್ನು ಬರೆದಿದೆ. ೧ ನೇ ಪತ್ರದಲ್ಲಿ '೧ ನೆಯ ವಾಲೆಯಲ್ಲಿ ಕಬ್ಬಿಗರ ಕೈಪಿಡಿ, ೨೦ನೆಯ ವಾಲೆಯಲ್ಲಿ ನಾನಾರ್ಥ ರತ್ನಾಕರ'

ಎಂದಿರುವುದರಿಂದ ೨೧ ನೇ ಪತ್ರದಲ್ಲಿ 'ನಾನಾರ್ಥ ರತ್ನಕರ' ಗ್ರಂಥವು ಪ್ರಾರಂಭವಾಗಿದೆ ಎಂದೂ, ಇದಕ್ಕೆ ಮೊದಲು ಇದ್ದ ಇಪ್ಪತ್ತು ಪತ್ರಗಳಲ್ಲಿ 'ಕಬ್ಬಿಗರ ಕೈಪಿಡಿ' ಎಂಬ ಗ್ರಂಥವು ಇದ್ದಿತೆಂದೂ ಸ್ಪಷ್ಟಪಡುತ್ತದೆ.

765

ಕೆ. ೩೪೮	ನಾನಾರ್ಥರತ್ನಾಕರ	ವೃತ್ತ
೧೧.೪"×೧.೪"	ದೇವೋತ್ತಮ	ಸು. ೧೬೦೦
೧–೨೫ ಪತ್ರ	೭ ಪಂಕ್ತಿ	೫೧ ಅಕ್ಷರ

ಆದಿ : ನಾನಾರ್ಥ ರತ್ನಾಕರ ॥ ವೃತ್ತ ॥
ಶ್ರೀ ದಿವಿಜೇಂದ್ರವಂದಿತ ಪದಾಂಬುಜನಾನತ ಹೃತ್ಪಯೋಜಮಿ
ತ್ರೋದಯ ನವ್ಯಮಾನಸಕಲಾಗಮ ಶಾಸ್ತ್ರವಿರಾಜ ತೇಜಬೋ
ಧೋದಯನೋನ್ನತೋತ್ಸವ ದಯಾಂಚಿತ ಧರ್ಮ್ಮ ಸುಧಾಬ್ಧಿ ಪೂರ್ಣಚಂ
ದ್ರೋದಯನಾದಿ ಪರಮೇಶ್ವರನೀಗೆ ಮತಿಪ್ರಕಾಶಮಂ ॥ ೧ ॥
ವಾಣಿ ಜಗತ್ಪಿತಾಮಹನೆ ರಾಣಿ ವಿಷೇಶ ಸುಖಪ್ರದೈಕ ಕ
ಲ್ಯಾಣಿ ಸುನೀಲರತ್ನನಿಭವೇಣಿ ಪದದ್ವಯಾಬ್ಜನಂಮ್ರಗೀ
ರ್ವಾಣಿ ವಿಕರ್ಮವೆಲ್ಲರೀ ಕೃಪಾಣಿ ಸುಸಂಗೀತಗಾಣಿ ಗೌರವ
ಶ್ರೇಣಿ ಸರೋಜಪಾಣಿ ದಯಯಿಂದೆಮಗೀಗೆ ವಚೋವಿಲಾಸಮಂ ॥ ೨ ॥

ಅಂತ್ಯ : ಜಗದೊಳ್ಜಾಣರ ಮೆಚ್ಚು ಸತ್ಕವಿ ಸಮೂಹಕ್ಕೆಯ್ದೆ ತಾಯಿರ್ಪ್ಪಾಡು ವಾ
ಗ್ಮಿಗಳಾನಂದದ ಸೌಧ ಗಮಕೀ ಸಂತಾನ ಸುಪ್ರೀತಿ ವಿವಾ
.... ವಾಸ ವಿಧಾನ ವಿದ್ವಜ್ಜನಜನಾಂಭೋಜಾತ ಶುಭ್ರಾಂಶುಮೆಂ
ಬ ಗುಣೋದ್ಧಾತತ ಪೆರ್ಮ್ಮೆವೆತ್ತಾದೊಲವಿಂ ನಾನಾರ್ಥ ರತ್ನಾಕರಂ ॥
ವೃತ್ತ ನಾನಾರ್ಥ ಸಂಪೂರ್ಣಂ ಮಂಗಳ ಮಹಾಶ್ರೀ ॥

ವಿಷಯ : ಕನ್ನಡ ಪದಗಳ ನಾನಾರ್ಥ.

ವಿಶೇಷ : ಕೊನೆಯ ಪತ್ರದಲ್ಲಿ ಏಕಾಕ್ಷರ ನಿಘಂಟನ್ನು ಬರೆಯಬೇಕೆಂದು ಪ್ರಾರಂಭ ಮಾಡಿ ಮೂರು ಪದ್ಯಗಳನ್ನು ಬರೆದಿರುತ್ತಾರೆ. ಆರಂಭದಲ್ಲಿ ಎರಡು ಶುದ್ಧ ಪತ್ರಗಳಿವೆ. ಗರಿಗಳ ಅಂಚು ಮುರಿದಿದೆ.

766

ಕೆ. ೩೬೬/೪	ನಾನಾರ್ಥರತ್ನಾಕರ (ಸಟೀಕಾ)	ವೃತ್ತ, ಟೀಕು
೮.೭"×೨.೩	ದೇವೋತ್ತಮ	ಸು. ೧೬೦೦
೧೨–೬೪ ಪತ್ರ	೧೧ ಪಂಕ್ತಿ	೩೮ ಅಕ್ಷರ

ಆದಿ : ನಾನಾರ್ತ್ಥ ರತ್ನಾಕರ॥ ಉತ್ಪಲವೃತ್ತ॥
ಶ್ರೀದಿವಿಜೇಂದ್ರ ವಂದಿತ ಪದಾಂಬುಜನಾನತ ಹೃತ್ಪಯೋಜ ಮಿ
ತ್ರಾದಯ ನವ್ಯಮಾನ ಸಕಲಾಗಮಶಾಸ್ತ್ರ ವಿರಾಜ ತೇಜಬೋ
ದೋದಯ ನೂತ್ನತೋತ್ಸವದಯಾಂಚಿತ ದಮ್ಯಸುಧಾಬ್ಧಿಪೂರ್ಣಚಂ
ದ್ರೋದಯನಾದನಾದಿ ಪರಮೇಶ್ವರನೀಗೆ ಮತಿಪ್ರಕಾಶಮಂ ॥ ೧ ॥
ವಾಣಿ ಜಗತ್ಪಿತಾಮಹನ ರಾಣಿ ವಿಶೇಷ ಸುಖಪ್ರದೈಕ ಕ
ಲ್ಯಾಣಿ ಸುನೀಲರತ್ನನಿಭವೇಣಿ ಪದದ್ವಯಾಬ್ಜನಂಮ್ರಗೀ
ರ್ವ್ವಾಣಿ ವಿಕರ್ಮವಲ್ಲರೀ ಕೃಪಾಣಿ ಸುಸಂಗೀತ ಗಾಣಿ ಗೌರವ
ಶ್ರೇಣಿ ಸರೋಜ ಪಾಣಿ ದಯಯಿಂದೆಮಗೀಗೆ ವಚೋವಿಲಾಸಮಂ ॥ ೨ ॥

ಅಂತ್ಯ : ಜಗದೊಳಾಣರ ಮೆಚ್ಚು ಸತ್ಕವಿ ಸಮುಹಕ್ಕೆಯ್ದೆ ತಾಯ್ವಾಡು ವಾ
ಗ್ಮಿಗಳಾನಂದದ ಸಾದೆ ವಾಸ ಗಮಕಿ ಸಂತಾನ ಸುಪ್ರೀತಿವಾ
ದಿಗಳಾವಾಸ ನಿಧಾನ ವರ್ಜ್ಜನ ಜನಾಂಭೋಜಾತ ಶುಭ್ರಾಂಶುಮೆಂ
ಬ ಗುಣೋಧಾತ್ತದ ಪಿಂಪುವೆತ್ತುದೊಲವಿಂ ನಾನಾರ್ತ್ಥರತ್ನಾಕರಂ ॥೧೬೯॥
ವೃತ್ತ ನಾನಾರ್ತ್ಥ ಸಂಪೂರ್ಣಂ ಮಂಗಳ ಮಹಾಶ್ರೀ ॥

ವಿಷಯ : ಕನ್ನಡ ಪದಗಳಿಗೆ ನಾನಾರ್ಥ.

ವಿಶೇಷ : ಇದೇ ಕಟ್ಟಿನಲ್ಲಿ ಶಬ್ದಾರ್ಥ ರತ್ನಾಕರ, ಪದ್ಯನಾನಾರ್ಥ, ಏಕಾಕ್ಷರ ನಿಘಂಟು(ಸಟೀಕಾ), ಧನಂಜಯ ನಿಘಂಟು (ಸಟೀಕಾ), ಭಾರತನಿಘಂಟು, ಕರ್ಣಾಟಕ ಶಬ್ದಮಂಜರಿ ಎಂಬ ಕೃತಿಗಳಿವೆ. ಕೊನೆಯಲ್ಲಿ ಈ ಕಟ್ಟಿಗೆ ಸಂಬಂಧಪಡದ ೧೦೪ರಿಂದ ೧೧೦ ವರೆಗಿನ ಕ್ರಮಾಂಕದ ಆರು ಓಲೆಗಳಲ್ಲಿ ಕೆಲವು ಪದಗಳಿಗೆ ಅರ್ಥವಿದೆ. ಇದೂ ಅಪೂರ್ಣ. ಮಧ್ಯದಲ್ಲಿ ೧೪, ೧೫ ೧೭, ೨೨, ೨೯, ೩೦, ೩೨, ೩೬, ೪೫, ೪೮, ೪೯, ೫೮, ೫೯, ೬೨ ಈ ಕ್ರಮಾಂಕದ (ಒಟ್ಟು ೧೪) ಓಲೆಗಳಿಲ್ಲ. ೫೬ನೇ ಗರಿ ಮುರಿದಿದೆ. ೫೭ನೇ ಗರಿ ಅರ್ಥ ಮಾತ್ರ ಇದೆ.

767

ಕೆ. ಎ. ೨೫೩/೭	ನಾನಾರ್ಥರತ್ನಾಕರ	ವೃತ್ತ
೧೨.೯"×೮"	ದೇವೋತ್ತಮ	ಸು. ೧೬೦೦
೧–೫೭ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ನಾನಾರ್ಥ ರತ್ನಾಕರ ||ವೃತ್ತಂ ||
ಶ್ರೀ ದಿವಿಜೇಂದ್ರ ವಂದಿತ ಪದಾಂಬುಜನಾನತ ಹೃತ್ಪಯೋಜ ಮಿ
ತ್ರೋದಯಸತ್ಯನೂನ ಸಕಲಾಗಮ ಶಾಸ್ತ್ರವಿರಾಜಮಾನ ಬೋ
ಧೋದಯನುನ್ನತೋತ್ಸವ ದಯಾಂಚಿತಧರ್ಮ ಸುಧಾಬ್ಧಿಪೂರ್ಣ ಚಂ
ದ್ರೋದಯನಾದಿಪರಮೇಶ್ವರನೀಗೆಮಗಿಷ್ಟಸಿದ್ಧಿಯಂ || ೧ ||
ವೃತ್ತಂ || ವಾಣಿ ಜಗತ್ಪಿತಾಮಹನ ರಾಣಿಯತೀತ ಸುಖಪದೈಕ ಕ
ಲ್ಯಾಣಿ ಸುನೀಲರತ್ನ ನಿಭವೇಣಿ ಪದದ್ವಿತಯಾಬ್ಜ ನಮ್ರಗೀ
ರ್ವಾಣಿ ವಿಕರ್ಮ ವಲ್ಲರೀ ಕೃಪಾಣಿ ಸುಸಂಗೀತಕವಾಣಿ ಗೌರವ
ಶ್ರೇಣಿ ಸರೋಜಪಾಣಿ ದಯೆಯಿಂದೆಮಗೀಗೆ ವಚೋವಿಲಾಸಮಂ || ೨ ||

ಅಂತ್ಯ : ಜಗದೊಳ್ಸಜ್ಜನರ ಮೆಚ್ಚು ಸತ್ಕವಿ ಸಮೂಹಕ್ಕೆಯ್ದೆ ತಾಯ್ವಿಂಡು ವಾ
ಗ್ಮಿಗಳಾನಂದರಸಾಧಿವಾಸ ಗಮಕೀ ಸಂತಾನಕಪ್ರತಿವಾ
ದಿಗಳಾವಾಸನಿಧಾನ ದುರ್ಜನಮನಾಂಭೋಜಾತ ಶುಭ್ರಾಂಶುವೆಂ
ಬ ಗುಣವ್ರಾತದಿಂಪುವೆತ್ತು ಮೆರೆಗುಂ ನಾನಾರ್ಥ ರತ್ನಾಕರಂ || ೧೬ ||
ಗದ್ಯಂ || ಇದು ಭಗವದರ್ಹತ್ಪರಮೇಶ್ವರ ಚಾರು ಚರಣಾರವಿಂದ ದ್ವಂದ್ವಮಕ
ರಂದ ಮತ್ತ ಮಧುಕರಾಯಮಾಣ ವಿಬುಧ ಜನ ಮನಃಪದ್ಮಿನೀ ರಾಜ
ಹಂಸ ಶ್ರೀಮತ್ಕವಿರಾಜಹಂಸ ನಾಗವರ್ಮ ವಿರಚಿತಂ ಪರಿಸಮಾಪ್ತಂ ||
ಮಂಗಳ ಮಹಾಶ್ರೀ ||

ವಿಷಯ : ಕನ್ನಡ ಪದಗಳ ನಾನಾರ್ಥ.

ವಿಶೇಷ : ಪತ್ರಗಳ ಒಂದು ಪಾರ್ಶ್ವದಲ್ಲಿ ಮಾತ್ರ ಬರೆದಿದೆ. ಕೊನೆಯಲ್ಲಿರುವ ಗದ್ಯದಲ್ಲಿ 'ನಾಗವರ್ಮ ವಿರಚಿತ' ಎಂದು ಬರೆದಿದ್ದರೂ, ಮೂರನೇ ಪದ್ಯದಲ್ಲಿ "ದ್ವಿಜವಂಶಾರ್ಣವ ಪೂರ್ಣ ಚಂದ್ರನೆನಿಪಾ ದೇವೋತ್ತಮಂ ಪೇಳೆ ಸೂರಿಜನಂ ಮೆಚ್ಚಲು ಸೇವ್ಯಮಾಯ್ತು ಜಗದೊಳ್ನಾನಾರ್ಥ ರತ್ನಾಕರಂ" ಎಂದಿರುವುದರಿಂದ ಈ ಕೃತಿಯನ್ನು ರಚಿಸಿದವನು ದೇವೋತ್ತಮಕವಿ ಎಂದು ಸ್ಪಷ್ಟಪಡುತ್ತದೆ. ಈ ಪುಸ್ತಕದಲ್ಲಿ ಶಬ್ದಾಗಮ, ಕರ್ಣಾಟಕ ಶಬ್ದಸಾರ, ಕರ್ಣಾಟಕ ಸಂಜೀವಿನಿ, ರನ್ನನಿಘಂಟು, ಭಾರತ ನಿಘಂಟು, ಕವಿಕಂಠಹಾರ ಎಂಬ ಕೃತಿಗಳಿವೆ.

768

ಕೆ. ೨೮೨	**ನಾಮಲಿಂಗಾನುಶಾಸನದ ಟೀಕೆ**	ಶ್ಲೋಕ, ಟೀಕು
೨೦.೨"×೨"	ವಿಟ್ಠಲ (ವಿದಗ್ಧ ಚೂಡಾಮಣಿ)	?
೧–೧೦೨ ಪತ್ರ	೬ ಪಂಕ್ತಿ	೯೫ ಅಕ್ಷರ

ಆದಿ: .... ನಾಮಲಿಂಗಾನುಶಾಸನಂ
ವ್ಯಾಚಕ್ರೇ ನಿಪುಣಂ ಲೋಕಪ್ರೀತಯೇ ಲೋಕಭಾಷಯಾ॥
ಯಸ್ಯಜ್ಞಾನ ದಯಾಸಿಂದೋರಗಾದಸ್ಯಾನಘಾಗುಣಾಃ
ಸ್ಯೇವ್ಯತಾಮಕ್ಷ ದೀರಾಃ ಸಶ್ರಿಯೇಚಾಮೃತಾಯ ಚ॥

ಶಾಸ್ತ್ರಕರ್ತೃಗೆ ಶಾಸ್ತ್ರಾರಂಭದೊಳು ಶಿಷ್ಟಾಚಾರ ಪರಿಪಾಲನಂ ಕೃರ್ತವ್ಯಂ ಶಿಷ್ಟಾಚಾರಮೆಂಬುದು। ಮಂಗಳ ಕ್ರಿಯೆಯೆಬುದುಂ ದೇವಕೋಪಾಸ್ತಿತ ದೇವತೋಪಾಶ್ತಿ। ಅಭಿಮತ ದೇವತೋಪಾಸ್ತಿಯೆಂದುಂ ಅದಿಕೃತ ದೇವತೋಪಾಸ್ತಿ ಯೆಂದುಂ ದ್ವಿವಿದಮಪ್ಪುದು ತದ್ವಿವಿದೋವತೋಪಾಸ್ತಿ ಯುಮನೀ ಶ್ಲೋಕದಿಂ ಮಾಡಿದಪಂ। ಅಲ್ಲಿ ತದ್ದೇವತೆಗೆ ಪರಮಹತ್ವ ಖ್ಯಾಪನಾರ್ಥಮಾಗೆ ಸಮುದ್ರತ್ವಮಮಾರೋಪಿಸಲ್ಪಟ್ಟುದದೆಂತೆಂದೊಡೆ॥ ಯಸ್ಯ ಅವುಮೊಂದು। ಅಗಾದಸ್ಯ। ಮಂದರ ಮೂಲ ಕಷಗೋಕಲುಷಿತ ಮಲ್ಲದ। ಜ್ಞಾನದಯಾಸಿಂಥೋಃ। ಕ್ಷೀರಸ್ಯ ಸಿಂದುಃ ಕ್ಷೀರಸಿಂಧುಃ ಎಂಬಂತೆ ಜ್ಞಾನದಯಾಸಿಂಥೋಜ್ಞಾನದಯಸಿಂಧುವೆಂದು ಆದಾರಾದೇಯ ಭಾವದಿಂ ಸಮಸ್ತವಸ್ತು ವಿಷಯಮಪ್ಪ ಜ್ಞಾನಕ್ಕಂ ದುಃಖಮಗ್ನಾಖಿಲ ಜಗಮನುದ್ಧರಿಪ ದಯೆಗಮಾದಾರಮಾದ ಸಿಂದುವಿನx x x x ಇಂತು ಪರಬ್ರಹ್ಮ ಶಬ್ದಬ್ರಹ್ಮಂಗಳೆಂಬುಭಯ ದೇವತೋಪಾಸ್ತಿಯುಂ ಮಾಡಲ್ಪಟ್ಟುದು॥

ಅಂತ್ಯ: ಶೇಷಂತು ಜ್ಞೇಯಂ ಶಿಷ್ಟಪ್ರಯೋಗತಃ। ಉಕ್ತಶೇಷಂಗಳಪ್ಪ ನಾಮ ಲಿಂಗಂಗಳು ಶಿಶ್ಟಪ್ರಯೋಬೋದ್ಧವ್ಯಂಗಳು। ಅಂತೆ ಪೇಳೆ ಪಟ್ಟುದು। ಇತಿ ಲಿಂಗಾದಿ ಸಂಗ್ರಹವರ್ಗ್ಗಃ। ವಿದಗ್ಧ ಚೂಡಾಮಣಿನಾ ವಿಟ್ಠಲೇನ ವಿನಿರ್ಮಿತೇ ವ್ಯಾಖ್ಯಾನೇಮರಕೋಶಸ್ಯ ತೃತೀಯಃ ಕಾಂಡಂಭಿತಃ
ಜಿಹ್ವಾಪಲ್ಲವ ಸಂಸ್ತರೇಷು ಸುದಿಯಾಂ ದಂತಪ್ರಭಾ ಚಂದನೈ
ರ್ಬ್ರಿಂಬೋಷ್ಠವ್ಯಜನೇನಚೋಪಚರಿತೋ ಯದ್ವಿಪ್ರಲಂಭಜ್ವರಃ
ಜಾನೀಮೋಮರಸಿಂಹಮೇವ ತಮಿಮಂ ಸಂಯಂಜತಿ ಸಾಂಪ್ರತಂ
ವಾಣೀ ನಂದತಿ ವಿಟ್ಠಲಸ್ಯ ವಪುಷಾ ಭೂಯೋವತೀರ್ಣಂ ಭುವಿ॥
ಇದೆ ವಿದಗ್ದ ಚೂಡಾಮಣಿಃ ಸಂಪೂರ್ಣಃ ಮಂಗಲಮಹಾಶ್ರೀ॥

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಸಕ ವರ್ಷ ೧೧೩೦ನೆಯ (6–2–1130) ಸೌಮ್ಯಸಂವತ್ಸರದ ಮಾಘ ಬಹುಳ ಏಕಾದಶಿ ಗುರುವಾರದಲ್ಲು ಶ್ರೀಮನ್ನಮ್ರಾಮರ x x x x ಸಮುದ್ರಗಾಂಭೀರ್ಯ ವರ್ಯರುಂ ಸಂಚತ್ಪಂಚವಿದಾ

ವಿಷಯ : ಅಮರಕೋಶದ ಕನ್ನಡ ಟೀಕೆ.

ವಿಶೇಷ : ಶಿಥಿಲಪ್ರತಿ. ಅಕ್ಷರ ಸಣ್ಣದಾಗಿರುವುದರಿಂದ ಓದುವುದು ಕಷ್ಟ. ಆರಂಭ ಮತ್ತು ಕೊನೆಯಲ್ಲಿ ಗ್ರಂಥಕ್ಕೆ ಸಂಬಂಧಪಡದ ಕೆಲವು ಅಸ್ತವ್ಯಸ್ತ ಓಲೆಗಳಿವೆ.

769

ಕ.ಬಿ. ೩೮೧/೩	**ನಿಜಗುಣರ ವಚನಗಳು**	ವಚನ
೮.೫"×೬.೧"	?	?
೧–೭೦ ಪತ್ರ	೨೦ ಪಂಕ್ತಿ	೨೫ ಅಕ್ಷರ

ಆದಿ · ಕಂದಂ॥ ಶತ್ರುತ್ರಯಜಯಮುಂ ಪರ
ಶತ್ರುತ್ರಯವಿಜಯಮುಂತದುಭಯವಿಲಯಮುಂ
ಮಿತ್ರೋದಯಸಮಯದಿ ಪಠಿ
ಸೆ ತ್ರಿಭುವನಮುಂ ಪ್ರತಿಕ್ರಮಿಸಿ ಸುಖಿಸುತಿಹಂ ॥

ಶ್ರೀ ಗುರುವೇಂ ನಮಃ॥ ಯಿಹಪರಂಗಳು ಜಾಣನಿಗುಂಟು ಯಂಬ ಪದಕ್ಕೆ ತಾತ್ಪರ್ಯವೇನಂದರೆ ತಾನು ಕಾಮುನ ಮನಂ ಬಹುಕಾಲ ನಿಗ್ರಹಿಸದನು। ವಿಷಮುಕರ್ಮದಿಂದಕ್ಕೆ ಕೇಡು ಬರುವಂತಾದ್ದು ಸಂಗಂ ದೊರಕೊಂಡರೆ ಆಕ್ಷಣವೇ ಬಿಡಬೇಕು। ಹೇಗೆಂದರೆ ಕ್ಷೀರಸಮುದ್ರಮುಂ ಕಡೆವಾಗ ವಿಷದಿಂದಾ ವುಪದ್ರವಂ ಬಂದರು ಅಮೃತರ್ಥಂ ಪುಟ್ಟುವ ಪರ್ಯಂತಂ ದೇವಾಸುರರು ಹ್ಯಾಗೆ ಕಾರ್ಯನಿರ್ವಾಹಕಮುಂ ಮಾಡಿದರೊ ಹಾಗೆಂದು। ಮೋಕ್ಷ ಪಲ ಸಿದ್ಧಿಸುವ ಪರ್ಯಂತಂ ವಿಗ್ನಂಕೊಳಗಾಗಬಾರದರ್ಥಂ ॥ ೧ ॥

ಅಂತ್ಯ : ಜಡೆಗಟ್ಟೆ ತಿರಿದುಂಡು ಮರಳಿನೊಡಗೂಡಿ ಮೈ
ದೊಡೆದು ಬೂದಿಯನು ಸುಡುಗಾಡೊಳಾಡಿ
ಜಡರೀತಿವಡದ ರುದ್ರನಿಗೇನೊಲಿದು ಕೈ
ವಿಡಿದು ಪಾವನಚರಿತಾನೆನಿಸಿದೆ ಭವಾನೀ ॥ ೪ ॥
ಸಿರಿಸಕಲಸಿದ್ಧಸಂವಾದವಿದ್ಯೆ
ವಿಭವಾದಿ ಪರಿಕರದೊಳೀದಿನಿಸುವಿಕರಿಸಿದರು
ಗುರು ಶಂಬುಲಿಂಗದೊಳಾಗವ
ಲೇಸಿಹುದಿಳೆಯ ನರರ ಮನದೊಲದೀಯ್ಯದೆಳಸಿದೊಡೆ ಗವುರೀ ॥ ೫ ॥

ನಿಜಗುಣಶಿವಯೋಗೀಂದ್ರರ ವಚನಾ ॥

ವಿಷಯ: ವೀರಶೈವ ತತ್ತ್ವ.

ವಿಶೇಷ : ಇದರೊಂದಿಗೆ ಸಾಂಖ್ಯಸೂತ್ರತಾತ್ಪರ್ಯ (ತೆಲುಗು) ಮತ್ತು ಮಹಾವಾಕ್ಯ ಪ್ರಕರಣ ಎಂಬ ಗ್ರಂಥಗಳಿವೆ. ಪುಸ್ತಕದ ಕೊನೆಯಲ್ಲಿ ಸುಭಾಷಿತ ಗ್ರಂಥವಿರುವ ಎರಡು ಪತ್ರಗಳಿವೆ.

770

ಕೆ.ಬಿ. ೪೬೨	**ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ**	ಸಾಂಗತ್ಯ
೮.೩"×೬.೬"	ನಿಜಲಿಂಗ ಚಿಕ್ಕಯ್ಯ	ಸು. ೧೬೦೦
೧–೧೨೫ ಪತ್ರ	೧೨ ಪಂಕ್ತಿ	೧೨ ಅಕ್ಷರ

ಆದಿ : ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ
ಶ್ರೀಕಾರವನಿತ್ತು (ಶೃ) ಶ್ರೀಗುರುಗದು
ಶ್ರೀಕಮಲಾಕ್ಷವಂದಿತಗೆ
ಶ್ರೀಕರವೆತ್ತಿ ವಂದಿಸಿ ನಾನು ಧರೆಯೊಳ
ಗೀ ಕಾವ್ಯವನೆಸಗುವೆನು ॥ ೧ ॥
ಪೃಥಿವಿಗುತ್ತರದಲ್ಲಿ ಚೋರ ಚಿಕ್ಕಯ್ಯನು
ಶಿತಿಕಂಠನ ಭಕ್ತನಾಗಿ
(ಸ)ತ್ತ್ರಿಯ ಕಣ್ಬೇಟಕ್ಕೆ ಸಿಕ್ಕದೆ ಶಿರವಿತ್ತ
ಕಥೆಯ ಸಜ್ಜನರು ಲಾಲಿಪುದು ॥ ೨ ॥

ಅಂತ್ಯ : ಈ ಕೃತಿಯನು ಮನವೊಲಿದು ಕೇಳ್ದವರಿಗ
ನೇಕ ಜನ್ಮದ ದುರಿತಗಳು
ಭೀಕರವಾಗಿ ಪೋಗಿಯು ಮುಕ್ತಿಪದದೊಳು
ಪ್ರೀತಿಯಿಂ ಸುಖವಿರುತಿಹರು ॥ ೨೦೨ ॥
ಅಂತು ಸಂಧಿ ಳಕ್ಕಂ ಪದನು ೭೪೫ ಕ್ಕಂ ಮಂಗಳ ಮಹಾ
ಕಂ॥ ನಿಲುವಗಲ್ಲಪರಪ್ಪನ ಮಗನು ವೀರಪ್ಪ ಬರದಂ

ವಿಷಯ : ನಿಜಲಿಂಗ ಚಿಕ್ಕಯ್ಯನ ಕಥೆ.

ವಿಶೇಷ : ಅಲ್ಲಲ್ಲಿ ಗ್ರಂಥ ಲುಪ್ತವಾಗಿದೆ ಮತ್ತು ಕೆಲವೆಡೆ ತಿದ್ದಿದೆ. ಇದನ್ನು ತಾಳೆ ನೋಡಿದವರ ಹೆಸರುಗಳು ಗ್ರಂಥದ ಕೊನೆಯಲ್ಲಿದೆ. (Compared by K. Raghavachar and P. M. Kottrayya Sastry.

771

ಕೆ. ಬಿ. ೨೬೫/೨	**ನಿಜಲಿಂಗ ಶತಕ**	ವಾರ್ಧಕ ಷಟ್ಪದಿ
೮.೧"×೬.೫"	?	?
೫–೧೨ ಪತ್ರ	[illegible] ಪಂಕ್ತಿ	೩೫ ಅಕ್ಷರ

ಆದಿ: ನಿಜಲಿಂಗ ಶತಕಂ
ನಿತ್ಯ ನಿರುಪಮ ವಿಶ್ವಮೂರ್ತಿ ನಿಜಲಿಂಗೇಶ
ನುತ್ತಮೋತ್ತಮವೆನಿಪ ಶತಕವನು ಬಲ್ಲಂತೆ
ಬಿತ್ತರಿಪ ವಾರ್ದಿಕಷಟ್ಪದಿಗಳಿಂದರುಪವಿತ್ತು ಸುಜನರು ಕೇಳ್ವುದೂ ॥
ಗೋಪ ಗೋಪತಿ ನಮಿತ ಗೋಕರ್ನ ಸದ್ವೃಷ
ಗೋಪುತ್ರಿಯರ್ದಾಂಗ ಗೋಜಃತ ಶತೃಧರ
ಗೋಪವಾಹನ ನಮಿತ ಗೋತನೆಯ ಶಿರಪತ್ರ ಗೋವಸನ ಪಂಚಾನನಾ
ಗೋಪುತ್ರಿ ಸದ್ಗಮನ ಗೋರಹಿತ ಖಳಸೀಕ್ಷ
ಗೋಪ್ರಿಯ ಶಶಿದಹನ ಗೋತ್ರಿತಯ ಘನಮಹಿಮಾ
ಗೋತ್ರೇಚಧರನಾಶ ನಿಜಲಿಂಗ ಭವಭಂಗ ಶರಣುಜನ ಭಕ್ತಸಂಗಾ ॥ ೧ ॥

ಅಂತ್ಯ : ಯಿಂತು ರುದ್ರಾಣಿಯರ ಸಖನದ್ರಿಬಾಣನ ಸಮುದ್ರಾರ್ತ್ಯಭವನೌಳಿ ಭದ್ರನಾಗಿರುತಿರ್ಪ ವೀರಭದ್ರನಂ ಪಡೆದ ಬಲಭದ್ರನ। ರಜತಮಿತ್ರನಂ ಕ್ಷುದ್ರ ಅಂಕಸುರ ಸಂಹ್ಮಾರ ರುದ್ರನಂ ನಾನಾ ಕಚವುಪಾದ ಪದ್ಮನಂ ಹರದುರಿತಾದ್ರಿ ಕುಲಿಶನಂ ತುಂಗಭದ್ರ ತೀರದೊಳೆಸೆವ ದ್ರುಮ ಭವಪುರ ವಾಸನಹುದಕ್ಕೈ ನಿಂಜಲಿಂಗ ಭವಭಂಗ ಶರಣುಜನ ಭಕ್ತಸಂಗಾ ಸಿಜಲಿಂಗ ಶತಕ ಸಂಪೂರ್ನ ॥ ೧೦೦ ॥

ವಿಷಯ : ವೀರಶೈವ ತತ್ತ್ವ.

ವಿಶೇಷ : ಮೋಡಿಬರಹ. ಪ್ರತಿಪದ್ಯವೂ " ನಿಜಲಿಂಗ ಭವಭಂಗ ಶರಣು ಜನ ಭಕ್ತಸಂಗಾ " ಎಂದು ಮುಗಿಯುತ್ತದೆ. ಇದೇ ಪುಸ್ತಕದಲ್ಲಿ ಸಿದ್ಧೇಶ್ವರ ವಚನವೆಂಬ ಮತ್ತೊಂದು ಕೃತಿ ಇದೆ.

772

ಕೆ.ಬಿ. ೪೪೨	**ನಿರಾಳಮಂತ್ರಗೋಪ್ಯ**	ವಚನ
೮.೩"×೬.೬'	?	?
೧–೧೦೦ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ನಿರಾಳಮಂತ್ರ ಗೋಪ್ಯ ಪ್ರಾರಂಭ :
ಪ್ರಥಮದಲ್ಲಿ ನಿಷ್ಕಳ ಲಿಂಗಸ್ಥಲವಾದದು ವಚನಂ ‖ ಷಡ್ವಿಧ ಚಕ್ರಂಗಳಿಲ್ಲ ದಂದು ಷಡ್ವಿಧಶಕ್ತಿಗಳಿಲ್ಲದಂದು ಷಡ್ವಿಧ ಭಕ್ತಿಗಳಿಲ್ಲದಂದು ಷಡ್ವಿಧ ಹಸ್ತ ಗಳಿಲ್ಲ ದಂದು ಷಡ್ವಿಧ ಕಲೆಗಳಿಲ್ಲದಂದು ಇವೇನು ಇಲ್ಲದಂದು ಅತ್ತಿತ್ತಲೆ X X X X ನಿರಂಜನ ನಿರ್ಭರಿತ್ತನಿಃಶೂನ್ಯ ಅಪರಂಪರ ನಿಷ್ಕಳ ಲಿಂಗ ತಾನೆ ನೋಡಾ ಝೇಂಕಾರ ನಿಜಲಿಂಗ ಪ್ರಭುವೇ ‖ ೧ ‖

ಅಂತ್ಯ : ಅತ್ತತ್ತಲೆ ಚಿದ್ಘನ ಚಿದಾನಂದ ಚಿನ್ಮಯ ನಿಃಷ್ಕಳ ನಿರವಯ ಲಿಂಗ ತಾನೆ ನ್ನೋಡಾ ಝೇಂಕಾರ ನಿಜಲಿಂಗ ಪ್ರಭುವೇ ‖ ೧೩ ‖
ಇಂತು ಸ್ಥಲ ೧೮ ಕ್ಕೆ ವಚನ ೭೭೭ಕ್ಕೆ ನಿರಾಳ ಮಂತ್ರಗೌಪ್ಯಂ ಸಂಪೂರ್ಣಂ। ಪುರಾತನರ ವಚನವು ಸಮಾಪ್ತಂ‖
ಶ್ರೀಗುರು ಬಸವಲಿಂಗಾಯನಮಃ ‖
ಶಾಲಿವಾಹನ ಶಕ ೧೭೭೬ಳ ಶುಭಕ್ರತುನಾಮ ಸಂವತ್ಸರದ ವೈಶಾಖ ಬಹುಳ ೧೩ ಸೋಮವಾರದಲ್ಲು ಮಾತ್ರಕೆ ಕಾಪಿ ಮಾಡಲಾಯಿತು ಯಂತಾ ಇದೆ. ಕನಕಗಿರಿ ಕಲ್ಲುಮಠದ ನಿರ್ಣಯ ಚರಮೂರ್ತಿ ಚನ್ನಮಲ್ಲ ಸ್ವಾಮಿ ಗುರು ರುದ್ರಸ್ವಾಮಿಗಳ ಪುಸ್ತುಕದ ಮೇಲೆ ಕಾಪಿ ಮಾಡಿ ಇರುತ್ತೆ ೨೯—೨—೨೯೩೭ ಲ್ಲು.

ವಿಷಯ : ವೀರಶೈವ ವೇದಾಂತ.

ವಿಶೇಷ : ಸುಂದರಾಕ್ಷರ.

773

ಕೆ. ೧೨೧/೧	**ನಿರ್ದುಃಖ ಸಪ್ತಮಿ (ನೋಂಪಿಯ ಕಥೆ)**	ಗದ್ಯ
೬.೩"X೧.೫"	?	ಸು. ೧೫೦೦
೧–೧೬ ಪತ್ರ	೮ ಪಂಕ್ತಿ	೨೮ ಅಕ್ಷರ

ಆದಿ : ಜಿನಾದೀಶಮಹಂ ನತ್ವಾ ವಕ್ಷೇ ನಿರ್ದುಃಖ ಸಪ್ತಮಿ।
ಕತ್ವಾಂ ಭವ್ಯ ಜನಾನಂಥಕಾರಿಣಿ ಮೋಕ್ಷಲಿಪ್ಸಯಾ ‖ ೧ ‖
ಜಿನಗೆಱಗಿ ಪೇಳ್ದಿನೊಲವಿಂ
ದನುಪಮ ನಿರ್ದುಃಖ ಸಪ್ತಮಿಯ ಸತ್ಕಥೆಯಂ
ಜನತತಿ ಹಿತಮಂ ನುತಮಂ
ಜನನ ಜರಾಮರಣ ಕಾರಣಮದಱಿಂ ‖ ೧ ‖

ಅಂತ್ಯ : ನಿರ್ದುಃಖ ಸಪ್ತಮಿಯ ನೋಪಿಯಂ ನೋ....ತು ಜ್ಜಯಿಸಿ ಸ್ವರ್ಗಮಂ ಪಡೆದರು ||

ಕಂ || ಯಿಂತು ನೋಂಪಿಯು ಕತೆಯುಂ
ಸಂತಸದಿಂದೋದಿ ಕೇಳ್ದನೋಪವರ್ಗ್ಗೆಲಂ
ಕಂತುಹರ ಜಿನನ ಪದಮದು
ಮುಂತಿಪ್ಪುದು ದುಃಖಹರಣ ಕಾರಣ ಸಹಿತಂ || ೧ ||

ಯಿಂತು ನೋಂಪಿಯಂ ಸವಿದಾನವಾಗಿ ನೋತವರುಂ ನೋನಿಸಿದವರುಂ ಕ್ರಮದಿಂನೊಡಂಬಟ್ಟವರುಂ | ಮುಕ್ತಿಲಕ್ಷ್ಮೀಕಾಂತರಪ್ಪರು || ೦ ||

ನಿರ್ದುಃಖ ಸಪ್ತಮಿಯ ನೋಂಪಿಯು ಕಥೆ ಸಮಾಪ್ತ ಮಂಗಳ ಮಹಾ ಶ್ರೀ
ಮುನಿ ಚಂದ್ರವರ್ನಿಗಳಿಗಂ
ಘನತರ ದುಃಖಹರ ನಿಧುಃಖ ಸಪ್ತಮಿ ಕತಯುಂ
ದಿನ....ರ್ಗವಾದಾದಸಿ
ಮನದರ್ತಿಯಿಂದೆ ಬರೆದ ಸಪ್ತಮಿ ಕಥೆಯುಂ || ಶ್ರೀ

ವಿಷಯ : ನಿರ್ದುಃಖ ಸಪ್ತಮಿ ನೋಂಪಿಯು ಕಥೆ.

ವಿಶೇಷ : ಗರಿಗಳು ಅಂಚಿನಲ್ಲಿ ಮುರಿದಿವೆ. ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ತ್ರಿಭುವನ ಕೋಶವೆಂಬ ಇನ್ನೊಂದು ಗ್ರಂಥವಿದೆ.

774

ಕೆ.ಎ. ೨೮೪/೬	**ನಿರ್ವಾಣಲಕ್ಷ್ಮೀಪತಿ ಸ್ತೋತ್ರ**	ವೃತ್ತ
೧೨.೯"×೮.೨"	ಬೊಪ್ಪಣ್ಣ ಪಂಡಿತ	ಸು ೧೧೮೦
೧–೬ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ನಿರ್ವಾಣ ಲಕ್ಷ್ಮೀಪತಿ ಸ್ತೋತ್ರಂ ||
ಶ್ರೀಯುಂ ನಿರ್ಮಳವಂಶಮುಂ ವಿಭುತೆಯುಂ ಶಾಸ್ತ್ರಾರ್ತ್ಥವೇದಿತ್ವಮುಂ
ಕಾಯಾಯುಸ್ಸ್ಥಿರಭಾವನುಂ ಮನುಜಿನಾವಂಗಾದೊಡಂ ಮತ್ತುಪಾ
ದೇಯಂ ಹೇಯಮಿದೆಂದು ತಾಂ ಸ್ವಪರ ತತ್ವಾತತ್ವಮುಂ ಕಾಣದಂ
ಗಾಯೆಲ್ಲಂ ವಿಫಲಂಗಳೆಂದಱಿಪಿದೈ ನಿರ್ವ್ವಾಣಲಕ್ಷ್ಮೀಪತೀ || ೧ ||

ಅಂತ್ಯ : ಭವ ವಿಧ್ವಂಸರವಾಸ್ತವ ಸ್ತವಮನೊಂದಂ ಪೇಳಿಮೆಂಬೊಂದು ಭ
ವ್ಯವರ ಪ್ರೇರಣೆಯಿಂದಮಿಂತು ಸುಜನೋತ್ತಂಸಂ ಲಸದ್ವೃತ್ತ ಸು

ಚ್ಛವಿ ಮುಕ್ತಾಗಣದಿಂದ ನಿರ್ಮಿಸಿದುದೀ ನಿರ್ವಾಣ ಲಕ್ಷ್ಮೀಪತಿ
ಸ್ತವ ವಿಭ್ರಾಜಿಕೆ ಭವ್ಯಕಂಠಕಲಿತಂ ನಕ್ಷತ್ರಮಾಲೋಪಮಂ ॥ ೨೮ ॥

ವಿಷಯ : ನಿರ್ವಾಣಲಕ್ಷ್ಮೀಪತಿಯ ಸ್ತುತಿ.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ. ಶಕಟರೇಫ ಪ್ರಯೋಗವಿದೆ
ಇದರಲ್ಲಿ ಲೋಕಸ್ವರೂಪ'ವೇ ಮೊದಲಾದ ಇತರ ೧೧ ಗ್ರಂಥಗಳಿವೆ.

775

ಕೆ.ಬಿ. ೧೪೯/೨	ನಿರ್ವಾಣಲಕ್ಷ್ಮೀಪತಿ ಸ್ತೋತ್ರ	ವೃತ್ತ
೭.೭"×೬.೨"	ಬೊಪ್ಪಣ್ಣ ಪಂಡಿತ	ಸು. ೧೧೮೦
೯೦-೨೩ ಪತ್ರ	೧೬ ಪಂಕ್ತಿ	೨೨ ಅಕ್ಷರ

ಆದಿ: ವೃತ್ತಂ॥ಶ್ರೀಯುಂನಿರ್ಮಳವಂಶಮುಂ ವಿಭುತೆಯುಂ ಶಾಸ್ತ್ರಾರ್ಥವೇದಿತ್ವಮುಂ
ಕಾಯಾಯುಸ್ಥಿರ ಭಾವಮುಂ ಮನುಜನಾವಂಗಾದೊಡಂ ಮತ್ತುಪಾ
ಧೇಯಂ ಹೇಯಮಿದೆಂದು ತಾಂ ಸ್ವಪರತತ್ತ್ವಾತತ್ವಮುಂ ಕಾಣದಂ
ದಾಯೆಲ್ಲಂ ವಿಫಲಂ ದಲೆಂದರಿಪಿದೈ ನಿರ್ವಾಣ ಲಕ್ಷ್ಮೀಪತೀ ॥ ೧ ॥

ಅಂತ್ಯ : ಭವವಿಧ್ವಂಸನವಾಸ್ತು ವಸ್ತುವನೊಂದಂ ಪೇಳಿ ನೀವೆಂದು ಭ
ವ್ಯ ವರ ಪ್ರೇರಣೆಯಿಂದಮಿಂತು ಸುಜನೋತ್ತಂಸಂ ಲಸದ್ವೃತ್ತ ಸು
ಚ್ಛವಿಮುಕ್ತಾಗಣದಿಂದ ನಿರ್ಮಿಸಿದುದೀ ನಿರ್ವಾಣಲಕ್ಷ್ಮೀಪತೀ
ಸ್ತವನಂ ಭ್ರಾಜಿತಭವ್ಯಕಂಠಕವಿತಂ ನಕ್ಷತ್ರಮಾಲೋಪಮಂ ॥ ೨೮ ॥

ವಿಷಯ : ನಿರ್ವಾಣಲಕ್ಷ್ಮೀಪತಿಯ ಸ್ತುತಿ.

ವಿಶೇಷ : ಈ ಪುಸ್ತಕದಲ್ಲಿ ತ್ರಿಪುರದಹನದ ಚರಿತ್ರೆಯೆಂಬ ಮತ್ತೊಂದು ಗ್ರಂಥವಿದೆ

776

ಕೆ. ೩೧೫/೧	ನಿಷ್ಕಲಲಿಂಗ ಚಿದಾನಂದ ಲೀಲೆ	ವಚನ
೭.೧"×೨.೧"	ಗುರುಬಸವೇಶ್ವರ	೧೪೩೦
೧–೧೨೧ ಪತ್ರ	೧೨ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ x x x ನಿಷ್ಕಲಲಿಂಗ ಚಿದಾನಂದ ಲೀಲೆ
ಅಥ ಬ್ರಹ್ಮಸ್ವರೂಪಂ ನಿರೂಪ್ಯತೆ। ಸಚ್ಚಿದಾನಂದಾತ್ಮಕವಾದ ನಿರ್ಗುಣಬ್ರಹ್ಮ

ಸ್ವರೂಪವಮದೆಂತೆನೆ ಸತ್ಯಂ ಜ್ಞಾನಮನಂತಂ ಬ್ರಹ್ಮ ಪ್ರಜ್ಞಾನಮಾನಂದಂ ಏಕಮೇವಾದ್ವಿತೀಯಂ ಯಂಬ ಉಪನಿಷದ್ವಾಕ್ಯಂಗಳಿಂ ಪ್ರತಿಪಾದಿಸಲು ಪಟ್ಟ ಶುದ್ಧ ಚಿನ್ಮಾತ್ರ ವಸ್ತುವೆ ಪರಬ್ರಹ್ಮವೆಂದು ನಿರ್ಧರಿಸಲ್ಪಟ್ಟತ್ತು। ಯಿಾ ಶ್ರುತಿಗಳಿಗೆ ಟೀಕೂ—ಸತ್ಯಂ ತಂನ್ನಿಂದ ತಾನೆ ಉಂಟಾದಂಥಾದ್ದು।

ಅಂತ್ಯ: ಯಿಷ್ಟಲಿಂಗ ಭಿಂನವಾದಲ್ಲಿ ತಂನ್ನ ಸಾವಿಂಗೆ ಮುಂದೆ ದಿನಗಣನೆಯೆ ಯಿಷ್ಟ ಪ್ರಾಣಿಗಳೆನಿಸಿದವರು ಚಿಗಲಂಗಣ ಹಿರಲಿಂಗಂಣ ತುಪಾಕಿ ಶಾಂತೈಯ ಅನುಮಿಷಯ್ಯನವರು ಯಿವರು ಯಿಷ್ಟಲಿಂಗ ಪ್ರಾಣಿಗಳೆನಿಸುವರೂ। ಪ್ರಾಣಲಿಂಗ ಸಂಪ್ರುಂಧಿಗಳಿಗೆ ಯಿಷ್ಟಲಿಂಗವೆಂಬ ಕುರುಹೆಲ್ಲಿಯದು ಭಾವ ಲಿಂಗ ಪರಿಣಾಮಿಗಳಿಗೆ ಯಿಷ್ಟಪ್ರಾಣವೆಂಬ ನೆನಹೆಲ್ಲಿಯದು ಹಾಗೆ ಅವರವರ ಸ್ವಯಿಚ್ಛಾಚರಣೆ ಬೇರೆಬೇರೆಂದೆನಬೇಕಲ್ಲದೆ ಸರ್ವರಿಗೂ ವೊಂದೆಯಾಚರಣೆ ಯಂನಬಾರದೂ। ಇತಿ ಶ್ರೀ ನಿಷ್ಕಲ ಚಿದಾನಂದ ಲೀಲಾಯಾಂ ಗುರುಬಸವೇಶ್ವರ ವಿರಚಿತಾಯಾಂ ಸಮಾಪ್ತಾ ಮಂಗಳ ಮಹಾಶ್ರೀ।

ವಿಷಯ: ವೀರಶೈವ ವೇದಾಂತ.

ವಿಶೇಷ: ಇದೇ ಕಟ್ಟನಲ್ಲಿ ಮಂತ್ರಸಂಗ್ರಹ ಎಂಬ ಕೃತಿಯಿದೆ.

777

ಕೆ. ೪೮೫	**ನಿಷ್ಕಳಂಕ ಮಲ್ಲಿಕಾರ್ಜುನನ ವಚನಗಳು**	ವಚನ
೧೧.೧" × ೧.೨"	ವೋಳಿಗೆಯ ಮಾರಯ್ಯ	೧೧೬೦
೩—೧೪೦ ಪತ್ರ	೬ ಪಂಕ್ತಿ	೪೦ ಅಕ್ಷರ

ಆದಿ: ರಿಯರ ತೋರದಿರಾ ನಿಷ್ಕಳಂಕ ಮಲ್ಲಿಕಾರ್ಜುನಾ ॥ ೩ ॥ ತೊಗಲ ಕೈಯ್ಯಲ್ಲಿ ಶಿಲೆಯ ಲಿಂಗ್ಗವ ಹಿಡಿದು ಮಂಣ ಪರಿಯಾಣದಲ್ಲಿ ವೋಗರವನಿಕ್ಕಿ ಲಿಂಗ್ಗಕ್ಕೆ ನೈವೇದ್ಯವ ತೋರುವ .... ಗರಸುವದುದಿಲ್ಲ ಕೈ ನೈವೇದ್ಯದ ರುಚಿಯನರಿದದಿಲ್ಲ ವೊಗಳು ಶುದ್ಧವಿಲ್ಲದೆ ಮುಟ್ಟ ಅರ್ಪಿತ ವೆಂದ್ದಡೆ ಮೆಚ್ಚುವರೆ x x x ನಿಷ್ಕಳಂಕ ಮಲ್ಲಿಕಾರ್ಜುನನಲ್ಲಿ ಪ್ರಾಣ ಲಿಂಗ ಸಮರ್ಪ್ಪಣೆ ॥ ೪ ॥

ಅಂತ್ಯ : ನಿಚ್ಚಣಿಕೆಯನೇರಿ .... ವುದಕ್ಕೆ ಮುಂದ್ಶೊಂದ್ದು ಆಟ .... ಯಲ್ಲಿ ಬಯಕೆ ಲಕ್ಷಿಸಿಯಿದ್ದಿತ್ತು ಬಯಕೆವುಳ್ಳಂನ್ನಕ್ಕ ನಿಚ್ಚಣಿಗೆಯ ಯೆತ್ತ.... ಯಿಳುಹುತ್ತಾ ಯಿಾ ಕೃತ್ಯದ .... ಸಾಯಲಾರೆ ಯೆಂನ್ನಯ್ಯಗೊಂದು ಗೊತ್ತ ತೋರಾ ಯೆಂನ್ನಯ್ಯ ಪ್ರಿಯ ಯಿಂಮ್ಮಡಿ ನಿಸ್ಕಳ .. ಮಲ್ಲಿಕಾರ್ಜುನಾ ॥ ೪೫೩ ॥ ಮಂಣನಿತ್ತು ನಿಂನ ಕಂಡ್ಡೆಹೆನೆಂದಡೆ ಜಗದ್ಭರಿತ ನೀನು। ಹೊಂನನಿತ್ತು ಕಂಡ್ಡೆಹೆನೆಂದರೆ ಹೀರ

ವಿಷಯ : ವಿರಶೈವ ತತ್ತ್ವ.

ವಿಶೇಷ : ಪ್ರತಿ ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಕೆಲವು ಪತ್ರಗಳು ಮುರಿದು ಹೋಗಿವೆ. ಪ್ರತಿಯ ಕೊನೆಯಲ್ಲಿ ಬೇರೆ ವಚನಗಳನ್ನುಳ್ಳ ಮುರಿದು ಹೋದ ೫ ಪತ್ರಗಳಿವೆ. ಈ ವಚನಗಳಲ್ಲಿ ಇಮ್ಮಡಿ ನಿಷ್ಕಳಂಕ ಮಲ್ಲಿಕಾರ್ಜುನಾ ಎಂಬ ಅಂಕಿತವಿರುವ ರಾಣಿ ಮಹಾದೇವಿಯವರ ವಚನಗಳೂ ಸೇರಿವೆ.

778

ಕೆ.ಬಿ. ೩೫	**ನಿಷ್ಕಾಮ ವಚನಾನುಮಾಲೆ**	ಉತ್ಸಾಹ ರಗಳೆ
೭.೯″ × ೬.೪″	ನಿರಂಜನಾರ್ಯ	ಸು ೧೭೫೦
೧–೨೩ ಪುಟ	೧೨ ಪಂಕ್ತಿ	೨೦ ಅಕ್ಷರ

ಆದಿ : ನಿಷ್ಕಾಮ ವಚನ.

ಗಗನ ಲಿಂಗೇಶ ಪಾಹಿ। ಗಗನ ಲಿಂಗೇಶ ಪಾಹಿ
ಗಗನ ಲಿಂಗೇಶ ಪಾಹಿ। ಗಗನ ಲಿಂಗ ಪಾಹಿ ಮಾಂ
ದುಮ್ಮಿಶ್ರಾಲನ್ನಿ ತತ್ವ। ದುಮ್ಮಿಶ್ರಾಲನ್ನಿ ಬ್ರಹ್ಮ
ದುಮ್ಮಿಶ್ರಾಲನ್ನಿ ಪರಮ। ದುಮ್ಮಿಶ್ರಾಲನ್ನಿರೋ
ಅನುಪಲ್ಲವಿ ॥ ಧರೆಯೊಳಧಿತ ಘನಪುರೀಶ। ಪರಮಧನ್ಯ ಪಾರಮೇಶ
ದುರಿತ ತಮವಿನಾಶ ಸಲಹೊ ಭರಿತ ಗಗನಲಿಂಗನೇ ॥ ೧ ॥

ಅಂತ್ಯ : ಅಂಬುಧರನ ರಾಣಿ ಕಾಳಿ। ಕಾಂಬಯೆನಿಸಿ ಕೊಂಬ ಸುರಕ
ದಂಬನಮಿತೆಯಾದ ಘನಪು। ರಾಂಬ ಜಯತು ಜಯತು ಜೇ ॥ ೧೨೮ ॥
ಮಂಗಳಂ ಪರಾಪರಂಗೆ। ಮಂಗಳಂ ಚರಾಚರಂಗೆ
ಮಂಗಳಂ ನಿರಂಜನಾಂಗ। ಲಿಂಗ ನಗರವಾಸಗೇ ॥ ೧೨೯ ॥

ಇತಿ ಶ್ರೀಮದ್ಗಗನಾನನ್ದತಂದೆ ನಿರಂಜನಾವಧೂತ ವಿರಚಿತೆ ಕಾಮವಚನಾನು ಮಾಲೆ ಕನ್ನಡ ಕಥಾಸಾರೆ ಮಂಗಳಂ ||

ವಿಷಯ : ಕಾಮನ ಕಥೆ.

ವಿಶೇಷ : ಸ್ಫುಟಾಕ್ಷರ. ಪ್ರತಿಪುಟವನ್ನು ಎರಡು ಭಾಗಗಳಾಗಿ ವಿಭಾಗಿಸಿ ಗ್ರಂಥವನ್ನು ಬರೆದಿದೆ.

779

ಕೆ. ಎ. ೨೫೦/೨	**ನೀತಿಗ್ರಂಥ**	**ಶ್ಲೋಕ, ಪದ್ಯ**
೧೩"×೮"	?	?
೧—೫೭ ಪತ್ರ	೨೦ ಪಂಕ್ತಿ	೧೫ ಅಕ್ಷರ

ಆದಿ : ಸಂಸ್ಕೃತ ಮತ್ತು ಕನ್ನಡ ನೀತಿ ಗ್ರಂಥ ||

ಕ್ಷುಧಾ ತೃಷಾ ಭಯದ್ವೇಷೋ
ರಾಗೋಪೋಹಶ್ಚ ಚಿಂತನಂ
ಜರಾ ರುಜಾ ಚ ಮ್ರುತ್ಯುಶ್ಚ
– ಸ್ವೇದ ಖೇದಮಧೋಗತಿಃ || ೧ ||

x x x x

ಗರಳಾಂಭಃ ಪೂರ್ನ ಕುಂಭಾವಳಿಯಿರೆ ಚತುರಾಶೀತಿ ಲಕ್ಷಪ್ರಮಾಣಂ
ಬರಲೊಂದಿರ್ದ್ದರ್ಲ್ಲಿ ಪೂರ್ನ್ನಾರ್ಮ್ರುತವಿರೆ ಜಾತ್ಯಂಧಕಂ ರತ್ನವನೊಂ
ದಂ ಯೋಮಭಾಗಕ್ಕಡರೆ ಮಿಡಿಯೆ ತದ್ರತ್ನಮಂ ದುಗ್ಧಕುಂಭೋ
ದರದೊಳ್ ಬೀಳ್ತಪ್ಪಡಂ ತಪ್ಪುಗುಂ ಭವಭವದೊಳ್ ದುರ್ಲಭಂ
ಮಾನುಷತ್ವಂ || ೪ ||

ಅಂತ್ಯ : ಹಣವುಳಿಯದೆ ಬಪ್ಪುದು ಸ
ದ್ಗುಣದಿಂ ವಸುಮತಿಯನಾಳ್ವ ಧರಣೀಪತಿಗಳ್
ಗುಣಕೊಳಿಲ್ಲದೆ ಪ್ರಜೆ ಕೆಡೆ
ಪೆಣನಪ್ಪಂ ರಾಜನಿಂತು || ೨೫ ||

x x x x

ಯೇಕ ... ಣೈಕೇನ ಹಂನ್ಯತೆ
ಸ ಬಂಧುರಾಷ್ಟ್ರ ರಾಜಾನಾಂ ದುರ್ಮಂತ್ರ್ಯೈಕೇನ ಹನ್ಯತೆ
ತೀಕ್ಷ್ಣಮಲ್ಪ ಪ್ರದಾತಾರಂ ಮತ್ತಂ ....
ವ್ಯಸನೆ ಸರ್ವಭೂತಾ ನಿತಾಭಿದಾನಂತಿ ಪಾರ್ಥಿವಾ ॥

ವಿಷಯ : ನೀತಿಗಳು.

ವಿಶೇಷ : ಇದು ನೀತಿ ಪದ್ಯ ಮತ್ತು ಶ್ಲೋಕಗಳ ಸಂಗ್ರಹವಾಗಿದೆ ಪತ್ರದ ಒಂದು ಕಡೆ ಬರೆದಿದೆ. ಈ ಪುಸ್ತಕದಲ್ಲಿ ಧರ್ಮನೀತಿ, ಉಮಾಷ್ಟೋತ್ತರ, ಅನ್ನಪೂರ್ಣಾಷ್ಟಕ, ತಾಂಡವಸ್ತೋತ್ರ, ಹರಿಹರಾಷ್ಟಕ, ಮಲ್ಹಣಸ್ತೋತ್ರ ಮೊದಲಾದ ಗ್ರಂಥಗಳಿವೆ.

780

ಕೆ. ೫೨೮	**ನೀತಿನಿರ್ಣಯ**	ಸಾಂಗತ್ಯ
೯.೬″ × ೧.೭″	ಚಿದಾನಂದ	ಸು. ೧೬೮೦
೧-೧೯೭ ಪತ್ರ	೮ ಪಂಕ್ತಿ	೪೮ ಅಕ್ಷರ

ಆದಿ : ಶ್ರಿಮದವರನಾಗನಾಯಕರ ಮ
ಹಾಮಣಿ ಮಕುಟ ಮಾಣಿಕ್ಯ
ಸ್ತೋಮ ವಿರಾಜಿತ ಚರಣ ಸಲಹೊ ಜಗ
ತ್ಸ್ವಾಮಿ ಜಿನೇಂದ್ರ ಮಂದಾರಾ ॥

X X X X

ಪರಮಜಿನೇಂದ್ರ ಪಾದಾಂಬುಜ ಮಧುಕರ
ವರಚಿದಾನಂದ ವಿರಚಿತಾ
ಸುರುಚಿರ ನೀತಿನಿರ್ನ್ನಯದೊಳು ಮಂಗಲಾ
ಕರಮೆಸೆದುದು ಸಂಧಿಯೊಂದೂ ॥ ೧೬೨ ॥

ಸಂಧಿ ೧ಕ್ಕಂ ಮಂಗಲ ಮಹಾಶ್ರೀ ॥

ಅಂತ್ಯ : ರಾಜಾದಿರಾಜ ರಾಜ್ಯಾಂಗನ ರಮಣ ಸ
ದ್ರಾಜ ಮಂದಾರಸೆನಿಪಾ
ರಾಜೇಂದ್ರನೊಳು ಸಂಬೋಧನ ವರದಿ
ದುರೋಜೆ ಸಂಬೋದನಾ ಸಂದಿ ॥ ೨೨೮ ॥

ಪರಮಜಿನೇಂದ್ರ ಪಾದಾಂಬುಜ ಮಧುಕರ
ವರಚಿದಾನಂದ ವಿರಚಿತಾ
ನಿರುಪಮ ನೀತಿ ನಿರ್ನ್ನಯದೊಳು ಮಂಗಲಾ
ಕರಮಿವು ಪದಿನಾರು ಸಂದಿ ॥ ೨೨ ॥

ಅಂತು ಸಂದಿ ೧೬ಕ್ಕಂ ಪದನು ೨೫೨೦ಕ್ಕಂ ಮಂಗಲಮಹಾಶ್ರೀ ಶಾಲಿವಾಹನ ಶಕ ವರ್ಷ ೧೬೭೬ನೆಯ ಆಂಗೀರಸ ಸಂವತ್ಸರದ ವೈಶಾಖ ಸುದ್ದ ೧೦ಲ್ಲು ಶ್ರೀಮದ್ಬೆಳ್ಗುಳ ಗಿರೀಂದ್ರ ಮಸ್ತಕವಿರಾಜಮಾನ ಶ್ರೀ ಗೊಮಟೇಶ್ವರ ಸ್ವಾಮಿ ಪಾದಾರವಿಂದ ಮಧುಕರರೆನಿಸಿದ ಬೆಳ್ಗುಳದ ಐಯ್ಯಪ್ಪಾಜಿ ಪುತ್ರ ರಾಯ್ಯನವರ ಕಿರಿಸೂನು ವಿಜೆಯನು ನೀತಿ ನಿರ್ನ್ನಯದ ಪುಸ್ತಕಕ್ಕೆ ಭದ್ರಂ ಭೂಯಾತ್ ವರ್ಧತಾಂ ಜಿನಶಾಸನಂ । ವಿಜೆಯನ ಲಿಖಿತ ಜಯ ಮಂಗಳಂ ॥

ವಿಷಯ : ನೀತಿಗಳು.

ವಿಶೇಷ : ಕವಿ ಚಿಕ್ಕದೇವರಾಜನನ್ನು ಹೊಗಳಿದ್ದಾನೆ. ಆದಿಯಲ್ಲಿರುವ ಮೂರು ಪತ್ರಗಳಲ್ಲಿ ಕೆಲವು ರೇಖಾ ಚಿತ್ರಗಳಿವೆ.

781

ಕೆ.ಎ. ೨೮೪/೧	**ನೀತಿರಸಾಯನಂ**	ಕಂದ, ವೃತ್ತ
೧೨.೯" × ೮.೨"	?	?
೧-೧೦ ಪತ್ರ	೨೦ ಪಂಕ್ತಿ	೨೬ ಅಕ್ಷರ

ಆದಿ : ನೀತಿ ರಸಾಯನಂ ॥
ಶ್ರೀಯುಂ ಗುಣಮುಂ ಸೌಖ್ಯಮು
ಮಾಯುಂ ಸೌಭಾಗ್ಯ ರೂಪು ಕುಲ ಜಾತಿಗಳೆಂ
ಬಾಯತಿಕೆವಡೆದು ದ
ಯೆಯೆಂಬಾ ಮತಮಂ ಸೇವೆಗೆಯ್ಯಲೇಂ ತೀರದುದೇ ॥ ೧ ॥

ಅಂತ್ಯೆ : ಸ್ಪರ್ಶನವೆಂದು ಹಸ್ತವಿಷಯಂ ರಸನೇಂದ್ರಿಯನಯ್ದು ಪ್ರಣದಿಂ ಪರಿ
ಕಿಸೆ ಗಂಧಮುಂ ತಾನೆರಡಪ್ಪುದು ಭಾವಿಸೆ ಚಕ್ಷುಷೇಂದ್ರಿಯಂ ವಿವ
ರಿಸೆ ವರ್ಣಮಯ್ದು ತೆಱನಪ್ಪುದು ಶ್ರೋತ್ರದ ಸೋಲ ಪೇಳುವಂ ಬರ
ಲಣಮಿಯಲೆಂದೊಡಱಿಯೆಂ ಪೊಗಳ್ವಪ್ಪುದು ಉಂನತಿಕ್ಕೆಯುಂ ॥ ೯೯ ॥

ನೀತಿರಸಾಯನತಕ್ಕಂ
ಜ್ಯೋತಿರ್ಮಯ ಪೇಳ್ವ ಕೇಳ್ವ ಭವ್ಯಜನಕ್ಕಂ
ನೀತಿರಸಭರಿತಮಕ್ಕುಂ
ನೀತಿಯ ನುಡಿವಂಗನೀತಿಯಾಗದಮೋಘಂ ॥ ೧೦೦ ॥

ವಿಷಯ : ನೀತಿಗಳು.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ. ಈ ಗ್ರಂಥದಲ್ಲಿ ಜಿನಾಕ್ಷರ ಮಾಲೆಯೇ ಮೊದಲಾದ ಇತರ ೧೧ ಗ್ರಂಥಗಳಿವೆ. ಶಕಟರೇಫ ಪ್ರಯೋಗವಿದೆ.

782

ಕೆ.ಎ. ೨೫೦/೪	**ನೀತಿವಾರ್ಧಿಕಾ**	ವಾರ್ಧಕ ಷಟ್ಪದಿ
೧೩"×೮"	?	?
೧-೫ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ನೀತಿ ವಾರ್ಧಿಕಾ ॥
ವಡೆಯುಗೆರಡನೆ ಬಗೆದು ಕೆಟ್ಟು ನುಡಿಯಲಿ ಬ್ಯಾಡ
ಕೊಡುವ ದಾನಕೆ ನೀನು ಅಡ್ಡನಾಗಲಿ ಬ್ಯಾಡ
ಬಡವರಿಗೆ ಭಾಷೆಯನು ಕೊಟ್ಟು ತಪ್ಪಲಿ ಬ್ಯಾಡ ನಡತೆಹೀನರ ಮಾತ ನಂಬಬ್ಯಾಡ
ಹಿಡಿದ ವ್ರತಗಳ ಬಿಟ್ಟು ಭ್ರಷ್ಟನಾಗಲಿ ಬ್ಯಾಡ
ವಡನಾಡಿ ಕೆಡುವಂತ ಅವಗುಣಂಗಳು ಬ್ಯಾಡ
ಮಡದಿ ಮಕ್ಕಳ ಮ್ಯಾಲೆ ಅತಿಪ್ರೀತಿಯಿಡಬ್ಯಾಡ ಕಿಡಿಗಂಣ್ಣ ಶಿವನ ನೀ ಮರೆಯಬ್ಯಾಡಾ ॥ ೧ ॥

ಅಂತ್ಯ : ಸುರಿಗುಡಿವರೊಳು ಭಂಗಿ ಮುಕ್ಕರೊಳು ಜೂಜುಗಳ
ನೆರೆ ಗೆಲುವರೊಳು ಸೂಳೆಗಾರರೊಳ್ ಕ್ರೂರರೊಳ್
ಪಿರಿದು ತಿಂಬುವರೊಳಿಂ ವಿಶ್ವಾಸ ಮಾಡಲಾಗದು ಮಾಡಿದರೆ ಕೊರತೆಯೂ
ಚುರುಚಿಕಳ್ಳಿಯ ವೃಷಿಯ ಮೈಗೆ ಲೇಪಿಸಿದಂತೆ
ವುರುಗ ವೃಶ್ಚಿಕ ವ್ಯಾಗ್ರ ಸ್ವಾನನಂ ಪಿಡಿದಂತೆ
ಕರಕನಿಷ್ಠುರ ಸಂಗವದು ಭಂಗ ತೊಲಗೆಂದ ಗುರುಶಾಂತವೀರೇಶನೂ ॥೫॥

ವಿಷಯ : ನೀತಿಗಳು.

ವಿಶೇಷ : ಪತ್ರದ ಒಂದುಕಡೆ ಬರೆದಿದೆ. ಇದರಲ್ಲಿ ಸುಭಾಷಿತವೇ ಮೊದಲಾದ ಇತರ ೧೦ ಗ್ರಂಥಗಳಿವೆ.

783

ಕೆ.ಎ. ೨೫೦/೧	**ನೀತಿಶತಕ**	ಕಂದ
೧೩″ × ೮″	?	?
೧_೮ ಪತ್ರ	೧೮ ಪಂಕ್ತಿ	೧೬ ಅಕ್ಷರ

ಆದಿ : ನೀತಿಶತಕ.
ಶ್ರೀನಿರುಪಮ ಶಾರದೆಯುಂ
ಮಾನಸ ವಾಕ್ಕಾಯದಿಂದ ವಿನಮಿಸಿ ಮುದದಿಂ
ಭೂನುತ ಕವಿವರಭಾಷಿತ
ಮಾನಿತ ವರ ನೀತಿಕಂದ ಶತಕಮ ಪೇಳ್ವೆಂ ॥ ೧ ॥

ಅಂತ್ಯ : ತಪ್ಪುತ್ತೆಡಹುತ್ತೋದು
ತ್ರಿಪ್ಪನ ಬಾಯಿ ಕತ್ತೆ ಬಾಯಿ ಕಾಕನ ಬಾಯಿ ತಾಂ
ಕರ್ಪುರ ಕರಡಗೆ ಬಾಯುಂ
ತಪ್ಪದೆಯೋದುವನ ಬಾಯಿ ಚೂಡಾರತ್ನಾ ॥ ೩೮ ॥

X X X X

ನೀತಿಗಳ ನೋಡಿ ನಡೆವುದು
ನೀತಿಗಳಂ ಬಿಟ್ಟು ತಪ್ಪಿ ನಡೆವಾ ಮನುಜಂ
ನೀತಿಗಳನೊಲ್ಲದಿರ್ದ್ದಡೆ
ಭ್ರಾಂತಂ ತಾನೆನಿಸಿ ಘೋರ ನರಕಕ್ಕಿಳಿವಂ ॥ ೩ ॥

ವಿಷಯ : ನೀತಿಗಳು.

ವಿಶೇಷ : ಪ್ರತಿ ಅಸಮಗ್ರ. ಪತ್ರದ ಒಂದುಕಡೆ ಮಾತ್ರ ಬರೆದಿದೆ. ಈ ಪುಸ್ತಕದಲ್ಲಿ ನೀತಿಗ್ರಂಥವೇ ಮೊದಲಾದ ಇತರ ೧೦ ಗ್ರಂಥಗಳಿವೆ.

784

ಕೆ. ೨೮೩/೧	**ನೀತಿಸಂಗ್ರಹ**	ಭಾಮಿನೀ ಷಟ್ಪದಿ
೧೫″ × ೧.೫″	ಕುಮಾರವ್ಯಾಸ	ಸು ೧೪೩೦
೧_೪೪ ಪತ್ರ	೭ ಪಂಕ್ತಿ	[illegible] ಅಕ್ಷರ

ಆದಿ: ಕಳಿಂಗನೀತಿ–ಸೂಚನೆ ॥ ಪಲ್ಲ ॥

ವಾಯುಸುತಸುರಿವನೆಯ ಕೌರವ
ರಾಯ ಕೃತಕವ ಕಳಿದು ಹೊಕ್ಕರು
ತಾಯಿ ವೊಡಹುಟ್ಟಿದರು ಸಹಿತ ಮಹಾವನಾಂತರವಾ ॥
ಪದನೂ॥ ಕೇಳು ಜನಮೇಜಯ ಧಱಾತ್ರೀ
ಪಾಲ,ಪಾಂಡವರಾಳು ಕೌರವ
ರಾಳು ಸೆಣಸಿನ ಕಾಲು ಮೆಟ್ಟುಗಳಾ
ಆಳು ಮತ್ಸರ ಬಲಿದು ಪಾಡಿನ
ಜೋಳಿಗಲಹದ ಕದಡು ಜೂಜಿನ
ತೋಳುವಲರೊಳತೊಟ್ಟ ಮಸಗಿತು ದಿವಸ ದಿವಸವಲಿ ॥ ೧ ॥

ಅಂತ್ಯ: ಧಱಣಿಪನ ಸಂತೈಸಿ ಸಂನ್ಮುನಿ
ವಱನು ತಂನಾಶ್ರಮಕೆ ತಿರುಗಿದ
ನುರುತರ ಪ್ರೇಮದಲಿ ಧೃತರಾಷ್ಟ್ರಾವನೀಶ್ವಱನೂ
ಹರೆಯದಮಲಾನಂದ ಱಸದಲಿ
ಹೊಱೆದು ಹೊಂಪುಳಿಯೋಗಿ ಲಕ್ಷ್ಮೀ
ವಱನ ನೆನೆದನು ರಾಯ ಗದುಗಿನ ವೀಱನರಯಣನಾ ॥ ೧೨ ॥

ಶ್ರೀ ಸನತ್ಸುಜಾತ ನೀತಿ ಸಮೂಪ್ತಃ ॥ ಶ್ರೀ ॥ ಅಂತ್ತು ಕಳಿಂಗನೀತಿ ೧ಕ್ಕೆ ಪದನು ೬೫ ರಾಜನೀತಿ ೧ಕ್ಕಂ ಪದನೂ ೧೧೦ ವಿದುರನೀತಿ ೧ಕ್ಕಂ ಪದನೂ ೧೬೫ ಸನತ್ಸುಜಾತ ನೀತಿ ೧ಕ್ಕಂ ಪದನೂ ೧೨ ಅಂತೂ ನೀತಿ ೪ಕ್ಕಂ ಪದನೂ ೪೬೭ ಕ್ಕಂ ಜಯಮಂಗಳ ಮಹಾಶ್ರೀ॥

ವಿಷಯ: ಕುಮಾರವ್ಯಾಸ ಭಾರತದ ಕಳಿಂಗನೀತಿ, ರಾಜನೀತಿ, ವಿದುರನೀತಿ, ಮತ್ತು ಸನತ್ಸುಜಾತ ನೀತಿಯ ಸಂಧಿಗಳು.

ವಿಶೇಷ: ಶಕಟರೇಫದ ಬಳಕೆ ಇದೆ, ಆದರೆ ಸರಿಯಾಗಿಲ್ಲ. ಅಕ್ಷರ ಸುಂದರವಾಗಿದೆ. ಇದೇ ಕಟ್ಟನಲ್ಲಿ ಜ್ಯೋತಿಷ್ಯ ಸಂಗ್ರಹ, ಜಲಶಿಲ್ಪ, ನಕ್ಷತ್ರ ಚೂಡಾಮಣಿ, ವಿಭೂತಿಮಂತ್ರ, ನರಪಿಂಗಲಿ, ರಾಮಧ್ಯಾನ ಎಂಬ ಕೃತಿಗಳಿವೆ. ಆರಂಭದ ಒಂದು ಗರಿಯಲ್ಲಿ ಕೆಲವು ರೇಖಾಚಿತ್ರಗಳಿವೆ. ಅಂತ್ಯದಲ್ಲಿ ವೈದ್ಯ, ಮಂತ್ರ, ಜ್ಯೋತಿಷಗಳಿಗೆ ಸಂಬಂಧಿಸಿದ ೯ ಪತ್ರಗಳಿವೆ.

785

ನೀಲಗ್ರೀವನ ವಚನ

ಕೆ. [illegible]	ನೀಲಗ್ರೀವನ ವಚನ	ಹಾಡು
೧೩.೬"×೧.೮"	ನೀಲಗ್ರೀವ (?)	?
[illegible] ಪತ್ರ	೯ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ........ನೀಲಗ್ರೀವನ ಸ್ಮರಣೆಯೂ। ಶ್ರುಂಗಾರ। ನಾಂದ್ಯ। ಷಟ್ಪದಿ।
ವಾರ್ಧಿಕಾ ॥
ಶ್ರೀಕಾಂತನೆ ಬಾಣವಾ ಕುಸತಿವರ ತಾನು
ಲೋಕದೊಳಗುಧಿಸಿ ತೋಱುವ ವೇದ ವಾಜಿರತಿ
ಯಾಕಾಂತನಂಗನೆಂದಖಿಳ ಶಾಸ್ತ್ರಗಳೊದಱಲೇಕವರ ತಾಳೆ ಬೇಱೆ
ಸ್ವೀಕರಿಸಿ ಹರಿಯುವತಿಶ್ರುತಿಶುನಿಗಳತುಳಸ್ಕರ
ನಾಕವಜಿಯಲುಯಿಂದು ಮನಸಿಜನು ಯೆಂದುವಂ
ಗೀಕರಿಸಿ ಮೆಱವ ನೀಲಗ್ರೀವನುಮೆಯ ಮನೋಕಾಂತ ಸಲಹುಗೆಂಮ್ಮಾ
॥ ೧ ॥

ಅಂತ್ಯ : ನಿಂನಿಂದಲುದಿಸಿ ಯಿವರು ನಿಂನ್ನ ಕಾಣರು
ನಿಂನ್ನವರೆಂದರಿವರು ಬಲ್ಲರೆ
ಗಂನಗಾತಕರ ನೆರವಿಗೆಂನ್ನ ತೋಱಿದೆ
ನಿಂನ್ನತ್ತಲೋಯಿ ಬೇಗ ಗುರು ನೀಲಗ್ರೀವಾ ॥ ೩ ಶ್ರೀ ॥ ೮೧ ॥
ಯಿಂತ್ತಿ ನೀಲಗ್ರೀವನ ವಚನ ಪ್ರಕರಣ ೩ ಕಂ ಜೋಡು ೨೧೮ ಕಂ ಗುರು ನೀಲಗ್ರೀವನ ವಚನದ ಜೋಡು ೮೧ ಕಂ ಅಂತು ಜೋಡು ೨೯೯ ವುಭಯಂ ವಚನ ೮೨೬ ಕಂ ಮಂಗಲ ಮಹಾ ಶ್ರೀ, ಯಿಂತೀ ನೀಲಗ್ರೀವನ ವಚನ ಜೋಡು ೯೯ ಕಂ ವುಭಯಂ ೮೨೬ ಮಂಗಲ, ಅಂತು ಪದ್ಧತಿ ಪ್ರಕರಣ ನಾಲ್ಕು ೪ ಕಂ ಸಂಪೂರ್ನ ಮಂಗಲ ಮಹಾ ಶ್ರೀ.

ವಿಷಯ : ವೀರಶೈವ ತತ್ತ್ವ.

ವಿಶೇಷ : ಶಕಟರೇಫ ಉಪಯೋಗಿಸಿದೆ. ೪೭ ನೆಯ ಪತ್ರ ಎರಡಿದೆ.

786

ನೀಲಾಂಬಿಕಾ ಲಲಿತಸ್ತೋತ್ರ

ಕೆ. ೩೨೫/೧	ನೀಲಾಂಬಿಕಾ ಲಲಿತಸ್ತೋತ್ರ	ವಾರ್ಧಕ ಷಟ್ಪದಿ
೯.೫"×೨"	?	?
೧–೩ ಪತ್ರ	೧೧ ಪಂಕ್ತಿ	[illegible] ಅಕ್ಷರ

ಆದಿ : ನೀಲಲೋಚನೆಯ ಸ್ತ್ರವಿತ್ಯವ ಬರವುದಕ್ಕೆ ಸುಭಮಸ್ತು ||
ಶರಣು ಶರಣು ಹಿತನುತ ಹತಕಾಲ ಜಿತ ನಿಮಗೆ
ಶರಣು ಶರಣಾವಾಗ ನಿಂಮ ಮೃದುಪದಂಗಳಿಗೆ
ಶರಣೆಂದು ದುರಿತವನು ಕಳವೆನೆಂನಯ ಜಗದ್ಗುರು ಬಸವರಾಜನರಸಿ
ಪದ || ಪತ್ರಜಾತನ ಶಿರಃ ಪತ್ರಕರ ಪಾತ್ರನಂ
ಪತ್ರಗಮನ ನಯನ ಮಿತ್ರ ವಿಕಸಿತ ಭಾನು
ಪತ್ರವೈರಿಯು ಪತ್ರ ಮಿತ್ರಾಗ್ನಿಯಾವಾಗ ನೇತ್ರನಾಗಿರುತಿರ್ಪ್ಪನಾ
ಪತ್ರಾತಪತ್ರ ಚಾಲೋ ಕುಲಿಶಕುಧರಾತ
ಪತ್ರ ನಯನೋಪಾದಪತ್ರನಂ ಸದ್ಭಕ್ತಿ
ಗೋತ್ರನಂ ಭವಲತಲವಿತ್ರನಂ ಸದ್ಧರ್ಮ್ಮಗಾತ್ರ ಬಸವೇಶನರಿಸಿ || ೧ ||

ಅಂತ್ಯ : ಉರಿಯೊಳಗೆ ಕರ್ಪ್ಪುರಂ ಬೆರದಂತೆ ತಂನಮುಳ
ಕರಕಂಜ ಪುರವಾಸ ವರದಿಷ್ಟಲಿಂಗದೊ
ಳ್ಬೆರದು ಬೇರಿಲ್ಲದಿಹ ನೀಲಾಂಬಿಕಾ ಲಲಿತ ಪಂಚವಿಂಸತಿ ನುತಿಗಳಂ
ಬರದೋದಿ ಕೇಳಲಜಿವರ್ಗ್ಗ ವೈಕಾರಮುದು
ಕರಣಂಗಳಳಿದು ವರಭಕ್ತಿ ಷಸ್ಟಿಶಿಲಾಷ್ಟ
ಪರತರಾವರಣ ಪಂಚಾಚಾರವಳವಟ್ಟು ನಿಜಮುಕ್ತರಾಹರು
ನಿರುತಂ || ೨೫ ||

ನೀಲಾಂಬಿಕ ಲಲಿತಸ್ತ್ರೋತ್ರ ಸಮಾಪ್ತ ಮಂಗಳ ಮಹಾ ಶ್ರೀ

ವಿಷಯ : ನೀಲಾಂಬಿಕೆಯ ಸ್ತ್ರೋತ್ರ.

ವಿಶೇಷ : ಕೆಲವುಕಡೆ ಶಕಟರೇಫವಿದೆ. ಇದೇ ಕಟ್ಟಿನಲ್ಲಿ ನೀಲಾಂಬಿಕೆಯ ತತ್ತ್ವಮಾಲಾ ಸ್ತ್ರೋತ್ರ, ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ ಮೊದಲಾದ ಇನ್ನೂ ಇತರ ೨೪ ಗ್ರಂಥಗಳಿವೆ.

787

ಕೆ. ೧೬೯/೧	**ನೀಲಾಂಬಿಕಾ ಲಲಿತಸ್ತ್ರೋತ್ರ**	ಷಟ್ಪದಿ
೯.೬"×೨"	?	?
೨೨–೨೫ ಪತ್ರ	೯ ಪಂಕ್ತಿ	೪೦ ಅಕ್ಷರ

ಆದಿ : ನೀಲಾಂಬಿಕ ಲಲಿತ ಸ್ತ್ರೋತ್ರನಾದ್ಯವ ಬರವುದಕ್ಕೆ ಶುಭಮಸ್ತು ॥
ಭಾವನಿ ಷಟ್ಪದ ॥ ಶ್ರೀಮದುತಳಾನಂದೆ ಶುಭಕರೆ
ವಾಮಲೋಚನೆ ವರದ ವಂದಿತೆ
ರಾಮ ಕುಂತಳೆ ರಸಿಕ ಮೇದುರೆ ರಾಜ ಮಂತ್ರಾಂಗಿ
ಸೋಮಮುಖಿ ಸನ್ಮಾನೆ ಸುಗುಣ
ಸ್ತ್ರೋಮಮಂದಿರೆ ಸಾರಸೌಂದರೆ
ಸೋಮಗಂಧಿನಿ ನೀಲಲೋಚನೆ ಪಾಲಿಸೆಲೆ ತಾಯೆ ॥ ೧ ॥

ಅಂತ್ಯ : ವುರಿಯೊಳಗೆ ಕರ್ಪ್ಪುರಂ ಬೆರೆದಂತೆ ತೆಂನಮಳ
ಕರಕಂಜ ಪುರವಾಸ ವರದಿಷ್ಟಲಿಂಗದೊ
ಳ್ಬೆರೆದು ಬೇರಿಲ್ಲಹ ನೀಲಾಂಬಿಕಾ ಲಲಿತ ಪಂಚವಿಂಸತಿ ನುತಿಗಳಂ
ಬರದೋದಿ ಕೇಳಲರಿವರ್ಗ್ಗ ವೈಕಾರಮದ
ಕರಣಂಗಳಳಿದು ವರಭಕ್ತಿ ಷಟ್ಸ್ಥಲಾಷ್ಟ
ವರಣ ಪರತರಂ ಪಂಚಾಚಾರವಳವಟ್ಟು ನಿಜಮುಕ್ತರಹರು
ನಿರುತಂ ॥ ೨೫ ॥

ನೀಲಾಂಬಿಕ ಸ್ತ್ರೋತ್ರ ಸಂಪೂರ್ನ್ನ ಮಂಗಳ ಮಹಾ ಶ್ರೀ ॥

ವಿಷಯ : ನೀಲಾಂಬಿಕೆಯ ಸ್ತ್ರೋತ್ರ.

ವಿಶೇಷ : ಇದರಲ್ಲಿ ೨೫ ಷಟ್ಪದಿಗಳಿವೆ. ಶಿಥಿಲ ಪ್ರತಿ. ಇದೇ ಕಟ್ಟಿನಲ್ಲಿ ಚಿಕ್ಕ ನೀಲಮ್ಮನ ಸ್ತ್ರೋತ್ರ, ಸಿದ್ಧೇಶ್ವರ ಪುರಾಣದ ನಾಂದ್ಯ ಇವೇ ಮೊದಲಾದ ಇತರ ೨೩ ಗ್ರಂಥಗಳಿವೆ.

788

ಕೆ. ೩೨೫/೨	**ನೀಲಾಂಬಿಕೆಯ ತತ್ತ್ವಮಾಲಾಸ್ತೋತ್ರ**	ವಾರ್ಧಕ ಷಟ್ಪದಿ
೯.೫"×೨"	?	?
೩–೫ ಪತ್ರ	೧೧ ಪಂಕ್ತಿ	೫೬ ಅಕ್ಷರ

ಆದಿ : ನೀಲಾಂಬಿಕೆಯ ತತ್ವಮಾಲಾಸ್ತ್ರೋತ್ರ.
ವಾರ್ಧಿಕ ॥ ಶ್ರೀ ಗುರುವರೇಣ್ಯ ಬಸವೇಶನರ್ದ್ಧಾಂಗಿ ಶರ
ಣಾಗಸದಮಲ ಶಿವವದ್ಯನಿ ನಿಜ ಸುಜ್ಞಾನಿ
ಭೋಗ ಮೋಕ್ಷ ಪ್ರದಾಯಕಿ ವೀರಶೈವನಾಯಕಿ ಸದುತ್ತಮಭಾವಕಿ

ತ್ಯಾಗಗುಣಶೀಲೆ ಧರ್ಮಾಚಾರಪಾಲೆ ಮಹಿ
ಮಾಗಾರೆ ನುತಸಾರೆ ದುಃಕರ್ಮದೂರೆ ಶಿವ
ಯೋಗಮಾರ್ಗ್ಗ ಪ್ರಸೂಚನೆ ನೀಲಲೋಚನೆ ನಿತ್ಯತತ್ವಲೋಚನೆ ॥ ೧ ॥

ಅಂತ್ಯ : ನೀಲಲೋಚನೆಯ ಕಂಗಳ ಚೆಲ್ವ ಕಪ್ಪಿಂಗೆ
ನೀಲೋತ್ಪಲಂಗಳೆಣೆಯಲ್ಲ ಬೆಳಗಿಂಗೆ ತಾ
ನೀಲಮೇಘದ ಮಿಂಚು ಸಾಟಿಯೆ:ಯಲ್ಲವದು ಲಕ್ಷಣದ ರುಚಿಯ ಬೆಳಗಿದೂ
ನೀಲಕಂಠನ ಬಸವನಜೀವ ಜ್ಞಾನದ ಬೆಳಗೆ
ನೀಲಲೋಚನೆಗೆ ನೇತ್ರಗಳಾದವಲ್ಲದಡೆ
ನೀಲಲೋಚನೆಗೆ ಬಸವಗೆಯೆರಡು ತನು ಗಂಡಬೇರುಂಡನಂ
ತೆಸದರೂ ॥ ೨೪ ॥

ವಿಷಯ : ನೀಲಾಂಬಿಕಾ ಸ್ತೋತ್ರ.

ವಿಶೇಷ : ೨೪ ಪದ್ಯಗಳು ಮಾತ್ರ ಇವೆ. ಶಕಟ ರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ಮುರಿಗೇ ಸ್ವಾಮಿಗಳು ನಿರೂಪಿಸಿದ ನಾಂದ್ಯ, ಸಿದ್ಧೇಶ್ವರನ ಭಾವಿನಿ ಪುರಾಣದ ನಾಂದ್ಯ ಮೊದಲಾದ ೨೪ ಗ್ರಂಥಗಳಿವೆ.

789

ಕೆ. ಬಿ. ೨೮೯/೪	ನುಲಿಯ ಚಂದಯ್ಯನ ಕಥೆ	ಪದ್ಯ
೬.೧″×೩.೮″	ಚನ್ನವೃಷಭ	ಸು. ೧೭೦೦
೬೭–೭೧ ಪತ್ರ	೧೮ ಪಂಕ್ತಿ	೧೩ ಅಕ್ಷರ

ಆದಿ : ನುಲಿಯ ಚಂದೈಯನವರ ಕಥೆ ॥
ಶ್ರೀಗುರುವೆ ನಿತ್ಯನಿರ್ಮಳ ನಿಜಾವರಣಶಿವ
ಯೋಗಿಜನಹೃದಯ ಮಂದಿರನೆ
ಸಕಲ ಆಗಮಕೆ ಅಧಿಕ ಸುಂದರನೆ
ಶಿವ ಯೋಗಿಧರ್ಮ ಸುಧಾರಕನೆ
ಬೇಗದಿಂ ನುಲಿಯ ಚಂದೈಯ್ಯನ ಸ್ತುತಿಗೆ
ದಯವಾಗೆನಗೆ ಕರುಣಸಾಗರನೆ ॥ ೧ ॥

ಅಂತ್ಯ : ದಶಭುಜವು ಪಂಚಮುಖ ಮಿಸುಪ ಕಿಡಿಗಂಣಿಂದ
ಅಸಮಾಕ್ಷಪ್ರಭು ತಂನ ನಿಜವ ತೋರಿ
ಕುಸುಮಮಳೆ ಸೂಳೈಪ ಭೇರಿ ರವದಿ

ಯಸೆವ ಶಾಂಭವಿಗೊಲಿದ ಸಾರಿ
ಜಸವೆತ್ತ ಕರಪುರೀಶನ ಕರುಣದಿಂ ಚಂನ
ವೃಷಭ ಸಾರಿದನು ನಲವೇರಿ ॥ ೨೫ ॥

ವಿಷಯ : ಮೆದೆಯ ಹುಲ್ಲನ್ನು ಹೊಸೆದು ಜೀವನವನ್ನು ನಡೆಸುತ್ತಿದ್ದ ನುಲಿಯ ಚಂದಯ್ಯನ ಮಹಿಮೆ.

ವಿಶೇಷ : ಇದರಲ್ಲಿ ೨೫ ಹಾಡುಗಳಿವೆ. ಇದೇ ಪುಸ್ತಕದಲ್ಲಿ ಗಣಸಹಸ್ರನಾಮ, ಬಸವಲಿಂಗ ನಾಮಾಷ್ಟೋತ್ತರ, ಹಾಡುಗಳು, ಕಲ್ಯಾಣ ಪಟ್ಟಣದ ಮಹಾತ್ಮ್ಯೆಗಳಿವೆ. ೭೧ರಿಂದ ೭೪ನೆಯ ಪತ್ರದವರೆಗೆ ಕೆಲವು ಹಾಡುಗಳಿವೆ.

790

ಕೆ.ಬಿ. ೩೫೧/೪	**ನುಲಿಯ ಚಂದಯ್ಯನವರ ಸ್ತುತಿ**	ಸ್ತೋತ್ರ
೮"✕೬.೨"	ಚನ್ನವೃಷಭ	ಸು. ೧೭೦೦
೧೦೫–೧೦೯ ಪತ್ರ	೧೫ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಗುರುಭ್ಯೋ ನಮಃ ॥ ಶ್ರೀಗುರುವೆ ನಿತ್ಯನಿರ್ಮಲ ನಿಜಾವರಣ ನಿಜ
ಯೋಗಿಜನ ಹೃದಯ ಮಂದಿರನೆ
ಸಕಲಾಗಮೋಕ್ತರಿಗೆ ಸೌಂಧರನೆ
ಶಿವಯೋಗಿಜನ ಹೃದಯಸುಧಾರಕನೆ
ಬೇಗದಿಂ ಸುಲಿಯಚಂದ್ಯೆಯ್ಯನಾ ಸ್ತುತಿಗೆ
ದಯವಾಗು ಯನಗೆ ಕರುಣಸಾಗರನೇ ॥ ೧ ॥

ಅಂತ್ಯ : ದಶಭುಜವು ಪಂಚಮುಖ ಮಿಸುವನೆಡಿಗಂಣಿಂದ
ಅಸಮಪ್ರಭು ತಂನ್ನ ನಿಜದೋರಿ ಸುರಿವ
ಕುಸುಮವಳೆ ಸೋಳೈಪ ಭೇರಿ ರವದಿ
ಯಸವ ಶಾಂಭವಿಗೆ ಸುರಿ
ಝುಸವಿತ್ತು ಕರ್ಮರೇಶನ ಕರುಣದಿಂ ಚಂನ
ವೃಷಭ ಸಾರಿದನು ನಲುವೇರಿ ॥ ೨೫ ॥

ನುಲಿಚಂದ್ಯೆಯ್ಯನವರ ವಚನ ಸಂಪೂರ್ಣವೂ ॥ ಶ್ರೀ

ವಿಷಯ : ನುಲಿಯ ಚಂದಯ್ಯನ ಮಹಿಮೆ.

ವಿಶೇಷ : ಇದರೊಂದಿಗೆ ಗುಂಡುಬ್ರಹ್ಮಯ್ಯಗಳ ಸುವ್ವಿ, ಜೋಗುಳಪದ (ಚನ್ನಬಸವೇಶ್ವರನ), ಬಸವಾಷ್ಟಕ (ಬಸವಲಿಂಗನಾಮಾವಳಿ), ಬಸವೇಶ್ವರ ರಗಳೆ ಗಣಾಷ್ಟಕ ಇತ್ಯಾದಿ ಹಾಡುಗಳು (ವೀರಶೈವ), ಪುರಾತನ ದೇವಿಯರ ತ್ರಿಪದಿ ಇತ್ಯಾದಿ, ಪುಷ್ಪಾಂಜಲಿಸ್ತೋತ್ರಗಳಿವೆ. ಗ್ರಂಥಾಂತ್ಯದಲ್ಲಿ ಮಿಶ್ರ ಹಾಡುಗಳೂ ಶಕುನಾದಿಗಳೂ ಇರುತ್ತವೆ.

791

ಕೆ.ಎ. ೪೯	**ನೇಮಿಜಿನೇಶ ಸಂಗತಿ**	ಸಾಂಗತ್ಯ
೧೩" × ೮"	ಮಂಗರಸ	೧೫೦೮
೧–೧೮೭ ಪತ್ರ	೩೦ ಪಂಕ್ತಿ	೨೪ ಅಕ್ಷರ

ಆದಿ : ಪೀಠಿಕಾಸಂಧಿ॥

ಶ್ರೀಮತ್ಪಂಚಕಲ್ಯಾಣ ವೈಭವಯುತ
ರಾಮಕೇಶವನತ ಚರಣ
ಸೋಮಾರ್ಕಕೋಟಿ ಕಿರಣ ನೇಮಿನಾಥನು
ದ್ದಾಮ ಸುಖವನೀವುದೆಮಗೆ ॥ ೧ ॥

ಅಂತ್ಯ : ಮತ್ತೆ ನಕುಲ ಸಹದೇವ ಮುನೀಂದ್ರರು
ಚಿತ್ತಶುದ್ಧಿಯೊಳಂಗವಳಿದೂ
ಉತ್ತಮಮಪ್ಪ ಸರ್ವಾರ್ಥಸಿದ್ಧಿಯೊಳು
ತೃಪ್ತಿಯಾದರು ಧರೆ ಪೊಗಳೆ ॥ ೫೬ ॥
ಇದು ಜಿನಪದ ಸರಸಿಜ ಮದಮಧುಕರ
ಚದುರ ಮಂಗರಸ ರಚಿಸಿದಾ
ಮದನಾರಿ ನೇಮಿಜಿನೇಶ ಸಂಗತಿಯೊಳ
ಗೊದವಿ ರಂಜಿಸಿತಾಶ್ವಾಸಾ ॥ ೫೭ ॥

ಅಂತು ಸಂಧಿ ೩೫ ಕ್ಕಂ ಪದನೂ ೪೯೫೭ ಕ್ಕಂ ಮಂಗಲಮಹಾಶ್ರೀ

X X X X

ವಾಸವ ದಿಙ್ಮುಖವಾಗುತ ಪಲ್ಯಂ
ಕಾಸನನುದಯ ಯೋಗದೊಳೂ

ವೋಸರಿಸದೆ ಕುಳ್ಳಿದ್ರ್ದ ಮುಕುತಿಯೆಂ
ಬಾ ಸತಿಯೊಳು ಮನವಿಟ್ಟೊ ॥ ೧೨ ॥
ಪ್ರಣಕೋದ್ದಂಡ ಕಪಾಟ ಭುವನ ಪೂ
ರಣಮೆಂಬ ಸದ್ವಿಧಿಯಿಂದಾ

ವಿಷಯ : ನೇಮಿನಾಥನ ಚರಿತ್ರೆ.

ವಿಶೇಷ : ಅಸಮಗ್ರ. ೩೫ನೆಯ ಸಂಧಿ ಮುಗಿದು ಮುಂದಿನ ಮೋಕ್ಷ ಸಂಧಿಯಲ್ಲಿ ೧೩ ಪದ್ಯಗಳಿವೆ.

792

ಕೆ.ಬಿ. ೪/೧	**ನೇಮಿಜಿನೇಶ ಸಂಗತಿ**	ಸಾಂಗತ್ಯ
೮.೩" × ೫.೭"	ಮಂಗರಸ	೧೫೦೮
೧—೨೭೪ ಪತ್ರ	೧೬ ಪಂಕ್ತಿ	೨೭ ಅಕ್ಷರ

ಆದಿ : ಶ್ರೀ x x ಹರಿವಂಶ ಬರಿಯುವದಕ್ಕೆ ಶುಭಮಸ್ತು ॥
ಶ್ರೀಮತ್ಪಂಚಕಲ್ಯಾಣ ವೈಭವಯುತ
ರಾಮಕೇಶವ ನತಚರಣಾ
ಸೋಮಾರ್ಕ ಕೋಟಿಕಿರಣ ನೇಮಿನಾಥನು
ದ್ದಾಮ ಸುಖವನೀವುದೆಮಗೆ ॥ ೧ ॥

ಅಂತ್ಯ : ಇದು ಜಿನಪದ ಸರಸಿಜ ಮದಮಧುಕರ
ಸರಸ ಮಂಗಸ ರಚಿಸಿದಾ
ಮದನಾರಿ ನೇಮಿಜಿನೇಶ ಚರಿತೆಯೊ
ಳೊದವಿದಸ್ವಾಸ ಚತುತ್ರಿಂಶಾ ॥ ೫೭ ॥
ಅಂತು ಸಂಧಿ ೩೪ ಕ್ಕಂ ಪದನೂ ೫೦೭೬ ಕ್ಕಂ ಮಂಗಳಂ ಭೂಯಾತ್

x x x x

ಧಾರುಣಿಯೊಳು ಮೆರೆಮಂತೆ ನೇಮೀಶನ
ಚಾರುಚರಿತವ ಚೆಂನಾಗಿ
ಪೂರಿಸಿದನು ಮಂಗರಸನು ಜಿನಮತ
ಕ್ಷೀರವಾರಾಶಿ ಚಂದ್ರಮನೂ ॥ ೧೮ ॥

ಚಾರುಚರಿತ್ರನು ಚಿಕ್ಕಪ್ರಭೇಂದುವ
ಕಾರುಣ್ಯದ ಶಿಷ್ಯನಾಗಿ
ಧೀರ ಮಂಗರಸನೊಪ್ಪಿರಿದ ಸುಮತ
ಕ್ಷೀರ ವಾರಾಶಿ ಚಂದ್ರಮನೂ ॥ ೧೮ ॥

ವಿಷಯ : ನೇಮಿನಾಥ ಚರಿತ್ರೆ.

ವಿಶೇಷ : ಇದೇ ಪುಸ್ತಕದಲ್ಲಿ ಶ್ರೀಪಾಲಚರಿತೆ ಎಂಬ ಇನ್ನೊಂದು ಕೃತಿ ಇದೆ.

793

ಕೆ. ೪/೧	**ನೇಮಿನಾಥ ಪುರಾಣ**	ಚಂಪು
೨೨.೧" × ೨.೧"	ಕರ್ಣಪಾರ್ಯ	ಸು. ೧೧೪೦
೧೭೮ ಪತ್ರ	೧೩ ಪಂಕ್ತಿ	೧೧೦ ಅಕ್ಷರ

ಆದಿ : ಕರ್ನ್ನಪಾರ್ಯ್ಯದ ಪುಸ್ತಕ್ಕೆ ನಿರ್ವ್ವಿಘ್ನಮಸ್ತು ॥
ಶ್ರೀ ಲೀಲಾಸದನಂ ನಿಜಾಂಘ್ರಿ ಕಮಲದ್ವಂದ್ವಲಸದಿಬ್ಯವಾಕ್
ಶ್ರೀ ಲೀಲಾಸದನಂ ನಿಜಾಸ್ಯಕಮಳಂ ನಿಸ್ಸೀಮ ಕಾರುಂಣ್ಯ ಸು
ಶ್ರೀ ಲೀಲಾಸದನಂ ಸುಹೃತ್ಕಮಳಮಾದಕ್ಷೋಣಿಗೀಗಕ್ಷಯ
ಶ್ರೀ ಲೀಲಾ ಸದಮಂತು ನಮಗಂ ಶ್ರೀ ನೇಮಿಭಟ್ಟಾರ........

ಅಂತ್ಯ : ಶರದುದ್ಯಚ್ಚಂದ್ರ ಚಂದ್ರಾಭರಣ ಸುರ ಸರಿತ್ತಾರ ತಾರಾಚಳಪ್ರ
ಸ್ಫುರ ಕೀರ್ತಿ ಶ್ರೀವಿಳಾಸಂ ಸಕಳ ಗುಣಗಣಾವಾಸನಾಗಿರ್ದ್ದ ಲಕ್ಷ್ಮೀ
ಧರನಿಂ ಸಸಿದ್ಧಮಾದೀ ಕೃತಿ ವಿಬುಧ ಜನಾಹಾರ ಸಂಪಾದಿ ವಿಶ್ವಂ
ಭರೆಯೊಳ್ ನಿಲ್ಕೆಯ್ದೆನಿಲ್ವಂನೆಗಮವನೀ ಕುಳಾದೀಂದ್ರ ಚಂದ್ರಾರ್ಕ್ಕ
ತಾರಂಬರಂ ॥ ೨೩೩ ॥

ಗದ್ಯ ॥ ಇದು ನಿಖಿಳ ವಿಬುಧಜನವಿನುತಶಾಶ್ಚರ್ಯ್ಯ ಚಾರಿತ್ರ ಚಕ್ರವರ್ತ್ತಿ ಕಲ್ಯಾಣಕೀರ್ತ್ತಿ ಮುನೀಂದ್ರ ವಾಕ್ಚಂದ್ರಿಕಾ ಪ್ರಸಾದ ಪ್ರಬೋಧಿತ ವಾಕ್ಕುಮುದ ಸಮುದಯಂ ಸಹಜ ಕವಿತಾ ರಸೋದಯಂ ಶ್ರೀಕರ್ಣ್ನ ಪಾರ್ಯ್ಯ ವಿರಚಿತಮಪ್ಪ ನೇಮಿನಾಥ ಪುರಾಣದೊಳ್ ಪರಿನಿರ್ವಾಣ ವರ್ನನಂ ಚತುರ್ದಶಶ್ವಾಸಂ ॥ ೨೩೪ ॥

ವಿಷಯ : ನೇಮಿನಾಥನ ಚರಿತ್ರೆ.

ವಿಶೇಷ : ೨೯ ನೆಯ ಪತ್ರ ಇಲ್ಲ. ಶಕಟರೇಫ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಹರಿವಂಶಾಭ್ಯುದಯವೆಂಬ ಮತ್ತೊಂದು ಕೃತಿ ಇದೆ. ಆದಿ ಮತ್ತು ಅಂತ್ಯದ ಎರಡು ಗರಿಗಳ ಅಂಚು ಮುರಿದಿದೆ.

794

ಕೆ.ಎ. ೫೨	**ನೇಮಿನಾಥಪುರಾಣ**	ಚಂಪು
೧೨.೭" × ೭.೮"	ಕರ್ಣಪಾರ್ಯ	ಸು ೧೧೪೦
೧–೫೦೦ ಪುಟ	೨೮ ಪಂಕ್ತಿ	೨೦ ಅಕ್ಷರ

ಆದಿ : ನೇಮಿನಾಥಪುರಾಣವು ಅಥವಾ ಕರ್ನಪಾರ್ಯವೆಂಬ ಪುಸ್ತುಕ ಬರಿಯುವದಕ್ಕೆ ನಿರ್ವಿಘ್ನೆಮಸ್ತು ||
ಶ್ರೀ ಲೀಲಾಸದನಂ ನಿಜಾಂಘ್ರಿಕಮಲದ್ವಂದ್ವಂ ಲಸದ್ದಿವ್ಯ ವಾಕ್
ಶ್ರೀ ಲೀಲಾಸದನಂ ನಿಜಾಸ್ಯಕಮಳಂ ನಿಸ್ಸೀಮಕಾರುಣ್ಯ ಸು
ಶ್ರೀ ಲೀಲಾಸದನಂ ಸುಹೃತ್ಕಮಳಮಾದಕ್ಷೋಣಿ ನೀಗಕ್ಷಯ
ಶ್ರೀ ಲೀಲಾಸದನಂ ಸಮಂತು ನಮಗಂ ಶ್ರೀ ನೇಮಿ ಭಟ್ಟಾರಕಂ || ೧ ||

ಅಂತ್ಯ : ಶರದುದ್ಯಚ್ಚಂದ್ರ ಚಂದ್ರಾಭರಣ ಸುರ ಸರಿತ್ತಾರಕಾರಾಜಳ ಪ್ರ
ಸ್ಫುರ ಕೀರ್ತಿ ಶ್ರೀವಿಳಾಸಂ ಸಕಳ ಗುಣಗಣಾವಾಸನಾಗಿರ್ದ ಲಕ್ಷ್ಮೀ
ಧರನಿಂ ಸಂಸಿದ್ಧಮಾದೀ ಕೃತಿ ವಿಬುಧಜನಾಹ್ಲಾದಿ ಸಂಪಾದಿ ವಿಶ್ವಂ
ಭರೆಯೋಳ್ ನಿಲ್ಕೆಯ್ದೆ ನಿಲ್ಗನ್ನೆಗಮನೀ ಕುಳದಿಂದ್ರಚಂದ್ರಾರ್ಕತಾರಂ ||
ಗದ್ಯ || ಇದು ನಿಖಿಳ ವಿಬುಧ ಜನ ವಿನುತ ಸಾಶ್ಚರ್ಯ ಚಾರಿತ್ರ ಚಕ್ರವರ್ತಿ ಕಲ್ಯಾಣಕೀರ್ತಿ ಮುನೀಂದ್ರ ವಾಕ್ಚಂದ್ರಿಕಾ ಪ್ರಸಾದ ಪ್ರಬೋಧಿಕ ವಾಕ್ಕುಮುದ ಸಮುದಯಂ ಸಹಜಕವಿತಾರಸೋದಯಂ ಶ್ರೀ ಕರ್ಣಪಾರ್ಯ ವಿರಚಿತಮಪ್ಪ ನೇಮಿನಾಥ ಪುರಾಣದೋಳ್ ಪರಿನಿರ್ವಾಣ ವರ್ನನಂ ಚತುರ್ದಶಾಶ್ವಾಸಂ ನೇಮಿನಾಥ ಪುರಾಣವು ಸಮಾಪ್ತವಾದದು

ವಿಷಯ : ನೇಮಿನಾಥ ತೀರ್ಥಂಕರರ ಚರಿತ್ರೆ.

ವಿಶೇಷ: ಪ್ರತಿಯ ಕೊನೆಯಲ್ಲಿ 'ಈ ಪ್ರತಿಯನ್ನು ಮೂಡಬಿದರೆಯಲ್ಲಿರುವ ಶ್ರೀಮಾನ್ ವಿ. ಲೋಕನಾಥ ಶಾಸ್ತ್ರಿಗಳವರಿಂದ ತಂದ ಓಲೆಯ ಪ್ರತಿಯೊಡನೆ ಹೋಲಿಸಿ ಪಾಠಾಂತರವನ್ನು ಗುರ್ತಿಸಿದೆ. ಆ ಪ್ರತಿಯು ಜಯಸಂವತ್ಸರದ ವೈಶಾಖ ಮಾಸದ ಬಹುಳ ದಶಮಿ ಸೋಮವಾರದ ದಿನ ಬರೆದು ಮುಗಿಸಿದುದು'

ಎಂದಿದೆ. ಗ್ರಂಥಾರಂಭಕ್ಕೆ ಮೊದಲಿನ ಪುಟದಲ್ಲಿ "ಈ ಪ್ರತಿಯನ್ನು ಇತರ ಪ್ರತಿಯೊಡನೆ ಹೋಲಿಸಿ ಪಾಠಾಂತರವನ್ನು ಗುರ್ತಿಸುವಾಗ ಉಪಯೋಗಿಸಿರುವ ಕೆಲವು ಸಂಕೇತಗಳ ವಿವರವೂ, ಈ ಪ್ರತಿಯ ೨೫೭, ೨೬೧, ೨೭೪, ೩೮೨ನೆಯ ಪುಟಗಳಲ್ಲಿ ವಿಶೇಷವಾಗಿ ಗ್ರಂಥಪಾತವಿರುವುದರಿಂದ ಆ ಭಾಗಗಳನ್ನು ಬೇರೆ ಕಾಗದದಲ್ಲಿ ಬರೆದು ಆ ಪುಟಗಳಿಗೆ ಸೇರಿಸಿದೆ" ಎಂಬ ಸೂಚನೆಯೂ ಇದೆ. ಶಕಟರೇಫದ ಬಳಕೆ ಇದೆ.

795

ಕೆ. ಎ. ೫೪	**ನೇಮಿನಾಥಪುರಾಣ**	ಚಂಪು
೧೨.೪"×೭.೫"	ನೇಮಿಚಂದ್ರ	ಸು. ೧೧೮೦
೧-೨೧೮ ಪತ್ರ	೨೬ ಪಂಕ್ತಿ	೨೦ ಅಕ್ಷರ

ಆದಿ : ಶ್ಲೋಕ ॥ ಶ್ರೀಮತೇ ನೇಮಿನಾಥಾಯ ನಮಃ ಸ್ಯಾದ್ವಾದಸಿಂಧವೆ ।
ಯಸ್ಮಿನ್ನುದಿತ ಬೋಧೇಂದೌ ತ್ರ್ಯೈಲೋಕ್ಯಂ ಲಕ್ಷಣಾಯತೆ ॥

ವೃ॥ ಶ್ರೀಯಂ ಶ್ವೇತಾತಪತ್ರಂ ಪ್ರಥಿತ ವಿಭವಮಂ ಚಾಮರಂ ಬೋದಮಂ ವಾ
ಕ್ಶ್ರೀಯೂಷಂ ಷೆಮ್ರ್ಯೆಯಂ ಭಾಸುರಸುರಪಟಹಂ ಶಕ್ತ್ರಿಯಂ ಸಿಂಹಪೀಠಂ
ಶ್ಚಾಯತ್ತ್ರಂ ಮಾಳ್ಪಿನಂ ಬಾವಳೆಯ ವಿಲಸಿತಾಶೋಕ ಮಂದಾರ ವರ್ಷ
ಚ್ಛಾಯಾಜ್ಜೃಂನಾಂಗನಾದಂ ತ್ರಿಭುವನವಿನುತಂ ನೇಮಿ ರಕ್ಷಿಕ್ಕೆ
ನಂಮಂ ॥ ೧ ॥

ಅಂತ್ಯ : ಮಧುಮಾಯಾಮಥನಂ ಸಮುಧೃತಮಹಾಗೋತ್ರಂ ಗುಣೋದ್ಧಾಮಥ
ಮರ್ತ್ರಧರಾಕಂಟಕಂ ಕೈಟಭಾಪಹರಣಂ ವಾಚಾಳ ಚಾಣೂರ ವಾ
ರಿಧಿ ಸಂಶೋಷಣ ಬಾಡಬಾಗ್ನಿ ಕಲಿಕಂಸಧ್ವಂಸಕಂ ತಾಳ್ದಿದಂ
ಕದನ ಕ್ರೀಡೆಯನಾಡಿ ನಿತ್ಯಜಯಮುಂ ಶ್ರೀ ವೀರನಾರಾಯಣಂ ॥ ೧೨೧ ॥

ಗದ್ಯ ॥ ಇದು ವೃದುಪದ ಬಂಧ ಬಂಧುರ x x x ಚತುರ್ಭಾಷಾ ಕವಿ
ಚಕ್ರವರ್ತ್ತಿ ನೇಮಿಚಂದ್ರ ಕೃತಮುಂ x x x ಸೆಜ್ಜೆವಳ್ಳ ಪದ್ಮ
ನಾಭದೇವ ಕಾರಿತಮುಮಪ್ಪ ನೇಮಿನಾಥಪುರಾಣದೊಳು ಶ್ರೀ ವೀರ
ನಾರಾಯಣ ಪ್ರತಾಪವರ್ಣ್ನನಂ ಅಷ್ಟಮಾಸ್ವಾಸಂ ॥

ವಿಷಯ : ನೇಮಿನಾಥ ತೀರ್ಥಂಕರರ ಕಥೆ.

ವಿಶೇಷ : ಪತ್ರದ ಒಂದು ಕಡೆ ಬರೆದಿದೆ. ಕೊನೆಯಲ್ಲಿ—
ಬರೆ ಶಾಲಿವಾಹನಂ ಜೇಗದೆ ಶಕವರುಷಂ ಸಾರೆ ಸಂವತ್ಸರಂ ಸಾ
ಸಿರದಾಜ್ಞುರ್ನಿಜಾಜು ಸಂದೊಪ್ಪುವ ಕಲಿಯುಗ ರಕ್ತಾಕ್ಷಿಯೊ
ಮಾಘ ಮಾಸಾ
ಪರಪಕ್ಷಂ ಸಚ್ಚತುರ್ದ್ದಸ್ಯ ಹಿಮಕಿರಣ ವಾರಂ ಬರಲ್ ಪದ್ಮರಾಜಂ
ಬರೆದತ್ಯಂತಕ್ಕಜಂದತ್ಯಧಿಕ ಭಕತಿಯಿಂದೀ ನೇಮಿ ಸತ್ಕಾವ್ಯಮಂ ||
ಎಂದಿದ್ದು ಪ್ರತಿಕಾರನ ವಿಚಾರವಿದೆ. ಶಕಟರೇಫದ ಬಳಕೆ ಇದೆ.

796

ಕೆ. ಎ. ೨೪೯	ನೇಮಿನಾಥಪುರಾಣ	ಚಂಪು
೧೩"×೭.೮"	ನೇಮಿಚಂದ್ರ	ಸು. ೧೧೮೦
೧-೨೧೯ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ: ಅರ್ಹನೇಮಿಪುರಾಣಂ ||
ಶ್ರೀಮತೇ ನೇಮಿನಾಥಾಯ ನಮಃ ಸ್ಯಾದ್ವಾದ ಸಿಂಧವೆ |
ಯಸ್ಮಿನ್ನುದಿತ ಜೋಧೇಂದೌ ತ್ರೈಲೋಕ್ಯಂ ಲಕ್ಷಣಾಯತೇ || ೧ ||
ವೃತ್ತ || ಶ್ರೀಯ್ಯಶ್ವೇತಾತಪತ್ರಂ ಪ್ರಥಿತ ವಿಭವಮಂ ಚಾಮರಂ
ಬೋಧಮಂ ವಾ
ಕ್ಶ್ರೀಯೂಷಂ ಪೇರ್ಮೆಯಂ ಭಾಸುರ ಸುರಪಟಹಂ ಶಕ್ತಿಯ ಸಿಂಹಪೀಠಂ
ಶ್ರೀಯಾಯುಕ್ತಂ ವಾಙ್ಪಿನಂ ಬಾವಳಿಯ ವಿಲಶಿತಾಶೋಕಮಂದಾರವರ್ಷಂ
ಚ್ಛಾಯಾಚ್ಛಂನಾಂಗನಾದಂ ತ್ರಿಭುವನ ವಿನುತಂ ನೇಮಿ ರಕ್ಷಿಕ್ಕೆ
ನಮ್ಮಂ || ೨ ||

ಅಂತ್ಯ : ಮಧುಮಾಯಾಮಥನಂ ಸಮುದ್ಧೃತ ಮಹಾಗೋತ್ರಂ ಗುಣೋದ್ದಾಮ ಧ
ರ್ಮ್ಮಧರಾ ಕಂಟಕ ಕೈಟಭಾಪಹರಣಂ ವಾಚಾಳ ಚಾಣೂರ ವಾ
ರಿಧೀಶಂ ಶೋಷಣ ಬಾಡಬಾಗ್ನಿ ಕಲಿಕಂಸಧ್ವಂಸಕಂ ಕಾಳಿದಂ
ಕದನಕ್ರೀಡೆಯನಾಡಿ ನಿತ್ಯಜಯಮಂ ಶ್ರೀ ವೀರನಾರಾಯಣಂ ||
ಗದ್ಯ || ಇದು ಮೃದುಪದ ಬಂಧ ಬಂಧುರ ಸರಸ್ವತೀ ಸೌಭಾಗ್ಯ ವ್ಯಂಗ ಭಂಗಿ
ನಿಧಾನ ದೀಪವರ್ತ್ತಿ ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರ
ಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತ್ತಿ ಶ್ರೀವೀರಬಲ್ಲಾಳದೇವ x x ಶ್ರೀ
ವೀರ ನಾರಾಯಣ ಪ್ರತಾಪ ವರ್ನ್ನನಂ ಅಷ್ಟಮಾಶ್ವಾಸಂ ||

ವಿಷಯ : ನೇಮಿನಾಥ ತೀರ್ಥಂಕರರ ಕಥೆ.

ವಿಶೇಷ : ಪತ್ರದ ಒಂದುಕಡೆ ಬರೆದಿದೆ. ಆರಂಭದ ಎರಡು ಪ್ರತ್ಯೇಕ ಪತ್ರಗಳಲ್ಲಿ ೫೩ ನೇ ಪದ್ಯದ ವರೆಗಿನ ವಿಷಯಸೂಚಿ ಇದೆ.

797

ಕೆ. ೫೯೫	**ನೇಮಿನಾಥಪುರಾಣ**	**ಚಂಪು**
೧೮.೬"×೧.೮"	ಮಹಾಬಲ	ಸು. ೧೨೫೪
೧-೧೩೫ ಪತ್ರ	೧೨ ಪಂಕ್ತಿ	೮೫ ಅಕ್ಷರ

ಆದಿ : ನೇಮಿನಾಥಪುರಾಣ.
ಶ್ರೀಮನ್ನಮ್ರ ನರಾಮರೋರಗಪತಿಸ್ತೋಮಸ್ಫುರನ್ಮೌಲಿ ಮಾ
ಲಾ ಮಾಣಿಕ್ಯ ಮಯೂಖ ಮಾನಿತ ಮದೇಭಾರಾತಿ ಪೀಠಾಧಿಪೋ
ದ್ಘಾಮೈಶ್ವರ್ಯ ವಿರಾಜಿತಂ ನಮಗೆ ಮಾಳ್ಕಿಷ್ಟಾರ್ತ್ಥ ಸಂಸಿದ್ಧಿಯಂ
ಶ್ರೀಮನ್ನೇಮಿ ಜಿನೇಶ್ವರಂ ನಿರವಧಿ ಶ್ರೀ ಜೀವಿತಾಧೀಶ್ವರಂ ||

ಅಂತ್ಯ : ಹರಿವಂಶಾಭ್ಯುದಯಂ ಮಹಾಬಲ ಕೃತಂ ಶ್ರೀ ನೇಮಿತೀರ್ತ್ಥೇಶ್ವರಾ
ಚರಿತಂ ಕೇತೆಯ ನಾಯಕೋದ್ಯಮದಿನಾದಂ ಕಾರಿತಂ ಕಾವ್ಯಮ
ಚ್ಚರಿಯಂ ಸರ್ವ್ವಜಗಜ್ಜನಕ್ಕೊದವಿಸುತ್ತುಂ ಶಬ್ದದಿಂದರ್ತ್ಥದಿಂ
ಪರೆಗೀ ವಿಶ್ವವಸುಂಧರಾ ವಳಯದೊಳ್ಭದ್ರಂ ಶುಭಂ ಮಂಗಲಂ ||

X X X X

ಷಡಧಿಕ ಸಪ್ತತಿ ವತ್ಸರದ
ದೊಡಗೂಡಿದ ಶತ ಸಮಧಿಕ ವರ್ಷ ಸಹಸ್ರಂ
ಕಡೆಯ ಶಕನೃಪನ ಕಾಲಂ
ಕಡೆಯಾಷಾಢದೊಳಗೂರ್ಜ್ಜಯಿತ ಸಿತಪಕ್ಷಂ

X X X X

ಭರದಿಂ ಲಕ್ಷ್ಮೀಧರಂ ಶ್ರೀಧರನ ತನುಜನಾರಯ್ಯುತುಂ ಪದ್ಮಜಾತ್ಯಂ
ತರದ ಪ್ರಸ್ತಾರಮಂ ಲೀಲೆಯೊಳೆ ಬರೆಯೆ ಪೇಳ್ದಂ ತದಾಮ್ನಾಯ ಶಿಕ್ಷಾ
ಗುರುವಿ ಶ್ರೀ ನೇಮಿತೀರ್ತ್ಥೇಶ್ವರ ಚರಿತಮನಾ ತೀರ್ತ್ಥಕೃತ್ಪಾದಯುಗ್ಮಾಂ
ಬರುಹ ದ್ವಂದ್ವದ್ವಿರೇಫಂ ಸಹಜ ಕವಿ ಮನೋಗೇಹ ಮಾಣಿಕ್ಯದೀಪಂ ||

ಗದ್ಯ || ಯಿದು ಪರಮ ಪ್ರವಚನ ಪಯಃ ಪಾರಾವಾರ ಶರತ್ಸಾಂದ್ರ ಚಂದ್ರ ಶ್ರೀಮನ್ಮಾಧವ ಚಂದ್ರ ತ್ರೈವಿದ್ಯ ಚಕ್ರವರ್ತ್ತಿ ಶ್ರೀಪಾದಪ್ರಸಾದಾಸಾದಿತ ಸಕಲ ಕಲಾಪ ಸಹಜಕವಿ ಮನೋಗೇಹ ಮಾಣಿಕ್ಯದೀಪ ವಿರಚಿತಮುಂ ಸ್ಯಾದ್ವಾದ ವಿದ್ಯಾಪ್ರಭಾವ x x x ನೇಮಿನಾಥ ಪುರಾಣದೊಳ್ ಪರಿನಿರ್ವಾಣ ಕಲ್ಯಾಣ ವರ್ನ್ನನಂ ಷೋಡಶಾಶ್ವಾಸಂ || ೧೬ ||

ವಿಷಯ : ನೇಮಿನಾಥ ತೀರ್ಥಂಕರರ ಕಥೆ.

ವಿಶೇಷ : ಶಕಟರೇಫದ ಪ್ರಯೋಗವಿದೆ. ಪ್ರತಿಯ ಕೊನೆಯಲ್ಲಿ ಪ್ರತಿಕಾರನು ಬರೆದಿರುವ ಪದ್ಯಗಳಿಂದ ಪ್ರತಿಮಾಡಿದವನು ಪದ್ಮರಾಜನೆಂತಲೂ, ಮಾಡಿದ ಕಾಲ ಪಿಂಗಳ ಸಂವತ್ಸರದ ಮನಂಗೊಳಿಸುವ ಪುಷ್ಯ ಬಹುಳ ದಸ್ಸುದಿ ತಿಥಿಯೊಳ್ ಕಂಗೊಳಿಸಿ ಸೌಮ್ಯವಾರದೊಳಂಗಜ ಜಿತ ನೇಮಿನಾಥ ....ಬರೆದೆಂ ಎಂದೂ ತಿಳಿಯುತ್ತದೆ.

798

ಕೆ. ಎ. ೬೭/೧	**ನೇಮಿನಾಥಪುರಾಣ**	ಚಂಪು
೧೨.೯"×೭.೯"	ಮಹಾಬಲ	೧೨೫೪
೧-೪೫೫ ಪತ್ರ	೨೬ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ನೇಮಿನಾಥ ಪುರಾಣಂ ||
ಶ್ರೀಮನ್ನಮ್ರ ನರಾಮರೋರಗಪತಿಸ್ತೋಮಸ್ಫುರನ್ಮೌಲಿ ಮಾ
ಲಾ ಮಾಣಿಕ್ಯ ಮಯೂಖ ಮಾನಿತ ಮದೇಭಾರಾತಿ ಪೀಠಾಧಿಪೋ
ದ್ದಾಮೈಶ್ವರ್ಯ ವಿರಾಜಿತಂ ನಮಗೆ ಮಾಳ್ಕಿಷ್ಟಾರ್ಥ ಸಂಸಿದ್ಧಿಯಂ
ಶ್ರೀ ಮನ್ನೇಮಿಜಿನೇಶ್ವರಂ ನಿರವಧಿ ಶ್ರೀ ಜೀವಿತಾಧೀಶ್ವರಂ || ೧ ||

ಅಂತ್ಯ : ಷಡಧಿಕ ಸಪ್ತತಿ ವತ್ಸರ
ದೊಡಗೂಡಿದ ಶತ ಸಮಧಿಕ ವರ್ಷ ಸಹಸ್ರಂ
ಕಡೆಯ ಶಕನೃಪನ ಕಾಲಂ
ಕಡೆಯಾಷಾಢದೊಳಗೂರ್ಜ್ಜಯಿತ್ತ ಸಿತಪಕ್ಷಂ
ಸಮನಿಸಿದ ಸಪ್ತಮಿಾ ದಿನ
ತಿಮಿರದಿ ದ್ವಾರದಲ್ಲಿ ನೆಗಳ್ದುದು ಲೊಕೋ

ತ್ರಮವಿಾಕಾವ್ಯಂ ಭಾವಕ
ಸಮುದಯ ಭಾವ್ಯಂ ಜಗಜ್ಜನ ಶ್ರುತಿಸೇವ್ಯಂ ।
ಭರದಿಂ ಲಕ್ಷ್ಮೀವರಂ ಶ್ರೀಧರನು ತನುಜನಾರೆಯ್ದುತ್ತುಂ ಪದ್ಯಜಾತ್ಯಂ
ತರದ ಪ್ರಸ್ತಾ........ಬರೆಯ ಪೇಳ್ದಂ ತದಾಮ್ನಾಯ ಶಿಕ್ಷಾ
ಗುರುವಿ ಶ್ರೀನೇಮಿತೀರ್ಥೇಶ್ವರಚರಿತಮನಾ ತೀರ್ಥಕೃತ್ಪಾದ ಯುಗ್ಮಾಂ
ಬುರುಹದ್ವಂದ್ವದ್ವಿರೇಪಂ ಸಹಜಕವಿ ಮನೋಗೇಹ ಮಾಣಿಕ್ಯದೀಪಂ ॥

ಗದ್ಯ॥ ಇದು ಪರಮ ಪ್ರವಚನ x x x ಸಹಜಕವಿ ಮನೋಗೇಹ ಮಾಣಿಕ್ಯ
ದೀಪ ವಿರಚಿತಮುಂ x x x ನೇಮಿನಾಥ ಪುರಾಣದೊಳ್ಪರಿನಿರ್ವಾಣ
ಕಲ್ಯಾಣ ವರ್ನ್ನನಂ ಷೋಡಶಾಸ್ವಾಸಂ ಅಂತು ಆಶ್ವಾಸ ೧೬ಕ್ಕಂ
ಮಂಗಲ ಮಹಾ ಶ್ರೀ॥

ವಿಷಯ : ನೇಮಿನಾಥ ತೀರ್ಥಂಕರರ ಕಥೆ.

ವಿಶೇಷ : ಪತ್ರಗಳ ಒಂದುಕಡೆ ಮಾತ್ರ ಬರೆದಿದೆ. ಆರಂಭದ ಎರಡು ಪ್ರತ್ಯೇಕ ಪತ್ರಗಳಲ್ಲಿ ಗ್ರಂಥಸ್ಥ ವಿಷಯಗಳ ಸೂಚೀ ಇದೆ. ಶಕಟರೇಫದ ಬಳಕೆ ಇದೆ. ಸುಂದರಾಕ್ಷರ. ಅಂತ್ಯದಲ್ಲಿ—

ವೃ ॥ ವರಸತ್ಯಂ ಶತದುಂದುಭಾಬ್ದದ ಸಭಾದ್ರಾ ಪೂರ್ವದ ದ್ವಾದಶೀ
ಬರೆ ಹೇಮಾದ್ರಿ ಜಿನೇಂದ್ರ ಪಾರ್ಶ್ವರ ಲಸತ್ ಶ್ರೀಪಾದಮೂಲಾಗ್ರದೊಳ್
ದುರಿತಾರಾತಿ ವಿನಾಶ ನೇಮಿಜಿನ ಪೌರಾಣಂ ಜಗತ್ಪಾವನಂ
ಬರಸಲ್ ಸದ್ಗುಣಿ ಪದ್ಮರಾಜನಿದು ಪೂರ್ಣಂ ನೇಮಿಚಂದ್ರಾಖ್ಯನಿಂ ॥

ಶ್ರೀರಸ್ತು ॥ ಅತ್ಯಂತಾದರದಿಂ ಶುಭ
ಚಿತ್ತಂ ಮಲೆಯೂರ ಪದ್ಮರಾಜ ಲಿಖಿಸಿ
ದಿತ್ತಡೆ ತ್ರಿಕದಂಬ ಪುರಾ
ಶ್ರಿತ್ಯಂ ಗುಣಿ ನೇಮಿಚಂದ್ರ ನಾನಿದ ಬರೆದೆಂ ॥
ಜಯಬಲ ನಾರಾಯಣ ನುತ
ಜಯನಿರುಪಮ ನಿತ್ಯಸೌಖ್ಯ ನಿರ್ಮಲ ಚರಿತಾ
ಜಯ ತ್ರಿಭುವನ ಪೂರ್ಣ್ನಚಂದ್ರಾ
ಜಯಜಂ ಗುಣರುಂದ್ರಂ ಸಾಂದ್ರ ನೇಮಿಜಿನೇಂದ್ರಾ ॥
ಏತತ್ಪದ್ಯತ್ರಯಂ ದೇವಚಂದ್ರಕೃತಂ ॥ x x x ॥
ಗ್ರಂಥಪ್ರಮಾಣ ೯೦೦೦ ಎಂದಿದೆ ॥

ಇದರೊಂದಿಗೆ ಹೊಯ್ಸಳರಾಜರ ಚರಿತ್ರೆ ಎಂಬ ಕೃತಿ ಇದೆ.

799

ಕೆ. ೧೦೬ ನೈಷಧಟೀಕೆ ಶ್ಲೋಕ, ಟೀಕು
೧೩-೧" × ೧-೨" ಕರ್ಣಪಾರ್ಯ ಸು.೧೧೪೦
೩೧–೬೬ ಪತ್ರ ೬ ಪಂಕ್ತಿ ೫೨ ಅಕ್ಷರ

ಆದಿ: ಪಂಡಿತಃ ನಿಪುಣ ನಾ....ತೀಕ್ಷ್ಣವಾಗಿ ದಶತಃ ಕಚ್ಚಿತಂ ಯಿಕ್ಷಂತಾ.... X X X (೩೯ನೆಯ ಪತ್ರ) ರೋಮರೇಖಯಾ । ರೋಮರಾಜಿಯಿಂದ । ಪ್ರವಿಭಜ್ಯ । ವಿಂಗಡಿಶಿ । ಕೃತಸೀಮ್ನಿ । ಮಾಡಲ್ಪಟ್ಟ ಎಲ್ಲೆಯಲ್ಲಿ । ರಜ್ಯತಃ । ಒಪ್ಪುತಲಿದ್ದ........

... .ಕಾಂತಿಕರ್‍ೈರಗಾಧ ತಾಂ ।

ಸ್ಮರಯೌವನಯೋಃ ಖಲು ದ್ವಯೋಃ ಪ್ಲವಕುಂಭೌ ಭವತಃ ಕುಚಾವುಭೌ ॥
ಕಾಂತಿಕರ್‍ೈಃ ಕಾಂತಿಗಳೆಂ .. ..ನರದತನವನು । ಗಮಿತೆ ಯೇರಿಸಲು ಪಡುತಂ ಯಿದ್ಧಂತಾ । ತದ್ವಪುಷಿ ಆ ದಮಯಂತಿಯ ಶರೀರದಲ್ಲಿ । ಪ್ರಸರ್ಪತೋಃ........ರಡಾಗಿದ್ದಂತಾ । ಸ್ಮರಯೌವನಯೋರಪಿ.

ಅಂತ್ಯ: (೬೫ನೆಯ ಪತ್ರ) ಅನುಭವತಿ ಶಚೀತ್ಥಂ ಸಾ ಘೃತಾಚೀಮುಖಾಭಿಃ
ನ ಸಹಸಚರೀಭಿಃ ನಂದನಾನಂದಮುಚ್ಚೈಃ ।

ಇತಿ ಮತಿರುದಯಾಸೀತ್ ಪಕ್ಷಿಣಃ ಪ್ರೇಕ್ಷ್ಯ ಭೈಮೀಂ
ವಿಪಿನಭುವಿ ಸಖೀಭಿಃ ಸಾರ್ಧಮಾಬದ್ಧಖೇಲಾಂ ॥

ವಿಪಿನಭುವಿ । ವನಪ್ರದೇಶದಲ್ಲಿ । ಸಖೀಭಿಃ । ಸಂಗಾತಿಗಳಿಂದ । ಸಾರ್ಧಂ । ಕೂಡಿಕೊಂಡು । ಆಬದ್ಧಖೇಲಾಂ । ಕಟ್ಟಲ್ಪಟ್ಟ ಕ್ರೀಡೆಯನ್ನುಳ್ಳಂಥಾ । ಭೈಮೀಂ । ದಮಯಂತಿಯನು । ಪ್ರೇಕ್ಷ್ಯ । ನೋಡಿ । ಪಕ್ಷಿಣಃ । ಹಂಸಕ್ಕೆ ಸಾ ಶಚೀ । ಆ ಇಂದ್ರಾಣಿಯು । ಘೃತಾಚೀ ಮುಖಾಭಿಃ । ಘೃತಾಚೀ ಮೊದಲಾಗಿರುವಂಥಾ । ಸಹಚರೀಭಿಸ್ಸಹ । ಸಂಗಾತಿಗಳೊಡನೆ ಕೂಡಿಕೊಂಡು X X (೬೬.ನೆಯ ಪತ್ರ) ॥ ೧೧೦ ॥ ಯಿತಿ ನೈಷಧೀಯೆ ಮಹಾಕಾವ್ಯೇ ದ್ವಿತೀಯಃ.... X X ಶ್ರೀನಿವಾಸಸ್ಯ ಪುತ್ರಕ........ತಿಮ್ಮರಾಯ ಪಠಿತ್ವಾಥ ಹಸ್ತೇನ ಲಿಖಿತಂ ಕೃತಂ.

ವಿಷಯ: ನಳದಮಯಂತಿಯರ ಕಥೆ.

ವಿಶೇಷ: ಅಸಮಗ್ರ ಪ್ರತಿ. ನಂದಿನಾಗರಿ ಲಿಪಿ. ೩೧–೩೯ ಕ್ರಮಾಂಕದ ವರೆಗಿನ ಪತ್ರಗಳು ಮುರಿದು ಒಂದೊಂದು ತುಂಡು ಮಾತ್ರ ಇರುವುದರಿಂದ ೩೧ನೆಯ

ಪತ್ರದ ಆದಿಯನ್ನು ಬರೆದು ೩೯ನೆಯ ಪತ್ರದಲ್ಲಿರುವುದನ್ನು ಮತ್ತೆ ಬರೆದಿದೆ. ಇದರಂತೆಯೇ ೬೬ನೆಯ ಪತ್ರದ ಒಂದು ತುಂಡು ಮಾತ್ರ ಇರುವುದರಿಂದ ೬೫ ನೇ ಪತ್ರದಲ್ಲಿರುವುದನ್ನು ಬರೆದು ಮತ್ತೆ ೬೬ರ ಕೊನೆಯನ್ನು ಬರೆದಿದೆ. ೩೯–೪೦ ನೆಯ ಪತ್ರಗಳು ಮುರಿದಿವೆ. ಮಧ್ಯೆ ಕೆಲವು ಗರಿಗಳ ಅಂಚು ಮುರಿದಿದೆ.

800

ಕೆ. ೨೩/೨	**ನೋಂಪಿಯ ಕಥೆಗಳು**	ಗದ್ಯ
೧೬.೭″×೨″	?	?
೪೩ ಪತ್ರ	೧೨ ಪಂಕ್ತಿ	೭೭ ಅಕ್ಷರ

ಆದಿ : ಶ್ರೀವರ್ಧಮಾನ ಜಿನಪಂ
ಗಾನತನಾಗೊಲಿದು ಭಕ್ತಿಇಂ ವಿರಚಿಸುವೆಂ
ಭೂಜನ ನೋಂಪಿ ವಿದಾನದ
ಪಾವನತರಮೆನಿಪ ಸಪ್ತಜ್ಯೋತಿಯ ಕಥಯಂ

ಅದೆಂತೆಂದೊಡೆ ಜಂಬುದ್ವೀಪದ ಭರತಕ್ಷೇತ್ರದೊಳು ಮಗದೆ ಎಂಬುದು ನಾಡು । ರಾಜಗ್ರುಹವೆಂಬುದು ಪೊಳಲೂ । ಆದನಾಳ್ವಂ । ಶ್ರೇಣಿಕ ಮಹಾರಾಜ ಆತನ ಪಟ್ಟದರಸಿ ಚೇಳಿನಿ ಮಹಾದೇವಿ ಎಂಬಳಂತ ರಿರ್ವ್ವರುಂ ।

ಅಂತ್ಯ : ಬಳಿಕ್ಕಖಿಳಕರ್ಮ ವಿಮುಕ್ತರೆನಿಪ್ಪರುದ್ದಮಾಂಜಲಿಯ ವಿದಾನಮುಂ ಬಿಡದೆ ಮಾಡಿದ ಭವ್ಯಜನಂಗಳೆಲ್ಲರುಂ ॥ ಯಿಂತಿದನತ್ಯಾನಂವದೆ ನೋತವರುಂ ವರೆವ ಕೇಳ್ವ ಭಾಜಿಸುವವರುಂ ಸಂತತವದ್ಬುದಯ ಶ್ರೀ ಕಾಂತೆಗೆ ಪತಿಯಪ್ಪರಮುಳಭೋದರೆನಿಪ್ಪರೂ ॥ ಮಂಗಳ ಮಹಾ ಶ್ರೀ ॥

ವಿಷಯ : ಜೈನರ ನೋಂಪಿಯ ಕಥೆಗಳು.

ವಿಶೇಷ : ಶಿಥಿಲ, ಗರಿಗಳ ಅಂಚುಗಳು ಮುರಿದಿವೆ. ಕ್ರಮಾಂಕ ಸರಿಯಿಲ್ಲ. ಅಂತ್ಯದಲ್ಲಿ ಹೀಗಿದೆ “ ಸಾವ್ವರಿ ಸಂವತ್ಸರದ ಭಾದ್ರ ಶುದ ೧ ರಲ್ಲು ಬಲ್ಲಾಳಪುರದ ಬಸ್ತಿಯಲ್ಲಿ ಪದ್ಮಪ್ರಭತೀರ್ಥಂಕರ ಚರಣ ಸಂನಿಧಿಯಲ್ಲಿ ದೊಡಶಾಮಿಗೆ ಲಕ್ಷ್ಮಿಸೇನದೇವರು ನೋಂಪಿಕತೆಯ ಬರದು ಕೊಟ್ಟರು

ವರ್ದ್ಧತಾಂ ಜಿನಸಾಸನಂ". ಇದೇ ಕಟ್ಟನಲ್ಲಿ ದ್ವಾದಶಾನುಪ್ರೇಕ್ಷೆ, ಧರ್ಮ ಪರೀಕ್ಷೆಗಳೆಂಬ ಗ್ರಂಥಗಳಿವೆ.

801

ಕೆ.ಬಿ. ೨೫೨ ನೋಂಪಿಯ ಕಥೆಗಳು ಪದ್ಯ, ಗದ್ಯ

೮"×೬.೭" ? ?

೧–೩೧ ಪತ್ರ ೨೩ ಪಂಕ್ತಿ ೨೭ ಅಕ್ಷರ

ಆದಿ : ಅನಂತ ತೀರ್ಥೇಶ್ವರನ ನೋಂಪಿ.

ಕಂದ ॥ ಶ್ರೀಮದನಂತ ಚತುಷ್ಟಯ
ದಾಮಂ ಶಾಶ್ವಿತ ಸುಖಾಂಮ್ರುತಾಂಬುಧಿ ನಮಗಂ
ಪ್ರೇಮದೊಳನಂತ ಸುಖಮಂ
ಕಾಮಹರಂಮಾಳ್ಕನಂತ ತೀರ್ಥಾದೀಶಂ ॥
ಅನಂತವೀರ್ಯ್ಯಮನಂತ ಸೌಖ್ಯತ್ವಮನಂತ ದರ್ಶನಂ
ಬಿಭರ್ತಯೋನಂತ ಚತುಷ್ಟಯಂ ವಿಭುಃ ॥
ಸನೋಸ್ತು ಶಾಂತ್ರಿಭ್ಯವದುಃಖಶಾಂತಯೆ ॥
ಯೀ ಜಂಬೂದ್ವೀಪದೊಳಭಿ
ರಾಜಿಪುದಾ ಮಗದ ವಿಷಯಮದರೊಳಗೆಸೆವಾ
ರಾಜಗ್ರುಹ ನಗರದಧಿಪಂ
ರಾಜಿಸುಗುಂ ಶ್ರೇಣಿಕಂ ಮಹಾಮಂಡಳಿಕಂ ॥

ಅಂತ್ಯ : ಧರೆಯೊಳು ಚಂದ್ರನ ಷಷ್ಟಿಯ
ವರ ನೋಂಪಿಯನೋವಿದು ನೋಂಪ ನೋನಿಪವರ್ಗಭರ್ವ
ಗುರುತರ ದುರಿತಾಹಾರಂ
ದೊರೆಕೊಳ್ಗುಂ ಸಕಲಸೌಖ್ಯಮುಂ ಪರಮಪದಂ ॥
ಯಿಂತೆಸವೀ ಕಥೆಯಂ ಭುವ
ನಾಂತರದೊಳು ಪೇಳ್ವ ಕೇಳ್ವರ್ಗೆ ಭವ್ಯರ್ಗೆ
ಸಂತತ ಮುಕ್ತಿಶ್ರೀಯನ
ನಂತ ಗುಣಾಂಬೋಧಿಚಂದ್ರನಾಥಂ ಕುಡುಗಂ ॥
ಅಂತು ಚಂದ್ರನಾಥ ದರ್ಶನ ನೋಂಪಿ ಸಮಾಪ್ತಿ ಮಂಗಳ ಮಹಾ ಶ್ರೀ ॥

ವಿಷಯ : ಜೈನನೋಂಪಿಯ ಕಥೆಗಳು.

ವಿಶೇಷ : ಇದರಲ್ಲಿ ಅನಂತ ತೀರ್ಥೇಶ್ವರ ನೋಂಪಿ, ಆದಿತ್ಯವಾರದ ನೋಂಪಿ, ಸಪ್ತ ಜ್ಯೋತಿಯ ನೋಂಪಿ, ಕರ್ಮ ನಿರ್ಜರೆಯ ನೋಂಪಿ, ನಾಗರಪಂಚಮಿ ನೋಂಪಿ, ಕಲ್ಪಕುಜದ ನೋಂಪಿ, ಶಿವರಾತ್ರೆ ನೋಂಪಿ, ಕರ್ಮಹರಾಷ್ಟಮಿ ನೋಂಪಿ, ಚಂದನ ಷಷ್ಟಿ ನೋಂಪಿ ಎಂಬಿವೇ ಮೊದಲಾದ ನೋಂಪಿಯ ಕಥೆಗಳಿವೆ ಮೋಡಿ ಅಕ್ಷರ.

802

ಕೆ ೨೭೧/೧	**ಪಂಚಕಲಶ ದೀಕ್ಷಾವಿಧಿ**	ಗದ್ಯ
೮.೭″×೧.೪″	?	?
೧-೧೪ ಪತ್ರ	೭ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ........ಪಂಚ್ಚಕಳಸ ದೀಕ್ಷ ಮಡುವ ಕ್ರಮಾ॥ ಶ್ರೀಗುರುವಿನಿಂದ್ದಾದಾ ಅಘೋರ ಚಿತ್ಪುರುಶಯೆಂ ನ್ನಮಃ ತತ್ಪುರುಶವ ಓಂ ಅಘೋರವಕ್ರ ಯೆನ್ನಮಃ। ಓಂ ...ವಕ್ರ ಯೆನ್ನಮಃ। ರಾಯೊಂನ್ನಮಃ। ಓಂ ವಾಮದೇವ ಯೆಂನ್ನಮಃ X X ಯೆಂದು ಪಂಚ್ಚಪಲಂಗ್ಗಳಾ ಮುಖ್ಯ ಮಂತ್ರದಿಂದಲಿ। ಕಳಸಪ್ರಾಪ್ಪೆವಂ ಮ್ಮಾಡುವದೂ॥

ಅಂತ್ಯ : ಹದಿನಾಲ್ಕು ಲೋಕದರಸನ ಪದದಿ ಬಸವಂಣ। ಉದಯಸ್ತಮಾನ ವೆಂಬೆರಡಳಿದು ಸ್ವಯವಾಯು। ಚದುರ ವೇದಾದಿ ಶಿವಶರಣ ಭಕ್ತಾದಿಗಳು ಮುದದಿಂದ ಗರುಸಂಗ್ಗಮೇಶ್ವರನ ಪೂಜಿಸಲು। ವಿಧಿಯ ಭವಂಗಳನು। ಕಂಡ್ಡಿಸುತ ತಂನ್ನ। ಹ್ರುದಯಕಮಲದೊಳಿಟ್ಟು ರಕ್ಷಿಪನು ಶಿವನೂ॥ ೯॥ ಶ್ರೀ ಶ್ರೀ ಶ್ರೀ

ವಿಷಯ : ಪಂಚಾಚಾರ್ಯರ ಉತ್ಪತ್ತಿ ಮತ್ತ ದೀಕ್ಷಾವಿಧಿ.

ವಿಶೇಷ : ಈ ಕೃತಿಯಾದ ಮೇಲೆ ೧೮ನೇ ಪತ್ರದ ಪೂರ್ತಿ ಕೆಲವು ಹಾಡುಗಳಿವೆ. ಬಳಿಕ ಇದೇ ಕಟ್ಟಿನಲ್ಲಿ ಬಸವ ಚರಿತ್ರೆ, ಗುರುರಗಳೆ ಎಂಬ ಗ್ರಂಥಗಳಿವೆ. ಕೆಲವು ಗರಿಗಳನ್ನು ಹುಳು ಹೊಡೆದಿವೆ.

803

ಕೆ.ಎ ೨೧೫/೨	**ಪಂಚಕಲ್ಯಾಣ ಸ್ತೋತ್ರ**	ಶ್ಲೋಕ, ಟೀಕು
೧೨.೯″×೮″	ಆಶಾಧರಸೂರಿ	?
೧-೨೪ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ: ಅರ್ಹತ್ಸ್ತೋತ್ರ ॥
ಪಂಚಕಲ್ಯಾಣನಾಥಾಯ ಸಂಚಿತಾಘ ವಿನಾಶಿನೇ।
ಪಂಚಮಜ್ಞಾನ ನೇತ್ರಾಯ ಜಿನೇಂದ್ರಾಯ ನಮೋನಮಃ ॥

ಅರ್ಹತ್ಪರಮೇಶ್ವರನಂ ಪಂಚಕಲ್ಯಾಣಂಗಳಿಂ ಸ್ತುತಿಸಲಿಚ್ಛೈಯನುಳ್ಳ ಆಶಾಧರಸೂರಿಗಳು ಮೊದಲೊಳು ಗರ್ಭಾವತರಣ ಕಲ್ಯಾಣದಿಂ ಸ್ತುತಿಯಿಸಿದಪರು ॥ ಅಥವಾ ಪ್ರತಿಮೆಯೊಳು ಪಂಚಕಲ್ಯಾಣಂಗಳನಾರೋಪಿಸಲಿಚ್ಛೈಸುವ ಆಶಾಧರರು ಮೊದಲೊಳು ಗರ್ಭಾವತರಣ ಕಲ್ಯಾಣಮನಾರೋಪಿಸಿದಪರು.

ಅಂತ್ಯ: ಅಲ್ಲಿಂದ ಪೊಱಮಡುವ ಬುದ್ಧಿಯಿಂ ಕಾಳ್ಗಿಚ್ಚಿಂಗಭಿಮುಖವಾಗಿ ಪೋಗುತಿರ್ಪ ಪಥಿಕರುಗಳನು ಕಂಡು ಪರೋಪಕಾರ ತತ್ಪರನುಂ ದಯಾದ್ರ್ರಹೃದಯನುಮಪ್ಪ ಪುರುಷಂ ಆ ಪಥಿಕರುಗಳಿಗೆ ಆ ಅರಣ್ಯದಿಂದ ಪೊಱಮಡುವ ಮಾರ್ಗವನೂ ಉಪದೇಶಿಸಲು ಇಚ್ಛೈಸುವನು ಎಂಬೀ ವಚನಮನಿಲ್ಲಿ ಅರಿಪುಉದು .... ಇಂತು ಅರ್ಹಸ್ತೋತ್ರದ ಕರ್ಣಾಟ ವ್ಯಾಖ್ಯಾನಂ ಸಮಾಪ್ತಂ.

ವಿಷಯ: ಜೈನಸ್ತುತಿ.

ವಿಶೇಷ: ಮೊದಲ ಒಂದು ಪತ್ರದಲ್ಲಿ ಶ್ಲೋಕಾನುಕ್ರಮಣಿಕೆಯೂ, ಮತ್ತೆ ೪ ಪತ್ರಗಳಲ್ಲಿ ಪಂಚಕಲ್ಯಾಣಸ್ತೋತ್ರದ ಇತಿಹಾಸವೂ ಇವೆ. ಶಕಟರೇಫ ಪ್ರಯೋಗ ಇದೆ. ಇದೇ ಪುಸ್ತಕದಲ್ಲಿ ಸಿದ್ಧಸ್ತೋತ್ರವಿದೆ. 24-1-1903 ರಲ್ಲಿ ಈ ಪ್ರತಿಯನ್ನು ಬರೆದು ಮುಗಿಸಿದೆ.

804

ಕೆ.ಎ. ೨೮೪/೧೨	ಪಂಚಗುರುಸ್ತೋತ್ರಂ	ಕಂದ
೧೨.೯"×೮.೨"	?	?
೧ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ: ಪಂಚಗುರು ಸ್ತೋತ್ರಂ.
ಶ್ರೀಕರಮಭೀಷ್ಟ ಸಕಲಸು
ಖಾಕರಮುಪವರ್ಗ್ಗಕಾರಣಂ ಭವಹರಣಂ
ಲೋಕಹಿತಂ ಮನ್ಮನದೊಳ
ಗೇಕಾಗ್ರದಿ ನಿಲ್ಕೆ ನಿರುಪಮಂ ಪಂಚಪದಂ ॥೧॥

ಅಂತ್ಯ : ಸಾರಂಗಳ್ ಪಂಚ ನಮು
ಸ್ಕಾರಂಗಳ್ ಸಕಲಭವ್ಯಜನ ಹೃದಯಾಲಂ
ಕಾರಂಗಳ್ ಶ್ರುತಲಕ್ಷ್ಮಿಶ್ರೀ
ಹಾರಂಗಳ್ ಮುಕ್ತಿಸುಖವ ನೆನೆವರ್ಗಕ್ಕೆ ||೧||

ವಿಷಯ : ಜೈನ ಸ್ತುತಿ.

ವಿಶೇಷ : ಪತ್ರದ ಒಂದುಕಡೆ ಬರೆದಿದೆ. ಶಕಟರೇಫ ಪ್ರಯೋಗ ಇದೆ. ಇದರಲ್ಲಿ ನೀತಿ ರಸಾಯನಂ ಮೊದಲಾದ ಇತರ ೧೧ ಗ್ರಂಥಗಳಿವೆ.

805

ಕೆ. ೪೨೦	**ಪಂಚತಂತ್ರ**	ಗದ್ಯ
೧೬.೪"×೧.೫"	ಕೃಷ್ಣರಾಜ	೧೯ನೇ ಶತಕ
೧–೧೨೪ ಪತ್ರ	೬ ಪಂಕ್ತಿ	೬೩ ಅಕ್ಷರ

ಆದಿ : ಪಂಚತಂತ್ರೀಯಂಬ ಗ್ರಂಥವಂನ್ನು ಕರ್ನಾಟಕ ಭಾಷೆಯಿಂದ ವಿವರಿಸುವ ಕ್ರಮುವೆಂತೆಂದರೆ ಸಮಸ್ತ ಭೂಮುಂಡಲ ಮಧ್ಯವಿದ್ಯೋತಮಾನವಾದ ಮಹಿತಮಹಿಳಾರೋಪ್ಯವೆಂಬ ಪಟ್ಟಣದಲ್ಲಿ ಸಕಲ ಲಕ್ಷಣಾಲಕ್ಷಿತನಾಗಿ ರಾಜಾಧಿರಾಜ ಕಿರೀಟಕೋಟಿ ಶಾಣೊಲ್ಲೀಢಿತ ಪಾದಪದ್ಮನಾದ ಸುದರ್ಶನ ನೆಂಬ ರಾಯನು ಧರ್ಮದಿಂ ಪ್ರಜಾಪಾಲನದಿಂದಿರುತಿರಲೂ ನೀತಿಯಂ ತಪ್ಪದೆ ಜನರಂಜನೆಯಂ ಮಾಡಿ ಸುಖದಿಂದ ಯಿರುತ್ತಿದ್ದನೂ |

ಅಂತ್ಯ : ಅನೇಕ ಪ್ರಕಾರ ಚಮತ್ಕಾರ ಸೂಚಕಗಳಾದ ಯಿಾ ಐದು ತಂತ್ರಗಳ ಕಥೆಗಳಂನ್ನು ವಿಷ್ಣುಶರ್ಮನ ಮುಖಗಳಿಂದ ಕೇಳಿ ರಾಜಪುತ್ರರುಗಳು ಅನೇಕ ನೀತಿಮಾರ್ಗ ವಿಶಾರದರಾಗಿ ಸೂಕ್ಷ್ಮ ಬುದ್ಧಿವುಳ್ಳವರಾಗಿ ವಿವೇಕ ಶಾಲಿಗಳಾಗಿ ಯಿರುತ್ತಿರಲು ಅವರ ತಂದೆಯಾದ ಸುದರ್ಶನನೆಂಬ ರಾಯನು ಆ ವಿಷ್ಣುಶರ್ಮನಂ ಕರಶಿ ಅವನಿಗೆ ಬೇಕಾದ ಯಿಷ್ಟಾರ್ಥಗಳಂ ಕೊಟ್ಟು ಪುತ್ರಮಿತ್ರ ಸಮೇತನಾಗಿ ಸುಖದಿಂದ ರಾಜ್ಯವಂ ಪರಿಪಾಲಿಸುತ್ತಿದ್ದನೂ ಯಂಬಲ್ಲಿಗೆ ಪಂಚತಂತ್ರ ಕಥೆ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಪಂಚತಂತ್ರದ ನೀತಿಬೋಧಕ ಕಥೆಗಳು.

ವಿಶೇಷ : ಗರಿಗಳು ಅಲ್ಲಲ್ಲಿ ಹುಳುಗಳಿಂದ ಕೊರೆಯಲ್ಪಟ್ಟವೆ. ಮಧ್ಯದಲ್ಲಿ ಕೆಲವು ಶ್ಲೋಕಗಳೂ ಮತ್ತು ಕೆಲವಕ್ಕೆ ಟೀಕು ಇದೆ. ತೆಲಗು ಅಕ್ಷರ. ಕೆ.ಬಿ. ೮೫ ನೇ ಪ್ರತಿಯ ಹೋಲಿಕೆಯಿರುವುದರಿಂದ ಇದರ ಕರ್ತೃವು ಕೃಷ್ಣರಾಜನೆಂದು ಹೇಳಬಹುದು.

806

ಕೆ. ಬಿ. [illegible]	**ಪಂಚತಂತ್ರ**	ಗದ್ಯ
೭.೭″ × ೬-೪″	ಕೃಷ್ಣರಾಜ	೧೯ನೇ ಶತಕ
೨-೧೫೩ ಪತ್ರ	೧೮ ಪಂಕ್ತಿ	೧೬ ಅಕ್ಷರ

ಆದಿ : ವಿಸ್ಫಷ್ಟವದನ ವಿಧೃತ ಕುಶಾಂಕುಶ ನಿಕೃತ್ತಾರಿ ರಾಜ ಸ್ವರುಧಿ ರಾಧಾರಾಂಚಿತ ನಿಜಧಾರ ಕುಠಾರ ಶರಣಾಗತಾ ಭಯಂಕರ ಮಕರದೀನಜಾನಾರ್ತಿತತಿಭೇಚ್ಛಿನ್ನತ್ಸ್ಯದುರ್ದಾಂತರಿಪುಮರ್ದನಾರಂಭ ಸರಭಸಶರಭ ಪ್ರಮುಖ ನಿಖಿಲ ಬಿರುದಾಂಕಿತರಾದ ಶ್ರೀಕೃಷ್ಣರಾಜ ಕಂಠೀರವ ಸಾರ್ವಭೌಮರು ಬಾಲಹಿತಾರ್ಥವಾಗಿ ಪಂಚತಂತ್ರಿಯೆಂಬ ಗ್ರಂಥವಂನು ಕರ್ನಾಟಕ ಭಾಷೆಯಿಂದ ವಿವರಿಸುವ ಕ್ರಮವೆಂತೆಂದರೆ ಸಮಸ್ತ ಭೂಮಂಡಲ ಮಧ್ಯ ವಿದ್ಯೋತಮಾನವಾದ ಮಹಿತಮಹಿಳಾರೋಪ್ಯವೆಂಬ ಪಟ್ಟಣದಲ್ಲಿ ಸಕಲ ಲಕ್ಷಣಾ ಲಕ್ಷಿತನಾಗಿ ರಾಜಾಧಿರಾಜ ಕಿರೀಟ ಕೋಟೀಶರನೆಂಬಾಲೀಢಿತ ಪಾದ ಪದ್ಮನಾದ್ಯಸುದರ್ಶನನೆಂಬ ರಾಯನು ಧರ್ಮದಿಂ ಪ್ರಜಾಪಾಲನದಿಂದಿರುತ್ತಿರಲೂ ।

ಅಂತ್ಯ : ಅವರ ತಂದೆಯಾದ ಸುದರ್ಶನನೆಂಬ ರಾಯನ ಆ ಷ್ಣುಶರ್ಮ್ಮನಂ ಕರಸಿ ಅವನಿಗೆ ಬೇಕಾದ ಯಿಷ್ಟಾರ್ಥಗಳಂ ಕೊಟ್ಟು ಪುತ್ರಮಿತ್ರ ಸಮೇತನಾಗಿ ಸುಖದಿಂದಾ ರಾಜ್ಯವಂ ಪರಿಪಾಲಿಸುತ್ತಿದನೂ ಯಲಿಗೆ ಪಂಚತಂತ್ರ ಸಮಾಪ್ತ ॥ ಇಂತು ಶ್ರೀಮದ್ರಾಜಾಧಿರಾಜ ಪರಮೇಶ್ವರ ಪ್ರೌಢಪ್ರತಾಪ ವೀರನರಪತಿ ಬಿರುದೆಂತೆಂಬರಗಂಡ x x x x ಕಂಠೀರವಾದ್ಯಾನೇಕ ಬಿರುದಾಂಕಿತರಾದ ಶ್ರೀಕೃಷ್ಣರಾಜ ಸಾರ್ವಭೌಮರವರಿಂದ ವಿರಚಿತವಾದ ಪಂಚತಂತ್ರಿ ಕಥೆ ಸಂಪೂರ್ಣಂ ಶ್ರೀ ಮಂಗಳ ಮಹಾ ಶ್ರೀರಾಮ.

ನಳನಾಮ ಸಂವತ್ಸರದ ಶ್ರಾವಣ ಶ್ಬ ೧ ಶುಕ್ರವಾರದಲ್ಲು ಖದೀಂ ಮುನಷಿ ನಾರಣಪ್ಪನವರ ಮಗ ಅಗರದ ರಾಮಪ್ಪನವರು ವೆಂಕಟರಮಣ್ಯೆಯ ಸಹಾ ಬರುದು ಕಡಬದ ವೆಂಕಟಸುಬ್ಬೈಯನವರಿಗೆ ಕೃಷ್ಣಾರ್ಪಣವಾಗಿ ಕೊಟ್ಟುಯಿಧೆ ಶ್ರೀರಾಮಚಂದ್ರಾಯ ಪರಬ್ರಂಹ್ಮಣೆ ನಮಃ

ವಿಷಯ: ಪಂಚತಂತ್ರದ ನೀತಿಬೋಧಕ ಕಥೆಗಳು.

ವಿಶೇಷ: ಗ್ರಂಥವು ಎರಡನೆಯ ಪತ್ರದಿಂದ ಪ್ರಾರಂಭವಾಗಿದೆ. ಕಾಗದವು ತೆಳುವಾಗಿದೆ. ಮಧ್ಯದಲ್ಲಿ ಕೆಲವು ಶ್ಲೋಕಗಳೂ ಮತ್ತು ಅವುಗಳಿಗೆ ಟೀಕೆಯೂ ಇವೆ.

807

ಕೆ. ೪೭೩	ಪಂಚತಂತ್ರ	ಗದ್ಯ
೧೪.೧"×೧.೩"	?	!
೨-೧೪೪ ಪತ್ರ	೭ ಪಂಕ್ತಿ	೭೦ ಅಕ್ಷರ

ಆದಿ: ಹ್ಯಾಗೆ ಗಮನಕಿರಿಸಿಕೊಂಡು ಯಿದ್ದಾನೊ । ಹಾಗೆ ಯಿರಬೇಕೂ। ಆಪತ್ತು ಬಂದಾಗ ಧೈರ್ಯವಿರಬೇಕೂ । ಐಶ್ವರ್ಯ ಬಂ.. ಧಾನವಿರಬೇಕೂ । ಆಸ್ತಾನದಲ್ಲಿ ಸಮಸ್ತರಿಗು ಸಂನ್ಮತವಾದ ಮಾತನಾಡಬೇಕೂ । ರಣಾಗ್ರದಲ್ಲಿ । ಸಾಹಸವಿರಬೇಕೂ। ಕೀರ್ತಿಯಲ್ಲಿ ಸತ್ಪುರುಷನಾಗಿಯಿರಬೇಕೂ । ಯಿದೀಗ ಉತ್ತಮುಗುಣಂಗಳೂ ॥

ಅಂತ್ಯ: ಯಿಾ ವಿಷ್ಣುಶರ್ಮನೆಂಬ ಬ್ರಾಹ್ಮಣನ ಆನೆ ಪಲ್ಲಕ್ಕಿಯಲ್ಲಿ । ಮೆರವಣಿಗೆಯಂ ಮಾಡಿಸೇ । ಯಿತ್ರಲಾಯಿಾಕುರ್‍ರು ಸಹಿತಾ । ರಾಜ್ಯವನಾಳಿಕೊಂದ್ದುರೂ । ಯಿತಿ ಸಾರಸಂಗ್ರಹೇ । ಪಂಚತಂತ್ರಯೋಗೋ ನಾಮ ಪರಿಯಾಯಃ ಕಾರ್ಯತ್ವ ತಂತ್ರ ಸಂಪೂರ್ಣ ಮಂಗಳ ಮಹಾ ಶ್ರೀ

ವಿಕ್ರಮನಾಮ ಸಂವತ್ಸರದ ಕಾರ್ತೀಕ ಬ ೧೩ ವರಿಗೆ । ಬರದಂಥಾ ಪಂಚತಂತ್ರ ಮಿತ್ರಭೇದ ತಂತ್ರ ೧ ಸುವರ್ಲಾಭ ತಂತ್ರ ೧ ಸಂದಿ ವಿಗ್ರಹತಂತ್ರ ೧ ಲಬ್ಧನಾಶ ತಂತ್ರ ೧ ಕಾರ್‍ಯ್ಯತ್ವತಂತ್ರ ೧ ಆಂತ್ತು... ತ್ರ ೫ ಬರದು ಯಿದುವ ವಾಲೆ ೧೪೪ ಕ್ಕೆ ಸಂಪೂರ್ನಂ ಮಂಗಳ ಮಹಾ ಶ್ರೀ

ವಿಷಯ: ಪಂಚತಂತ್ರದ ನೀತಿಬೋಧಕ ಕಥೆಗಳು.

ವಿಶೇಷ: ಅಸಮಗ್ರ. ಮೊದಲ ಗರಿಯಿಲ್ಲ. ಕೆಲವು ಪತ್ರಗಳು ಮುರಿದು ತುಂಡಾಗಿವೆ. ತ್ರುಟಿತ.

808

ಕೆ. ಬಿ. ೬/೧	**ಪಂಚತಂತ್ರ**	ಗದ್ಯ
೯.೭"×೭.೮"	?	?
೯-೬೯ ಪತ್ರ	೩೨ ಪಂಕ್ತಿ	೨೬ ಅಕ್ಷರ

ಆದಿ : ....ನ್ನೂ ಕೇಳಿ ಮ .. ದೈರ್‍ಯದಿಂದಾಯಿರಲೂ । ಆಯಿಲಿಗಳು । ಮಂಗಳಗಳಂ ಕೊರದು ಕಟ್ಟು... ಳಿ । ಗಜವಂನ್ನು ಯಬ್ಬಿಸಲಾಗಿ । ಆ ಆನೆ ಸಂತೋಷಧಿಂದಾ । ಯಿಚ್ಛೆಯಲ್ಲಿ ವನಾಂತ್ತರಕ್ಕೆ........ ಆ ಯಿಲಿಗಳು ತ್ರಂಮ್ಮ ತ್ತಂಮ್ಮ । ಸ್ತಾನಂಗಳಿಗೆ ಪೋದುವೂ ।

ಅಂತ್ಯ : ವಂದೂ ಕಾರ್ಯವಂ ಮಾಡಬ್ಯಾಡ ಯಂದ್ರೂ ಹೇಳಿಯಿ ಕರ್ತ್ತರೂೀ । ಸುಖದಲ್ಲಿ ಯಿರ್ದಾರೂ । ಯಂಥೂ ವಿಸ್ಣುಶರ್ಮನೆಂಬ ಬ್ರಹ್ಮ್ರಂಹ್ಮ್ರನೂ । ಮೂವರೂ ಕುಮಾರರುಗಳಿಗೇ ಪೇಳಿದನೂ ಅಸಂಪ್ರಕ್ಸ್ಯತುರಿತ್ವಮೆಂಬ್ಬಾ ಐದನೆ ತ್ರಂತ್ರ ಕಾಂ ಮಂಗಳಾ ಮಹಾ ಶ್ರೀ

X X X X

ವಿಳಂಬಿನಾಮ ಸಂವತ್ಸರದಾ । ಆಶ್ವೀಜ ಶು ೯ ಬ್ರಹಸ್ಪತಿವಾರ ಹಗಲು ೭ ಗಳಿಗೆ ವಲ್ಲಿಗೆ ಪಂಚತ್ರಂತ್ರ ಸಂಪೂರ್ನ ಮಂಗಳಾ ಮಹಾ ಶ್ರೀ—

ವಿಷಯ : ಪಂಚತಂತ್ರದ ನೀತಿಬೋಧಕ ಕಥೆಗಳು.

ವಿಶೇಷ : ಪತ್ರಗಳನ್ನು ಹುಳು ಹೊಡೆದಿದೆ. ಮೋಡಿ ಬರಹ. ಇದೇ ಪುಸ್ತಕದಲ್ಲಿ ಬತ್ತೀಸ ಪುತ್ತಳೀ ಎಂಬ ಮತ್ತೊಂದು ಕೃತಿಯಿದೆ. ಪ್ರತಿ ಸಾಲಿನ ಆದಿ ಮತ್ತು ಕೊನೆಯಲ್ಲಿ ೧ ರಿಂದ ೯ರ ವರೆಗಿನ ಅಂಕಿಗಳನ್ನು ಮತ್ತೆ ಮತ್ತೆ ಬರೆದಿದೆ.

809

ಕೆ. ಎ. ೧೭೩/೭	**ಪಂಚತಂತ್ರದ ಕಥೆ**	ಶ್ಲೋಕ, ಟೀಕು
೧೧.೧"×೭-೪"	?	?
೬೪-೧೪೭ ಪತ್ರ	೩೪ ಪಂಕ್ತಿ	೨೬ ಅಕ್ಷರ

ಆದಿ : ಶ್ರೀ ಶಿವರಾಮಯೋಗಿಬಾಲಗುರುವೇ ನಮಃ। ರಾಕ್ಷಸನಾಮ ಸಂವತ್ಸರದ ಚೈತ್ರ ಶುದ್ಧ ೧೨ ಶುಕ್ರವಾರದಲ್ಲೂ ಪೀಲುಖಾನೆ ಚವುದ್ರಿ ಮರಿಯಪ್ಪ

ನವರ ಕೊಮಾರನಾದ ಬಚ್ಚಂಣನವರ ಧರ್ಮಪತ್ನಿಯಾದ ಕೆಂಪಂಮ ನವರ ಕೊಮಾರ ದೊಡಂಣನವರಿಗೆ ಪಂಚತಂತ್ರದ ಕಥೆ ಬರೆವುದಕ್ಕೆ ಶುಭಮಸ್ತು ॥

ವಿದ್ಯಾನೀತಿ ಸಂಗ್ರಾಹೇ ವಿಷ್ಣುಶರ್ಮಸ್ಯ ಕೃತಂ । ಪಂಚತಂತ್ರಕೋ ನಾಮಾ ಪೀಠಿಕಾಯೋಗೋ ನಾಮ ಪ್ರಥಮ ತ್ರಿತೀಯ ಮಂತ್ರಭೇಧ ತಂತ್ರಮಂ ಪೇಳ್ದಪೆನ್ ॥

ಗ್ರಂಥಾ ವಿಸ್ತಾರಾ ಭಿರುಣಾಂ ಬಾಲಾನಾಂ ಮಂದಕೇತಸಾ ।
ಬುಧಾಯಾಂ ಪಂಚತಂತ್ರಾಂತೆ ಯಿದಂ ಸಂಗಸೇಪ್ಯಲಿಖ್ಯತೆ ॥

ಟೀಕು॥ ಬಾಲರಾಗಿ ಅರಿತು ಅರಿಯದವರುಗಳಿಗೆ ನೂತನವಾಗಿ ವಿದ್ಯಂಗಳು ಕಲಿಯುವವರಿಗೆ ಮೂರ್ಖರಾಗಿ ಯಿದ್ದವರಿಗೆ ನೀತಿಮಾರ್ಗಂಗಳ ನರಿಯದೋಸ್ಕರ ಯೀ ಪಂಚತಂತ್ರಮಂ ನಿರ್ಮಿಶ ಪೇಳ್ದಿನದೆಂತೆಂದಡೆ.

ಅಂತ್ಯ : ಯಿಂತೆಂಬ ನೀತಿಯುಂಟಾಗಿ ಚಿರಕಾಲ ಪರಿಯಂತರಉ ರಾಜ್ಯವನಾಳುತ್ತ ಯಿದ್ದರೂ ಯಿತಿ ಪಂಚತಂತ್ರದೊಳಗಣ ಐದು ತಂತ್ರಉ ಸಮಾಪ್ತ ಮಂಗಳ ಮಹಾ ಶ್ರೀ ॥

ಸನ್ ೧೮೫೮ನೆ ಯಿಸವಿ ಮಾಹೆ ಅಗಟಂಬರು ತಾರೀಖು ೭ ಕ್ಕೆ ಸರಿಯಾದ ಕಾಳಾಯುಕ್ತಿನಾಮ ಸಂವತ್ಸರದ ಬಾದ್ರಪತ ಬ ೩೦ ಗುರುವಾರದ ಹಗಲು ಯರಡುಗಂಟೆಗೆ ಸರಿಯಾಗಿ ಶ್ರೀಮತು ಬಚ್ಚಂಣ್ಣನವರ ಧರ್ಮ ಪತ್ನಿಯಾದ ಕೆಂಪಮ್ಮನವರ ಗರ್ಭದಲ್ಲಿ ವುತ್ಪತ್ತಿಯಾದ ದೊಡಂಣನಿಗೆ ಹರಶಿ ಆಶೀರ್ವಾದೋಕ್ತಿಯಿಂದ ಪರಮಹಂಸರು ಬರದು ಕೊಟ್ಟ ಪಂಚ ತಂತ್ರದ ಕಥೆ ಸಮಾಪ್ತ ಮಂಗಳ ಮಹಾ ಶ್ರೀ ॥

ವಿಷಯ : ಪಂಚತಂತ್ರದ ನೀತಿಬೋಧಕ ಕಥೆಗಳು.

ವಿಶೇಷ : ಇದರೊಂದಿಗೆ ಸಾನಂದಗಣೇಶ ಸಾಂಗತ್ಯ, ಪ್ರಹ್ಲಾದ ಚರಿತ್ರೆ, ಶಾರದಾಂ ಬಾಷ್ಟಕ, ವಿನಾಯಕಾಷ್ಟಕ, ಮಲ್ಲಿಕಾರ್ಜುನಾಷ್ಟಕ I & II, ಕಪೋತ ವಾಕ್ಯ, ಪಾರ್ವತಿ ಕೊರವಂಜಿ, ವಾಲಿಸುಗ್ರೀವರ ಕಾಳಗ, ಕನ್ನಡಭಾರತ (ಸ್ವಲ್ಪಭಾಗ) ಈ ಗ್ರಂಥಗಳೂ ಇವೆ. ಮೋಡಿ ಅಕ್ಷರ

810

ಕೆ. ೬೦೨/೨	ಪಂಚದಶಮುಹೂರ್ತ	ಕಂದ
೧೨.೫" · ೨"	?	?
೨೦—೨೧ ಪತ್ರ	೧೦ ಪಂಕ್ತಿ	[illegible] ಅಕ್ಷರ

ಆದಿ : ಪಂಚಾದಶಮುಹೂರ್ತಃ || ಕಂ ||
ಯಿನನುದಯವಾಗೆ ರೌದ್ರಂ
ಘನತರದಿಂ ಚಂದ್ರನಿಂದ ಶ್ವೇತಜನುದಯಂ
ಕನಕಂಗೆ ಚಕ್ರವಾಕಂ
ನಿರುತಂ ವೈರೋಚನಂಗೆ ಸೌಮ್ಯನೊಳುದಯಂ ||

ಅಂತ್ಯ : ಭಾಗ್ಯದರನೆಂಬ ಸಮುಯುದಿ
ಭಾಗಿರತಿಯಲ್ಲಿ ತಂದ ಪಗರಂ ಮತ್ತಾ
ವಾಗಂ ಶೋಭನ ಸಂತತಿ
ಬೇಗಂ ಬಗೆಗೊಳಲು ಶುಭದಮುಂನತಿಯಕ್ಕುಂ || ೧೫ ||
ಇತಿ ಪಂಚಾದಶಮುಹೂರ್ತ ಸಮಾಪ್ತಾ ಮಂಗಲ ಮಹಾಶ್ರೀ||

ವಿಷಯ : ರೌದ್ರ ಮೊದಲಾದ ಹದಿನೈದು ಮುಹೂರ್ತಗಳ ಫಲ.

ವಿಶೇಷ : ಕೊನೆಯಲ್ಲಿ ಬಿಂದು ಲಕ್ಷಣವನ್ನು ತಿಳಿಸುವ ಕೆಲವು ಸಂಸ್ಕೃತ ಶ್ಲೋಕಗಳಿವೆ, ಬಳಿಕ ಜ್ವರಕ್ಕೆ ಔಷಧವನ್ನು ಬರೆದಿರುವ ಎರಡು ಗರಿಗಳಿವೆ. ಆದರೆ ಈ ಗರಿಗಳ ಕ್ರಮಾಂಕ ಬೇರೆಯಾಗಿರುವುದರಿಂದ ಇವು ಬೇರೆ ಕಟ್ಟಿನವಿರಬಹುದು. ಈ ಕಟ್ಟಿನಲ್ಲಿ ಅಬ್ಧಿಕಲ್ಪ, ಬಿಂದುಲಕ್ಷಣ (ಸಂ) ಎಂಬ ಇತರ ಗ್ರಂಥಗಳಿವೆ.

811

ಕೆ.ಬಿ. ೧೯೪	**ಪಂಚದಶೀ (ಸಟೀಕು) ಭಾಗ ೧**	ಶ್ಲೋಕ, ಟೀಕ್
೭.೪″×೬.೨″	?	?
೧–೨೨೩ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ವಿದ್ಯಾರಂಣ್ಯರು ವಿರಚಿಸಿದ ಪಂಚದಸಿ ಬರೆವುದಕ್ಕೆ ಶುಭಮಸ್ತು ||
೧ನೇ ಪ್ರಕರಣ | ತತ್ವವಿವೇಕ ||
ನಮಃ ಶ್ರೀಶಂಕರಾನಂದ ಗುರುಪಾದಾಂಬುಜ ಜಂನ್ಮನೇ
ಸವಿಲಾಸ ಮಹಾಮೋಹಗ್ರಾಹಗ್ರಾಸೈಕ ಕರ್ಮಣೇ || ೧ ||
ಜಗತ್ಪ್ರಪಂಚಸಹವರ್ತಮಾನ ಮೂಲಜ್ಞಾನವೆಂಬ ಮೋಸಳಿಯನ್ನು ಗ್ರಾಸಿಸುವದಕ್ಕೆ ಸಮರ್ಥವಾದ ಶಂಕರಾನಂದ ಗುರುಪಾದಕಮಲಕ್ಕೆ ನಮಸ್ಕಾರವೂ ||

ಅಂತ್ಯ : ಶ್ಲೋಕ ॥ ನಿರ್ವಿಕಲ್ಪಸಮಾದೌ ತು ದ್ವೈತಾದರ್ಶನಹೇತುತಃ ।
ಸೈವಾಪರೋಕ್ಷವಿದ್ಯೇತಿ ಚೇತ್ಸುಷುಪ್ತಿಸ್ತಥಾ ನ ಕಿಂ ॥ ೧೮೫ ॥

ಟೀಕು॥ ನಿರ್ವಿಕಲ್ಪಸಮಾಧಿಯಲ್ಲಿ ದ್ವೈತವು ಅಗೋಚರವಾದ್ದರಿಂದ ಅದೇ ಅಪರೋಕ್ಷ ವಿದ್ಯಾ ಯಂದೊಡೆ ಸುಷುಪ್ತಿಯಾದರು ಅಪರೋಕ್ಷ ವಿದ್ಯೆ ಯಾದೀತು ॥

ಶ್ಲೋಕ ॥ ಆತ್ಮ ತತ್ವಂ ನ ಜಾನಾತಿ ಸುಪ್ತಾ ಯದಿ। ತ

ವಿಷಯ : ವೇದಾಂತ ವಿಚಾರ.

ವಿಶೇಷ : ಇದು ಕೆ.ಬಿ. ೨೧೬ನೆಯ ಪುಸ್ತಕದ ಪೂರ್ವಭಾಗ. ಸಂಸ್ಕೃತ ಶ್ಲೋಕ ಗಳ ಕರ್ತೃ ವಿದ್ಯಾರಣ್ಯರು.

812

ಕೆ.ಬಿ. ೨೧೬	**ಪಂಚದಶೀ (ಸಟೀಕು) ಭಾಗ ೨**	ಶ್ಲೋಕ, ಟೀಕು
೭.೪″ × ೬.೨″	?	?
೨೨೪–೪೫೧ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ದಾತ್ವಯಾ। ಆತ್ಮಧೀರೇವ ವಿದ್ಯೇತಿವಾಚ್ಯಂ ನದ್ವೈತ ವಿಸ್ಮೃತಿ ॥೧೮೬॥

ಟೀಕು॥ ಸುಷುಪ್ತಿಯಲ್ಲಿ ಆತ್ಮತತ್ವವು ತಿಳಿಯದ್ದರಿಂದ ಅದು ಅಪರೋಕ್ಷ ವಿದ್ಯೆ ಯಲ್ಲಂದರೆ ಆತ್ಮಜ್ಞಾನವೇ ಅಪರೋಕ್ಷವಿದ್ಯೆ ಹೊರತು ದ್ವೈತ ವಿಸ್ಮೃತಿ ಯಲ್ಲೆಂದು ಸಿದ್ಧವಾಯಿತು ॥

ಶ್ಲೋಕ ॥ ವುಭಯಂ ಮಿಳಿತು ವಿದ್ಯಾ ಯದಿ ತರ್ಹಿ ಘಟಾ ದಯಃ।
ಅರ್ಧವಿದ್ಯಾಭಾಜನಸ್ಯು ಸಕಲದ್ವೈತ ವಿಸ್ಮೃತೇ ॥ ೧೮೭ ॥

ಅಂತ್ಯ : ಶ್ಲೋ॥ ಪ್ರೀಯಾದ್ಧರಿಹರೋನೇನ ಬ್ರಂಹ್ಮಾನಂದೇ ನಸರ್ವದಾ
ಪೋಯಾಚ್ಚ ಪ್ರಾಣಿನಾ ಸರ್ವಾನ್ ಸ್ವಾಶ್ರಿತಾನ್ ಶುದ್ಧ
ಮಾನಸಾನ್ ॥ ೪೩ ॥

ಟೀಕು॥ ಯಿಾಮೇರಿಗೆ ಬ್ರಂಹ್ಮಾನಂದಾಖ್ಯ ಪ್ರಕರಣದ ಪಂಚಮಾದ್ಯಾಯದಲ್ಲಿ ವಿಷಯಾನಂದವನ್ನು ಹೇಳಲ್ಪಟ್ಟಿತೂ ಯಿಾ ದ್ವಾರದಿಂದ ಬ್ರಂಹ್ಮಾನಂದ ದಲ್ಲಿ ಪ್ರವೇಶಮಾಡಬೇಕು ॥ ಹರಿಹರರುಗಳು ಯಿಾ ಬ್ರಂಹ್ಮಾನಂದದಿಂದ

ಪ್ರಸಂನರಾಗಿ ಸ್ವಾಶ್ರಿತರಾದ ಶುದ್ಧಮನಸ್ಸುಗಳುಳ್ಳ ಸಕಲ ಪ್ರಾಣಿಗಳನ್ನು ಕಾಪಾಡಲೀ ॥ ಶ್ರೀಮತ್ಶಂಕರಾಚಾರ್ಯರವರ ಶಿಷ್ಯರಾದಂತ ವಿದ್ಯಾರಣ್ಯಯತಿಗಳು ನಿರೂಪಿದ ಪಂಚದಸಿ ಸಮಾಪ್ತ ಮಂಗಳ ಮಹಾಶ್ರೀ ॥

ವಿಷಯ : ವೇದಾಂತವಿಚಾರ.

ವಿಶೇಷ : ಇದು ಕೆ.ಬಿ. ೧೯೪ ನೆಯ ಪುಸ್ತಕದ ಉತ್ತರ ಭಾಗ. ಸಂಸ್ಕೃತ ಶ್ಲೋಕಗಳ ಕರ್ತೃ ವಿದ್ಯಾರಣ್ಯರು.

813

ಕೆ. ಎ. ೨೮೪/೪	**ಪಂಚಪರಮೇಷ್ಠಿಗಳ ಬೊಲ್ಲಿ**	ಗದ್ಯ
೧೨.೯"×೮.೨"	ಬಾಳಚಂದ್ರ ಪಂಡಿತ	೧೨೭೩
೧–೬ ಪತ್ರ	೨೪ ಪಂಕ್ತಿ	೨೫ ಅಕ್ಷರ

ಆದಿ : ಪಂಚಪರಮೇಷ್ಟಿಗಳ ಬೊಲ್ಲಿ ॥

ಕಂ ॥ ದ್ರವ್ಯಗುಣಪರ್ಯಯಂಗಳ
ನವ್ಯಗ್ರಕುಶಾಗ್ರ ಬುದ್ಧಿಯಿಂ ಭಾವಿಸುವಂ
ಗವ್ಯವಹಿತ ನಿಜತತ್ವಂ
ಶ್ರವ್ಯಮೆನಲ್ಪಂಚಗುರುಪದಂ ಶ್ರಯಣೀಯಂ ॥

ವ॥ ಣಮೋ ಅರಹಂತಾಣಂ ಣಮೋ ಸಿದ್ಧಾಣಂ ಣಮೋ ಆಇರಿಯಾಣಂ ಣಮೋ ಉವಝಾಯಾಣಂ ಮೋಳೋ ಏ ಸಬ್ಬ ಸಾಹೂಣಂ ಎಂಬೀ ಪಂಚ ನಮಸ್ಕಾರಂಗಳನ್ವರ್ಥವಾದ

ಅಂತ್ಯ : ಸಿದ್ಧಾನ್ತ ವೇದ್ಯಭಯಚಂದ್ರ ಪದಾರವಿನ್ದೇ
ಆರಾಧ್ಯ ಪಂಚಗುರುಮೋಕ್ಷ ಪಥಸ್ವರೂಪಂ ।
ಬಾಳೇಂದುನಾ ನಿಗದಿತಂ ಸುಜನೋತ್ತಮಾಯೇ
ತೇ ಭಾವಯಂತು ಕರಸಾಸವುತಾಂ ಲಭನ್ತೇ ॥

ವಿಷಯ : ಪಂಚಪರಮೇಷ್ಠಿಗಳ ಸ್ತುತಿ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಶಕಟರೇಫ ಪ್ರಯೋಗ ಇದೆ. ಇದರಲ್ಲಿ ತ್ರೈಲೋಕ್ಯ ಚೂಡಾಮಣಿ ಸ್ತೋತ್ರವೇ ಮೊದಲಾದ ಇತರ ೧೧ ಗ್ರಂಥಗಳಿವೆ,

814

ಕೆ. ೪೧೧/೩	**ಪಂಚಪರಮೇಷ್ಠಿ ವ್ಯಾಖ್ಯಾ**	ಗದ್ಯ
೯.೨" × ೨.೨"	ಅನಂತರಾಜಯ್ಯ	?
೧೪ ಪತ್ರ	[illegible] ಪಂಕ್ತಿ	೨೮ ಅಕ್ಷರ

ಆದಿ: ಪಂಚಪರಮೇಷ್ಠಿಗಳ ವ್ಯಾಖ್ಯನಃ ॥
ಓಂ ಣಮೋ ಅರಹಂತಾಣಂ ಣಮೋ ಸಿದ್ಧಣಂ ಣಮೋ ಆ ಇರಿಯಾಣಂ ಣಮೋ ವುಝ್ಝಯಾಣಂ ಣಮೋ ಳೊಯೆಸ್ಸವ್ವಸಾಹೂಣಂ ಅರ ॥
ಶ್ರೀ ಪಂಚಪರಮೇಷ್ಠಿಗಳ ಪೆಸರಂ ಪೇಳಿಮೆಂದು ಶಿಷ್ಯಂ ಬೆಸಗೊಂಡ ಡಾಚಾರ್ಯ್ಯರ್ಪ್ಪೇಳಲ್ವಗುಳ್ದರೂ। ಅರಹಂತರು॥ ಸಿದ್ಧರು। ಆಚಾರ್ಯ್ಯರೂ ವುಪಾದ್ಯಾಯರು ಸರ್ವಸಾದುಗಳೆಂದು ಯಿವರು ಪಂಚಪರಮೇಷ್ಠಿಗಳೂ ಅವರೊಳಗೆ ದೇವರೆನಿಬರು ಗುರುಗಳೆನಿಬ್ಬರೆಂದೊಡೆ ಇಬರು ದೇವರು ಮುವ್ವರು ಗುರುಗಳು ॥

ಅಂತ್ಯ : ಬಿಡುಸುಯ್ಯಂ ಮಾಳ್ಪುಧು ಅತಪನಾಮುಕರ್ಮ್ಮಂ। ಶರೀರಕ್ಕೆ ಬೆಂಕಿಯುಳ್ಳ ಬೆಳಗಂ ಮಾಳ್ಪುದು। ಅದ್ಯೋತನಾಮಾಕರ್ಮ್ಮಂ ಚಂದ್ರಾ ವಿಮಾನ ಪುಥ್ವೀಕಾಯಿಕ ಜೀವದಗಳ್ಗೆ ಬೆಂಕಿಯಿಲ್ಲದ ಬೆಳಗಂ ಮಾಳ್ಪುದು ॥ಶ್ರೀ ॥

ವಿಷಯ : ಪಂಚಪರಮೇಷ್ಠಿಗಳ ಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಜ್ಯೌತಿಷ ಮತ್ತು ವೈದ್ಯಕ್ಕೆ ಸಂಬಂಧಪಟ್ಟ ಸಂಗ್ರಹ ಗ್ರಂಥಗಳಿವೆ. ಕೊನೆಯಲ್ಲಿ ಕೋಷ್ಟಕಗಳಿರುವ ಎರಡು ಓಲೆಗಳಿವೆ. ಗಂಥ ಅಸಮಗ್ರ. ಕ್ರಮಾಂಕವನ್ನು ಕೊಟ್ಟಿಲ್ಲ.

815

ಕೆ. ಬಿ. ೩೧	**ಪಂಚಪರಮೇಷ್ಠಿ ವ್ಯಾಖ್ಯಾ**	ಗದ್ಯ
೮.೫" × ೫.೫"	ಅನಂತರಾಜಯ್ಯ	?
೧-೪೨ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ: ಶ್ರೀ ಚಂದ್ರನಾಥಾಯ ನಮಃ ॥
ಓಂ ಣಮೋ ಅರಹಂತಾಣಂ। ಣಮೋ ಸಿದ್ಧಾಣಂ

ಣಮೋ ಆಯಿರಿಯಾಣಂ । ಣಮೋ ಉವಝ್ಝಾಯಾಣಂ
ಣಮೋ ಲೋಯೆಸವ್ವ ಸಾಹೂಣಂ ॥ ಶ್ರೀ ॥
ಶ್ರೀ ಪಂಚಪರಮೇಷ್ಠಿಗಳ ಪೆಸರಂ ಪೇಳಿಮೆಂದು ವಿಷ್ಯಂ ಬೆಸಗೊಂಡಡಾಚಾರ್ಯರು ಪೇಳಲಗುಳ್ವರು ॥

ಅಂತ್ಯ : ಬಾಹ್ಯಾಭ್ಯಂತರ ಪರಿಗ್ರ ಪರಮಾಣು ಮಾತ್ರಮಿಲ್ಲದುದು ನಿಗ್ರಂಥ ಮೆಂಬುದು ಯಿಂತುಂ ನಾಲ್ಕುತೆರ ಆರಾಧನೆಯಿಂ ವ್ಯವಹಾರ ಚಾರಿತ್ರ ಮುಮಂ ॥ ಮುನ್ನೊಸೆದು ಮಾಳ್ಪುದು । ಬಳಿಕ ನಿಶ್ಚಯ ನಯದಿಂದರಿವುದು ಶುದ್ಧಾತ್ಮ ಸ್ವರೂಪನಾರಾಧಿಸುವುದು ನಿಶ್ಚಯ ಚಾರಿತ್ರಮೆಂಬುದು । ಯಿಂತು ಸಾಧು ಪರಮೇಷ್ಠಿಗಳನರಿದು ಭಕ್ತಿಯಂ ಮಾಳ್ಪುದು ॥ ಪಂಚ ಪರಮೇಷ್ಠಿಗಳ ವ್ಯಾಖ್ಯಾನ ಸಮಾಪ್ತ ॥
ಮನ್ಮಥ ನಾಮ ಸಂವತ್ಸರದ ವೈಶಾಕ ಶುದ್ದ ಬಿದಿಗೆ ಗುರುವಾರದಲ್ಲು ॥ ಹಳೇಬೀಡು ಬಸ್ತಿ ಪಾಯಣ್ಣನವರ ಕುಮಾರ ಅನಂತರಾಜಯ್ಯನು ಬರದ ಪಂಚ ಪರಮೇಷ್ಠಿಗಳ ವ್ಯಾಖಾನಕ್ಕೆ ಭದ್ರ ಶುಭಂ ಮಂಗಳಂ ಶ್ರೀ
(1835)

ವಿಷಯ : ಪಂಚ ಪರಮೇಷ್ಠಿಗಳ ಸ್ತುತಿ.

ವಿಶೇಷ : ಸ್ಫುಟಾಕ್ಷರ.

816

ಕೆ. ೩೨೩/೯	**ಪಂಚ ಪ್ರಕಾರದ ಗದ್ಯ**	**ಗದ್ಯ**
ಜ. ೪"×೨"	?	?
೮೭–೯೦ ಪತ್ರ	೧೦ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ ಪಂಚ ಪ್ರಕಾರದ ಗದ್ಯ ॥ ವೃತ್ತ ॥
ಸ್ವಸ್ತಿ ಶ್ರೀ ಪ್ರಮಥಾನ್ವಯೋತ್ತಮ ಶಿಲಾದ ಶ್ರೀ ಮುನೀಂದ್ರಾತ್ಮಜಃ ।
ಶ್ರೀಕಂಠ ಪ್ರತಿಬಿಂಬ ಮೂರ್ತಿರನಘೆಂ ಶ್ರೀ ನಂದಿನಾಥೋ ವಿಭುಃ ॥
ತಸ್ಯಾಂಶೋದ್ಭವ ದಂಡ ಬಸವ ಶ್ರೀ ನಾಮಧೇಯ ಪ್ರಾಭೋ ॥
ತೆತ್ಕಾರುಣ್ಯ ತರಂಗಿತಂ ಮಯಿ ಸದಾಗಿ ಕ್ಷಿಪ್ಯತಾಂ ವೀಕ್ಷಣಂ ॥
ಗದ್ಯ ॥ ಜಯ ಜಯ ಬಸವ ಶ್ರೀಮನ್ಮಹಾ ವೃಷಭೇಂದ್ರ ಪರಾವತಾರ ಸಂಚಿತ ವೀರಮಾಹೇಶ್ವರಾಚಾರ ಸಾರ ಪ್ರಮಥ ಗಣಾಲಂಕಾರ ಹಾರ ಜಗತ್ರಯಾಧಾರ ದೇವ ಬಸವಾ ॥ ೧ ॥

ಅಂತ್ಯ : ಜಯ ಶಿವ ರಂಜನ | ಜಯ ಭವ ಭಂಜನ
ಜಯ ಕರುಣಾಕರ | ಜಯು ಸುರ ಭೀಕರ
ಜಯು ಗತದೂಷಣ | ಜಯು ನುತ ಭಾಷಣ
ಜಯ ರಾಜಾ ಗುಣರಾಜಿತ | ಜಯು ಗಣ ಪೂಜಿತ
ಜಯು ಬಸವ ದಂಡನಾಥ ನಮಸ್ತೇ ನಮಸ್ತೇ ನಮಃ ||

ಗ್ರಂಥ || ಬಸವಸ್ಯ ಕೃಪಾಮೂರ್ತೇಃ | ಸೋಮನಾಥ ಪ್ರಸಾದಿನಾ |
ಅನವದ್ಯಮಿದಂ ಗದ್ಯಮತಿಚೋದ್ಯಂ | ಜಗನ್ನುತಂ ||
ಪಂಚ ಪ್ರಕಾರದ ಗದ್ಯ ಸಂಪೂರ್ನ್ಣ ಶ್ರೀ.

ವಿಷಯ : ಬಸವ ಸ್ತೋತ್ರ.

ವಿಶೇಷ : ಇದೇ ಕಟ್ಟನಲ್ಲಿ ನಮಸ್ಕಾರ ಗದ್ಯ (ಸಂ), ಅಷ್ಟೋತ್ತರ ಶತನಾಮ ಗದ್ಯ (ಸಂ) ಎಂಬ ಇತರ ಇನ್ನೂ ೧೬ ಗ್ರಂಥಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳು.

817

ಕೆ. ೩೬೨/೧	**ಪಂಚ ಬ್ರಹ್ಮೋದಯ ಭಾಷ್ಯ**	ಗದ್ಯ
೧೬"×೧.೪"	ಸಾಸಲ ಚಿಕ್ಕಣಾರಾಧ್ಯ	ಸು ೧೪೫೦
೧–೧೭೬ ಪತ್ರ	೬ ಪಂಕ್ತಿ	೭೨ ಅಕ್ಷರ

ಆದಿ : ಪಂಚ ಬ್ರಹ್ಮೋದಯ ಭಾಷ್ಯವಂನ್ನು ಬರೆಯುದಕ್ಕೆ ನಿರ್ವಿಘ್ನಮಸ್ತು ||
ವಚನ || ಶ್ರೀಮದನೇಕ ಬ್ರಹ್ಮಾಂಡ ಖಾಂಡ ಗರ್ಭ ಗರ್ಭೀಕೃತ ಮೂಲಿ ಸ್ಥಂಬೋಪಮಾನೆ ಶ್ರೀ ವೀರಶೈವಾಚಾರ ಧರ್ಮಾನಂದ ಮಂದಿರ ಚಂದ್ರ ಚಕೋರತರಮಪ್ಪ ಸುಮೇರು ಪರ್ವತದ ಪೂರ್ವ ದಿಗ್ಭಾಗದಲ್ಲಿ ಸಮಸ್ತ ಮನುಮುನಿ ದೇವ ದಾನವ ಭುಜಂಗಾದಿಗಳಪ್ಪ ತಪೋದನರಿಗಾಶ್ರಿತಮಾಗಿ X X X X ವೇದಿಕೆಗಳಲ್ಲಿ ಅಸಂಖ್ಯಾತ ಪ್ರಮಥ ಗಣಂಗಳ್ ಸದಾಶಿವ ಧ್ಯಾನಾನುಷ್ಟರಾಗಿರ್ಕುಂ ||

ಅಂತ್ಯ : ಇತಿ ಶ್ರೀಮದನೇಕ ಲೋಕೋಪಲೋಕ ಹಿತಾರ್ಥೋದ್ಭವ ದೀರಚಕೋರ ವಾರೋಕ್ತ ಸಾರಾಮೃತಃ ಸಿಂಧು ಚಂದ್ರೋಪಮಾನ ಶ್ರೀವೀರಶೈವಾಚಾರ ಧರ್ಮ ಪ್ರತಿಪಾದ್ಯ ವಿದ್ಯಾರಂಭ ಮೂಲಸ್ತಂಬ ಸಾಂಬಶಿವ ಮುಖೋದ್ಭೂತಮತ ಮಣಿಮಾಲಿಕಾ ಮೇರುರತ್ನಪ್ರಭಾ ಪಂಡಿತಾರಾಧ್ಯ

ವೊಂಷೋದ್ಭವ ಶ್ರೀ ಸಾಸಲ ಚಿಕ್ಕಣಾರಾಧ್ಯ ವಿರಚಿತಾಯಾಂ ಪಂಚ್ಚ ಬ್ರಹ್ಮೋದಯ ಭಾಷ್ಯೆ ನವಮೋದ್ಯಾಯ ಪರಿಸವಾಪ್ತ ಮಂಗಳ ಮಹಾಶ್ರೀ ॥

ಧಾತು ಸಂಹ್ವತ್ಸರದ ಮಾಘಶುದ್ಧ ಸಪ್ತಮಿಯಲ್ಲು ಯಿಾಪುಸ್ತಕವನ್ನು ಜೋಗನ ಹಳ್ಳಿ ವಿರಕ್ತದೇವರು ತಮ್ಮ ಮನೆಗೆ ಪುಸ್ತಕವಾಗಿರಲೆಂದು ಕಾರ್ಯದ ಮಹಂತ ಸ್ವಾಮಿಗಳ ಬಳಿಯಲಿದ್ಧ ಪ್ರತಿಯ ತಂದು ಪ್ರತಿಯಿದ್ದ ಮೇರೆಗೆ ಬರೆದಿರಿಸಿದೆನು ॥ ಇತಿ ಶ್ರೀ ॥

ವಿಷಯ : ವೀರಶೈವ ವೇದಾಂತ.

ವಿಶೇಷ : ೪೧–೬೧ ಕ್ರಮಾಂಕದ ಪತ್ರಗಳು ಲುಪ್ತವಾಗಿವೆ. ೧೧ ಮತ್ತು ೧೩೬ನೆಯ ಪತ್ರಗಳು ಮುರಿದಿವೆ. ಪತ್ರಗಳ ಅಳತೆಯು ಒಂದೇ ಸಮನಾಗಿಲ್ಲ. ಇದೇ ಕಟ್ಟಿನಲ್ಲಿ ಮೂತ್ರ ರೋಗದ ಔಷಧವೆಂಬ ಗ್ರಂಥವಿದೆ.

818

ಕೆ. ಬಿ. ೨೮೭	**ಪಂಚ ಮಹಾಭೂತಂಗಳ ಉತ್ಪತ್ತಿ**	**ಶ್ಲೋಕ, ಟೀಕು**
೭.೯″ × ೬.೩″	?	?
೪೦ ಪುಟ	೧೭ ಪಂಕ್ತಿ	೧೭ ಅಕ್ಷರ

ಆದಿ : ಪಂಚ ಮಹಾಭೂತಂಗಳ ಉತ್ಪತ್ತಿ ॥ ಶುಭಮಸ್ತು।

ಶ್ಲೋ॥ ಸದ್ಯೋಜಾತೋದ್ಭವಾ ಭೂಮಿರ್ವಾಮದೇವೋದ್ಭವಂ ಜಲಂ,।
ಅಘೋರಾತ್ವಗ್ನಿರುತ್ಪನಸ್ತತ್ಪೂರ್ಷಾದ್ವಾಯುರುಚ್ಯತೇ ॥ ೧ ॥
ಈಶಾನಾದ್ಗಗನಾಕಾರಂ ಪಂಚಬ್ರಹ್ಮಮಯಂ ಜಗತ್ ॥

ಟೀಕು॥ ಎಂದುದಾಗಿ ಸದ್ಯೋಜಾತ ಮುಖದಲ್ಲಿ ಪೃಥ್ವೀ ಪುಟ್ಟಿತು. ವಾಮ ದೇವ ಮುಖದಲ್ಲಿ ಅಪ್ಪುಹುಟ್ಟಿತು. ಅಘೋರ ಮುಖದಲ್ಲಿ ಅಗ್ನಿ ಪುಟ್ಟಿತು. ತತ್ಪುರುಷ ಮುಖದಲ್ಲಿ ವಾಯು ಪುಟ್ಟಿತು. ಈಶಾನ ಮುಖದಲ್ಲಿ ಆಕಾಶ ಪುಟ್ಟಿತು. ಇತಿ ಪಂಚ ಬ್ರಹ್ಮ ಮುಖದಲ್ಲಿ ಪಂಚಮಹಾ ಭೂತಂಗಳು ಪುಟ್ಟಿದವು. ಈ ಭೂತಂಗಳ ಗುಣ ಧರ್ಮ ಚರ್ಮ ವರ್ನ ಅಧಿದೇವತೆ ಗಳಾವವಂದರೆ

ಅಂತ್ಯ : ಶ್ಲೋಕ ॥ ಕಸ್ತ್ವಂ ಶಿಶೋ ಕಸ್ಯ ತುತೋಸಿ ಗಂತಾ ।
ಸ್ಥಾನಂ ಚಕ್ರಂತೇ ಕುತ ಆಗತೋಸಿ ॥
ಏತನ್ಮಯೋಕ್ತಂ ವದ ಚಾರ್ಭತತ್ವಂ ।
ಪತ್ಪ್ರೀತಯೇ ಪ್ರೀತಿ ವಿವರ್ಧನೋಸಿ ॥
ನಾಹಂ ಮನುಷ್ಯೋ ನ ಚ ದೇವಯಕ್ಷೋ।
ನ ಬ್ರಾಹ್ಮಣಃ ಕ್ಷತ್ರಿಯ ವೈಶ್ಯ ಶೂದ್ರಾಃ ॥
ನ ಬ್ರಹ್ಮಚಾರೀ ನ ಗೃಹೀ ವನಸ್ಥೇ ।
ಭಿಕ್ಸುರ್ನಚಾಹಂ ನಿಜಬೋಧರೂಪ ॥ ೧೨ ॥
ಸ್ನಾತಂ ಮನೋ ಮಲತ್ಯಾಗ ಶ್ಶೌಚಮಿಂದ್ರಿಯನಿಗ್ರಹಃ ।
ಅಭೇದದರ್ಶನಂ ಜ್ಞಾನಂ ಧ್ಯಾನನಿರ್ವಿಷಯಂ ಮನಃ ॥
ಮನಸಿ ವಿಶುದ್ಧೇ ಪುಂಸಾಂ ವಾರಾನಾಸ್ಯೇವ ಸುಮತಿಸ್ಸರ್ವಾ ।
ಸಕಲಮಪಿ ಗಾಂಗಮಂಭಃ. ಸರ್ವೇ ಜೀವಪರಃ ಪುಮಾನಿವ ॥
ಭಾವನಾ ಯದಿ ಭವೇತ್ಫಲಧಾತ್ರೀ ಮಾಮಕಂ ನಗರಮೇವ ಕಾಶೀ ।
ವ್ಯಾಪಕಸ್ತು ಭಗರ್ವಾ ಯದಿ ಶಂಭುಸ್ತಾರಕಂ ಕಿಮಿಹ ನೋಪದಿಶೇನ್ನಃ ॥

ಸಮಾಪ್ತಃ

ವಿಷಯ : ಪಂಚಮಹಾಭೂತಗಳ ಉತ್ಪತ್ತಿ ವಿಚಾರ.

ವಿಶೇಷ : ಸಂಸ್ಕೃತ ಶ್ಲೋಕಗಳಲ್ಲಿ ತಪ್ಪು ಅಧಿಕ. ಮೂವತ್ತೆರಡನೆಯ ಪುಟದಲ್ಲಿ 'ಇನ್ನು ಉದರಾಗ್ನಿ ಕಾಮಾಗ್ನಿ ಶೋಕಾಗ್ನಿ ಮಂದಾಗ್ನಿ ವಡವಾಗ್ನಿ ಇಂತಿವು ಪಂಚಾಗ್ನಿಗಳೂ ಕರಣ ಹಸಿಗೆಯೂ' ಎಂದು ಒಂದುಭಾಗ ಮುಗಿದು ಮತ್ತೆ ಮೂವತ್ತುಮೂರನೆಯ ಪುಟದಲ್ಲಿ 'ಲಿಂಗಶರೀರ ಸ್ಥೂಲಶರೀರಯೋರ ಭೇದಾತ್ ಜನ್ಮ ಮರಣ ಜನ್ಮಾಂತರ ಲೋಕಾಂತಗಮನಾದಿ ಭ್ರಾಮಣ ನಿವೃತ್ತಿಃ' ಎಂದು ಬೇರೆ ಗ್ರಂಥಭಾಗ ಆರಂಭವಾಗಿದೆ.

819

ಕೆ. ೨೪೧/೧	**ಪಂಚರತ್ನ ಪ್ರಪ್ರತಿ ಪಾಕಸವ ಇತ್ಯಾದಿ**	ವಚನ
೧೧.೫″ × ೧.೪″	ಸಕ್ಕರೆ ಶಾಂತಪ್ಪ	?
೬–೩೭ ಪತ್ರ	೫ ಪಂಕ್ತಿ	೩೬ ಅಕ್ಷರ

ಆದಿ : ಶ್ರೀ ಬಸವಲಿಂಗಯಂನ್ನಮಃ ॥ ಶಕ್ಕರೆ ಸಾಂತಪ್ಪನವರೂ ಹೇಳಿದ ಪಂಚ ರತ್ನ ಪ್ರಪ್ರತಿ ಪಾಕಸವ ಬರವದಕ್ಕೆ ಶುಭಮತ್ತು ॥

ಯೆಲಿವಿನ ಹಂಡ್ತಿ ಕಕ್ಕೆ ಕುರುಳಿನ ಜಾಳಿಗೆ ಮುತ್ರದ ಭವಿ। ಅಮಿದ್ಯೆದ ಹುತ್ರ। ನೆತ್ತರದ ಮಡುಉ। ನಾಡಿಗಳ ಸುತ್ತುವಳಿ। ನರವಿನಣುಜತ್ರ। x x x (ಅನೆಯ ಪತ್ರ) ಕಾಡುವದಕ್ಕಿಂಧ್ಧ ಮುನದೆ। ಜ್ಞಾನದಿಂ ಚಸಸದಕನಾಗಿ ಮುಖ್ಯರ್ಥವಂನೈದಿ ನಿಂತ್ಯೆ ನಿರ್ಮಲ ಸಂಗಮೇಶ್ವರನಲ್ಲಿ ನಿಜವಪಯಂ ದ್ಧಾತ ನಂಮ ಸಕ್ಕರೆ ಶಾಂತ ॥ ೧ ॥

ಅಂತ್ಯ : ಸರ್ವ್ವಉ ಶಿವನೆಂದೆ। ಉಭ್ಧವಿಸುವ ಉಳಿವನೆ। ಸಕಲ ಬೀಜವ ಬಿತ್ತುವ ವಕ್ಕಲಿಗನೆಂದರೆ। ಆ ಬೆಳೆತ ವಕ್ಕಲಿಗೆನೆ। x x x x x ಸರ್ವ್ವಉ ಸಿವನೆಂದರೆ। ಅಘೋರ ನರ್ಕದಲ್ಲಿ। ಯಿಕ್ಕ ನಮಂ ಕುಡಲ ಚೆಂನ ಸಂಗಮ ದೇವೈಯ್ಯ ॥ ೪ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಗರಿಗಳು ಹುಳುಗಳಿಂದ ಕೊರೆಯಲ್ಪಟ್ಟಿವೆ. ೩೩ನೆಯ ಗರಿಯ ಸ್ವಲ್ಪ ಭಾಗವು ಮುರಿದು ಲುಪ್ತವಾಗಿದೆ. ಈ ಗ್ರಂಥಕ್ಕೆ ಮೊದಲು ಬಸವ ಚಾರಿತ್ರದ ರಾಜನೀತಿಗೆ ಸಂಬಂಧಿಸಿದ ೩ ಮುರಿದ ಪತ್ರಗಳೂ, ಅನಂತರ ೫–೬ನೆಯ ಪತ್ರಗಳಲ್ಲಿ ಕೆಲವು ಪದ್ಯಗಳೂ ಇವೆ. ೬ರಿಂದ ೩೭ ಗರಿಗಳಲ್ಲಿ ಪಂಚರತ್ನಪ್ರಪ್ರತಿ ಪಾಕಸವ, ವಾದಕಾಂಡ, ಪ್ರಣಮ ಪಂಚಾಕ್ಷರಿಗಳೂ, ಉರಿಲಿಂಗಪೆದ್ದಿ, ಘನಲಿಂಗದೇವ, ಕೂಡಲ ಚನ್ನಸಂಗದೇವರು ಇವರ ಅಂಕಿತಗಳ ವಚನಗಳೂ ಇವೆ. ಇದರ ಜೊತೆಗೆ ವೀರಭದ್ರದೇವರ ಖಡ್ಗ ಎಂಬ ಮತ್ತೊಂದು ಕೃತಿಯಿದೆ.

820

ಕೆ. ೧೪೬	**ಪಂಚವಟೀ ರಾಮಾಯಣ**	ಯಕ್ಷಗಾನ
೯.೪" × ೧.೪"	?	?
೧–೯೪ ಪತ್ರ	[illegible] ಪಂಕ್ತಿ	೪೦ ಅಕ್ಷರ

ಆದಿ : ಪಂಚವಟೀ ರಾಮಾಯಣ ಬರೆಯುವದಕ್ಕೆ ಶುಭಮಸ್ತು ॥

ಗ್ರಂಥ ॥ ....ಗಜವದನಂ ತಂ ವಿಘ್ನವಿಚ್ಛೇದದಪ್ಪಂ
ಅಸುರ ಕುಲಜಾಲಂ ಜಾನಕೀಸೋಮವೇಷಂ
ಪ್ರತಿದಿನ ಮುನಿಭಕ್ತನೌಮಿ ವಾಲ್ಮೀಕಿ ವಾರ್‍ಯಾಃ

ಪ್ರಾಪ್ತೇನಂತ್ರನಂತ್ರಗನ ಪ್ರಿಯತ್ರಮಾ ಶ್ರೀರೋಹಿಣೀಜಲ್ಯಯೋ
ಕಾರುಣ್ಯಾನಾಂ ಕಥಗುಣೆನಾಂ ಕವಯಹಾ ಕೂರ್ವಂತು ಸತ್ವರ್ನೆಯೋಃ ||

x x x x

ಗಜವದನ ಗೌರಿ ಶ್ಯಾರದೆಯು
ಅಜನಂಘ್ರಿ ಸರೋಜಯುಗಳಕ್ಕಭಿವಂದಿಸುತ್ತ
ಸುಜನ ವಾಲ್ಮೀಕನಂ ಭಜಿಸಿ ರಾಮಾಯಣಂ ಪೇಳ್ವೆ
ಯಕ್ಷಗಾನದಿ ಸಕಲಜನಗಳು ಕೇಳಿ ಸಂತೋಷಮಂ ಮಾಳ್ಪದು || ೨ ||

ಅಂತ್ಯ : ವಾರ್ಧಿಕಾ || ಅರಸು ಮಕ್ಕಳು ಕೇಳಿ ಚೂಡಾಮಣಿಯ ಮಾರುತ
ಸುತ ರಾಮಚಂದ್ರನ ಕೈಯ್ಯಲಿ ಕೊಟ್ಟು
ಬರಿತವಾಯಿತು ಸಂಧಿ ವಾಲ್ಮೀಖಿ ಮುನಿವರನಾ ಪುಣ್ಯಕಥೆಯ
ಅರಿತು ಪೇಳುವರಿಗೇ ಪುಣ್ಯವಂ
ತ್ತರಿಗೆ ದುರಿತಗಳ ಪರಿಹರಿಶಿ
ಶ್ರೀಜಗದೊಡೆಯನಾದಾ ಶ್ರೀರಾಮನೊಲಿದೀವಾ ಸೌಭಾಗ್ಯವಾ ||೧||
ಅಂತು ಸುಂಧರಖಾಂಢ ಸಂಪೂರ್ನ್ನ ಮಂಗಳಮಹಾ ಶ್ರೀಃ ||
ಅರ್ಜುನಪುರಿ ದಿವ್ಯಕ್ಷೇತ್ರದಲ್ಲಿ ಶ್ರೀ ಯೋಗಾನಾರಸಿಂಹ್ಮನ ಪಾದಸೇವಕ
ನಾದ ಉಪಾದ್ಯ ಸಂಣದಾಸನಾದಂತ್ಹಾ ವುಪಾದ್ಯ ವೆಂಕಟಸುಬ್ಬೈಯ್ಯನು
ಬರದಂತ್ತ ಪಂಚ್ಚವಟಿಗೆ ಮಂಗಳಮಹಾ ಶ್ರೀ ||

ವಿಷಯ : ಯುದ್ಧಕಾಂಡದ ವರೆಗಿನ ರಾಮಾಯಣದ ಕಥೆ.

ವಿಶೇಷ : ಹುಳುತಿಂದು ಕೆಲವು ಗರಿಗಳಲ್ಲಿ ರಂಧ್ರ ಬಿದ್ದಿದೆ. ೯ನೇ ಗರಿಯಲ್ಲಿ ಮೂರು ಪಂಕ್ತಿಗಳು ಮಾತ್ರ ಇವೆ.

821

ಕೆ. ೩೪೩/೫	**ಪಂಚವಿಂಶತಿನುತಿ**	**ವಿವಿಧ ಷಟ್ಪದಿ**
೧೨.೨″ × ೨.೩″	?	?
೨ ಪತ್ರ	೧೦ಪಂಕ್ತಿ	[illegible] ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ || ಭಾವಿನಿಪದ ||

ಶ್ರೀಮದಚಲ ಕುಮಾರಿ ಕಾಮುಖ
ತಾಮರಸ ಮಕರಂದ ಮಧುಕರ
ಸೋಮಶೇಖರ ಶತಮುಕಾರ್ಚ್ಚಿತ ಕಂಜಸುತ ವರದಾ
ಭೂಮಿ ಜಲ ಶಿಖಿ ಮಾರುತಾಂಬರ
ಸೋಮಯಾಜಿ ದಿನೇಶ ವಿದುತನು
ಸಾಮದಿಂ ಸಲಹೆನ್ನ್ಮನತಿದಯುವೆರಿಸಿ ಶಿವಲಿಂಗಾ ॥ ೧ ॥

ಅಂತ್ಯ : ॥ ೨೪ ॥ ಸಲೆ ನಿಂನ ಪಂಚವಿಂಶತಿ ನುತಿಯನಿದನಾವ
ನೊಲಿದೋದಿಡಪನವಗೆ ಭವಬಂಧನವದಿಲ್ಲ
ಸುಲಭದಿಂದರ್ಥವನನೂ ಮಾಡಿದಾತಗೆ ಯಂತೆ ಕೇಳ್ದನಿಗದೇ ತೆರನಲ್ಲೈ
ಚಿಲಿಪಾಲು ಸಕ್ಕರೆಯು ಬೆರಕೆಯುನು ಸವಿದನಿಗೆ
ನೆಲೆಯಾದಪುದೆಯಂಬಿಲದ ರುಚಿಯುದರ ತೆರದೆ
ಚಲಿತಾಂನ್ಯ ನುತಿ ನಿಂನ್ನ ನುತಿಯೆ ನುತಿ ಯಿದಕೆ ಜತೆಯಿಲ್ಲ
ಶಿವಲಿಂಗೇಶ್ವರಾ ॥ ೨೫ ॥ ಶ್ರೀ ಶ್ರೀ

ವಿಷಯ : ಶಿವಮಹಿಮಾ ವರ್ಣನೆ.

ವಿಶೇಷ : ಸಮಗ್ರ. ೨೫ ಪದ್ಯಗಳೂ ಸಂಖ್ಯಾರಹಿತವಾದ ಎರಡು ಪತ್ರಗಳಲ್ಲಿ ಅಡಕವಾಗಿವೆ. ಪ್ರತಿ ಪದ್ಯದಲ್ಲೂ ಶಿವಲಿಂಗಾಂಕಿತವಿದೆ. ಇದರೊಂದಿಗೆ ಷಡ್ವಕ್ತ್ರ ಸ್ತೋತ್ರ, ವೈರಾಗ್ಯ ಷಟ್ಪದಿ, ಲಿಂಗಸ್ತೋತ್ರ ಷಟ್ಪದಿ, ಶಿವಲಿಂಗ ಷಟ್ಪದಿ, ಶಿವ ಮಹಿಮಾ ಶತಕ ಎಂಬ ಇತರ ಗ್ರಂಥಗಳಿವೆ.

822

ಕೆ.ಬಿ. ೩೨೪/೧	ಪಂಚವಿಂಶತಿ ಪದ್ಧತಿ ವ್ಯಾಖ್ಯಾ	ಟೀಕು
೮.೩" × ೬.೫"	ಸೋಮೇನಹಳ್ಳಿ ವೇದಾಂತ ರಾಘವಾಚಾರ್ಯಸ್ವಾಮಿ	೧೮ ನೇ ಶತಕ
೧–೧೨೨ಪತ್ರ	೧೮ ಪಂಕ್ತಿ	೨೩ ಅಕ್ಷರ

ಆದಿ : ನಿಜದೀಪಿಕಾ ರತ್ನವೆಂಬ ಗ್ರಂಥದಲ್ಲಿ ೫ ನೇ ಪಟಲ ಪಂಚವಿಂಶತಿ
ಪದ್ಧತಿಗೆ ವ್ಯಾಖ್ಯಾನಾ ಬರೆವುದಕ್ಕೆ ನಿರ್ವಿಘ್ನಮಸ್ತು ॥
ಶ್ಲೋಕಾ ॥ ಕೃತ್ವಾ ವಸ್ತಿಂ ವಟತರುಪದೇ ವೇಷಮಾರ್ಷಂ ಭಜಿತ್ವಾ
ದಿವ್ಯಗ್ನಾನೈರ್ಮುನಿಭಿರನಿಶಂ ವಾವೃತಸ್ತ್ವಂ ಯದರ್ಥಂ ।
ಸಂಸಾರಾಬ್ಧಾವ ಫಲಿತ ತಟೇ ಮಜ್ಯತಾಂ ನೋರ್ಧ್ವಮಾದ್ಯಂ
ಶೇವೇ ತ್ವಾಮಿತ್ಯಹಮಿತಿಮತಿರ್ದಕ್ಷಿಣಾಮೂರ್ತಿಮಾಶಂ ॥

ಟೀಕು ॥ ವಟತರುಪದೆ। ವಟವೃಕ್ಷದ। ಮೂಲವೆಂಬ ಸ್ಥಾನದಲ್ಲಿ। ವಸ್ತ್ರಂ। ಯಿರೋಣವಂಸ್ನು। ಕೃತ್ವಾ। ಮಾಡಿ। ಆರ್ಷಂ। ಋಷಿ ಸಂಮಂಧ ವಾದಂಥಾ। ವೇಷಂ। ಅಲಂಕಾರವಂನ್ನು। ಭಜಿತ್ವಾ। ಯ್ಯೈದಿ। ದಿವ್ಯ ಜ್ಞಾನೈಃ। ದಿವ್ಯ। ಅಮೋಘವಾದಂಥಾ। ಜ್ಞಾನೈಃ। ಆತ್ಮಜ್ಞಾನವುಳ್ಳ। ಮುನಿಭಿಃ। ಮುನೀಶ್ವರರಿಂದ। x x x x ಇತಮತಿಃ। ಇತ। ಪ್ರಾಪ್ತವಾದ। ಮತಿಃ। ಬುದ್ಧಿವುಳ್ಳಂಥಾ। ಅಹಂ। ನಾನು। ಶೀವೆ। ಭಜಿಸುತಿದ್ದೇನೆ॥

ಅಂತ್ಯ : ಮೋಕ್ಷವೆಂಬ ಫಲವಂನ್ನು ಕೊಡುವಂಥಾ ಬಾರಿಬಾರಿಗೂ ವುಪನಿಷದರ್ಥವ ಕೇಳೋಣದರಲ್ಲಿ। ಆಸಕ್ತಿಯಂಬ ಸ್ವರೂಪವಾದ ಸುಕೃತಸ್ಥಾನ ಸಿದ್ಧಿಸುವ ದಕ್ಕೋಸ್ಕರ ಪರಿಸಮಾಪ್ತಿಯಾದ ಐದನೆಯ ಪಟಲವಂನ್ನು ಪರಿಪೂರ್ತಿ ಮಾಡಿ ಕವೀಶ್ವರನು ಗ್ರಂಥದ ಕಡೆಯಲ್ಲಿ ವುತ್ತರ ಮಂಗಲವಂನ್ನು ಮಾಡಿದಂಥಾವನಾದನೂ। ಶ್ರೀಮದನೇಕ ಸುರಾಸುರ ದೇಶ ಕಿರೀಟ ಮಣಿ ಪ್ರಭಾ ನೀರಾಜಿತ ಪಾದಾರವಿಂದ ಪರಮೇಶ್ವರಾಸಕ್ತ ಚಿತ್ತನಾದ ಕೃಷ್ಣ ಪ್ರಭು ವಿರಚಿತವಾದ ನಿಜದೀಪಿಕಾ ರತ್ನವೆಂಬ ಗ್ರಂಥದಲ್ಲಿ ೫ ನೇ ಪಟಲ ಸಮಾಪ್ತಿ ಮಂಗಳ ಮಹಾ ಶ್ರೀ ॥

ವಿರೋಧಿ ಕೃತುಸಂ। ಶ್ರಾವಣಶು। ೧೦ ಬುಧವಾರದಲ್ಲಿ ಶಾಲ್ಯಕ್ಷಿತಿಪಾಲ ಕೃಷ್ಣರಾಜಶೇಖರರಿಂದ ವಿರಚಿಸಲ್ಪಟ್ಟ ನಿಜದೀಪಿಕಾ ರತ್ನವೆಂಬ ಗ್ರಂಥದಲ್ಲಿ ೫ ನೇ ಪಟಲವಾದ ಪಂಚವಿಂಶತಿ ಪದ್ಧತಿಗೆ ಸೊಮೇನಹಳ್ಳಿ ವೇದಾಂತ ರಾಘವಾಚಾರ್ಯ ಸ್ವಾಮಿಗಳವರಿಂದ ವ್ಯಾಖ್ಯಾನ ಮಾಡಲ್ಪಟ್ಟಿತು ॥ ಶ್ರೀ ಯೊಗಾನಂದನಾಥಾಯ ನಮಃ ॥

ವಿಷಯ : ವೇದಾಂತ ವಿಚಾರ.

ವಿಶೇಷ : ಇದು ನಿಜದೀಪಿಕಾ ರತ್ನವೆಂಬ ಗ್ರಂಥದ ೫ನೇ ಪಟಲವಾದ ಪಂಚವಿಂಶತಿ ಪದ್ಧತಿಯ ವ್ಯಾಖ್ಯಾನ. ಇದೇ ಪುಸ್ತಕದಲ್ಲಿ ಜ್ಞಾನೋಪದೇಶ, ಶನೈಶ್ಚರ ದಂಡಕ, ಶ್ರೀರಂಗ ಮಾಹಾತ್ಮೆ ಎಂಬ ಕೃತಿಗಳಿವೆ. ಇದರಲ್ಲಿ ಮೂರುವಿಧ ವಾದ ಅಕ್ಷರಗಳಿವೆ. ಕೊನೆಯ ಪುಟದಲ್ಲಿ ಒಂದೆರಡು ಔಷಧಗಳ ವಿವರ ಇದೆ.

823

ಕೆ.ಬಿ. ೨೦೩	**ಪಂಚವಿಂಶತಿ ಲೀಲೆ**	ಯಕ್ಷಗಾನ
೭.೭"×೬"	ಲಿಂಗರಾಜ	೧೮೫೦
೧–೩೦ ಪತ್ರ	೧೬ ಪಂಕ್ತಿ	೧೪ ಅಕ್ಷರ

ಆದಿ : ಶ್ರೀ ಪಾರ್ವತೀಪತಿ ಪರಮೇಶ್ವರ ವರಪ್ರಸಂನ್ನನಾದ ನಂಜುಂಡಂಣ್ಣೈಯ್ಯ
ನವರ ವಹೀ ॥ x x x x

ಜನಪಾಲೇಡಿತ ಕೃಷ್ಣಭೂಮಿವಲಭಿಜ್ಞಾ ವಾತ್ಮ ಭಾಗ್ಯೈಕತಾ
ನನುಲಿಂಗೇಂದ್ರ ತನೂಭವಂ ಗುಣಯುತಂ ಶ್ರೀ ಕೆಂಪದೇವಾಂಬಿಕಾ
ವಿನುತಾತ್ಮದ್ಭುತ ಗರ್ಭಶುಕ್ತಿ ನವಮುಕ್ತಾರೂಪನಙ್ಞಾತ್ಮಭೂ
ವಸಿತಾ ನರ್ತನ ರಂಗಭೂತ ರಸನಂ ಶ್ರೀಲಿಂಗಭೂವಲ್ಲಭಂ ॥ ೭ ॥

x x x x

ಗಿರಿಪುತ್ರಿಯರ್ಧಾಂಗನಾನತೆ ಹೃದೆಯ
ವರ ಕಮಲ ಚರಭೃಂಗನಾ ಅಭಯಕರ
ಕರವಿಧೃತ ಸಾರಂಗನಾ ಲಿಂಗನೃಪ
ಕರಸಂಗ ಮಹಲಿಂಗನಾ ತೋರ್ಪ್ಪಾ ಗ್ನಾನವನು ಪಡೆಯಬೇಕೂ ॥ ೩ ॥

ಪಂಚವಿಂಶತಿಲೀಲಾ ಪ್ರಾರಂಭಂ॥ ಭಾಮಿನೀಷಟ್ಪದಿ ॥ ಚಂದ್ರಶೇಖರಲೀಲ
ವುರುಳುವೊಡಲಾಸೆಯೊಳಗಿರುಳೊಳು
ಧರಿಸಿ ದೀಪವ ಕೂಡಿ ಜನರನು
ತಿರುಗುತೆಡರನು ಪಡೆವರರಿಯದೆ ಮರುಳುಜನರಕಟಾ
ಹೊರಗೊಳಗೆ ಥಳಥಳಿಶಿ ಮಾಯಾ
ಕರ ತಮವ ಕತ್ತರಿಶಿ ಬೆಳಗುವ
ಪರತರ ಪರಂಜೋತೀ ಸೀನೆಂದರಿಯರಿಂದುಧರಾ ॥ ೧ ॥

ಅಂತ್ಯ : ಗಂಗಾತ್ತುಂಗತರಂಗ ಸಂಗತ ಮೌಳಿ
ಪುಂಗವಪತ್ರ ಕುರಂಗ ಶಿಶೂ ಸಂಗತ ಕರಕಂಜ
ಲಿಂಗ ರಾಜಾಂಚಿತ ಭೃಂಗೀಪಾಲನ ಶೀಲಾ
ಸಂಗೀತ ಲೋಲಾ ಮಂಗಳಂ ಮಂಗಳಂ ಕಾಳೀಶ ತೇ
ಮಂಗಳಂ ಮಂಗಳಂ ಶ್ರೀ ॥ ಫಲಸ್ತುತಿ ॥
ಹರನ ವರ ಪಂಚವಿಂಶತಿ ಲೀಲೆಯುಂ ಬೆರದು
ಮೆರೆವ ಕೃತಿಗಳನಾರು ಪಾಡುವರ್ಕೇಳುವ
ನಿರತದೊಳಗಾರು ಗೃಹದೊಳಿದ ಬರೆಯುವರ್ಕ್ಕರುಣದಿಂ ಶಿವನವರಿಗೇ
ಕರಿತುರಗ ರಥ ಕನಕ ವಸನ ಧಾಂನ್ಯಂಗಳಂ
ವರಪುತ್ರಪೌತ್ರಾದಿ ಸಕಲಭಾಗ್ಯವ ಕಡೆಗೆ
ಪರಮಪದವಿಯನಿತ್ತು ಸಲಹುವಂ ತ್ರಿಭುವನಕ್ಷೇಮಂಕರಂ ಶಂಕರಂ ॥ಶ್ರೀ॥
ಸಂಪೂರ್ಣವು ॥

ವಿಷಯ : ಶಿವನ ಇಪ್ಪತ್ತೈದು ಲೀಲೆಗಳ ವರ್ಣನೆ.

ವಿಶೇಷ : ಗ್ರಂಥಾರಂಭಕ್ಕೆ ಮೊದಲು ಕ್ರಮಾಂಕವಿಲ್ಲದ ಎರಡು ಪತ್ರಗಳಲ್ಲಿ ಒಂದು ಹಾಡಿದೆ. ೩೧ರಿಂದ ೪೬ ಕ್ರಮಾಕದವರೆಗಿನ ಪತ್ರಗಳಲ್ಲಿ ಅಂಬಾಕೀರ್ತನೆ, ಸುಮಶರಾ ಎಂಬ ಹಾಡುಗಳೂ ಪಂಚವಿಂಶತಿ ಲೀಲೆಯ ಸಂಸ್ಕೃತ ಶ್ಲೋಕಗಳೂ ಇವೆ.

824

ಕೆ.ಬಿ. ೩೪೪/೩	ಪಂಚವಿಂಶತಿ ಲೀಲೆ	ಹಾಡು
೭.೪" × ೬"	ಲಿಂಗರಾಜ	೧೮೫೦
೪೧–೬೮ ಪುಟ	೧೫ ಪಂಕ್ತಿ	೨೨ ಅಕ್ಷರ

ಆದಿ : ಸೀಸಪದ್ಯ॥ ಪಾದಹತದಸ್ತಮಾದಾವ ನಿಃಸ್ಸೀವು
ಸ್ಸೀಮಾತಿಲಂಗಿತ ವ್ಯೆಮಾಕೇಶ
ಕೇಶವರ್ಜಿತಕಾಯ ಭಾಸುರಂಭೋಜಾತ
ಜಾತರುಪಾದ್ರಿ ಸಶ್ಚಾಪಕಾಂತ್ರ
ಕಾಂತರ್ದವರ ಕಾಯ ಕಲ್ಯಣಸುನಿಕಾಯ

X X X X

ದಕ್ಷಮುಖಸೀಕ್ಷ ಸಂರಕ್ಷಿಸೆನ್ನ ನೀನು ॥
ರಾಗ ಭಾವಿನಿ ॥ ಪರಮುಗುರುಪದ ಶೇವೆಗೈಯ್ಯುತ
ವರಸುಜನಸಹವಾಸಗೆ ಯುತ
ನಿರುತದೊಳು ತವಕಥೆಯ ಕೇಳುತ ನಿಂಮ ಪೂಜಿಸುತಾ
ಮೆರೆವ ಸುಜ್ಞಾನವನು ಪಡದಿಹ
ನರನಿಗಲ್ಲದೆ ಕುಮತಿಗಳು ನಿಂ
ನಿರವ ಸಾಧಿಸಲರಿಯರ್ರೈ ಮಹಲಿಂಗ ಭವಭಂಗಾ ॥
ರಾಗ॥ ಆನಂದಬ್ಯೆರವಿ ॥ ಆದಿತಾಳ ॥

ಅಂತ್ಯ : ವೀಣಾಂಚಿತ ಮುನಿಪಾಣಿ ಪರಿಪಠ್ಯ
ಮಾಣಗುರ್ಣಾವ ಬಾಣವಿದೂ
ತೂಣೀರ ತಟಣೀಶ ಕ್ಷೋಣಿರಥ ನೀ
ರ್ವಾಣ ಸುಖಪ್ರದ ಬಣಭಯಾದ ॥ ೪ ॥

ಗಂಗಾತ್ತುಂಗ ತರಂಗ ಸಂಗತ ವೌಳಿ
ಪುಂಗವಪತ್ರಕುರಂಗ ಶಿಸು ಸಂಗತ ಕರಕಂಜ
ಲಿಂಗರಾಜಾಂಚಿತ ಭೃಂಗಿಪಾಲನ ಸೀಲ
ಸಂಗೀತಲೋಲ ಮಂಗಳಂ ಮಂಗಳಂ ॥ ೫ ॥ ಶ್ರೀ ॥
ಭಾವ ಸಂವತ್ಸರದ ಆಷಾಢ ಬ ೧ ಮಂಗಳ ಮಹಾಶ್ರೀ ॥

ವಿಷಯ : ಈಶ್ವರನ ಇಪ್ಪತ್ತೈದು ಲೀಲೆಗಳ ವರ್ಣನೆ.

ವಿಶೇಷ : ಇದರೊಡನೆ ವೃಷಭಗೀತೆ, ಅವಧೂತಗೀತೆ, ಪರಮಾರ್ಥಗೀತೆಯ ಟೀಕು (ಭಾವಾರ್ಥ ಪ್ರಕಾಶಿಕೆ) ಎಂಬ ಈ ಮೂರು ಕೃತಿಗಳಿವೆ.

825

ಕೆ. ೧೮೦/೩	**ಪಂಚಾಶಿಕೆ**	ವಾರ್ಧಕಷಟ್ಪದಿ
೧೧.೨" × ೧.೯"	ಇಮ್ಮಡಿಮುರಿಗೆ ಗುರುಸಿದ್ಧಸ್ವಾಮಿ	೧೫೨೮
೧೨೧–೧೬೧ ಪತ್ರ	೧೧ ಪಂಕ್ತಿ	೬೨ ಅಕ್ಷರ

ಆದಿ : ಪಂಚಾಶಿಕೆ ॥ ರಾಗ ನಾಟ ॥ ಪಲ್ಲವ ॥
ಇಂದಿರನು ಗಜಯುಗದ ಕದನವ
ನಂದು ಪರಿಕಿಪವಸರದೊಳು ತಾ
ನೊಂದಿ ಗಿರಿಯುಗಳವನು ಕಾದಿಸಿದನು ವಿರೂಪಾಕ್ಷಾ ॥

ಪದ ॥ ಕನಕ ನಗ ಕೋದಂಡ ಮನಸಿಜ
ಜನಕಲೋಚನ ಚರಣ ಸರಸಿಜ
ಸನಕಮುಖನುತ ಶಿಖಿಗಮನ ಗಜವರವದನ ತಾತ
ವನಜ ತನಯ ವರಪ್ರದಾಯಕ
ಧನಪಸಖಸುರ ನಿಮ್ನಗಾಧರ
ಘನದಯಾರಸ ವನದಿ ಜಯ ಧವಳಾಂಗ ಶಿವಲಿಂಗ ॥ ೧ ॥

ಅಂತ್ಯ : ಬಂಧುರದೆ ವಿಲಸತ್ರಯೋದಶ
ಸಂಧಿಯಲುನೂಜುಪರಿಯಲಿ ಸಂ
ಬಂಧ ದಶಸಪ್ತಗಣದಗ್ರದ ಪುರಗಣಿತ ಪದದ
ಬಂಧದೊಡವೆರೆದೊಪ್ಪುವೀ ಕೃತಿ
ಗಂಧಗಜ ಕದನಾನುಕೃತಿ ಬುಧ
ಬಂದು ಪರಶಿವಲಿಂಗ ಸಂಗೋತ್ತುಂಗವಾಯಿತ್ತು ॥

ವಿಷಯ : ಶಿವ ದೇವೇಂದ್ರರ ಸಂವಾದರೂಪವಾದ ಆಗಮ ಶಾಸ್ತ್ರ.

ವಿಶೇಷ : ಶಕಟರೇಫದ ಬಳಕೆಯಿದೆ. ಈ ಕಟ್ಟಿನಲ್ಲಿ ಪ್ರಭುಲಿಂಗ ಲೀಲೆ, ಭೈರವೇಶ್ವರ ಕಾವ್ಯ, ಶಿವಯೋಗ ಪ್ರದೀಪಿಕೆಯ ಟೀಕೆ ಈ ಗ್ರಂಥಗಳಿವೆ. ಕೊನೆಯ ಎರಡು ಪತ್ರಗಳಲ್ಲಿ ಬೇಡಗಿನ ವಚನದಂತಿರುವ ಹಾಡುಗಳಿವೆ.

826

ಕೆ. ೧೮೮/೧೪	**ಪಂಚೀಕರಣ (ಟೀಕೆಸಹಿತ)**	**ಪರಿವರ್ಧಿನೀ ಷಟ್ಪದಿ**
೧೭.೬" × ೨"	ವಾರ್ತೆ ಸೋಮಣ್ಣ	?
೨೪೩–೨೪೭ ಪತ್ರ	೧೨ ಪಂಕ್ತಿ	೯೦ ಅಕ್ಷರ

ಆದಿ : ಶ್ರೀ ಗುರುಬಸಲಿಂಗಾಯನಮಃ ॥ ವಾರ್ತ್ರೆ...................... ನಿರೂಪಿಸಿದ ಪಂಚೀಕರಣ ॥ ವಾರ್ತ್ರೆಯೆಂಬ ಪಟ್ಟಣದಲ್ಲಿರ್ದ್ದ ಸೋಮಯ್ಯಗಳೆಂಬಾಚಾರ್ಯ್ಯರು । ಹಾಲುಕ್ಕಿ ಮೇಲುವರಿದೋಪಾದಿಯಲ್ಲಿ ತಂಮಂತರಂಗರಲ್ಲಿ ಹುಟ್ಟಿದ ಸ್ವಾತ್ಮಜ್ಞಾನವಿವುತ್ಕಟಿಸಿ ತಂಮ ಚಿದಂಗ ಸ್ವರೂಪರಾದ ಜ್ಞಾನಿಗಳಃ । ಅಃಿದಾನಂದಿಸಿ ನಿತ್ಯ ಮುಕ್ತಿಯನೆಯ್ದಲೆಂದು ಅನ್ಯೋಪದೇಶವಾಗಿ ನಿರೂಪಿಸಿದ ಪಂಚೀಕರಣದ ಪದ । ಪರಿವರ್ಧಿನಿ ಪದ ॥ ತತ್ವಪಂಚೀಕರಣವೆಂದು ಮಿಶ್ರಪಂಚೀಕರಣವೆಂದು ಲಿಂಗಪಂಚೀಕರಣವೆಂದು ೪ ತೆಱನು । ಆ ತತ್ವಪಂಚೀಕರಣವೆ ಮಿಶ್ರಪಂಚೀಕರಣದಲ್ಲಿ ಕೂಡಿ । ಆ ಮಿಶ್ರಪಂಚೀಕರಣವೆ ಲಿಂಗಪಂಚೀಕರಣದಲ್ಲಿ ಕೂಡಿ । ಆ ಲಿಂಗ ಪಂಚೀಕರಣವೆ ಮಂತ್ರ ಪಂಚೀಕರಣದಲ್ಲಿ ಕೂಡಿದಂಥಾದೀಗ ಪಂಚೀಕರಣದ ಪದವು ಯೆಂಬ ಶಬ್ದಕ್ಕರ್ತ್ಥ ॥ ಪಲ್ಲವ ॥ ಮುಂದೆ ಬಹ ಪದದರ್ತ್ಥವೆಲ್ಲವನು ವೃಕ್ಷಬೀಜ ನ್ಯಾಯದಂತೆ ಗರ್ಭೀಕರಿಸಿಕೊಂಡು ಇಹ ಮೂಲ ಸೂತ್ರವೆಂಬುದೀಗ । ಪಲ್ಲವವೆಂಬ ಶಬ್ದಕ್ಕರ್ತ್ಥ ॥ಪಲ್ಲವ ॥

ಕ್ರೀಡೆಗೆ ಸೃಷ್ಟಿಯ ಸೂತ್ರವನೊಲಿವಿಂ
ಹೂಡಿ ವಿಲಾಸಿಸುವಂ ತಂಸುವನೊಡ
ಗೂಡುವವರ್ಗ್ಗೆ ನಿವೃತ್ತಿಯ ಮಾರ್ಗವನೀವಂ ಪರಶಿವನು ॥

ಟೀಕೆ ॥ ಕ್ರೀಡೆಗೆ ॥ ಆ ನಿಃಕಲ ಪರಶಿವನು ತನಗೆ ತೋಱುವ ಜಗದ್ವೈಭವದ ಲೀಲಾ ವಿನೋದವ ನಟಿಸುವುದಕ್ಕೆ ಸೃಷ್ಟಿಯ ವುತ್ಪತ್ಯದ । ಮತ್ತಂ

ಅಂತ್ಯ : ಗ್ರಂ ॥ ಅಂಗಂ ಕರ್ಪೂರಮಾಖ್ಯಾತಂ । ಲಿಂಗಂ ತದ್ಗಂಥಮೇವಚ ॥ ಏತಲ್ಲಿಂಗಾಂಗ ಸಂಯೋಗಸ್ಸಶಿಖಿ ಕರ್ಪೂರಯೋಗವತ್ ॥ ಎಂದು ಶಿಖಿ ಕರ್ಪೂರಯೋಗವಾಗಿ ಪ್ರಜ್ವಲಿಸಿ ಮಸಿಗಾಣಸದ ಹಾಂಗೆ । ಶರಣನ ಷಡ್ವಿಧಾಂಗವು ಚಿದಗ್ನಿ ಸ್ವರೂಪವಾದ ಷಡ್ವಿಧಲಿಂಗದಲ್ಲಿ ಕೂಡಿ ಶರಣ ಲಿಂಗವೆಂಬ ಭೇದವಿಲ್ಲದೆಯಿರುವ ಹಾಂಗೆ । ಯೆಂನಂ । ಶರಣನು ತಾನೆನಿಸಿದ । ಗುರುವೆಯೆನಿಸಿದ । ವರ । ಶ್ರೇಷ್ಟವಾದ । ಗುರು । ಆಚಾರ್ಯನಾದಂಥಾ । ಸೊಮೇಶ್ವರನು । ಚಿಚ್ಛಕ್ತಿರಮಣನಾದ ಪರಶಿವ ಲಿಂಗವು । ತಾನೆನಿಸಿದ । ವೇದಮಂತ್ರಕ್ರಿಯಾ ದೀಕ್ಷೆಗಳಿಂದ ಸತ್ತು ಚಿತ್ತಾನಂದ ಸ್ವರೂಪವಾದ ಗುರುಲಿಂಗ ಜಂಗಮಸ್ವರೂಪವ ಮಾಡಿದನು ॥೧೩॥ ವಾರತೆ ಸೋಮಣ್ಣಗಳು ನಿರೂಪಿಸಿದ ಪಂಚೀಕರಣ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಪಂಚೀಕರಣ ವಿಷಯ.

ವಿಶೇಷ : ಶಕಟರೇಫದ ಬಳಕೆಯಿದೆ. ಇದರೊಂದಿಗೆ ಮಹಾದೇವಿಯಕ್ಕಳ ಸೃಷ್ಟಿಯ ವಚನದ ಟೀಕು, ಪ್ರಭುದೇವರ ಸೃಷ್ಟಿಯು ವಚನದ ಟೀಕು—ಮೊದಲಾದ ಇತರ ೧೫ ಗ್ರಂಥಗಳಿವೆ.

827

ಕೆ.ಬಿ. ೧೯೮/೧	**ಪಂಚೀಕರಣ**	ಗದ್ಯ
೭.೮″×೬.೩″	ಚಿದಾನಂದಾವಧೂತ	ಸು. ೧೭೫೦
೧—೧೦ ಪತ್ರ	೧೧ ಪಂಕ್ತಿ	೨೦ ಅಕ್ಷರ

ಆದಿ : ಚಿದಾನಂದ ಪಂಚೀಕರಣ ॥
ಅಯ್ಯ ಶಿವನ ಪಂಚಮುಖದಲ್ಲಿ ಪೃಥ್ವಿ ಅಪ್ಪು । ತೇಜ । ವಾಯು ಆಕಾಶವೆಂಬ । ಪಂಚಭೂತಗಳು ಪುಟ್ಟಿದವು । ಆ ಪಂಚಭೂತಗಳು ಪಂಚೀಕೃತವಾಯಿತು । ಪಂಚೀಕೃತದಿಂದ । ವೊಂದೊಂದು ಭೂತಕ್ಕೆ ಐದರ ಲೆಕ್ಕದಿಂ ಯಿಪ್ಪತ್ತೈದು ತತ್ವಂಗಳು ಆದವು । ಇದರಿಂದ ದೇಹವಂತ್ತು ಆಯಿತು ।

ಅಂತ್ಯ : ಅವದೂತನಾಗಿ ಕೇವಲ ಬಯಲಾಗಿದ್ದ ಪಟದಂತೆ ಬಯಲಿಗೆ ಬಯಲಾಗಿ ನಿಂತ ಶ್ರೀ ನಿಜಮುಕ್ತಿಕಣಾ ಚಿದಾನಂದ ಅವಧೂತ ಸದ್ಗುರು ಪ್ರಭುವೇ ॥

ಶ್ರೀಮದದ್ವೈತ ವಾರಾಶಿ ಸಂಭೂತಾತ್ಮ ಸುಧಾಕರಂ ।
ಚಿದಾನಂ ದಂಮಹಂ ವಂದೇ ಗುರುದೇವಮಹರ್ನಿಶಂ ॥

ವಿಷಯ :ವೀರಶೈವ ವೇದಾಂತ.

ವಿಶೇಷ : ಇದೇ ಪುಸ್ತಕದಲ್ಲಿ ಚಕ್ರಕುಲ ರೇಖಾಲಕ್ಷಣವೆಂಬ ಮತ್ತೊಂದು ಗ್ರಂಥವಿದೆ.

828

ಕೆ.ಬಿ. ೩೪೫/೧	**ಪಂಚೀಕರಣಹಸುಗೆ**	ಶ್ಲೋಕ, ಟೀಕು
೭.೮"×೫.೫"	ಚೆನ್ನಬಸವೇಶ್ವರ	ಸು. ೧೧೬೦
೨೭ ಪತ್ರ	೧೮ ಪಂಕ್ತಿ	೧೬ ಅಕ್ಷರ

ಆದಿ: ಪಂಚೀಕರಣ ಹಸಿಗೆ ಬರಯುದಕ್ಕೆ ಶುಭಮಸ್ತು ॥
ಗುರುಪ್ರಸಂನ್ನಾ ॥ ಶ್ಲೋಕಾ ॥

ಅಖಂಡಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಂ
ತತ್ಪದಂ ದರಿತಂ ಯೇನಾ ತಸ್ಮೈ ಶ್ರೀಗುರುವೇ ನಮಃ ॥

ಯಿಂತ್ತಪ್ಪ ಸದ್ಗುರುವಿಗೆ ನಮಸ್ಕಾರವಂ ಮಾಡಿ । ಯಿಾಲೋಕದಲ್ಲಿ ಸದ್ಭಕ್ತನಾದ । ಸಾಧನೇ ಚತುಷ್ಟೆಯಂಬ್ಬಲ್ಲಾತನ । ನಡೆನುಡಿಯಂ । ಗುಣಾತಿಶಯಂಗ್ಗಳಂ । ಬರಿಯ .... ಟ್ಟದೀ ।

ಅಂತ್ಯ : ವಿಷ್ಣು ಅಧಿ ದೇವತೆ । ಹೃತ್ಕಮಲಾಕರ್ನಿಕಾಗತಿಗಳಿಂ ತ್ರೇಜಸಜೀವನು । ಅಂತ್ತರಾತ್ಮ ಸಂನ್ನಿಹಿತನಾಗಿ ಜಾಗರದ್ವಾಸನಾದಿ ವಿಷಯ ಭೋಗಮಂ ಮನವೆಂಬ್ಬ ಕರಣದಿಂದಾ ಅನುಭವಿಸುತ್ತಿಹುದೇ ಸೂಕ್ಷ್ಮದೇಹ ಯನಿಸುವುದೂ ॥

ವಿಷಯ: ವೀರಶೈವ ವೇದಾಂತ.

ವಿಶೇಷ : ಇದೇ ಪುಸ್ತಕದಲ್ಲಿ ವೀರಶೈವ ಶಿಖಾರತ್ನವೆಂಬ ಮತ್ತೊಂದು ಗ್ರಂಥವಿದೆ ಪತ್ರಗಳಿಗೆ ಕ್ರಮಾಂಕವಿಲ್ಲ. ತೆಲುಗು ಲಿಪಿ.

829

ಕೆ.ಬಿ. ೨೬೦/೪	**ಪತಿವ್ರತಾಧರ್ಮ**	ಗದ್ಯ
೮"×೬.೬"	?	?
೧೬–೧೭ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ: ಪತೀವ್ರತ ಶ್ರೀ ಧರ್ಮಪದ್ಮಪುರಾಣ x x x

ವಚನ ॥ ವಸಿಷ್ಠ ಮುನೀಶ್ವರನು ದಿಲೀಪ ಚಕ್ರವರ್ತಿಗೆ ಪತಿವ್ರತೆಯರ ಧರ್ಮವನ್ನು ನಿರೂಪಿಸುತಲಿದ್ದಾರು। ಲೋಕದಲ್ಲಿ ಶ್ರೀಯರಿಗೆ ಪತಿಯು ಕುರೂಪಿಯಾದರು ಆಚಾರವಿಲ್ಲದವನಾದರು ವಳ್ಳೆ ನಡತೆಯಿಲ್ಲದವನಾದರು ಕೋಪವುಳ್ಳವನಾದರು ಕಾಮುಪರನಾದರು ಆ ಪತಿಯನ್ನು ಯಾವಾಗಲು ದೇವತೆಯ ಪೂಜಿಸುವ ಮರ್ಯಾದೆಯಲ್ಲಿ ಮನೋವಾಕ್ಕಾಯಗಳಿಂದಲೂ ಬಹುಮಾನವ ಮಾಡಬೇಕು.

ಅಂತ್ಯ: ಸ್ವರ್ಗಭೋಗಗಳು ಯಿಹಲೋಕದಲ್ಲಿಯೆ ವುಂಟಾಗಿ ಅತಿಶಯವಾದ ಕೀರ್ತಿಯು ವುಂಟಾಗುವದು ಯಂದು ವಸಿಷ್ಠಮುನೀಶ್ವರನು ದಿಲೀಪ ಚಕ್ರೇಶ್ವರನಿಗೆ ಅತಿಶಯವಾದ ಶ್ರೀ ಧರ್ಮವನ್ನು ಹೇಳಲಾಗಿ ಅರಸು ಅದೇರೀತಿಗೆ ಸಂಸಾರದಲ್ಲಿ ಸುಖದಲ್ಲಿಯಿದ್ದು ಅನೇಕ ಯಜ್ಞಗಳನು ಮಾಡಿ ಸುಖದಲ್ಲಿಯಿದ್ದನು. ಪದ್ಮಪುರಾಣದ ವಶಿಷ್ಠದಿಲೀಪರ ಸಂವಾದ ಸಂಪೂರ್ನ ಮಂಗಳಮಹಾಶ್ರೀ.

ವಿಷಯ: ಪತಿವ್ರತಾಧರ್ಮ.

ವಿಶೇಷ: ಮೋಡಿ ಅಕ್ಷರ. ಈ ಗ್ರಂಥದೊಂದಿಗೆ ಸಜ್ಜನಚಿತ್ತವಲ್ಲಭ, ಲೋಕಸ್ವರೂಪ, ಜಿನಸಹಸ್ರನಾಮ (ಸಂಸ್ಕೃತ) ಎಂಬ ಕೃತಿಗಳಿವೆ.

830

ಕೆ. ೭೫/೩	**ಪದಮಂತ್ರ ಗೋಪ್ಯ** (ವಾಚ್ಯಸಹಿತ)	ಪದ್ಯ, ಗದ್ಯ
೧೦.೭"×೨.೨"	ಚನ್ನಬಸವೇಶ್ವರ	ಸು. ೧೧೬೦
೮೭–೯೬ ಪತ್ರ	೧೮ ಪಂಕ್ತಿ	೭೫ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯಂನಮಃ ॥ ಚೆಂನಬಸವೇಶ್ವರ ದೇವರ ಪದಮಂತ್ರ ಗೋಪ್ಯ॥ ಪ್ರಥಮದಲ್ಲಿ ಪೀಠಿಕೆ ॥ ಶ್ರೀಮನ್ಮಹಾದೇವನಖಂಡಾದ್ವಯ ನಿತ್ಯ

ನಿರಂಜನ ಪರಂಜ್ಯೋತಿ ಸ್ವರೂಪ ಸಚ್ಚಿದಾನಂದ ಬ್ರಹ್ಮವೆಂಬ ಸ್ವತಂತ್ರ ಕರ್ತೃ ನಿಃಕಲ ಪರಶಿವಲಿಂಗದಿಂದ। ನಿರ್ಮಿತವಾದ ಜಗದ್ವೈಭವದೊಳಗೆ ವೇದಾಂತ ಸಿದ್ಧಾಂತಂಗಳು। ಮೊದಲಾದ ಮಾರ್ಗ್ಗಂಗಳಿಗುತ್ತರವೆನಿಸುವ ವೀರಶೈವಸಿದ್ಧಾಂತ ಮಾರ್ಗ್ಗದಲ್ಲಿ। ಆ ಪರಶಿವಲಿಂಗದ ಸ್ವಲೀಲಾನಂದ ಭಕ್ತಿ ಭಾವಸೂತ್ರವಿಡಿದು ಆಚರಿಸುತ್ತ। ಆ ಲಿಂಗದ ಸಮವೇತ ಚಿತ್ಶಕ್ತಿ ಸ್ವರೂಪಮಪ್ಪ। ಷಟ್ಸ್ಥಲಜ್ಞಾನಪ್ರಕಾಶಮಧ್ಯದಲ್ಲಿ ಲಿಂಗಾಂಗಸಂಯೋಗ ಸಮರಸವೆಂಬ ಶಿವಯೋಗಸಮಾಧಿಯ ಹೊಲಬನರಿದು ನಿಂದಾತನೆ ನಿತ್ಯ ನಿಜಲಿಂಗೈಕ್ಯನು। ಅಸಾಧ್ಯ ಸಾಧಕನು। ಆತನೆ ಜಗತ್ಪೂಜ್ಯನೆಂದು। ಆ ಶಿವಯೋಗಮಾರ್ಗ್ಗದ ಲಕ್ಷಣವನು ಸಿದ್ಧರಾಮೇಶ್ವರಂಗೆ ಚೆಂನಬಸವರಾಜ ದೇವರು ತಂಮ ಸ್ವಾನುಭಾವ ಪ್ರಸಂಗವಾಕ್ಯಂಗಳಿಂದ। ಬೋಧಿಸುತ್ತಿರ್ದ್ದ ರದಱ ವಿಸ್ತಾಂತರವೆಂತೆನಲು। ಆ ಸದ್ಬೋಧಾಸ್ವರೂಪವಪ್ಪ ಶಾಸ್ತ್ರಕ್ಕೆ ಮಂತ್ರ ಗೋಪ್ಯವೆಂಬ ನಾಮುಪ್ರಸಿದ್ಧವಾದ ನಿರ್ವ್ವಚನ॥ ಅದಕ್ಕೆ ವಿವರ।. ಮಾಯೆಂಬಲ್ಲಿ ಮನನ॥

ಅಂತ್ಯ: ॥ಶ॥ ಯಿಲ್ಲಿಗೆ ಜ್ಞಾನಶೂನ್ಯಸ್ಥಲ ಸಮಾಪ್ತ ಮಂಗಳಮಹಾಶ್ರೀ॥ ಯೀ ಟೀಕಿನ ಸಮಾಪ್ತಿಯಕಡೆಮುದ್ರೆ। ಶ್ರೀಮದನೇಕ ಬ್ರಹ್ಮಾಂಡಾಲಯಸ್ಥಾನ ಭೂತ ಪರಶಿವತತ್ವಪ್ರಸಾದ ನಿಜಸ್ವರೂಪ ಅಖಿಳತತ್ವ ಶಿಪಾರ್ಪ್ಪಿತ ಚಿದ್ಭಾಜನ ಪ್ರಮಥಗಣಹೃತ್ಸರೋಜ ಸುಜ್ಞಾನ ಜ್ಯೋತಿ ಶ್ರೀಮದ್ಗುರು ವಿರೂಪಾಕ್ಷಾವತಾರ ಸದ್ಗುರುವೆ ಭಾವಗಮ್ಯ ಶಿವಲಿಂಗ ಚೈತನ್ಯ ಜಂಗಮ ಮೂರ್ತಿ ಷಟ್ಸ್ಥಲಜ್ಞಾನ ಚಕ್ರವರ್ತಿಯಪ್ಪ ಚೆಂನಬಸವರಾಜ ದೇವರು ತಂಮ ಅಗಮ್ಯ ದಿವ್ಯ ನಿರಾಲಂಬಸ್ಥಾನದೊಳು ಸಮರಸ ಸಂಭಾಷಣೆಯ ಮೌನಮುದ್ರೆಯೊಡೆಯದಂತೆ। ಅಖಂಡಪೂರ್ನ್ನ ಸಚ್ಚಿದಾನಂದ ಪ್ರಕಾಶ ಮಯದಿಂದ ಬೆಳಗುವಂಥಾ। ಲಿಂಗಾಂಗ ಸಂಯೋಗ ಸಮರಸವೆಂಬ ನಿರ್ವ್ವಯಲ ನಿಜಸಮಾಧಿಯ ಸ್ವರೂಪಾರ್ತ್ಥಂಗಳನು ಪರಶಿವಯೋಗಿರಾಜ ಸಿದ್ಧರಾಮೇಶ್ವರನ ಸೇವದಿಂದ ತಂಮಂಶೀಭೂತರಪ್ಪ ಮರ್ತ್ಯಲೋಕದ ಮಹಾಗಣಂಗಳು ಸ್ವೀಕರಿಸಿ ನಿಜಲಿಂಗೈಕ್ಯರಾಗಲೆಂದು ತಂಮ ಸ್ವಾನು ಭಾವ ಪ್ರಸಿದ್ಧವಾದ ಪರಮಾಮೃತ ವಾಕ್ಯಂಗಳಿಂದ ಪವಿಟ್ಟು ನಿರೂಪಿ ಸಿದ ಮಂತ್ರಗೋಪ್ಯವೆಂಬ ಶಿವಶಾಸ್ತ್ರದಲ್ಲಿ ಸಂಪೂರ್ನ್ನವಾಗಿಪ್ಪ ಶಿವಾನು ಭಾರ್ತ್ಥಂಗಳೊಳಗೆ ಆ ಸುಜ್ಞಾನಗುರು ಚೆಂನಬಸವಂಣ ಕರುಣಿಸಿದಷ್ಟು ಅರ್ತ್ಥಮಂನಱಿದು ಯೆರಡನೆಯ ಚೆಂನಬಸವಂಣನಾದ ಷಟ್ಸ್ಥಲಾನು ಭಾವಜ್ಞರು ಪೇಳ್ದ ಪ್ರಸಾದವಾಕ್ಯಂಗಳ ಸನ್ಮತಿಯಿಂದ ನಾನು ಬಲ್ಲಂತೆ ಕನ್ನಡಿಸಿದ ನುಡಿಗಳೊಳಗೆ ತಪ್ಪುಳ್ಳಡೆ ತಿದ್ದಿ ನಿಂಮ ಪ್ರೇರಿಕತ್ವದ ನುಡಿಗಳ

ವೊಪ್ಪವಿಟ್ಟುಕೊಂಡು ಸತ್ರೀಮಂ ಕೈಮಿಕ್ಕು ಅವಧರಿಪುದು ಚಿತ್ತೈಸಿ ಪರಮಾವತಾರ ಶರಣಾಗತ ಜನರಕ್ಷಕ ಶಿವಶರಣಕೋವಿದರುಗಳ ಪವಿತ್ರ ವಾದ ಪದ್ಮಂಗಳಿಗೆ ಶರಣುಶರಣಾರ್ತ್ಥಿ॥ ಚೆಂನಬಸವೇಶ್ವರ ದೇವರು ನಿರೂಪಿಸಿದ ಮಂತ್ರಗೋಪ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ.

ವಿಷಯ : ಶಿವಯೋಗರಹಸ್ಯ.

ವಿಶೇಷ : ಶಕಟರೇಫವಿದೆ. ಇದರೊಂದಿಗೆ ಮಂತ್ರಗೋಪ್ಯ, ಆಚರಣೆಯ ವಚನ ಮೊದಲಾದ ಇತರ ೧೨ ಗ್ರಂಥಗಳಿವೆ.

831

ಕೆ. ೧೮೮/೩	**ಪದಮಂತ್ರಗೋಪ್ಯ** (ವಾಚ್ಯಸಹಿತ)	ಪದ್ಯ, ಗದ್ಯ
೧೭.೬″×೨″	ಚನ್ನಬಸವೇಶ್ವರ	ಸು. ೧೧೬೦
೧–೭ ಪತ್ರ	೧೧ ಪಂಕ್ತಿ	೯೨ ಅಕ್ಷರ

ಆದಿ: ಶ್ರೀ ಗುರುಬಸವಲಿಂಗಾಯ ನಮಃ ॥ ಶ್ರೀ ಜ್ಞಾನದಾನೈಶ್ವರ್ಯವನುಳ್ಳ। ಗುರು। ಮುಕ್ತಿ ಪ್ರದಾಯಕನಾದಂಥಾ। ಬಸವ। ಚಿನ್ನಾದ ಚಿದ್ಬಿಂದು ಚಿತ್ಕಲಾಸ್ವರೂಪನಾದಂಥಾ। ಲಿಂಗಾಯ। ಲಯಗಮನಂಗಳಿಗೆ ಕಾರಣ ವಾದಂಥಾ ವಸ್ತುವಿಂಗೋಸ್ಕರ। ನಮಃ। ನಮುಸ್ಕಾರವೆಂದು ಆಚಾರ್ಯರು ಶಾಸ್ತ್ರಪ್ರಾರಂಭದಲ್ಲಿ ನಮುಸ್ಕರಿಸುತ್ತಿರ್ದ್ದಪರೆಂಬುದರರ್ತ್ಥ। ಚೆಂನಬಸವರಾಜ ದೇವರ। ವರ್ನ್ನಂಗಳ ಸಮೂಹವು। ಮಂತ್ರ। ಮನನಂತ್ರಾಯತಯಿತಿ ಮಂತ್ರಂ ಯೆಂಬ ಮಂತ್ರಂಗಳ। ಗೋಪ್ಯಂ। ರಹಸ್ಯವೂ॥

ಪದ॥ ಗುರುವೆ ಪರಶಿವನೆ ಸಕಲಾಗಮಂಗಳ ಮೂರ್ತಿ। ಗುರುವೆ ಅಜ್ಞಾನ ತಿಮಿರಕ್ಕಂಜನಾ॥ ನಾಸ್ತಿಕತ್ಸಂ ಗುರೋಃ ಪರವೆಂದುದಾಗಿ। ಶ್ರೀ ಗುರು ಪಾದಸೇವೆ ಕಾರಣಯೋಗಿಗೆ॥ ಟೀಕು॥ ಗುರುವೆ। ಶ್ರೀ ಗುರುದೇವನೆ

ಅಂತ್ಯ : ಟೀ॥ ಸೊಡರಿಲ್ಲದ। ಅಜ್ಞಾನಸ್ಫುರಣೆಯಿಲ್ಲದ। ಬೆಳಗು। ಸುಜ್ಞಾನ ಪ್ರಕಾಶವು। ಕುಡಿವಱಿದ ಪ್ರಭೆಯೊಳಗೆ। ಕುಡಿವಱಿದ। ಅತಿವರಿದ। ಪ್ರಭೆಯೊಳಗೆ। ಪ್ರಕಾಶದಲ್ಲಿ। ಪಿಡಿದ। ಪರಿಗ್ರಹಿಸಿದ। ಕರ್ಪ್ಪೂರ ದುರಿಯು। ಅಂಗವು ಲಿಂಗವು। ಮಱದೊಱಗಿರೂ। ನಿಃಪತಿಯಾಯಿತ್ತು। ಗಡಣವಿಲ್ಲ। ಭಿನ್ನಕ್ರಿಯಾಡಂಬರವಿಲ್ಲದ ಪ್ರಭೆಯು। ಪ್ರಕಾಶದ। ಕುಡಿಯ

ಬೆಳಗಿನ । ಮಹಾಜ್ಞಾನಪ್ರಕಾಶದ । ನಡುವೆ । ಮಧ್ಯದಲ್ಲಿ । ಹಿಡಿ ಹಿಡಿಯ । ಕ್ರಿಯಾಜ್ಞಾನಂಗಳಿಂದ ಪರಿಗ್ರಹಿಸಲಿಕ್ಕಾಗಿ । ಬಯಲಾದ । ನಿರಾಕಾರ ಸ್ವರೂಪವಾದ । ಕೂಡಲ ಚನ್ನಸಂಗಯನು । ಆ ಪರಶಿವಲಿಂಗವು ತಾನೆ । ॥೫॥ ಯಿಲ್ಲಿಗೆ ಜ್ಞಾನಶೂನ್ಯಸ್ಥಲ ಸಮಾಪ್ತಂ ಮಂಗಳಮಹಾಶ್ರೀ ॥

ವಿಷಯ : ಲಿಂಗಾಂಗದ ರಹಸ್ಯ ಪ್ರತಿಪಾದನೆ.

ವಿಶೇಷ : ಸಮಗ್ರವಾಗಿದೆ. ಶಕಟರೇಫವನ್ನು ಬಳಸಿದೆ. ಈ ಗ್ರಂಥದೊಂದಿಗೆ ಪ್ರಭುದೇವರ ಮಂತ್ರಗೋಪ್ಯ, ಮರುಳು ದೇವರ ಕಂದಸಾರ ಮೊದಲಾದ ಇತರ ೧೫ ಗ್ರಂಥಗಳಿವೆ.

832

ಕೆ. ೯೩/೨	**ಪದಾರ್ಥ ಪ್ರಕಾಶಿಕೆ**	ಟೀಕು
೧೪.೭" × ೧.೪"	?	?
[illegible] ಪತ್ರ	೧೦ ಪಂಕ್ತಿ	೭೦ ಅಕ್ಷರ

ಆದಿ : ಶುಭಮಸ್ತು x x x

ಅಥ .... ಯಶಃ ಯಶಸ್ಸೇ ಧನಃ ದ್ರವ್ಯವಾಗಿದ್ದಂಥಾ ಪ್ರಜಾನಾಂ ಪ್ರಜಗಳಿಗೆ ಅಧಿಪಃ ವೊಡೆಯನಾಗಿದ್ದಂಥಾ ದಿಲೀಪನು ಪ್ರಭಾತೇ ಪ್ರಾತಃಕಾಲದಲ್ಲಿ ಜಾಯಾ ಸ್ತ್ರಿಯಾದ ಸುದಕ್ಷಿಣಾದೇವಿಯಿಂದ ಪ್ರತಿಗ್ರಾಹಿತ ಪ್ರತಿಗ್ರಹಿಸಲುಪಟ್ಟಂಥಾ ಗಂಧಮಾಲ್ಯಾಂ ಗಂಧ ಮಾಲಿಕೆಗಳುಳ್ಳಂಥಾ ಪೀತಪಾನವುಳ್ಳಂಥಾದಾಗಿ ಪ್ರತಿಬದ್ಧ ತಿರಿಗಿ ಕಟ್ಟಲ್ಪಟ್ಟಂಥಾ ವತ್ಸಾಂ ಕರುವುಳ್ಳಂಥಾ ಋಷೇಃ ವಸಿಷ್ಠನ ಧೇನುಂ ಕಾಮಧೇನುವನು ವನಾಯ ವನವನು ಯ್ಯೆದುವದಕೋಸ್ಕರ ಮುಮೋಚ ಬಿಟ್ಟನು ॥ ೧ ॥

ಅಂತ್ಯ : ಅಥ ಯದ್ವಆನಂತರದಲ್ಲಿ ಅಂಚಿತ ಮನೋಹರವಾದ ಅಕ್ಷಿ ಕಣ್ಣುಗಳೆ ಪಕ್ಷ್ಮಾ ರೆಪ್ಪೆಗಳುಳ್ಳ ಆತನು ಶಾಸ್ತ್ರದಿಂದ ದೃಷ್ಟಂ ಕಾಣಲು ಪಟ್ಟಂ ದಿವಸಮುಖೇ ಪ್ರಾತಃಕಾಲದಲ್ಲಿ ಉಚಿತಂ ವಾದಂಥಾ ವಿಧಿಂಯನು ಅವಸಾಯ್ಯ ಮುಗಿಸಿ ಕುಶಲ ಕುಶಲರಿಂದ ವಿರಚಿತ ರಚಿಸಲುಪಟ್ಟ ಅನುರೂಪ ಸ್ವಯಂವರಕೆ ಸಮಾನವಾದ ವೇಷಃ ಸನ್ ಆಭರಣಗಳುಳ್ಳಂಥವನಾಗಿ ಸ್ವಯಂವರ ಸ್ಥಲದಲ್ಲಿ ಸ್ಥಂ ಇರುತ್ತಿದ್ದಂಥಾ ಕ್ಷಿತಿಪ ಭೂಮಿಯನು ಪಾಲಿಸುವ ಅರಸಗಳ ಸಮಾಜಂ .... ಸ .... ನು ಅಗಾತ್ ಯ್ಯೆದಿದನು ॥೭೬॥

ಶ್ರೀಪದಾರ್ಥಪ್ರಕಾಶಿಕಾಯಾಂ ರಘುವಂಶೇ ಪಂಚಮಸ್ಸರ್ಗಃ ‖ X X X ಸ ಇತಿ | ಸಃ ಆ ಅಜನು ತತ್ರ ಆ ಸ್ವಯಂವರಸ್ಥಾನದಲ್ಲಿ ಉಪಚಾರವತ್ಸು ರಾಜೋಪಚಾರಗಳುಳ್ಳ ಮುಂಚೇಷುಚಾವ.... ಲಿಸಿಂಹಾಸನಸ್ಥಾನ್ ಸಿಂಹಾಸನದಲ್ಲಿರುವಂಥಾ ಮನೋಜ್ಞ ಮನೋಹರವಾದ ವೇಷಾನ್ ಆಭರಣವುಳ್ಳ ವೈಮಾನಿಕಾನಾಂ ವಿಮಾನಗಳಲ್ಲಿ ಚಲಿಸ್ತಿದ್ದಂ ಮರುತಾಂ ದೇವತೆಗಳ ಆಕೃಷ್ಟ ತೆಗೆದುಕೊಳ್ಳಲುಪಟ್ಟ ಲೀಲಾನ್ ವಿಲಾಸಗಳನುಳ್ಳ ನರಲೋಕಪಾಲಾನ್ ಅರಸುಗಳನು ಆಪಶ್ಯತ್ ಕಂಡನು ‖ ೧ ‖

ವಿಷಯ : ರಘುವಂಶದ ಸಂಸ್ಕೃತ ಶ್ಲೋಕಗಳಿಗೆ ಕನ್ನಡ ಟೀಕು.

ವಿಶೇಷ : ನಂದೀನಾಗರಿಲಿಪಿ. ಪುಸ್ತಕ ಸ್ವಲ್ಪ ಶಿಥಿಲ. ಪತ್ರಸಂಖ್ಯೆ ೧೬೫ರಿಂದ ೨೦೯ ರವರೆಗಿದೆ. ಇದರೊಂದಿಗೆ ಸಂಕ್ಷೇಪರಾಮಾಯಣದ ಟೀಕು ೨ನೆಯ ಸರ್ಗದಿಂದ ೬ನೆಯ ಸರ್ಗ ೯೧ನೆಯ ಶ್ಲೋಕದವರೆಗೆ ಇದೆ.

833

ಕೆ. ಎ. ೩೨೫	**ಪದಾರ್ಥಸಾರ**	ಗಾಹೆ, ಪದ್ಯ, ಗದ್ಯ
೧೩.೧"×೮.೩"	ಮಾಘನಂದಿ	ಶು. ೧೨೬೦
೧–೧೨೮೨ ಪುಟ	೨೧ ಪಂಕ್ತಿ	೧೫ ಅಕ್ಷರ

ಆದಿ : ಪಣಮಿಯ ಪಂಚ ಗುರೂಣಂ ತೇ ಸಿದ್ಧಯಣಂ ಚಗಣಹರಾ ಈಣಂ
ಬೊಚ್ಚಂ ಪಯದ್ಧಸಾರಂ ಸಿದ್ಧಿಯರಂ ಭವಿಯ ಜೀವಾಣಂ ‖ ೧ ‖
ಇಂತು ಮಂಗಳಾದ್ಯರ್ಥಂ ವಿಶಿಷ್ಟೇಷ್ಟಾದಿ ಕೃತಾಭಿಮತ ದೇವತಾತ್ರಯಕ್ಕೆ ನಾಸ್ತಿಕ್ಯ ಪರಿಹಾರಾರ್ಥಂ ಶಿಷ್ಟಾಚಾರ ಪ್ರತಿಪಾಲನಾರ್ಥಂ ಪುಣ್ಯಾವಾಪ್ತ್ಯರ್ಥಂ ನಿರ್ವಿಘ್ನಾರ್ಥಮಾಗಿ ನಮಸ್ಕಾರಮಂ ಮಾಡಿ ಪದಾರ್ಥಸಾರಮೆಂಬ ಗ್ರಂಥಮಂ ಪೇಳ್ವೆನದೆಂತೆನೆ ‖

ಅಂತ್ಯ : ವಚನ–ಸ್ವಸ್ತಿ ಸಮಸ್ತ ಶತಮುಖಲೇಖ ಶೇಖರ ಶೋಣ ಮಣಿಗಣ ಪುಂಜ ರಂಜಿತ ಚಾರು ಚರಣಾರವಿಂದ ದ್ವಂದ್ವ ಪರಮಜಿನೇಂದ್ರ ಸ್ಮರಣ ಚರಣ ಪರಿಣತಾಂತಃಕರಣರುಂ ಅಪಾರಸಂಸಾರ ಪಾರಾವಾರೋತ್ತರಣರುಂ ಶ್ರೀಮೂಲಸಂಘ ಕ್ಷೀರವಾರಾಶಿ ಸಂಜಾತ ಬಲಾತ್ಕಾರ ಗಣಮುದಯಾದ್ರೀಂದ್ರ ಸಮುತ್ಪನ್ನೋದಯ ಚಂದ್ರರಾದ್ಧಾಂತಾತ್ಮಜ ಶ್ರೀಕುಮುದಚಂದ್ರಭಟ್ಟಾರಕದೇವ ಮನಃಪ್ರಿಯಶಿಷ್ಯರುಂ ಸ್ವಭಾವ ಶುದ್ಧಾತ್ಮಭಾವನಾಪೋಷ್ಯರುಂ X X X X ದ್ವಾದಶಾನುಪ್ರೇಕ್ಷಾ ಭಾವನಾಚತುರರುಂ

ನಿರಂಜನ ಪರಮಾತ್ಮತತ್ತ್ವ ಸೇವನಾ ಕುಶಲರುಂ ಅಧ್ಯಾತ್ಮಶಾಸ್ತ್ರವೇದಿ
ಗಳುಮಪ್ಪ ||

ಶ್ಲೋಕ || ನಮೋ ನಮ್ರಜನಾನಂದ ಸ್ಯಂದಿನೇ ಮಾಘಣಂದಿನೇ |
ಜಗತ್ಪ್ರಸಿದ್ಧ ಸಿದ್ಧಾಂತವೇದಿನೇ ಚಿತ್ಪ್ರಮೋದಿನೇ ||
ಸಿದ್ಧಾಂತಸಾರ ಸರ್ವ್ವಸ್ವ ಕೋಶಾವಾಸೈಕಮೂರ್ತ್ತಯೇ |
ನಮಃ ಶ್ರೀಮಾಘಣಂದಾಖ್ಯಾ ವಿಶ್ವವಿಖ್ಯಾತ ಕೀರ್ತ್ತಯೇ ||
ಭದ್ರಂ ಭೂಯಾತ್ || ಶ್ರೀ ||

ವಿಷಯ : ಜೈನಾಗಮ ವಿಚಾರ.

ವಿಶೇಷ: ಈ ಗ್ರಂಥವು ಎರಡು ಸಂಪುಟಗಳಲ್ಲಿದೆ. ಮೊದಲನೆಯದರಲ್ಲಿ ೫೬೪ ಪುಟಗಳಿದ್ದು ಎರಡನೆಯ ಸಂಪುಟವು ೫೬೫ನೇ ಪುಟದಿಂದ ಪ್ರಾರಂಭವಾಗಿ ೧೨೮೨ನೇ ಪುಟದಲ್ಲಿ ಮುಗಿದಿದೆ. ೧ನೇ ಸಂಪುಟದಲ್ಲಿ ೪೮ ಪುಟಗಳ ಮುನ್ನುಡಿಯೂ ಇದೆ. ಇದನ್ನು ಹೊಂಬುಚದ ಶ್ರೀ ಜೈನಮಠ ಸರಸ್ವತೀ ಭಂಡಾರದಲ್ಲಿರುವ ಓಲೆ ಪ್ರತಿಯಿಂದ ೧೯೪೪ ನೇ ಇಸ್ವಿಯಲ್ಲಿ ಪ್ರತಿಮಾಡಲಾಗಿದೆ.

834

ಕೆ. ೫೩೩	**ಪದ್ಮಪುರಾಣದ ಟೀಕು**	ಗದ್ಯ
೧೦.೬"×೧.೭"	ಚಿಕ್ಕುಪಾಧ್ಯಾಯ	೧೬೭೨
೧–೨೧೨ ಪತ್ರ	೯ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ ನಾರೀಕುಚಕುಂಭ ಕುಂಕುಮ................
....................ನಂದ ಸಂದಾಯಕಂ
ದೀನಾಭೀಷ್ಟಫಲಪ್ರದಂ ಕರುಣದಿಂ ಶ್ರೀರಂಗಧಾಮೇಶ್ವರಂ
ಕಾರುಣ್ಯಂದಳೆವುತ್ತೆ ರಕ್ಷಿಸುಗಜಾಸ್ರಂ ಚಿಕ್ಕದೇವೇಂದ್ರನಂ ||

ಕಂ || ಪದ್ಮಾರಮಣೀ ಸ್ತುತಿಹೃ
ತ್ಪದ್ಮಂ ಚಿಕದೇವಮಂತ್ರಿ ಚಿಕುಪಾಧ್ಯಾಯಂ
ಪದ್ಮಪುರಾಣದ ಟೀಕಂ
ಪದ್ಮಾಕ್ಷನ ನುತಿಸಿ ಕನ್ನಡದೆ ವಿರಚಿಸಿದಂ || ೨ ||

ಅದೆಂತೆಂದರೆ ॥ ಪದ್ಮಪುರಾಣದಭ್ಯುದಯ ಪರಂಪರಾಭಿಯ್ಯಾಧಿಯಾದ ಕಥಾ ಪ್ರಾರಂಭವೆಂತೆಂದರೆ । ಪುಂಣ್ಯತಮವಾಗಿ ಯಿರುವಂಥಾ ನೈಮಿಷಾರಣ್ಯ....ಲ್ಲಿ ಶೌನಕಾದಿ ಮಹಾ ಮುನೀಶ್ವರರು ಸತ್ರಯಾಗಮಂ ಮಾಡಿ ಯಿರಲಿಕ್ಕಾಗಿ ॥

ಅಂತ್ಯ: ಯೆಲೆ ಪಾರ್ವತಿಯೆ ಕೇಳು। ಆಗ ಲಕ್ಷ್ಮಣಸ್ವಾಮಿ ಧನುರ್ಬಾಣ ಹಸ್ತನಾಗಿ ವಾಯುಪುತ್ರ ಮೊದಲಾದವರ ಕೂಡಲಿಟ್ಟುಕೊಂಡು ಹೋಗಿ ಯಿಂದ್ರಜಿತ್ತು ಮಾಡುವ ಯಾಗವಂನ್ನು ಕೆಡಿಶಿ ಘೋರಯುದ್ಧವನ್ನುಮಾಡಿ ಮೇಘನಾದನ ಸಮಸ್ತ ದೇವತೆಗಳಿಗೂ ಸಂತೊಷವಾಗುವ ಹಾಗೆ । ದೇವೇಂದ್ರನು ವಜ್ರಾಯುಧದಿಂದಾ । ಸತ್ರು ಸಂಹ್ವಾರವನ್ನೂ ಮಾಡುವ ಹಾಗೆ ರಾಮಾನುಜನಾದ ಲಕ್ಷ್ಮಣಸ್ವಾಮಿ ಮೇಘನಾದನ ಸಂಹ್ವರಿಸಿದನೂ ॥ ಆ ಸಮೆಯದಲಿ ದೇವತೆಗ .... ಪುಷ್ಪಮಳೆಯಂ ಕರದು ಸ್ತ್ರೋತ್ರವಂ ಮ್ಮಾಡಿದರೂ ; ಯಿಾ ಪ್ರಕಾರದಲ್ಲಿ ತಂನ್ನ ಪುತ್ರನಾದವನು ।

ವಿಷಯ: ಪದ್ಮ ಪುರಾಣದ ಕಥೆ.

ವಿಶೇಷ : ಅಸಮಗ್ರಪ್ರತಿ. ಸ್ಫುಟಾಕ್ಷರ. ೩೦, ೧೬೫ ನೇ ಪತ್ರಗಳ ಒಂದೊಂದು ತುಂಡು ಮಾತ್ರ ಇದೆ. ೧೨೧, ೧೬೬, ೨೦೫ನೇ ಕ್ರಮಾಂಕದ ಪತ್ರಗಳಿಲ್ಲ. ಕೆಲವು ಪತ್ರಗಳ ಅಂಚು ಮುರಿದಿದೆ.

835

ಕೆ. ೩೬೧/೧	**ಪದ್ಮರಾಜಪುರಾಣ**	ವಾರ್ಧಕಷಟ್ಪದಿ
೧೩.೮″ × ೧.೮″	ಪದ್ಮಣಾಂಕ	ಸು. ೧೩೯೫
೧_೮೬ ಪತ್ರ	೧೨ ಪಂಕ್ತಿ	೬೫ ಅಕ್ಷರ

ಆದಿ : .... ೬–ರಾಣಂ ರಾಗ ಮಲಹರಿ ॥ ತಾಳ ಝಂಪೆ ॥
ಪಲ್ಲವ ॥ ಶ್ರೀಮದಾಚಾರ್ಯ ಕುಲಚಕ್ರವರ್ತಿಯ ಮುಕ್ತಿ
ಕಾಮಿನೀಪ್ರಿಯ ಭುಜಂಗನಾಕೆಱಾಯ ಪದ್ಮರಸ
ರೀ ಮಹಾಚರಿತ್ರದೊಳ್ಪೀಠಿಕೆಯನೊರೆವೆನಾಕರ್ಣಿಪುದು ಭಕ್ತನಿಕರಂ ॥
ಪದ ॥ ಶ್ರೀ ವಿಗ್ರಹಸ್ಥ ಹಸ್ತ್ಯಜಿನಂ ಘನಂ ಶ್ರುತಿಪು
ಟಾವ ಬದ್ಧಹೀಂದ್ರ ಗೀತಘೋಷಂ ಘನಾ
ರಾವಂ ಕರಾಸಿರುಚಿ ಚಪಲಂ ಸುರಸ್ತ್ರೀಚಲಿತ ಚಾಮರೋತ್ಪಾಡಿತಾ

ಪಾವನ ಜಟಾಗ್ರ ಗಂಗಾಜಲೊತ್ಥಿತ ಶೀಕ
ರಾವಲಿಗಳೇ ವೃಷ್ಟಿಯಾಗೆ ಮಳೆಗಾಲದಂ
ತಾವಗಮೆಸೆವ ವಿಶ್ವಪತಿ ಶರಣಸಸ್ಯಮಂ ಸಲಹುಗೆ ಜಗದ್ಧಿತಾರ್ಥ್ಥಂ ॥ ೧ ॥

ಅಂತ್ಯ : ಮದಕುಧರ ವಿದಳನಭಿದುರ ಪರಮಶಿವಭಕ್ತ
ಪದ ಶತದಳಾದಭ್ರ ಮಕರಂದ ಲೀಲಾಪ್ರ
ಮದ ಪರವಶೀಭೂತ ಮಧುಕರೋಪಮ ಪದ್ಮಣಾಂಕ ಪ್ರಣೀತಮಾಗಿ
ಸದಮಲಾಖಿಲ ಶಾಸ್ತ್ರಸಾರವೆಂದೆನಿಸುವ
ಭ್ಯುದಯಕರ ಪದ್ಮರಾಜ ಪುರಾಣ ಕಥೆಯೊಳಿಂ
ತಿದು ಗುರುವಿನೈಕ್ಯಮಂ ಪೇಳ್ದ ಪದಿಮೂಱನೆಯ ಸಂಧಿಶಮಸ್ತು
ಸತತಂ ॥ ೬೯ ॥

ಯೀಶ ಪರಾತಾರನ ವಿಬುಧನುತನಭವಪಾಶ
ನಾಶಕ ಕೆಱೆಯಪದ್ಮಣಾರ್ಯನಂ ಸ
ಚ್ಛ್ರೀ ಶಿವಾದ್ವೈತ ಸಾಕಾರ ಶಿದ್ಧಾಂತ ಪ್ರತಿಷ್ಠಾಪನಾಚಾರ್ಯನಾ
ಯೀ ಶುದ್ಧ ಚರಿತಮಂ ತಿಳಿಪಿದಗೋ್ರದಿದ
ಗಾರ್ಶೆಯಿಂ ಕೇಳ್ದರ್ಗ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುಮಂ ಕೊಟ್ಟು ಗುರುರೂಪ ವಿಶ್ವನಾಥಂ
ರಕ್ಷಿಪಂ ॥ ೭೦ ॥

ಅಂತು ಸಂಧಿ ೧೩ ಕ್ಕೆ ಪದಂ ಸೇರಿದ ಪದಂಗಳು ೧೨೬೬ ಕ್ಕಂ ಮಂಗಳ ಮಹಾ ಶ್ರೀ ॥

ವಿರೋದಿ ವಿಕ್ರುತು ಸಂವತ್ಸರದ ಮಾಘಶು ೫ ಲು ಸೋಮವಾರದಲ್ಲು ॥ ಸುತ್ತುರ ಸಿಂಹ್ವಸನದ ಜಗ್ಗಿನ ನಂಜೆಯ ದೇವರ ಶಿಷ್ಯರು ಚೆಂನಜೆಯ ದೇವರು ಕಳಲೆಯ ಮಲ್ಲರಾಜೊಡೆಯರಿಗೆ ಬರದ ಪದ್ಮಪುರಾಣ ಮಂಗಳಂ ಮಹಾ ಚಂದ್ರಾರ್ಕ್ಕರುಳ್ಳನ್ನಬರ ಮಂಗಳ ಮಹಾ ಶ್ರೀ ॥

ವಿಷಯ : ಶಿವಾಧಿಕ್ಯ ಸ್ಥಾಪನೆ.

ವಿಶೇಷ : ಸಮಗ್ರ. ಶಕಟರೇಫವಿದೆ. ೧೪ ನೇ ಕ್ರಮಸಂಖ್ಯೆಯ ಪತ್ರಗಳು ಎರಡಿವೆ. ೩೮–೩೯ ಮತ್ತು ೫೫–೫೬ ಈ ಪತ್ರಗಳ ಮಧ್ಯೆ ಒಂದೊಂದು ಸಂಖ್ಯಾರಹಿತ ಪತ್ರಗಳಿರುತ್ತವೆ. ೨೩ ನೆಯ ಪತ್ರ ಮಾತ್ರ ಲುಪ್ತ. ಇದೇ ಕಟ್ಟಿನಲ್ಲಿ ಸಾನಂದ ಚಾರಿತ್ರವೆಂಬ ಕೃತಿಯೂ ಇದೆ.

836

ಕೆ. ೧೯	**ಪದ್ಮಾವತೀ ಚರಿತ್ರೆ**	ಸಾಂಗತ್ಯ
೮.೯"×೧.೯"	ಪದ್ಮನಾಭ	ಸು. ೧೬೮೦
೧–೯೦ ಪತ್ರ	೧೦ ಪಂಕ್ತಿ	೪೦ ಅಕ್ಷರ

ಆದಿ: ..ಂಮನ....ರ ಚರಿತೆ ಶ್ರೀ x x
ಪೇಳುವೆ ಧರಣೇಂದ್ರನಸಿಯ ಕಾವ್ಯವ
ಕೇಳಿರೊ ಸಕಲ ಕೋವಿದರು ‖ ಪಲ್ಲ ‖
ಶ್ರೀ ಸುರ ನರ ನಾಗ ವಂದಿತ ಚರಣಾಬ್ಜ
ಬಾಸುರವಿಕೋಟ್ಟಿತೇಜಾ
ಸಾಸಿರನಾಮದೊಡೆಯಗೆ ವಂದನೆ ಮಾಡಿ
ಲೇಸಾಗಿ ನಾನೆರಗುವೆನೂ ‖ ೧ ‖

x x x x

ನೆರೆ ನಂಬಿ ಭಜಿಸುವ ಭವ್ಯರುಗಳ್ಗೆ
ಕರುಣಾಂಬ್ರುತವನು ಕರೆವಾ
....ವೆ ಪದ್ಮಾವತಿದೇವಿ ನೀ ಯಂನನು
ಸರಸ ಸನ್ಮ್ರತಿಯಿತ್ತು ಸಲಹೂ ‖ ೧೩ ‖

ಅಂತ್ಯ: ಅಂಗಜ ವಿಜಯ ಪಾರಿಶ್ವನಾಥನ ಭಕ್ತೆ
ಹಿಂಗದಿರು ಯೀ ಮಹಾಯಕ್ಷೆ
ಹೆಂಗಳ ರಂನೆ ಪದ್ಮಾವತಿ ಚರಿ....ಗೆ
ಮಂಗಳ ಮಹಾ ಜಯತೂ ‖

ಅತ್ತು ಸಂಧಿ ೧೨ಕ್ಕೆ ಪದನು ೧೫೫ಕ್ಕಂ ಮಂಗಳ ಮಹಾ ಶ್ರೀ
ದುರ್ಮ್ರತಿ ನಾಮ ಸಂವತ್ಸರದ ಜೇಷ್ಠ ಸುದ್ದ ೨ ರವಿವಾರ ಸೂರ್ಯೋದಯ
ವಾದ ಜಾವ ೧ ದರಲ್ಲಿ ಶ್ರೀಪದ್ಮಾವತಿ ಅಂಮನವರ ಚರಿತ್ರೆ x x
ಶುಭಮಸ್ತು.

ವಿಷಯ: ಪದ್ಮಾವತಮ್ಮನವರ ಚರಿತ್ರೆ.

ವಿಶೇಷ: ೪ ಮತ್ತು ೧೧ ನೆಯ ಪತ್ರಗಳಿಲ್ಲ, ಸ್ವಲ್ಪ ಶಿಥಿಲ.

837

ಕೆ. ೩೬೮ ಪದ್ಮಾವತೀ ಚರಿತ್ರೆ ಸಾಂಗತ್ಯ

೧೦.೪″ × ೧.೫″ ಪದ್ಮನಾಭ ಸು ೧೬೮೦

೨–೧೫೫ ಪತ್ರ ೭ ಪಂಕ್ತಿ ೪೫ ಅಕ್ಷರ

ಆದಿ : ಯೊಳಕೆಲಸಿದ ಶ್ರೀ ಜಿನರಾಜರಾಲಯ x x x ಸುಮುದದಿಂದಾ ॥ ೧೧ ॥

ಸಾರದೆ ಸಕಲಜೀವಗಳ ರಕ್ಷಿಪಳೆಂದು
ಸೇರಿದೆ ನಾ ಬಂದು ನಿಂಮಾ
ಸಾರಮತಿಯನಿತ್ತು ಸಲಹು ಯನ್ನನು ಸ್ಪ್ರತ
ವಾರುದಿ ಸರಸ್ವತಿ ತಾಯೆ ॥ ೧೨ ॥
ಬಲ್ಲರ ಬಲ್ಲಹವಿರವೆಂತರ ಪಾಲ
ಬಲ್ಲಿದನ್ಯೆ ಬ್ರಂಹ್ಮದೇವಾ
ನಿಲ್ಲದೆ ವರವಿತ್ತು ರಕ್ಷಿಸೆಂನನು ನೀನು
ಯಲ್ಲ ವಿಗ್ನಗಳಿಲ್ಲದಂತೆಯಿ ॥ ೧೩ ॥
ನೆರೆ ನಂಬಿ ಬಜಿಸುವ ಭವ್ಯಜನರಿಗೆ
ಕರುಣಾಮೃತವನು ಕರೆವಾ
ಗರುವೆ ಪದ್ಮಾವತಿದೇವಿ ನೀ ನಂನನೂ
ಸರಸ ಸಂನ್ಮತಿ....ತ್ತು ಸಲಹೂ ॥ ೧೪ ॥

ಅಂತ್ಯ : ಅಂಗಜಾ ವಿಜಯಾನಾ ಪಾರಿಸ್ವನಾತ್ತನಾ ಭಕ್ತಿ
ಹಿಂಗದಿರುವಾ ಮ....ಯಕ್ಷಿ
ಹೆಂಗಳಾ ರಂನೆ ಪದ್ಮಾವತ್ತಿ ಚರಿತ್ತೆಗೆ
ಮಂಗಲಾ ಸುಭ ಜಯಾ ಜಯ........॥
ಶ್ರೀ ಸುರ ನರ ನಾಗರಾಜಪೂಜಿತ ಪಾದಾ
ಭಾಸುರ ಜ್ಞಾನಪ್ರತಾನಾ
ಸಾಸಿರನಾಮುದೊಡೆ ....
.......ಸ್ಪೇಸಾ ನೀ ಲೇಸಾನಿತ್ಯೆಂಮ ರಕ್ಷಿಪುದೂ ॥ ೭೨ ॥

ಪದ್ಮಾವತಿಯುಂಮನವರಾ ಚರಿತೆ ಸಂಧಿ ಹಂನ್ನೆರಡಕ್ಕಂ ಬರದ ಪದಾ ಸಾವಿರದ ಆರುನೂರಕ್ಕಂ ಮಂಗಳಮಹಾಶ್ರೀ ॥ ಕೀಲಕ ಸಂವತ್ಸರದ ಜೇಷ್ಟ ಸುದ ದಲ್ಲಿ ಹೊಂಬುಚದ ಅಮ್ಮನವರ ಮೂಲಾಪ್ರತಿ ಗ್ರಂಥವ ನೋಡಿ ಕೊಂಡೆ ಅಂತ್ತಂಣರಾ ಬರೆದ ಗ್ರಂತ್ತವ ತಪ್ಪುಳ್ಳೊಡೆ ತ್ತಿದಿಕೊಂಬುದು ಶುಭಮಸ್ತು ॥ ಸಂಮ್ಯ ಸವಚರದ ಫಾಲ್ಗುಣಸದ ೫ ಯೆಲು ಪದ್ಮವತಿ

ಅಂಮನವರ ಚರಿತೆಯನು ಅಂತಂಣನ ಕೈಯದಂಡತಿ ಕಾಳಪನ ಮಗ ಬೊಂಮಂಣನು ಬರಸಿದು ಶ್ರೀ||

ವಿಷಯ : ಪದ್ಮಾವತಮ್ಮನವರ ಚರಿತ್ರೆ.

ವಿಶೇಷ : ಮೋಡಿ ಅಕ್ಷರ, ಕೆಲವು ಪತ್ರಗಳು ಮುರಿದಿವೆ.

೪೩೮

ಕೆ. ೫೭೭	**ಪದ್ಮಾವತೀ ಚರಿತ್ರೆ**	ಸಾಂಗತ್ಯ
೮.೩"×೧.೭"	ಪದ್ಮನಾಭ	ಸು. ೧೬೮೦
೧–೧೪೯ ಪತ್ರ	೭ ಪಂಕ್ತಿ	೪೦ ಅಕ್ಷರ

ಆದಿ : ಶ್ರೀಮತ್ಪಂಚಕಲ್ಯಾಣ ವೈಭವಯುತ
ರಾಮಕೇಶವನಾಥ ಚರಣಾ
ಸೋಮಾರ್ಕ್ಕ ಕೋಟಿಕಿರಣ ನೇಮಿನಾಥನು
ದ್ದಾಮ ಸುಖವನೀವುದೆಮಗೆ||

X X X X ಶ್ರೀ ಪದ್ಮಾವತಿಯಂಮನವರ ಚರಿತೆ ಬರೆವುದಕ್ಕೆ ಶುಭಮಸ್ತು||

ಪೇಳುವೆ ಧರಣೇಂದ್ರನರಸಿಯ ಕಾವ್ಯವ
ಕೇಳಿರೈ ಸಕಲ ಕೋವಿದರೂ || ಪದ||
ಶ್ರೀಸುರ ನರ ನಾಗರಾಜ ಪೂಜಿತಪಾದ
ಭಾಸುರ ಜ್ಞಾನಪ್ರಕಾಶ
ಸಾಸಿರ ನಾಮದೊಡೆಯ ಪಾರಿಶ್ವೇಶ
ಲೇಸಾನಿತ್ತೆಂಮ ರಕ್ಷಿಪುದು || ೧ ||

ಅಂತ್ಯ : ಅಂಗಜವಿಜೆಯ ಪಾರಿಶ್ವಜಿನರ ಭಕ್ತೆ
ಹಿಂಗದಿರುವ ಮಹಾಯಕ್ಷಿ
ಹಂಗಳರನ್ನೆ ಪದ್ಮಾವತಿ ಚರಿತೆಗೆ
ಮಂಗಲ ಶುಭ ಜಯ ಜಯತೂ || ೭೧ ||

ಅಂತು ಸಂಧಿ ೧೨ ಕ್ಕಂ ಪದನು ೧೦೦೬೦೦ ಕ್ಕಂ ಮಂಗಲ ಮಹಾಶ್ರೀ ರೂಧಿರೋದ್ಗಾರಿ ಸಂವತ್ಸರದ ಶ್ರಾವಣಶುದ್ಧ ೫ಲ್ಲು ಹಾಸನದ ಹೊನ್ನಪ್ಪಶೆಟ್ಟರ

ಪೊವುತ್ರ ಪಾಯಪ್ಪ ಶೆಟ್ಟರ ಪವುತ್ರ ಪಾಯಪ್ಪನು ತನ್ನ ಮನೋಪ್ರೀತಿ
ಯಿಂದಂ ಶ್ರೀ ಪದ್ಮಾವತಿ ಚರಿತೆ ಬರೆದುದು
ಸಂಪೂರ್ಣ ಮಂಗಳಮಹಾಶ್ರೀ.

ವಿಷಯ : ಪದ್ಮಾವತಮ್ಮನವರ ಚರಿತ್ರೆ.

ವಿಶೇಷ : ೧೨, ೧೩ನೇ ಗರಿಗಳಲ್ಲಿ ಒಂದೇ ಕಡೆ ಬರವಣಿಗೆಯಿದೆ.

839

ಕೆ. ೫೭೮	**ಪದ್ಮಾವತೀ ಚರಿತ್ರೆ**	ಯಕ್ಷಗಾನ
೧೦"X೧.೯"	ಶಂಕರ	?
೧-೫೬ ಪತ್ರ	೧೦ ಪಂಕ್ತಿ	೪೨ ಅಕ್ಷರ

ಆದಿ : ....ಂಮನವರ ಯಕ್ಷಗಾನ ಬರೆಯುವದಕ್ಕೆ ಶುಭಮಸ್ತು X X
ಜಿನಪತಿ ನಿಂಮಯ ಪದಮಂ
ಮನದೊಳು ಭಜಿಸುತ್ತಾ ಬೇಡುವೆ ನೀನತಿದಯದಿಂದಂ
ದಿನಕರ ಶತಶಂಕಾಶಂ
ಯನಗೀಉದು ಮತಿಯಾ ನೀ ಕ್ರುತಿಗತಿ ಮುದದಿಂ ||

X X X X (೨ನೆಯ ಪತ್ರ)
ದ್ವಿಪದೆ|| ಧರೆಯೊಳಗೆ ಮೂಲಿಕೆಯ ಪುರವರವನಾಳ್ವ
ದೊರೆತನ ದಿಶಾವಂತ ಭೂಪನತಿಚಲ್ವ ||೧||
ವಂದುದಿನ ಭೂವರನು ಪರಮಭಕ್ತಿಯಲಿ
ಯಿಂದುಮುಖಿ ಪದ್ಮಾಂಬೆ ಚರಿತೆಯನು ಮುದದಿ ||೨||
ಕೇಳಬೇಕೆಂದೆನಲು ರಾಮಾಖ್ಯನಂದೂ
ಪೇಳಿದನು ದೇವಿ ಚಾರಿತ್ರಗಳಂನಂದೂ ||೩||
ಚರಿತೆ ಭಾವಗಳಿಂದಲೊರದಿರ್ಪ್ಪ ಕತೆಯಾ
ವಿರಚಿಸುವೆ ಯಕ್ಷಗಾನದಲಿ ಯಿಾಕ್ರುತಿಯಾ ||೪||

ಅಂತ್ಯ: ದರೆಯೊಳುತ್ತಮವೆನಿಪ ಹೊಂಬುಚ
ಪುರದ ಜೋತಿಶನಾದ ಶಂಕರ
ವರದನೀ ಪದ್ಮಾಂಬೆಚರಿತೆಯಾ ಹರುಶದಿಂದಾ ||೨||

ಹೇಳಿ ಕೇಳಿದ ಜನಕೆ ಸೌಖ್ಯವು
ಲೋಲಲೋಚನೆ ಭಕ್ತಜನಪರಿ
ಪಾಲೆ ಪದ್ಮಾವತಿಯು ಸಂತತ ಪಾಲಿಸುವಳೂ ||
ಶ್ರೀ ಮಂಗಲಂ ಜಯ ಮಂಗಲಂ ||

x x x x

ತುಂಬುಜವ್ವನೆ ಮರಿದುಂಬಿಗುರುಳ ಚಲ್ವ
ಹೊಂಬುಚನುಶದ ಪದ್ಮಾವತಿಗೆ ಮಂಗಲಂ ಜಯಮಂಗಲಂ ಶ್ರೀ ||

ವಿಷಯ : ಪದ್ಮಾವತಮ್ಮನವರ ಚರಿತ್ರೆ.

ವಿಶೇಷ : ೩೨, ೩೪ ನೆಯ ಕ್ರಮಾಂಕದ ಪತ್ರಗಳು ಸ್ವಲ್ಪ ಶಿಥಿಲವಾಗಿವೆ. ೧೫ ನೆಯ ಕ್ರಮಾಂಕದ ಎರಡು ಪತ್ರಗಳಿವೆ. ೫೫ ನೆಯ ಪತ್ರಲುಪ್ತ.

840

ಕೆ.ಬಿ. ೩೬೮	**ಪದ್ಮಾವತಿ ಪರಿಣಯ**	ನಾಟಕ
೮.೨"×೫.೬"	ಬಾಳಾಚಾರ್ಯ	೧೯ನೆಯ ಶತಕ
೧–೧೦೬ ಪುಟ	೨೨ ಪಂಕ್ತಿ	೨೦ ಅಕ್ಷರ

ಆದಿ: ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತಂ ಶ್ರೀ ಭೂ ಸಮೇತ ಶ್ರೀ ಪದ್ಮಾವತೀ ಪ್ರಾಣಕಾಂತ ಶ್ರೀನಿವಾಸೋ ವಿಜಯತೇತರಾಂ ಓಂ
ಸೂತ್ರಧಾರ–ನಾಂದೀ || ಮತ್ತೇಭವಿಕ್ರೀಡಿತ ವೃತ್ತಂ ||
ಕಮಲಾವತ್ಯಮಲಾನನೋಪ್ಸರಸಪಾದಂತಾಕ್ಷಿ ಮಂದಸ್ಮಿತಾ
ಸಮಗಾನಾಲಪನಾಗಮಾಪಗಮ ಸತ್ಸೃಂಗಾರ ಭಾವಂಗಳಿಂ
ಸಮರಾಜೀವನದೊಳ್ ಸ್ಮರಾಸ್ಪರಣೀ ವ್ಯಾಳಂಗಳಿಂದೊಲ್ ರಮಾ
ರಮಣಂ ಮೋಹಿತನಂತೆ ತೋರ್ಪ ಪೊರೆಗೆ ಶ್ರೀ ಶ್ರೀನಿವಾಸಂ ಸದಾ ||೨||

ರಾಗ–ನಾಟ–ಪೊರೆ ಕಮಲಾಕಾಂತನೆ ||

ಪೊರೆ ಶ್ರೀನಿವಾಸನೆ–ಸುರವರಕರ ನತ ||ಪ||
ಚರಣಕಮಲ ಭಜಕರ ಮನದಿಷ್ಟವ
ಸುರಮರದೊಲ್ ಕೊಡುತಿರುವ ಕರುಣಿಯೆ ||೧||

x x x x

ಆದುದರಿಂದ ಕಣಿಬಲೀ ಬಾಳಾಚಾರ್ಯರೆಂಬುವರಿಂ ಕನ್ನಡ ಭಾಷೆಯೊಳು ರಚಿಸಲ್ಪಟ್ಟ ಪದ್ಮಾವತೀ ಪರಿಣಯವೆಂಬಭಿನವ ನವರಸಭರಿತ ನಾಟಕವನ್ನಾಡಿ ಈ ಸಭಾಸದರಂ ಸಂತೋಷಿಸಬೇಕು.

ಅಂತ್ಯ: ಶ್ರೀನಿ–ಲಕ್ಷ್ಮೀಪದ್ಮಾವತೀ ದೇವೀ ಸಮೇತನಾಗಿ ಅಗಸ್ತ್ಯಾಶ್ರಮಕ್ಕೆ ಪ್ರಯಾಣವಂ ಮಾಡಿ ವೆಂಕಟಗಿರಿಯೊಳು ಭಾರ್ಯಾದ್ವಯದವಡನೆ ಬಕುಳಾ ದೇವಿ ಸಮೇತನಾಗಿ ಸುಖದಿಂ ವಾಸಮಾಡುವನು ಪಂಚಮಾಂಕಸ್ಸಮಾಪ್ತ : ||

ಸೂತ್ರ–ಶಾರ್ದೂಲ ವಿಕ್ರೀಡಿತಂ—

ಶ್ರೀಮಚ್ಚಾಮನೃಪಾಮೃತಾಬ್ಧಿ ಜನಿತ ಶ್ರೀಕೃಷ್ಣರಾಜಾಧಿಪ
ಶ್ರೀಮತ್ಪ್ರಾಪ್ತಕಣಿಂಬಲೀ ನಿಲಯ ಬಾಳಾಚಾರ್ಯ ವಿದ್ವರ್ಯರಿಂ
ಶ್ರೀ ಮತ್ಕೃಷ್ಣಕೃಪಾಬಲಾದ್ವಿರಚಿಸಲ್ಪದ್ಮಾವತೀ ನಾಟಕಂ
ಶ್ರೀ ಮತ್ಪದ್ಮಜನಿ ಪ್ರಿಯಾಗ್ರ್ಯ ಚರಣಾಂಭೋಜೋರ್ಪಿತಂ ಭಕ್ತಿಯೊಳ್||

ಸಮಾಪ್ತಮಿದಂ ಪದ್ಮಾವತೀಪರಿಣಯ ನಾಟಕಂ.

ವಿಷಯ : ಪದ್ಮಾವತೀ ವಿವಾಹ.

ವಿಶೇಷ: ದೇವನಾಗರಿ ಲಿಪಿ. ಮಧ್ಯೆ ಮಧ್ಯೆ ತಿದ್ದಿದೆ. ಕೆಲವು ಕಡೆಗಳಲ್ಲಿ ಚೂರು ಕಾಗದಗಳಲ್ಲಿ ಬಿಟ್ಟಿರಬಹುದಾದ ಗ್ರಂಥಭಾಗಗಳನ್ನು ಬರೆದು ಆ ಸ್ಥಳಗಳಲ್ಲಿ ಅಂಟಿಸಿದೆ. ಇದರಿಂದ ಓದಲು ಶ್ರಮವಾಗುತ್ತದೆ. ತೆಳುವು ಕಾಗದ.

841

ಕೆ. ಎ. ೧೧೫	**ಪದ್ಮಿನೀ ಪರಿಣಯ**	ಸಾಂಗತ್ಯ
೧೨.೬" × ೭.೮"	ಚೆನ್ನಯ್ಯ	ಸು. ೧೭೨೦
೧-೮೯ ಪತ್ರ	೩೦ ಪಂಕ್ತಿ	೨೪ ಅಕ್ಷರ

ಆದಿ : ವರಾಹ ಪುರಾಣದಲ್ಲಿ ಪದ್ಮಿನೀ ಪರಿಣಯ
ನಾಂದಿ–ದೇಶವರ್ಣನೆ |

ಶ್ರೀಕರ ಸದ್ಗುಣ ಕೋಶ ಸದ್ರುಚಿರದಿ | ವಾಕರ ಕೋಟಿಸಂಕಾಶ ||
ಪಾಕಶಾಸನವಂದ್ಯ ಚನ್ನಕೇಶವ ಕರು | ಣಾಕರ ಸಲುಹು
ಮೂಜಗವಾ || ೧ ||

ನಾರದನತ ಚರಣಾರವಿಂದದ್ವಯ
ನೀರದ ನೀಂ ಶರೀರಾ
ಶಾರದ ಶತ ಶಶಧರ ರುಚಿಧರಧರ
ಸೀರಧರಾನುಜ ಶರಣೂ ॥ ೨ ॥ X X

ಪದ್ಮೆ ಪದ್ಮಾಲಯೆ ಪದ್ಮಭವಾಂಬಿಕೆ
ಪದ್ಮೋದರನರ್ಧಾಂಗಿ
ಪದ್ಮಿನೀ ಪರಿಣಯ ಕಥೆ ಪೇಳ್ವೆನೆನ್ನ ಹೃ
ತ್ಪದ್ಮದೊಳಿರು ಪದ್ಮನಯನೆ ॥ ೧೩ ॥ X X

ಧಾರುಣಿಯೊಳು ಕರ್ಣಾಟದೇಶದ ಕಾ
ವೇರಿಯ ತೀರದೊಳೆಸವಾ
ಶ್ರೀರಂಗಪಟ್ಟಣದೊಳು ಸುಖದಿಂ ಮಹಿ
ಶೂರ ಕೃಷ್ಣೇಂದ್ರನಾಳ್ದಪನೂ ॥ ೧೯ ॥ X X

ಕಳಲೆಯನ್ವಯ ರಾಜ ರಾಜೀವ ರಾಜಿಗು
ಜ್ಜಳ ದಿನರಾಜನೆಂದೆನಿಸೀ
ಸಲೆ ವೀರರಾಜನೊಪ್ಪಿದನಾರ್ತಜನ ಸಂ
ಕುಲ ಕೈರವರಾಜನೆನಲೂ ॥ ೩೯ ॥

ಆ ವೀರೇಂದ್ರಾವನಿಪಾಲಕನೊಮ್ಮೆ
ಕೋವಿದರ್ಕಳ ಸಭೆಯೊಳಗೆ
ಭಾವಶುದ್ಧಿಯೊಳೆನ್ನ ಕನ್ನಡ ಕೃತಿವೇ
ಳಾವುದಾದೊಡನೊಂದನೆಂದಾ ॥ ೪೦ ॥

ಎನಲಾ ನುಡಿಯನಾಲಿಸಿ ಶ್ರೀ ವೆಂಕಟೇ
ಶನ ಮಂಗಳ ಮೂರುತಿಯಾ
ಮನದೊಳು ಭಾವಿಸಿ ಭಜಿಸಿ ಪೇಳಿದೆನಾ
ವನಜಾಕ್ಷನ ಪುಣ್ಯ ಕಥೆಯಾ ॥ ೪೧ ॥

ಸೇನಾಧೀಶ ಗೃಹಾಧ್ಯಕ್ಷನಾಗಿಯೆ
ಸೇನಾನಿತ್ಯನಾಮವನು
ತಾನೆಯ್ದೆ ಪಡೆದ ಚನ್ನಯಾಮಾತ್ಯ ಶಿವಪೂ
ಜಾ ನಿರತನು ರಾಜಿಸಿದಾ ॥ ೪೨ ॥

ಸಾಸಿರ ನೆಲನವುರ್ದುಣಿಸುಗಳಿಂಗನು
ವಾಸರ ಭೋಜನಗೈವಾ
ಹೊಯ್ಸಳಾನ್ವಯದ ಗಾರ್ಗ್ಯಸಗೋತ್ರೋದ್ಭವ
ಭಾಸುರ ಚನ್ನಯಾಹ್ವಯನಾ ॥ ೪೩ ॥

ಬೊಮ್ಮನು ಬಳಿಕಾ ನೃಪನಪ್ಪಣೆಯಿಂದ
ಬೊಮ್ಮನೈಯನ ಕರುಣದೊಳು
ಒಮ್ಮನದೊಳು ಚೆನ್ನಯಾಂಕನು ಪೇಳ್ದನು
ಸುಮ್ಮಾನದೊಳೀ ಕೃತಿಯಾ ॥ ೪೪ ॥

X X X X

ಅಂತ್ಯ : ವಾರಾಹೋಕ್ತದೊಳೊಂದಿತಿಹಾಸವ
ನಾರಾಯಣನ ಸತ್ಕಥೆಯ
ವೀರೇಂದ್ರ ನಿನಗಿದನಭಿವರ್ಣಿಸಿದೆನು
ಶಾರದಾಂಬೆಯ ಕರುಣದೊಳು॥ ೯೫ ॥

ಧೀರ ದೊಡ್ಡೇಂದ್ರ ಕುವರಾರ ಸದ್ಗುಣಮಣಿ
ಹಾರಾಹಿತಸಂಹಾರ
ಸಾರಸತ್ಕೀರ್ತಿ ವಿಸ್ತಾರಕ ಸುಜನಾ
ಧಾರಕ ನಿರ್ಮಳ ಕರಣ ॥ ೨೯೬ ॥

ಕಳಿಲೆಯ ವಂಶೋದ್ಧಾರಕ ಮಹಿಶೂ
ರಿಳೆಯಾಣ್ಮಗತಿಹಿತೆನೆನಿಸಿ
ಸಲೆ ರಾಜಿಪ ವೀರೇಂದ್ರ ಕೇಳಲು ನೀಂ
ಚೆಲುವಿತ್ತುದೀ ಕಾವ್ಯರಚನೆ ॥ ೨೯೭ ॥

X X X X

ಎಂದು ಪೇಳ್ದಾಶ್ವಾಸ ಮೂಱಕ್ಕೆ ಪದಿನೆಂಟು
ಸಂಧಿ ಪದಿನೆರಡು ಸಾವಿರದ ಮೇಲೈನೂರು
ಸಂದಿಹುದಿದಷ್ಟಾದಶ ಪುರಾಣಗಳ ಸಮನೆಂದು ಭಾವಿಪುದು ಪರಿಸೆ
ಇಂದಿರಾವರನ ಕೇಳೀಭವನವಾಗಿರ್ಪು
ದಿಂದುತಾರಾರ್ಕರುಳ್ಳನ್ನೆಗಂ ಸ್ಥಾಯಿಯಹು
ದೆಂದು ಸನ್ಮುದದಿಂದ ಚೆನ್ನಯಾಂಕನು ಪೇಳ್ದ ಪದ್ಮಿನೀಪರಿಣಯದೊಳು ॥

ವಾಸವಾರ್ಚಿತ ಚರಣ ಜಯ ಜಯತು ಭಾಗ್ಯಪುರ
ವಾಸ ಸನಕ ಸನಂದನಾದಿ ಮುನಿನುತ ಪೀತ
ವಾಸ ಸರ್ವಾಧಾರ ಭಕ್ತಹೃದಯಸರೋಜ ವಾಸರಾಧೀಶ ಜಯತು
ವಾಸುಕಿಶಯನ ವಾರಿರುಹನಯನ ಜಯತು ಕಂ
ಸಾಸುರಧ್ವಂಸ ಯದುಹಂಸ ಜಯ ಜಯತು ಕಮ
ಲಾಸನ ಜನಕ ಚೆನ್ನಕೇಶವ ಸಮಸ್ತಲೋಕಾಧೀಶ ಜಯತು ಜಯತು॥

ಶ್ರೀ ಪದ್ಮಿನೀಪರಿಣಯಂ ಸಂಪೂರ್ಣಂ–ಶ್ರೀ

ವಿಷಯ : ಪದ್ಮಿನೀಪರಿಣಯದ ಕಥೆ.

ವಿಶೇಷ : ಸುಂದರಾಕ್ಷರ. ಶಕಟರೇಫ ಮತ್ತು ಱಕಾರದ ಪ್ರಯೋಗವಿದೆ. ಪ್ರತಿಯ ಕಾಲ ಕ್ರಿ. ಶ. ೧೯೦೦. ಪದ್ಯಗಳನ್ನು ಪಾದವಿಭಾಗಮಾಡಿ ಬರೆದಿದೆ.

842

ಕೆ. ೩೬೬/೨	**ಪದ್ಯನಾನಾರ್ಥ**	ಕಂದ
೮.೭" × ೨.೩"	?	
೩–೫ ಪತ್ರ	೧೧ ಪಂಕ್ತಿ	೩೫ ಅಕ್ಷರ

ಆದಿ : ಪದ್ಯನಾನಾರ್ತ್ಥ ।
ಮಂಗಳ ಮುರಿದುದಿ ನವಿಲು ಭು
ಜಂಗಾಗ್ನಿ ಮಯೂಖ ತಾಂಮ್ರ ವಿಪ್ರ ಕಿರೀಟೋ
ತ್ತುಂಗ ಶಿರಂ ಮೂಲಿಕೆ ಭೇ
ದಂಗಳ್ಪಂನೊಂದು ಶಿಖಿ ಶಬ್ದಂಗಳ್ ॥ ೧ ॥

ಕುತ್ತ ಹುಲಿ ಕಪ್ಪೆ ಕನುಲಂ
ಸತ್ತಿಗೆ ಮುನಿ ವಿಷ್ಣು ವಿಧಿಯು ಸುರಕುಜ ಸುರಪಂ
ಉತ್ತಮಕರಿ ಧ್ವಜ ಕಬ್ಬುಂ
ಶತ್ತುರಗ ಧ್ವನಿ ಸುಪುಂಡರೀಕ ತ್ರಿ .... ಪಂಚಂ ॥ ೨ ॥

ಅಂತ್ಯ : ಘನ ಹಳಿದು ಕೈದು ದೊಡ್ಡಿತು
ತನು ನೀರ್ ಸಂಗ್ರಾಮದಷ್ಟ ಮೋಹಂ ದೋಷಂ
ಜನ ನೆರವಿ ಸಾಧ್ಯಶಕ್ತಿಗ
ಳಿನಿತುಂ ಪದಿಮೂಱು ನಾಮ ಘನ ಶಬ್ದಂಗಳ್ ॥ ೩೮ ॥

ಸಾಮಾನ್ಯಂ ಪುಣ್ಯಂ ಸೂ
ತ್ರಾಮಂ ಘನ ಬಹಳ ಸರುಸ ದಂತಿ
ಸಮೂಹಂ ....ಳೆಯೊಂಬತ್ತುಂ
ಭೂಮಿಗೆ ಪೊಸತೆನಿಸುತಿಹ ಘನಾಘನಶಬ್ದಂ ॥ ೩೯ ॥
ಪದ ನಾನಾರ್ಥ ಸಮಾಪ್ತ ಮಂಗಳ ಮಹಾ ಶ್ರೀ ॥

ವಿಷಯ : ಹಳಗನ್ನಡಪದಗಳ ಅರ್ಥ.

ವಿಶೇಷ: ೫ನೇ ಓಲೆಯ ಮೂಲೆ ಮುರಿದಿದೆ. ಈ ಕೃತಿಯಲ್ಲಿ ಒಟ್ಟು ೩೯ ಪದ್ಯಗಳಿವೆ. ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ಶಬ್ದರತ್ನಾಕರ, ಏಕಾಕ್ಷರ ನಿಘಂಟು, ನಾನಾರ್ಥರತ್ನಾಕರ, ಧನಂಜಯ ನಿಘಂಟು (ಸಟೀಕು), ಭಾರತ ನಿಘಂಟು, ಕರ್ಣಾಟಕ ಶಬ್ದಮಂಜರಿ ಎಂಬ ಕೃತಿಗಳಿವೆ. ಕೊನೆಯಲ್ಲಿ ಈ ಕಟ್ಟಿಗೆ ಸಂಬಂಧಪಡದ ೧೦೪ ರಿಂದ ೧೦೯ ವರೆಗಿನ ಕ್ರಮಾಂಕವುಳ್ಳ ಆರು ಓಲೆಗಳಲ್ಲಿ ಕೆಲವು ಪದಗಳಿಗೆ ಅರ್ಥವಿದೆ. ಇದೂ ಅಪೂರ್ಣ.

843

ಕೆ. ೩೭೦/೩	**ಪದ್ಯನಾನಾರ್ಥ**	ಕಂದ
೭.೪″×೨″	?	?
೧೧–೧೫ ಪತ್ರ	೮ ಪಂಕ್ತಿ	೩೦ ಅಕ್ಷರ

ಆದಿ : ಪದ್ಯನಾನಾರ್ಥಂ ।
ಮಂಗಳ ಮರದುದಿ ನವಿಲ ಭು
ಜಂಗಾಗ್ನಿ ಮಯೂಖ ತಾಂಮ್ರ ವಿಪ್ರ ಕಿರೀಟೋ
ತ್ತುಂಗ ಶಿರಂ ಮೂಲಿ ಭೇ
ದಂಗಳ್ಪಂನೊಂದು ಶಿಖಿಶಬ್ದಂಗಳ್ ॥ ೧ ॥

ಹುತ್ತ ಹುಲಿ ಕಪ್ಪೆ ಕಮಲಂ
ಸತ್ತಿಗೆ ಮುನಿ ವಿಷ್ಣು ವಿದಿಯೂಸುರಕುಜ ಸುರಪಂ
ಉತ್ತಮಃ ಕರಿಧ್ವಕಬ್ಬುಂ
ತತ್ತುರಗ ಧ್ವಜ ಪುಂಡರೀಕ ತ್ರಿ ಪಂಚಂ ॥ ೨ ॥

ಅಂತ್ಯ : ಸಾಮಾನ್ಯಂ ಪುಣ್ಯಂ ಸು
ತ್ರಾಮಂ ಘನ ಬಹಳದಶರುಸಾದಂತಿ ಸಮೂಹಂ

ಸಾಮಜ ಮಳೆಯೊಂಭತ್ತುಂ
ಭೂಮಿಗೆ ಪೊಸರೆನಿಸುತಿಹ ಘನಾಘನ ಶಬ್ದಂ ॥ ೩೯ ॥
ಪದ್ಯನಾನಾರ್ಥಂ ಪರಿಸಮಾಪ್ತಂ ॥ ಮಂಗಳ ಮಹಾ ಶ್ರೀ ॥

ವಿಷಯ : ಕನ್ನಡ ಪದಗಳ ನಾನಾರ್ಥ.

ವಿಶೇಷ : ಇದರೊಂದಿಗೆ ಶಬ್ದರತ್ನಾಕರ, ಅಮರಸಿಂಹ (ಸಂ-ಜೈ), ಕರ್ನಾಟಕ ಶಬ್ದ ಮಂಜರೀ ಎಂಬ ಗ್ರಂಥಗಳೂ ಇವೆ.

844

ಕೆ. ಬಿ. ೨೯೦/೨	**ಪದ್ಯನಾನಾರ್ಥ**	**ಕಂದ**
೭.೬″ × ೬.೩″	?	?
೪–೭ ಪತ್ರ	೧೭ ಪಂಕ್ತಿ	೧೭ ಅಕ್ಷರ

ಆದಿ : ಪದ್ಯನಾನಾರ್ಥಂ ॥ ಬರೆಯುವದಕ್ಕೆ ನಿರ್ವಿಘ್ನಮಸ್ತು ॥
ಮಂಗಳ ಮರದುದಿ ನವಿಲು ಭು
ಜಂಗಾಗ್ನಿ ಮಯೂಖ ತಾಮ್ರ ವಿಪ್ರ ಕಿರಿಟೋ
ತ್ತುಂಗ ಶಿರಂ ಮೂಲಿಕೆ ಭೇ
ದಂಗಳ್ಪಂನೊಂದು ನಾಮ ಶಿಖಿಶಬ್ದಂಗಳ್ ॥ ೧ ॥
ಹುತ್ತ ಹುಲಿ ಕಪ್ಪೆ ಕಮಲಂ
ಸತ್ತಿಗೆ ಮುನಿ ವಿಷ್ಣು ದಿವಿಯು ಸುರಕುಜ ಸುರಪಂ
ವುತ್ತಮ ಕರಿಧ್ವಜ ಕಬ್ಬುಂ
ತತ್ತುರುಗಧ್ವಜ ಗಜ ಪುಂಡರೀಕ ತ್ರಿ ಪಂಚಂ ॥ ೨ ॥

ಅಂತ್ಯ : ಸಾಮಾನ್ಯಂ ಪುಣ್ಯಂ ಸುಸಿ
ತ್ರಾಮಂ ಘನ ಬಹುಳ ಶರುಸಾ ದಂತಿಸಮೂಹಂ
ಸಾಮಜ ಮಳೆಯೊಂಬತ್ತುಂ
ಭೂಮಿಗೆ ಪೂಸತೆನುತಿಹೆ ಘನಾಘನಶಬ್ದಂ ॥ ೩೯ ॥
ಪದ್ಯನಾನಾರ್ಥಂ ಪರಿಸಮಾಪ್ತ ಮಂಗಳಮಹಾಶ್ರೀ ॥

ವಿಷಯ : ಕನ್ನಡ ಪದಗಳ ನಾನಾರ್ಥ.

ವಿಶೇಷ : ಇದರೊಂದಿಗೆ ಶಬ್ದರತ್ನಾಕರ, ಏಕಕ್ಷರ ನಿಘಂಟು, ಕರ್ಣಾಟ ಧಾತುಗಳು, ಭಾರತ ನಿಘಂಟು, ಧನಂಜಯ ನಿಘಂಟು, ಕನ್ನಡ ಶಬ್ದಮಂಜರೀ ಟೀಕಾ ಸುಧಾ, ಶಬ್ದಮಂಜರೀ, ವಿಶೇಷ ವಿಷಯಗಳು ಎಂಬ ಗ್ರಂಥಗಳೂ ಇವೆ. ತೆಳುವುಕಾಗದ.

845

ಕೆ. ಎ. ೨೩೪/೨ ಪಂಪಕಂತಿಯರ ಸಮಸ್ಯೆಗಳು ಕಂಡ

೧೩"×೭.೮" ? ?

೧೬ ಪತ್ರ ೧೭ ಪಂಕ್ತಿ ೧೬ ಅಕ್ಷರ

ಆದಿ : ಹಂಪನ ಸಮಸ್ಯೆಗಳು

ಸಮಸ್ಯೆ–ನಾಯಂ ಕೊಳಲೇಳುದಿನಕೆ ಮತಿ ಸಮನಿಸಿತು

ಪದ್ಯ|| ಆಯತದಿಂ ಕಂಗುಂಗೇ

ಕಾಯಂ ತಾ ತಂದು ಸೂರ್ಯಪುಟದೊಳ್ ಸಪ್ತೋ

ಪಾಯದಿ ತೆಗದೆಣ್ಣೆಯನುದಿ

ನಾಯಂ ಕೊಳಲೇಳುದಿನಕೆ ಮತಿ ಸಮನಿಸಿತು || ೧ ||

ಏರಿಗೆ ಹರಿಗೋಲ ಹಾಕಿ ದಾಟುತಲಿರ್ಪರ್

ಧರಣಿಯೊಳು ಚೋಳರಾಯನು

ಕರುಣದಿ ತಾ ದೇಶವನ್ನು ಪಾಲಿಸುತಲಿರಲ್

ದಾರಿದ್ರವ ಕೆಡಿಸುತ ಕಾ

ವೇರಿಗೆ ಹರಿಗೋಲ ಹಾಕಿ ದಾಟುತಲಿರ್ಪರ್ || ೨ ||

ಅಂತ್ಯ : ಕಡೆದೊಡೆಯಲು ಹರನ ನಾಮಂ

ನಡುದೊಡೆಯಲು ವಿಷ್ಣುವೆಂಬ ದೇವರನಾಮಂ

ಆಧ್ಯಕ್ಷರದಿಂದೋದಲ್ಕೆ

ವಿರಹದ ನಾಮು ಕಾಣೆಲೊ ಹಂಪ || ೨೩ ||

ವಿಷಯ : ಪಂಪನ ಸಮಸ್ಯೆ, ಕಂತಿಯ ಸಮಸ್ಯಾಪೂರಣ.

ವಿಶೇಷ : ಅಸಮಗ್ರ ಪ್ರತಿ. ಇದೇ ಪುಸ್ತಕದಲ್ಲಿ ಕಬ್ಬಿಗರ ಕಾವ, ಮಿತ್ರವಿಂದಾ ಗೋವಿಂದ ಎಂಬ ಇತರ ಕೃತಿಗಳಿವೆ. ಪ್ರತಿಯ ಕಾಲ ಕ್ರಿ. ಶ. ೧೯೦೮ ಪ್ಲವಂಗ ಸಂವತ್ಸರ. ಪ್ರತಿಕಾರರು ಆ|| ಆನಂದಾಳ್ವಾರ್‌ರವರು. ಗ್ರಂಥಾ

ರಂಭಕ್ಕೆ ಮೊದಲು ಎರಡು ಪತ್ರಗಳಲ್ಲಿ ಪ್ರತಿಕಾರರು ಪ್ರತಿ ಮತ್ತು ಕೃತಿಯ ವಿಚಾರವನ್ನು ಬರೆದಿರುತ್ತಾರೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

846

ಕೆ. ೧೪೪	ಪಂಪರಾಮಾಯಣ	ಚಂಪು
೨೦.೧"×೨.೨"	ನಾಗಚಂದ್ರ	ಸು. ೧೧೧೦
೧-೯೫ ಪತ್ರ	೧೦ ಪಂಕ್ತಿ	೧೦೦ ಅಕ್ಷರ

ಆದಿ : ರಘುವಂಶ ವರ್ನ್ಣನಂ ಪೀಠಿಕಾ ಸಂಧಿ ರಾಮಕಥಾವತಾರಂ ||

ವೃ || ಶ್ರೀಪಾದೋಜ್ವಲಮುಂಬರಸ್ಥಮುಖಿಲಾನಂದಾಕಾರಂ ಸಾರಭೃ
ದ್ಭೋೀಪಾಲಸ್ತುತ ಸುಂದರಂ ಹರಿಮಯೂರಾನಂದ ನಾಟ್ಯಂ ಸದಾ
ಲೋಪಧ್ವಾಂತ ಸುಧಾ ವಿನಿರ್ಗತ ಗಭೀರೋದ್ಗರ್ಜ್ಜನಂ ಭವ್ಯಸ
ಸ್ಯಾಪನ್ನಾಶಕರಂ ಸುಮೇರುಜಲದಂ ಶ್ರೀ ಸುವ್ರತೇಂ ದುರ್ಜ್ಜನಂ ||
ಕಂ || ಯಮುಗೀಗೆ ಮುಕ್ತಿಸುಖಮಂ
ಕ್ರಮದಿಂ ಜಿನಸಿದ್ಧಸೂರಿ ಪಾಠಕ ಸಾಧುಗ
ಳಮಲಪದಕೆರಗಿ ಪೇಳುವೆ
ಸುಮನದಿ ರಘುರಾಮ ಚರಿತಮಂ ಕಿರಿದಿನೊಳುಂ ||

ವಚನಾ || ಯಿಂತು ಇಷ್ಟದೇವತಾ ನಮಸ್ಕಾರಮಂ ಮಾಡಿ ಶ್ರೀ ರಾಮಕಥಾ
ಸಮುಂಧಮಂ ಪೇಳ್ವ ಮೊದಲೊಳು ತ್ರಿಲೋಕಸ್ವರೂಪಮಂ ಕಾಲವಿ
ಭೇದಮುಂ ರಘುವಂಶಾವಲಿಯುಮಂ ಪೇಳ್ವಿನದೆಂತೆಂದೊಡೆ ||

ಅಂತ್ಯ : ಶ್ರೀಮತ್ಕಾಂಚನಶೈಲ ಪಾರ್ಶ್ವಜಿನಪಾದಾಂಭೋಜ ಭೃಂಗ ಬುಧಾ
........ವಂತು ರಾಮಕಥೆಯುಂ ಪೇಳ್ದಂ ಮನೋಲ್ಲಾಸದಿಂ
ಪ್ರೇಮುಂಬೆತ್ತು ಜಿನಾಗಮೋಕ್ತ ಕ್ರಮದಿಂದಂ ದೇವಚಂದ್ರ ದ್ವಿಜಂ
ಶ್ರೀಮದ್ರಾಮಕಥಾವತಾರವಜಸ್ರಂ ಭದ್ರಂ ಶುಭಂ ಮಂಗಲಂ ||

ಇದು ಪರಮಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ ಮುನೀಂದ್ರ ಚರಣನಖಕಿರಣ ಚಂದ್ರಿಕಾಚಕೋರಂ ಭಾರತೀಕರ್ಣ್ಣಪೂರ ಶ್ರೀಮದಭಿನವ ಪಂಪ ವಿರಚಿತ ರಾಮಚರಿತ್ರಮುಮಾರ್ಷಪುರಾಣ ಕಥೆಯುಂ ಸಂಬಂಧಿಸಿದ ರಾಮಕಥಾವತಾರದೊಳು ನಿರ್ವಾಣ ಕಲ್ಯಾಣವರ್ಣ್ಣನಂ ಷೋಡಶಾಶ್ವಾಸಂ || ೧೬ ||

ಶ್ರೀ ॥ ಶ್ರೀರಾಮ ಕಥಾವತಾರ ಸಮಾಪ್ತಃ ಮಂಗಳ ಮಹಾಶ್ರೀ ॥ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದಃ ೧೭೭೩ ನೇ ವಿರೋಧಿಕೃತು ನಾಮಸಂವತ್ಸರದ ಶ್ರಾವಣ ಬಹುಳ ೧೪ಚಂದ್ರವಾರ ಸೂರ್‍ಯ್ಯನು ಪೂರ್‍ವ್ವ ಪ್ರತಿಷ್ಠೆಯಾದ ಘಳಿಗೆ ೧೫ಕ್ಕೆ ಸಲುವ ತುಲಾಲಗ್ನದಲ್ಲಿ ಶಾಂತೀಶ್ವರಸ್ವಾಮಿ ಯವರ ದೇವಸ್ಥಾನದ ಮುಖಮಂಟಪದಲ್ಲಿ ತನ್ನರ್ಚಕನಾದ ನಾಗ ರಾಜೈಯನು ತನಗೆ ಬೇಕಾಗಿ ಪಾರಾಯಣ ಮಾಡ ಬಗ್ಯೆ ಶ್ರೀರಾಮ ಕಥಾವತಾರವನ್ನು ಸಂಪೂರ್‍ಣ್ಣವಾಗಿ ಪರಾಭವ ಸಂವತ್ಸರದ ಭಾದ್ರಪದ ಶ್ದು ೧ ಲಾಗಾಯಿತ್ತು ಯಿದರಿಗೆ ಸಂಪೂರ್‍ಣ್ಣವಾಗಿ ಬರದ್ದಕ್ಕೆ ॥ ಭದ್ರಂ ಶುಭಂ ಮಂಗಲಂ ಜಯ ಮಂಗಳಮಹಾಶ್ರೀ ॥

ವಿಷಯ : ಜೈನರಾಮಾಯಣದ ಕಥೆ.

ವಿಶೇಷ: ಕ್ರಮಾಂಕವಿಲ್ಲದ ಆದಿಯ ಒಂದು ಪತ್ರದಲ್ಲಿ ವಿಷಯಸೂಚಿಯಿದೆ. ಆಶ್ವಾಸ ಪ್ರಾರಂಭವಾಗುವ ಓಲೆಗಳ ಎರಡು ತುದಿಗಳಲ್ಲೂ ರೇಖಾಚಿತ್ರಗಳಿವೆ. ಕಟ್ಟಿನ ಆದ್ಯಂತಗಳಲ್ಲಿ ಕೆಲವು ಶುದ್ಧ ಪತ್ರಗಳಿವೆ.

847

ಕೆ. ೧೪೫	**ಪಂಪರಾಮಾಯಣ**	**ಚಂಪು**
೧೯.೫"×೨"	ನಾಗಚಂದ್ರ	ಸು ೧೧೧೦
೧—೧೭೦ ಪತ್ರ	೮ ಪಂಕ್ತಿ	೧೦೦ ಅಕ್ಷರ

ಆದಿ : ಶ್ರೀರಾಮ ಚರಿತ್ರೆಯ ಪೀಠಿಕೆಯ ವರ್ಣನಂ x x x

ಶ್ರೀಕೇಳೀನಿಳಯಂ ನಿಜಾಂಘ್ರಿಕಮಳಂ ವಿದ್ಯಾನಟೀ ನಾಟ್ಯವೇ
ದೀಕಲ್ಪಂ ಮುಖಚಂದ್ರಬಿಂಬಮಖಿಲೇಂದ್ರೋತ್ತಂಸ ಮಾಣಿಕ್ಯದೀ
ಪಾಕೀರ್ಣ್ಣಂ ಹರಿಪೀಠಪಾರ್ಶ್ವನೆನಿಪಂ ಪೂಜಾರ್ಹನರ್ಹಂತ್ಯ ಲ
ಕ್ಷ್ಮೀಕಾಂತಂ ಮುನಿ ಸೂವ್ರತಂ ನಮಗೆ ಮಾಳ್ಕಿಷ್ಟಾರ್ತ್ಥ ಸಂಸಿದ್ಧಿಯಂ ॥
ಎನಸ್ಸಂತಾನಮೆಂಟ್ಟುಂಕಿಡೆ ನಿಜಗುಣಮೆಂಟ್ಟುಂಮೊಗಂದೋಱೆ ಮೆಯ್ಯಂ
ದೇನಾನುಂಗುಂದೆ ಲೋಕಾಗ್ರದೊಳಿರೆ ಸಹಜಾನಂದ ಚೈತನ್ಯರೂಪಂ
ಜ್ಞಾನ ಜ್ಞೇಯ ಪ್ರಮಾಣಂ ಪಸರಿಸೆ ಗಣನಾತೀತರಾಗಿರ್ದ್ದ ಮುಕ್ತಿ
ಶ್ರೀನಾಥರ್ಸ್ಸಿದ್ಧರಾತ್ಯಂತಿಕ ಸುಖಪದಮಸಿದ್ಧಿಯಂ ಮಾಳ್ಕೆ ನಮ್ಮೊಳ್ ॥

ಅಂತ್ಯ : ವೃ॥ ಕ್ರುತವಿದ್ಯರ್ಸ್ಸಮಚಿತ್ತರಾಗಿ ಪದಪಿಂದಾರಯ್ಯೆ ಕರ್ಣ್ನಾಟಸಂ
ಸ್ಕೃತ ಕಾವ್ಯಂಗಳೊಳರ್ತ್ಥದಿಂ ರಚನೆಯಿಂ ನೇರ್ಪಟ್ಟು ವಿದ್ವಜ್ಜಮ

ತ್ಕೃತಿಯಪ್ಪಂತಿರೆ ನಾಗಚಂದ್ರ ವಿಬುಧಂ ಪೇಳ್ದಂದದಿಂದಾದ್ಯರ
ದ್ಯತನರ್ಪೇಳ್ದಭಿರಾಮ ಕಥೆಯಂ ಸಯಿಪಿಂ ಗಡಪ್ಪಾರ್ಗರೇ ||

ಗದ್ಯ || ಇದು ಪರಮಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ ಮುನೀಂದ್ರ ಚರಣನಖ ಕಿರಣ ಚಂದ್ರಿಕಾಚಕೋರಂ ಭಾರತೀಕರ್ನ್ನಪೂರಂ ಶ್ರೀಮದಭಿನವಪಂಪ ವಿರಚಿತಮಪ್ಪ ರಾಮಚಂದ್ರ ಚರಿತ ಪುರಾಣದೊಳು ರಾಮಜಿನ ಪರಿನಿರ್ವ್ವಾಣ ಕಲ್ಯಾಣವರ್ಣ್ನನಂ ಷೋಡಶಾಸ್ವಾಸಂ || ೮ ||
ಜ್ಜಯಮಂಗಳ ಮಹಾಶ್ರೀ ||

ವಿಷಯ : ಜೈನರಾಮಾಯಣದ ಕಥೆ.

ವಿಶೇಷ : ಶಕಟರೇಫದ ಬಳಕೆ ಇದೆ. ದಪ್ಪಕ್ಷರ. ಕಟ್ಟಿನ ಆದಿಯಲ್ಲಿರುವ ಕ್ರಮಾಂಕವಿಲ್ಲದ ಒಂದು ಪತ್ರದಲ್ಲಿ ಕೃತಿಯ ವಿಷಯಸೂಚಿ ಇದೆ. ೨, ೨೦, ೩೦, ೪೫, ೫೪, ೫೬, ೬೩, ೧೦೭, ೧೧೫, ೧೩೫, ೧೭೦ ಈ ಕ್ರಮಾಂಕದ ಪತ್ರಗಳು ಮುರಿದಿವೆ.

848

ಕೆ.ಬಿ. ೧೧	**ಪಂಪಾವಿರೂಪಾಕ್ಷ ಶತಕಂ**	ಭಾಮಿನೀಷಟ್ಪದಿ
೮.೪" × ೬.೫"	ಕವಿರಂಗ	?
೧–೨೯ ಪತ್ರ	೧೧ ಪಂಕ್ತಿ	೧೫ ಅಕ್ಷರ

ಆದಿ : ವಿರೂಪಾಕ್ಷ ಶತಕಂ.

ಶ್ರೀಗುರುವೆ ಸದ್ಗುಣಾಂಕಿತ
ಭೋಗಕರ ಜಗದೇಕನಾಯಕ
ಭೋಗಿಭೂಷಣ ಭಜಕ ಜನರಕ್ಷಕ ಕೃಪಾಂಬುಧಿಯೇ
ಭಾಗಧೇಯನೆ ಯೆನ್ನ ಸಲಹುವ
ಶ್ರೀ ಗಿರೀಶನೆ ಜಯಜಯತು ನಿಗ
ಮಾಗಮಂಗಳ ನುಡಿಗೆ ಸಿಲುಕದ ಶ್ರೀ ವಿರೂಪಾಕ್ಷಾ || ೧ ||

ಅಂತ್ಯ : ವರದ ಹಿರಿಯ ಪುರೀಶಪದ ತಾ
ಮರಸ ಮಧುಕರ ಭಕ್ತನಾದನು
ವರ ರವೀಶರ ರಂಗನಾತ್ಮಜನಾದ ಕವಿರಂಗಾ

ಹರುಷದಿಂ ವಿರುಪಾಕ್ಷ ಪೇಳಿನ
ಲೊರದು ಮಹಿಮಾಸಾರ ಸುಖವಿದ
ಕರಸ ನೀಂ ಸತ್ಕವಿನುತನೆ ಪಂಪಾ ವಿರೂಪಾಕ್ಷಾ ॥ ೧೧೬ ॥

ಸರ್ವಲೋಕಾರಾಧ್ಯ ಮಂಗಳ
ಸರ್ವ ಮಂಗಳೆಯರಸ ಮಂಗಳ
ಸರ್ವ ಸಂಪತ್ಕರನೆ ಮಂಗಳ ಶಿವಕೃಪಾಂಭೋಧೀ
ನಿರ್ವಿಕಲ್ಪ ಮಹೀಶ ಮಂಗಳ
ಪರ್ವತೇಶ್ವರ ದೇವ ಮಂಗಳ
ಗೀರ್ವರ ಸ್ತುತಿಪಾತ್ರ ಜಯ ಪಂಪಾವಿರೂಪಾಕ್ಷಾ ॥ ೧೧೮ ॥

॥ ಪಂಪಾವಿರೂಪಾಕ್ಷ ಶತಕಂ ಸಂಪೂರ್ಣಂ ॥

ವಿಷಯ : ಹಂಪೆಯ ವಿರೂಪಾಕ್ಷನ ಸ್ತುತಿ.

ವಿಶೇಷ : ಪ್ರತಿ ಪದ್ಯವೂ ಪಂಪಾವಿರೂಪಾಕ್ಷಾ ಎಂದು ಮುಗಿಯುತ್ತದೆ. ವಿರಳಾಕ್ಷರ.

849

ಕೆ. ಬಿ. ೯೧/೩	**ಪಂಪಾಶತಕ**	**ವೃತ್ತ**
೭.೮"×೬.೫"	ಹರಿಹರ	ಸು ೧೨೦೦
೧೪೦ ಪುಟ	೧೨ ಪಂಕ್ತಿ	೨೦ ಅಕ್ಷರ

ಆದಿ : ಪಂಪಾಶತಕಂ ॥
ಶ್ರೀ ಮದ್ರಾಜಕಳಾವತಂಸ ಹಿಮಚಂದ್ರಾರ್ಕಾಗ್ನಿ ಜೀವಾನಿಲ
ವ್ಯೋಮಾದಿ ಪ್ರಕರಂಗಳಿಂ ಸಕಲನುಂ ರಕ್ಷಿಪ್ಪ ಸರ್ವೇಶ
.... ॥ ೧ ॥
.... ೨ ॥ ೩ ॥ ೪ ॥
ಕರೆವುದದೆಂದು ಕಾಲ್ಪಿಡಿಸಿಕೊಳ್ಳುದದೆಂದುದಯಾ ಕಟಾಕ್ಷದಿಂ
ಪೊರೆವುದದೆಂದು ಮೆಲ್ನುಡಿಗಳಿಂ ಮುದವೇಱುಪುದೆಂದು ಸೋಂಕಿನಿಂ
ಹರೆವುದದೆಂದು ಸಂತಸದಿ ಪೆರ್ಚಿಪುದೆಂದುಮನಪ್ಪಿ ನೀಂ ಕರಂ
ಕರಗಿಪುದೆನ್ನನೆಂದೊಸೆದು ಪೇಳನಗಿಂದೆಲೆ ಹಂಪೆಯಾಳ್ದನೇ ॥ ೫ ॥

ಅಂತ್ಯ : ಜಯಜಯ ಪುಣ್ಯಮಾರ್ಗವಿದು ಸಾತ್ವಿಕ ಲಕ್ಷಣವಿಂತಿದಾದ್ಯರ
ನ್ವಯವಿದನೂನ ಭಕ್ತಿರಸಪೂರವಿದುತ್ತಮ ಶೀಲ ಭಕ್ತರಾ
ಶ್ರಯವಿದು ತಪ್ಪದೆಂದು ಶರಣ್ಮಿಗೆ ಬಣ್ಣಿಸೆ ಪೇಳ್ವನಾಹ ಹಂ
ಪೆಯ ಹರಿದೇವನೀ ಶತಕವಂ ಸಕಲೇಷ್ಟ ಫಲಪ್ರದಾತೃವಂ ॥ ೧೦೦ ॥
ಹಂಪೆಯ ಹರಿದೇವರಿಂ ವಿರಚಿತವಾದ ಪಂಪಾಶತಕವು ಸಂಪೂರ್ಣಂ.

ವಿಷಯ : ವಿರೂಪಾಕ್ಷಸ್ತೋತ್ರ.

ವಿಶೇಷ: ಮಧ್ಯೆ ಗ್ರಂಥಲೋಪವಿದೆ. ಈ ಪುಸ್ತಕದಲ್ಲಿ ರಾಮನಾಥಶತಕ ಅರ್ಧೇಂದು ಮೌಳಿಶತಕ ಎಂಬ ಎರಡು ಶತಕಗಳಿವೆ.

850

ಕೆ. ಬಿ. ೨೪೫	**ಪರಬ್ರಹ್ಮ ಪ್ರಕಾಶಿಕೆ**	ಗದ್ಯ
೭.೮" × ೬.೪"	?	?
೧—೨೧ ಪತ್ರ	೧೬ ಪಂಕ್ತಿ	೨೪ ಅಕ್ಷರ

ಆದಿ : ಪರಬ್ರಹ್ಮ ಪ್ರಕಾಶಿಕೆ ಪ್ರಾರಂಭವು.
ಶ್ರೀ ಸದ್ಗುರುಚರಣ ರಜಃ ಪ್ರಸಾದ ಪ್ರಭಾವದಿಂ ಮುಮುಕ್ಷುಗಳ ಸಂಶಯ ಹೋಗಿ ಸಂಸಾರ ಕಾರಣೋಪಾಯಭೂತವಾದ ಜೀವಭ್ರಾಂತಿ ಯಳಿದು ತಾನೆ ಬ್ರಹ್ಮವೆಂಬ ಜ್ಞಾನ ದೃಢವಾಗುವಂತೆ ಪರಬ್ರಹ್ಮ ಪ್ರಕಾಶವಂ ಪೇಳ್ವೆಸೂ| ಪರಬ್ರಹ್ಮರೂಪವ ತಿಳಿವುದಕ್ಕೆ ಸಾಧನ ಚತುಷ್ಟಯ ಸಂಪತ್ತು ಸಹಕಾರಿಯೂ ಯಲ್ಲದೂ ಅಧಿಕಾರಿಗಳಲ್ಲಾಯಂ .... ಅಧಿಕಾರಿ ಗಳಾಗಬಾರದೆ ಯನಲು ಹರಿವ ನದಿಗಳ.... ಜನ್ಮ ಭೂಮಿಯು ಹ್ಯಾಗೆ ಕಾಣ ಲಾರವೊ ಹಾಗೆ ಸಂಸಾರದಲ್ಲಿ ಮಗ್ನರಾಗಿ ರಾಗ ದ್ವೇಷ ವಶರಾಗಿ ದೇಹಾಭಿ ಮಾನಿಗಳಾಗಿ ಪುತ್ರ ಕಳತ್ರ ಬಂಧುಗಳೆಂಬ ಮೋಹದ ಬಲೆಗೆ ತಗುಲಿ ಕೊಂಡಿಹ ಪ್ರಾಣಿಗಳಿಗೆ ಸದಾ ಬೋಧಿಸಿದರು.

ಅಂತ್ಯ : ಅದರಿಂದ ಅವಧೂತ ಸನ್ಯಾಸಮಾರ್ಗ ಹೊಂದಬೇಕೆಂದು ಭ್ರಾಂತಿಯ ಬಿಟ್ಟು ಮೊದಲು ನಿಷ್ಕರ್ಷವ ಮಾಡಿ ಚಿತ್ತಶುದ್ಧಿಯ ಸಂಪಾದಿಸುತ್ತ ಅನ್ಯಥಾ ಶರಣಂ ನಾಸ್ತಿ ತ್ವಮೇಹ ಶರಣಂ ಮಮ ಯಂದು ಶರಣಾಗತ ಬುದ್ಧಿಯಿಂದ ಶ್ರೀಮದ್ಭಾಗವತ ಶ್ರವಣ ನಾಮಕೀರ್ತನ ಪೂಜಾದಿಗಳಲ್ಲಿ

ದೃಢವಾದ ವಿಶ್ವಾಸವನುಳ್ಳವನಾಗಿ ಶ್ರೀ ವಾಸುದೇವನ ಪಾದರವಿಂದವೇ ಗತಿಯೆಂದು ಮುಕ್ತಿಸಾಂಬ್ರಾಜ್ಯಪದವಿಯಂ ಪಡದು ಸ್ವಸ್ವರೂಪರಾಗುವರು।

ಗುರುಬ್ರ್ಹಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ।
ಗುರುಸ್ಸಾಕ್ಷಾತ್ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ॥

ಇಂತೀ ಪರಬ್ರಹ್ಮ ಪ್ರಕಾಶಿಕೆಯಲ್ಲಿ ಐದನೆಯ ಭಾಗ ಸಮಾಪ್ತಮಾದುದು ಮಂಗಳ ಮಹಾಶ್ರೀ॥

ವಿಷಯ : ವೇದಾಂತ ವಿಚಾರ.

ವಿಶೇಷ : ಪ್ರತಿಯಕಾಲ ೧೯೦೧. ಪ್ರಕೃತ ಗ್ರಂಥದಲ್ಲಿ ೧ ಜೀವನ್ಮುಕ್ತಿ, ೨ ಪಂಚೀಕರಣ, ೩ ಅಷ್ಟಾಂಗಯೋಗ ನಿರ್ಣಯ, ೪ ಸಕಲಸಾಧನ ನಿರೂಪಣ ನಿರ್ಣಯ, ೫ ಸಪ್ತಭೂಮಿಕಾ ಎಂಬ ಐದು ಭಾಗಗಳಿವೆ.

851

ಕೆ. ಬಿ. ೩೦೩/೨	**ಪರಬ್ರಹ್ಮ ಪ್ರಕಾಶಿಕೆ**	ಗದ್ಯ
೭.೬"×೬.೨"	?	?
೧—೨೧ ಪತ್ರ	೧೬ ಪಂಕ್ತಿ	೨೩ ಅಕ್ಷರ

ಆದಿ : ಶ್ರೀಸಿದ್ಧಿವಿನಾಯಕನ ಅಡಿಗೆರಗಿ ಸದ್ಗುರುಚರಣ ರಜಪ್ರಸಾದ ಪ್ರಭಾವದಿಂ ಮುಮುಕ್ಷುಗಳ ಸಂಶಯ ಹೋಗಿ ಸಂಸಾರ ತಾರಣೋಪಾಯ ಭೂತವಾದ ಜೀವಭ್ರಾಂತಿಯಳಿದು ತಾನೆ ಬ್ರಹ್ಮವೆಂಬ ಜ್ಞಾನ ದೃಢವಾಗುವಂತೆ ಪರಬ್ರಹ್ಮಪ್ರಕಾಶವಂ ಪೇಳ್ವೆನು। ಶ್ರೀ ಸಾಂಬಸದಾಶಿವಾಯ ನ। ಪರಬ್ರಹ್ಮ ಸ್ವರೂಪವ ತಿಳಿವದಕ್ಕೆ ಸಾಧನ ಚತುಷ್ಟಯ ಸಂಪಂನನೆ ಅಧಿಕಾರಿಯು ಯಲ್ಲರು ಅಧಿಕಾರಿಗಳಾಗಬಾರದೆ ಯೆಂದರೆ ಹರಿವ ನದಿಗಳು ಮರಳಿ ತಂಮ ಜನ್ಮಭೂಮಿಯ ಹ್ಯಾಗೆ ಕಾಣಲಾರವೊ ಹಾಗೆ ಸಂಸಾರ ಪ್ರವಾಹದಲ್ಲಿ ಮಗ್ನರಾಗಿ ರಾಗದ್ವೇಷ ವಶಕರಾಗಿ ದೇಹಮಾನಿಗಳಾಗಿ ಪುತ್ರ ಮಿತ್ರ ಕಳತ್ರ ಬಂಧುಗಳೆಂಬ ಮೋಹದ ಬಲೆಗೆ ತಗುಲಿಕೊಂಡಿಹ ಪ್ರಾಣಿಗಳಿಗೆ ಸಾದಾ ಬೋಧಿಸ್ತರು ಆ ಬ್ರಹ್ಮಜ್ಞಾನ ದೊರಕೊಳ್ಳದಾಗಿಯು ಶೂದ್ರಗೆ ಉಪನಯನ ಸಂಸ್ಕಾರದಿಂದಾ ಹ್ಯಾಗೆ ಬ್ರಾಹ್ಮಣನಾಗನೊ ಬ್ರಾಹ್ಮಣನೆ ಹ್ಯಾಗೆ ಅಧಿಕಾರಿಯೊ ಹಾಗೆ ಸಾಧನ ಚತುಷ್ಟಯ ಸಂಪಂನನೆ ಅಧಿಕಾರಿಯು।

ಅಂತ್ಯ : ಪೃಥ್ವೀ ತಂನಂಶಾ ತಂನೊಳಗೆ ತೆಕ್ಕೊಂಡು ತನಗೆ ಕಾರಣವಾಗಿರುವಂಥಾ ಅಪ್ಪುವಿನಲ್ಲಿ ಲಯವಾಯಿತೂ। ಅಪ್ಪು ತೆನ್ನಂಶಾ ತನ್ನೊಳಗೆ ತೆಕ್ಕೊಂಡು ಅಗ್ನಿಯಲ್ಲಿ ಲಯವಾಯಿತೂ। ಅಗ್ನಿ ತಂನಂಶಾ ತೆಕ್ಕೊಂಡು ವಾಯುವಿನಲ್ಲಿ ಲಯವಾಯಿತು। ವಾಯು ತಂನಂಶಾ ತಂನೊಳಗೆ ಯಿರಿಸಿಕ್ಕೊಂಡು ಆಕಾಶದಲ್ಲಿ ಲಯವಾಯಿತು। ಆಕಾಶ ತಂನಂಶಾ ತೆಕ್ಕೊಂಡು ಜ್ಞಾತೃವಿನಲ್ಲಿ ಲಯವಾಯಿತೂ ॥—ಇತಿ ಪರಬ್ರಹ್ಮ ಪ್ರಕಾಶಿಕೆಯಲ್ಲಿ ಪಂಚೀಕರಣಭಾಗ ಪಂಚಮೋಧ್ಯಾಯಃ ॥

ಶ್ರೀ ತಂಡುಲಪುರೀ ಶ್ರೀ ಲಕ್ಷ್ಮೀನೃಶಿಂಹ್ಮಸ್ವಾಮಿಯವರ ಚರಣಾರವಿಂದಾರ್ಪಣಮಸ್ತು ॥

ವಿಷಯ : ವೇದಾಂತ ವಿಚಾರ.

ವಿಶೇಷ : ಈ ಪುಸ್ತಕದಲ್ಲಿ ಎರಡು ವಿಧವಾದ ಕಾಗದಗಳಿವೆ. ಈ ಕೃತಿಯಲ್ಲಿ ಒಟ್ಟು ಐದು ಭಾಗಗಳಿವೆ. ೧ ಜೀವನ್ಮುಕ್ತಿ, ೨ ಪಂಚೀಕರಣ, ೩ ಅಷ್ಟಾಂಗ ಯೋಗ ನಿರ್ಣಯ, ೪ ಸಕಲ ಸಾಧನ ನಿರೂಪಣ ನಿರ್ಣಯ, ೫ ಸಪ್ತ ಭೂಮಿಕಾ ಇವೇ ಆ ಐದು ಭಾಗಗಳು. ಇದೇ ಪುಸ್ತಕದ ಮೊದಲಿನಲ್ಲಿ ಈಶ್ವರ ಸ್ವರೂಪವೆಂಬ ಕೃತಿ ಇದೆ.

852

ಕೆ. ೩೨೭/೧	ಪರಮರಹಸ್ಯ (ಸಟೀಕು)	ಶ್ಲೋಕ, ಟೀಕು
೯.೭"×೨"	ಉಮಾಮಹೇಶ್ವರ ಸಂವಾದಾತ್ಮಕ	?
೨೬ ಪತ್ರ	೧೧ ಪಂಕ್ತಿ	೫೨ ಅಕ್ಷರ

ಆದಿ : —ಲ್ಲಿ ಷಡಸ್ಥಲಮಿಶ್ರ। ಯಿಪ್ಪತ್ತನೆಯಲ್ಲಿ ಷಡುಸ್ಥಲಲಿಂಗ। ಯಿಪ್ಪೊತೊಂದನೆಯಲ್ಲಿ ಷಡುಸ್ಥಲಭಕ್ತಾ। ಯಿಪ್ಪತ್ತೆರಡನೆಯಲ್ಲಿ ಷಡುಸ್ಥಲ ಭಕ್ತಂಗೆ ಮಿಶ್ರ ಯಿಪ್ಪತ್ತಮೂರನೆಯಲ್ಲಿ ಷಡುಸ್ಥಲ ಭಕ್ತಂಗೆ ಲಿಂಗಾ। ಯಿಪ್ಪತ್ತನಾಲ್ಕನೆಯಲ್ಲಿ ಷಡುಸ್ಥಲ ಭಕ್ತಂಗೆ ಹಸ್ತಾ। x x x x ಅಯಿವತ್ತೇಳನೆಯಲ್ಲಿ ಶೀಲವ್ರತಂಗಳೂ। ಅಯಿವತ್ತೆಂಟನೆಯಲ್ಲಿ ಯಿಂತಿ ಸ್ಥಲ ನಿರ್ನಯಕ್ಕೆ ಗ್ರಂಥಾ ಪರಿಯಾಯ ಕ್ರಮಂಗಳೂ ॥ ಶ್ರೀ

ಕೈಲಾಸಶಿಖರ್ರೇ ರಮ್ಯೇ ಭಕ್ತಿಸಂಧಾನನಾಯಕಂ।
ಪ್ರಣಮ್ಯಂ ಪಾರ್ವತಿ ಭಕ್ತಾ ಶಂಖರಂ ಪರಿಪೃಚ್ಛತಿ ॥ ೧ ॥

ಟೀಕೂ ॥ ಅತ್ಯಂತ ರಮಣೀಯ್ಯವಾಗಿಯಿತ್ತಂ ಯಿಂದತಾದಾ ಕೈಲಾಸ ಪರ್ವತ ಶಿಖರದಲ್ಲಿ ಭಕ್ತಿಸಂಧಾನಕ್ಕೆ ವೊಡೆಯುನಾಗುತ್ತಂ ಯಿದ್ದಂತಾ ಪರಮೇಶ್ವರನನು ಪಾರ್ವತಿದೇವಿ ಭಕ್ತಿಯಿಂದಾ ನಮಸ್ಕಾರವಂ ಮಾಡಿ ಬೆಸಗೊಳುತ್ತಂ ಯಿದ್ದಾಳೂ ॥ ೧ ॥

ಶ್ರೀದೇವ್ಯ ಉವಾಚಾ। ಪಾರ್ವತಾದೇವಿ ನುಡಿದಳೂ ॥

ಭಗವರ್ನಾ ಸರ್ವಧರ್ಮಜ್ಞ ವ್ರತಾನಾಂ ವ್ರತನಾಯಕಾ।

ಬ್ರೂಹಿ ಮೇ ಕೃಪಯಾ ದೇವ ಗುರುಮಹಾತ್ಮ್ಯೈಮುತ್ತಮಂ॥

ಅಂತ್ಯ : ॥ ೨೮೧ ॥ ದೇವ್ಯೋ ಸ್ತೋತ್ರಮಿದಂ ಪುಣ್ಯಂ ಯಃ ಪಠೇ ಶಿವಸಂನಿಧೌ। ಶಿವಲೋಕೇ ಮವಾಪ್ನೋತಿ । ಶಿವೇನಃ ಸಹ ಮೋದತೇ ॥ ೨೮೨ ॥

ಯಿತಿ ಪರಮರಹಸ್ಯ ಸಮಾಪ್ತಂ ಮಂಗಳ ಮಹಾ ಶ್ರೀ ಶೋಭಕೃತು ಸಂ ಶ್ರಾವಣ ಬ ೫ ಲ್ಲೂ ಯೀ ಪರಮರಹಸ್ಯವನು ಚೆಂನರಾಯಪಟ್ಟಣಧ ನಿಂಗಾಪುರದ ಬಾಂಬಂಣನ ಮಗ ಸಕ್ರಪ್ಪ ಬರದುಕೊಟ್ಟನು । ಸತ್ರಂಣನ ಮಗ ನಾಗೈಯಗೆ ಬರಕೊಟ್ಟನೂ ॥ ಶ್ರೀ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಆದಿಯಲ್ಲಿ ಪರಮರಹಸ್ಯದ ವಿಷಯಾನುಕ್ರಮಣಿಕೆಯ ಒಂದು ಪತ್ರ ಇಲ್ಲ. ಒಟ್ಟು ೨೮೨ ಕಾರಿಕೆಗಳಿದ್ದು ೨೬೮ ಕಾರಿಕೆಗಳಿಗೆ ಮಾತ್ರ ಕನ್ನಡ ಭಾವಾನುವಾದ ಇದೆ. ಇದರೊಂದಿಗೆ ಪ್ರಭುದೇವರ ಮಂತ್ರಗೋಪ್ಯವು ಕಲ್ಲುಮಠದ ಪ್ರಭುದೇವರ ಟೀಕಿನೊಡನೆ ಇದೆ.

853

ಕೆ. ೧೭೫/೩	**ಪರಮ ರಹಸ್ಯ (ಸಟೀಕು)**	**ಶ್ಲೋಕ, ಟೀಕು**
೧೦.೫"×೨.೪"	?	?
೧–೨೩ ಪತ್ರ	೧೧ ಪಂಕ್ತಿ	೪೩ ಅಕ್ಷರ

ಆದಿ : ಪರಮರಹಸ್ಯವ ಬರವುದಕ್ಕೆ ಶುಭಮಸ್ತು ॥ ಆಯುರಾರೋಗ್ಯ ಅಯಿಶ್ವರ್ಯ ಮಸ್ತು । ಮೊದಲಲ್ಲಿ ಗುರುಸ್ತುತಿ । ಯರಡನೆಯಲ್ಲಿ ಗುರುದೀಕ್ಷೆ । ಮೂರನೆ ಯಲ್ಲಿ ಪ್ರಕುತಿಕಾಯ । x x x x ಅೈವತ್ತನಾಲ್ಕನೆಯಲ್ಲಿ ವೀರ ವ್ರತಂಗಳೂ । ಅೈವತ್ತೈದನೆಯಲ್ಲಿ ಯೋಗಧಾರಣ ಸಂಮಂಧಾ ಶ್ರೀ ಗುರುಬಸವಲಿಂಗಾಯ ನಮಃ

ಪರಮರಹಸ್ಯ ಉಪದೇಶಸಂಗ್ರಹಾ ॥

ಕೈಲಾಸೇ ಶಿಕರೇ ರಂಮ್ಯೇ ಭಕ್ತಿಸಂಥಾನನಾಯಕಂ
ಪ್ರಣಮ್ಯಂ ಪಾರ್ವತೀ ಭಕ್ತ್ಯಾ ಶಂಕರಂ ಪರ್ರಿಪ್ರಚ್ಛತಿ ॥

ಟೀಕೂ ॥ ಅತ್ಯಂತ ರಮಣೀಯ್ಯವಾಗುತ್ತಂವಿದ್ದಂಥಾ ಕೈಲಾಸ ಪರ್ವತ ಶಿಕರದಲ್ಲಿ ಭಕ್ತಿಸಂಥಾನಕ್ಕೆ ವಡೆಯನಾಗುತ್ತಂ ಯಿದ್ದಂಥಾ ಪರಮೇಶ್ವರ ನನು ಪಾರ್ವತೀದೇವಿ ಭಕ್ತಿಯಿಂದಾ ನಮಸ್ಕಾರವಂ ಮಾಡಿ ಬೆಸ ಗೊಳುತಂ ಯಿದ್ಧಾಳೂ ॥ ೧ ॥

ಅಂತ್ಯ : ಸದ್ಯೋಜಾತಸ್ತಥಾ ಭೂಮಿರ್ವಾಮದೇವೋದ್ಭವೇ ಜಲಂ ।
ಅಘೋರದ್ವಂಹಿರಿತ್ಯುಕ್ತಂ ತತ್ಪುರುಷದ್ವಾಯುರುಚ್ಯತೇ ॥
ಯೀಶಾನ್ಯದ್ಗಗನಾಕಾರಂ ಪಂಚ ಬ್ರಹ್ಮಮಯಂ ಜಗತ್ ॥

ಟೀಕೂ ॥ ಸದ್ಯೋಜಾತ ಮುಖದ್ಲ್ಲ ಪೃಥ್ವಿ । ವಾಮದೇವ ಮುಖದಲ್ಲಿ ಅಪ್ಪು । ಅಘೋರ ಮುಖಉ ಅಗ್ನಿ । ತತ್ಪುರುಷಮುಖವು ವಾಯು । ಯೀಶಾನ್ಯ ಮುಖಉ ಆಕಾಶ । ಯೀ ಜಗತ್ತೆಲ್ಲಉ ಪಂಚಬ್ರಹ್ಮಮಯವೆಂದು ಯೀಶ್ವರನು ಪಾರ್ವತಾದೇವಿಯರ್ರಿಗೆ ನಿರೂಪವ ಕೊಟ್ಟನೂ ॥ ೨೪೮ ॥

ಯಿತ್ಯುವಮಾ ಮಹೇಶ್ವರ ಸಂವಾದೇ ಷಡೂಸ್ಥಲ ನಿರ್ನ್ನಯಂ। ಪರಮರಹಸ್ಯ ಸಂಪೂರ್ನ್ನಂ ಮಂಗಳಮಹಾಶ್ರೀ ॥
ದುಂದುಭಿಸಂವತ್ಸರದ ಪುಷ್ಯಶುದ್ಧಉ ಗುರುವಾರದ ದಿವಸ ವಡೇರಪಾಳ್ಯದ ಸಿದ್ದನಂಜೈಯ್ಯನವರ ಕುಮಾರ ಸಿವಲಿಂಗೈಯ್ಯ ನಿಜಗುಣಸ್ವಾಮಿಯವರ ಪಾದಕ್ಕೆ ತಂನ್ನ ಹಸ್ತಾಕ್ಷರದಲ್ಲಿ ಬರದು ವಪ್ಪಿಸ್ತ ಪರಮರಹಸ್ಯ ಸಂಪೂರ್ನ್ನ ಮಂಗಳಮಹಾ ಶ್ರೀ ॥

ವಿಷಯ : ಷಟ್ಸ್ಥಲಸಿದ್ಧಾಂತ.

ವಿಶೇಷ : ೮ ನೆಯ ಪತ್ರ ಕಾಲುಭಾಗ ಮುರಿದು ಲುಪ್ತವಾಗಿದೆ. ಒಟ್ಟು ೨೪೮ ಕಾರಿಕೆ ಗಳಿಗೆ ಕನ್ನಡ ಟೀಕಿದೆ. ಸಂಸ್ಕೃತ ಶ್ಲೋಕಗಳಲ್ಲಿ ತಪ್ಪು ಅಧಿಕ. ಇದಕ್ಕೆ ವೊಗ್ಗೆಯಮಾಯಿದೇವನ ಕನ್ನಡಟೀಕಿದೆ. ಪ್ರತಿಯಕಾಲ ಅಂತ್ಯದಲ್ಲುಕ್ತ ವಾಗಿದೆ. ೧ ಜಯಸ್ತೋತ್ರ–ಬಿರದಾವಳಿಪಿವರ, ೨ ಅನುಭವಸೂತ್ರಂ, ೩ ವಿಶೇಷಾರ್ಥ ಪ್ರಕಾಶಿಕೆ, ೪ ಮನೋವಿಜಯಕಾವ್ಯ, ೫ ಪರಗೂರ್ಥಗೀತೆ, ೬ ಶಿವಪೂಜಾ ವಿಧಾನ, ೭ ಮೂರೇಳುದಿಕ್ಷಾ ಪ್ರಶಸ್ತಿ, ಅಲ್ಲದೆ ರಸಸಿಂಧೂರ ಕ್ರಮ ಇವುಗಳೂ ಇರುತ್ತವೆ.

854

ಕೆ.ಬಿ. ೨೨೬ ಪರಮುಹಸ್ಯ ಬೋಧೆ (ಸಟೀಕು) ಶ್ಲೋಕ, ಗದ್ಯ

೭.೮"×೬.೩" ? ?

೧–೪೧ ಪತ್ರ ೧೪ ಪಂಕ್ತಿ ೨೨ ಅಕ್ಷರ

ಆದಿ : ॥ ಪರಮುರಹಸ್ಯ ಗ್ರಂಥಾ ॥ ಶ್ರೀ ಗಣಾಧಿಪತಯೇ ನಮಃ ಶ್ರೀ ಶಾರದಾ ಗುರುಭ್ಯೋ ನಮಃ ॥ ಶುಭಮಸ್ತೂ ॥

ಶ್ಲೋಕ ॥ ಕೈಲಾಸೇ ಶಿಕರೇ ರಂಮ್ಯ ಭಕ್ತಿಗಂಧಾನುನಾಯಿಕಂ
ಪ್ರಣಮ್ಯ ಪಾರ್ವತಿ ಭಕ್ತ್ಯಾ ಶಂಕರಂ ಪರಿಪೃಚ್ಛ್ಯತೀ ॥

ಟೀಕು ॥ ಅತ್ಯಂತ ರಮಣೀಯ್ಯವಾಗಿರುತ್ತ ವಿದಂತಾ ಕೈಲಾಸ ಪರ್ವತದ ಶಿಖರದಲ್ಲಿ ಭಕ್ತಿಸಂಧಾನಕ್ಕೆ ವಡೆಯನಾಗುತ್ತಂ ಯಿದ್ದಂಥಾ ಪರಮೇಶ್ವರನನು ಪಾರ್ವತಾದೇವಿ ಬೆಸಗೊಳ್ಳುತ್ತಿದ್ದಾಳು ॥ ೧ ॥

॥ ದೇವಿವಾಚಃ ॥

ಶ್ಲೋಕ ॥ ಭಗವಾರ್ ಸರ್ವಧರ್ಮಜ್ಞ ವ್ರತನಾಂ ವ್ರತನಾಯಕಂ
ಭ್ರೂಹಿ ಮೇ ಕೃಪೆಯಾ ದೇವಾ ಗುರೋರ್ಮಹಾತ್ಮ್ಯಮುತ್ತಮಂ ॥

ಟೀಕು ॥ ವ್ರತಂಗಳಿಗೆ ವಡೇಯನಹಂತ । ಸರ್ವಧರ್ಮವನು ಬಲ್ಲಂಥಾ। ಯಲಿ ಭಗವಾನುವಹಂತ । ದೇವನೆ ವುತ್ತಮಾವಹಂತ ಗುರುಮಹಾತ್ಮ್ಯವನ್ನು ಕೃಪೆಯಿಂದ ಯನಗೆ ಹೇಳು ಯಂದಳೂ ॥ ೨ ॥

ಅಂತ್ಯ : ಶ್ಲೋ॥ ಸದ್ಯೋಜಾತಸ್ಥಥಾ ಭೂಮಿರ್ವಾಮದೇವಾಸ್ತಥಾ ಜಲಂ ।
ಅಘೋರಾಧ್ವಂ ನಿರುತ್ಪತ್ಯಂ ತತ್ಪುರುಷಂ ವಾಯುದುಚ್ಯತೇ ॥
ಯೀಶಾನ್ಯದ್ಗಘನಾಕಾರಂ ಪಂಚಬ್ರಹ್ಮಮಯಂ ಜಗತ್ ॥

ಟೀ ॥ ಸದ್ಯೋಜಾತಮುಖವು ಪೃಥ್ವಿ । ವಾಮದೇವ ಮುಖವು ಅಪ್ಪು ಅಘೋರ ಮುಖವು ಅಗ್ನಿ । ತತ್ಪುರೋಷ ಮುಖವು ವಾಯು ಯಿಶಾನ ಮುಖವು ಆಕಾಶವು । ಯೀ ಜಗತ್ತೆಲವು ಪಂಚಬ್ರಹ್ಮಮಯುವೆಂದು ಯೀಶ್ವರನು ಪಾರ್ವತಾ ದೇವಿಯರಿಗೆ ನಿರೂಪಿಸಿದನೂ ॥ ೨೬೩ ॥

ಯಿಂತ್ಯುಮಂಮಹೇಶ್ವರ ಸಂವಾದೇ ಷಟ್ಸ್ಥಳ ನಿರ್ನಯಿ ಪರಮು ರಹಸ್ಯ ಗ್ರಂಥ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ : ಷಟ್ಸ್ಥಲ ಸಿದ್ಧಾಂತ.

ವಿಶೇಷ : ಒಟ್ಟು ೨೬೩ ಕಾರಿಕೆಗಳಿಗೆ ಕನ್ನಡ ಟೀಕಿದೆ. ಇದು ಶೈವಾಗಮ ಸಂಗ್ರಹ ಗ್ರಂಥ.

855

ಕೆ. ೪೧೬/೧ **ಪರಮ ರಹಸ್ಯೋಪದೇಶ ಸಂಗ್ರಹ** ಶ್ಲೋಕ, ಟೀಕು
೧೨.೨″ × ೧.೧″ ? ?
೧–೫೮ ಪತ್ರ [redacted] ಪಂಕ್ತಿ [redacted] ಅಕ್ಷರ

ಆದಿ : ಶುಭಮಸ್ತು ॥ ಪರಮರಹಸ್ಯ ಉಪದೇಶಸಂಗ್ರಹ॥
ಮೊದಲಲ್ಲಿ....ರು ಶೃತಿ ಯೆರಡ ಯ ದೀಕ್ಷೆ। ಮೂಱನೆಯ ಪ್ರಕೃತಿ ಕಾಯ ನಾಲ್ಕನೆಯಲ್ಲಿ ಜ್ಞಾನ ಅಯಿದನೆಯಲ್ಲಿ ಅಕ್ಷರೋತ್ಪತ್ತಿ। ಆರನೆಯಲ್ಲಿ x x ಗ್ರಂಥಸ್ಥಲದ ಪರ್ಯಾಯಕ್ರಮಉ ಆವರ ಭೇದ ರಹಸ್ಯಂಗಳೂ॥

ಶ್ಲೋಕ॥ ರುಸ್ತುತಿ
ಕೈಲಾಸ ಶಿಕರೇ ರಂಮ್ಯೆ ಭಕ್ತಿಸಂದಾನನಾಯಕಂ।
ಪ್ರಣಮ್ಯಂ ಪಾರ್ವತೀಭಕ್ತ್ಯೋ ಶಂಕರಃ ಪರಿಪುಶ್ಚತೀ॥

ಟೀ॥ ಆತ್ಯಂ.... ರಮಣೀಯವಾಗಿ ಯಿರುತ್ತಾಯಿದಂತ್ತಾ ಕೈಲಾಸಪರ್ವತದ ಶಿಖರದಲ್ಲಿ ಭಕ್ತಿಸಂದಾನಕ್ಕೆ ವೊಡಯನಾಗುತ್ತಂ ಯಿದಂತ್ತಾ। ಪರಮೇಶ್ವರ ಪಾರ್ವ್ವತಾದೇವಿ। ಭಕ್ತಿಯಿಂದಂ ನಮಃಸ್ಕಾರವಂ। ಬೆಸಗೊಳುತ್ತಂ ಯಿದ್ದಾಳೂ ॥ ೧ ॥

ಅಂತ್ಯ : ತ್ರಾಹಿ ತ್ರಾಹಿ ವಿರೂಪಾಕ್ಷಾ ತ್ರಾಹಿ ತ್ರಾಹಿ ತ್ರಿಯಂಬಕಃ।
ತ್ರಾಹಿ ತ್ರಾಹಿ ತ್ರಿಲೋಕೇಶ ತ್ರಾಹಿ ಮಾಂ ಭಕ್ರಿವತ್ಸಲಃ ॥ ೧೦ ॥
ದೇವ್ಯಸ್ತೋತ್ರಮಿದಂ ಪುಂಣ್ಯಂ ಯಃ ಪಠೇ ಶಿವಸಂನ್ನಿಧೌ।
ಶಿವಲೋಕೇ ಮಹಾಪ್ನೋತಿ ಶಿವೇನಸ್ಸಹ ಮೋದತೇ ॥ ೧೧ ॥

ಇತಿ ದೇವ್ಯರ ಸ್ತೌತ್ರ್ಯ ಸಮಾಪ್ತಂ ॥—॥ ಇತಿ ಪರಮರಹಸ್ಯ ಸಂಪೂರ್ನಂ ಶ್ರೀ

ವಿಷಯ : ಷಟ್ಸ್ಥಲ ಸಿದ್ಧಾಂತ.

ವಿಶೇಷ : ಕೆಲವೆಡೆ ಶಕಟರೇಫದ ಬಳಕೆಯಿದೆ. ಪ್ರತಿಯು ಹುಳು ಹಿಡಿದು ತ್ರುಟಿತ ವಾಗಿದೆ. ೧–೭, ೪೮ ಈ ಪತ್ರಗಳಲ್ಲಿ ಕೆಲವುಭಾಗ ಲುಪ್ತವಾಗಿದೆ. ಇದರೊಂದಿಗೆ ಶಿವಸಹಸ್ರನಾಮವೆಂಬ ಕೃತಿ ಇದೆ.

856

ಕೆ.ಎ. ೨೦೯/೩ **ಪರಮಾಗಮಸಾರ** ಕಂದ, ವೃತ್ತ
೧೨.೮″ × ೮″ ಚಂದ್ರಕೀರ್ತಿ ಸು. ೧೪೦೦
೫೫–೬೩ ಪತ್ರ ೩೫ ಪಂಕ್ತಿ ೨೭ ಅಕ್ಷರ

ಆದಿ : ಪರಮಾಗಮುಸಾರಃ ||
ಶ್ರೀಮನ್ನಿರ್ವೃತಿ ವನಿತಾ
ಕೋಮಳ ಮುಖತಿಳಕನಮಳ ಗುಣಗಣನಿಳಯಂ
ಚಾಮಿಾಕರ ಸಮದೇಹಂ
ಪ್ರೇಮದಿನೆಮಗೀಗೆ ಮುಕ್ತಿಯಂ ಪುರುದೇವಂ ||

ಅಂತ್ಯ : ವರಚಂದ್ರಕೀರ್ತಿ ಮುನಿಪತಿ
ವಿರಚಿಸಿದೀ ಗ್ರಂಥದಲ್ಲಿ ತಪ್ಪುಳ್ಳದಡಂ
ಪರಮಾಗಮು ವೇದಿಗಳಾ
ದರದಿಂ ತಿರ್ದಿ ಬರೆಗುಪೇಕ್ಷಿಸವೇಡಂ || ೧೩೦ ||

x x x x

ಶುಭಕ್ಕೆ ಶಾಂತಿ ಪೊರ್ದುಗೆ
ವಿಭವಂ ಕೈಸಾರ್ಗೆ ಧರ್ಮದೊಳು ನಿಕ್ಕೆ ಮನಂ
ಶುಭಮತಿ ಯಿಂತೀ ಗ್ರಂಥಮ
ನಭಿವರ್ಣಿಸುತಿರ್ಪ ಭವ್ಯಕೋಟಿಗೆ ನಿರ್ಚಂ || ೧೩೨ ||

ವಿಷಯ : ಜೈನವೇದಾಂತ.

ವಿಶೇಷ : ಶಿಥಿಲಪ್ರತಿ. ಇದೇ ಪುಸ್ತಕದಲ್ಲಿ ಲೋಕಸ್ವರೂಪ, ಕರ್ಮ ಪ್ರಕೃತಿ, ರತ್ನ ಕರಂಡಕವೆಂಬ ಇತರ ಗ್ರಂಥಗಳಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

857

ಕೆ. ಬಿ. ೨೧	**ಪರಮಾಗಮುಸಾರ**	ಗದ್ಯ
೭.೮" × ೬.೧"	ಚಂದ್ರಕೀರ್ತಿ	ಸು. ೧೪೦೦
೧೭೮ ಪತ್ರ	೧೫ ಪಂಕ್ತಿ	೧೮ ಅಕ್ಷರ

ಆದಿ : ಶ್ರೀಯೆಂಬನಂತ ವಿದ್ಯಾ
ಶ್ರೀಯೆಂಬೆರಡೆ ಸೌಖ್ಯಹೇತುಗಳದರಿಂ
ಶ್ರೀಯುಮುನನನ್ತ ವಿದ್ಯಾ
ಶ್ರೀಯುಮನೆಮಗೀಗೆ ವರ್ಧಮಾನ ಜಿನೇಂದ್ರಂ ||

ಆಗಮಾಭ್ಯಾಸವಿಲ್ಲದ ಭವ್ಯ ಜನಂಗಳಿಗೆ ಸಂಬೋಧನಾರ್ಥಂ ಪರಮಾಗಮ ಸಾರಮಂ ಸಂಕ್ಷೇಪದಿಂ ಪೇಳ್ದಪರು

ಪಂಚಾಸ್ತಿಕಾಯ ಷಡ್ದ್ರವ್ಯ ಸಪ್ತತತ್ವ ನವಪದಾರ್ಥಂ ಬಂಧಾಬಂಧ ಕಾರಣ ಮೋಕ್ಷಕಾರಣಮೆಂದಿಂಬಿವು ಸರ್ವಜ್ಞ ಭಾಷಿತಂಗಳು ॥

ಅಂತ್ಯ : ಅಥವಾ ಪಂಚಾಸ್ತಿಕಾಯಂಗಳೊಳಗೆ ಸಹಜ ಶುದ್ಧ ಜೀವಾಸ್ತಿಕಾಯಮುಂ ಷಡ್ದ್ರವ್ಯಂಗಳೊಳಗೆ ಸಹಜ ಶುದ್ಧ ಜೀವದ್ರವ್ಯಮುಂ ಸಪ್ತ ತತ್ವಂಗಳೊಳಗೆ ಸಹಜ ಶುದ್ಧ ಜೀವತತ್ವಮುಂ ನವಪದಾರ್ಥಮೆಂಬಿವು ಸಾಕ್ಷಾನ್ಮೋಕ್ಷ ಕಾರಣಮುಕ್ಕುಂ । ಇದು ಶಬ್ದ ಭೇದಮಲ್ಲ । ಅರ್ಥಭೇದಮಲ್ಲ । ಎಂಬುದು ತಾತ್ಪರ್ಯಂ ॥ ಇತಿ ಶ್ರೀಪರಮಾಗಮ ಸಾರಾಖ್ಯ ಗ್ರಂಥಸ್ಸಮಾಪ್ತಃ ॥ ಶ್ರೀರಸ್ತು.

ವಿಷಯ : ಜೈನ ವೇದಾಂತ

ವಿಶೇಷ : ಪ್ರತಿಯೊಂದು ಪುಟದಲ್ಲಿಯೂ ಕೆಂಪು ಬಣ್ಣದ ಚೌಕಟ್ಟುಗಳಿವೆ. ಗ್ರಂಥಾಂತ್ಯದಲ್ಲಿ 24 ತೀರ್ಥಂಕರರ ಹೆಸರು ಮತ್ತು ಅವರ ತಾಯಿತಂದೆಯರ ಹೆಸರುಗಳಿರುವ ಒಂದು ಪಟ್ಟಿ ಇದೆ.

858

ಕೆ. ಎ. ೩೩೨	**ಪರಮಾತ್ಮ ಪ್ರಕಾಶ**	ಗಾಹೆ, ಟೀಕು
೧೩.೨"×೮.೩"	ಯೋಗಿಂದ್ರ ದೇವ	?
೨೪+೨೮೭ ಪುಟ	೨೧ ಪಂಕ್ತಿ	೧೬ ಅಕ್ಷರ

ಆದಿ : ಶ್ರೀಮುಜ್ಜಿತಪುರದ ಪಾರ್ಶ್ವನಾಥಾಯ ನಮಃ ॥

ಓಂ ನಮಃ ಸಿದ್ಧೇಭ್ಯಃ ಪರಮಾತ್ಮಪ್ರಕಾಶಿಕಾ ॥ ಇದು ಹುಂಬುಚ ಮಠದ ಪುಸ್ತಕದಿಂದ ಕಾಪಿ ಮಾಡಲ್ಪಟ್ಟಿದೆ.

ಕಂದ ॥ ನಿರುಪಮನಚಲಿತನವ್ಯಯ
ನರುಜನನಾದ್ಯಂತನಮಲನಾತ್ಮೋತ್ಥ ಸುಖಾ
ಕರನದ್ವೈತನಘಕ್ಷಯ
ಕರನರ್ಹಂ ನೆಲಸುಗೆನ್ನ ಹೃತ್ಸರಸಿಜದೊಳ್ ॥

ಶ್ರೀಯೋಗೀಂದ್ರದೇವರ್ಮಾಡಿದ ಪರಮಾತ್ಮಪ್ರಕಾಶಮೆಂಬ ದೋಹಿ ಚ್ಛಂದದ ಗ್ರಂಥಕ್ಕೆ ಶ್ರೀ ಬ್ರಹ್ಮದೇವರ್ಮಾಡಿದ ವೃತ್ತಿಯಂ ನೋಡಿ ಪ್ರತಿ

ಬುದ್ಧ ಬೋಧನಾರ್ಥಂ ಕರ್ಣಾಟವೃತ್ತಿಯಂ ಪೇಳ್ವೆ ಗ್ರಂಥಕರ್ತಾರಂ ಗ್ರಂಥದ ಮೊವಲೊಳು ಇಷ್ಟದೇವತಾ ನಮಸ್ಕಾರಮಂ ಮಾಡುತ್ತಮೊಂದು ದೋಹಿಯ ಸೂತ್ರಮಂ ಪೇಳ್ದಪರ್ ॥

ಗಾಹೆ ॥ ಜೇ ಝಾ ಯಾ ಝಾಣಂಗಿಯ ಏ ಕಮ್ಮ ಕಳಂಕ ದಹೇವಿ ।
ಣಿಚ್ಚ ಣಿರಂಜಣ ಣಾಣಮಯತೆ ಪರಮಂ ಪಣವೇವಿ ॥ ೧ ॥

ಜೇ–ಆರು ಕೆಲಂಬರು ಮಹಾತ್ಮರು, ಝಾಣಂಗಿಯ ಏ–ವೀತರಾಗ ನಿರ್ವಿಕಲ್ಪ ಸ್ಥಿರಧ್ಯಾನಾಗ್ನಿಯಿಂ, ಕಮ್ಮ ಕಳಂಕ–ದ್ರವ್ಯಭಾವ ನೋಕರ್ಮಮೆಂಬ ಕಲಂಕಮಂ, ದಹೇವಿ–ಸುಟ್ಟು, ಣಿಚ್ಚ–ದ್ರವ್ಯಾರ್ಥಿಕ ನಯದಿ ಟಂಕೋತ್ಕೀರ್ಣ ಜ್ಞಾಯಕೈಕ ಸ್ವಭಾವ ಪರಮಾತ್ಮ ದ್ರವ್ಯ ಸ್ಥಾಪ್ಯನ ಕಾರಣವಾಗಿ ನಿತ್ಯವಿಶೇಷಣಂ ಮಾಡೆ ಪುಟ್ಟುದು.

ಅಂತ್ಯ : ಈ ಸೋಹಯೊಂದಿಂತು ಜಗತ್ರಯ ಕಾಲತ್ರಯದೊಳು ರಾಯವಾಙ್ಮನ ಕರಣತ್ರಯ ಶುದ್ಧಿಯಿಂ ಶುದ್ಧ ನಿಶ್ಚಯ ನಯದಿಂದೆಲ್ಲಾ ಜೀವಂಗಳು ಮಿಂತು ನಿರಂತರಂ ಭಾವನೆಯಂ ಮಾಡಿ ಪಡುವುದೆಂಬುದು ಶ್ರೀ ಯೋಗೀಂದ್ರ ದೇವರಭಿಪ್ರಾಯಂ ॥ ಶ್ರೀ ಕುಕ್ಕುಟಾಸನ ಮಲಧಾರಿ ಬಾಲ ಚಂದ್ರದೇವ ಸ್ಥಿರಂ ಜೀಯಾತ್ ॥

ಇತಿ ಶಖವರ್ಷೇ ೧೭೩೬ ಸಂವತ್ಸರ ಯುವನಾಮ ಸಂವತ್ಸರೇ ಮಾಘ ಶುದ್ಧ ೧ ಚಂದ್ರವಾರ ದ್ವಿತೀಯಾ ಪ್ರಯತ್ನೇನ ನಿರ್ಣಯಃ ॥ ಸಮಾಪ್ತ ಮಂಗಳಂ ಮಹಾ ಶ್ರೀ

ವಿಷಯ : ಜೈನ ವೇದಾಂತ.

ವಿಶೇಷ : ಸಮಗ್ರ, ಗಾಹೆಗಳಿಗೆ ಕನ್ನಡ ಟೀಕು ಇದೆ. ಗ್ರಂಥಾರಂಭದ ಮೊದಲಲ್ಲಿ ೨೪ ಪುಟಗಳ ಮುನ್ನುಡಿ ಇದೆ. ಈ ಪ್ರತಿಯನ್ನು ಹೊಂಬುಚ ಮಠದ ಪುಸ್ತಕದಿಂದ ಕಾಪಿ ಮಾಡಿದೆ, ಹೋಲಿಸಿರುವುದನ್ನು ಕೆಂಪು ಮಸಿಯಿಂದ ಗುರುತಿಸಿದೆ.

859

ಕೆ ೧೯೦/೬	**ಪರಮಾನುಭವಬೋಧೆ**	ತ್ರಿವಿಧ
೧೩.೩." × ೧.೭"	ನಿಜಗುಣಶಿವಯೋಗಿ	ಸು ೧೫೦೦
೨೩೧-೨೭೭ ಪತ್ರ	೯ ಪಂಕ್ತಿ	೬೨ ಅಕ್ಷರ

ಆದಿ : ಪರಮಾನುಭವ ಬೋಧೆಯೆಂಬ ಶಾಸ್ತ್ರವಂನು ಬರೆಯುವುದಕ್ಕೆ ನಿರ್ವಿಘ್ನ ಮಸ್ತು ॥ ರಾಗ ನಾದರಾಮ ಕ್ರಿ ॥

ಶ್ರೀ ಗುರು ಶಂಭುಲಿಂಗದ ಪಾದ ಪಂಕಜ
ವೀಗೆಂನ ಮತಿಗೆ ಮಂಗಳವನೂ ॥

ಪದ॥ ಶ್ರೀಮಹಾದೇವಂಗೆ ಸೋಮಂಗೆ ಸುಖಪೂರ್ನ್ನ
ಧಾಮಂಗೆ ಸತ್ಯಚಿದ್ರೂಪಂಗೆ ಕಾಮಿತಕಲ್ಪಭೂಜಂಗೆ ಶಂಭುವಿಂ
ಗಾಮೋದವೆತ್ತು ನತನಪ್ಪೆ ॥ ೧ ॥

ಅಂತ್ಯ : ಇದು ನಿಜಗುಣಶಿವಯೋಗೀಂದ್ರ ಮುದದಿಂದೆ ಪೇಳಿದ ಯಾಜ್ಞವಲ್ಕಿ ಮೈತ್ರೇಯಿಯಾವದ ಸಂವಾದದೊಳಾರನೆಯ ಸಂಧಿ ಸದಮಳ ಪರಮಾನು ಭವಬಂಧಿ॥ ಯೀ ೫ ಪರಿಶಿಷ್ಟ ನಿರೂಪಣ ಶ್ರೀಶಂಭುಲಿಂಗ ಪಾರ್ವತ್ಯೆ ನ್ನಮಃ॥

ಅಂತು ೬ ನೆಯ ಸಂಧಿಗೆ ಸೂತ್ರ ೨೨ಕ್ಕೆ ಪದ ೧೬೮ಕ್ಕೆ ಮಂಗಳಮಹಾಶ್ರೀ ॥ ಅಂತೂ ಸಂಧಿ ೬ಕ್ಕೆ ಸೂತ್ರ ೧೨೨ಕ್ಕೆ ಪದ ೯೮೫ಕ್ಕೆ ಮಂಗಳ ಮಹಾಶ್ರೀ ಶ್ರೀ ಉಮಾರಮಣನೇ ನಮಃ ॥ ಶ್ರೀ

ಗದ್ಯ ॥ ಸ್ವಸ್ತಿ ಸಮಸ್ತ ಸುರವಿಸರ ಮಕುಟ ಮಣಿಗಣ ಕಿರಣ ಪ್ರಚೂರ ಪ್ರವಾಹ ತರಂಗಿಣೀ ತಟವಿರಾಜಿತ ಪದವಾಜೀವಯುಗಳ ಶ್ರೀ ಶಂಭು ಸತ್ಕೃಪಾಕಟಾಕ್ಷ ಸಾಂದ್ರಚಂದ್ರಿಕಾ ಸಂಕ್ರಾಂತ ನಿರಸ್ತ ನಿಖಿಲ ಸಂಸಾರ ವಿಸ್ಫೂರಿತ ನಿಜಾನಂದ ಸ್ವದನಾಸಕ್ತ ಚಿತ್ತೋಪೇತ ನಿಜಗುಣಾನ್ವಯೋನ ಶಿವಯೋಗಿನಾ ವಿರಚಿತಮಪ್ಪ ಪರಮಾನುಭವ ಬೋಧಾ ನಾಮ ಪ್ರಕರಣ ಪರಿಸಮಾಪ್ತ ಮಂಗಳಮಹಾ ಶ್ರೀ ॥

ವಿಷಯ : ವೀರಶೈವ ವೇದಾಂತಸಾರ.

ವಿಶೇಷ : ಇದರೊಂದಿಗೆ ಪರಮಾರ್ಥ ಪ್ರಕಾಶಿಕೆಯೇ ಮೊದಲಾದ ಇತರ ಷಟ್ ಶಾಸ್ತ್ರಸಂಬಂಧಿ ಗ್ರಂಥಗಳೂ ೬೩ರ ತ್ರಿವಿಧಿಯೂ ಇವೆ.

860

ಕೆ.ಬಿ. ೪೧೨/೫	**ಪರಮಾನುಭವ ಬೋಧೆ**	ತ್ರಿವಿಧಿ
೧೮.೨"×೨"	ನಿಜಗುಣಶಿವಯೋಗಿ	ಸು ೧೫೦೦
೬೯–೧೦೯ ಪತ್ರ	೯ ಪಂಕ್ತಿ	[illegible] ಅಕ್ಷರ

ಆದಿ : ಪರಮಾನುಭವ ಬೋಧೆಯೆಂಬ ಶಾಸ್ತ್ರವಂನು ಬರೆಯುವದಕ್ಕೆ ನಿರ್ವಿಘ್ನೆ
ಮಸ್ತು ॥

ರಾಗ ನಾದರಾಮಕ್ರಿ ॥ ಸೂತ್ರಾ ॥
ಶ್ರೀಗುರುಶಂಭುಲಿಂಗ ಪಾದಪಂಕಜ
ವೀಗೆಂನ ಮತಿಗೆ ಮಂಗಳವನೂ ॥

ಪದಾ ॥ ಶ್ರೀಮಹಾದೇವಂಗೆ ಸೋಮಂಗೆ ಸುಖಪೂರ್ಣ
ಧಾಮಂಗೆ ಸತ್ಯಚಿದ್ರೂಪಂಗೆ ಕಾಮಿತ ಕಲ್ಪಭೂಜಂಗೆ ಶಂಭುವಿಂ
ಗಾಮೋದವೆತ್ತು ನತನಪ್ಪೆ ॥ ೧ ॥

ಅಂತ್ಯ : ಯಿದು ವೇದವೇದಾಂತದೊಳು ಗೋಪ್ಯವಾದರ್ಥ
ವಿದು ಪೌರಾಣಾಗಮಸ್ಮೃತಿಗಳ ಸಾರಾ
ಯಿದು ಪರಮಾರ್ಥದ ತಿರುಳು ತತ್ತ್ವರಹಸ್ಯ
ವಿದು ಪ್ರಾಕೃತವೆ ಯೆಲ್ಲನರಿಯರೆ ॥ ೨ ॥

ಯಿದನನುರಾಗದಿಂದೋದುವ ಜನರಿಗೆ
ಪದಪಿಂದೆ ಕೇಳುವ ಸಾಧಕರಿಗೆ
ಮುದದಿಂದೆ ತಿಳುಪುವ ಬುಧರಿಗೆ ನಿಜಮುಕ್ತಿ
ಪದ ಸಿದ್ಧಿಪುದು ಶಂಭುಕೃಪೆಯಿಂದ್ದಾ ॥ ೩ ॥

ರುತುಗಣನೆಯ ಸಂಧಿ ಸೂತ್ರವಿಪ್ಪತ್ತೆರ
ದತಿಶಯುಮೆನಿಸಿ ತೋರುವ ನೂರು
ನುತಿವೆತ್ತ ಪದ ಪಂಚ್ಯಾಸೀತಿ ಮಿಗಿಲಾದ
ಶತನವದಿಂದ್ದಲೀ ಕೃತಿ ಪೂರ್ಣಾ ॥ ೪ ।.

ಯಿದು ನಿಜಗುಣಶಿವಯೋಗೀಂದ್ರ
ಮುದದಿಂದ್ದೆ ತಿಳಿಯ ಪೇಳಿದ ಯಾಜ್ಞವಲ್ಕಿ ಮೈತ್ರೇಯಿಯಾ
ವದ ಸಂವಾದದೊಳಾರನೆಯ ಸಂಧಿ
ಸದಮಾಳ ಪರಮಾನುಭವಬಂಧೀ ॥ ೫ ॥

ಪರಿಶಿಷ್ಟ ನಿರೂಪಣೆ ಅಂತ್ತು ಸಂಧಿ ೬ ನೆಯ ಸಂಧಿ ಸೂತ್ರ ೨೨ ಕ್ಕೆ ಪದನೂ
೧೬ಕ್ಕೆ ಜಯಮಂಗಳ ಮಹಾಶ್ರೀ ।

ಅಂತು ॥ ಸಂಧಿ ೬ ಕ್ಕೆ ಸೂತ್ರ ೧೨೨ ಕ್ಕೆ ಪದ ೯೮೫ ಕ್ಕೆ ಜಯಮಂಗ್ಗಳ ಮಹಾಶ್ರೀ ಜಯನೂ ॥ ಶಂಭುಲಿಂಗನೇ ನಮಃ ॥

ಗದ್ಯ ॥ ಸ್ವಸ್ತಿ ಸಮಸ್ತ ಸುರವಿಸರ ಮಕುಟ ಮಣಿಗಣಕಿರಣ ಪ್ರಚೂರ ಪ್ರವಾಹತರಂಗ್ಗಿಣೀ ತಟ ವಿರಾಜಿತ ಪದರಾಜೀವಯುಗಳ ಶ್ರೀ ಶಂಭು ಸತ್ಕೃ[.]ಪಾಕಟಾಕ್ಷ ಸಾಂದ್ರ ಚಂದ್ರಿಕಾಸಕ್ರಾಂತ ನಿರಸ್ತ ನಿಖಿಲ ಸಂಸಾರ ವಿಶ್ರಮ ವಿಸ್ಫೂರಿತ ನಿಜಾನಂದ ಸ್ವಾದನಾಕಸ್ತಿ ಚಿತ್ತೋಪೇತ ನಿಜಗುಣಾ ಕ್ವಯೇನ ಶಿವಯೋಗಿನಾ ವಿರಚಿತಮಪ್ಪ ಪರಮಾನುಭವಬೋಧಾ ನಾಮ ಪ್ರಕರಣ ಪರಿಸಮಾಪ್ತ ಜಯಮಂಗಳಮಹಾಶ್ರೀ

ವಿಷಯ : ವೇದಾಂತ.

ವಿಶೇಷ : ಇದು ಯಾಜ್ಞವಲ್ಕ್ಯನು ಮೈತ್ರೇಯಿಗೆ ಉಪದೇಶಿಸಿದ ವೇದಾಂತ ವಿಚಾರದ ಅನುವಾದ ಗ್ರಂಥ. ಈ ಗ್ರಂಥದ ಜೊತೆಗೆ ಇದೇ ಕರ್ತೃವಿನ ಕೈವಲ್ಯ ಪದ್ಧತಿ, ಅರವತ್ತುಮೂವರು ಪ್ರಮಥಗಣಂಗಳ ತ್ರಿವಿಧೀ, ಅನುಭವಸಾರ, ಪರಮಾರ್ಥ ಪ್ರಕಾಶಿಕೆ, ಪರಮಾರ್ಥಗೀತೆ, ವಿವೇಕಚಿಂತಾಮಣಿ ಎಂಬ ಕೃತಿಗಳೂ ಇವೆ.

861

ಕೆ. ೧೬೫/೫	**ಪರಮಾರ್ಥಗೀತೆ**	ಕಂದ, ರಗಳೆ
೧೦-೫" × ೨.೪"	ನಿಜಗುಣಶಿವಯೋಗಿ	ಸು ೧೫೦೦
೧–೧೬ ಪತ್ರ	೧೧ ಪಂಕ್ತಿ	೪೩ ಅಕ್ಷರ

ಆದಿ : ಪರಮಾರ್ತ್ಥಗೀತೆಯಂ ಬರಉದಕ್ಕೆ ಶುಭಮಸ್ತು ॥ ಶ್ರೀ ಶಂಭುಲಿಂಗವೇ ಗತಿ

ಕಂದ ॥ ಶ್ರೀ ಗುರು ನಿಜಶಿಷ್ಯಂಗನು
ರಾಗಂ ಮಿಗೆ ಮುಕ್ತಿಮಾರ್ಗಮಂ ತಿಳುಪಿದನಿದ
ನೀಗಳಾನಿಂತು ಕಂನಡ
ಮಾಗಿರೆ ಸಲೆ ಶುಂಭುಲಿಂಗದೊಲವಿದುಸುರ್ವ್ವೆಂ ॥ ೧ ॥ x x x
ತಂನ ಭಾವಾನುಸಾರ್‍ರಿಗ
ಳುಂನಿಸಲಿ ವೇದ ದೈವ ಗುರುಕುಲವದರ್‍ರಿಂ
ಮುಂನವೆ ತನ್ನಂ ತಿಳಿದೊಡ
ವಂ ನಿಜದಿಂ ನೋಡೆ ವೇದ ಗುರು ದೈವಜ್ಞಂ ॥ ೮ ॥

ಅದು ಕಾರಣದಿಂ ತಾನಿ
ಲ್ಲದೊಡೇನುಂ ತೋಱದಾಗಿ ತನ್ನಂ
ಮೊದಲಱಿಉದು ಪರತತ್ವಂ ಬೇಱಿಂ
ಬುದು ಘಟಿಸದುದೇಕಮೆವೆನಲ್ ಶ್ರುತಿನಿಕರಂ ॥ ೯ ॥

ಗೀತಾಪ್ರಬಂಧ ॥ ಶ್ರೀ ಗುರುವಿಗೆ ಶಿಷ್ಯನು ಪೊಡಮಟ್ಟು
ರಾಗಂ ಮಿಗೆ ಭಕ್ತಿಯೊಳಳವಟ್ಟು
ತಂನ ನಿಜಸ್ಥಿತಿ ತಾನೇನೆಂದು
ಮುಂನಿನ ಪಱಿಭವವೆಂತಾಯ್ತೆಂದು
ಇಂನದು ಪಱಿವಡುಪಾಯುಮಿದೆಂದು
ನಂನಿಯನೆನಗೀಗಳೆ ಪೇಳೆಂದು
ಬಿಂನೈಸಿದೊಡೆ ಗುರೂತ್ತಮನಂದು
ಮಂನಿಸಿದನು ಶಿಷ್ಯನೊಳಿಂತೆಂದು ॥

ಅಂತ್ಯ : ಇದನೋದಿ ಕೇಳಿದವರ್ಗ್ಗೆ
ಲಿದ ಭವಬಂಧವಳಿದು ನಿತ್ಯ ನಿಜಾನಂ
ದದ ಘನಪದವಪ್ಪುದು ತ
ಪ್ಪದು ಸಲೆ ಗುರು ಶಂಭುಲಿಂಗದೊಲವಿಂದಿಳೆಯೊಳ್ ॥ ೩ ॥

ಅಂತು ಗತಿ ೧೧ಕ್ಕೆ ನಿರೂಪಣೆ ೧೧ಕ್ಕೆ ಚರಣ ೧೩೬ಕ್ಕಂ ಮಂಗಳಮಹಾಶ್ರೀ ॥

ಗದ್ಯ॥ ಸ್ವಸ್ತಿ ಸಮಸ್ತಸುರವಿಸರ ಮಕುಟ ಮಣಿಗಣಕಿರಣ ಪ್ರಚೂರ ಪ್ರವಾಹ ತರಂಗಿಣೀತಟ ವಿರಾಜಿತ ಪದ ರಾಜೀವಯುಗಳ ಶ್ರೀಶಂಭುಸತ್ಕೃಪಾಕಟಾಕ್ಷಸಾಂದ್ರ ಚಂದ್ರಿಕಾಸಂಕ್ರಾಂತ ನಿರಸ್ತ ನಿಖಿಲ ಸಂಸಾರ ಶ್ರಮವಿಸ್ಫಾರಿತ ನಿಜಾನಂದಾಸ್ವಾದನಾಸಕ್ತ ಚಿತ್ತೋಪೇತ ನಿಜಗುಣಹ್ವಂಯೇನ ಶಿವಯೋಗಿನಾ ವಿರಚಿತಮಪ್ಪ ಪರಮಾರ್ತ್ಥಗೀತನಾಮ ಪ್ರಕರಣಂ ಪರಿಸಮಾಪ್ತಂ ಇಂತೀ ಪ್ರಕರಣಕ್ಕೆ ಗತಿ ೧೧ ಕ್ಕೆ ಕಂದ ೩೨ ಕ್ಕೆ ನಿರೂಪಣೆ ೧೨೧ ಚರಣ ೧೪೯೬ ಕ್ಕಂ ಮಂಗಳಮಹಾ ಶ್ರೀ ॥

ವಿಷಯ : ವೇದಾಂತ ವಿಚಾರ.

ವಿಶೇಷ : ಗ್ರಂಥ ಸುಸ್ಥಿತಿಯಲ್ಲಿದೆ. ಕೆಲವುಕಡೆ ಶಕಟರೇಫವಿದೆ. ಇದರೊಂದಿಗೆ ೧ ಜಯಸ್ತೋತ್ರ (ಬಿರುದಾವಳಿ ವಿವರ), ೨ ಅನುಭವಸೂತ್ರ ೩ ವಿಶೇಷಾರ್ಥ ಪ್ರಕಾಶಿಕಾ, ೪ ಪರಮರಹಸ್ಯ, ೫ ಮನೋವಿಜಯಕಾವ್ಯ, ೬ ಪರಮಾರ್ಥ

ಗೀತೆ, ೭ ಶಿವಸ್ರೂಜಾವಿಧಿ, ೮ ಮೂರೇಳು ದೀಕ್ಷಾಪ್ರಶಸ್ತಿ ಮತ್ತು ರಸ ಸಿಂಧೂರ ಕ್ರಮ ಇವುಗಳೂ ಇರುತ್ತವೆ.

862

ಕೆ. ೧೯೦/೪	**ಪರಮಾರ್ಥಗೀತೆ**	ಕಂದ, ರಗಳೆ
೧೩.೩" × ೧.೭"	ನಿಜಗುಣಶಿವಯೋಗಿ	ಸು. ೧೫೦೦
೧೯೪-೨೧೦ ಪತ್ರ	೯ ಪತ್ರ	೬೨ ಅಕ್ಷರ

ಆದಿ: ಪರಮಾತ್ಥರ್ಗೀತೆ ಬರೆಯುವದಕ್ಕೆ ನಿರ್ವಿಘ್ನಮಸ್ತೂ

ಕಂದ ॥ ಶ್ರೀ ಗುರು ನಿಜಶಿಷ್ಯಂಗನು
ರಾಗಂ ಮಿಗೆ ಮುಕ್ತಿಮಾರ್ಗಮಂ ತಿಳುಪಿದನದ
ನೀಗಳಾನಿಂತು ಕಂನಡ
ಮಾಗಿರೆ ಸಲೆ ಶಂಭುಲಿಂಗದೊಲವಿಂದುಸುರ್ವೆಂ ॥ ೧ ॥

ಅಂತ್ಯ: ಇದನೋದಿ ಕೇಳಿ ತಿಳಿದವ
ಗೊರ್ದವಿದ ಭವಬಂಧವಳಿತು ನಿತ್ಯ ನಿಜಾನಂ
ದದ ಘನಪದವಪ್ಪುದು ತ
ಪ್ಪದು ಸಲೆ ಗುರುಶಂಭುಲಿಂಗದೊಲವಿಂದಿಳೆಯೊಳ್ ॥ ೩ ॥

ಅಂತು ಗತಿ ೧೧ ಕ್ಕೆ ನಿರೂಪಣೆ ೧೧ ಕ್ಕೆ ಚರಣ ೧೩೭ ಕ್ಕಂ ಮಂಗಳಮಹಾ ಶ್ರೀ ॥ ಗೋಕರ್ನಮಹಾಬಲೇಶ ಅರ್ಕೇಶ್ವರಲಿಂಗನೇ ನಮಃ ॥

ಗದ್ಯ ॥ ಸ್ವಸ್ತಿ ಸಮಸ್ತ ಸುರವಿಸರ ಮುಕುಟ ಮಣಿಗಣಕಿರಣ ಪ್ರಚೂರ ಪ್ರವಾಹ ತರಂಗಿಣೀ ತಟವಿರಾಜಿತ ಪದರಾಜೀವ ಯುಗಳ ಶ್ರೀ ಶಂಭು ಸತ್ಕೃಪಾ ಕಟಾಕ್ಷ ಸಾಂದ್ರ ಚಂದ್ರಿಕಾ ಸಂಕ್ರಾಂತ ನಿರಸ್ತ ನಿಖಿಲಸಂಸಾರ ಶ್ರಮವಿಸ್ಫೂರಿತ ನಿಜಾನಂದಸ್ವಾದನಾಶ್ಸಕ್ತ ಚಿತ್ತೋಪೇತ ನಿಜಗುಣಾ ಹ್ವಯೇನ ಶಿವಯೋಗಿನಾ ವಿರಚಿತಮಪ್ಪ ಪರಮಾತ್ಥರ್ಗೀತಾ ನಾಮ ಪ್ರಕಾರಣಂ ಪರಿಸಮಾಪ್ತ। ಯಿಂತೀ ಪ್ರಕರಣಕ್ಕೆ ಗತಿ ೧೧ ಕೆ ಕಂದ ೩೨ ಕ್ಕೆ ನಿರೂಪಣೆ ೧೨೧ ಚರಣ ೧೪೯೭ ಕ್ಕಂ ಮಂಗಳಮಹಾ ಶ್ರೀ

ವಿಷಯ: ವೇದಾಂತ ವಿಚಾರ.

ವಿಶೇಷ: ಇದರೊಂದಿಗೆ ಅನುಭವಸಾರವೇ ಮೊದಲಾದ ಷಟ್‌ಶಾಸ್ತ್ರಕ್ಕೆ ಸೇರಿದ ಇತರ ಗ್ರಂಥಗಳೂ ೬೩ ಪುರಾತನರ ತ್ರಿವಿಧಿಯೂ ಇರುತ್ತವೆ.

863

ಕೆ. ೩೧೨/೩	ಪರಮಾರ್ಥಗೀತೆ	ಕಂದ, ರಗಳೆ
೧೮.೨″ × ೨″	ನಿಜಗುಣಶಿವಯೋಗಿ	ಸು. ೧೫೦೦
೩೭_೫೧ ಪತ್ರ	೯ ಪಂಕ್ತಿ	೭೦ ಅಕ್ಷರ

ಆದಿ : ಪರಮಾರ್ತ್ಥ ಗೀತೆ ಬರೆಯವುದಕ್ಕೆ ನಿರ್ವಿಘ್ನಮಸ್ತು ||

ಕಂದಾ || ಶ್ರೀಗುರು ನಿಜಶಿಷ್ಯಂಗನು
ರಾಗಂ ಮಿಗೆ ಮುಕ್ತಿಮಾರ್ಗಮಂ ತಿಳುಪಿದನದ
ನೀಗಳಾನಿಂತ್ತು ಕಂನಡ
ಮಾಗಿರೆ ಸಲೆ ಶಂಭುಲಿಂಗದೊಲವಿಂದುಸುರ್ವೆಂ || ೧ || x x x

ಗೀತಾ ಪ್ರಬಂಧ || ಶ್ರೀಗುರುವಿಗೆ ಶಿಷ್ಯನು ಪೊಡಮಟ್ಟು
ರಾಗಂ ಮಿಗೆ ಭಕ್ತಿಯೊಳಳವಟ್ಟು
ತಂನ ನಿಜಸ್ಥಿತಿ ತಾನೆಂದು
ಮುಂನಿನ ಪರಿಭವವೆಂತಾಯ್ತೆಂದೂ || ೧೦ || x x x

ಅಂತ್ಯ : ಶ್ರೀಗುರು ಪೇಳ್ದ ಮಹಾವಿದ್ಯೆಯೊಳು
ರಾಗಿಪ ಶಿಶ್ಯಾಬೋಧಾಬ್ಧಿಯೊಳು
ಕೈವಲ್ಯೋಪಾಯಾವೃತಮಿರ್ಕು
ಸೇವಿತ ಸುಜನರ್ಗಮರತೆ ಬರ್ಕು ||

ಕಂದಾ || ಗತಿ ಪಂನೊಂದನೆಯದಿದಾ
ಯತಮಾದ ನಿರೂಪಣಂಗಳೇಕಾದಶವಂ
ತತಿಶಯಮಾಗಿರೆ ತಿಳಿಯ
ಲ್ಪ್ರತಿವಲ್ಲಿಂ ಯೋಗಿವರನ ಚರಿತ್ರಂ || ೧ ||

ಶ್ರುತಿ ಪುರಾಣೇತಿಹಾಸ
ಸ್ಮೃತಿಯರ್ತ್ಥದನಿಂತು ಕಂನಡಿಸಿದಂ ನಿಜಗುಣ
ಯತಿ ಶಂಭುಲಿಂಗದೊಲವಂ
ಕ್ಷಿತಿಯ ಮುಮುಕ್ಷುಗಳಿಂದಂ ಪರೀಕ್ಷಿಪುದನಿಶಂ || ೨ ||

ಯಿದನೋದಿ ಕೇಳಿ ತಿಳಿದವರ್ಗೊದವಿದ
ರ್ಗೊದವಿದ ಭವಬಂಧವಳಿತು ನಿತ್ಯ ನಿಜಾನಂ
ದದ ಘನಪದವಪ್ಪುದು ತ
ಪ್ಪದು ಸಲೆ ಗುರುಶಂಭುಲಿಂಗದೊಲವಿಂದಿಳೆಯೊಳ್ || ೩ ||

ಅಂತು ಗತಿ ೧೧ ಕ್ಕೆ ನಿರೂಪಣೆ ೧೧ ಕ್ಕೆ ಚರಣ ೧೩೬ ಕ್ಕಂ ಜಯ ಮಂಗಳ ಮಹಾ ಶ್ರೀ ||

ಗದ್ಯಾ || ಸ್ವಸ್ತಿ ಸಮಸ್ತ ಸುರವಿಸರ ಮಕುಟಮಣಿಗಣಕಿರಣ ಪ್ರಚೂರ ಪ್ರವಾಹ ತರಂಗಿಣೀ ತಟವಿರಾಜಿತ ಪದರಾಜೀವಯುಗಳ ಶ್ರೀ ಶಂಭುಲಿಂಗ ಸತ್ಕೃಪಾಕಟಾಕ್ಷ ಸಾಂದ್ರ ಚಂದ್ರಿಕಾಸಕ್ರಾಂತ ನಿರಸ್ತನಿಖಿಲಸಂಸಾರ ಶ್ರಮ ವಿಸ್ಫುರಿತ ನಿಜಾನಂದ ಸ್ವಾದನಾಸಕ್ತ ಚಿತ್ತೋಪೇತ ನಿಜಗುಣಾಹ್ವಯೇನ ಶಿವಯೋಗಿನಾ ವಿರಚಿತಮಪ್ಪ ಪರಮಾರ್ತ್ಥಗೀತಾ ನಾಮ ಪ್ರಕರಣಂ ಪರಿಸಮಾಪ್ತಾ || ಯಿಂತೀ ಪ್ರಕರಣಕ್ಕೆ ಗತಿ ೧೧ ಕ್ಕೆ ಕಂದ ೩೨ ಕ್ಕೆ ನಿರೂಪಣೆ ೧೨೧ ಚರಣ || ೧೪೪೬ ಕ್ಕಂ ಜಯ ಮಂಗಳ ಮಹಾ ಶ್ರೀ ||

ವಿಷಯ : ವೇದಾಂತ ವಿಚಾರ.

ವಿಶೇಷ : ಪ್ರತಿ ಸುಸ್ಥಿತಿಯಲ್ಲಿದೆ. ಈ ಗ್ರಂಥದೊಂದಿಗೆ ಕೈವಲ್ಯ ಪದ್ಧತಿ, ಅರವತ್ತು ಮೂರು ಪ್ರಮಥ ಗಣಂಗಳ ತ್ರಿವಿಧಿ, ಅನುಭವಸಾರ, ಪರಮಾನುಭವ ಬೋಧೆ, ಪರಮಾರ್ಥಪ್ರಕಾಶಿಕೆ ಮತ್ತು ವಿವೇಕಚಿಂತಾಮಣಿ ಗ್ರಂಥಗಳೂ ಇವೆ.

864

ಕೆ. ೩೨೯/೧	**ಪರಮಾರ್ಥಗೀತೆ**	ಕಂದ, ರಗಳೆ
೬.೭"×೨"	ನಿಜಗುಣ ಶಿವಯೋಗಿ	ಸು. ೧೫೦೦
೧೦೯–೧೩೪ ಪತ್ರ	೧೧ ಪಂಕ್ತಿ	೩೨ ಅಕ್ಷರ

ಆದಿ : ಪರಮಾರ್ಥಗೀತೆ |
ಶ್ರೀಗುರುಗೆ ನಿಜ ಶಿಷ್ಯಂಗನು
ರಾಗಂ ಮಿಗೆ ಮುಕ್ತಿಮಾರ್ಗ್ಗಮಂ ತಿಳುಪಿದನದ
ನೀಗಳಾನಿಂತು ಕನ್ನಡ
ಮಾಗಿರೆ ಸಲೆ ಶಂಭುಲಿಂಗದೊಲವಿಂದುಸುರ್ವೆಂ || ೧ ||

ಮುಂನವೆ ಭಕ್ತಿಕ್ರಿಯೆಯಿಂ
ದಂ ನೆರೆ ಪರಿಶುದ್ಧವಾದ ಬುದ್ಧಿಯನುಳ್ಳಾ ಸ
ಮುಂನತ ಸದ್ಗುಣಗಣಸಂ
ಪಂನ್ನರ್ಗ್ಗೆ ನಿಜಸ್ವಪಮಿದರೊಳ್ಸಾಧ್ಯಂ || ೨ ||

(೧೧೦ ನೆಯ ಪತ್ರ) ಕೇಳಲೆ ವಾಷಿಷ್ಟಾದಿಗಳಲ್ಲಿ
ಪೇಳಿವ ತತ್ವಾರ್ಥವನೆಂದಿಲ್ಲಿ
ಸಿನಗರುಪುವೆ ನಾಸೀ ಗೀತೆಯೊಳುಂ
ತನುಜನೆ ಕೇಳಿ ತಿಳಿವುದೊಲವಿನೊಳಂ ‖ ೧ ‖

ಅಂತ್ಯ : ಯಿದನೋದಿ ಕೇಳಿ ತಿಳಿದ
ಗೋದವಿದ ಭವಬಂಧವಳಿದು ನಿತ್ಯ ನಿಜಾನಂ
ದದ ಘನಪದವಪ್ಪುದು ತ
ಪ್ಪದು ಸಲೆ ಗುರು ಶಂಭುಲಿಂಗದೊಲವಿಂದಿಳೆಯೊಳ್ ‖ ೧ ‖

ಅಂತು ಕಂದ ೩೨ ಕ್ಕಂ ಗದ್ಯ ಸ್ವಸ್ತಿ ಸಮಸ್ತ ಸುರವಿಸರ ಮುಕುಟ ಮಣಿಗಣ ಕಿರಣಪ್ರಚುರ ಪ್ರವಾಹ ತರಂಗಿಣೀತಟ ವಿರಾಜಿತ ಚರಣಕಮಲಯುಗಳ ಶ್ರೀ ಶಂಭುಕೃಪಾಕಟಾಕ್ಷ ಸಾಂದ್ರ ಚಂದ್ರಿಕಾ ಸಂಕ್ರಾಂತ ನಿರಸ್ತ ನಿಖಿಲ ಸಂಸಾರಶ್ರಮ ವಿಸ್ಫಾರಿತ ನಿಜಾನಂದಾಸ್ವಾದನಾಸಕ್ತ ಚಿತ್ತೋಪೇತ ನಿಜ ಗುಣಾಹ್ವಯ ಶಿವಯೋಗಿನಾ ವಿರಚಿತಮಪ್ಪ ಪರಮಾರ್ಥಗೀತಾ ನಾವ ಪ್ರಕರಣಂ ಪರಿಸಮಾಪ್ತಂ। ಯಿೂ ಪ್ರಕರಣ ಗತಿ ೧೧ ನಿರೂಪಣೆ ೧೨೧ ಕ್ಕಂ ಚರಣ ೧೪೯೬ ಕ್ಕಂ ಪರಮಾರ್ಥಗೀತೆ ಸಂಪೂರ್ನ್ನಂ ಮಂಗಳ ಮಹಾ ಶ್ರೀ‖

ವಿಷಯ : ವೇದಾಂತ ವಿಚಾರ.

ವಿಶೇಷ : ಈ ಕಟ್ಟನಲ್ಲಿ ಪರಮಾರ್ಥಪ್ರಕಾಶಿಕೆ ಎಂಬ ಮತ್ತೊಂದು ಗ್ರಂಥವಿದೆ.

865

ಕೆ. ಬಿ. ೩೪೪/೪	**ಪರಮಾರ್ಥ ಗೀತೆ (ಸಟೀಕು)**	ಪದ್ಯ, ಟೀಕು
೭.೪"×೬"	ಸಿದ್ಧಾಂತಿ ಸುಬ್ರಹ್ಮಣ್ಯ ಶಿವಯೋಗಿ	೨೦ನೇ ಶತಕ
೧–೧೨೦ ಪುಟ	೧೫ ಪಂಕ್ತಿ	೧೯ ಅಕ್ಷರ

ಆದಿ : ಪಾರಮಾರ್ಥಗೀತೆ ಟೀಕು ಸಹ ‖ ಸ್ವ ೧೮೮೦ ನೆಯ ಯ್ಸಿವಿ । ಸಂ। ವಿಕ್ರಮ । ಬಾನ ಪ್ರಾಕಾಶಿಕ ಅಂದರೆ ಪಾರಮಾರ್ಥಗೀತೆಗೆ ತಾತ್ಪರ್ಯವು ‖

ಕಂದ ‖ ಶಿವತತ್ವಂ ಶಿವಲಿಂಗಂ
ಶಿವರೂಪಂ ಶಿವಗುಣಂ ಶಿವಂ ಶಾಂತ
ಶಿವಯೋಗಂ ಶಿವಲೋಕಂ
ಶಿವಮಾತ್ರಂ ಮಾಳ್ಕೆ ಶೈವಜನಕಭಿಲಾಷಿತಂ ‖ ಪಲ್ಲ ‖

ಶರಣಜನರಿದನರಿತು ಸುಖಿಸಲಿ
ಹರನ ಚಿತ್ಸುಖ ಮಾತ್ರದೊಳಗೆಂ
ದೊರೆದನೀ ಪರಮಾರ್ಥಗೀತೆಯ ನಿಜಗುಣಾರಾಧ್ಯಂ
ಗುರುಕೃಪೆಯೊಳದರಾಶಯಂಗಳ
ನರುಹಲೀ ಭಾವಪ್ರಕಾಶಿಕ
....ಮಂ ಸಿದ್ಧಾಂತ ಸುಬ್ರಮಂಣ್ಯಶಾಸ್ತ್ರಿ ಶಿವಯೋಗಿ ||

x x x x

ಕಂದ || ಶ್ರೀ ಗುರು ನಿಜಶಿಷ್ಯಂಗನು
ರಾಗಂ ಮಿಗೆ ಮುಕ್ತಿಮಾರ್ಗಮಂ ತಿಳುಪಿದನದ
ನೀಗಾನಿಂತೀ ಕಂನಡ
ಮಾಗಿರೆ ಸಲೆ ಶಂಭುಲಿಂಗದೊಲವಿಂದುಸುರ್ವೆಂ ||

ಟೀಕು || ಶ್ರೀ ಮಸ್ತ್ಸಮಸ್ತ ನಿಗಮಾಗಮ ಪೂರಾಣದಿಗಳಲ್ಲಿ ಗುರುಶಿಷ್ಯ ಸಂವಾದರೂಪಮಾಗಿರುವ ಮೋಕ್ಷಶಾಸ್ತ್ರ ಸಿದ್ಧಾಂತಸಾರವಾದ ಅರ್ತ್ಥವಂನ್ನು ಶಂಭುಲಿಂಗ ಪ್ರಸಾದದಿಂದ ಯೀಗ ನಾನು ಕಂನಡ ಭಾಷೆಯಲ್ಲಿ ಪೆಳುತೇನೆ ||

ಅಂತ್ಯ : ಈ ಗುರು ಶಿಷ್ಯಸಂವಾದದಲ್ಲಿ ಬ್ರಹ್ಮವಿದ್ಯಾ ವಿಚಾರವೂ ವೇದಾಂತ ರಹಸ್ಯಾನುಭವವೂ ಮೋಕ್ಷಸಾಧನೋಪಾಯಗಳೂ ಧಿಟವಾಗಿಯೂ ಸುಲಭವಾಗಿಯೂ ಸಿದ್ಧಿಪುದರಿಂದ ಇದನು ಕೇಳಿ ಪಠಿಸಿ ಅರ್ಥವಿಚಾರ ಮಾಡಿ ಪರಾಮರಿಕೆಗೊಂಡು ಅನುಭವಿಸಿ ಪರೀಕ್ಷಿಸಿ ತಿಳಿದು ನಂಬಿ x x x x ಶ್ರೀ ನಿಜಗುಣಾರಾಧ್ಯರೆಂಬುವ ಶಿವಯೋಗಿಗಳು ನಿಗಮಾಗಮಾಸಾರ ಹೃದಯವಾಗಿ ಈ ಪರಮಾರ್ಥಗೀತೆಯುಂ ಪೇಳಿದರು ||೧೨|| ಶ್ರೀ

ಅಂತು ಗತಿ ೧೧ ಕ್ಕಂ ನಿರೂಪಣ ೧೨೧ ಕ್ಕಂ ಚರಣ ೧೪೬೯ ಕ್ಕಂ ಮಂಗಳ ಮಸ್ತು || ಇತಿ ಶ್ರೀ ಮದ್ಬ್ರಹ್ಮಾನಂದ ಯೋಗೀಂದ್ರಪ್ರಸಾದ ಪರಿಲಬ್ಧ ಬ್ರಹ್ಮವಿದ್ಯಾ ವೈಶದ್ಯ ವಿದ್ಯೋತಮಾನ ಶ್ರೀ ಶಂಕರಾನಂದ ಸೇವಾಸಮಧಿಗತ ಶಿವಯೋಗಭೋಗಿ ಶ್ರೀ ಮತ್ಕಲ್ಯಾಣನಗರ ಸಿದ್ಧಾಂತಿ ಸುಬ್ರಹ್ಮಣ್ಯ ಶಿವಯೋಗಿ ಪ್ರಣೀತಮಾದ ಭಾವಾರ್ಥಪ್ರಕಾಶಿಕೆ ಎಂಬ ಪರಮಾರ್ಥ ಗೀತಾತಾತ್ಪರ್ಯವು ಸಂಪೂರ್ಣವಾದುದು.

ವಿಷಯ : ನಿಜಗುಣ ಶಿವಯೋಗಿಗಳ ಪರಮಾರ್ಥಗೀತೆಯ ಟೀಕು (ವೇದಾಂತ).

ವಿಶೇಷ : ಟೀಕಿಗೆ ಭಾವಾರ್ಥಪ್ರಕಾಶಿಕಾ ಎಂದು ಹೆಸರಿಸಿದೆ. ಈ ಗ್ರಂಥಾರಂಭಕ್ಕೆ ಮೊದಲು ಆರು ಪುಟಗಣಲ್ಲಿ ವಿಷಯಸೂಚಿ ಇದೆ. ಇದರೊಡನೆ ವೃಷಭಗೀತೆ, ಅವಧೂತಗೀತೆ, ಪಂಚವಿಂಶತಿಲೀಲೆ ಎಂಬ ಮೂರು ಕೃತಿಗಳಿವೆ. ಪುಸ್ತಕದ ಕೊನೆಯ ಆರು ಪುಟಗಳಲ್ಲಿ ಮುಗ್ಗಿಕೋಷ್ಟಕ ಮತ್ತು ಶುಭಾಶುಭ ಫಲ ಬೋಧಕ ಚಕ್ರ ಇವೆ.

866

ಕೆ. ೧೯೦/೭	ಪರಮಾರ್ಥಪ್ರಕಾಶಿಕೆ	ಗದ್ಯ
೧೩.೨″ × ೧.೭″	ನಿಜಗುಣ ಶಿವಯೋಗಿ	ಸು. ೧೫೦೦
೨೭೮-೩೨೨ ಪತ್ರ	೯ ಪಂಕ್ತಿ	೬೨ ಅಕ್ಷರ

ಆದಿ : ಶ್ರೀ ಸರ್ವಸಿದ್ಧಿಪ್ರದಾಯಕನೇ ನಮಃ । ಶ್ರೀಗುರು ಬಸವಲಿಂಗನೇ ನಮಃ ! ಶ್ರೀ ಶಂಭುಲಿಂಗ ನಿಜಗುಣಶಿವಯೋಗಿ ಪ್ರಮಥಗಣಾಧೀಶ್ವರರೇ ನಮಃ । ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪರಶಿವಪಾದ ಯುಗಳ ಕಮಲಿನೀ ರಾಜಶ್ರೀ ನಿಜಗುಣಾರ್ಯರು ನಿರೂಪಿಸಿದ ಪರ ಮಾರ್ಥ ಪ್ರಕಾಶಿಕೆಯೆಂಬ ಶಿವಯೋಗಶಾಸ್ತ್ರವಂನು ಬರೆಯುವದಕ್ಕೆ ಶುಭಮಸ್ತು॥ ನಿರ್ವಿಘ್ನಮಸ್ತು॥

ಗದ್ಯ॥ ಶ್ರೀಮದನಂತಕೋಟಿ ಬ್ರಹ್ಮಾಂಡಪಿಂಡಾಂಡ ತತ್ವ ತಾತ್ವಿಕ ಮಾಯಾ ಬಿಂದು ಮುಖ್ಯಚೇತನಾಚೇತನಾತ್ಮಕ ವಿಶ್ವಪ್ರಪಂಚದೊಳಹೊರ ಗೆಲ್ಲಿಯೂ ಪರಿಪೂರ್ನ್ನವಾಗಿ ಸರ್ವಧಾರಕತ್ವ ಸರ್ವ್ವಸಾಕ್ಷಿಕತ್ವ ಸರ್ವ ಶಕ್ತಿತ್ವ ಸರ್ವ್ವಾನುಗ್ರಹಕತ್ವಾದಿಗಳುಳ್ಳ ಸರ್ವಕಾಲ ಕರ್ಮ್ಮಾರ್ತ್ಥಂ ಗಳೆಲ್ಲವನೇಕಕಾಲದಲ್ಲಿ ನಿರ್ವ್ವಿಕಾರತ್ವದಿಂದರಿವ ನಿತ್ಯನಿರ್ಮಳ ನಿರ್ವಿಕಲ್ಪ ನಿರಾವರಣ ನಿರತಿಶಯಾದ್ವಿತೀಯಮಪ್ಪ ಸತ್ಯಸ್ವಯಂಪ್ರಕಾಶ ಸಂವಿ ದ್ರೂಪಮಾದ ಶಂಭುಲಿಂಗದನುಮತದಿಂ ಸಮ್ಯಜ್ಞಾನಸಂಪಂನನೆನಿಪ ನಿಜ ಗುಣಶಿವಯೋಗಿ ಆದಿಮಿತ್ರು ಬಂಧುತ್ವದಿಂ ನೆನದು ನೋಡಿ ಸಂಸ್ಕೃತ ಶಬ್ದ ವ್ಯಾಕರಣ ಪ್ರಮಾಣಾದಿಗಳ ಲಕ್ಷಣಶಿಕ್ಷೆಗಳೆಲ್ಲದ ಮೋಕ್ಷಮಾತ್ರಾ ಪೇಕ್ಷಿತರಾದ ಸಾದುಜನಂಗಳಾಯಾಸವಿನಿತಿಲ್ಲದೋದಿ ಕೇಳಿ ತಿಳಿದು ಕೃತಾರ್ತ್ಥರಾಗಲೆಂದು ಶಿವಯೋಗ ಪ್ರದೀಪಿಕೆಯೆಂಬ ವಿಶಿಷ್ಟ ಯೋಗ ಶಾಸ್ತ್ರಗ್ರಂಥಗಳನ್ವಯ ತಾತ್ಪರ್ಯವನೇ

ಅಂತ್ಯ : ಇತಿ ಶ್ರೀ ನಿಜಗುಣಶಿವಯೋಗೀಂದ್ರ ವಿರಚಿತಮಾದ ಪರಮಾರ್ತ್ಥ ಪ್ರಕಾ ಶಿಕೆಯಲ್ಲಿ ಪಂಚಮಪರಿಚ್ಛೇದಃ ॥ ಶ್ರೀ

ಗದ್ಯ || ಯಿದು ನಿಜಗುಣ ಶಿವಯೋಗೀಂದ್ರ ಶಂಭುಲಿಂಗದೊಲವಿಂದಖಿಳ ವೇದ ವೇದಾಂತ್ತಾಗಮ ಸ್ಮೃತಿ ಪುರಾಣೇತೀಹಾಸ ಪುರಾತನರ ಗೀತಾದಿಗಳ ಯೋಗಪಾದದ ಪರಮರಹಸ್ಯಾರ್ತ್ಥಂಗಳಂ ಪ್ರಸ್ತುತಮೆನೆ ವಿಸ್ತರಿಸಿರ್ದ್ದ ಶಿವಯೋಗಪ್ರದೀಪಿಕೆಯೆಂಬ ಸಮ್ಯಗನುಭವಗ್ರಂಥಾನ್ವಯ ತಾತ್ಪರ್ಯ್ಯಂಗಳನೆ ಕಂನ್ನಡಿಸಿ ಕರತಳಾಮಳಕವಾಗಿ ಪೇಳಿದ ಪರಮಾರ್ತ್ಥ ಪ್ರಕಾಶಿಕೆಯೆಂಬ ಪ್ರಕರಣವಿದು ಪದುಳದಿಂದೊಂಮ್ಮೆ ಬರದೋದಿ ಕೇಳಿದವಗರ್ಗ್ಗಕ್ಷಣದಲ್ಲಿಯೆ ಸರ್ವ್ವಪಾಪಕ್ಷಯ । ಸಮಸ್ತದುಃಖನಿವೃತ್ತಿ ಸದ್ಧರ್ಮ್ಮಾಭಿವೃದ್ಧಿ ಸಂಶಯನಿರುಹರಣ ಬುದ್ಧಿಶುದ್ಧಿ ವಿರಕ್ತಿ ವಿವೇಕ ಶಿವಯೋಗಸಂಪತ್ತಿ ಸಮುಂನ್ನತಸಿದ್ಧಿ ಮುಕ್ತಿಗಳಂ ಮಾಳ್ಪುದು ಸತ್ಯವಹುದಾಗಿ ಸಾಧಕ ಜನಂಗಳನ್ಯಶಾಸ್ತ್ರಸಂಭ್ರಮಗಳಲ್ಲಿ ಸಾಯಸಂಗೊಳುತಿದನೆ ಶ್ರದ್ಧಾಭಕ್ತಿಪೂರ್ವ್ವಕವಾಗಿ ಶ್ರೀ ಗುರುಮುಖದಿಂ ತಿಳಿದು ಕೃತಾರ್ತ್ಥರಾಗಲೆಂಬಾಶೀರ್ವಾದಾ ಲಕ್ಷಣ ಮಂಗಲಾಚರಣದಿಂದಿದು ಪರಿಸಮಾಪ್ತಂ ಮಂಗಳಮಹಾ ಶ್ರೀ ಗುರುಸಿದ್ಧರಾಮೇಶ್ವರ ಮಹಾಲಿಂಗ ಮಲ್ಲಿಕಾರ್ಜ್ಜನ ಭ್ರಮರಾಂಬಿಕಾಯ ನಮಃ ಶ್ರೀ ನಿರ್ವ್ವಿಘ್ನದಾಯಕ ವಡಬಾನಳ ಶ್ರೀ ವೀರಭದ್ರಷಣ್ಮುಖ ಬಸವಾದಿ ಪ್ರಮಥಗಣಾಧ್ಯಕ್ಷರು ಮುಂತಾದ ಮಹಾಶರಣ ನಿಜಗುಣಶಿವಯೋಗಿಗಳ ಚರಣಾರವಿಂದಾಭ್ಯೋ ನಮಃ|| ಶ್ರೀ|| ಸ್ವಸ್ತಿ ಸಮಸ್ತ ಸುರವಿಸರ ಮಕುಟಮಣಿಗಣ ಕಿರಣ ಪ್ರಚೂರ ಪ್ರವಾಹತರಂಗಿಣೀ ತಟವಿರಾಜಿತ ಪದರಾಜೀವಯುಗಳ ಶ್ರೀ ಶಂಭುಲಿಂಗ ಸತ್ಕೃಪಾಕಟಾಕ್ಷ ಸಾಂದ್ರ ಚಂದ್ರಿಕಾ ಸಂಕ್ರಾಂತ ನಿರಸ್ತ ನಿಖಿಲ ಸಂಸಾರಶ್ರಮ ವಿಸ್ಫೂರಿತ ನಿಜಾನಂದಾಸ್ವಾದನಾಸಕ್ತ ಚಿತೋಪೇತ ಶ್ರೀ ನಿಜಗುಣಾಹ್ವಯೇನ ಶಿವಯೋಗಿನಾಂ ವಿರಚಿತಮಪ್ಪ ಪರಮಾರ್ತ್ಥ ಪ್ರಕಾಶಿಕಾನಾಮ ಪ್ರಕರಣಂ ಪರಿಸಮಾಪ್ತ ಮಂಗಳಮಹಾ ಶ್ರೀ ||

ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯ್ಯ ವರ್ಯ್ಯ ಪರಶಿವಪಾದ ಯುಗಳ ಶ್ರೀ ಶಂಭುಲಿಂಗ ಸತ್ಕೃಪಾಕಟಾಕ್ಷಸಾಂದ್ರ ಚಂದ್ರಿಕಾ ಶ್ರೀ ಮತ್ಸಹಜಾನಂದ ಸದ್ಗುರು ಬ್ರಹ್ಮಾನಂದಮೂರ್ತಿ || ಶ್ರೀ ನಿಜಗುಣಶಿವಯೋಗೀಶ್ವರರು ನಿರೂಪಿಸಿದ ಷಟ್ಶಾಸ್ತ್ರ ಅರುವತ್ತುಮೂರುಮಂದಿ ಪುರಾತರ || ತ್ರಿವಿಧಿ ಸಹ ಯೇಕಸಂಪುಟದಲ್ಲಿ ಸೇರ್ಪಡಿಸಿ ಬರೆದುಯಿರುವಂತ್ತಾ ವಿವರ ಮೆಂತೆಂದೊಡೆ || ಪ್ರಥಮದಲ್ಲಿ ಸ್ವರವಚನಂಗಳ ಶಾಸ್ತ್ರದ ಬಗೆ ೧ ಕ್ಕೆ ವಾಲೆ ೪೬, ದ್ವಿತೀಯದಲ್ಲಿ ಪುರಾತರ ತ್ರಿವಿಧಿ ಶಾಸ್ತ್ರದ ಬಗೆ ೧ ಕ್ಕೆ ವಾಲೆ ೪, ತೃತೀಯದಲ್ಲಿ ವಿವೇಕಚಿಂತಾಮಣಿಶಾಸ್ತ್ರದ ಬಗೆ ೧ ಕ್ಕೆ ವಾಲೆ ೧೪೩, ಚತುರ್ಥದಲ್ಲಿ ಪರಮಾರ್ಥಗೀತೆ ಶಾಸ್ತ್ರ ೧ ಕ್ಕೆ ವಾಲೆ ೧೭,

ಪಂಚಮದಲ್ಲಿ ಅನುಭವಸಾರವೆಂಬ ಶಾಸ್ತ್ರ ೧ ಕ್ಕೆ ವಾಲೆ ೨೦ ಷಷ್ಠಮದಲ್ಲಿ ಪರಮಾನುಭವಬೋಧೆಯೆಂಬ ಶಾಸ್ತ್ರ ೧ ಕ್ಕೆ ವಾಲೆ ೪೭, ಸಪ್ತಮದಲ್ಲಿ ಪರಮಾರ್ಥಪ್ರಕಾಶಿಕೆಯೆಂಬ ಗ್ರಂಥ ೧ ಕ್ಕೆ 'ವಾಲೆ ೪೬ ಅಂತು ಶಾಸ್ತ್ರ ೭ ಕ್ಕೆ ವಟ್ಟು ವಾಲೆ ೩೨೨ ಕ್ಕೆ ಅನುಷ್ಠುಪುಗ್ರಂಥ ೧ ಕ್ಕೆ ಅಕ್ಷರ ೩೨ ರಡರ, ಪ್ರಮಾಣದಲ್ಲಿ ಗ್ರಂಥಶಾಸ್ತ್ರ ೭ ಕ್ಕೆ ೧೨೦೭೫ ॥ ಗ್ರಂಥವಂನು ನಿಧಾನವಾಗಿ ಲೆಕ್ಕವಂನು ಮಾಡಿ ಬರದು ಯಿರುವದ್ದರಿಂದ ಯೀಶಾಸ್ತ್ರ ೭ ಶ್ರೀ ಪಾರ್ವತಿ ಸಮೇತನಾದ ಶಂಭುಲಿಂಗ ನಿಜಗುಣ ಶಿವಯೋಗಿಗಳು ಪ್ರಮಥಗಣಂಗಳು ಬಸವಾದಿಗಣಂಗಳ ಸತ್ಕೃಪಾಕಟಾಕ್ಷದಿಂದ ಶ್ರೀ ನಿಜಗುಣಶಿವಯೋಗೀಶ್ವರರಿಂದ ವಿರಚಿತಮಾದ ಸಪ್ತಶಾಸ್ತ್ರದ ಪುಸ್ತುಕಕ್ಕೆ ಆಚೆಂದ್ರಾರ್ಕ್ಕ ಸಿದ್ಧಿರಸ್ತು ॥

ಚಾಂದ್ರಮಾನೆ ಸ್ವಸ್ತಿ ಶ್ರೀ ವಿಜಯಾಭ್ಯುದಯ ಕಲಿಯುಗ ಪ್ರಮಾಣ ೪೩೨೦೦೦॥ ಸಾವಿರ ವರುಷಕ್ಕೆ ಯಿಾಗ ಸಂದುಯಿರುವದು ವರುಷ ೪೮೯೨ ವರುಷಕ್ಕೆವಿವರ, ಪ್ರಥಮದಲ್ಲಿ ಯುಧಿಷ್ಠರ ಸೆಖೆ ೨೦೪೪ ವರುಷ । ಆಮೇಲೆ ತೃತೀಯ್ಯದಲ್ಲಿ ಶಾಲೀವಾಹನ ಶಕಾಬ್ದ ೧೭೧೩ನೆ ವರುಷ ಸಲುವ ವರ್ತಮಾನವಾದ ವಿರೋಧಿಕೃತು ಸಂವತ್ಸದ ಕಾರ್ತೀಕ ಶುದ್ಧ ೧೨ ಯು ಚಂದ್ರವಾರ ೩೧ ॥ ವುತ್ರಾ ಭಾದ್ರಪಧ ನಕ್ಷತ್ರ ೨೪ ।' ಹರ್ಷಣ ನಾಮ ಯೋಗ ೬ ಭವಕರಣ ೧ ವಜ್ಯರಾತ್ರಿ ೨೭ ತೇದಿ ೨೫ ಯಿಂತಾ ಶುಭದಿವಸದಲ್ಲಿ ಸೂರ್ಯ ಪೂರ್ವ ಪ್ರತಿಷ್ಠೆಯಾದ ಘಳಿಗೆ ೩ರ ತುಲಾಲಗ್ನದಲ್ಲಿ ಶಂಭು ಸತ್ಕೃಪಾಕಟಾಕ್ಷದಿಂದಲು ಬಸವಾದಿ ಪ್ರಮಥ ಗಣಾಧ್ಯಕ್ಷರ ಕೃಪಾಕಟಾಕ್ಷದಿಂದಲು ಶ್ರೀಗಿರಿಮಲ್ಲಿಕಾರ್ಜುನ ಭ್ರಮರಾಂಬಿಕಾ ಕಟಾಕ್ಷದಿಂದಲು ನಿರ್ವಿಘ್ನದಿಂದ ಯೀ ಕೃತಿಲಿಖಿತವ ಬರದು ಪೂರ್ನಮಾದುದಕ್ಕೆ ಆಚಂದ್ರಾರ್ಕಸಿದ್ಧಿರಸ್ತು ॥

ಆಂಗೀರಸ ಬಾರ್ಹಸ್ಪತ್ಯ ಭಾರದ್ವಾಜಾತ್ರಿಯ ಋಷಿಯ ಪ್ರವರಾನ್ವಿತ ಭಾರದ್ವಾಜಗೋತ್ರ ಆಶ್ವಲಾಯನ ಸೂತ್ರ ಋಕ್ಶಾಖಾಧ್ಯಾಯಿಗಳಾದ ಚಂದ್ರವಂಶೋದ್ಭವರಾದ ವೇಣುಪುರಾಧಿಪರಾದ ರಾಜೈಯನವರ ಪ್ರಪೌತ್ರರಾದ ಕೆಂಪರಾಜೈಯನವರ ಸ್ವಹಸ್ತಾಕ್ಷರದ ಲಿಖಿತದ ಪುಸ್ತುಕಕ್ಕೆ ಸಾಂಬಶಿವ ಸತ್ಕೃಪಾಕಟಾಕ್ಷ ಸಿದ್ಧಿರಸ್ತು॥ ಅವಿಘ್ನಮಸ್ತು॥ ಆಚೇಂದ್ರಾರ್ಕ ಸಿದ್ಧಿರಸ್ತು॥ ಶ್ರೀ ತ್ರಿಣೆಯ ತ್ರಿಪುರಾಂಬಾ ಚಂದ್ರಶೇಖರ ಸೋಮೇಶ್ವರಲಿಂಗ ಕೃಪಾಕಟಾಕ್ಷ ಸಿದ್ಧಿರಸ್ತು ಶ್ರೀ ಕೈಲಾಸವಾಸಿನೇ ನಮಃ ॥

ಗಂಗಾತರಂಗ ಕಮನೀಯ್ಯ ಜಟಾಕಲಾಪಂ
ಗೌರೀ ನಿರಂತರ ವಿಭೂಷಿತ ವಾಮಭಾಗಂ
ನಾರಾಯಣಪ್ರಿಯ್ಯಮನಂಗಮದಾಪಹಾರಂ
ವಾರಾಣಸೀಪುರಪತಿಂ ಭಜ ವಿಶ್ವನಾಥಂ ॥ ಶ್ರೀ ॥

ವಿಷಯ : ವೇದಾಂತ ವಿಚಾರ.

ವಿಶೇಷ: ಈ ಕಟ್ಟನಲ್ಲಿ ೧ ಕೈವಲ್ಯಪದ್ಧತಿ, ೨ ಅರವತ್ತುಮೂವರ ತ್ರಿವಿಧಿ, ೩ ವಿವೇಕ ಚಿಂತಾಮಣಿ, ೪ ಪರಮಾರ್ಥಗೀತೆ, ೫ ಅನುಭವಸಾರ, ೬ ಪರಮಾನುಭವ ಬೋಧೆ ೭ ಪರಮಾರ್ಥ ಪ್ರಕಾಶಿಕೆ ಈ ಏಳು ನಿಜಗುಣಶಿವಯೋಗಿಯ ಕೃತಿಗಳಿವೆ. ಅಕ್ಷರಗಳು ಬಹು ಸ್ಫುಟ. ಕೊನೆಯಲ್ಲಿ ೩೨೩ ನೆಯ ಪತ್ರದಲ್ಲಿ ಪ್ರತಿಮಾಡಿದ ಕಾಲಾದಿಗಳ ಸಮಗ್ರ ವಿವರವಿದೆ. ಓಲೆ ಸುದೃಢವಾಗಿದೆ.

867

ಕೆ. ೩೧೨/೬	**ಪರಮಾರ್ಥ ಪ್ರಕಾಶಿಕೆ**	ಗದ್ಯ
೧೪.೨"×೨"	ನಿಜಗುಣಶಿವಯೋಗಿ	ಸು. ೧೫೦೦
೧೦೯–೧೪೭ ಪತ್ರ	೯ ಪಂಕ್ತಿ	[illegible] ಅಕ್ಷರ

ಆದಿ : ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ್ಯಂ ಪರಶಿವ ಪಾದಯುಗಳ ಕಮಲಿನೀ ರಾಜಶ್ರೀ ನಿಜಗುಣಾಚಾರ್ಯ್ಯರು ನಿರೂಪಿಸಿದ ಪರಮಾರ್ತ್ಥ ಪ್ರಕಾಶಿಕೆ ಯೆಂಬ ಶಿವಯೋಗಶಾಸ್ತ್ರವನ್ನು ಬರೆಯುವದಕ್ಕೆ ಶುಭಮಸ್ತು ನಿರ್ವಿಘ್ನಮಸ್ತು ॥

ಗದ್ಯ ॥ ಶ್ರೀಮದನಂತ್ತಕೋಟಿ ಬ್ರಂಹ್ಮಾಂಡ್ಡಪಿಂಡಾಂಡ್ಡ ತತ್ವ ತತ್ವಾದಿಕ ಮಾಯಾಬಿಂದ್ದು ಮುಖ್ಯಚೇತನಾಚೇತನಾತ್ಮಕ ವಿಶ್ವಪ್ರಪಂಚದೊಳ ಹೊರೆಗೆಲ್ಲಿಯೂ ಪರಿಪೂರ್ನ್ನವಾಗಿ ಸರ್ವಧಾರಕತ್ವ ಸರ್ವ್ವಸಾಕ್ಷಿಕತ್ವ ಸರ್ವಾನುಗ್ಗ್ರಹಕತ್ವಾದಿಗಳುಳ್ಳ ಸರ್ವಕಾಲ ಕರ್ಮ್ಮಾರ್ತ್ಥಂಗಳೆಲ್ಲವನೇಕ ಕಾಲದಲ್ಲಿ ನಿರ್ವಿಕಾರತ್ತ್ವದಿಂದರಿವ ನಿತ್ಯನಿರ್ಮಳ ನಿರ್ವಿಕಲ್ಪ ನಿರಾವರಣ ನಿರತಿಶಯ ದ್ವಿತೀಯ್ಯಮಪ್ಪ ಸರ್ವಾನುಗ್ರಹತ್ವಾದಿ ಸತ್ಯ ಸ್ವಯಂಪ್ರಕಾಶ ಸಂವಿದ್ರೂಪಮಾದ ಶಂಭುಲಿಗದನುಮತದಿಂ ಸಮ್ಯಜ್ಞಾನ ಸಂಪನ್ನನೆನಿಪ ನಿಜಗುಣ ಶಿವಯೋಗಿ ಆವಿಮಿತ್ರುಬಂಧುತ್ವದಿಂ ನೆನೆದು ನೋಡಿ ಸಂಸ್ಕೃತ ಶಬ್ದ ವ್ಯಾಕರಣ ಪ್ರಮಾಣಾದಿಗಳ ಲಕ್ಷಣ ಶೀಕ್ಷೆಗಳಿಲ್ಲದ್ದ ಮೋಕ್ಷ

ಮಾತ್ರಾಪೇಕ್ಷಿತರಾದ ಸಾದುಜನಂಗ್ಗಳಾಯಾಸವಿನಿತಿಲ್ಲದೋದಿ ಕೇಳಿ ತಿಳಿದು ಕೃತಾರ್ಥರಾಗಲೆಂದ್ದು ಶಿವಯೋಗ ಪ್ರದೀಪಿಕೆಯೆಂಬ ವಿಶಿಷ್ಟ ಯೋಗಶಾಸ್ತ್ರ ಗ್ರಂಥಂಗ್ಗಳಂನ್ವಯ ತಾತ್ಪರ್ಯವನೆ ಸೂಪಶಾಸ್ತ್ರ ಸಂಮ್ಮ ತದಿಂ ಕೂಡಿ ಮಾಡಿದ ಸುಪದಾರ್ಥದಂದವನರಿದೊಂದಿನಿಸು ತುಪ್ಪನೆರೆ ದೊಪ್ಪವಾಗಿ ಪೊಡಣಿಗೆಗೊಟ್ಟು ಮಹಾಸ್ವಾದುಗೊಳಿಸವಂತೆ ಲಾಲಿತ್ಯ ಮಾದ ಮಾಲಾಟೇಕಾರೂಪದಿಂ ನೇರಿತಾಗಿ ಸೆರುವೆಗೆಯ್ದು ಸಕಲಯೋಗೀ ಶ್ವರರೊಡಂಬಡುವಂತೆ ಕನ್ರ್ನಾಟಕ ವಚನರಚನೆಗಳಿಂ ಪರಮಾರ್ಥ ಪ್ರಕಾಶಿಕೆ ಯಂಬ ಪೆಸರನಿಟ್ಟು ಬೇರೊಂದು ಪ್ರಕರಣವಾಗಿ ಮಾಡಿದನ ದೆಂತೆಂದೊಡೆ॥ ಶ್ರೀಮನ್ನಿಜಮೋಕ್ಷೈ ್ಯಕ ಸಾಧನಂಗ್ಗಳಾದ ಕಾಮಿಕಾದಿ ವಾತುಲಾಂತಮಾದ ಶಿವಾಗಮನಂಗಳಲ್ಲಿಯ ಜ್ಞಾನ ಕ್ರಿಯಾಚರ್ಯ ಯೋಗ ಪ್ರವೀಣನಾದ ವೇದ ವೇದಾಂತ್ತ ವೇದನಾವಿಚಕ್ಷಣನಾದ ಸಾಂಖ್ಯ ಪಾತಂ ಜಲಾದ್ಯನೇಕ ಯೋಗಶಾಸ್ತ್ರಸಂಭ್ರಮಕ್ಕೆ ಗೋಚರವಲ್ಲದ ನಿಜಯೋಗ ಸಿದ್ಧನಾದ ಬಿಂದ್ದುನಾದಾದ್ಯನೇಕ ವಸ್ತುವಿಸ್ತಾರಮಂ ಪಿಂಡಮಧ್ಯದಲ್ಲಿ ಕಾಣಿಸುವ ಕುಶಲನಾದ ಮಂತ್ರಾದಿ ಯೋಗಪರಿಚಿತನಾದ ಸ್ವಾನುಭವಸಿದ್ಧ ನಾದ ತಾರಕಬ್ರಹ್ಮೋಪದೇಶಾದ್ಯಖಿಳ ರಹಸ್ಯೋಪದೇಶಿಕನಾದ ಚೆಂನ್ನಸದಾ ಶಿವಯೋಗೀಶ್ವರನೆನಿಸುವಾಚಾರ್ಯನು ಮುಮುಕ್ಷುಗಳ ಹೃದಯಗುಹಾಂತ ರಾಳಮಂ ಬೆಳಗಲೆಂದ್ದು ಶ್ರೀ ಶಿವಯೋಗ ಪ್ರದೀಪಿಕೆಯೆಂಬ ಯೋಗ ಶಾಸ್ತ್ರಮಂ ಮಾಡಲುದ್ಯೋಗಿಸಿ ನಿರ್ವಿಘ್ನದಿಂದ್ದ ಪರಿಸಮಾಪ್ತಿಯಾಗ ಲೋಸುಗವಾಗಿ ಶ್ರೀ ಗುರುನಮಸ್ಕಾರ ಲಕ್ಷಣ ಮಂಗಲಾಚರಣಂ ಗೈದನದೆಂತೆಂದೊಡೆ

ಅಂತ್ಯ : ಕಾಮಿಕಾದಿ ಶಿವಾಗಮಂಗಳಲ್ಲಿ ಅತಿರಹಾಸ್ಯವಾದರ್ತ್ಥಂಗಳನ ಭೂಶುಂಡ ವಾಮದೇಶ ಶ್ವೇತವಮನಾದಿ ಯೋಗ ಸಿದ್ಧರ ಸಿಗ್ಧಾಂತ ಮಾರ್ಗಂಗಳನು ಲೇಸಾಗಿ ವಿಚಾರಿಶಿ ಆ ಸಮಸ್ತವನು ಸಂಯೋಜಿಸಿ ಸುಗಮವಾಗಿ ಯಿಾ ಶಿವಯೋಗ ಪ್ರದೀಪಿಕೆ ಪೇಳಲ್ಪಟ್ಟುದಕ್ಕುಂ ॥ ೨ ॥

ಬಳಿಕಾ ॥ ವೇದ ವೇದಾಂತಾಗಮ ಪುರಾಣೇತಿಹಾಸಾದಿಗಳಲ್ಲಿ ಪರಮರ ಹಸ್ಯಮಾದ ಶಿವಯೋಗ ಸ್ವರೂಪನಭಿವ್ಯಕ್ತ್ರಮಾಗಿ ಕೈದೋರಿಕೆಯೆನಿಶಿ ಕರ್ನಾಟಕ ವಚನ ಪ್ರಬಂಧಮಾಗಿ ರಚಿತಮಾದ ಯೀ ಪರಮಾರ್ತ್ಥ ಪ್ರಕಾಶಿಕೆಯೆಂಬ ಪ್ರಕರಣವನು ಆವಾತನು ಬಲ್ಲತನಮಂ ಮರೆಯ ಬೇಕೆಂದು ಲೌಕಿಕ ಪ್ರಯೋಜನಮಂ ಪಡೆಯಬೇಕೆಂದು ಅಯೋಗ್ಯನಾದ ಮೂಢಂಗೆ ಕೊಡುವನಾತಂಗೆ ಢಾಕಿನೀಯೆಂಬ ಮಂತ್ರಶಕ್ತಿಯ ಶಾಪವು ಗುರುದ್ರೋಹವು ಬಹುದೂ। ಮತ್ತಾರ್ಗೀವುದೆನೆ ಯೀ ಯೋಗಮಾರ್ಗಮಂ

ವುಪದೇಶಂ ಮಾಡಿದಾಚಾರ್ಯನಲ್ಲಿಯು ವಿಚಿತ್ರದೆಳಿಯ್ಯ ರೂಪನಾಗಿ ತನಗೆ ಮುಕ್ತಿಸ್ಥಾನ ಸ್ಥಾನವಾದ ಪರಶಿವನಲ್ಲಿಯೂ ಸಮಾನವಾದ. ನಿಶ್ಚಲ ಭಕ್ತಿಯುಳ್ಳ ಯೋಗಾಭ್ಯಾಸದಲ್ಲಿ ಸಮರ್ಥಕನಾದ ಜಿತೇಂದ್ರಿಯನಾದ ವಿರಕ್ತಂಗೆ ವುತ್ತುಮ ಶಿಷ್ಯಂಗೆ ಸತ್ಪತ್ರಂಗುಪದೇಶಂಗೆಯಲಿದು ಸಫಲ ವಕ್ಕುಂ ॥ ಇತಿ ಶ್ರೀ ನಿಜಗುಣ ಶಿವಯೋಗೀಂದ್ರ ವಿರಚಿತಮಾದ ಪರಮಾರ್ಥ ಪ್ರಕಾಶಿಕೆಯಲ್ಲಿ ಪಂಚಮಃ ಪರಿಚ್ಛೇದಃ ॥

ವಿಷಯ : ವೇದಾಂತ ವಿಚಾರ.

ವಿಶೇಷ : ಪ್ರತಿ ಉತ್ತಮ ಸ್ಥಿತಿಯಲ್ಲಿದೆ. ಚನ್ನಸದಾಶಿವಯೋಗಿ ವಿರಚಿತ ಸಂಸ್ಕೃತ ಶಿವಯೋಗಪ್ರದೀಪಿಕೆಯನ್ನು ಕನ್ನಡ ಗದ್ಯದಲ್ಲಿ ವಿವರಿಸಲಾಗಿದೆ. ಈ ಗ್ರಂಥದೊಂದಿಗೆ ಇದೇ ಕರ್ತೃವಿನ ಕೈವಲ್ಯಪದ್ಧತಿ, ೬೩ ಪ್ರಮಥ ಗಣಂಗಳ ತ್ರಿವಿಧಿ, ಅನುಭವಸಾರ, ಪರಮಾನುಭವಬೋಧೆ, ಪರಮಾರ್ಥಗೀತೆ ಮತ್ತು ಪರಮಾರ್ಥ ಚಿಂತಾಮಣಿ ಎಂಬ ಗ್ರಂಥಗಳೂ ಇವೆ. ೧೪೭ ನೇ ಪತ್ರದ ಹಿಂಬಂದಿಯಲ್ಲಿ ' ಯಿದು ನಿಜಗುಣ ಶಿವಯೋಗೀಂದ್ರ ಶಂಭುಲಿಂಗರೊಲ ವಿಂದಖಿಳ x x x x x ಶ್ರೀ ಶಂಭುಲಿಂಗ ಪ್ರಭು ನಿಜಗುಣಾರ್ಯ ಗುರುಶಾಂತ ನಿರ್ವಾಣ ಘಟ್ಟಿವಾಳ ಪ್ರಮಥಗಣಂಗಳ ಚರಣಾರವಿಂದಂ ಗಳಿಗೆ ನಮೋ ನಮಃ ' ಎಂಬೀ ೯ ಸಾಲಿನ ಪತ್ರದ ಒಂದು ಪಕ್ಕದಲ್ಲಿನ ಪೂರ್ತಿಯಾದ ಗದ್ಯ ಬರವಣಿಗೆಯಿದೆ. ಇದು ಪ್ರತಿಕಾರನ ಬರವಣಿಗೆ ಯಾಗಿರಬಹುದು.

868

ಕೆ. ೩೨೯/೨	ಪರಮಾರ್ಥ ಪ್ರಕಾಶಿಕೆ	ಗದ್ಯ
೬.೭" × ೨"	ನಿಜಗುಣಶಿವಯೋಗಿ	ಸು ೧೫೦೦
೧೩೯—೨೩೦ ಪತ್ರ	೧೧ ಪಂಕ್ತಿ	೩೨ ಅಕ್ಷರ

ಆದಿ : ಪರಮಾರ್ಥ ಪ್ರಕಾಶಿಕೆ.

ಶ್ರೀಮದನಂತಕೋಟಿ ಬ್ರಹ್ಮಾಂಡಪಿಂಡಾಡ ತತ್ವ ತಾತ್ವಿಕ ಮಾಯಾಬಿಂದು ಮುಖ್ಯ ಚೇತನಾತ್ಮಕ ವಿಶ್ವಪ್ರಪಂಚದೊಳ ಹೊರಗೆಲ್ಲಿಯೂ ಪರಿಪೂರ್ನ್ನ ಮಾಗಿ ಸರ್ವಾಧಾರಕತ್ವ ಸರ್ವಸಾಕ್ಷಿಕತ್ವ ಸರ್ವಶಕ್ತಿತ್ವ ಸರ್ವಾನುಗ್ರಹಕ ತ್ವಾದಿಗಳುಳ್ಳ ಸರ್ವಕಾಲ ಕ್ರಮಾರ್ಥಂಗಳೆಲ್ಲವನೇಕ ಕಾಲದಲ್ಲಿ x x x x x ಸಂಪಂನ್ನನೆನಿಪ ನಿಜಗುಣಶಿವಯೋಗಿ ಅನಿಮಿತ ಬಂಧುತ್ವದಿ

ನೆನದು ನೋಡಿ ಸಂಸ್ಕೃತಶಬ್ದ ವಾಕರಣ ಪ್ರಮಾಣಾದಿಗಳ ಲಕ್ಷಣ ಸೀಕ್ಷೆಗಳಿಲ್ಲದ ಮೋಕ್ಷ ಮಾತ್ರಾಪೇಕ್ಷಿತರಾದ ಸಾಧುಜನಂಗಳಾಯಾಸವಿನಿತಿಲ್ಲದೋದಿ ಕೇಳಿ ತಿಳಿದು ಕೃತಾರ್ಥರಾಗಲೆಂದು ಶಿವಯೋಗ ಪ್ರದೀಪಿಕೆಯೆಂಬ ವಿಶಿಷ್ಟಯೋಗ ಶಾಸ್ತ್ರದ ಗ್ರಂಥಂಗಳನ್ವಯ ತಾತ್ಪರ್ಯವಸೆ ಸೂಪಶಾಸ್ತ್ರ ಸಂಮತದಿಂ ಕೂಡಿ ಮಾಡಿದ ಸುಪದಾರ್ಥದಂದವನರಿದೊಂದಿನಿಸು ತುಪ್ಪವ ನೆರೆದೊಪ್ಪವಾಗಿ ಪೊಡಣೆಗೈದು ಮಹಾಸ್ವಾದುಗೊಳಿಸುವಂತೆ ಲಾಲಿತ್ಯದ ಮಲಾದಿಕಾನುರೂಪದಿಂನೆಂತಾಗಿಸೆರಂಪೆಗೈದು ಸಕಲ ಯೋಗೀಶ್ವರರೊಡಂಬಡುವಂತ ಕರ್ನಾಟಕವಚನ ರಚನೆಗಳಿಂ ಪರಮಾರ್ಥ ಪ್ರಕಾಶಿಕೆಯೆಂಬ ಪೆಸರನಿಟ್ಟು ಬೇರೊಂದು ಪ್ರಕರಣವಾಗಿ ಮಾಡಿದನದೆಂತೆಂದಡೆ–

ಅಂತ್ಯ : ಶಾಸ್ತ್ರ ಸಂಭ್ರಮಂಗಳಲ್ಲಿ ಸಾಯಸಂಗೊಳದಿದನೆ ಶ್ರದ್ಧಾಭಕ್ತಿಪೂರ್ವಕಮಾಗಿ ಶ್ರೀಗುರುಮುಖದಿಂ ತಿಳಿದು ಕೃತಾರ್ಥರೆಂಬಾಶೀರ್ವಾದ ಲಕ್ಷಣ ಮಂಗಲಾಚರಣದಿಂ ಸಮಾಪ್ತಿ॥ ಶ್ರೀಮತ್ಸ .... ಶ ಲಿಂಗನ ಪಾದಾರವಿಂದ ಪ್ರಸಾದದಿಂದ ನಿಜಗುಣಯೋಗಿ ಪೇಳ್ದ ಪರಮಾರ್ಥ ಪ್ರಕಾಶಿಕೆಯೆನಿಪ ಪ್ರಭಂದವು ಸಾಂಗ ಸಂಪೂರ್ನ ಜಯಮಂಗಳ ಮಹಾಶ್ರೀ

ವಿಷಯ : ವೇದಾಂತ ವಿಚಾರ.

ವಿಶೇಷ : ಈ ಕಟ್ಟನಲ್ಲಿ ಪರಮಾರ್ಥಗೀತೆ ಎಂಬ ಮತ್ತೊಂದು ಗ್ರಂಥವಿದೆ.

869

ಕೆ. ಬಿ. ೩೨೩	**ಪರಮಾರ್ಥ ಪ್ರಕಾಶಿಕೆ**	ಗದ್ಯ
೭.೭"×೬.೩"	ನಿಜಗುಣಶಿವಯೋಗಿ	ಸು ೧೫೦೦
೧–೭೬ ಪತ್ರ	೧೮ ಪಂಕ್ತಿ	೨೪ ಅಕ್ಷರ

ಆದಿ : ಶ್ರೀಗುರು ಪಾರಮಾರ್ಥಪ್ರಕಾಸಿಕೆ ಬರೆಯುವುದಕ್ಕೆ ಶುಬಮಸ್ತು॥

ಪದನೂ ॥ ಶ್ರೀಮದನಂತಕೋಟ ಬ್ರಂಹ್ಮಾಂಡ ಪಿಂಡಾಂಡ ತತ್ವ ತಾತ್ವಾಕ ಮಾಯಾಬಿಂದು ಮುಖ್ಯ ಚೇತನಚೇತನಾತ್ಮಕ ವಿಶ್ವಪ್ರಪಂಚದೊಳ ಹೊರಗೆಲ್ಲಿಯು ಪರಿಪೂರ್ಣಮಾಗಿ ಸರ್ವಾಧಾರಕತ್ವ ಸರ್ವಸಾಕ್ಷಿಕತ್ವ ಸರ್ವಶಕ್ತಿತ್ವ ಸರ್ವಾನುಗ್ರಹಕತ್ವಾದಿಗಳುಳ್ಳ ಸರ್ವಕಾಲ ಕ್ರಮಾರ್ಥಂಗಳೆಲ್ಲವನೇಕ ಕಾಲದಲ್ಲಿ ನಿರ್ವಿಕಾರತ್ವದಿಂದರಿವ ನಿತ್ಯ ನಿರ್ಮಳ ನಿರ್ವಿಕಲ್ಪ ನಿರಾವರಣ ನಿರತಿಶಯ x x x x x ಸಕಲ ಯೋಗೀಶ್ವರ

ರೊಡಂಬಡುವಂತ್ತೆ ಕರ್ನಾಟಕ ವಚನ ರಚನೆಗಳಿಂ ಪರಮಾರ್ಥ ಪ್ರಕಾಸಿಕೆಯೆಂಬ ಪೆಸರನಿಟ್ಟು ಬೇರೊಂದು ಪ್ರಕಾರವಾಗಿ ಮಾಡಿದನ ದೆಂತೆನೆ

ಅಂತ್ಯ: ಶಾಸ್ತ್ರ ಸಂಭ್ರಮಂಗಳಲ್ಲಿ ಸಾಧುಸಂಗೊಳದಿದನೆ ಶುದ್ಧ ಭಕ್ತಿ ಪೂರ್ವಕ ವಾಗಿ ಶ್ರೀಗುರುಮುಖದಿಂ ತಿಳಿದು ಕೃತಾರ್ಥರೆಂಬಾಶಿರ್ವಾದ ಲಕ್ಷಣಮಂ ಮಂಗಲಾಚರಣದಿಂ ಪರಿಸಮಾಪ್ತಿ ಶ್ರೀಶಂಭುಲಿಂಗನ ಪಾದಾರವಿಂದ ಪ್ರಸಾದದಿಂದ ನಿಜಶಿವಯೋಗಿ ಪೇಳ್ದ ಪಾರಮಾರ್ಥ ಪ್ರಕಾಸಿಕೆ ಯನಿಪ ಪ್ರಬಂಧವೂ ಸಾಂಗ ಸಂಪೂರ್ನ ಜಯಮಂಗಳ ಮಹಾಶ್ರೀ.

ಇತಿ ಶ್ರೀ ನಿಜಗುಣ ಶಿವಯೋಗೀಂದ್ರರು ಶ್ರೀಗುರು ಶಂಭುಲಿಂಗಸ್ವಾಮಿ ಪಾದಾರವಿಂದ ದ್ವಂದಯುಗಳಕ್ಕೆರಗಿ ಬಿಂನೈ x x x x x ಶ್ರೀನಿಜ ಗುಣ ಶಿವಯೋಗೀಂದ್ರ ಸ್ವಾಮಿಗಳ ಗ್ರಂಥ ಸಂಪೂರ್ನ ಮಂಗಳ ಮಹಾಶ್ರೀಶ್ರೀ.

ವಿಷಯ : ವೇದಾಂತ ವಿಚಾರ.

ವಿಶೇಷ : ೬೫ ಪತ್ರಗಳಲ್ಲಿ ಪರಮಾರ್ಥ ಪ್ರಕಾಶಿಕೆ ಮುಗಿದಿದೆ. ೬೬ನೇ ಪತ್ರದಿಂದ ಮುಂದೆ ತತ್ತ್ವ ಪದಗಳಿವೆ.

೬70

ಕೆ. ೪೦೮/೧	**ಪರಮಾರ್ಥವಚನಗಳು**	ತ್ರಿಪದಿ
೧೮.೭" × ೧.೪"	ಸರ್ವಜ್ಞ ?	೧೬ನೆಯ ಶತಕ
೧೫–೧೮ ಪತ್ರ	೬ ಪಂಕ್ತಿ	೮೧ ಅಕ್ಷರ

ಆದಿ: ಪರಮಾರ್ಥ ವಚನಗಳು ||

ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ
ತಾಗಿಲ್ಲ ತಪ್ಪು ತಡೆಯಿಲ್ಲ ಲಿಂಗಕ್ಕೆ
ದೇಗುಲವೆಯಿಲ್ಲ ಪರಮಾರ್ಥ || ೧ ||

ಕಾಯಕಮಲವೆ ಸೆಜ್ಜೆ ಜೀವರತ್ನವೆ ಲಿಂಗ
ಭಾವಪುಷ್ಪದಲಿ ಶಿವಪೂಜೆ ಮಾಡುವನ
ದೇವನೆಂದೆಂಬೆ ಪರಮಾರ್ಥ || ೨ || x x x

ಅಂತ್ಯ : ತನ್ನೊಳಗೆಯಿದ್ದಾತ್ಮನಂ ಮನ್ನಿಸಲರಿಯದೆ
ಚಿನ್ನಾಗಿ ಕಡದ ಪ್ರತಿಮೆಯ ಮನ್ನಿಸುವ
ಕುಂನ್ನಿಗವ ನೋಡು ಸರ್ವಜ್ಞ ॥ ೮೬ ॥

ಹಾದರದ ಕಥೆಯನು ಸೋದರರ ವಧೆಯನು
ಆವರಿಸಿ ಪುಣ್ಯಕಥೆಯೆಂದು ಕೇಳುವ
ಮಾದಿಗರ ನೋಡು ಸರ್ವಜ್ಞ ॥ ೮೭ ॥

ಅಂತ್ಯ ಗ್ರಂಥ ೧೫೦ ॥ ತಂನ ತಾನರಿವದು ತಂನ ತಾ ಮರವುದು
ತಂನ ತಾನರಿದು ತೋರುವುದು ಪರಬೊಂಮ
ಬಿಂನಾಣವಲ್ಲ ಪರ ॥ ೮೮ ॥

ಬಿಂದು ಮೂತ್ರಗಳೆರಡು ವಂದು ಲಾಳದಲಕ್ಕು
ವಂದು ಬಿಟ್ಟೊಂದು ಹಿಡಿವಡೆ ಪರಬೊಂಮು
ಮುಂದೆ ಬಂದಿಕ್ಕು ಪ ॥ ೮೯ ॥

ವಿಷಯ : ತತ್ತ್ವ ಬೋಧೆ.

ವಿಶೇಷ : ಈ ಕಟ್ಟಿನ ಮೊದಲ ೧೪ ಪತ್ರಗಳಿಲ್ಲ. ಮುಂದೆ ೧೯ ರಿಂದ ೨೨ ಪೂರ್ತಿ ತೆಲುಗು ಭಾಷೆಯ ವೇಮನನ ಪದ್ಯಗಳಿವೆ.

871

ಕೆ. ೫೬೯	**ಪರಮಾರ್ಥವಚನಗಳು**	ತ್ರಿಪದಿ
೮″ × ೧.೫″	ಸರ್ವಜ್ಞ	೧೬ನೆಯ ಶತಕ
೧—೧೧೭ ಪತ್ರ	[illegible] ಪಂಕ್ತಿ	೨೮ ಅಕ್ಷರ

ಆದಿ : ಜಾತಸ್ಮರತ್ವ—

ಮುನ್ನ ಪೂರ್ವದಲಾನು ಪಂನೆಗಧರನಾಳು
ಯೆಂನ್ನೆಯ ಪೆಸರು ಪುಷ್ಪದಂತ್ತ ಕೈಲಾಸದಿ
ಮಂನ್ನಿಪರು ಯೆಂನ್ನ ಸರ್ವಜ್ಞಾ ॥ ೧ ॥

ಅಂದು ನಾ ಪುಷ್ಪದತ್ತ ಬಂದೆ ವರರುಚಿಯಾಗಿ
ಮುಂದೆ ದೇವಸಾಲೆ ಸರ್ವಜ್ಞನೆಂದೆನಿಸಿ
ಬಂದವನು ನಾನೆ ಸರ್ವಜ್ಞಾ ॥ ೨ ॥

X X X X

ಗಂಡಾಗಬೇಕೆಂದು ಪಿಂಡವ ನುಂಗಲದು
ಲಂಡೆ ಮಾಳಿಯೊಳು ಜನಿಸಿತೆಂದನಲು
ಕಂಡುದನೆ ಪೇಳ್ದೆ ಪರಮಾರ್ತ್ಥ || ೪ ||

ಅಂತ್ಯ : ನಿದ್ರೆಯದು ಬಾರದು ಬುದ್ಧಿ ತಾ ತೋರದು
ಮುದ್ದಿನ ಮಾತು ಸೊಗಸಲು ಕೂಳೊಂದು
ಮುದ್ದೆ ತಪ್ಪಿದರೆ ಪರಮಾರ್ಥ || ೭೭ ||
ಕೂಳಮೇಳವೆ ಬಾಳು ಕೂಳಮೇಳವೆ ರೋಗ
ಕೂಳಿಲ್ಲದೇಳು ಘಳಿಗೆಗೆ ಕೈಯ್ಯ ಹಿಡಿ
ದೇಳಿಸಿಕೊಂಬ ಪರಮಾರ್ಥ || ೭೮ ||
|| ಪರಮಾರ್ಥ ಸಮಾಪ್ತಂ ಮಂಗಳ ಮಹಾಶ್ರೀ ||

ವಿಷಯ : ತತ್ತ್ವಬೋಧೆ.

ವಿಶೇಷ : ೬೧ನೆಯ ಪತ್ರದಲ್ಲಿ ಬರವಣಿಗೆ ಇಲ್ಲ. ೭೪ನೇ ಕ್ರಮಾಂಕದ ಪತ್ರವಿಲ್ಲ. ಪ್ರತಿಪದ್ಯವೂ 'ಪರಮಾರ್ಥ' ಎಂದು ಮುಗಿಯುತ್ತದೆ.

872

ಕೆ.ಬಿ. ೧೫೭	**ಪರವಾದಿ ಗಜಾಂಕುಶ ತಾರಾವಳಿ**	ಪದ್ಯ, ಟೀಕು
೮"×೬.೪"	ನೀಲಕಂಠಾರಾಧ್ಯ	೧೫ನೆಯ ಶತಕ
೧–೪೫ ಪತ್ರ	೨೨ ಪಂಕ್ತಿ	೪೫ ಅಕ್ಷರ

ಆದಿ : ಪರವಾದಿ ಗಜಾಂಕುಶ ತಾರಾವಳಿ.
ಯಸ್ಯಾಜ್ಞಯಾ ಜಗತ್ಸ್ರಷ್ಟಾ ವಿರಿಂಚಿಃ ಪಾಲಕೋ ಹರಿಃ |
ಸಂಹರ್ತಾ ಕಾಲರುದ್ರಾಖ್ಯಸ್ತಂ ನಮಾಮಿ ಪಿನಾಕಿನಂ || ೧ ||

ಯಸ್ಮಾದ್ಭಿಷಾ ದಹತ್ಯಗ್ನಿರುದೇತಿ ಚ ರವಿಶ್ಶಶಿಃ |
ವಾತೋ ವಾತಿ ತುಷೋಸಿ ತ್ವಂ ಮೃತ್ಯುರ್ದಾವತಿ ಪಂಚಮಃ || ೨ ||

ಟೀಕು|| ಯಸ್ಯ-ಆವನಾನೊರ್ವ ಪರಮೇಶ್ವರನ, ಆಜ್ಞಯಾ–ನಿಜಾಜ್ಞೆಯಿಂದೆ, ವಿರಿಂಚಿಃ–ಬ್ರಹ್ಮನು, ಜಗತ್-ಸಮಸ್ತ ಜಗತ್ತುಗಳನ್ನು, ಸ್ರಷ್ಟಾ-ಸೃಷ್ಟಿ ಮಾಡುತಲಿಹನು X X X X
ಪರವಾದಿಗಜಾಂಕುಶ ತಾರಾವಳಿಯಂ ಭಕ್ತಮಾಹೇಶ್ವರನ ಪ್ರೀತ್ಯರ್ಥ

ವಾಗಿ ಸರ್ವಗೋಚರಮಪ್ಪಂತೆ ಸೂಕ್ಷ್ಮಸಂಗ್ರಹವಾಗಿ ಸಕಲವೇದ ಶಾಸ್ತ್ರೋಪನಿಷದರ್ಥಮಂ ಗರ್ಭೀಕರಿಸಿ ಪರಮತ ವೇಶ್ಯಾಭುಜಂಗನೆನಿಪ ಬಿರುದನಾಂತ ಗುರುಚರ ಪಾದಸೇವಕನಾದ ಶ್ರೀನೀಲಕಂಠಾರಾಧ್ಯದೇವನಿಂ ವಿರಚಿಸಲ್ಪಟ್ಟತ್ತದೆಂದೊಡೆ–

ಕಂ ॥ ಶ್ರೀ ಗಿರಿಜಾ ಕುಚ ಕುಂಕುಮ
ರಾಗಾಂಕಿತ ವಕ್ಷನಕ್ಷಯಂ ಸರ್ವೇಶಂ
ಯೋಗಿಜನ ಹೃನ್ನಿವಾಸಂ
ಭೋಗೇಂದ್ರಾಭರಣನೊಲ್ದು ಸಲಹುಗೆ ಜಗಮಂ ॥

ಅಂತ್ಯ : ಆ ರುದ್ರನೆ ದೈವಮೆಂದು ಪೂಜೆ ಮಾಡುತ್ತ ಆ ರುದ್ರವಾಕ್ಯಂಗಳಂ ನಂಬದಿರ್ಪ ವಿಪ್ರರ್ಗೆ ಭವಭವಾಂತರದಲ್ಲಿಯೂ ನರಕ ತಪ್ಪದು ಮತ್ತಂ x x x ಸಮಸ್ತ ವಿಷ್ಣುಬ್ರಹ್ಮಾದಿಗಳಂ ಶ್ರುತ ದೃಷ್ಟ ಅನುಮಾನಂಗಳಿಂ ದೈವಮಲ್ಲವೆಂಬುದಂ ಸ್ವಾತ್ಮಾನುಭವದಿಂ ತಿಳಿದು ನಿಜ ಮೋಕ್ಷಮಂ ಪಡೆವುದೆಂಬುದೀ ಸೂತ್ರದ ಬಹುಶಬ್ದ ನಿರ್ವಚನಾರ್ಥಂ ॥ ೨೭ ॥

ಗದ್ಯ ॥ ಇದು ಸಮಸ್ತ ಹರಿಸುರವಿಸರ ವಿರಾಜನ್ಯಸ್ತಕನ್ಯಸ್ತ ನೂತ್ನ ರತ್ನ ಗಭಸ್ತಿ ವಿಸ್ತೃತ ಸರಃಪದ್ಮಾಯಮಾನನಗಜಾವಲ್ಲಭ ಪಾದಪಂಕಜ ಲಸದ್ರೋಲಂಬನಪ್ಪ ಹರಗುರುಚರಣ ಸೇವಾಧುರಂಧರನಪ್ಪ ಪರಮತ ವೇಶ್ಯಾಭುಜಂಗನೆನಿಪ ಬಿರುದನಾಂತ ಸತ್ಕವಿ ನೀಲಕಂಠಾರಾಧ್ಯ ದೇವ ವಿರಚಿತಮಪ್ಪ ಪರವಾದಿ ಗಜಾಂಕುಶ ತಾರಾವಳಿ ಸಮಾಪ್ತಂ ॥

ಪರವಾದಿ ಗಜಾಂಕುಶಮೆಂ
ಬುರು ತಾರಾವಳಿಯ ನೀಲಕಂಠಾರಾಧ್ಯಂ
ವಿರಚಿಸಿದನಾವನೋದುವ
ಪರಿಭವವಿಲ್ಲಮವು ನೋಡಲಿದು ವೇದಾರ್ಥಂ ॥

ವಿಷಯ : ಶಿವಪಾರಮ್ಯ ನಿರೂಪಣೆ.

ವಿಶೇಷ : ಸುಂದರಾಕ್ಷರ, ಶಕಟರೇಫ ಮತ್ತು 'ಱ' ಲಿಪಿಯ ಬಳಕೆಯಿದೆ. ೩ನೇ ಪತ್ರ ಮಾತ್ರ ಶಿಥಿಲವಾಗಿದೆ.

873

ಕೆ.ಎ. ೬೦	**ಪರಶುರಾಮ ಭಾರತ**	ಭಾಮಿನೀಷಟ್ಪದಿ
೧೨.೮"×೭.೮"	ಚಂದ್ರಸಾಗರ	ಸು. ೧೮೧೧
೧–೨೨೭ ಪತ್ರ	೨೨ ಪಂಕ್ತಿ	೨[illegible] ಅಕ್ಷರ

ಆದಿ : ಪಾರ್ಥಿವ ಸಂವತ್ಸರದ ಕಾರ್ತೀಕ ಶು ೧೪ ರಲ್ಲು ತೊಡಗಿದ್ದು ಪರಶುರಾಮ ಭಾರತವನ್ನು ಬರೆಯುವದಕ್ಕೆ ಶುಭಮಸ್ತು ||

ರಾಗ || ಭಾಮಿನಿ || ಶ್ರೀರಮಣ ನಯನಾಳಿಗವನಿಯ
ಸಾರ ಭವ್ಯರ ಹೃತ್ಕುಮುದಕನು
ದೋರಿ ರಾಜಿಪ ಪಾದಪಂಕಜ ಹಿಮಕರಾನನದಾ
ಚಾರುಚಂದಪ್ರಭನೆ ಭವಸಂ
ಸಾರ ವಾರಾಸಿಯನು ದಾಂಟುವ
ಕಾರಣವನುಪದೇಷಗೈವುದು ಭಜಿಪೆನನವರತಾ || ೧ ||

x x x x

ಇದಕೆ ನಿರ್ವಿಘ್ನದಲಿ ದೇವರ
ಪದಕೆ ವಂದನೆಗೈದು ಅರಜಿನ
ಪದವಿ ಸಂದಂತ್ಯದಲಿ ಪುಟ್ಟಿಸು ಭೌಮನೆಂದೆಂಬಾ
ಸದಮುಲಶ್ರೀ ಸಾರ್ವಭೌಮನ
ಅಥಟನಾಗಿಹ ಪರಶುರಾಮನ
ವಿಥವನೊರವರು ಭಾರತಾಖ್ಯದಿ ಚಂದ್ರಸಾಗರರೂ || ೧೩ ||

ಅಂತ್ಯ : ಸ್ತುತಿಸಿ ನಾನಾತೆರದಿ ಬೀಳ್ಕೊಂ
ಡೆತಿಗಳಿಂ ಚೇಳಿನಿಯು ಸಹಗಜ
ಪತಿಯುನಡರ‍್ದೈತಂದ ರಾಜಗೃಹಕೆ ಶ್ರೇಣಿಕನೂ
ಕ್ಷಿತಿಸುರಾನ್ವಯ ಪರಶುರಾಮನ
ಕಥೆಯು ಯಿಪ್ಪತ್ನಾಲ್ಕು ಅಧ್ಯಾ
ಯತೆದಿ ಸಂಪೂರ್ನಂತ್ಯಮಂಗಲ ಭದ್ರವೀ ಕೃತಿಗೆ || ೪೨ ||

ಹರನಯನಪುರಕಾ ಮುನೀಶ್ವರ
ನಿರುಳಕರ ಶಕೆ ಶಂಖೆಯಬ್ದದಿ
ಚರಿಪ ಸಂವತ್ಸರ ಪ್ರಮೋದೂತ ಗುಬ್ಬಿಪುರದಲ್ಲಿ

ಪರಮ ಹರುಷದಿ ಸೇನಗಣ ಸ
ಚ್ಚರಿತ ಮುನಿಶ್ರೀ ಚಂದ್ರಸಾಗರ
ರೊರೆದ ಕಥೆ ವಿಸ್ತರದಿ ಮೆರೆಯುಲಿ ನಿರುತ ಧರೆಯಲ್ಲಿ ॥ ೪೪ ॥
ಶ್ರೀವಧುವಿನಾತ್ಮೇಶ ತ್ರಿಜಗದಧಿ
ದೇವ ಸೌಖ್ಯನನಂತ ಚತುಷ್ಟಯ
ಪಾವನಶ್ರೀ ಪದ್ಮಪೀಠನೆ ಪರಮಗುಣನಿಧಿಯೆ
ದೇವದೇವರ ದೇವ ನರ ಜಿನ
ದೇವನಂತ್ಯದ ಪರಶುರಾಮನ
ಸಾರ್ವಭೌಮನ ಕಥೆಯೊಳಿದು ಶ್ರೀಚಕ್ರಿಸಂಪದವೂ ॥ ೪೫ ॥
ಸರಸಜನರಿಗೆ ಕುಶಲ ತತ್ವದ
ನೆರವಿ ಸದ್ಭವ್ಯರಿಗೆ ಮಿಥ್ಯದ
ತೊರವಿ ವಿರಕರಿಗರಸುಗಳಿಗಿದು ವೀರಮಂತ್ರಿಗಳಾ
ಹರುಷವೆರಸಿದ ಕಾವ್ಯವನು ವಿ
ಸ್ತರದಿ ರಚಿಸಿದ ಚಂದ್ರಸಾಗರ
ಪರಶುರಾಮನ ಭಾರತವ ಕರ್ನಾಟ ಭಾಷೆಯಲಿ ॥ ೪೬ ॥

ಅಂತು ಅಧ್ಯಾಯ ೨೪ ಕ್ಕಂ ಪದನು ೧೩೭೯ ಕ್ಕಂ ಮಂಗಳ ಮಹಾ ಶ್ರೀ । ಸರ್ವಧಾರಿ ಸಂವತ್ಸರದ ವೈಶಾಖ ಬ ೧೩ ಆದಿತ್ಯವಾರ ಪಿರೇಪಟ್ಟಣದ ಅಪ್ಪೂಶೆಟ್ಟರ ಮಗ ವೀರಣ್ಣನು ಬರೆದಂಥಾ ಪರಶುರಾಮ ಭಾರತದ ಪುಸ್ತಕಕ್ಕೆ ಭದ್ರಂ ಶುಭಂ ಮಂಗಳಂ ॥ ಶ್ರೀ ॥

ವಿಷಯ : ಅರಜಿನರ ಅಂತರಾಳಕಾಲದಲ್ಲಿ ಇದ್ದ ಸುಭೌಮ ಮತ್ತು ಪರಶುರಾಮನ ಕಥೆ.

ವಿಶೇಷ : ಶಿಥಿಲಪ್ರತಿ. ಅಕ್ಷರಗಳು ಸ್ಫುಟವಾಗಿವೆ. ಗ್ರಂಥಾರಂಭಕ್ಕೆ ಮೊದಲು ಲಿಪಿಕಾರರು ವಿಷಯಸೂಚಿಯನ್ನು ಬರೆದಿರುತ್ತಾರೆ. ಕೊನೆಯ ಪುಟದ ಅಂತ್ಯದಲ್ಲಿ ಬರೆದಿರುವ ಬರವಣಿಗೆಯಿಂದ ಪ್ರಕೃತಪ್ರತಿಗೆ ಮೂಲಭೂತವಾದ ಓಲೆಪ್ರತಿಯನ್ನು ಬರೆದಾತ ಅಪ್ಪೂಶೆಟ್ಟರ ಮಗ ವೀರಣ್ಣ ಎಂದು ವ್ಯಕ್ತವಾಗುತ್ತದೆ. ಪತ್ರಗಳ ಒಂದೇ ಕಡೆ ಬರೆದಿದೆ.

874

ಕ. ೨೪	**ಪರಶುರಾಮ ರಾಮಾಯಣ**	ವಾರ್ಧಕ ಷಟ್ಪದಿ
೧೪.೪" × ೧.೫"	ಬೊಬ್ಬೂರು ರಂಗ	ಸು. ೧೭೫೦
೧–೩೨೯ ಪತ್ರ	೫ ಪಂಕ್ತಿ	೬೨ ಅಕ್ಷರ

ಆದಿ : ಶ್ರೀರಸ್ತು ॥ ಪರಶುರಾಮ ರಾಮಾಯಣ ಲೇಖನಾರ್ಥಂ ಸರ್ವೇ ದೇವಾಃ
ಶಿವಂ ಕುರ್ವಂತು ॥ ಓಂ ॥

ಶ್ರೀರಮೆ ಮುಗುಳ್ನಗೆಯ ಮಲ್ಲಿಗೆಯ ಪೊರಸುತಂ
ಸೂರಿ ಸದ್ರೋಲಂಬಗಳನೈದೆ ನೇವಸುತಂ
ಚಾರುಋಷಿ ಹೃದ್ಧ್ಯಾನಮೆಂಬುರುರಸಾಲಮಂ ಮೆರಸುತಂ ಸೌರಭದೊಳೂ
ಸಾರದಿಂ ಭಾಗವತ ಕೋಗಿಲೆಯ ವೊರಸುತಂ
ತೋರುತಂ ಕುವಲಯಕ್ಕಾಮೋದವಿಾವ ಬೊ
ಬ್ಬೊರವಾಸ ವಸಂತ ಮಾಧವಂ ಯಮಗೀಗೆ ಸನ್ಮತಿಯ ಮಂಗ್ಗಳವನು
॥ ೧ ॥

X X X X

ಅಂಬಿಕಾ ವಿಜಯಮಂ ಭಾಮಿನಿಯೊಳರುಪಿದೆಂ
ಬೆಂಬಿಡದೆ ಮುಗುಳಿದಂ ವಾರ್ಧಿಕದ ಷಟ್ಪದದೊ
ಳಂಬುಜಾಕ್ಷನ ಕೃಪೆಯೊಳುಸುರುವೆಂ ಕೃತಿಕರ್ತು ಬೊಬ್ಬೂರಪತಿ ಶಾಶ್ವಿತಂ
ರಂಭಾದಿ ಫಲ ವಸ್ತು ಭೋಗಿಜನಕದು ಪ್ರಿಯಂ
ರಂಭಾ ಸುಚುಂಬನಂ ಸುರಪಗುಂ ಸೌಖ್ಯ ಸೌ
ರಂಭ ಕಾವ್ಯಂ ಬಳಿಕ ರಸಿಕರ್ಗ್ಗೆ ಹಿತಕರಂ ಕಪಿ ರತ್ನಮಂ ಬಲ್ಲುದೇ ॥೧೩॥

X X X X

ಪರಶುರಾಮಂ ಜನಿಶಿ ತಜ್ಜನನಿ ಕಂಠಮಂ
ತರಿದುದಂ ತವಕದೊಳ್ಮೀಣಿಸಿಥೆ ಪ್ರಾಣಮಂ
ಬರಿಶಿ ಬಳಿಕೆಬ್ಬಿಸಿದ ಮಹಿಮೆಯಂ ಕೃತುವೀರ್ಯಸಂಭವಂ ಸುರರಶುವನೂ
ಪುರ ಕೈಯಿದರಪ್ಪಳಿಸಲವನ ಸುತರಾದಳಿದ
ವರ ಮಹಾಜಮದಗ್ನಿಗಸುಗೊಳಿಸಿ ಶಿವ ಪಾರ್ಥಿ
ವರನರೆಯಟ್ಟ ಸದದುದಂ ವಿಪ್ರರ್ಗೆ ಧರಣಿಯಂ ಕೊಟ್ಟುದಂ
ವಿಸ್ತರಿಪೆನು ॥ ೧೫ ॥

ಅಂತ್ಯ : ಯಿದು ಜಗದ್ವಲಯಮಂ ಪ್ಪಾವನಂ ಪೊಂದ್ದಿಸುವ
ವಿಧಿತ ಸತ್ಕಥೆಯುಂದು ಬಲ್ಲಂತ್ತೆ ರುಕ್ಮಿಣಿಯ
ಳುದರಾಬ್ಧಿ ಚಂದ್ರನಾದೊರ್ವ ತಾಂ ಬೊಬ್ಬೂರ ಸುಪ್ರವರ ಸಂಕಲಿತನೂ
ಚದುರಿನಿಂ ದೇವತಾನುಗ್ರಹದೊಳುಸುರಿದೇಂ
ಸದುಹೃದಯರಾವೆಡೆಯೊಳೇಂ ತಪ್ಪು ನೆಪ್ಪಿರ್ದ
ರದ ತಿದ್ದಿ ಲಾಲಿಸುವುದೂಣಯುವೆ ಮದಗಜಂ ನಡದಲ್ಲಿ ಮುಗ್ಗರಿಸಲೂ
॥ ೫೨ ॥

ಅಂತ್ಯಾ ಸಂಧಿ ೪೩ ಕಕಂಪದನು ೧೫೦೩ ಕ್ಕಂ ಜಯಮಂಗಳ ಮಹಾಶ್ರೀ ‖ ಶ್ರೀಪರಶುರಾಮಾಯಣಕಥಾ ಸಂಪೂರ್ನಮಸ್ತು‖ ಈ ಕಾವ್ಯ ಬರದಾತ ಮೂಗುರು ನಂಜಪ್ಪನವರ ಚಿಕ್ಕ ಮಗ ನಂಜಪ್ಪನ ಬರಹಾ ‖ ಸಿದ್ಧಾರ್ಥಿ ಸಂವತ್ಸರದ ಫಾಲ್ಗುಣ ಬ ೧೨ ಸೋಮವಾರದವರಿಗೆ ಪರಶುರಾಮಯಣದ ಪುಸ್ತಕ ಬರದ್ದು ಸಂಪೂರ್ನ ಮಂಗಳ ಮಹಾಶ್ರೀ ‖

ವಿಷಯ : ಪರಶುರಾಮನ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಸುದೃಢ ಪ್ರತಿ. ೨೪೧ ನೇ ಗರಿಯಲ್ಲಿ ಒಂದೇ ಕಡೆ ಬರವಣಿಗೆಯಿದೆ. ೨೬೧ ನೇ ಕ್ರಮಾಂಕದ ಗರಿಯಿಲ್ಲ. ೨೬೨ ರಿಂದ ೨೯೦ ರ ವರೆಗಿನ ಪತ್ರಗಳಲ್ಲಿ ಎರಡೆರಡು ಕ್ರಮಾಂಕಗಳಿವೆ. ೩೨೧ ಕ್ರಮಾಂಕದ ಎರಡು ಪತ್ರಗಳಿವೆ,

875

ಕೆ. ೨೩೫	**ಪರಶುರಾಮ ರಾಮಾಯಣ**	ವಾರ್ಧಕಷಟ್ಪದಿ
೧೭.೩"×೧.೫"	ಬಬ್ಬೂರುರಂಗ	ಸು ೧೭೫೦
೧–೧೬೨ ಪತ್ರ	೭ ಪಂಕ್ತಿ	೮೦ ಅಕ್ಷರ

ಆದಿ : ಶುಭಮಸ್ತು ‖ ಆಂಗೀರಸ ನಾಮ ಸಂ‖ ಜೇಷ್ಠ ಬ ೧ ರಲ್ಲು ಪರಶುರಾಮಾಯಣ ಬರಿ....ವದಕ್ಕೆ ಶುಭಮಸ್ತು ಶ್ರೀರಸ್ತು ‖ x x

ಶ್ರೀರಮೇ ಮುಗುಳ್ನಗೆಯ ಮಲ್ಲಿಗೆಯ ಪೊರಸುತಂ
ಸೂರಿ ಸದ್ಬ್ರೋಲಂಬಗಳನೈದೆ ನೆರೆಸುತಂ
ಚಾರು ರುಷಿ ಹೃಧ್ಯಾನಮೆಂಬುರು ರಸಾಲಮಂ ಮೆರಸುತಂ ಸೌರುಭದೊಳೂ
ಸಾರದಿಂ ಭಾಗವತ ಕೋಗಿಲೆಯಂ ಮೆರಸುತಂ
ತೋರುತಾಗೆರಡನೆ ವಸಂತನೊಲು ನಲಿವ ಬೊ
ಬ್ಬೂರ ವಾಸ ವಸಂತ ಮಾಧವಂ ಯಮಗೀಗೆ ಸಂನ್ಮತಿ ಶುಭೋದ
x x x ಯವನೂ ‖ ೧ ‖
ಅಂಬಿಕಾ ವಿಜಯಮಂ ಭಾಮಿನಿಯೊಳರುಪಿಹೇಂ
ಬೆಂಬಿಡದೆ ಮುಗುಳಿದಂ ವಾರ್ಧೀಕ ಷಟ್ಪದಿಯೊ
ಳಂಬುಜಾಕ್ಷನ ಕೃಪೆಯೊಳುಸುರುವೇಂ ಕೃತಿ ಕರ್ತುಜ ಬೊಬೂರ ಪತಿ
ಶಾಶ್ವಿತಂ

ರಂಭಾದಿ ಫಲಮುಸ್ತು ಭೋಗಿಜನಕದು ಪ್ರಿಯಂ
ರಂಭಾ ಸುಚುಂಬನಂ ಸುರಪಗುಂ ಸಾಧ್ಯ ಸೌ
ರಂಭಕಾವ್ಯಂಬ ಕಾವ್ಯಂ ಬಳಿಕ ರಸಿಕರ್ಗೆ ಹಿತಕರಂ ಕಪಿ ರತ್ನಮುಂ
ಬಲ್ಲುದೇ ॥ ೧೫ ॥
ಪರಶುರಾಮುಂ ಜನಿಸಿ ಸ್ವಜನನಿ ಕಂಠಮುಂ
ತರಿದು ತವಕದಿಂ ಮುತ್ತಿರದೆ ಪ್ರಾಣಮುಂ
ಬರಿಸಿ ಬಳಿಕೆಬ್ಬಿಸಿದ ಮಹಿಮೆಯಿಂ ಕ್ರುತುವೀರ್ಯಸಂಭವಂ ಸುರ
ಪಶುವನೂ
..........ಕ್ರೊದರಪ್ಪಳಿಸಲವನ ಸುತರಿಂದಳಿದ
ವರ ಮಹಾಜಮದಗ್ನಿಗಸುಗೊಳಿಸಿ ಪಾರ್ಥಿವರ
ನೆರೆಯುಟ್ಟಿ ಸದದುದಂ ವಿಪ್ರರ್ಗೆ ಧರಣಿಯಂ ಕೊಟ್ಟುದಂ ವಿಸ್ತರಿ
ಪೆನೂ ॥ ೧೬ ॥

ಅಂತ್ಯ : X X X X X ಅಂತೂ ಸಂಧಿ ೪೧ ಕಂ ಪದನೂ ೧೫೬೬ ಕ್ಕಂ ಮಂಗಳ
ಮಹಾಶ್ರೀ. X X X

ದುರ್ಜೀವಿ ತಾಂ ಜೀಯದಾಗಲ್ಕೆ ಪೂರ್ವಜಂ
ವರ್ಜಿಶಿಯೆ ಮುಂನ್ನಕಟ ಗಮಿಶಿದಂ ಕಿಂಚಿತುರು
ಸಜ್ಜನ ಪ್ರಕೃತಿಯಂ ಕಲಿತಮಾಗೆಂನ್ನೊಳು ಭಾಶಿಶಿರೆ ಕಾರುಂಣ್ಯದೀ
ಪರ್ಜಂನ್ಯಮುಂ ಮೇಲೆ ಕೇಕಿಗುಂ ತಲೆದೋರಿ
ಆರ್ಜಿಶಿದ ವಿಭವದಿಂ ನಲಿಸುವಂತೀಗಳುಂ
ನಿರ್ಜರಾರ್ಚಿತನಪ್ಪ ರಘುಜನಂ ಮೈದೋರ್ದು ತಳ್ಕಿಪಂ ಕೇಳೆಂದನೂ
॥ ೧೩ ॥

ವಿಷಯ : ಪರಶುರಾಮುನ ಚರಿತ್ರೆ.

ವಿಶೇಷ : ಅಸಮಗ್ರ. ಗರಿಗಳನ್ನು ಅಲ್ಲಲ್ಲಿ ಹುಳುಗಳು ಕೊರೆದಿವೆ. ಕೆಲವು ಕಡೆ ಪದ್ಯಗಳು ಲುಪ್ತವಾಗಿವೆ. ೧೧ ನೆಯ ಕ್ರಮಾಂಕದ ಪತ್ರಗಳು ಎರಡಿವೆ. ಸುಂದರ ಬರಹ. ಸಂಧಿಗಳ ಆರಂಭದಲ್ಲಿ ವಿಷಯ ಸೂಚನೆಯೂ ದೆ. ಇ

876

ಕೆ.ಎ. ೭೬ | **ಪರಶುರಾಮ ರಾಮಾಯಣ** | ವಾರ್ಧಕ ಷಟ್ಪದಿ
೧೨.೮"×೮" | ಬೊಬ್ಬುರು ರಂಗ | ಸು. ೧೭೫೦
೧-೧೬೧ ಪತ್ರ | ೨೦ ಪಂಕ್ತಿ | ೪೦ ಅಕ್ಷರ

ಆದಿ: ಪರಶುರಾಮಾಯಣ ॥ ಶ್ರೀ ಶುಭಮಸ್ತು ॥
ಶ್ರೀರಮೆ ಮುಗುಳ್ನಗೆಯ ಮಲ್ಲಿಗೆಯ ಪೊರಸುತಂ
ಸೂರಿ ಸದ್ರೋಲಂಬಗಳನ್ಸೆದೆ ನೇವಸುತಂ
ಚಾರು ಖುಷಿ ಹೃದ್ಯಾನಮೆಂಬುರು ರಸಾಲಮಂ ಮೆರಸುತಂ ಸೌರಭದೊಳೂ
ಸಾರದಿಂ ಭಾಗವತ ಕೋಗಿಲೆಯ ಮೊರಸುತಂ
ತೋರುತಂ ಕುವಲಯಕ್ಕಾಮೋದಮಿಾವ ಬೊ
ಬೊಬ್ಬುರವಾಸ ವಸಂತ ಮಾಧವಂ ಯಮಗೀಗೆ ಸನ್ಮತಿಯ
ಮಂಗಳವನೂ ॥ ೧ ॥

X X X X

ಅಂಬಿಕಾ ವಿಜಯಮಂ ಭಾಮಿನಿಯಳರುಪಿದೆಂ
ಬೆಂಬಿಡದೆ ಮುಗುಳಿದಂ ವಾರ್ಧಿಕದ ಷಟ್ಪದದೊ
ಳಂಬುಜಾಕ್ಷನ ಕೃಪೆಯೊಳುಸುರುವೆಂ ಕೃತಿಕರ್ತುರ್ ಬೊಬ್ಬೂರ ಪತಿ ಶಾಶ್ವಿತಂ
ರಂಭಾದಿಫಲವಸ್ತು ಭೋಗಿಜನಕದು ಪ್ರಿಯಂ
ರಂಭಾ ಸುಚುಂಬನಂ ಸುರಪಗುಂ ಸೌಖ್ಯ ಸಾ
ರಂಭಕಾವ್ಯಂ ಬಳಿಕ ರಸಿಕರ್ಗೆ ಹಿತಕರಂ ಕಪಿ ರತ್ನಮಂ ಬಲ್ಲದೇ ॥ ೧೩ ॥

X X X X

ಪರಶುರಾಮಂ ಜನಿಶಿ ತಜ್ಜನನಿ ಕಂಠಮಂ
ತರಿದುದಂ ತವಕದೊಳ್ರೇಣಿರಥೆ ಪ್ರಾಣಮಂ
ಬರಿಶಿ ಬಳಿಕೆಬ್ಬಿಸಿದ ಮಹಿಮೆಯುಂ ಕೃತುವೀರ್ಯಸಂಭವಂ ಸುರರಸುವನೂ
ಪುಕ್ಕೊಯ್ದು ರಪ್ಪಳಿಸಲವನ ಸುತರಾದಳಿದ
ವರ ಮಹಾ ಜಮದಗ್ನಿಗಸುಗೊಳಿಸಿ ಪಾರ್ಥಿವರ
ನರೆಯಟ್ಟಸದದುದಂ ವಿಪ್ರರ್ಗೆ ಧರಣಿಯುಂ ಕೊಟ್ಟುದಂ ವಿಸ್ತರಿಪೆನೂ ॥೧೫॥

ಅಂತ್ಯ: ಇದು ಜಗದ್ವಯಮಂ ಪಾವನಂ ಪೊಂದಿಸುವ
ವಿಧಿತ ಸತ್ಕಥೆ ಯಂದು ಬಲ್ಲಂತೆ ರುಕ್ಮಿಣಿಯ
ಉದರಾಬ್ಧಿ ಚಂದ್ರನಾದೋರ್ವ ತಾಂ ಬೊಬ್ಬೂರ ಸುಪ್ರವರ ಸಂಕಲಿತನೂ
ಚದುರಿನಿಂ ದೇವತಾನುಗ್ರಹದೊಳುಸುರಿದೇಂ
ಸದ್ಧೃದಯರಾವೆಡೆಯೊಳೇಂ ತಪ್ಪು ನೆಪ್ಪಿರ್ದ
ರದ ತಿದ್ದಿ ಲಾಲಿಸುವುದೂಣಯವೆ ಮದಗಜಂ ನಡವಲ್ಲಿ
ಮುಗ್ಗರಿಸಲೂ ॥ ೪೨ ॥

ಅಂತು ಸಂಧಿ ೪೩ ಕ್ಕಂ ಪದನೂ ೧೫೪೩ ಕ್ಕಾಂ ಮಂಗಳ ಮಹಾ ಶ್ರೀ ||

ವಿಷಯ ಪರಶುರಾಮನ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

877

ಕೆ.ಬಿ. ೩೩೫	**ಪರಶುರಾಮ ರಾಮಯಣ**	**ವಾರ್ಧಕ ಷಟ್ಪದಿ**
೮.೯"X೬.೮"	ಬೊಬ್ಬೂರು ರಂಗ	ಸು. ೧೭೫೦
೧—೫೨೦ ಪುಟ	೧೭ ಪಂಕ್ತಿ	೨೪ ಅಕ್ಷರ

ಆದಿ : ಶ್ರೀರಮೆ ಮುಗುಳ್ನಗೆಯ ಮಲ್ಲಿಗೆಯ ಪಸರಿಸುತ
ಸೂರಿ ಸದ್ರೋಲಂಬಗಳನ್ನೈದೆ ನೆರಸುತಂ
ಚಾರು ಋಷಿ ಹೃದ್ಧ್ಯಾನಮೆಂಬುವ ರಸಾಳಮಂ ಮೆರೆಸುತಂ ಸೌರಭದೊಳು
ಸಾರದಿಂ ಭಾಗವತ ಕೋಗಿಲೆಯ ಮೆರೆಸುತಂ
ತೋರುತ್ತ ಮೆರೆವ ವಸಂತನೊಲು ನಲಿವ ಬೊಬ್ಬೂ
ರುರುವಾಸ ಶ್ರೀ ಮಾಧವಂ ತನಗೀಗೆ ಸನ್ಮತಿ ಸುಖಶುಭೋದಯ
ವನೂ || ೧ ||

X X X X

ಅಂಬಿಕಾ ವಿಜಯಮಂ ಭಾಮಿನಿಯೊಳರುಪಿದೇಂ
ಬೆಂಬಿಡದೆ ಮಗುಳಿದಂ ವಾರ್ಧಿಕದ ಷಟ್ಪದಿಯೊ
ಳಂಬುಜಾಕ್ಷನ ಕೃಪೆಯೊಳುಸುರುವೆಂ ಕೃತಿಕರ್ತೃ ಬಬ್ಬೂರಪತಿ ಶಾಶ್ವಿತಂ
ರಂಭಾದಿ ಫಲವಸ್ತು ಭೋಗಿಜನಕದು ಪ್ರಿಯಂ
ರಂಭಾದಿ ಚುಂಬನಂ ಸುರಪಗುಮಸಾಧ್ಯ ಸೌ
ರಂಭ ಕಾವ್ಯಂ ಬಳಿಕ ರಸಿಕರ್ಗೆ ಹಿತಕರಂ ಕಪಿರತ್ನಮಂ ಬಲ್ಲುದೇ || ೧೫ ||

X X X X

ಪರಶುರಾಮಂ ಜನಿಸಿ ಸ್ವಜನನಿಯ ಕಂಠಮಂ
ತರಿದುದಂ ತವಕದಿಂ ಮತ್ತಿರದೆ ಪ್ರಾಣಮಂ
ಬರಿಸಿ ಬಳಿಕೆಬ್ಬಿಸಿದ ಮಹಿಮೆಯಂ ಕ್ರತುವೀರ್ಯಸಂಭವಂ ಸುರಪಶುವನು
ಪುರಕೊಯ್ದು ರಪ್ಪಳಿಸಲವನ ಸುತರಿಂದಳಿದ
ವರಮಹಾಜಮದಗ್ನಿಗಸುಗೊಳಿಸಿ ಪಾರ್ಥಿವರ
ನೆರೆಯಟ್ಟ ಸದೆದುದಂ ವಿಪ್ರರ್ಗೆ ಧರಣಿಯಂ ಕೊಟ್ಟುದಂ ವಿಸ್ತರಿಪೆನು
|| ೧೭ ||

ಅಂತ್ಯ : ನಿಖಿಳ ದೇವರ್ಕಳಿಂದಾಗೈದೆ ತಮತಮಗೆ
ಸುಕರಾಬ್ಜಗಳ್ ಮುಗಿದು ಸಾಗಿದುದು ನೀ ಭಯದೊ
ಳಕಳಂಕ ಪಟ್ಟಾಭಿರಾಮನಂ ಕೊಂಡಾಡುತ್ತ ಬಳಿಕ ದಿವಿಗತ್ತಲೂ
ಸುಖದೊಳುಂ ಸಾಂಬ್ರಾಜ್ಯದಿಂ ಕುಳಿತು ಪೊಡವಿಯಂ
ಭಕತವತ್ಸಲನಪ್ಪ ಶ್ರೀರಾಮನಮೃತಾಂಶು
ಪ್ರಕೃತಿ ತದ್ಧರ್ಮದಿಂ ಪಾಲಿಸಿದನೆಂತೊರೆಯಲಾ ವಿಭವದುತ್ಕೃಷ್ಟವಾ
|| ೫೮ ||

ಅಂತು ಸಂಧಿ ೪೩ಕ್ಕೆ ಪದನು ೧೬೭೨ಕ್ಕೆ ಮಂಗಳ ಮಹಾಶ್ರೀ ||

ಈ ಕಾವ್ಯವು ಮಂಗಳವಿಲ್ಲದೆ ನಿಂತುಹೋಗಿರುವದ್ದರಿಂದ ಹೊಸದಾಗಿ ಮಾಡಿ
ಸೇರಿಸಿದೆ ೪೪ನೇ ಸಂಧಿ || x × x x

ಜಯ ಜನಾರ್ದನ ಮುಕುಂದ ಮಾಧವ ಕೃಷ್ಣ
ಜಯ ಗೋವಿಂದ ವಾಮನ ರಾಮ ಗೋಪಾಲ
ಜಯ ಮಧುಕೈಟಭ ಪ್ರಮುಖಾಖಿಲಾಮರವೈರಿವ್ರಾತ ಸಂಹಾರೀ
ಜಯ ವಶಿಷ್ಠ ವಿಶ್ವಾಮಿತ್ರ ಭರದ್ವಾಜನುತನೆ
ಜಯ ಜನಕಜಾಶೋಕ ಹರ ಹನುಮ ಸಧ್ವಜನೆ
ಜಯ ಸಾಕೇತಪುರ ಲಕ್ಷ್ಮೀನಿವಾಸ ಶ್ರೀಹರಿಯಂಶ ಶ್ರೀರಾಮ || ೧೦ ||

ಯದಕ್ಷರ ಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಸ್ತು ತೇ ||

ಓಂ ತತ್ಸದಿತಿ ಶ್ರೀ ಕೃಷ್ಣಾರ್ಪಣಮಸ್ತು ||

ಅಂತೂ ಸಂಧಿ ೪೪ಕ್ಕೆ ಪದನೂ ೧೬೭೭ಕ್ಕೆ ಮಂಗಳಮಸ್ತು|| ಶ್ರೀ ರಾಮಜಯ||

ವಿಷಯ : ಪರಶುರಾಮನ ಕಥೆ.

ವಿಶೇಷ: ಪ್ರತಿಯ ಕಾಲ|೯೧೦೩. ಈ ಕಾವ್ಯವನ್ನು ನಾಲ್ಕು ಸಂಪುಟಗಳನ್ನಾಗಿ ವಿಭಾಗ ಮಾಡಿ ಹಿರಿಯೂರಿನ ಗೌರ್ನಮೆಂಟ್ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ವೆಂಕಟರಂಗೈಯ್ಯಂಗಾರ್ಯರು ಪರಿಷ್ಕರಿಸಿ ಬರೆದಿರುವ ಶುದ್ಧಪ್ರತಿಯೆಂದು ಪುಸ್ತಕದ ರಕ್ಷಾಪತ್ರದಲ್ಲಿ ಬರೆದಿದೆ. ೧೮ ನೇ ಸಂಧಿಗೆ ೧ ನೆಯ ಸಂಪುಟ ಮುಗಿದಿದೆ. ಅದರ ಕೊನೆಯಲ್ಲಿ 'ಹಳೆಕಾವ್ಯದ ತಪ್ಪು ತಿದ್ದುವುದು ಹೊಸ ಕಾವ್ಯರಚನೆಗಿಂತ ಶ್ರಮವಾಯಿತು. ದಿನಕ್ಕೆ ೧೫ ಪದ್ಯಕ್ಕಿಂತ ಹೆಚ್ಚು ಸಾಗಲಿಲ್ಲ' ಎಂದೂ ಬರೆದಿದೆ. ೩೫ ನೇ ಸಂಧಿಗೆ ೨ನೆಯ ಸಂಪುಟವೂ ೪೧ನೆಯ ಸಂಧಿ ೩೧ನೆಯ ಪದ್ಯ ಪೂರ್ತಿ ೩ನೆಯ ಸಂಪುಟವೂ ಉಳಿದಭಾಗ ನಾಲ್ಕನೆಯ ಸಂಪುಟವೂ ಆಗಿವೆ.

878

ಕೆ. ೫೯೩ | ಪರ್ವತಚಾರಿತ್ರ | ಭಾಮಿನೀ ಷಟ್ಪದಿ

೧೦.೪"×೧.೪" | ಶಿಂಗಯ್ಯ | ?

೧_೪೬ ಪತ್ರ | ೬ ಪಂಕ್ತಿ | ೩೫ ಅಕ್ಷರ

ಆದಿ : ಶ್ರೀ ಚವುಡೇಶ್ವರಿ ರಾಮಲಿಂಗ ಸ್ವಾಮಿನೆ ನಮಃ ॥ ಪರ್ವತ ಚೆರಿತ್ರೆ ॥

ಗಜಮುಖನೆ ಮೆರೆವ ಯೇಕದಂತನೆ
ನಿಜಗುಣನಿಮಿನತ ಪರುಶಧರನೆ
ರಜತಗಿರಿಗೆ ವಡೆಯನಾದ ಮಲ್ಲಿಕಾರ್ಜುನನೂ
ಅಜಗಣ ಹರಿ ರುದ್ರ ಅದಿಗಳ ನೆರೆ
ಬಜಿಸುತಿಹ ಅ............ನು
ಶ್ರಿಜಗವಂದಿತ ಗಣಪ ಸಲುವಿಗೆ ಮತಿಗೆ ಮಂಗಳವಾ ॥ ೧ ॥

ಧರೆಗೆ ಮೂ............ಶ್ರೀ ಗಿರಿ
ನರರೊಳಗೆ ಯಿಂನ್ಯಾರು ಕಂಡಡೆ
ಪರಮ ಪದವಿಯ ಕೊಡುವನವರಿಗೆ ಮಲ್ಲಿಕಾರ್ಜುನನೂ ॥ ೨ ॥

ಪರ್ವತದ ಮಾತೆಲ್ಲಿ ಹುಟ್ಟಿತು
ಪರ್ವತವ ತಾ ಮುಂದೆ ಬಂದಿದೆ
ಪರ್ವತಕೆ ತಾ ಮುಂದೆ ನಡೆಯಲಿ
ಪರ್ವತಾಶ್ರಮದಿಂದ ಬಂದಿರೆ
ಪರ್ವತದ ಮಹಿಮೆಯನು ಹೇಳಿರೆ
ಪರ್ವತ ಚೆರಿತ್ರೆಯನು ಕೇಳ್ದಡೆ ಕೋಟಿ x x x ತೀರ್ಥ ಫಲವು ॥

ಭೂಮಿ ಭಾರದ ವದೆಯ ಕಳೆಯಲು
ಸೋಮವಂಶದ ನೃಪತಿ ಕೇಳ್ದಡೆ
ರೋಮಜನು ಹೇಳಿದನು ಶ್ರೀ ಪರ್ವತದ ಮಹಿಮೆಯನು ॥ ಪದನೂ ॥

ಅಂತ್ಯ : ಕೇಳಿರೈ ಯಿಾ ಪರ್ವತ ಚೆರಿತ್ರೆಯ
ಹೇಳಿದವನಿಂನ್ಯಾರು ಯೆಂದಡೆ
ಬಾಳಲೋಚನನಾಳು ಕಲಿಯುಗ ಪ್ರತಮ ಪದವಿಯಲೀ
ಯೇಳಿಕೆಯು ಗೌತಮನ ಗೋತ್ರದ
ಮೇಳದಲಿ ನಿಕರಸನಾತ್ಮಜ
ಬಾಲಕನು ಶಿಂಗಯ್ಯನೆಂಬ ನಾಮ ಧರೆಯೊಳಗೆ ॥ ೪೩ ॥

ವಾಲೆಯಲಿ ತುಂಬಿರ್ದ ಬರಹವ
ನಾಲಿಗೆಗಳಿಂದರಿವರ್ಯೆ ಸಲೆ
ಆಲಿ ಕಿವಿಗಳು ನುಡಿಯಬಲ್ಲವೆ ಕಾರ್ಯ್ಯಲಕ್ಷಣವಾ
ವೋಲೆಯಂತ್ತಿರೆ ಯೆಂನ್ನ ಮತಿಯನು
ಶೂಲಧರ ಶ್ರೀ ಮಲ್ಲಿನಾತ ಲಿಂಗನು
ಮೇಲೆ ಕಲಿಶಿದ ತನ್ನ ಮಹಿಮೆಯ ಮೆರೆಯಬೇಕೆಂದೂ ॥ ೪೪ ॥

ತೊತ್ತು ತಂನ್ನಿಚ್ಚೆಯಲಿ ಕೆಲಸವಾ
....ಮುಟ್ಟೆ ಮಾಡಲು ಯಿಲ್ಲಳೆ
ಹೊತ್ತರಿದು ಮನೆವೊಡತಿ ಹೇಳಲು ಕೇಳಿ ಕೇಳಿ ಮಾಡುವಳು
ಕರ್ತುರ್ ಶ್ರೀಗಿರಿನಾತ ಲಿಂಗವು
ಯೆತ್ತಿ ಯೆಂನ್ನನು ವೊಡದು ಶಿಕ್ಷಿಸಿ
ಬಿತ್ತರದ ಪರ್ವ್ವತಚೆರಿತ್ರೆಯನೋದ ಕಲಿಶಿದನೂ ॥ ೪೫ ॥

ಅಂತು ಸಂಧಿ ೫ ಕ್ಕಂ ಪದನು ೨೧೫ ಕ್ಕಂ ಮಂಗಳ ಮಹಾಶ್ರೀ ॥ ಭವನಾಮ ಸಂವತ್ಸರದ ಫಾಲ್ಗುಣ ಬಹುಳ ೧೩ ಶುಕ್ರವಾರದಲ್ಲು ಅಂಣಾರಲ್ಲಿಯಿರುವ ಲಕ್ಷುಮ್ಮೆಯ್ಯನವರ ಮಗ ಕುಪ್ಪೈಯ್ಯನು ಅರ ಕೊಟಾರದ ಚಿಕ್ಕುಮಾದಶೆಟ್ಟ ಮಗ ಮುದ್ದುಶೆಟ್ಟಗೆ ಬರದುಕೊಟ್ಟ ಪರ್ವ್ವತ ಚೆರಿತ್ರೆ.

ವಿಷಯ : ಶ್ರೀಪರ್ವತದ ಮಹಿಮೆ.

ವಿಶೇಷ : ಕೆಲವು ಪತ್ರಗಳ ಅಂಚು ಮುರಿದಿದೆ. ಮತ್ತೆ ಕೆಲವು ಪತ್ರಗಳನ್ನು ಹುಳು ಹೊಡೆದಿದೆ.

879

ಕೆ.೨೭೩	**ಪಲ್ಲೀಶಕುನ ಇತ್ಯಾದಿ ಜ್ಯೋತಿಷ ವಿಷಯ**	ಪದ್ಯ, ಗದ್ಯ
೧೪.೨" × ೨"	?	?
೧—೩೬ ಪತ್ರ	೬ ಪಂಕ್ತಿ	[illegible] ಅಕ್ಷರ

ಆದಿ : ಗೌಳಿ ಬಿದ್ದ ಫಲ—ನೆತ್ತಿಯ ಮೇಲೆ ಬೀಳಲೆ ಕಲಹ
ನಡುನೆತಿಯ ಮೇಲೆ ಬೀಳೆ ತಂತೆ ತಾಯಿಗೆ ಹೊಲ್ಲ
ಯಡದ ಸಿರದ ಮೇಲೆ ಬೀಳೆ ಅಂಣಂದರಿಗೆ ಹೊಲ್ಲ

ಬಲವ ಸಿರದ ಮೇಲೆ ಬೀಳೆ ತಂಮಿಂದರಿಗೆ ಹೊಲ್ಲ
ಬಲದ ಸಿರದ ಹಿಂಭಾಗದಲ್ಲು ಸೋದರ ಮಾವಿಂದಿರಿಗೆ ಹೊಲ್ಲ
ಯಡದ ಶಿರದ ಹಿಂಭಾಗದಲ್ಲಿ ಬೀಳೆ ಧನಹಾನಿ
ನಡುಗೂದಲ ಮೇಲೆ ಸ್ತ್ರೀಯರ ಸಂಪತ್ತಿ
ತುರುಬಿನ ಮೇಲೆ ಬೀಳೆ ಅಪಮೃತ್ಯು
ತುದಿಗೂದಲಲಿ ಬೀಳೆ ಮರಣ ||

ಅಂತ್ಯ : ಕಂನ್ಯಾಗೌಜ್ಜ್ರರಿ ಶಂಖಂ ದಾಧಿಪಲಕುಸುಮಂ ಪಾವಕಂ ದೀಪ್ಯಮಾನಂ
ಯಾನಂ ವಾ ವಿಪ್ರಯುಗ್ಮಂ ಹಯಗಜ ವೃಷಭಂ ಪೂರ್ಣ್ನಕುಂಭ
ದ್ವಯಂ ವಾ
ವುದೃತ್ಯಂ ಪೂರ್ಣ್ನಕುಂಭಂ ಜಲಚರಯುಗಲಂ ಸಿದ್ಧಮನ್ನಂ ಶಬಂ ವಾ
ವೇಶಾಸ್ತ್ರೀ ಮಾಂಸಖಂಡಂ ಪ್ರಿಯಹಿತವಚನಂ ಮಂಗಲಂ
ಪ್ರಸ್ತುತಾನಿ || ೧ ||

ತಕ್ರಂ ತೈಲಾಭಿಷಿಕ್ತಂ ಭುಜಗಮಭಿಮುಖಂ ಮುಕ್ತಕೇಶಂ ಚ ನಗ್ನಂ
ರಕ್ತಸ್ತ್ರೀ ರಿಕ್ತಭಾಂಡಂ ಪ್ರತಿಮುಖ ಕಲಹಂ ವಾನರಂ ಕಾಷ್ಟಭಾರಂ
ವಿಪ್ರೈಕಂ ಛಿನ್ನನಾಶಂ ಜಟಮುಕುಟಧರಾ ಭರ್ತೃಹೀನಂ ಚ ನಾರಿ
ಪ್ರಸ್ತಾವೇ ಪ್ರಸ್ತುತಾನಾಂ ಯಿತಿ ಭವತಿ ನರಃ ಕುರ್ವ್ವತೇ ಕಾರ್ಯ್ಯಹಾನಿಂ
|| ೨ || ಶ್ರೀ ||

ವಿಷಯ : ಪಲ್ಲೀ ಶಕುನ, ಕಾಕಪ್ರವೇಶಫಲ ಇತ್ಯಾದಿ ಜ್ಯೋತಿಷ ವಿಚಾರ.

ವಿಶೇಷ : ಆದಿ ಅಂತ್ಯಗಳಲ್ಲಿ ಕೆಲವು ಶುದ್ಧ ಓಲೆಗಳಿವೆ. ಗರಿಗಳ ಒಂದೇ ಪಾರ್ಶ್ವ ದಲ್ಲಿ ಬರವಣಿಗೆ ಇದೆ. ಕೆಲವು ಗರಿಗಳ ಅಂಚು ಮುರಿದಿದೆ.

880

ಕೆ. ೪೩೦	**ಪಶ್ಚಿಮರಂಗಕ್ಷೇತ್ರ ಮಾಹಾತ್ಮ್ಯೆ**	**ವೃತ್ತ**
೧೩.೮"×೧.೯"	ತಿಮ್ಮಕವಿ	೧೬೭೭
೧–೧೫ ಪತ್ರ	೧೧ ಪಂಕ್ತಿ	೭೦ ಅಕ್ಷರ

ಆದಿ : ಪಶ್ಚಿಮರಂಗಕ್ಷೇತ್ರ ಮಹಾತ್ಮೆ || ವೃತ್ತ—
ಶ್ರೀ ಮಂಗಳಾನನಾಬ್ಜ ವಿಲಸನ್ಮಕರಂದ ರಸಾನುಷಂಗಿ ನಿ
ಸ್ಸೀಮ ಮಧುವ್ರತಂ ಶ್ರುತಿ ಸತಿ ಮಕುಟಾನತ ಪಾದ ಪದ್ಮನು

ದ್ದಾಮನಜೇಶಮುಖ್ಯ ಸುರ ಹೃದ್ಗೃಹವಿಸ್ಫುಟ ದೀಪನೀಗೆ ಮ
ತ್ಕಾಮಿತ ಸಿದ್ಧಿಯಂ ಪಡೆದು ಪಶ್ಚಿಮರಂಗವಾಸನಾವಗಂ ॥ ೧ ॥

ಮಾಣದೆ ವಾಗ್ಗಿರೀಂದ್ರತನಯಾದಿ ಸುಪರ್ವ ವಧೂ ಶಿರೋಮಣಿ
ಶ್ರೇಣಿ ವಿರಾಜಿತಾಂಘ್ರಿ ಸತತಾಶ್ರಿತ ಕಲ್ಪಕ ವಲ್ಲರೀ ಶುಕೀ
ವಾಣಿ ಸರೋಜ ಪಾಣಿ ಮುನಿಹೃತ್ಸರಸಿ ತಟರಾಜ ಹಂಸಿ ಕ
ಲ್ಯಾಣಿಯಜಸ್ರಮೆಂಮ್ಮನುಱ್ ರಕ್ಷಿಸು ಪಶ್ಚಿಮ ರಂಗನಾಯಕೀ ॥ ೨ ॥

ಅಂತ್ಯ : ಗುರುತರ ಪಶ್ಚಿಮರಂಗ ಸು
ಚರಿತವನೊಲವಿಂದೆ ಚಿಕ್ಕುಪಾಧ್ಯಂ ಪೇಳ್ದಾ
ದರದಿಂ ಬರೆಯೆನೆ ಲಕ್ಷ್ಮೀ
ನರಸಿಂಹಮ್ರಂ ಬರೆದನೊಲ್ದು ಸುಜನರ್ಮೆಚ್ಚಲ್ ॥ ೬೦ ॥

ಗದ್ಯ ॥ ಯಿದು ವಿನಮದಮರವರ ಕಮಲಭವ ಮುಖ ಸುರಸಮಿತಿ ಮಕುಟತಟ ಘಟಿತ ಮಂಜು ಮಾಣಿಕ್ಯ ಪ್ರಭಾ ಪುಂಜ ರಂಜಿತ ಬಾಲಾತಪ ವಿಕಸತ್ಪಶ್ಚಿಮ ರಂಗಧಾಮ ಕೋಮಲ ಚರಣಾರುಣ ಸರಸಿಜ ಪರಾಗ ಪಟಲ ಚಂಚಚ್ಚಂಚರಿಕಾಯಮಾನ ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಬಿರುದೆಂತೆಂಬರ ಗಂಡ ಯದುವಂಶಪಯಃಪಾರಾವಾರ ಪೂರ್ನ್ನಸುಧಾಕರ ಶ್ರೀ ವೀರ ಚಿಕ್ಕದೇವ ಮಹಾರಾಜ ಕೃಪಾ ರಸಾಶ್ರಯ ಸಚಿವಾಗ್ರಣಿ ಚಿಕ್ಕುಪಾಧ್ಯಾಯ ನಿರೂಪಣದಿಂ ಕವಿತಿಂಮಂ ಪ್ರಣೀತಮಾದ ಕರ್ನ್ನಾಟಭಾಷಾಲಸಿತ ಪಶ್ಚಿಮರಂಗ ಮಾಹಾತ್ಮ್ಯದೊಳ್ ಕ್ಷೇತ್ರತೀರ್ತ್ಥಂಗಳ ವರ್ನ್ನನಂ ಪಂಚಮಾಶ್ವಾಸಂ ॥ ಅಂತು ಆಶ್ವಾಸ ೫ಕ್ಕಂ ಪದ ೨೫೩ಕ್ಕಂ ಮಂಗಳ ಮಹಾಶ್ರೀ ॥

ವಿಷಯ : ಶ್ರೀರಂಗಪಟ್ಟಣದ ಮಾಹಾತ್ಮ್ಯೆ.

ವಿಶೇಷ : ಶಕಟರೇಫದ ಬಳಕೆ ಇದೆ. ೧೧ ನೇ ಪತ್ರ ಲುಪ್ತ. ಮೊದಲು ಕೊನೆಗಳಲ್ಲಿ ಗರಿಯ ಅಂಚು ಮುರಿದಿದೆ.

881

ಕೆ. ೪೭೧/೩ **ಪಶ್ಚಿಮರಂಗಕ್ಷೇತ್ರ ಮಾಹಾತ್ಮ್ಯೆ** ಚಂಪೂ

೧೮" × ೧.೭" ತಿಮ್ಮಕವಿ ೧೬೭೭

೩೩೯—೩೫೧ ಪತ್ರ ೯ ಪಂಕ್ತಿ ೯೩ ಅಕ್ಷರ

ಆದಿ : ಪಶ್ಚಿಮರಂಗಕ್ಷೇತ್ರ ಮಹಾತ್ಮೆ.

ವೃತ್ತ || ಶ್ರೀಮಹಿಳಾನನಾಬ್ಜ ವಿಲಸಂನ್ಮಕರಂದ ರಸಾನುಷಂಗಿ ನಿ
ಸ್ಸೀಮ ಮಧುವ್ರತಂ ಶ್ರುತಿ ಸತಿ ಮುಕುಟಾನತ ಪಾದಪದ್ಮನು
ದ್ದಾಮನುಜೇಶ ಮುಖ್ಯಸುರ ಹೃದ್ಗೃಹ ವಿಸ್ಫುಟ ದೀಪನೀಗೆ ಯ
ತ್ಕಾಮಿತ ಸಿದ್ಧಿಯಂ ಪಡೆದು ಪಶ್ಚಿಮರಂಗ ನಿವಾಸನಾವಗಂ || ೧ ||

x x x x

ಯಿದು ಪಶ್ಚಿಮರಂಗ ಕ್ಷೇ
ತ್ರದ ಸನ್ಮಹಾತ್ಮೆಯಿದಕೆ ಶ್ರೀರಂಗೇಶಂ
ಪದೆದು ಕಥಾಪತಿಯೆನಲೊಡ
ಮಿದನಾರಿಸಿ ಸುಖಿಸದಿಪ್ಪರ್ ಸುಜನರುಮೊಳರೇ || ೬ ||

x x x x

ಕಂ || ಸುಕವಿ ಜನಸೇವಕಂ ಶ್ರೀ
ಚಿಕುಪಾಧ್ಯಯ ಪ್ರಸಾದನಿರತಂ ಸುಮನೋ
ನಿಕರ ವರವೇಣುಗೋಪಾ
ಲಕ ಭಕ್ತಂ ಪೇಳ್ವೆ ನಾನಿದಂ ಕವಿತಿಂಮಂ || ೧೧ ||

ಅಂತ್ಯ : ಗುರುತರ ಪಶ್ಚಿಮರಂಗ ಸು
ಚರಿತೆಯನೊಲವಿಂದೆ ಚಿಕ್ಕುಪಾಧ್ಯಂ ಪೇಳ್ದಾ
ದರದಿಂ ಬರೆಯೆನೆ ಲಕ್ಷ್ಮೀ....
....ಚ್ಚಲ್ || ೬೦ ||

x x x x

ಚಿಕುಪಾಧ್ಯಾಯ ನಿರೂಪಣದಿಂ ಕವಿ ತಿಂಮ ಪ್ರಣೀತ ಕರ್ನಾಟ ಭಾಷಾ ಲಸಿತ ಪಶ್ಚಿಮರಂಗ ಮಹಾತ್ಮ್ಯೆದೊಳ್ ಕ್ಷೇತ್ರ ತೀರ್ಥಂಗಳ ವರ್ನನಂ ಪಂಚಮಾಶ್ವಾಸಂ|| ಅಂತು ಆಶ್ವಾಸ ೫ಕ್ಕಂ ಪದ್ಯಕ್ಕಂ ಮಂಗಳ ಮಹಾಶ್ರೀ||

ವಿಷಯ : ಶ್ರೀರಂಗಪಟ್ಟಣದ ಮಾಹಾತ್ಮ್ಯ.

ವಿಶೇಷ : ಕೊನೆಯ ಎರಡು ಗರಿಗಳು ಮಾತ್ರ ತ್ರುಟಿತ. ಶಕಟರೇಫದ ಬಳಕೆ ಯಿದೆ. ಇದೇ ಕಟ್ಟಿನಲ್ಲಿ ಯಾದವಗಿರಿ ಮಾಹಾತ್ಮ್ಯ, ದಶಕುಮಾರ ಚರಿತ್ರೆ ಎಂಬ ಗ್ರಂಥಗಳಿವೆ.

882

ಕೆ.ಬಿ. ೪೭ **ಪಶ್ಚಿಮರಂಗಕ್ಷೇತ್ರ ಮಾಹಾತ್ಮ್ಯೆ** ಚಂಪೂ

೭.೬"×೬.೨" ತಿಮ್ಮಕವಿ ೧೬೭೭

೧-೪೦ ಪತ್ರ ೧೧ ಪಂಕ್ತಿ ೨೫ ಅಕ್ಷರ

ಆದಿ: ಪಶ್ಚಿಮರಂಗಕ್ಷೇತ್ರ ಮಾಹಾತ್ಮ್ಯೆ ಬರಿಯುವದಕ್ಕೆ ಶುಭಮಸ್ತು ನಿರ್ವಿಘ್ನಮಸ್ತು||
ವೃತ್ತ || ಶ್ರೀ ಮಹಿಳಾನನಾಬ್ಜವಿಲಸನ್ಮಕರಂದ ರಸಾನುಷಂಗಿ ನಿ
ಸ್ಸೀಮ ಮಧುವ್ರತಂ ಶ್ರುತಿಸತಿ ಮಕುಟಾನತ ಪಾದಪದ್ಮನು
ದ್ದಾಮನಜೇಶ ಮುಖ್ಯ'ಸುರಹೃದ್ಗೃಹ ವಿಸ್ಫುಟ ದೀಪನೀಗೆ ಮ
ತ್ಕಾಮಿತ ಸಿದ್ಧಿಯಂ ಪಡೆದು ಪಶ್ಚಿಮರಂಗ ನಿವಾಸನಾವಗಂ || ೧ ||

X X X X

ಇದು ಪಶ್ಚಿಮರಂಗ ಕ್ಷೇ
ತ್ರದ ಸನ್ಮಾಹಾತ್ಮ್ಯ ಯಿದಕೆ ಶ್ರೀರಂಗೇಶಂ
ಪಡೆದು ಕಥಾಪತಿಯೆನಲೊಡ
ಮಿದನಾಲಿಸಿ ಸುಖಿಸದಿರ್ಪ ಸುಜನರುಮೊಳರೇ || ೬ ||

X X X X

ಸುಕವಿ ಜನಸೇವಕಂ ಶ್ರೀ
ಚಿಕುಪಾಧ್ಯಾಯ ಪ್ರಸಾದ ನಿರತಂ ಸುಮನೋ
ನಿಕರ ವರವೇಣುಗೋಪಾ
ಲಕ ಭಕ್ತಂ ಪೇಳ್ವೆ ನಾನಿದಂ ಕವಿ ತಿಮ್ಮಂ || ೧೧ ||

ಅಂತ್ಯ : ಗುರುತರ ಪಶ್ಚಿಮರಂಗ ಸು
ಚರಿತೆಯನೊಲವಿಂದೆ ಚಿಕ್ಕುಪಾಧ್ಯಂ ಪೇಳ್ವಾ
ದರದಿಂ ಬರೆಯೆನ ಲಕ್ಷ್ಮೀ
ನರಸಿಂಹ್ಮಂ ಬರೆದನೊಲ್ದು ಸುಜನರ್ ಮೆಚ್ಚಲ್ || ೬೦ ||

X X X X

ಶ್ರೀ ವೀರ ಚಿಕದೇವ ಮಹಾರಾಜ ಕೃಪಾ ರಸಾಶ್ರಯ ಸಚಿವಾಗ್ರಣಿ ಚಿಕ್ಕು
ಪಾಧ್ಯಾಯ ನಿರೂಪಣದಿಂ ಕವಿತಿಮ್ಮ ಪ್ರಣೀತವಾದ ಕರ್ನ್ನಾಟಕ ಭಾಷಾ
ಲಸಿತ ಪಶ್ಚಿಮರಂಗ ಮಹಾತ್ಮ್ಯೆಯೊಳ್ ಕ್ಷೇತ್ರ ತೀರ್ತ್ಥಂಗಳ ವರ್ನ್ನನಂ
ಪಂಚಮಾಶ್ವಾಸಂ || ಶ್ರೀ ||

ವಿಷಯ : ಶ್ರೀರಂಗಪಟ್ಟಣದ ಮಾಹಾತ್ಮ್ಯೆ.

ವಿಶೇಷ : ಸುಂದರಾಕ್ಷರ. ಕೆಲವು ಕಡೆ ತಪ್ಪಿರುವುದನ್ನು ತಿದ್ದಿದೆ. ೪೦ ನೇ ಪತ್ರದ ಕೊನೆಯಲ್ಲಿ "Compared 20-3-01. ತಿರುನಾರಣ್ಯೆಂಗಾರ್" ಎಂದಿದೆ.

883

ಕೆ.ಬಿ. ೨೫೦/೧ **ಪಶ್ಚಿಮರಂಗಧಾಮ ಸಾಂಗತ್ಯ** **ಸಾಂಗತ್ಯ**

೮"×೬.೬" **ಚಿಕ್ಕುಪಾಧ್ಯಾಯ** **೧೬೭೨**

೧—೧೧ ಪತ್ರ **೨೬ ಪಂಕ್ತಿ** **೩೨ ಅಕ್ಷರ**

ಆದಿ : ಪಶ್ಚಿಮರಂಗ ಸಾಂಗತ್ಯ ಬರೆವರೆ ನಿರ್ವಿಘ್ನೆಮಸ್ತು ॥ ರಾಗ ॥ ಸಾಂಗತ್ಯ ॥

ಶ್ರೀಶನ ಶಿವವಿಧಿ ವಿನುತನ ದಿವ್ಯ ಪ್ರ
ಕಾಶನ ಕಾಮಿತಾರ್ಥದನಾ
ಕಾಶಿ ಕ್ಷೇತ್ರವ ಕಾಯ್ದ ಪಶ್ಚಿಮ ರಂ
ಗೇಶನ ಪದಕೆರಗುವೆನು ॥ ೧ ॥

X X X X

ಯಿಪ್ಪತ್ತನಾಲ್ಕು ನಾಮದ ಸಾಂಗತ್ಯವ
ನೊಪ್ಪದಿಂದೋದುವ ಜನರಾನು
ಕಾಯ್ದೊಲ್ದು ಪಶ್ಚಿಮರಂ
ಗಪ್ಪ ಪೊರೆವ ಕರುಣದಲೀ ॥ ೨೬ ॥

ಅನಘನನಪ್ರಮೇಯನನಪ್ರತಿಮ
ನನನಿಮಿಷಾಧಿಪನನಚ್ಯುತನ
ಅನುಪಮ ಗುಣನನನಭೇದ್ಯ ವಿಕ್ರಮ
ನನನನುಸರಿಸುವೆನನವರತಾ ॥ ೨೭ ॥

ಆದಿಯ ರಂಗಾಧಾರನನನಾದ್ಯರ
ನಾದಾರಧಿಂದಾದ ಪರಿಪನಾ
ಆದಿಸೃಷ್ಟಿಯೊಳಜ ರುದ್ರರನಾಗಿಸಿ
ದಾರಿವಸ್ತುವಿಗೆರಗುವೆನು ॥ ೨೮ ॥

ಯಿದು ಪುಣ್ಯ ಯಿದು ಪಾಪ
ಯಿದು ಸುಖ ಯಿದು ದುಃಖ

ಯಿದು ವಳ್ಳಿತಿದು ಪೊಲ್ಲವೆಂದು
ಯಿದಕ್ಕಿದೆಂದೆಂದೀಗೀ ನುಡಿಯಿತ್ತ್ರೆಡನೆ
ಕಾಯ್ವ ಯಿನದನೆಯಡಿಗೆರುಗುವನು ॥ ೨೯ ॥

ಅಂತ್ಯ : ಠಾಣೆಯವಿಲ್ಲದ ಗಡಿ ಗಡಿ ತಂನೊಂ
ದಾಣೆಯ ನಾನಾದ ದೇಶಾ
ತ್ರಾಣದ ಸುಭಟ ಶ್ರೇಣಿಗೆಟ್ಟರಸಿಗೆ
ವೂಣೆಯುವರದೆ ರಂಗೇಶಾ ॥ ೯೯ ॥

ವಡೆಯನ ನಂಬು ತೊಡೆಯನೆ ಗೈದರು
ವಡೆಯನೆ ಗತಿ ಮತಿ ಯಂದೂ
ನುಡಿಯೊಳಗೊಂದು ನಡೆಯೊಳೊಂದಿಲ್ಲದ ಭೃತ್ಯ
ಕಡೆವಾಯನೆ ರಂಗಧಾಮಾ ॥೧೦೦॥

ಚಿಕದೇವರಾಯನಮಾತ್ಯ ಲಕ್ಷ್ಮೀಪತಿ
ಚಿಕುಪಾಧ್ಯನಿಂದಿನಿತಾ
ಪ್ರಕಟಿತ ಸಂಗತ್ಯವಿದ ಕೇಳ್ವ ಪೇಳ್ವರ್ಗೆ
ಸಕಲಸುಖವ ರಂಗನೀವ ॥೧೦೧॥

ಅಂತು ಸಂಧಿ ೩ ಕಂ ಪದ ೩೦೬ ಕಾಂ ಮಂಗಳ ರಂಗನಾಥ ಮಂಗಳ ಮಹಾಶ್ರೀ ॥

ವಿಷಯ : ಶ್ರೀರಂಗಪಟ್ಟಣದ ಮಾಹಾತ್ಮ್ಯೆ.

ವಿಶೇಷ : ಮೋಡಿ ಅಕ್ಷರ. ಇದೇ ಪುಸ್ತಕದಲ್ಲಿ ಪುರುಷವಿರಹ ಸಾಂಗತ್ಯವೆಂಬ ಮತ್ತೊಂದು ಗ್ರಂಥವಿದೆ. ಪ್ರಕೃತ ಗ್ರಂಥದಲ್ಲಿ ೨೭ ನೇ ಪದ್ಯದಿಂದ ಮುಂದೆ ಅಕಾರಾದಿ ಕ್ಷಕಾರಾಂತ ಅಕ್ಷರಗಳಿಂದ ಕ್ರಮವಾಗಿ ಪ್ರಾರಂಭವಾಗುವ ಪದ್ಯಗಳಿವೆ.

884

ಕೆ.ಬಿ. ೨೬೧	**ಪಶ್ಚಿಮರಂಗನಾಥ ಮಾಹಾತ್ಮೆಯ ಟೀಕು**	ಗದ್ಯ
೭.೯"×೬.೬"	?	?
೧–೧೨ ಪತ್ರ	೨೫ ಪಂಕ್ತಿ	೩೪ ಅಕ್ಷರ

ಆದಿ: ಪಶ್ಚಿಮರಂಗಮಹಾತ್ಮ್ರೆ ಬರೆಯುವರಿ ಶುಭಮಸ್ತು ।

ಟೀಕು ॥ ಪೂರ್ವದಲ್ಲಿ ನೈಮಿಷಾರಣ್ಯದಲ್ಲಿ ದ್ವಾದಶ ವಾರ್ಷಿಕ ಯಾಗವನ್ನು ಮಾಡುತ್ತಂ ಯಿರಲಾಗಿ ಅಲ್ಲಿಗೆ ಸರ್ವಶಾಸ್ತ್ರಾರ್ಥತತ್ವಜ್ಞರಾಗಿ ಜಿತೇಂದ್ರಿಯ ರಾಗಿ ಸಮಸ್ತ ಪ್ರಾಣಿಗಳಲ್ಲಿಯು ದಯೆಯುಳ್ಳವರಾಗಿ ಜಟಾವಲ್ಕಲಧಾರಿ ಗಳಾಗಿ ಯಿರುವ ಸೂತಪುರಾಣೀಕರು ಸಕಲ ದೇಶಗಳ ತೀರ್ಥಯಾತ್ರೆಯನು ಮಾಡಿಕೊಂಡು ವಂದಾನೊಂದು ದಿನದಲ್ಲಿ ಆ ಯಜ್ಞಶಾಲೆಗೆ ಬಂದರು ।

X X X X

ಯಿಾ ಯಷ್ಟಾದಶಪುರಾಣಗಳಲ್ಲಿಯು ಬ್ರಹ್ಮಾಂಡ ಪುರಾಣವು ಪುಣ್ಯದೇಶ ಪುಣ್ಯನದಿ ಪುಣ್ಯಕ್ಷೇತ್ರಂಗಳ ಮಹಾತ್ಮ್ಯವನು ಪ್ರತಿಪಾದಿಸುವಂತ್ಥಾ ದಾದ ಕಾರಣ ಸುಮಸ್ತರಿಗು ಆಪೇಕ್ಷಿತವಾಗಿ ಯಿರುವದು. ಈ ಪುರಾಣ ದಲ್ಲಿ ಪೂರ್ವಾಧ್ಯಾಯಗಳಲ್ಲಿ ನಾರದ ಮುನೀಶ್ವರನು ಪರಮೇಶ್ವರನಿಂದ ಪುಣ್ಯನಧಿ ಪುಣ್ಯಕ್ಷೇತ್ರಗಳ ಮಹಾತ್ಮ್ಯಗಳನ್ನು ಕೇಳಿ ತೃಪ್ತಿಯಿಲ್ಲದೆ ರಂಗಕ್ಷೇತ್ರಗಳ ಮಹಾತ್ಮ್ಯಗಳನ್ನು ಕೇಳಬೇಕೆಂಬ ಯಿಚ್ಛೆಯಿಂದ ಪರಮೇಶ್ವರನಂನು ಕುರಿತು ಬಿಂನಹಂ ಮಾಡುತ್ತಲಿದ್ದಾನು ॥

ಅಂತ್ಯ : ಮನುಷ್ಯರು ಸಂಸಾರ ಅಸ್ಥಿರವೆಂಬುದನ್ನು ವಿಚಾರಿಸಿ ಆವಾಗಲು ಶ್ರೀಮದ್ರಂಗಂ ಮಹದ್ಧಾಮಾ ಯಂದು ದಾರಿನಡವಲ್ಲಿ ನಿಂತಿರುವಲ್ಲಿ ಮಲಗು ವಾಗ ಬೋಜನ ಮಾಡುವಾಗ ಸಂತೋಷದಲ್ಲಿ ಆಕಳಿಸುವಾಗ ದುಃಖದಲ್ಲಿ ರಾಜೋಪದ್ರದಲ್ಲಿ ರೋಗದಲ್ಲಿ ರಂಗಂ ರಂಗಾ ಯಂದು ತ್ರಿಕಾಲದಲ್ಲು ಜಪವ ಮಾಡುತ್ತಲಿರುತ್ತಾರೊ ಅವರು ಸಮಸ್ತ ಭಯಗಳಿಂದಲೂ ಬಿಡಲ್ಪಟ್ಟು ಸಾಯೋಜ್ಯವನ್ನೈದುವರು ಯಂದು ಪಾರ್ವತಿಪತಿಯಾದ ಪರಮೇಶ್ವರನು ನಾರದ ಮುನೀಶ್ವರರಿಗೆ ನಿರೂಪಿಸಿದರು. X X X X ಅವರೆಲ್ಲರಿಗು ಸಮಸ್ತ ಭಯನಿವಾರಣವಾಗುವದು ಯಂದು ಮತ್ತು ಸರ್ವಾಭೀಷ್ಟವು ಕೈಸೇರುವುದು. ಯಿಾ ಗೌತಮ ಕ್ಷೇತ್ರದಲ್ಲಿ ಪಶ್ಚಿಮ ರಂಗ ನಾಥಸ್ವಾಮಿಯವರು ಮಾಹಾತ್ಮ್ಯವನ್ನು ಆರು ವಂದು ಅಕ್ಷರವ ಕೇಳುತ್ತ ಲಿದ್ದಾರೋ ಅವರಿಗೆ ಜ್ಯೋತಿಷ್ಠೋಮ ಯಾಗದ ಫಲವು ಕೈಸಾರುವುದು. ಯಿದು ಸತ್ಯಂ । ಯಿತಿ ಶ್ರೀ ಬ್ರಂಹಾಂಡ ಪುರಾಣೇ ಕ್ಷೇತ್ರಕಂಡೇ ಪಶ್ಚಿಮ ರಂಗನಾಥ ಮಹಾತ್ಮೆಪಂಚಮೋಧ್ಯಾಯಕ್ಕೆ ಸಮಾಪ್ತ ಮಂಗಳಮಹಾಶ್ರೀ॥

ವಿಷಯ : ಶ್ರೀರಂಗಪಟ್ಟಣದ ಮಾಹಾತ್ಮ್ಯೆ.

ವಿಶೇಷ : ಮೋಡಿ ಅಕ್ಷರ. ಓದುವುದು ಕಷ್ಟ. ಕೆಲವು ಪತ್ರಗಳಲ್ಲಿ ಹುಳುಹೊಡೆದು ರಂಧ್ರ ಬಿದ್ದಿದೆ.

885

ಕೆ. ೪೨	**ಪಾಕಶಾಸ್ತ್ರ**	ಗದ್ಯ
೧೩.೪"×೧.೪"	?	?
೧—೨೪ ಪತ್ರ	೭ ಪಂಕ್ತಿ	೬೩ ಅಕ್ಷರ

ಆದಿ : ವಂದ್ದು ಬಳ್ಳ ಹಾಲಂನ್ನು ವಂದು ಬಳ್ಳ ಯಂಣ್ಣೆಯಂನ್ನು ಕೂಡಿಶಿ ಆ ಹಾಲು ಬತ್ತ ಕಾಶಿ ವಂದ್ದು ಮಾನ ಮಜ್ಜಿಗೆಯಂ ಬಿಟ್ಟು ಅದು ಹಿಂ ....ರೆ . ಆ ಹಾಲು ಬಿಗುದು ಕೊಂಬ್ಬದು. ಕಾಸೋದು. ಅದ ಬತ್ತಿಸ ಹುರಿಕೆಯಂನಿಕ್ಕಿ ಬೇಯ ಹಿಂಡ್ಡಿದರೆ ತುಪ್ಪ ಬೀಳ್ವದು

ಅಂತ್ಯ : ನೆಲ್ಲಿಲ್ಲಿಕಾಯ ಸಂಣನಾಗಿ ಕತ್ತರಿಸಿ ವಿಭೂತಿಸುಂಣದಲಿ ಕಲಸಿ ವೂರಲಿಟ್ಟು........ರಿಸಿ ಅಡುವುದು. ಲೋಳಿಸರದ ಕೊನೆಯಂ ತಂದ್ದು ಮೈಯ ನೀಳಕ್ಕೆ ವುತ್ತರಿಸಿ ಅಂಬ್ಬಿಲದಲಿ ತೊಳದು ಮಜ್ಜಿಗೆಯಲ್ಲಿ ಬೇಯಿಸಿ ಯಿಳುಹಿತ ತ............ನೀರಿನಲ್ಲಿ ತೊಳದು ಮತ್ತೆ ಕಿರುಕುಸಾಲೆಯ ಬೇರನಿಕ್ಕಿ ಅಂಬ್ಬಿಲವನಿಕ್ಕೆ ವುಕ್ಕರಿಸಿ ಯಿಳಹಿ ಆ........ನಿಟ್ಟು ಯಂಣ್ಣೆಯ ನೆರೆದು ವುಳಿ ಸಾಸುವೆ ಕರಿಬೇವು ಯಿಂಗ್ಗು ವಗ್ಗರಣೆ ಬಂದ್ದದ ನೋಡಿ ಲೋಳಸರನಿಡು ವುಪ್ಪು ಹಾಕುವದು. ಯಿಳಹಿ ಹುರಿದ ಚೂರ್ನವ....... ವೊಂದ್ದು ಭಾಗ ಹುರಿಯಕ್ಕಿಯ ಮೆಣಸು ತಳಿದರೆ ವುಂದ್ದು ಬೆಲ್ಲ ಯಾಲಕ್ಕಿ ಚೂರ್ನ ಹುಣಿಸೆಹಂಣ್ಣು ವೊಂದ್ದು ....ರದೂ ||

ವಿಷಯ : ಅಡಿಗೆ ಮಾಡುವ ಕ್ರಮ.

ವಿಶೇಷ : ಅತ್ಯಂತ ಶಿಥಿಲಪ್ರತಿ. ಪತ್ರಗಳ ಅಂಚುಗಳು ಮುರಿದಿವೆ. ಶಕಟರೇಫದ ಬಳಕೆ ಇದೆ.

886

ಕೆ.೨೨೪	**ಪಾಂಡವ ಚರಿತ್ರೆ**	ಹಾಡು
೨.೫" × ೧.೪"	ಹುಚ್ಚ	ಸು. ೧೭೦೦
೧-೮೭ ಪತ್ರ	೭ ಪಂಕ್ತಿ	೫೨ ಅಕ್ಷರ

ಆದಿ : ಶ್ರೀ ಗಣಾಪತಿಯೇ ನಮಃ ॥ ಪಾಂಡುವ ಚರಿತ್ರೆ ಬರಉದಕ್ಕೆ ಷುಭ ಮಸ್ತೂ ॥ ....

....ರಮಣಿಯ—| ಶತಕೋಟಿ ಭಾನುಪ್ರಕಾಶ| ಕಾರುಂಣ್ಯಾಕರ ಮುರಾರಿ | ಶಉರಿ | ಶರಣು ವಾರಿಜಾರಿಯ ಕುಲೋತ್ತುಂಗ್ಗಾ | ಧನುಜವೀರ ದಶ ಕಂಟ್ಠ.... ...ದ ಭಂಗ್ಗಾ ದುರಿತಘೂರ ಸಲಹೆಂನ್ನನು ಕ್ರುಪಾಂಗ್ಗಾ | ಜಯತು x x x x ಕರಿಮುಖನ ಬೇಡಿಕೊಂಡೂ | ಯಿಂದ್ಹೂ | ಪೇಳ್ವೆ ಭರತ ಕುಲದವರ ಚರಿತೆಯನೂ | x x × x ॥ ೫ ॥

ಸರಸ ಸಾಹಿತ್ಯ | ವಿದ್ಯಾ ಕುಶಲ ಕೋವಿದರು | ವರಶಾಸ್ತ್ರ ಸಂಪನ್ನರೂ ಜನರೂ ಕೇಳಿ ಧರಣಿಯೊಳಗೆಸವ ಸೋಲೂರಾ | ಸ್ತಳದ ಕರಣಿಕನು ಚಿಕಂಣನವರಾ | ಪತ್ನಿ ಸರಸಿ | ಚಂನ್ನಂಮ್ಮನ ಕುಮಾರಾ | ತಟ್ಟಿಕೆರೆಯ ರಂಗ್ಗನ ಕರುಣದಲಿ ಪೇಳ್ದನು ಹುಚ್ಚ | ಮರದಾಲಿಪುದು ಕ್ರೋದವಾ | ಪದವಾ | ಶ್ರೀ ಜಾನಕೀ ವಲ್ಲಭಾ ॥ ೬ ॥

ಅಂತ್ಯ : ಹರ ಹರಾ ನೊಂದ್ದಿರಗ್ಗಾತ ದಾಸದೊಳಕಟ್ಟಿ | ಮರುತ ಸುತ್ತಬಾ ಪಲು ಗುಣಾ | ಸುಗುಣಾ x x x x ವಿರಾಟನ ಮಂನ್ನಿಸುತ್ತ । ಯುಧಿಷ್ಠಿರನ ಬಿಗಿಬಿಗಿದಪ್ಪಿದಾ | ದೇವಾ ಶ್ರೀ ಜಾನಕೀವಲ್ಲಭಾ ॥ ೫೬ ॥

ತೆಗದಪಿದನು ಪವನನಂದನನ ಪಲುಗುಣನ । ಬಿಗಿದಪ್ಪಿದನು ಯಮಳರಾ ದೇವಾ | ಬಳಿಕ ವೊಗುಮಿಗೆಯ ದಯದಿ ದ್ರುಉಪತ್ತಿಯಾ |

ವಿಷಯ : ಪಾಂಡವರ ಕಥೆ.

ವಿಶೇಷ : ಅಸಮಗ್ರ. ಶಿಥಿಲಪ್ರತಿ. ೧,೪೪,೪೫,೪೯ ನೇ ಗರಿಗಳಲ್ಲಿ ಕೊಂಚ ಭಾಗ ಮುರಿದು ಲುಪ್ತವಾಗಿದೆ. ೫ ನೆಯ ಗರಿಯ ಒಂದು ಪಾರ್ಶ್ವದಲ್ಲಿ ಮಾತ್ರ ಬರಹವಿದೆ. ಅಲ್ಲಿ ೨೨ನೆಯ ಪದ್ಯದವರೆಗೆ ಲೋಪ. ೧೪ ನೆಯ ಕ್ರಮಾಂಕದ ಪತ್ರವಿಲ್ಲ. ಪ್ರತಿಯೊಂದು ಪದವೂ " ಶ್ರೀ ಜಾನಕೀ ವಲ್ಲಭಾ " ಎಂದು ಮುಗಿಯುತ್ತದೆ.

887

ಕ. ೪೬೪	**ಪಾದುಕಾಸಹಸ್ರ ಟೀಕಾ**	ಶ್ಲೋಕ, ಟೀಕು
೧೨.೨"×೧.೫"	?	?
೬೭೭ ಪತ್ರ	೮ ಪಂಕ್ತಿ	೫೫ ಅಕ್ಷರ

ಆದಿ : ....ಭ್ಯಾಂ ಶಠಕೋಪ ಸಂಜ್ಞಯೈವ ।

ದ್ವಿತಯಂ ಸಕಲೋಪ ಜೀವ್ಯಮಾಸೀತ್ಪ್ರಥಮೇನ ಶ್ರುತಿರನ್ಯತಸ್ತದರ್ಥಃ॥ ಟೀ ॥ ಮಣಿಮಯವಾಗಿರ್ಪ ಎಲೆ ಪಾದುಕೆಗಳೆ ಶಠಕೋಪವೆಂಬ ನಾಮದಿಂದಲೇ....ದ್ಧವಾಗಿರ್ಪ ನಮ್ಮಾಳ್ವಾರಿಂದ ನಿಮ್ಮಿಂದ ಸಂಪಾದಿಸಲ್ಪಟ್ಟ ಯಿದೆರಡುಂ ಸಕಲೋಪ ಜೀವ್ಯಮಾದುದು । ಮೊದಲ್ಲಿ ಪೇಳಲ್ಪಟ್ಟ ಶಠಕೋಪ ಮುನಿಯಿಂದ ಸಕಲೋಪಜೀವನವಾಗಿ ಭಾಷಾವೇದಮಾದುದು। ಎರಡನೆಯವಾಗಿರ್ಪ ಪಾದುಕೆಗಳಿಂದ ತದರ್ಥ ಪ್ರತಿಪಾದಕನಾಗಿರ್ಪ ಶ್ರೀರಂಗನಾಥನುಪಜೀವ್ಯಮಾದಂ ॥ ೪ ॥

ಅಂತ್ಯ : ರಥ್ಯಾಸು ರಂಗನೃಪತೇರ್ಮ್ಮಣಿ ಪಾದರಕ್ಷೇ
ತ್ವದ್ಗರ್ಭರತ್ನ ಜನಿತೋ ಮಧುರ ಪ್ರಣಾದಃ ।
ಸಂದರ್ಶನೋತ್ಸುಕಧಿಯಾಂ ಪುರಸುಂದರೀಣಾಂ
ಸಂಪದ್ಯತೇ ಶ್ರವಣಮೋಹನ ಮಂತ್ರಘೋಷಃ ॥

ಟೀ ॥ ರಂಗನಾಯಕನ ಮಣಿಮಯುವಾದೆಲೆ ಪಾದುಕೆಯೆ ನಿನ್ನ ಗರ್ಭಗತವಾದ ರತ್ನಂಗಳಿಂದ ಹುಟ್ಟಿದ,ಮನೋಹರವಾದ ಶಬ್ದವನುಳ್ಳ ಬೀದಿಗಳಲ್ಲಿ ನಿನ್ನ ಸಂದರ್ಶನದಲ್ಲಿ ಸಂತೋಷಬುದ್ಧಿಯನುಳ್ಳ

ವಿಷಯ : ಪಾದುಕಾಸಹಸ್ರ ಗ್ರಂಥದ ಕನ್ನಡ ಟೀಕೆ.

ವಿಶೇಷ : ಅಸಮಗ್ರ ಗ್ರಂಥ. ಆರಂಭದಲ್ಲಿ ಆರು ಪತ್ರಗಳಿಲ್ಲ. ೪೪, ೫೩ ರಿಂದ ೫೭, ೬೩, ೬೪, ೬೮, ಕ್ರಮಾಂಕದ ಪತ್ರಗಳಿಲ್ಲ. ಅಕ್ಷರಗಳು ಸುಂದರವಾಗಿವೆ. ಶಕಟರೇಫದ ಬಳಕೆ ಇದೆ.

888

ಕೆ. ೪೦೪	**ಪಾರಿಜಾತ**	ಯಕ್ಷಗಾನ
೬.೬" × ೧.೫"	?	೧೯ ನೆಯ ಶತಕ
೧–೪೧ ಪತ್ರ	೭ ಪಂಕ್ತಿ	೩೫ ಅಕ್ಷರ

ಆದಿ : ಪಾರಿಜಾತ ಬರಲುದಕ್ಕೆ ಶುಭಮಸ್ತು ॥
ಶ್ರೀ ರಾಮ ॥ ಕಂದ ಪದ್ಯ ॥

ಶ್ರೀ ವನಿತೆಯ ಮನದಂ
ಭಾವಜ ಪಿತನಮರವೃಂದಾ ವಂದಿತ ಚರಣಂ
ದೇವಕಿಯಣುಗಂ ಘನ ನಯ ಶೋ
ಭವಹವ ನೀನ್ಯಮಗೆ ನಿತ್ಯಸಂಪದವಮಂ ॥

ಬುಡ ಕಡೆಯಿಂದಂ ವಾಚಿಸಿ
ದಡೆ ಸಮವೆನಿಪುದ ವರ್ನದೊಳಂ ಶೋಭಿಸುವಂ
ಕಡು ಬ್ಯಡಗಿ ನರ್ರುಪಂ
ಜಗದೊಡೆಯ ಕೊಡು ಯಮಗೆ ನಿತ್ಯಂ ಸಂಪದವಾ ॥

ಅಂತ್ಯ : ದ್ವಿಪದೆ ॥ ಆವೇಳೆಯದೊಳೆಂದ್ದು ದೇವರ್‍ಶ್ರೆಯು ಮುದದಿ
ಭಾವೆಯರನೊಡಗೊಂಡೂ ಭಾಹ ಸಂಭ್ರಮದಿ
ತೋರ ಮುತ್ತುಗಳಿಂದ ತುಂಬಿದಳು ಹಸೆಯಾ
ಚಾರುಪೀಟವನಿತ್ತು ಚಲ್ವಿಂದ ಹರಿಯಾ ॥

x x x x

ಪಂಕಜ ಪಾಣಿಗೆ ಪಾರ್ವ್ವತಿಗೆ ಕಿಂಕರ ವಿಲಸೆಗೆ
ಸಂತತ ಪೂಜಿಪ ಶಂಕರಿ ಶ್ರೀ ಮುಖಾಂಬಿಕೆಗೆ
ಮಂಗಳಂ ಜಯಮಂಗಳಂ ॥ ಶ್ರೀ ॥ ಯಿಂತೀ ಪಾರಿಜಾತ ಸಮಾಪ್ತಿ
ಮಂಗಳ ಮಹಾ ಶ್ರೀ.

ವಿಷಯ : ಶ್ರೀ ಕೃಷ್ಣನು ಸುರಲೋಕದಿಂದ ಪಾರಿಜಾತವನ್ನು ತಂದ ಕಥೆ.

ವಿಶೇಷ : ಗರಿಗಳ ಅಂಚುಗಳು ಮುರಿದಿವೆ. ೧೪ ನೆಯ ಕ್ರಮಾಂಕದ ಎರಡು ಪತ್ರಗಳಿವೆ.

889

ಕೆ.ಬಿ. ೨೮೪	**ಪಾರಿಜಾತ**	ಯಕ್ಷಗಾನ
೭.೫"×೬"	ಮುದ್ದ	೧೯ನೆಯ ಶತಕ
೧–೫೧ ಪತ್ರ	೧೪ ಪಂಕ್ತಿ	೨೨ ಅಕ್ಷರ

ಆದಿ : ತಾ॥ ೩–೮–೮೫ನೆ ಯಿಸ್ವಿ ಸೋಮವಾರದಲ್ಲೂ ಪಾರಿಜಾತ ಬರೆಯುವ ದಕ್ಕೆ ಶುಭಮಸ್ತು॥ ದ್ವಿಪದೆ ॥

ಶ್ರೀರುಕ್ಮಿಣೀನಾಥ ಶ್ರಿತಪಾರಿಜಾತಾ
ಸರಸಿಜಾವಳನೇತ್ರಾ ಸಜ್ಜನಾಸ್ತೋತ್ರಾ ‖ ೧ ‖

x x x x

ಹರಿಶರಣ ಗುರುಪದಾಬ್ಜ
ಕ್ಕೆರಗುವ ಶಿರಣ ನಿಪುಣ ಮುದ್ದಾಪ್ಪ್ಯನು ಬಿ
ತ್ತರಿಸಿದ ವರ ಪಾರಿಜಾತವ
ಹರುಷದಿ ಲಾಲಿಪುದು ಕಥೆಯ ಕ್ರಮುವದೆಂತೆನೆ ‖ ೧೬ ‖

ಅಂತ್ಯ : ಕೇಶವ ಮುಕುಂದ ಕಮಲೇಶಗರ್ಪಿತವೂ
ಶ್ರೀಶ ಮೆಲ್ಕುಂಟೆ ರಂಗೇಶಗರ್ಪಿತವೂ ‖ ೭೪೪ ‖
ಮುದ್ದಪ್ಪ ಮೇಲ್ಕುಂಟೆ ಪಾರಿಜಾತ ಸಂಪೂರ್ಣ್ಣಾ ಮಂಗಳ ಮಹಾಶ್ರೀ.

ವಿಷಯ : ಶ್ರೀ ಕೃಷ್ಣನು ದೇವಲೋಕದಿಂದ ಪಾರಿಜಾತವನ್ನು ತಂದ ಕಥೆ.

ವಿಶೇಷ : ಗ್ರಂಥ ಮುಗಿದಮೇಲೆ ಪ್ರತ್ಯೇಕವಾಗಿ ಮೂರು ಪುಟಗಳಲ್ಲಿ ಕೆಲವು ಹಾಡುಗಳಿವೆ.

890

ಕೆ.ಡ. ೪೯೩	**ಪಾರಿಜಾತ**	ಯಕ್ಷಗಾನ
೮"X೬.೩"	ಲಿಂಗರಾಜ	೧೮೫೦
೧–೫೨ ಪತ್ರ	[illegible] ಪಂಕ್ತಿ	೧೬ ಅಕ್ಷರ

ಆದಿ : ಪಾರಿಜಾತ ಬರಿಯುವದಕ್ಕೆ ಶುಭಮಸ್ತು ‖ ನಾಂದಿ ‖
ಶ್ರೀ ಕಾಳೀಕುಚನಿಹಿತ
ಶ್ರೀಕರಕರ ಪಾರಿಜಾತ ಪಲ್ಲವನಮರಾ
ನೀಕ ನತಚರಣನಮಿತ ಕೃ
ಪಾಕರನೆಮಗೀಗೆ ಕುಶಲವಂ ಕಾಳೀಶಂ ‖ ೧ ‖

x x x x

ಕಂದಾ ‖ ಮುರನರಕಾಸುರರನು ಸಂ
ಗರದೊಳ್ಸಂಹರಿಸಿ ಭಾಮೆಗಿತ್ತಿಹ ನುಡಿಗಾ

ಹರಿಗೈದ ಪಾರಿಜಾತಾ
ಹರಣವನುಸುರುವೆನು ಬುಧರುಘೇಯನಲೊಲಿದೂ ॥ ೧೨ ॥

ಅಂತ್ಯ : ವಾರ್ಧಕಾ ॥ ಶುಭಮುಹೂರ್ತದೊಳು ಹದಿನಾರುಸಾವಿರ ಕುಂಭ
ನಿಭ ಕುಚೆಯರಂ ಮದುವೆಯಾಗಿ ಸಂಭ್ರಮದಿ ದು
ರ್ಲಭಮದೊಂದಿಲ್ಲವೆನೆ ಬುಧಜನರರಣಿಸುತ್ತ ದಾನ ಸಂನ್ಮಾನದಿಂದ
ವಿಭವದಿಂದಷ್ಟಮಹಿಷಿಯರ ಕೂಡುತ್ತ ಯದು
ಪ್ರಭೂ ಸುಖದೊಳಿರ್ದನೆಂನುತ್ತ ಧರಣಿ ವ
ಲ್ಲಭ ಪರೀಕ್ಷಿತಗೆ ಶುಕಯೋಗಿಯನುರಾಗದಿಂ ಪೇಳ್ದನಾನಂದದಿಂದ ॥೩೮೨॥

X X X X

ಕಾಲ ಕಾಲಗೆ ದಯಾಶಾಲಿ ಶೀಲಗೆ
ಶೈಲ ಚಾಪಗೆ ರಮಾಲೋಲರೋಪಗೆ ॥ ೩೮೪ ॥

ತುಂಗ ಮಹಿಮಗೆ ಜಟಾ ಸಂಗಿ ಸೋಮಗೆ
ಲಿಂಗಭೂಪಗೆಯಾತ್ಮಲಿಂಗರೋಪಗೆ ॥ ೩೮೫ ॥

ಕಂದಾ ॥ ಗೃಹ ರಸ ರಂಧ್ರ ಪಯೋನಿಧಿ
ಸಹಿತಾಬ್ಧಂ ಕಳಿಯೆ ಕಲಿಗಳಾ ಸೂರಿಗಳೊ
ಲ್ದಹುದೆನಲು ಪಾರಿಜಾತಾ
ಪಹರಣವಂ ಲಿಂಗರಾಜನೋಜೆಯೊಳುಸುರ್ದಂ ॥ ೩೮೬ ॥

ವಿಷಯ : ಶ್ರೀ ಕೃಷ್ಣನು ಪಾರಿಜಾತಪುಷ್ಪವನ್ನು ಅಪಹರಿಸಿ ಭಾಮೆಗೆ ತಂದು ಕೊಟ್ಟ ಕಥೆ.

ವಿಶೇಷ : ಸುದೃಢಪ್ರತಿ, ಸುಂದರ ಬರಹ, ಕೊನೆಯಲ್ಲಿ ೧೯ ಶುದ್ಧ ಪತ್ರಗಳಿವೆ.

891

ಕ. ೨೦೨/೨	**ಪಾರ್ವತೀ ಕೊರವಂಜಿ**	ಯಕ್ಷಗಾನ
೮.೪" × ೧.೪"	ವೆಂಕಟ	ಸು ೧೮೦೦
೩–೩೨ ಪತ್ರ	೩ ಪಂಕ್ತಿ	೩೧ ಅಕ್ಷರ

ಆದಿ : ಕೊರವಂಜಿ ಕಣಿಯ ಪೇಳುವೆನೆನುತಲಿ
ಹರುಷದಲಿ ಹೋಗಿರುವಳು ಬರುತನಕಾ ಬಾಗಿಲಲ್ಲಿ
ಯಿರು ನೀನೆಂದ್ದಾರೂ ||

ವ || ಯಿಂತ್ತೂ ಗೊಲ್ಲರಂದ್ದಾ ಮಾತಿಗೆ ಕೊರವಂಜಿ ಸಿಂಗ್ಗನು ಬಾಗಿಲಲ್ಲಿ ಕುಳಿತುಕೊಳಲು ಅತ್ತಲಾ ಪಾರ್ವತಾದೇವಿಯಾದ ಕೊರವಂಜಿ ಕಂಸ್ಸಲ್ಯಾ ಪುತ್ರೋತ್ಸವದ ವಾರ್ತೆಯಂ ಪೇಳಿ ಮುತ್ತು ರತ್ನ ರತ್ನಂಗಳ ಬಟ್ಟೆಯಂ ತುಂಬಿಕೊಂಡು ಶಿಶುವಿಗೆ ಹಾಲು ತುಪ್ಪವಂನೆರದು ಅನೇಕ ವಸ್ತ್ರಾಭರಣ ದಿಂದ ಕಳುಹ್ಸಿಕೊಂಡು ಸಿಂಗನಿದ್ದ ಬಳಿಗೆ ಬರಲು ಪುರಜನರು ಯೇನೆನು ತಿರ್ಧಾರೂ ||

ಅಂತ್ಯ : ಪಂಕಜದಳಾಕ್ಷನಿಗೆ | ಪದ್ಮಜಾಂಡನಿಗೆ
ಶೇಷಾಚಲೇಶ್ವರಗೆ | ಚಲುವನೆ....ನಿಗೆ |

ಸಾಷ್ಟಾಂಗವೆರಗಿ ಸದ್ಭಕ್ತಿಯಿಂ ಪೇಳ್ದ| ಮೆಳಿಯ ಕೋಟೆಯ ತಿರುಮಲಯ್ಯನ ಪುತ್ರಾ ಗುರುದತ್ತ ...ನ ಕೃಪೆಯ ಪಡದಿಹನು | ಸರಸವರಕವಿ ವೆಂಕಟ ರಾಘವನ ಕೃತಿಯನತಿಶಯ ಚಮತ್ಕಾರದಿಂ....ರದ ಕಥೆಯಾ| ಧರೆ ಯೊಳಗೆ ರವಿಶಶಿಗಳ .... ಳನಗಾ| ಭೂಚಕ್ರದಲಿ ರಾಮಭೂಷಣ ಚರಿತ | ಆಚಂದ್ರ ತಾರಾರ್ಕವಾಗಿ ವಪ್ಪುವದೂ || ಮಂಗಳ ಮಹಾಶ್ರಿ. ||

ನಾರಣಪ್ಪನು ಮುದ್ದಪಗೆ ಬರಕೊಟ್ಟ ಪಾರ್ವತೀ ಕೊರವಂಜಿ.

ವಿಷಯ : ಪಾರ್ವತಿಯು ಕೊರವಂಜಿಯ ವೇಷವನ್ನು ಧರಿಸಿ ಕೌಸಲ್ಯಾದೇವಿಗೆ ಪುತ್ರೋತ್ಸವದ ವಿಷಯವನ್ನು ತಿಳಿಸುವ ಕಥೆ.

ವಿಶೇಷ : ಓಲೆಗಳ ಅಂಚು ಮುರಿದಿದೆ. ಓಲೆಗಳಿಗೆ ಕ್ರಮಾಂಕ ಸರಿಯಾಗಿಲ್ಲ. ಆರಂಭದಲ್ಲಿ ಎರಡು ಪತ್ರಗಳಿಲ್ಲ. ಪತ್ರಗಳನ್ನು ಹುಳುಗಳು ಕೊರೆದು ರಂಧ್ರ ಬಿದ್ದಿದೆ. ಇದೇ ಕಟ್ಟನಲ್ಲಿ ಚೋರಕಥೆ (ಸೋಮಶೇಖರ ಚರಿತ್ರೆ) ಇದೆ.

892

ಕೆ. ೩೮೧	**ಪಾರ್ವತಿ ಕೊರವಂಜಿ**	ಯಕ್ಷಗಾನ
೧೦.೩″ × ೨.೨″	ವೆಂಕಟ	ಸು. ೧೮೦೦
೧–೨೨ ಪತ್ರ	೯ ಪಂಕ್ತಿ	೩೮ ಅಕ್ಷರ

ಆದಿ : ಪಾರ್ವತಿ ಕೊರವಂಜಿ ಬರಯುವದಕ್ಕೆ ಶುಭಮಸ್ತು ||
ಶ್ರೀ ಲಕ್ಷ್ಮೀವರಕಾಂತ| ಶ್ರೀ ಶುಭಾ ಶಾಂತಾ
ನೀಲಮೇಘಶ್ಯಾಮ | ನೀತಿಸುಧಾಮ ||
ರವಿಕೋಟಿಸಂಕಾಶ | ರಾಜಿಸುವ ಲೇಶಾ
ಪರಮ ಮುನಿಗಳ ರಕ್ಷಾ |ಪಾಂಡವರ ಪಕ್ಷ ||
ವರಗಂಗಾಧರಸಭಾ | ವಪ್ಪುವಾ ಪ್ರಣುತಾ

ವಚನಾ || ಅಂಕಿತವಾಗಿ ನಿಜೋಂಕಿತವಪ್ಪ ದಶರಥರಾಯನ ಕುಮಾರ ನಾದಂತಾ ರಾಮಚೆಂದ್ರನ ಚರಿತೆಯ ಕೈಲಾಸವಾಸಿಯಾದಂತ್ತಾ ಪಾರ್ವತಾದೇವಿಯೂ ಕೌಂಸಲ್ಯದೇವಿಯೊಳೆ ಪೇಳ್ದ ಕೊರವಂಜಿಕಟ್ಟೆ ಯಕ್ಷಗಾನ ಕಥೆ ಪ್ರಾರಂಭವಡಂತೆನೇ ||

ಅಂತ್ಯ : ಸಾಷ್ಟಾಂಗವೆರಗಿ ಸದ್ಭಕ್ತಿಯೋಳ್ಪೇಳ್ದಿ ಮೆಳೆಯ ಕೋಟೆಯಲ್ಲಿರುವ ಮಲ್ಲೈಯನ ಪುತ್ರ ನಲವಿಂದ ವೆಂಕಟ್ಟೈಯ್ಯನ ಕುಮಾರಕನು ಗುರುದತ್ತಾ ನಂದನ ಕೃಪೆಯ ಪಡದಿಹನೂ | ಗರಸವರ ಕವಿ ವೆಂಕಟಸಾರ ರಾಘವನ ಕೃತಿಯನತಿಶಯ ಚಮತ್ಕಾರದಿಂದೋರದ ಕಥೆಯ ಧರೆಯೊಳಗೆ ರವಿ ಶಶಿಯುಳ್ಳನಕ ಭೂಚಕ್ರದಲಿ ರಾಮಭೂಷಣನ ಚರಿತ್ರೆ ಆಚೆಂದ್ರ ತಾರಾರ್ಕಮಗಿ ವಪ್ಪಿಹುದೂ | ಅಂತೂ ಕೊರವಂಜಿ ಕಟ್ಲೆ ಸಂಧಿ ೧ ಕ್ಕಂ ಪದನೂ ರಾಗ ವರ್ನ ತಾಳ ಸಹಾ ೨೮ಕಂ ಪದನೂ ೩೯ ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ಕೌಸಲ್ಯದೇವಿಗೆ ರಾಮನ ಜನನದ ವಿಚಾರವನ್ನು ಪಾರ್ವತಿಯ ಕೊರವಂಜಿ ವೇಷದಲ್ಲಿ ಹೇಳಿದುದು.

ವಿಶೇಷ : ಇದೇ ಕಟ್ಟಿನಲ್ಲಿ ಕುಶಲವರ ಕಥೆ ಎಂಬ ಗ್ರಂಥವಿದೆ.

893

ಕೆ.ಬಿ. ೨೦೫/೧	**ಪಾರ್ವತೀಕೊರವಂಜಿ**	ಯಕ್ಷಗಾನ
೭.೮"×೬"	ವೆಂಕಟ	ಸು. ೧೮೦೦
೩೪—೫೫ ಪತ್ರ	೧೮ ಪಂಕ್ತಿ	೨೭ ಅಕ್ಷರ

ಆದಿ : ಶ್ರೀ ೧ ನೇ ವಚನಾ||
ಜಯ ಜಾನಕೀರಮಣ ಜಯ ವಿಭೀಶಣ ಶರಣ
ಜಯ ಸರೋರುಹನಯನ ಜಯ ದೀನಕರುಣಾ

ಜಯ ಲೋಲಶರಣ್ಯಾ | ಜಯ ಭಕ್ತಕಾರುಂಣ್ಯಾ
ಜಯ ದಿವ್ಯಲಾಂವಣ್ಯ | ಜಯ ಜಗತ್ಪುಂಣ್ಯಾ ಜಯ ಜಯಾ ॥ ೧ ॥

ಯಿಂತ್ತೆದ್ದು ಅಂಕಿತವಾಗಿ ನಿಜಾಂಕಿತಮಪ್ಪ ದಶರಥರಾಯನ ಕುಮಾರನಾದಂತ್ತ ರಾಮಚಂದ್ರನ ಚರಿತ್ರೆಯಂ ಕೈಲಾಸವಾಸಿಯಾದಂತ್ತ ಪಾರ್ವತದೇವಿಯು ಕಂಸಲ್ಯಾದೇವಿಗೆ ಪೇಳ್ದ ಕೊರವಂಜಿ ಕಟ್ಲೆ ಯಕ್ಷಗಾನ ಕಥಾ ಪ್ರಾರಂಭವದೆಂತೆನೆ ॥

ಅಂತ್ಯ : ಯೀಶ್ವರೇಶ್ವರಂಗೆ ಕರಿಗೊರಳ ಅಭವನಿಗೆ ಕಕೋದ್ಗಿರಿವಾಸನಿಗೆ ವರಗಂಗಧರಸಖಗೆ ವನಜನಾಭನಿಗೆ ಶಂಕಚಕ್ರಾಂಕೀತಗೆ ಶರಣ ರಕ್ಷಕಗೆ ಪಂಕಜಾದನಿಗೆ ಪದ್ಮಜಾಂಕನಿಗೆ ಷೇಷಚಲ್ಲೇಶ್ವರನಿಗೆ ಶ್ರೀ ವೆಂಕಟೇಶ್ವರಗೆ ಸಾಷ್ಟಾಂಗವೆರಗಿ ಸದ್ಭಕ್ತಿಯೊಳು ಪೇಳ್ದ ಹಳೆಯ ಕೋಟೆಯ ತಿರುಮಲ್ಲೈಯನ ಪುತ್ರ ಪೇಳ್ದ ಪಾರ್ವತಿ ಕೊರವಂಜಿ ಕಥೆ ಸಂಪೂರ್ನ ॥ ಅಭಿರುದ್ಧಿರಸ್ತು | ಶುಭಮಸ್ತು ಮಂಗಳ ಮಹಾ ಶ್ರೀ ॥

ವಿಷಯ : ಶ್ರೀರಾಮ ಜನನದ ವಿಚಾರವನ್ನು ಪಾರ್ವತಿಯು ಕೊರವಂಜಿ ವೇಷದಲ್ಲಿ ಕೌಸಲ್ಯಾದೇವಿಗೆ ಹೇಳಿದುದು.

ವಿಶೇಷ : ಇದೇ ಪುಸ್ತಕದಲ್ಲಿ ಶಿವಭಕ್ತಿಸಾರ ಮತ್ತು ರಾಮಭಕ್ತಿಸಾರ ಎಂಬೆರಡು ಗ್ರಂಥಗಳಿವೆ.

894

ಕೆ. ಎ. ೧೭೩/೬	**ಪಾರ್ವತೀ ಕೊರವಂಜಿ**	ಯಕ್ಷಗಾನ
೧೧.೧"×೭.೪"	ವೆಂಕಟ	ಸು. ೧೮೦೦
೧೭೪–೧೭೫ ಪತ್ರ	೨೦ ಪಂಕ್ತಿ	೩೩ ಅಕ್ಷರ

ಆದಿ · ಪಾರ್ವತಿ ಕೊರವಂಜಿ ಬರೆಯುವದಕ್ಕೆ ಶುಭಮಸ್ತು ॥
ರಾಗ ದ್ವಿಪದೆ ॥ ಶ್ರೀ ಲಕ್ಷ್ಮೀವರ ಕಾಂತಾ ಶ್ರೀ ಶುಬಾ ಶಾಂತಾ
ನೀಲಮೇಘ ಶ್ಯಾಮ ನೀತಿ ಸುದಾಮಾ
ರವಿಕೋಟಿ ಶಂಕ್ಕಾಶ ರಾಜಿಸುವ ಲೇಸಾ
ಭುವನತ್ರಿಯರ ಪೋಷ ಭೂರಿ ಸರ್ವೇಶಾ
ಪರಮ ಮುನಿಗಳನಿತ ರಕ್ಷೆ ಪಾಂಡವರ ಪಕ್ಷಾ
ವರ ಗಂಗಧರ ಸಖವಪ್ಪುವ ಪ್ರಣುತಾ

ನಿಜ ಭಕ್ತರಿಗೊಲಿವ ನಿರ್ಜರರ ಕಾಯ್ವ
ಕುಜನ ದೈತ್ಯರ ಸದವ ಗುಣಧಾರ್‍ರೆ ಭಾವಾ ಅಮಿತ ಲೋಕಾಧಾರ

ಅಂತ್ಯ : ದ್ವಿಪದೇ ॥ ಶ್ರೀ ಪಾರ್ವತೀಪತಿಗೆ ಶ್ರೀ ರಂಮ್ಯ ಮತಿಗೆ
ಪಾಪವಿನಾಶನಿಗೆ ಪರಮ ಪುರುಷನಿಗೆ ॥
ಚಂದ್ರಸೇಖರನಿಗೆ ಚಲುವ ಲಿಂಗನಿಗೆ
ಇಂದ್ರ ವಿದಿ ವಂದಿತಗೆ ಈಶ್ವರೇಶ್ವರಗೇ ॥
ಕರಿಗೊರಲ ಅಭವನಿಗೆ ಕಕುದ್ದಿರಿ ವಾಸನಿಗೆ
ವರ ಗಂಗಾಧರಸಖಗೆ ವನಜನಾಭನಿಗೆ ॥
ಶಂಕ ಚಕ್ರಾಂಕಿತಗೆ ಶರಣ ರಕ್ಷಕಗೆ
ಪಂಖಜಧರನಿಗೆ ಪದ್ಮಜಾಂಡನಿಗೆ ॥
ಶೇಶಚಲೇಶ್ವರಗೆ ಶ್ರೀ ವೆಂಕಟೇಶ್ವರಗೆ
ಸಾಷ್ಟಾಂಗವೆರಗಿ ಸದ್ಭಕ್ತಿಯೊಳು ಪೇಳ್ದ ॥
ಹಳೆಯ ಕೋಟೆಯ ತಿರುಮಲೈಯ್ಯನ ಪುತ್ರ
ನಲವಿಂದಲವನ ವರ ಕುಮಾರಕನು ॥
ಗುರುದತ್ತ ನಂದನನ ಕೃಪೆಯ ಪಡದವನು
ಸರಸ ವರಕವಿ ಟಂಕ್ಸಾಸಾರೆ ರಾಘವನ ॥
ಕರುಣಾರಶಯ ಚಮತ್ಕಾರದಿಂ
ದೊರೆದಾ ಕಥೆಯು ಧರೆಯೊಳಗೆ ಮುದದಲೀ ಜನರ್ಗೆ ॥
ಶ್ರೀ ಪಾರ್ವತೀ ಕೊರವಂಜಿ ಕಥೆ ಸಂಪೂರ್ಣ ಮಂಗಳ ಮಹಾ ಶ್ರೀ ಶ್ರೀ ॥

ವಿಷಯ : ಕೌಸಲ್ಯಾದೇವಿಗೆ ಈಶ್ವರನ ಆಜ್ಞೆಯ ಪ್ರಕಾರ ಪಾರ್ವತೀದೇವಿಯು ರಾಮ ಜನನ ವಿಚಾರವನ್ನು ಕೊರವಂಜೀ ವೇಷದಲ್ಲಿ ಹೇಳಿದುದು.

ವಿಶೇಷ : ಇದರೊಡನೆ ಸಾನಂದ ಚರಿತ್ರೆ, ಪ್ರಹ್ಲಾದ ಚರಿತ್ರೆ, ಶಾರದಾಂಬಾಷ್ಟಕ, ವಿನಾಯಕಾಷ್ಟಕ, ಮಲ್ಲಿಕಾರ್ಜುನಾಷ್ಟಕ, ಪಂಚತಂತ್ರದ ಕಥೆ, ಕಪೋತ ವಾಕ್ಯ ಎಂಬ ಕೃತಿಗಳಿವೆ. ಪುಸ್ತಕದ ಕೊನೆಯಲ್ಲಿ (ಪತ್ರ ೧೭೫ ರಿಂದ ೧೮೮ ವರೆಗೆ) ವಾಲಿಸುಗ್ರೀವರ ಕಾಳಗ ದ್ರೋಣಪರ್ವದ ಕೆಲವು ಭಾಗಗಳೂ ಇವೆ. ಎರಡೂ ಅಸಮಗ್ರವಾಗಿವೆ.

895

ಕೆ. ೩೫/೨	**ಪಾರ್ವತೀವಲ್ಲಭ ಶತಕ**	ವೃತ್ತ
೧೨"×೧.೪"	ವೀರಭದ್ರರಾಜ	ಸು. ೧೫೩೦
೧–೧೨ ಪತ್ರ	೭ ಪಂಕ್ತಿ	೪೮ ಅಕ್ಷರ

ಆದಿ : ಶತಕತ್ರಯ ಬರವದಕ್ಕೆ ಶುಭಮಸ್ತು ॥ ಪಾರ್ವತೀ ವಲ್ಲಭ ಶತಕ ॥
ಶ್ರೀ ಗೌರೀ ಕುಚಕುಂಕುಮಾಂಕ ಮದುವಕ್ಷೋಭಾಗದೊಳ್ತೋಜಿ ತ
ದ್ಯೋಗೋತ್ಪಂನ್ನ ಸುಖಾನುರಾಗಮೆ ಪೊದಳ್ದುಣ್ಮಿತ್ತೊ ಬಾಂಹ್ಯಕ್ಕೆನ
ಲ್ಭೋಗಂಬೆತ್ತು ಸಮಸ್ತ ಲೋಕಜನಕಂ ತಾನಾಗಿ ರಂಜಿಪ್ಪ ಸೌ
ಖ್ಯಾಗಾರಾಮಲ ಮೂರ್ತ್ತಿ ರಕ್ಷಿಸೊಲವಿಂ ಶ್ರೀ ಪಾರ್ವತೀವಲ್ಲಭಾ ॥೧॥

ಅಂತ್ಯ : ಪಿರಿದುಂ ಉತ್ತರ ಪಾವ್ರುತಂಗಳಸೊಜಲ್ದಾಂತಿದ್ದುರ್ ಸಲ್ಲಕ್ಷಣೋ
ದರವಾಗಿದ್ದುರ್ ಕಳಾಪ್ರಪೂರ್ನ್ನತೆಯನಾದಂ ತಾಳ್ದು ಚಂದ್ರಂಬೊಲಾ
ದರದಿಂದೀ ಶತಕಂ ವಿರಾಜಿಪುದಜಂದೋರಂತೆ ನಿನ್ನುತ್ತಮಾ
ಭಾರಣಧಿಕ್ಯಮದಾಗಡಿಪ್ಪುರ್ದೆ ಸದಾ ಶ್ರೀ ಪಾರ್ವತೀವಲ್ಲಭಾ ॥೧೦೦॥
ಶ್ರೀಕಂಠಾನ್ವಯ ವಾರ್ಧಿ ವರ್ದ್ಧನ ಕಲಾಧೀಶಂ ವಿರೂಪಾಕ್ಷಧಾತ್ರಿ
ಕಾಂತಾತ್ಮಜ ವೀರಭದ್ರನುಸುರ್ದ್ದೀ ಸ್ತೋತ್ರಾಮ್ರುತಂ ನಾಡೆಯು
ಲ್ಲಾ ಕಾಲಂ ಮಿಗೆ ಸೇವಿಪರ್ಗ್ಗೆ ವಿಬುದತ್ವಂ ಮಾಳ್ಪದೌಚಿತ್ಯದಿಂ
ಲೋಕ ಪ್ರಜ್ವಲವಾಗಿ ಮಂಗಳ ಮಹಾಶ್ರೀ ಪಾರ್ವತೀವಲ್ಲಭಾ ॥೧೦೧॥
ಶ್ರೀ ಪಾರ್ವತೀವಲ್ಲಭ ಶತಕ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ವೀರಶೈವ ತತ್ತ್ವ ಬೋಧೆ.

ವಿಶೇಷ : ಶಕಟ ರೇಫವಿದೆ. ಇದೇ ಕಟ್ಟಿನಲ್ಲಿ ಮಲ್ಲೇಶ್ವರ ಶತಕ, ಉಮಾಮಹೇ
ಶ್ವರ ಶತಕ, ಪ್ರಾಣನಾಥ ಶತಕ, ಶ್ರೀಕಂಠಸೋಮೇಶ್ವರ ಶತಕ, ಕಂದ
ಶತಕ, ಪ್ರಭುದೇವರ ಪುರಾಣದ ನಾಂದ್ಯಗಳು, ಮಹಿಮ್ನ ಸ್ತೋತ್ರ, ಶಿವ
ಪೂಜಾ ವಿಧಾನ, ಚೇರಮ ಕಾವ್ಯಗಳಿವೆ.

896

ಕೆ.ಎ. ೨೩೦	**ಪಾರ್ವತೀವಲ್ಲಭ ಶತಕ**	ವೃತ್ತ
೧೨.೨"×೭.೯"	ವೀರಭದ್ರರಾಜ	ಶು. ೧೫೩೦
೩೫ ಪತ್ರ	೧೨ ಪಂಕ್ತಿ	೨೧ ಅಕ್ಷರ

ಆದಿ : ಪಾರ್ವತೀವಲ್ಲಭ ಶತಕ ॥
ಶ್ರೀಗೌರೀ ಕುಚ ಕುಂಕುಮಾಂಕಮದು ವಕ್ಷೋಭಾಗದೊಳ್ ತೋರೆ ತ
ದ್ಯೋಗೋತ್ಪನ್ನ ಸುಖಾನುರಾಗಮೆ'ಪೊದಳ್ದುಣ್ಮಿತ್ತೊ ಬಾಹ್ಯಕ್ಕೆನಲ್
ಭೋಗಂಬೆತ್ತು ಸಮಸ್ತಲೋಕಜನಕಂ ತಾನಾಗಿ ರಂಜಿಪ್ಪ ಸೌ
ಖ್ಯಾಗಾರಾಮಲ ಮೂರ್ತಿ ರಕ್ಷಿಸೊಲವಿಂ ಶ್ರೀ ಪಾರ್ವತೀವಲ್ಲಭಾ ॥ ೧ ॥

ಅಂತ್ಯ : ಶ್ರೀಕಂಠಾನ್ವಯ ವಾರ್ಧಿವರ್ಧನ ಕಲಾಧೀಶಂ ವಿರೂಪಾಕ್ಷ ಧಾ
ತ್ರೀಕಾಂತಾತ್ಮಜ ವೀರಭದ್ರನುಸಿರ್ದೀ ಸ್ತೋತ್ರಾಮೃತಂ ನಾಡೆ ಯೆ
ಲ್ಲಾ ಕಾಲಂ ಮಿಗೆ ಸೇವಿಪರ್ಗೆ ವಿಬುಧತ್ವಂ ಮಾಳ್ಪುದೌಚಿತ್ಯದಿಂ
ಲೋಕಪ್ರಜ್ವಲವಾಗೆ ಮಂಗಳ ಮಹಾ ಶ್ರೀ ಪಾರ್ವತಿವಲ್ಲಭಾ ॥೧೦೧॥
ಶ್ರೀ ಪಾರ್ವತೀವಲ್ಲಭ ಶತಕಂ ಸಮಾಪ್ತ ಮಂಗಳ ಮಹಾ ಶ್ರೀ ॥

ವಿಷಯ : ಪಾರ್ವತೀವಲ್ಲಭನಾದ ಈಶ್ವರನ ಸ್ತುತಿ ಹಾಗೂ ವೇದಾಂತಬೋಧೆ.

ವಿಶೇಷ : ಕೆಲವುಕಡೆ ತಪ್ಪುಗಳನ್ನು ತಿದ್ದಿದೆ. ಪ್ರತಿ ಪದ್ಯವೂ 'ಶ್ರೀ ಪಾರ್ವತೀ ವಲ್ಲಭಾ' ಎಂದು ಮುಗಿಯುತ್ತದೆ. ಪತ್ರಗಳ ಒಂದು ಪಾರ್ಶ್ವದಲ್ಲಿ ಮಾತ್ರ ಬರೆದಿದೆ.

897

ಕೆ.ಎ. ೨೮೬/೧	**ಪಾರ್ವತೀಸ್ತುತಿ**	ಹಾಡು
೧೨.೬" × ೮"	?	?
೧–೨ ಪತ್ರ	೧೯ ಪಂಕ್ತಿ	೧೯ ಅಕ್ಷರ

ಆದಿ : ಸ್ಕ ೧೮೭೧ ನೆ ಯಿಸವಿಗೆ ಸರಿಯಾದ ಪ್ರಜೋತ್ಪತ್ತಿ ಸಂವತ್ಸರ ಚೈತ್ರ ಶುದ್ಧ ೯ ಯಲ್ಲು ಶಿವಪೂಜೆ ಪದ ಬರೆಯುವದಕ್ಕೆ ಶುಭಮಸ್ತು ॥ 103 ॥
ಪಾರ್ವತೀಸ್ತುತಿ ॥ ರಾಗ ಧನ್ಯಾಶಿ ॥

ಪರಮೇಶ್ವರಿಯ ಪುಣ್ಯನಾಮವನು । ಪಗಲಿರುಳು ಸರಸಾನುರಾಗದಿಂದೋದಿ ಕೇಳಿದವರ್ಗೆ ದುರಿತ ಕಂಟವಳಿದು ಕೈಸಾರುತಿಹವಮುಳತರ ಭೋಗ ಮೋಕ್ಷಂಗಳೂ ॥ ೧ ॥

ಅಂತ್ಯ : ಸಂತಸವನೀವ ಶಾಂಭವಿಯ ಸುಭ ಪಂತ ನಾಮಂಗಳನು ಜಪಿಸಿದೊಡೆ ಸತಿ ಪುತ್ರ ಸಂತಾನ ಸಕಲ ಸಂಪದ ನಿಧಿಯಪ್ಪುದೋರಂತೆ ನಿಶ್ಚಯ ಮಿದೆಂದೂ ॥ ೧೦ ॥
ಸಂಪೂರ್ನಂ ಮಂಗಳ ಮಹಾ ಶ್ರೀ ॥

ವಿಷಯ : ಪಾರ್ವತೀ ಸ್ತೋತ್ರ.

ವಿಶೇಷ : ಇದೇ ಪುಸ್ತಕದಲ್ಲಿ ವೀರಸಂಗಯ್ಯನ ಚೌಪದ, ಇಂದ್ರಕೀಲ ಚೌಪದ, ಮಹಾನವಮಿಯ ಪದಗಳೆಂಬ ಇತರ ಗ್ರಂಥಗಳಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

898

ಕೆ.ಬಿ. [illegible]	ಪಾರ್ಶ್ವನಾಥ ಚರಿತ್ರೆ (ಭಾಗ ೧)	ಚಂಪು
೭.೭″ × ೬.೩′	ಪಾರ್ಶ್ವನಾಥ	?
೧–೨೧೩ ಪತ್ರ	೧೧ ಪಂಕ್ತಿ	೨೧ ಅಕ್ಷರ

ಆದಿ : ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ ॥ ಶ್ರೀರಸ್ತು ॥
ಪಾರ್ಶ್ವನಾಥ ಚರಿತ್ರೆ ಬರಿಯುವದಕ್ಕೆ ಶುಭಮಸ್ತು ॥
ಶ್ರೀವಾಚಾಸಿದ್ಧಿಗಂ ನಿರ್ಮ್ಮಳ ನಿಖಿಳ ಕಳಾವೃದ್ಧಿಗಂ ಶುದ್ಧಚಾರಿ
ತ್ರಪ್ರವಷ್ಟಂಭಕ್ಕಮಾದಪ್ರ್ಪಿತ ಮಧನ ಲಸನ್ಮೂರ್ತಿಗಂ ತಂನೊಳೇಕೀ
ಭಾವಕ್ಕಂ ಮೆಚ್ಚಿ ಮುಕ್ತ್ಯಾಂಗನೆ ವರಿಯಿಸಿ ಸತ್ಸೌಖ್ಯದೊಳ್ನಿಂದೆನೆಂದಾ
ದೇವೇಂದ್ರಾಹಿಂದ್ರವಂದ್ಯಂ ಕುಡುಗೆಮಗಭೀಷ್ಟಾರ್ಥಮಂ ಪಾರ್ಶ್ವ
ನಾಥಂ ॥ ೧ ॥

ಪರಮಾಗಿರ್ದಘೆಮೆಯ್ದೆ ಪಿಂಗೆ ನಿಜಮಾಗಾತ್ಮೀಯ ನಾನಾಗುಣಂ
ಪರಮಾನಂದದೊಳೊಂದಿ ನಿಂದಖಿಳ ಲೋಕೋತ್ತಂಸರಾಗಿರ್ದ್ದ ಸಿ
ದ್ಧರಂ ಯೋಗಿ ವಿದೇಹ ಸಿದ್ಧಿಗೆ ನಿಜಧ್ಯಾನಂ ದಲೆಂಬೀ ಪ್ರಸಿ
ದ್ಧರಸಂಖ್ಯನ್ನರ್ಮಗೀಗೆ ಸಿದ್ಧರನಘೆ ಶ್ರೀ ಶುದ್ಧಿ ಸಂಶುದ್ಧಿಯಂ ॥ ೨ ॥

ಅಂತ್ಯ : ವೃ ॥ ಸ್ಥಿರತೇಜಂ ವೈಜಯಂತೀ ಮುಖದೊ ವರತನುಖ್ಯಾತನಂ
ಭೂರಿ ಶೋಭಾ
ಕರ ರಿಕ್ತೋದಾನದಿ ದ್ವಾರದಿನವಯುವದಿಂ ಪೊಕ್ಕು ಮಿಕ್ಕಾ ಪ್ರಭಾಸಾ
ಪುರನರ ಪೂರ್ವಕ್ರಮಂ ನೇರ್ಪಡೆ ಪದನತವಂ ಮಾಡಿ ಶಾಶ್ವಚ್ಛವಯ್ಯ್ಯ ಶೌರ್ಯ್ಯ
ಭರಣಂ ವಿಖ್ಯಾತಿವೆತ್ತಂ ಸುಕವಿಜನ ಮನೋಹರ್ಷ ಸಸ್ಯ ಪ್ರವರ್ಷಂ
। ೧೨೭ ॥

ಗದ್ಯ ॥ ಇದು ವಿದಿತ ವಿಬುಧ ಲೋಕನಾಯಕಾಭಿಪೂಜ್ಯ ಜಿನಮುನಿ ಪ್ರಾಸಾ
ದಾಸಾದಿತ ನಿರ್ಮಳ ಧರ್ಮವಿನುತ ವಿನೆಯ ಜನವನಜ ವನವಿಳಸಿತ
ಕವಿಕುಳತಿಳಕ ಪ್ರಣೂತ ಪಾರ್ಶ್ವನಾಥ ಪ್ರಣೀತಮಪ್ಪ ಪಾರ್ಶ್ವನಾಥ
ಚರಿತದೊಳ್ ಮಾಗಧಾಮರ ವರತನುಪ್ರಭಾಸಾಮರದಪ್ಪ ದಳನ
ವರ್ಣನಂ ದಶಮಾಶ್ವಾಸಂ ಸಮಾಪ್ತಂ ಅಂತು ಆಶ್ವಾಸ ೧೦ ಕ್ಕಂ
ಪದ ೧೨೭೬ ಕ್ಕಂ ಮಂಗಳ ಮಹಾ ಶ್ರೀ ॥

ವಿಷಯ ; ಪಾರ್ಶ್ವನಾಥನ ಕಥೆ.

ವಿಶೇಷ: ೧೦ ಆಶ್ವಾಸ ಪೂರ್ತಿಯಿದೆ. ಇದು ಭಾಗ ೧. ಸ್ಫುಟಾಕ್ಷರ. ಎರಡನೆಯ ಭಾಗವು ಕೆ.ಬಿ. ೫೯ರಲ್ಲಿ ಮುಂದುವರಿದಿದೆ.

899

ಕೆ.ಬಿ. ೫೯	**ಪಾರ್ಶ್ವನಾಥ ಚರಿತ್ರೆ (ಭಾಗ ೨)**	**ಚಂಪೂ**
೭.೭″×೬.೩″	ಪಾರ್ಶ್ವನಾಥ	?
೨–೧೪೯ ಪತ್ರ	೧೧ ಪಂಕ್ತಿ	೨೫ ಅಕ್ಷರ

ಆದಿ: ....ಕ್ಕೆಯಿಂದಮೆಜಳ್ವಾಶಯಮೆಂಬುದಕಾಲದಲ್ಲಿ ಸಂ
ವರಿಸಿದ ಜೀವನಂಗಳನೆ ತೀವ್ರಕರಂ ವರ್ದಂ ನಿದಾಘದೊಳ್ ||
ನೆಲನೆಲ್ಲಂ ತಪನಪ್ರತಾಪ ಶಿಖಿಯಿಂದಂ ಕಾಯ್ದು ಕಾ
ವೇರಿಯಂ ನೋಳ್ಪದಿಲ್ಲೆಸುತ ತವೋಪಂತು ನಾನಾನದಿ
ಜಲಮಾದಂ ಕುದಿದುಕ್ಕೆ ಮಾರ್ಗ್ಗ ಖುರವೆತ್ತಂ ಪೊತ್ತಿ ಕಾಡೊಳ್ದವಾ
ನಳನಂ ಪುಟ್ಟಿಸೆ ಕೊರ್ವ್ವಿ ಪರ್ವ್ವಿದುದಗುರ್ವಂದುಗ್ರ ಘರ್ಮಾಗಮಂ ||೬||
ವ|| ಅಂತಾಸುರಮಾದ ಬೇಸಿಗೆಯೊಳ್ ||

ಅಂತ್ಯ: ವೃ|| ಶಕವರ್ಷಂ ಚತುರಬ್ಧಿ ಚಂದ್ರಶಶಿಸಂಖ್ಯಂ ೧೧೪೪ ಚಿತ್ರಭೂತ್ತ ಕಾ
ರ್ತಿಕ ಶುದ್ಧೋದಿತ ಪಂಚಮಿ ದಿಪಣವಾರಂ ಪೂಣೆ ಸಂಪೂರ್ಣಮಾ
ಯ್ತು ಕವಿ ಪ್ರಸ್ತುತ ಪಾರ್ಶ್ವನಾಥ ಚರಿತಂ ಪಾರ್ಶ್ವೋದಿತಂ ಕೂಡೆ ನ
ರ್ತಿಕೆ ತತ್ಕೀರ್ತಿವೊಲೂರ್ಜ್ಜಿತಾರ್ಥ .... ಳೂ || ೧೪೭ ||

ಕಂದ|| ಮಿಗೆ ಸಾರ್ದ್ರ ಹೃದಯರಂಗದೊ
ಳಗೆಯ್ದುತ್ತಿರೆ ಪುಳಕ ಸಸ್ಯತತಿ ಮತ್ಪ್ರಜ್ಞಾ
ನಘಸಿಕಘ ಜನಿತಮುಂ ತಿ
ದ್ದುಗೆ ಕಾವ್ಯರಸ ಪ್ರವಾಹಮುಂ ಬುಧನಿವಹಂ || ೧೪೮ ||

ವೃ || ಇದು ಸದ್ಧರ್ಮ ಸುಕಾವ್ಯಧರ್ಮವಿಭವಕ್ಕಾರ್ಮಂ ದಲೆಂದೊರ್ಮೆಯುಂ
ಮುದದಿಂದಂಬರವಳ್ಕ್ಕಡಿಂ ಬರಯಿಪತ್ಯಾನಂದದಿಂ ಪೇಳ್ವ ಸಂ
ಮುದದಿಂ .... ಭಾವಿಪ
ಗ್ಗದ ಕಾವ್ಯಪ್ರಿಯ ಭವ್ಯಕೋಟಿಗೆ ಜಯಂ ಭದ್ರಂ ಶುಭಂ ಮಂಗಳಂ
|| ೧೪೯ ||

ಗದ್ಯ॥ ಇದು ವಿದಿತ ವಿಬುಧಲೋಕ ನಾಯಕಾಭಿಪೂಜ್ಯ ವಾಸುಪೂಜ್ಯ ಜಿನ ಮುನಿ ಪ್ರಸಾದಾಸಾಧಿತ ನಿರ್ಮಳಧರ್ಮವಿನುತವಿನಯ ಜನ ವನಜವನ ವಿಳಸಿತ ಕವಿಕುಲತಿಲಕ ಪ್ರಣೂತ ಪಾರ್ಶ್ವನಾಥ ಪ್ರಣೀತಮಪ್ಪ ಪಾರ್ಶ್ವ ನಾಥ ... ...ಣ ವರ್ಣನಂ ಷೋಡಶಾಶ್ವಾಸಂ ಸಂಪೂರ್ಣಂ ಶ್ರೀ॥

ಅಂತೂ ಆಶ್ವಾಸ ೧೬ಕ್ಕಂ ಪದನೂ ....ಕ್ಕಂ ಮಂಗಳಮಹಾ ಪಾರ್ಶ್ವನಾಥ ಪುರಾಣ ಸಮಾಪ್ತಃ ಮಂಗಳಮಹಾ

ವಿಷಯ : ಪಾರ್ಶ್ವನಾಥನ ಕಥೆ.

ವಿಶೇಷ : ೧೧ನೆಯ ಆಶ್ವಾಸದಿಂದ ೧೬ ಆಶ್ವಾಸ ಪೂರ್ತಿ ಇದೆ. ಸ್ಫುಟಾಕ್ಷರ. ಅಲ್ಲಲ್ಲಿ ತ್ರುಟಿತ ಭಾಗಗಳೂ ಇವೆ ಇದರ ಮೊದಲಭಾಗವು ಕೆ. ಬಿ. ೫೮ ಆಗಿರುತ್ತದೆ.

900

ಕೆ.ಎ. ೨೮೪/೧೦	**ಪಾರ್ಶ್ವನಾಥಾಷ್ಟಕಂ**	**ವೃತ್ತ**
೧೨.೯"×೮.೨'	?	?
೧—೨ ಪತ್ರ	**೨೦ ಪಂಕ್ತಿ**	**೨೫ ಅಕ್ಷರ**

ಆದಿ : ಪಾರ್ಶ್ವನಾಥಾಷ್ಟಕಂ ॥
ಶ್ರೀಶ ನಿನ್ನ ನಿಜಸ್ವರೂಪ ಸಮಾನನಪ್ಪ ನಿಜಾತ್ಮನಂ
ಪೂಸಿ ಪೆಂಪಸೆ ಮುದ್ದಿನೆದ್ದನೆ ನಿರ್ವಿಕಲ್ಪ ಸಮಾಧಿಯಂ
ಕ್ಲೇಶನಾಶನ ಕರ್ಮ ನಿರ್ವೃತಿ ಶಾಶ್ವತಾ ಮುಕ್ತೀಶನಂ
ಲೇಸು ಮಾಡೆಲೆ ನಿಮ್ಮ ಬೇಡುವೆ ಪಾರ್ಶ್ವನಾಥ ಜಿನೇಶ್ವರಾ ॥ ೧ ॥

ಅಂತ್ಯ : ಚಿತ್ಸ್ವರೂಪನೆ ವಂದ್ಯದೇಹನೆನಿಪ್ಪ ನಿಶ್ಚಳತತ್ವಮುಂ
ನಿತ್ಯ ನಿರ್ಮ್ಮಳ ಪಾರಿಣಾಮಿಕ ಭಾವಮುಂ ನೆಜಿ ತಾಳ್ದುವಂ
ಉತ್ತರೋತ್ತರಬೋಧ ಸೌಖ್ಯ ಸುಧಾಕರಾವುದಯಾದ್ರಿಯೊಳ್
ಉತ್ತಮಾಂಬುಧಿಯೆಯ್ದೆ ತೀವಿಲು ಪಾರ್ಶ್ವನಾಥ ಜಿನೇಶ್ವರಾ ॥ ೧೮ ॥

ವಿಷಯ : ಪಾರ್ಶ್ವನಾಥನ ಸ್ತುತಿ.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ. ಶಕಟರೇಫದ ಪ್ರಯೋಗವಿದೆ. ಇದರಲ್ಲಿ ಅನುಪ್ರೇಕ್ಷೆಯೇ ಮೊದಲಾದ ಇತರ ೧೧ ಗ್ರಂಥಗಳಿವೆ.

901

ಕೆ. ೩೯೧/೨ | ಪಿಂಡೋತ್ಪತ್ಯ | ಗದ್ಯ
೭.೮" × ೧.೪" | ? | ?
೭೭—೮೧ ಪತ್ರ | ೭ ಪಂಕ್ತಿ | ೩೫ ಅಕ್ಷರ

ಆದಿ : ಶ್ರೀ ಗಣಾಧಿಪತಿಯೇ ನಮಃ ॥ ಪಿಂಡೋತ್ಪತ್ಯಾ ॥
ಯಿಂನ್ನು ಸ್ತ್ರೀಯಿ ರಜಸ್ಸಲೆಯಾದ ಮೂರು ದಿನದಲ್ಲಿ ರತಿಸಂಯೋಗವಾಗೆ ಹುಟ್ಟಿದ ಮಗ ಕಳ್ಳನಹನು । ೪ ದಿನಕ್ಕೆ ಪಾಪಿಯಹನು ೫ ದಿನಕ್ಕೆ ಬುಧಿವಂತ ೬ ದಿನಕೆ ವ್ರತಗೇಡಿ । ೭ ದಿನಕ್ಕೆ ದಯಾಪರ । ೮ ದಿನಕ್ಕೆ ದರಿದ್ರ। ೯ ದಿನಕ್ಕೆ ಧನಿಕ । ೧೦ ದಿನಕ್ಕೆ ಕಾಮಿ । ೧೧ ದಿನಕ್ಕೆ ನಿಃಕಾಮಿ । ೧೨ ದಿನಕ್ಕೆ ಕೋಪಿ । ೧೩ ದಿನಕೆ ಪಂಡಿತ । ೧೪ ದಿನಕ್ಕೆ ರೋಗಿ । ೧೫ ದಿನಕೆ ರಾಜ । ೧೬ ದಿನಕ್ಕೆ ದಿವ್ಯಯೋಗಿ । ೧೭ ದಿನಕ್ಕೆ ಬಂಧುನಿಗ್ರಹಿ । ಯಿಂನ್ನು ಶೋಡಶಕಳೆ ॥

ಅಂತ್ಯ : ಕಾಣದ ದುಖಃರ್ಮ್ಮವಮಂ ಕಂಡು ಯಿಂತಕ್ಕೆ ಮನು ...ಷ್ಯನಾಗಿ ಪುಟ್ಟಿ ॥ ಜನ್ಮಾಂತರ ಸಹಸ್ರೇಶು ತಪೋ ಧ್ಯಾನ ಸಮಾದಿಭಿಃ । ನರಾಣಾಂ........ ....ಶಿವಭಕ್ತಿ ಪ್ರಜಾಯತ್ತೆ ॥ ಯೆಂದು ಪೂರ್ವಜಂನ್ಮ ಸುಕ್ರುತ ಫಲದಿಂದ ಮಹಾಪುರುಷರಂ ಸಾರ್ದು ನರಕೋತ್ತರಮಂ ಮಾಡಿದಂತಾ ದೇಹಿಯನು ಪುಂಣ್ಯದೇಹಿಯೆಂಬುದೂ ॥ ಇತಿ ಪಿಂಡೋತ್ಪತ್ಯ ಸಂಪೂರ್ನಂ ಮಂಗಳ ಮಹಾಶ್ರೀ ॥

ವಿಷಯ : ಗರ್ಭಪಿಂಡವು ಹುಟ್ಟುವ ವಿವರ.

ವಿಶೇಷ : ಸಮಗ್ರ. ಕೊನೆಯಲ್ಲಿ ಸಂಸ್ಕೃತಾಕ್ಷರದ ಖಿಲಪತ್ರವಿದೆ. ಶಿಥಿಲಪ್ರತಿ. ಈ ಗ್ರಂಥದೊಂದಿಗೆ ಕೆ ೩೯೧/೧ ಮದನ ತಿಲಕ ಗ್ರಂಥವೂ ಇರುತ್ತದೆ.

902

ಕೆ.ಬಿ. ೩೧೩ | ಪುಂಡರೀಕ ಚರಿತ್ರೆ | ಯಕ್ಷಗಾನ
೭.೬" × ೬.೩" | ವಿಷ್ಣುದಾಸ | ಸು. ೧೮೦೦
೧—೨೭ ಪತ್ರ | ೧೬ ಪಂಕ್ತಿ | ೨೪ ಅಕ್ಷರ

ಆದಿ : ಸ್ಕಾಂದಪುರಾಣದೊಳಗಣ ಪುಂಡಲೀಕ ಚರಿತ್ರೆ ಬರಿಯುವದಕ್ಕೆಶುಭಮಸ್ತು॥
ವೃತ್ತ ॥ ಶ್ರೀಮದ್ವಿಠ್ಠಲ ಪುಂಡಲೀಕ ವರದಂ ಶ್ರೀ ರುಕ್ಮಿಣೀವಲ್ಲಭಂ
ಪ್ರೇಮಂ ಪದ್ಮಭವಾದಿ ವಂದಿತ' ಪದಂ ನಾಮಂ ಮಹಾ ಸುಂದರಂ
ಸೋಮಾದಿತ್ಯ ಸಹಸ್ರಕಾಂತಿಯುತನಂ ಧ್ಯಾನಂ ಸದಾ ಮಂಗಳಂ
ಕ್ಷೇಮಂ ವಿತ್ತನುದಿನ ಪಾಲಿಪುದೆಂಮಂ ಸ್ವಾರ್ಮಿ ಸದಾ ಸೌಖ್ಯಮಂ
X X X X ॥ ೧ ॥

ದ್ವಿಪದೆ ॥ ಹರನೊಲಿದು ಪಾರ್ವತಿಗೆ ಹರುಷದಿಂದಾಗ
ಧರೆಯೊಳುತ್ತಮಸ್ಕಂದ ಪೌರಾಣ ಬೇಗ ॥ ೧೦ ॥
ಅರುಹುತಿರಲಾಗ ಬಿಂನೈಸಿ ಕೇಳಿದಳು
ಪರಮಪಾವನ ಮೂರ್ತಿಯಾದ ಕಾಂತನೊಳು ॥ ೧೧ ॥
ಪುಂಡಲೀಕದ ಭಕ್ತಿನೊಲಿದು ವಿಠ್ಠಲನು
ಫಂಡರಾಪುರಕಾಗಿ ಬಂದ ಕಥನವನೂ ॥ ೧೨ ॥
ರುಂಡಮಾಲನೆ ಪೇಳಬೇಕೆಂದ ಸತಿಯು
ಕಂಡು ಹರನೊಲಿದು ಪೇಳಿದನು ಆ ಕಥೆಯ ॥ ೧೩ ॥

ಅಂತ್ಯ : ಪರಮ ಮಂಗಳ ಕೇಳು ನಿನ್ನ ಮನದಭೀಷ್ಟ
ಸ್ಥಿರವಾಗಿ ಬಾಳಿರಲೆಂದು
ವರ ಪುಂಡಲೀಕನು ಅನುದಿನ ವಿಠ್ಠಲನ
ಚರಣ ಸೇವೆಯ ಮಾಡುತಿರ್ಪ ॥ ೩೮೪ ॥ X X X X
ಶ್ರೀ ಮಹಾಪಂಡರಿ ಮಹಾತ್ಮೆಯ ಭೂಮಿ ಸುತ್ತಮಾ ತಕ್ರಪುರದೊಳು
ನೇಮ ದ್ವಿಜಕೂಲ ಕೃಷ್ಣನರಸಿಯು ಪರಮ ಐಶ್ವರಿಷಿ ॥
ಪ್ರೇಮಿ ಜನಿಸಿದ ವಿಷ್ಣುದಾಸನು ನೇಮದಲಿ ವರ್ನಿಸಿದ ಕಥೆಯೊಳು
ಶ್ರೀ ಮಹಾ ವಿಠ್ಠಲನು ಪಾಲಿಪ ಸರ್ವಮಂಗಳವ ॥ ೩೮೬ ॥ X X X X
ಸುರರೆಲ್ಲರು ಅನುದಿನ ಕೂಡಿ
ವರಚಂದ್ರಭಾಗ ಸ್ನಾನವ ಮಾಡಿ
ಪರ ಮಂಗಳ ಪುಂಡರಿ ಪುರದೊಳು ನಂಮ್ಮ
ಧೊರೆ ವಿಶ್ವಪ್ರಿಯ ವಿಠ್ಠಲರಾಯಗೆ । ಮಂಗಳಂ ಜಯ ॥ ೩೮೯ ॥
ಅಂತ್ಸೂ ಸಂಧಿ ೧ ಕ್ಕಂ ಪದ ೩೮೯ ಕಾಂ ಮಂಗಳ ಮಹಾಶ್ರೀ
ಈ ಕಥೆ ಮಾಡಿದ್ದು ಉಡುಪಿ ಕೃಷ್ಣದಾಸರು.

ವಿಷಯ : ಪುಂಡರೀಕನ ಕಥೆ.

ವಿಶೇಷ : ಮೊದಲಿನ ಕೆಲವು ಪತ್ರಗಳ ಅಂಚಿನಲ್ಲಿ ಹುಳು ತಿಂದಿದೆ. ಆದರೆ ಗ್ರಂಥ ಲೋಪವಿಲ್ಲ.

903

ಕೆ. ೩೮	**ಪುಣ್ಯಾಸ್ರವ**	ಚಂಪು
೧೪" x ೧.೮"	ನಾಗರಾಜ	೧೩೩೧
೧—೨೨೮ ಪತ್ರ	೯ ಪಂಕ್ತಿ	೭೦ ಅಕ್ಷರ

ಆದಿ : ಶ್ರೀ ಚಂದ್ರನಾಥಾಯ ... . ವೃ ||
... ...ಭವ್ಯಲೋಕೈಕ ಕಲ್ಪಾ
ರಾಮಂ ಕೈವಲ್ಯ ಬೋದೋದಯನಮಳಗುಣ ಭ್ರಾಜಿತಂ ಮುಕ್ತಿಲಕ್ಷ್ಮೀ
ಪ್ರೇಮಂ ಮಾಳ್ಕೆಂಮೊಳ್ಪಿಂದಂ .... ಧೀರ ವೀರಂ ಜಿನೇಂದ್ರಂ ||೧||

X X X X

ಕಂ || ಅವರಿವರೆಂನದೆ ಜಿನಮತ
ಕವಿಗಳ ಚರಣಾಂಬುಜಂಗಳನವರತಂ ಸಂ
ಭವಿಸಿಕ್ಕೆ ನಾಗರಾಜ
ನ ವಿನೇಯಾಮೃತ ಸದಯ ಸೇವ್ಯತರಮಾನದೊಳೂ ||

ಅಂತ್ಯ : ವೃ || ಯಿದ ಮೊದಲೋದಿಯೋದಿಸಿ ಮನಂಬುಗೆ ಕೇಳ್ದೊದವಿಪ್ಪ ಭವ್ಯಲೋ
ಕದೊಳು ವಿರಾಜಿಕ್ಕುಂ ನರ ಸುರೇಂದ್ರ ಪದೋನ್ನತಿ ಮುಕ್ತಿಸಂಪದಂ
ಸದಮಲ ಕೀರ್ತಿ ವಿಕೃತಿ ಭಾಸುರವೆತ್ತು ದಾತ್ರಿಯೊಳು ಮುದಮುನೋ ..

ವಿಷಯ : ಜೈನಗೃಹಸ್ಥ ಧರ್ಮಗಳನ್ನು ಬೋಧಿಸುವ ಕಥೆಗಳು.

ವಿಶೇಷ : ಕೊನೆಯಲ್ಲಿ ಒಂದು ಗರಿಯಿಲ್ಲ. ಮೊದಲ ಕೆಲವು ಗರಿಗಳು ಅಂಚಿನಲ್ಲಿ ತ್ರುಟಿತವಾಗಿವೆ. ಅಕ್ಷರವು ಸುಂದರವಾಗಿದೆ. ಶಕಟ ರೇಫವಿದೆ. ೬೮ ನೆಯ ಗರಿ ಮುರಿದು ತುಂಡಾಗಿದೆ.

904

ಕೆ. ೧೫೩	**ಪುಣ್ಯಾಸ್ರವ**	ಚಂಪು
೧೫.೨"x೧.೯"	ನಾಗರಾಜ	೧೩೩೧
೧—೧೫೫ ಪತ್ರ	೯ ಪಂಕ್ತಿ	೮೮ ಅಕ್ಷರ

ಆದಿ: ಶ್ರೀ ಪಂಚಗುರುಭ್ಯೋ ನಮಃ ॥ ಪುಣ್ಯಾಶ್ರವ ಪುಸ್ತಕ ಬರವುದಕ್ಕೆ ಶುಭಮಸ್ತು ॥

ಶ್ರೀಮದ್ದೇವೇಂದ್ರವೃಂದ ಪ್ರಕಟಮುಕುಟ ಮಾಣಿಕ್ಯ ಮಾಲಾಮರೀಚಿ
ಸ್ತೋಮ ವ್ಯಾಕೀರ್ಣ ಚಂಚತ್ಪದ ಕಮಲಯುಗಂ ಭವ್ಯಲೋಕೈಕ ಕಲ್ಪಾ
ರಾಮಂ ಕೈವಲ್ಯಭೋದೋದಯಸಮಲಗುಣವ್ರಾಜಿತಂ ಮುಕ್ತಿಲಕ್ಷ್ಮೀ
ಪ್ರೇಮಂ ಮಾಳ್ಕೆಂಮೊಳೊಳ್ಪಂ ಶಿವಪದಸುಖಮಂ ಧೀರವೀರಂ

x x x x ಜಿನೇಂದ್ರಂ ॥ ೧ ॥

ಕ ॥ ಅವರಿವರೆಂನ್ನದೆ ಜಿನಮತ
ಕವಿಗಳ ಚರಣಾಂಭುಜಂಗಳನವರತಂ ಸಂ
ಭವಿಸಿಕ್ಕೆ ನಾಗರಾಜನ
ನವಿನ ಮೃದು ಸದಯ ಸೇವ್ಯತರ ಮಾನಸದೊಳೂ ॥

ಅಂತ್ಯ: ವೃ ॥ ಪುರ ಶರ ಯುಗ್ಮ ಚಂದ್ರಪರಿಸಂಖೆ ಶಕಾಬ್ದಮದಾಗಿ ವತ್ಸರಂ
ಸರಸಿಜ ನಾಮಗರ್ಭವಳವಟ್ಟಿರಲಾಶ್ವೀಜದಷ್ಟಮಿಯೊ
ಳ್ಬಿರಸಿರೆ ಶುಕ್ರವಾರ ಮಿಗೆ ರೋಹಿಣಿ ತಾರೆಯೊಳೀ ಪ್ರಬಂಧ ವಿ
ಸ್ತರವಡಯಿತ್ತು ಭಾವಿಸಿ ವಿನೆಯ ಜನೋದ್ಧರಣೈಕ ಕಾರಣಂ ॥

ಗದ್ಯ ॥ ಯಿದು ದಿವಿಜರಾಜ ರಾಜಿತ ಕಿರ್ರೀಟತಟ ಘಟಿತ ನೂತ್ನರತ್ನ ಪ್ರತಾನ ಮರ್ರೀಚಿ ಮಂಜರ್ರೀರಂಜಿತ ಭಗವದರ್ಹತ್ಪರಮೇಶ್ವರ ಪಾದಾರವಿಂದ ಮಂದ ಮಕರಂದ ಮಧುಕರಾಯಮಾನ ಶ್ರೀಮದನಂತವೀರ್ಯ್ಯ ಮುನೀಂದ್ರ ಪದನಖಮಯೂಖ ಲೇಖಾಲಲಾಮಂ ಭಾರತಿ ಭಾಳನೇತ್ರನು ಭಯ ಕವಿತಾವಿಳಾಸಂ ಮಾಸಿವಾಳದ ನಾಗರಾಜ ವಿರಚಿತಮಪ್ಪ ಪುಣ್ಯಾಶ್ರವದೊಳು ದಾನಪ್ರಭಾವನಿರೂಪಣಂ ದ್ವಾದಶಾಧಿಕಾರಂ ॥

ಶ್ರೀಮದಭಿನವಲಕ್ಷ್ಮೀಸೇನಾಚಾರ್ಯ್ಯ ಶ್ರೀಮದಭಿನಂದನ ದೇವನಿರ್ಗ್ರಂಥಾಚಾರ್ಯ್ಯರ ಶಿಷ್ಯನಾದ ಪಂಡಿತ ಸ್ವಾಮಂಣ ಬರೆದ ಪುಣ್ಯಾಶ್ರವದ ಪುಸ್ತಕಕ್ಕೆ ಮಂಗಲಂ ಜಿಯಾತು ॥

ಶ್ರೀದುಂದುಭಿ ಸಂವತ್ಸರದ ಮಾರ್ಗಶಿರಮಾಸದ ಕ್ರಿಷ್ಣಪಕ್ಷದ ದಶಮಿ ಭೌಮವಾರ ಸೂರ್ಯ್ಯೋದಯದಲ್ಲಿ ಮುನಿ ಬರಯಿತು ಅಂತು ವಾಲೆ ೧೫೫.

ವಿಷಯ: ಜೈನ ಗೃಹಸ್ಥ ಧರ್ಮಗಳನ್ನು ಬೋಧಿಸುವ ಕಥೆಗಳು.

ವಿಶೇಷ : ೪೦ನೇ ಪತ್ರದ ಒಂದು ಮೂಲೆ ಮುರಿದಿದೆ. ಗ್ರಂಥ ಮುಗಿದ ಬಳಿಕ ಅದೇ ಗರಿಯಲ್ಲಿ ಗಂಡಾಮಾಲೆ ಮತ್ತು ವ್ರಣಕ್ಕೆ ಉಪಯೋಗಿಸುವ ಔಷಧದ ವಿವರವಿದೆ. ಕೊನೆಯಲ್ಲಿ ಗ್ರಂಥಕ್ಕೆ ಸಂಬಂಧಪಡದ ಮೂರು ಪತ್ರಗಳಿವೆ.

905

ಕೆ.ಎ. ೨೪೮	**ಪುಣ್ಯಾಸ್ರವ**	ಚಂಪು
೧೨.೮"×೭.೮"	ನಾಗರಾಜ	೧೩೩೧
೧—೪೭೮ ಪತ್ರ	೨೮ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ಪಂಚ ಗುರುಭ್ಯೋ ನಮಃ॥ ಶ್ರೀ ವೀತರಾಗಾಯ ನಮಃ ॥
ಶ್ರೀಮದ್ದೇವೇಂದ್ರ ವೃಂದ ಪ್ರಕಟ ಮುಕುಟ ಮಾಣಿಕ್ಯ ಮಾಳಾ ಮರೀಚಿ
ಸ್ತೋಮ ವ್ಯಾಕೀರ್ಣ ಚಂಚತ್ಪದ ಕಮಳಯುಗಂ ಭವ್ಯಲೋಕೈಕ ಕಲ್ಪಾ
ರಾಮಂ ಕೈವಲ್ಯಬೊಧೋದಯನಮಳಗುಣ ಭ್ರಾಜಿತಂ ಮುಕ್ತಿಲಕ್ಷ್ಮೀ
ಪ್ರೇಮಂ ಮಾಳ್ಕೆಂಮೊಳೊಳ್ಪಿಂ ಶಿವಪದಸುಖಮಂ ಧೀರ ವೀರಂ ಜಿನೇಂದ್ರಂ

X X X X ॥ ೧ ॥

ಕಂ ॥ ಆವರಿವರೆಂನದೆ ಜಿನಮತ
ಕವಿಗಳ ಚರಣಾಂಬುಜಂಗಳನವರತಂ ಸಂ
ಭವಿಸಿಕ್ಕೆ ನಾಗರಾಜಾ
ಖ್ಯ ವಚೋಮೃತ ಸದಯ ಸೇವ್ಯತರಮಾನಸದೊಳ್ ॥ ೧೯ ॥

ಅಂತ್ಯ : ವೃ ॥ ಪುರ ಶರ ಯುಗ್ಮ ಚಂದ್ರ ಪರಿಶಂಖೆ ಶಕಾಬ್ದಮದಾಗೆ ವತ್ಸರಂ
ಸರಸಿಜ ನಾಮ ಗರ್ಭಮಳವಟ್ಟಿರಲಾಶ್ವಿಜದಷ್ಟಮಿಯೊಳಂ
ಬೆರಸಿರೆ ಶುಕ್ರವಾರ ಮಿಗೆ ರೋಹಿಣಿ ತಾರೆಯೊಳೀ ಪ್ರಬಂಧ ವಿ
ಸ್ತರವಡಯಿತ್ತು ಭಾವಿಸೆ ವಿನಯಜನೋದ್ಧರಣೈಕ ಕಾರಣಂ ॥

ಗದ್ಯ ॥ ಯಿದು ದಿವಿಜರಾಜ ರಾಜಿತ ಕಿರೀಟ ತಟ ಘಟಿತ ನೂತ್ನರತ್ನ ಪ್ರತಾನ ಮರೀಚಿ ಮಂಜರೀರಂಜಿತ ಭಗವದರ್ಹತ್ಪರಮೇಶ್ವರ ಪಾದಾರವಿಂದ ಮಂದ ಮಕರಂದ ಮಧುಕರಾಯಮಾನ ಶ್ರೀಮದನಂತ ವೀರ್ಯ್ಯ ಮುನೀಂದ್ರ ಪದನಖ ಮಯೂಖಲೇಖಾಲಲಾಮಂ ಭಾರತೀ ಭಾಳನೇತ್ರನುಭಯ ಕವಿತಾ ವಿಳಾಸಂ ಶ್ರೀಮನ್ಮಾಸಿವಾಳದ ನಾಗರಾಜ

ವಿರಚಿತಮಪ್ಪ ಪುಂಣ್ಯಾಸ್ರವದೊಳು ದಾನ ದಾನಾನುಮೋದ ಪುಂಣ್ಯಪ್ರಭಾವ ನಿರೂಪಣಂ ದ್ವಾದಶಾಸ್ವಾಸಂ ಶ್ರೀ ||

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಖಾಬ್ದ ೧೬೬೦ನೆಯ ಸಿದ್ಧಾರ್ತ್ರಿ ಸಂವತ್ಸರದ ಜೇಷ್ಠ ಶು ೧೩ ಗುರುವಾರ || ಶ್ರೀರಂಗಪಟ್ಟಣದ ಅಂಣ್ಣೈಯ್ಯನವರ ಕುಮಾರರು ಗೋಮಟ್ಟೈಯ್ಯನವರಿಗೆ ತಂಮಡಹಳ್ಳಿ ಬೊಂಮರಸೈಯ್ಯನ ಮಗನು ದ್ಯಾವೈಯ್ಯನ ದ್ವಿತೀಯ್ಯ ಪುತ್ರ ಬೊಂಮರಸೈಯನು ಪ್ರತಿಸಮಾನವಾಗಿ ಬರದುಕೊಟ್ಟ ಪುಣ್ಯಾಸ್ರವದ ಪೊಸ್ತುಕಕ್ಕೆ ಭದ್ರಂ ಶುಭಂ ಮಂಗಲಂ ಶ್ರೀ. ಪುಂಣ್ಯಾಸ್ರವ ಸಮಾಪ್ತ ಮಂಗಲಮಹಾಶ್ರೀ.

ವಿಷಯ : ಜೈನ ಗೃಹಸ್ಥ ಧರ್ಮಗಳನ್ನು ಬೋಧಿಸುವ ಕಥೆಗಳು.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ. ಶಕಟರೇಫವಿದೆ. ಗ್ರಂಥದ ವಿಷಯವನ್ನು ಮೊದಲ ಪ್ರತ್ಯೇಕ ಪತ್ರಗಳಲ್ಲಿ ಬರೆದಿದೆ. ಮಧ್ಯದಲ್ಲಿ ಕೆಲವು ಕಡೆ ಗ್ರಂಥಪಾತವಿದೆ. ಪ್ರತಿಕಾರರು ಆ. ಅನಂದಾಳ್ವಾರ್‌ರವರು. ಪ್ರತಿಯಕಾಲ ೮–೧–೧೯೦೮.

906

ಕೆ.ಬಿ. ೩೫೩/೨	**ಪುತ್ರಕಾಮೇಷ್ಟಿ**	ಯಕ್ಷಗಾನ
೯"×೬.೫"	ಕೇಶವಯತಿಶಿಷ್ಯ ?	೧೮ನೆಯ ಶತಕ
೨೮–೪೮ ಪತ್ರ	೨೪ ಪಂಕ್ತಿ	೨೦ ಅಕ್ಷರ

ಆದಿ : ರಾಮಾಯಣದೊಳಗಣ ಬಾಲಕಾಂಡಾ ಪುತ್ರಕಾಮೇಷ್ಠಿ ಬರೆಯುವದಕ್ಕೆ ಶುಭಮಸ್ತು || ಶ್ಲೋಕಾ ||

ಶ್ರೀರಮಂ ದಿವಿಜೌಘವಂ ಬಿತ್ತಿಪದಂ ಶೀತಾಮಾನೋಹಾರಿತಾಂತ್ರ
ಕಾರುಣ್ಯಂಬುಧಿ ಭಕ್ತವತ್ಸಲ ಹರಿಂ ಸೋಮಾರ್ಕತ್ತೇಜಾಂಸ್ಥಿತಂ
ಮಾರೀಚಾದಿ ಸಮಸ್ತ ದುಷ್ಟಮ್ರುತನಂ ಮಹಾಪ್ರಕಾಸಾಂನ್ವಿತಂ
ವೀರಂ ಪಾವಸ ಪೂಣ್ಯ ನಾಮಾಚರಿತಂ ವಂದೆ ಸಾದ್ದರಿಘವಂ || ೧ ||

ರಾಘ ನಾಟ್ಟ ಜಂಪ್ಪೆ||

ಜಯತ್ತು ಗೌರಿಯಕೂವರ ಜಯ ಸಕಲ ವಿಗ್ನಹಾರಿ |
ಜಯ ಸುಜನ ಮಂದಾರಿ ಜಯ ಸೂರೋದ್ದಾರಿ ||

ಅಂತ್ಯ : ಚಾಮ....ಯಿಂತು ದಣು .... ಮಾಲಾಂತ್ರಕಾಲತ ಮಾಸ್ನುಜಾಪಕಾರಿ ಧಿನಾಂಕ್ತರಾಮ್ಮಾ ಖೈಯಲ್ಲಿ ನಮ್ಮಲ್ಲಿ ಶಿಥ ಚೇರಿಕ್ತಮನ್ನು ಬಿಡದೆ ಪತ್ತೆವಿಡಿದಾ ನಿಲ್ಲಸೀ ಪರಿಯಂತ್ರ ವಿಸರಿಶಿದೆನ್ನು. ಲಿಶೀಪಂತ್ತಸದ ಬಿಡು ಬಿರಿಕೆಕೆ ಮಹಾ ಪೂರೀಶಾಲ್ಲಲಾಹುರನ್ನು ಯಿಂತೀ ಬಾಲಕಾಂಡಾ ಸಮಾಪ್ತ ಮಂಗಳ ಮಹಾಶ್ರೀ। ಕೆರದಾ೩೫ಕಂ ೭೬೨ ಕ್ಕಂ ಆಂತು ವೂಭಯ ಸಂಧಿ ೨ಕಂ ಜಯಮಂಗಳಾ ಮಾಹಾ ಸೂರ್ಯದೇವೋತ್ತುಮಾ ಶ್ರೀ॥

ವಿಷಯ; ರಾಮಾಯಣದ ವಿಶ್ವಾಮಿತ್ರನ ಯಜ್ಞಸಮಾಪ್ತಿವರೆಗಿನ ಕಥೆ.

ವಿಶೇಷ : ಅತ್ಯಂತ ಶಿಥಿಲಪ್ರತಿ. ತಪ್ಪು ಅಧಿಕ. ಹುಳು ಹೊಡೆದಿದೆ. ಇದೇ ಪುಸ್ತಕದಲ್ಲಿ ರಾವಣೋದ್ಭವ ಪ್ರಸಂಗ, ಚಿಕ್ಕ ಪಟ್ಟಾಭಿಷೇಕ, ವಾಲಿ ಸುಗ್ರೀವರ ಕಾಳಗ, ಚೂಡಾಮಣಿ ಪ್ರಸಂಗ, ಸೇತುಬಂಧನ ಪ್ರಸಂಗ, ಅಂಗದ ಸಂಧಾನ, ರಾವಣನ ಕಥೆ, ವೆಂಕಟೇಶ ಶತಕ ಎಂಬ ಕೃತಿಗಳಿವೆ.

907

ಕೆ.ಬಿ. ೪೮೩/೧	**ಪುತ್ರಕಾಮೇಷ್ಟಿ**	ಯಕ್ಷಗಾನ
೮.೩" × ೬.೪"	ಕೇಶವಯತಿಶಿಷ್ಯ ?	೧೮ನೇ ಶತಕ
೧–೧೭ ಪತ್ರ	೨೩ ಪಂಕ್ತಿ	೨೩ ಅಕ್ಷರ

ಆದಿ : ಪುತ್ರಕಾಮೇಷ್ಟಿ ಬರಿಯುವದು ॥
ಶ್ರೀರಾಮಂ ದಿವಿಜೌಘ ಸನ್ನುತಪದಂ ಸೀತಾಮನೋಹ್ಲಾದಕಂ
ಕಾರುಣ್ಯಾಂಬುಧಿ ಭಕ್ತವತ್ಸಲ ಹರಿಂ ಕೌಸಲ್ಯ ಗರ್ಭೋದ್ಭವಂ
ಮಾರೀಚಾದಿ ಸಮಸ್ತದೈತ್ಯಮಥನಂ ಸರ್ವಪ್ರತಾಪಾನ್ವಿತಂ
ವೀರಂ ಪಾವನ ಪುಣ್ಯನಾಮಚರಿತಂ ವಂದೇ ಸದಾ ರಾಘವಂ ॥ ೧ ॥
ಯಕ್ಷಗಾನ। ರಾಗ। ನಾಟಿ। ತಾಳ ರೂಪಕ—
ಜಯ ಜಯ ಸಿದ್ಧಿವಿನಾಯಕ
ಜಯ ಜಯ ಬುದ್ಧಿ ಪ್ರದಾಯಕ
ಜಯ ಜಯ ಸುಂದರಕಾಯ ಜಯ ಮೋದುಕಪ್ರೀಯ್ಯ
ಜಯ ಜಯ ಮೂಷಕವಾಹನ
ಜಯ ಜಯ ಕರಿಮುಖಮೋಚನ
ಜಯ ಧೃತ ಅಂಕುಶ ಪಾಶಾ ಜಯ ವಿಘ್ನೆವಿನಾಶಾ ॥
ಜಯ ಜಯ x x x x

ದ್ವಿಪದೆ॥ ಆದಿವಾಲ್ಮೀಕಿ ಮುನಿಪಗೊಂದಿಸುತಾ
ಮೇದಿನಿಯೊಳಿಸೆವ ಕವಿಜನರ ಮನ್ನಿಸುತ್ತಾ ॥ ೧ ॥
ಗುರುಕೇಶವಾಖ್ಯ ಯತಿವರನ ನುತಿಸುತ್ತೆ
ಹಿರಿಯರ ಪದಯುಗಂಗಳಿಗೆರಗಿ ಮತ್ತಾ ॥ ೨ ॥

ಅಂತ್ಯ : ವಾ॥ ಅನಿಲ ಶರದಿಂದೆಚ್ಚ ಭರಕೆ ಮಾರೀಚ ಖಳ
ವನಧಿ ದಕ್ಷಿಣತೀರಕ್ಕೈದಿ ಬಿದ್ದಿರಲಿತ್ತ
ಲನಿಮಿಷರ ನಿಲಿಸಿದಂ ಹವ್ಯಭೋಜನಕೆ ಸುಸ್ಥಿರವದಗಿ ಸಂತೋಷದೀ
ಮುನಿಪನಧ್ವರವನೇಪೇಳ್ವೆ ನಿರ್ವಿಘ್ನದಿಂ
ಘನತರದೊಳು ಸಾಂಗಮಾದುದಾ ಬಳಿಕ ಕೇ
ಳ್ತನುಜಾತಮವಭೃತ ಮಹೋತ್ಸವಂ ಸುಲಭವಾಯ್ತು ಸುರಾರಿ
ಕರುಣದಿಂದ ॥ ೧ ॥
ಸಮಾಪ್ತ॥ ಅಂತು ಸಂಧಿ ೧ಕ್ಕಂ ಪದ ೨೧೩ಕ್ಕಂ ಮಂಗಳಮಸ್ತು ॥

ವಿಷಯ : ರಾಮಾಯಣದ ವಿಶ್ವಾಮಿತ್ರನ ಯಜ್ಞ ಸಮಾಪ್ತಿ ವರೆಗಿನ ಕಥೆ.
ವಿಶೇಷ : ಈ ಪುಸ್ತಕದಲ್ಲೆ ದೂರ್ವಾಸಭೋಜನ, ಕನಕಾಂಗೀ ಕಲ್ಯಾಣ, ಅಂಬರೀಷ ಚರಿತ್ರೆ, ಮಾರ್ಕಂಡೇಯ ಚರಿತ್ರೆ ಎಂಬ ಕೃತಿಗಳಿವೆ.

908

ಕೆ.ಬಿ. ೪೯೦	**ಪುತ್ರಕಾಮೇಷ್ಟಿ**	ಯಕ್ಷಗಾನ
೬.೩"×೩.೮"	ಲಿಂಗರಾಜ	೧೮೫೦
೧-೬೮ ಪತ್ರ	೧೬ ಪಂಕ್ತಿ	೧೩ ಅಕ್ಷರ

ಆದಿ : ಪುತ್ರಕಾಮೇಷ್ಟಿ ಬರೆಯುವದಕ್ಕೆ ಶುಭಮಸ್ತು ॥ ನಾಂದಿ ॥ ಕಂದ ॥
ಶ್ರೀಮತ್ತಾಮರಸೋತ್ಪಲಶ್ವಾಸನಸ್ಸೈತ್ರೀ ಪಾತ್ರನೇತ್ರತ್ರಯಂ
ಭೀಮಭ್ರೂಕುಟಿ ಭಂಗಲೇ ಛಟಕಲ್ಪಾನಲ್ಪ ನಾಕಾಲಯಂ
ವಾಮಾಂಕಸ್ತಿತ ಶೈಲರಾಜತನಯಾ ಸಲ್ಲಾಪ ಲೋಲಾಶಯಂ
ಪ್ರೇಮಂಬೆತ್ತೆಮಗೀಗೆ ಭದ್ರತತಿಯಂ ಶ್ರೀಭದ್ರಕಾಳೀಪ್ರಿಯಂ ॥ ೧ ॥
ರಾಗ ॥ ನಾಟಿ ॥ ಝಂಪೆ ॥ ಜಯ ದಶರಥಕುಮಾರ
ಜಯ ಗಾಧಿಜಾಧಾರ
ಜಯ ತಾಟಕಾಕಾರ ಕಾನನ ಕುಠಾರ

ಜಯತು ಮಾರೀಚ ಸುಬಾಹುಬಲ
ಜಯು ಧೀರ
ಜಯತು ಗೌತಮುದಾರ ದಾನ ಮುಂದಾರ ॥ ೨ ॥

X X X X

ಕಂದ ॥ ವರ ವಾಲ್ಮೀಕಿ ತಪೋಧನ
ವಿರಚಿತ ರಾಮಾಯಣಾಬ್ಧಿ ಮಥನೋದ್ಗತ ಬಂ
ಧುರ ರಾಮಕಥಾಮೃತವಂ
ನೆರೆವೆನು ವಿಭುದರ್ಗೆ ಯಕ್ಷಗಾನದೊಳಲೆಯಿಂ ॥ ೧೮ ॥

ಅಂತ್ಯ : ವೃತ್ತಮು ಚಿತ್ತವಾಸಗೆ ಕೃತ್ತಿವಾಸಗೆ
ಹೃತ್ತಿಮಿರ ನಿರಸಗೆ ನೃತ್ತೋಲ್ಲಾಸಗೆ ॥ ೩೮೪ ॥
ಪುಂಗವ ತುರಂಗನಿಗೆ ಗಂಗಾಜನಿಗೆ
ಲಿಂಗರಾಜ ಸೇವ್ಯನಿಗೆ ತುಂಗಮಹಲಿಂಗನಿಗೆ ॥ ೩೮೫ ॥ ಶ್ರೀ ॥

ಸರ್ಗ ೧೮೮೫ ಯಿಸವಿ ಅಗಟೊಂಬರು ತ್ತಾರಿಖು ೧೯ರಲ್ಲು ರಾಮಾಯಣದ
ಪುತ್ರಕಾಮೇಷ್ಟಿ ಸಂಪೂರ್ನ ಶ್ರೀ॥

ವಿಷಯ : ದಶರಥನ ಪುತ್ರಕಾಮೇಷ್ಟಿ ಮತ್ತು ರಾಮಜನನದ ಕಥೆ.

ವಿಶೇಷ : ವಿರಳಾಕ್ಷರ, ಸುದೃಢಪ್ರತಿ, ಅಂತ್ಯದಲ್ಲಿ ೨೩ ಶುದ್ಧ ಪತ್ರಗಳಿವೆ.

909

ಕೆ.೬೩೫	**ಪುನರ್ದೀಕ್ಷಾ ರಗಳೆ**	ರಗಳೆ
೧೪.೧″ × ೧.೯″	?	?
೨೫-೨೯ ಪತ್ರ	೧೦ ಪಂಕ್ತಿ	೬೦ ಅಕ್ಷರ

ಆದಿ : ಶ್ರೀ ಗುರುಭ್ಯೋಂನ್ನಮಃ ॥ ಪುನರ್ಧೀಕ್ಷೆಯ ರಗಳೆ ॥
ಕಂದ ॥ ತಾಮುಸ ದ್ವಿಜರಿಂ ದೀಕ್ಷೆಯ
ಕಾಮಿನಿಯರ ದೀಕ್ಷೆ ಸ್ವದೀಕ್ಷೆಯುಂನಳಿರ್ವ
ನೀ ಮಹಗುರುವಿನ ಕರುಣದಿ
ಪ್ರೇಮದಿ ಪುನರ್ದೀಕ್ಷೆ ಪೇಳ್ವೆ ಶಂಕರಲಿಂಗಾ ॥

ರಗಳೇ ॥ ಸಾಕ್ಷಿ॥ ಜಂನ್ಮನಾ ಜಾಯತೇ ಶೂದ್ರಃ। ಪೂರ್ವ ಮಾತಾ ಚ ಶೂದ್ರತಿ।

ನ ಚೋಪದೇಶ ಗಾಯಾತ್ರಿ ನ ಚ ಮುಂಜೀ ನ ಚ ಕ್ರಯಾಃ ॥ ೧ ॥

ಲಲಿತ ರಗಳೆ ॥ ಶ್ರೀಮದಮರರ್ಕ್ಕ ಶತಕೋಟಿ ತೇಜಸ್ಪುಂಣ್ಯ
ನಾಮ ರೂಪು ಕ್ರಿಯಾ ಭೂಷಣ ಪುನರ್ದೀಕ್ಷೇ ॥ ೨ ॥

ಅಂತ್ಯ : ನಾದಮಯ ಪುನರ್ದೀಕ್ಷೇ। ಶಾಶ್ವತ ಪುನರ್ದೀಕ್ಷೇ ॥
ವಿಶ್ವಮಯ ಪುನರ್ದೀಕ್ಷೇ। ಹರ ಹರ ಪುನರ್ದೀಕ್ಷೇ ॥
ಶಿವ ಶಿವ ಪುನರ್ದೀಕ್ಷೇ ॥ ೧೩೦ ॥
ಹರ ಹರ ಮಹಾದೇವ। ಶಿವ ಶಿವ ಮಹಾದೇವ ॥
ನಮಸ್ತೇ ನಮಸ್ತೇ ನಮಃ ॥ ಕ್ಷಿತಿಮತ ಪುನರ್ದೀಕ್ಷೇ ॥
ಕಂದ ॥ ಯಂನ್ನತಿಶಯದಿಂ ಪೊಗಳ್ವೆಂ
ವುಂನ್ನತ ಗಣಶರಣರಂ ಮನೋರಥದಿಂದಂ
ಸಂನ್ನುತ ಭಕ್ತಿಯನೀವುದು
ಚಂನ್ನಾಗಿಯೆ ಸಲಹು ನಂಮ್ಮ ಶಂಕರಲಿಂಗಾ ॥
ಪುನರ್ದೀಕ್ಷೆಯ ರಗಳೆ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ

ವಿಷಯ : ಶಿವದೀಕ್ಷೆ.

ವಿಶೇಷ : ಇದರೊಂದಿಗೆ ಕೆ. ೬೩೩, ಕೆ ೬೩೪ ನಂಬರಿನ ಶುಕಮುನಿ ಚಾರಿತ್ರ, ಇಷ್ಟಲಿಂಗ ಚಾರಿತ್ರಗಳೂ ಇವೆ. ಈ ಗ್ರಂಥ ಮುಗಿದ ಮೇಲೆ ೨೯ ನೆಯ ಪತ್ರದ ಹಿಂಬದಿಯಲ್ಲಿ ಕೆಲವು ಸಂಸ್ಕೃತ ಶ್ಲೋಕಗಳಿವೆ.

910

ಕೆ.ಬಿ. ೪೬	**ಪುರಾತನರ ಚರಿತೆ**	ವಾರ್ಧಕ ಷಟ್ಪದಿ
೭.೬″ × ೬.೩″	ಕುಮಾರ ಚನ್ನಬಸವ	೧೫೫೦
೧–೮೦ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಚೆಂನ ಬಸವ ಪುರಾಣ ಬರಿಯುವದಕ್ಕೆ ಶುಭಮಸ್ತು
ಸರ್ವ ಮಾಂಗಲ್ಯ ರೂಪದಿಂ
ವಾಮಾರ್ಧ ತನು ವಸಿತ ಕಾಂತಿಇಂದೊಪ್ಪಲು
ಧಾಮ ದಕ್ಷಿಣಭಾಗ ತನು ಶುಭ್ರಕಾಂತಿಯಿಂದೊಪ್ಪಲಂತೆರಡುಗೂಡಿ

ಭೂಮಿಯೊಳು ಕಾಳಿಂದಿ ದೇವಗಂಗೆಗಳೆನಿಸು
ವಾ ಮಹಾನದಿಗಳೆನಿಸು ಸಂಗಮವೊಯೆನಿಪ್ಪ
............ರಂ ಶಿವಕಥಿಕರಿಷ್ಟಾರ್ಥ ಸಿದ್ಧಿಗೊಡುಗೆ ॥ ೧ ॥

ಅಂತ್ಯ : ಇದು ಮುಕ್ತಿ ಮುನಿನಾಥ ವಂಶಂಭರಾಧಿತ್ಯ
ನಧಿಕಾಷ್ಟಾ ಶಿಖಿಯು ಬಸವೇಶ್ವರ ತರೋದ್ಭವಂ
ವಿದಿತ ಕೀರ್ತಿ ಪ್ರತಾಪಂ ಶರಣಸುರತೆರು ಕುಮಾರ ಚೆಂನಬಸವೇಶ್ವರಂ
ಮುದದಿಂದೆ ಬಸವೇಶ್ವರ ಪುರಾಣದೊಳು ಸೂಚಿ
ಸಿದ ಪುರಾತನ ಚಾರಿತ್ರವನುಪಕಥೆಗಳೊಂದಿ
ಪದವಿಟ್ಟುದೊಂಭತ್ತನೆಯ ಸಂಧಿ ಶಿವಭಕ್ತಜನ ಕರ್ನಸೌಖ್ಯಾನು
ಬಂಧಿ ॥ ೨೨ ॥

ಅಂತು ಸಂಧಿ ೯ ಕ್ಕಂ ಪದನು ೩೫೦ ಕ್ಕಂ ॥ ಮಂಗಳ ಮಹಾ ॥
॥ ಚೆಂನ ಬಸವ ಪುರಾಣ ಸಂಪೂರ್ಣಾ ॥

ವಿಷಯ : ಬಸವ ಪುರಾಣದಂತೆ ಪುರಾತನರ ಕಥೆ.

ವಿಶೇಷ : ಕೆಲವು ಪದ್ಯಗಳ ಚರಣಗಳಲ್ಲಿ ಕೆಲ ಕೆಲ ಪದಗಳು ಲುಪ್ತವಾಗಿವೆ.

911

ಕೆ. ೬೩/೪	ಪುರಾತನರ ತ್ರಿವಿಧಿ	ತ್ರಿಪದಿ
೧೩.೫"×೧.೩"	?	?
೧೩—೧೮ ಪತ್ರ	೫ ಪಂಕ್ತಿ	೫೨ ಅಕ್ಷರ

ಆದಿ : ಜಗದಗಲ ಮುಗಿಲಗಲ ಮಿಗೆ ಆಗಲ ನಿಂಮ್ಮಗನ
ಅಗಹರನೆ ನಿಂಮ್ಮ ಶರಣರ ಸಂಪದವಾ
ಹೊಗಳಲೆಂನಳವೆ....ವ ಬಲ್ಲಾ ॥ ೧ ॥
ಕೋಟಿ ಶ್ರೀ ರುದ್ರ ಜಪಕೋಟಿ ಪಂಚಾಕ್ಷರಿ ಜಪ
ಕೋಟಿ ಮಹಸ್ತಲ ಶಿವಮಂತ್ರಕಿಂದಧಿಕಾ
ನಾಟಿ ಶಿವ ಶರಣಾ ಸ್ತೂತಿಯಂದಾ ॥ ೨ ॥

ಅಂತ್ಯ : ಯಿರಿ ... .
...........ಗಗನದೊಳೆಚ್ಚು ಕೆಡಹಿದ
ಕಿರಾತ ರುದ್ರೈಯ್ಯ ಶರಣಾಗೂ ॥ ೬೧ ॥
ಅಲ್ಲಿ ಮಾಯಿಯನಾಡಿ ನೀನಿಲ್ಲದೆ ಮರ್ತ್ಯಕೆ ಬಂದು
ಯಲ್ಲಾ ಪುರಾತರನು ಸಲಹಿ ಕದಳಿಯ ಹೊಕ್ಕು
ಅಲ್ಲಮು ಪ್ರಭುವೇ ಶರಣಾಗು ॥ ೬೨ ॥
ಎಲ್ಲಾ ಪುರಾತನರ ತ್ರಿವಿಧಿ ಸಂಪೂರ್ನ ಮಂಗಳ ಮಹಾಶ್ರೀ

ವಿಷಯ : ಸುಂಕದ ಬಂಕಣ್ಣ, ಹಡಪದಪ್ಪಣ್ಣ, ನುಲಿಯ ಚಂದಯ್ಯ ಮೊದಲಾದ ಪುರಾತನರ ವಿಚಾರ.

ವಿಶೇಷ : ಪ್ರತಿ ಅಲ್ಲಲ್ಲಿ ಶಿಥಿಲವಾಗಿರುವುದಲ್ಲದೆ ಕೊನೆಯ ಗರಿ ಮುರಿದಿದೆ. ಈ ಕಟ್ಟನಲ್ಲಿ ನಾನಾರ್ಥರತ್ನಾಕರ, ಪ್ರಭುನಟನ ತಾರಾವಳಿ, ಶಂಕರ ದೇವರ ಕಂದ, ಗುರು ರಗಳೆ ಎಂಬ ಕೃತಿಗಳಿವೆ.

912

ಕೆ.ಬಿ. ೩೫೧।೬	**ಪುರಾತನರ ದೇವಿಯರ ತ್ರಿಪದಿ ಇತ್ಯಾದಿ**	ತ್ರಿಪದಿ
೮" × ೬.೨"	?	?
೧೩೧-೧೩೭ ಪತ್ರ	೧೪ ಪಂಕ್ತಿ	೨೦ ಅಕ್ಷರ

ಆದಿ : ಗ್ರಂಥಾ ॥ ಕೈಲಾಸವಾಸ ಸರ್ವೇಶ ತವಪಾದಸ್ತು ಕಥ್ಯತೇ ।
ಸ್ವಯಾತಿ ಪರಮಾನುಕ್ತಿಃ ಶಿವಲೋಕೆ ಮಹೀಯತೇ ॥ ೧ ॥
ತ್ರಿಯಂಬಕಾದಿ ಮಂತ್ರಗಳಿಂದ ಪುಷ್ಪಾಂಜಲಿಯಂ ಮಾಡಿ ಸಮಸ್ತ ಗಣಂಗಳು ಜಯಜಯವೆಂಬ ಜಯನಾದಂಗಳಿಂ ॥ ವಪ್ಪುತಿರ್ದಂ ॥
ವೃತ್ತಾ ॥ ಗುರುಭಕ್ತಿಯೊಳು ಸಂದು । ಹರಭಕ್ತಿಯೊಳು ನಿಂದು
ಚರಭಕ್ತಿಯಿಂದ ಪರಮೇಶನೊಲಿಸಿದಾ
ಶರಣೆಯಗಣ್ಗನು ನತನಪ್ಪೆ ॥ ೧ ॥

ಅಂತ್ಯ : ಕಂದ ॥ ಇವರಾದಿಯಾದ ಶರಣರ
ನಿವಹದ ಸಂನ್ನುತಿಯನೊಲ್ದು ತಪ್ಪದೆ ಜಗದೊಳ್
ದಿವದೊಳಮಿರುಳುಂ ಜಪಿಸಲು
ಸವೆಯದ ಸಂಪದವು ಸಕಲ ಕಾಮಿತಮಕ್ಕುಂ ॥
ಶ್ರೀ ಪುರಾತನ ಭಕ್ತಸ್ತ್ರೋತ್ರಂ ಸಂಪೂರ್ಣಂ

ವಿಷಯ : ಶಿವಶರಣೆಯರ ಮಹಿಮೆ.

ವಿಶೇಷ : ಈ ಗ್ರಂಥದ ಜೊತೆಯಲ್ಲಿ ಗುಂಡು ಬ್ರಹ್ಮಯ್ಯಗಳ ಸುವ್ವಿ, ಜೋಗುಳ ಪದಗಳು, ಬಸವಾಷ್ಟಕ, ಬಸವೇಶ್ವರ ರಗಳೆ, ಗಣಾಷ್ಟಕ, ನುಲಿಯ ಚಂದಯ್ಯಗಳ ವಚನ, ಹಾಡುಗಳು ಮತ್ತು ಪುಷ್ಪಾಂಜಲಿ ಸ್ತೋತ್ರಗಳಿವೆ. ಗ್ರಂಥದ ಕೊನೆಯಲ್ಲಿ ಮಿಶ್ರ ವಿಷಯಗಳಿಗೆ ಸಂಬಂಧಿಸಿದ ಪತ್ರಗಳೂ ಇವೆ. ಹಾಳೆಗಳು ತೆಳುವಾಗಿವೆ.

913

ಕೆ. ೫೯೦	**ಪುರಾತನರ ಪುರಾಣ**	ಸಾಂಗತ್ಯ
೮.೩″×೧.೯″	ಭದ್ರಸುತವೀರ	?
೧೨೦–೧೭೩ ಪತ್ರ	೯ ಪಂಕ್ತಿ	೪೪ ಅಕ್ಷರ

ಆದಿ : ಯೆಲ್ಲಾ ಪುರಾತರ ಪೂರಾಣವ ಭರಲುದಕ್ಕೆ ಸುಬಮುಸ್ತು ಶೋಬಾನಮುಸ್ತು

x x x ಕಂದ ॥ ಶ್ರೀಗುರುವನುಪದೇಶಿಸಿದ
ಘನಮಾರ್ಗ್ಗವಿಡಿದು ನಡದ ಶಿವೈಕ್ಯಾಗಮಾ
ಹಾರಗಣದತಿಸಯಮಂ
ಮನೋನುರಾಗದಿ ಬಂಣಿಸುವೆ ಸುಜನರಾಲಿಸಿ ಮುದಧಿಂ ॥

ಪದ ॥ ಶ್ರೀಗಿರಿಜೆಯ ಉರಗಿರಿ ರಾಜಹಂಸನೆ
ಶ್ರೀಗೌರೀಶ ಸರ್ವೇಶಾ
ಪೂಗೋಲನಂಗ ಭಂಗ ನೀ ಸಲಹು ಮ
ಹಾಘನ ಕರುಣದಿಂದೆನ್ನ ॥ ೧ ॥

ಗುರುವೆ ಯೆಂನ್ನಯ ಸುರತರುವೆ ಸಂಜೀವನ
ಧಿರವೆ ಮುಕ್ತಿಯ ಸುರತರುವೇ
ಶರಣಜನದ ಕಾಮದೇನುವೆ ಶರಣು
ಮರು ಶಾಂತೇಶ ನಿಮ್ಮಡಿಗೆ ॥ ೨ ॥

x x x x

ರುದ್ರಮೂರುತಿ ಗುರುಶಾಂತೇಶ ಕರ
ಪದ್ಮಶಂಭವನೆಂದೆನಿಪಾ
ಭದ್ರನ ಸುತವೀರ ಪೇಳ್ದನೀ ಕೃತಿಯನು
ಚಿದ್ರೂಪ ಶರಣರ ನೆನದು ॥ ೧೭ ॥

ಅಂತ್ಯ : ಕಲ್ಯಾಣದೊಳು ಮೆರೆದೆಲ್ಲಾ ಪುರಾತರ
ಭಲ್ಲಿದಲಭವಚರಿತೆಯ
ಯೆಲ್ಲಾ ಶರಣಭಕ್ತರುಲ್ಲಾಸಧಿಂ ಕೇಳಿ
ಮಲ್ಲಿಕಾರ್ಜುನ ಕ್ರುಪೆಯುಹಸು ॥ ೨೩೮ ॥

ತ್ರಿವಿದ ಲಿಂಗಗಳ ತ್ರಿವಿದ ಪ್ರಾಸಾದವ
ಸವಿವ ತ್ರಿಗುಣ ಭರಿತರಿಗೆ
ಅವಿರಾಳ ಭಕ್ತಿತತಿಗೆ ತಉರೆನಿಸೂವ
ವರಗುರು ಶ....ಣರ ಕ್ರುತಿಯಾ ॥ ೨೩೯ ॥

ಅಂತು ಸಂಧಿ ೩ಕ್ಕಂ ಕಂದ ಸಹ ಪದ ೬೯೩ಕ್ಕಂ ಮಂಗಳ ಮಹಾಶ್ರೀ
ಪ್ರಜೋರ್ಪತಿ ಸಂಹ್ವಶರದ ಆಶ್ವೀಜ ಭಹುಳ ಶು॥ ೧೪ ಲೂ ಸಿಂಗಟಿಗೆರೆಯ ಬಸವೇಗೌಡರ ಮಗ ಚನ್ನಬಸವೇಗೌಡಗೆ ಕರಿಬಸಪ್ಪ ದೇವರನಾತ್ಮಜ ಚನ್ನಮಲ್ಲಪ್ಪದೇವರು ಬರಕೊಟ್ಟ ಎಲ್ಲಾ ಪುರಾತರ ಕಾವ್ಯ ರೇವಂಣನ ಕಾವ್ಯ ಎರಡನು ಸಂಪ್ರೀತಿಯಿಂದ ಬರಕೊಟ್ಟುದು ಮೂಕ್ಷವಾಯಿತು.

X X X X

ಗಣಂಗಳ ಪಾದಾಕ್ಕೆ ನಮೋ ನಮೋ ನಮುಸ್ಕಾರ ಮಾಳ್ಪೆ ಮಂಗಳಮಹಾಶ್ರೀ

ವಿಷಯ : ಬಸವ, ಸಿದ್ಧರಾಮ, ನುಲಿಯ ಚಂದಯ್ಯ ಮೊದಲಾದ ಪುರಾತನರ ಚರಿತ್ರೆ.

ವಿಶೇಷ : ಈ ಪ್ರತಿಯ ಮೊದಲನೆಯ ಪತ್ರ ಸ್ವಲ್ಪ ಶಿಥಿಲವಾಗಿದೆ. ಈ ಪ್ರತಿಯನ್ನು ಕಾಪಿ ಮಾಡಿದವನೇ ರೇವಣನ ಕಾವ್ಯ ಎಂಬುದನ್ನೂ ಕಾಪಿ ಮಾಡಿದ್ದಾನೆ. ಈ ರೇವಣನ ಕಾವ್ಯವನ್ನು ಈ ಕಟ್ಟನಿಂದ ಪ್ರತ್ಯೇಕಿಸಿದೆ. ಅದು ಇಲ್ಲಿಲ್ಲ.

914

ಕೆ. ೬೪೨	**ಪುರಾತನರ ಪುರಾಣ**	ಸಾಂಗತ್ಯ
೯.೮″ × ೧.೫″	ಭದ್ರಸುತವೀರ	?
೧–೫೧ ಪತ್ರ	೮ ಪಂಕ್ತಿ	೪೨ ಅಕ್ಷರ

ಆದಿ : ಯಲ್ಲ ಪೂರಾತಾಗಣಂಗಳ ಪೂರಾಣವ ಬರವಥಕ್ಕೆ ಸುಭಮಸ್ತು॥
ಸಂಗೀತ್ಯಾಥ ವರ್ನ ಶ್ರೀ ॥

ಕಂಥ॥ ಶ್ರೀಗುರುವರನುಪದೇಶಿಸಿ
ದಾ ಘೆನವಾರ್ಗ್ಗವಿಡಿದು ನಡದ ಶಿವೈಕ್ಯ ಮ
ಹಾಗಣದತಿಶಯುವ ಮನೋನು
ರಾಗದಿ ಭಂಣಿಸೂವೆ ಸುಜನರಾಲಿಶಿ ಮುದದಿಂ ॥ ೧ ॥

ಸಂಗೀತ್ಯಾ॥ ಶ್ರೀ ಗಿರಿಜೆಯ ವುರಗಿರಿ ರಾಜಹಂಸನೆ
ಶ್ರೀಗೌರೀಶ ಸರ್ವೇಶಾ
ಪೂಗೋಲನಂಗವಿಭಾಂಗ ನೀ ಸಲಹು ಮ
ಹಾಘೆನ ಕರುಣದಿಂದ್ಬೆಂನ್ನಾ ॥ ೧ ॥

X X X X

ಬಸವಂಣ ವೊದಲಾದ ಯೇಳುನೂರೆಪ್ಪತ್ತು
ಅಸಮುಗಣಂಗಳೊಳೊಲಿದೂ
ಹೆಸರಿಟ್ಟು ಪೊಗಳುವೆ ವೊಸುಧೆಯೊಳಗೆ ಭಕ್ತಿ
ರಸದ ಸೋನೆಯ ಪೆಸರುವೆನೂ ॥ ೧೨ ॥

X X X X

ರುದ್ರಮೂರುತಿ ಗುರುಶಾಂತ್ರೇಶನ ಕರ
ಪದ್ಮ ಶಾಂಭವನೆಂದ್ದೆನಿಪಾ
ಬದ್ರುನ ಸುತವೀರ ಪೇಳ್ದಾನೀ ಕ್ರುತಿಯನೂ
ಚಿದ್ರೂಪ ಶರಣರ ನೆನದೂ ॥ ೧೭ ॥

ಅಂತ್ಯ: ಅಸ್ತುರ್ರೈಸ್ವರ್ಯ್ಯ ಶ್ರೀಗುಣಚಿಂತ್ರಮಣಿಯಶೂ
ರತ್ನಯಲ್ಲಾ ಪೂರಾತರನೂ
ಅರ್ತಿಯ ಕಥೆಯೂ ಸಮಾಪ್ತ ಮಂಗಳಮಹಾ
ನೇತ್ರಾಂಭಕ ಜಯ ಜಯತೂ ॥ ೨೪೨ ॥

ಅಂತ್ಸೂ ಸಂದ್ದಿ ೩ಕಂ ಪಥನು ೭೧೦ ಕಂದ ೩ ಉಭೆಯಂ ಪಥನು ೭೧೩ಕೆ
ಯಲ್ಲಾ ಪೂರಾತರ ಪೂರಾಣ ಸಮಾಪ್ತ ಮಂಗಳ ಮಹಾಶ್ರೀ

ವಿಷಯ: ಬಸವ, ಸಿದ್ಧರಾಮ, ನುಲಿಯಚಂದಯ್ಯ ವೊದಲಾದ ಪುರಾತನರ ಚರಿತ್ರೆ.

ವಿಶೇಷ: ೧೪ನೆಯ ಗರಿಯ ಒಂದುಕಡೆ ಮಾತ್ರ ಬರಹವಿದೆ. ೧೪,೨೦ನೆಯ ಗರಿಗಳು ಶಿಥಿಲ. ಒಂದೊಂದು ಸಂಧಿಯ ಆರಂಭದಲ್ಲೂ ಒಂದೊಂದು ಕಂದಪದ್ಯವಿದೆ. ಬರಹ ಚೆನ್ನಾಗಿದೆ.

915

ಕೆ.ಎ. ೧೪೪ | ಪುರಾತನರ ರಗಳೆ | ರಗಳೆ
೧೨.೭″ × ೪.೧″ | ಹರಿಹರದೇವ | ೧೧೬೫
೧—೧೦೧ ಪತ್ರ | ೩೨ ಪಂಕ್ತಿ | ೩೨ ಅಕ್ಷರ

ಆದಿ : ಪುರಾತರರ ಚರಿತ್ರೆ ಅರವತ್ತುಮೂರು ಗಣಂಗಳ ರಗಳೆ

ಕಂದ ಪದ್ಯ॥ ಧರೆ ಅರಿಯೆ ತನುವೆರಸು ಸಂ
ದುರುತರದರುವತ್ತುಮೂವರೊಳ್ಮೊದಲ ಮಹೇ
ಶ್ವರರ ತಿರುನೀಲಕಂಠರ
ಬರಿ ಕವನವಧರಿಸು ಹಂಪೆಯ ವಿರೂಪಕ್ಷಾ॥

ರಗಳೆ ॥ ಶ್ರೀಕರದೊಳು ದೇಶವೊಪ್ಪಿರ್ಪುದು ಧರಾತಳಕೆ
....ವಾಚಾಮಗೋಚರವದರ ವಿಸ್ತರಂ ಜಗಕ್ಕೆ॥
ಆದೊಡಂ ನಾನದಂ ಬಲ್ಲಂತೆ ಬಂಣಿಪೆಂ
ಸಾದರಂ ಕಡುನೇಹದಿಂದಿಂತು ಬಣ್ಣಿಪೆಂ॥
ಲೋಕಪಾವನನೆನಿಸಿ ಪರಿವ ಕಾವೇರಿಯಿಂ
ನಾಕಮಂ ನಗುವ ನಗರಂಗಳಿಂ ಪೂಜೆಯಿಂ॥

ಅಂತ್ಯ : ಸುರರು ಮುನಿವರರು ಖೇಚರರ ಪತಿಯೊಪ್ಪಿದಂ
ನರರ ಕಿಂಕರರ ಬೀಕರರ ಪರಿಯೊಪ್ಪಿದಂ
ಸುರಚಿರ ಸುಧಾಕರ ಕಳ ಜೂಟನೊಪ್ಪಿದಂ
ಅರರೆ ಹುಪೆಯುವಿರೂಪಾಕ್ಷನಿಂತೊಪ್ಪಿದಂ

ಕಂದ ಪದ್ಯ॥ ಕರುಮುಗ ಮಲುಹಣನಂ
ವಿರಹಾನಳವದ ಚಿತ್ತವಂ ಮಲುಹಣೆಯೊಳ
ನೆರೆಪೆ ನೆರೆಮೆರೆದ ಪಂಪಾ
ಪುರಪತಿ ನೀನೆಮಗೆ ಭಕ್ತಿಸುಖಸಂಪದವಂ ॥

ಮಲುಹಣ ಶರಣರ ಮಹಾತ್ಮೆ ಸಂಪೂರ್ಣ ಮಂಗಳ ಮಹಾಶ್ರೀ

ವಿಷಯ : ಇಳೆಯಾಂಡ ಗುಡಿಮಾರ, ಮೆರೆಮಿಂಡ, ನಂಬಿಯಣ್ಣ ಮೊದಲಾದ ಪುರಾತನರ ಚರಿತ್ರೆ.

ವಿಶೇಷ : ಗ್ರಂಥಾರಂಭಕ್ಕೆ ಮೊದಲು ಕ್ರಮಾಂಕವಿಲ್ಲದ ಪತ್ರದಲ್ಲಿ ವಿಷಯಸೂಚಿ ಇದೆ. ನೋಡಿ ಅಕ್ಷರ.

916

ಕೆ. ೫೦೪	**ಪುರಾತನರ ವಚನಗಳು (ಸಟೀಕು)**	ವಚನ
೧೨.೨"×೨.೨"	ವಿವಿಧವಚನಕಾರರು	ಸು. ೧೧೬೦
೧೨೯–೨೮೫ ಪತ್ರ	೧೩ ಪಂಕ್ತಿ	೬೦ ಅಕ್ಷರ

ಆದಿ : ಹುದು। ಮುಕ್ತಿಯ ಬಯಸಲು ಮುಕ್ತಿಯಹುದು ಅನಿಮಿತ್ತಂ ನಿಮಿತ್ತಂ ಚ। ವುಪಾಧಿ ನಿರೂಪಾಧಿಕಂ। ದಾಸೋಹಮಿತ್ತ ಕರ್ಮ್ಮಂ ಚ। ಯಥಾಕರ್ಮ್ಮ ಫಲಂ ಎಂಬುದನಱಿದು ಮಾಡಿ ಮಾಡಿ ಮಾಹೇಶ್ವರರಿಗೆ। ಆನಾಥರ ಮಹಂಕಾರಂ। ಮೋಹಾದ್ಭೀತಿ ಉಪಾಧಿ ಚ। ಕೀರ್ತಿಚ್ಚ ಷಡ್ಗುಣಂ ನಾಸ್ತಿ। ದಾಸೋಹಶ್ಚ ಸ್ವಯಂ ಶಿವಂ। ಎಂಬುದನಱಿದು ಮಾಡಿ ಮಾಡಿ ಮಾಹೇಶ್ವರರಿಗೆ ಕೆಡಬೇಡ ಕೆಡಬೇಡ

ಅಂತ್ಯ : ಪೃಥ್ವಿವ ಭಿಂನಾಕಾಶ ಭಿಂನವಾಗದಂತೆ ಮಹದಾಕಾಶವೇ ನಿಜದಾಕಾಶ ನಿರ್ದ್ಧಾರವಮಾಂಗೆ ಯಿದೆನ ಆತ್ಮನ ವರ್ಮ್ಮನೋಡಾ ಆದಿ ಅನಾದಿ........ ದಂದು ನಾದ ಬಿಂದು ಕಳೆ ಮೊಳೆದೋಱದಂದು ಯಿದು ವೊಂದೆಂದಱಿತು ವುಂಟಲ್ಲವೆಂಬ ಗೆಲ್ಲ ಸಾಲದ ಮಾತಿ ಮಾಲೆಯ ತೊಡಿಗೆಯಳಿದಂದು ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ ಆನೆಂಬುದು ನೀನೆಂಬುವೊಂದೆ ಕಾಣ ಮಲ್ಲಿಕಾರ್ಜುನಾ ॥ ೨೦೬ ॥ ಅಂತು ವಚನ ೩೧೦೭ ಕ್ಕಂ ಶ್ರೀ.

ವಿಷಯ : ವೀರಶೈವತತ್ತ್ವಪ್ರತಿಪಾದಕ ವಚನಗಳು ಮತ್ತು ಟೀಕು.

ವಿಶೇಷ : ಶಕಟರೇಫವಿದೆ. ಆದಿಯಲ್ಲಿ ಉರಿಲಿಂಗ ಪೆದ್ದಿಯ ವಚನವಿದೆ. ಅದನ್ನೆ ಇಲ್ಲಿ ಆದಿಯೆಂದು ಬರೆದಿದೆ. ೧೮೩ ೧೯೩ ೨೧೧ ಕ್ರಮಾಂಕದ ಗರಿಗಳು ಮುರಿದಿವೆ. ೨೪೦ ರಿಂದ ೨೪೪, ೨೫೭, ೨೫೮, ೨೬೨, ೨೬೩ ನೇ ಗರಿಗಳಿಲ್ಲ. ಅಸಮಗ್ರ ಪ್ರತಿ.

917

ಕೆ.ಎ. ೨೯೪	**ಪುರಾತನರ ವಚನಗಳು**	ವಚನ
೧೩.೩"×೮.೩"	ಕೋಲಶಾಂತಯ್ಯ ಇತ್ಯಾದಿ	೧೨ ನೇ ಶತಕ
೧-೧೩೪+೨೦ ಪತ್ರ	೩೦ ಪಂಕ್ತಿ	೨೮ ಅಕ್ಷರ

ಆದಿ : ಎಲ್ಲಾ ಪುರಾತರ ವಚನ ॥ ಪ್ರಥಮದಲ್ಲಿ ಕೋಲಶಾಂತಯ್ಯಗಳ ವಚನ– ಇಷ್ಟಪ್ರಾಣವ ಸಂಬಂದಿಸಬೇಕೆಂಬರು ಪ್ರಾಣ ಇಷ್ಟದಲ್ಲಿ ನಿಂದ ಮರಿತ್ತೆ

ಕಾಯದ ಸುಳುಹುಂಟೆ| ಇಷ್ಟದ ಕಳೆ ಪ್ರಾಣನಲ್ಲಿ ನಿಂದ ಮತ್ತೆ ಇಷ್ಟವ ಮುಟ್ಟಿ ಪೂಜಿಸುವ ಪರಿ ಯಿಂನೆಂತೊ| ಉಭಯದಘವಿದ್ದಲ್ಲಿ ಅರಿವೆಲ್ಲಿ ನಿಂದಿತು ಅಲ್ಲಿ ಶೂನ್ಯಕ್ಕೆ ಸುಳುಹುಂಟೆ ಯಿದು ಅವಿದ್ಯರ ಮತ ವಿದ್ಯರ ಮತವಲ್ಲ| ಪುಂಣ್ಯಾರುಣ್ಯದಹನ ಭೀಮೇಶ್ವರಲಿಂಗ ನಿರಂಗ ಸಂಗಾ ||೧||

ಅಂತ್ಯ : ಅಯ್ಯ ವಿಪ್ರರು ಮಾತಂಗಿಯ ಮಕ್ಕಳು ಯೆಂಬುವದಕ್ಕೆ ಇದೆ ದೃಷ್ಟ| ಮತ್ತೆ ವಿಚಾರಿಸಿ ಕೇಳಿದರೆ ಹೇಳುವೆನು| x x x x ಇದು ಕಾರಣ ಭುವನಾಧಿಪತಿ ಮಹಾಲಿಂಗ ಕಲ್ಲೇಶ್ವರನ ಶರಣರಿಗೆ. ಸರಿಯೆ ಜಗದ ಅನ್ಯ ಜಾತಿಗಳು ಉರಿಲಿಂಗ ಪಿದ್ದೈಗಳ ವಚನ ಸಮಾಪ್ತಮ್|| ಮಂಗಳಮಸ್ತು|| ಶ್ರೀ ||

ವಿಷಯ : ವೀರಶೈವ ತತ್ತ್ವಬೋಧೆ.

ವಿಶೇಷ: ಒಟ್ಟು ೧೫ ಜನ ವಚನಕಾರರ ವಚನಗಳಿವೆ. ಒಂದುಭಾಗದಲ್ಲಿ ಪ್ರಭುದೇವ ಬಸವಣ್ಣ ಮೊದಲಾದವರ ಸಂಪಾದನೆಯ ವಚನಗಳಿವೆ. ಕೊನೆಯಲ್ಲಿರುವ ಉರಿಲಿಂಗ ಪೆದ್ದಯ್ಯಗಳ ವಚನಗಳು ಮತ್ತೊಂದು ಭಾಗದಲ್ಲಿವೆ. ಈ ಎರಡು ಭಾಗಗಳ ಮಧ್ಯದಲ್ಲಿ ಮೂರು ಶುದ್ಧ ಪತ್ರಗಳಿವೆ.

918

ಕೆ. ೩೩೦/೨	**ಪುರುಷಸೂಕ್ತ ಟೀಕೆ**	ಟೀಕು
೮.೨"×೧.೪"	?	?
೧೩ ಪತ್ರ	೬ ಪಂಕ್ತಿ	೪೫ ಅಕ್ಷರ

ಆದಿ : ಋಗ್ವೇದದ ಪುರುಷ ಸೂಕ್ತದ ಟೀಕೂ ||
ಕರೇ ಶೂನ್ಯಂ ಮತೇ ಭಕ್ತೋ ಬ್ರಹ್ಮಾಂಡಾಂತರ್ಬಹಿರ್ಗತಃ |
ನಮಸ್ತೇ ಜಂಗಮಾಯ ಯಾಗಂಟಂ ಶರಭಾಯ ವೈ ||
ಅವತಾರಿಕೆ| ಸಹಸ್ರಶೀರ್ಷಾ ಎಂಬ ಮಂತ್ರಂ ಋಗ್ವೇದದೊಳು ಹದಿನಾಱು ಋತು| ಆರಿನೆಯ ಸೂಕ್ತಂ| ಓಂ ಅಸ್ಯ ಶ್ರೀ ಪುರುಷ ಸೂಕ್ತ ಮಂತ್ರಸ್ಯ x x x ಈ ಪುರುಷ ಸೂಕ್ತ ಮಂತ್ರಕೆ ನಾರಾಯಣಂ ಋಷಿಃ| ಕಡೆಯಣ ಛಂದಸ್ಸು

ಅಂತ್ಯ : ಯಃ ಆವ| ಬ್ರಾಹ್ಮಣಃ ಬ್ರಹ್ಮಜ್ಞಾನಿ| ಏವಂ ಇತುಂಟು| ವಿದ್ವಾನ್ ತಿಳಿದಪಂ| ತಸ್ಯ...........ಲ್ಲಿ| ದೇವಾಃ ಬ್ರಾಹ್ಮಾದಿಗಳು| ಅಸನ್ ಪ್ರಸನ್ನವಾದರ್| ಅಸನ್ ಎಂಬುರ ಅಡಾಗಮಂ ಲೋಪವಾಗಿ............

ವಿಷಯ : ಪುರುಷ ಸೂಕ್ತ ಮಂತ್ರವ್ಯಾಖ್ಯಾನ.

ವಿಶೇಷ : ಶಿಥಿಲಪ್ರತಿ. ಶಕಟರೇಫದ ಬಳಕೆ ಇದೆ. ಪತ್ರಗಳಿಗೆ ಕ್ರಮಾಂಕ ವಿಲ್ಲ. ಇದಕ್ಕೆ ಮೊದಲು ಭಟ್ಟಭಾಸ್ಕರರ ರುದ್ರಭಾಷ್ಯ (ಸಂ ೧–೪೦ ಪತ್ರ) ವೆಂಬ ಗ್ರಂಥವಿದೆ. ಅಂತ್ಯದ ೬ ಪತ್ರಗಳಲ್ಲಿ ಲಿಂಗಧಾರಣೋಪ ನಿಷತ್ ಮತ್ತು ವಜ್ರಸೂಚ್ಯುಪನಿಷತ್ ಈ ಎರಡೂ ಇವೆ.

919

ಕೆ. ೫೧ — **ಪುಷ್ಪದಂತ ಪುರಾಣ** — **ಚಂಪು**

೨೨·೧″ × ೨″ — ಗುಣವರ್ಮ — ಸು. ೧೨೩೫

೪೯ (ಖ–ಗ೩) ಪತ್ರ — ೯ ಪಂಕ್ತಿ — ೧೧೫ ಅಕ್ಷರ

ಆದಿ : ಸತ್ಯ ರಾದೇಯನುಂ ಘನ ಗಂಭೀರತೆಯಿನಾಗ್ರ್ಗಮಧಿಕಮಪ್ಪುದಱಿಂ ಗಂಭೀರ ನಿರಾಕರನುಂ ವಿರೋಧಿ ಸಾಧನ ಭಯಂಕರನಪ್ಪುದಱಿಂ ಕದನ ಕಂಠೀರವನುಂ ಅಪ್ರತಿಮ ಪ್ರಭಾವಾಭಿನುತನಪ್ಪುದಱಿಂ ಪ್ರಭುಕು ಲೈಕರೋದೋಮಣಿಯುಂ x x x x ನೆಗಳ್ವ ನಾಳ್ಪ್ರಭುನಭೋಮಣಿ ಶಾಂತಿವರ್ಮ್ಮನ ಯಶೋಲತೆಗಾಲಂಬನವಾಗಿ ಮನೋಹರವಾದ ಕಥಾ ವನಿತೆಗುದ್ಭವ ಸ್ಥಾನಮೆಂತೆಂದೊಡೆ—

ಅಂತ್ಯ : ನವರಸಮಂ ನಿಮಿಚ್ಚರ್ವ ಬೆಡಂಗನಮುಚ್ಚರ್ವ ದೋಷಮಂ ತಳ ಚ್ಚರ್ವ ಗುಣಮಂ ಕೆಳಚ್ಚರ್ವಮುದ್ದಿಂಪನೊಡಚ್ಚರ್ವ ಬಂದಮಂ ತೊಡ ಚ್ಚರ್ವ ಕಿವಿವೊಕ್ಕಲಚ್ಚರ್ವೆಳೆ ನೂಣ್ಪನೊಡಚ್ಚರ್ವ ಕಾವ್ಯಸತ್ಕಳಾ ಣ್ಣರ್ವ ಮೃಗಲಕ್ಷ್ಮ ಲಕ್ಷ್ಮಣವಚೋ ವದುವಂ ಬುದರೊಲ್ದು ವರ್ನ್ನಿಪಂ॥

ಗದ್ಯ ॥ ಯಿದು ಸಮಸ್ತ ಭುವನಜನ ಸಂಸ್ತುತ ಜಿನಾಗಮ ಕುಮು ...ದ್ವಿತಿ ಜಾಮ ಚಂದ್ರಾಯಮಾನ ಶ್ರೀಮದುಭಯ ಕವಿ ಕಮಲ ಗರ್ಭ್ಭ ಮುನಿ ಚಂದ್ರ ಪಂಡಿತದೇವ ಸುವ್ಯಕ್ತ ಸೂಕ್ತಿ ಚಂದ್ರಿಕಾಪಾನ ಪರಿಪುಷ್ಟಮಾನ ಸಮರಾಳ ಗುಣವರ್ಮ್ಮ ನಿರ್ಮ್ಮಿತಮಪ್ಪ ಪುಃಪದಂತ ಪುರಾಣದೊಳು ಪ ರಿ ನಿ ರ್ವಾ ಣ ಮಹಾಕಲ್ಯಾಣಾಭಿವರ್ಣ್ಣನಂ ಚತುರ್ದಶಾಶ್ವಾಸಂ ॥ ೧೪ ॥ ಶ್ರೀ.

ಶ್ರೀ ಮತತ್ಪುಷ್ಪದಂತ ಪುರಾಣವನು ಸಕವರ್ಷ ೧೫೫೮ ರಾಕ್ಷಸ ಸಂವತ್ಸರದ ಚೈತ್ರ ಶು ೩ ಬುಧವಾರದಂದುದ್ಧರಿಸಿ ಪಟ್ಟುದು ಮಂಗಳ ಮಹಾಶ್ರೀ ॥

ವಿಷಯ : ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಚರಿತ್ರೆ.

ವಿಶೇಷ : ಅಸಮಗ್ರ ಪ್ರತಿ. ಖ ದಿಂದ ಗಃ ವರೆಗೆ ಗರಿಗಳಿವೆ. ಎಂದರೆ ಗರಿಗಳಿಗೆ ಕನ್ನಡ ಅಕ್ಷರ ಮತ್ತು ಕಾಗುಣಿತವನ್ನೆ ಸಂಖ್ಯೆಯನ್ನಾಗಿ ಬಳಸಿದೆ. 'ಅ' ನಿಂದ 'ಖ' ವರೆಗೆ ಗರಿಗಳು ಲುಪ್ತವಾಗಿವೆ. ದ್ವಿತೀಯಾಶ್ವಾಸದ ಮಧ್ಯಭಾಗದವರೆಗೆ ಗ್ರಂಥವಿಲ್ಲ. ಶಕಟರೇಫವಿದೆ. ಗರಿಗಳ ಅಂಚುಗಳು ಮುರಿದಿವೆ. ಯ, ಲ ಅಕ್ಷರಾಂಕಿತ ಗರಿಗಳು ಮುರಿದಿವೆ. ಗರಿಯ ಒಂದೊಂದು ಕಡೆ ಹುಳು ತಿಂದಿದೆ.

920

ಕೆ.ಎ. ೧೪೧	**ಪುಷ್ಪದಂತ ಪುರಾಣ**	ಚಂಪು
೧೨.೭"×೮"	ಗುಣವರ್ಮ	ಸು. ೧೨೩೫
೧-೬೨ ಪತ್ರ	೩೨ ಪಂಕ್ತಿ	೩೫ ಅಕ್ಷರ

ಆದಿ : ಪುಷ್ಪದಂತ ಪುರಾಣ ಚಂಪು ಗ್ರಂಥ ಗುಣವರ್ಮ ಕವಿ ವಿರಚಿತ । ಶ್ರೀ ಸರ್ವಸಿದ್ಧಿ ಪ್ರದಾಯಕ ವಿನಾಯಕಾಯ ನಮಃ ಶ್ರೀ ಶಾರದಾಂಬಾಯ ನಮಃ ಶುಭಮಸ್ತು.

ಶ್ರೀಪೌಲೋಮಿಪಭೂಭ್ರುತ್ಸಮುದಯ ವಿನುತಂಗಳ್ತಮೋಸ್ತೋಮಚ್ಛೈತ್ರಾ
ದೇಪಂಗಳ್ದರ್ಶಿತಾಶಾಂಬರ ಸಕಲ ಪದಾರ್ತ್ಥ ಕ್ರಮಂಗಳ್ಸದಾ ಲೋ
ಕಾಪದ್ವಿಚ್ಛೇದಕಂಗಳ್ಮಹಾದಮೃತ ನಿಧಿ ಸ್ಫೂರ್ತಿಗಳ್ಪುಷ್ಪದಂತ
ಶ್ರೀ ಪಾದಂಗಳ್ಸಮುತ್ಪಾದಿಸುಗೆಮಗೆ ಹೃದಿಂದೀವರಾನಂದದೊಳ್ಪಂ ॥

x x x x

ವೃತ್ತ ॥ ನೋಡಿರೆ ಪೂರ್ವದೊಳ್ಗಣಧರಾದಿ ಮಹಾ ಮುನಿ ಸತ್ಕವೀಶ್ವರ
ರ್ಮಾಡಿದ ಪುಷ್ಪದಂತ ಜಿನನಾಥ ಪುರಾಣಮನಿಂದು ಕಂನಡಂತಿ
ಮಾಡುವೆನೆಂದು ಪೂಣ್ದೆನಿದು ಶಕ್ತಿಯೊ ಭಕ್ತಿಯೊ ವೈನತೇಯನಿ
ರ್ದಾಡಿದ ಗಾಳಿವಟ್ಟೆಗೆ ಮನಂಬಿಡೆ ದೀಕಿಂಡುವಂತೆ ಟಿಟ್ಟಿಭಂ ॥

x x x x

॥ ಅದೆಂತೆನೆ ॥ ಭಾವಿಸಿ ಚಿತ್ರಮೆನಲ್ಕಿಬು
ದಾವಳಿ ಗುಣಮುರ್ಮ ಬುದನನತಿಕೃಪೆಯಿಂ ಕೂ
ರ್ತೋವಿ ಮುನಿ ಚಂದ್ರ ಪಂಡಿತ
ದೇವಗುರ್ರುವಾಗೆ ಕವಿತೆ ಬಂದುದು ಚಿತ್ರಂ ॥

ಅಂತ್ಯ : ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳಿ ಚೆಲ್ವು ಮಾತ್ರೆಯೊಳ್
ನಿಂದ ಬೆಡಂಗು ಬಳ್ಳಿಯೊಡಂಬಡುತಿರ್ಪ ನಯಂ ವಿಸರ್ಗದೊ
ಳ್ಪೊಂದಿರಲಕ್ಕರಕ್ಕೆ ಬರೆವಂ ಚತುರರ್ಪರಿವರ್ನಿಸಲ್ ನವಿ
ಲ್ಗೊಂದದ ಮಾದಿರಾಜ ವಿಬುಧಂ ವಿಬುಧೋತ್ಥಿತ ನವ್ಯಕಾವ್ಯಮಂ ॥

ಗದ್ಯ ॥ ಯಿದು ಸಮಸ್ತ ಭುವನಜನ ಸಂಸ್ತುತ ಜಿನಾಗಮ ಕುಮುದ್ವತೀಚಾರು ಚಂದ್ರಾಯಮಾನ ಮಾನ ಮಾನಿತ ಶ್ರೀಮಧುಭಯಕವಿ ಕಮಳ ಗರ್ಭ ಮುನಿ ಪಂಡಿತದೇವ ಸುವ್ಯಕ್ತ ಸೂಕ್ತಿ ಚಂದ್ರಿಕಾಪಾನ ಪರಿಪುಷ್ಪಮಾನ ಮಾನಸಮರಾಳಂ ಗುಣವರ್ಮ ನಿರ್ಮಿತಮಪ್ಪ ಪುಷ್ಪದಂತ ಪುರಾಣ ದೊಳು ಪರಿನಿರ್ವಾಣ ಮಹಾಕಲ್ಯಾಣ ವರ್ನನಂ ಚತುರ್ದಶಾಶ್ವಾಸಂ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ : ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಚರಿತ್ರೆ.

ವಿಶೇಷ : ಮೋಡಿ ಅಕ್ಷರ.

921

ಕೆ. ೪೬೮/೬	**ಪುಷ್ಪಮಾಲೆ**	ಹಾಡು
೧೫.೩"×೧"	?	?
೧೫–೧೭ ಪತ್ರ	೪ ಪಂಕ್ತಿ	[illegible] ಅಕ್ಷರ

ಆದಿ : ಶ್ರೀ ಗುರುಗ್ನಾನಲಿಂಗಾಯೆಂನ್ನಮಃ ॥ ಪುಷ್ಪಮಾಲೆ ॥ ಅನವರತ ಬಿಡದೆಂ
ನ್ನ। ತ್ತನು ಮನಂಗಳಿಗಿತ್ತೂ । ಮನಸಿಜಾಂತ್ತಕನ ಪೂಜಿಸುತಿರ್ಪೆ ॥ಪಲ್ಲ॥
ಅಸಮ ಶಿವಪಂಚಾಕ್ಷರಿಯ ಜಪಿಸುತಾ । ಬಸವ ಮೊದಲಾದ ಪ್ರಮತರ
ನೆನದು ಪಾಡುತಲಿ ವೃಷಭವಾಹನನ ಪೂಜಿಸುತಿರ್ಪೆನೂ ॥ ೧ ॥

ಅಂತ್ಯ : ಯಿಂತಪ್ಪ ಸಿವಲಿಂಗ ಪೂಜೆಯನು ಮಾಳ್ಪ ಪುಂಣ್ಯವೆನ
ಗೆಂತಕ್ಕೆ ಯೀ ಜಲ್ಮದೊಳಗೆ ನಾನೂ ॥
ಸಂತತೆಂನಯ ಗುರು ಪ್ರಿಯ್ಯ
ಶಂಖರನಿಂಮ್ಮ।
ಆನಂತ ಪರಿಯಲಿ ಪೂಜಿಸುತಿರ್ಪ್ಪೆನೂ ॥ ೧೭ ॥
ಪುಷ್ಪಮಾಲೆ ಸಂಪೂರ್ನ ಮಂಗಳ ಮಹಾ ॥ ಶ್ರೀ ಶ್ರೀ ಶ್ರೀ ॥

ವಿಷಯ : ಶಿವಲಿಂಗ ಪೂಜೆಯ ಹಾಡು

ವಿಶೇಷ : ಹಾಡು ಸೊಗಸಾಗಿದೆ. 'ಗುರುಪ್ರಿಯ ಶಂಕರಾಂಕಿತ' ವಿದ್ದಂತೆ ಇದೆ. ಸಮಗ್ರ. ಈ ಕಟ್ಟಿನಲ್ಲಿ ಶಂಕರದೇವರ ಕಂದ, ಅಕೌಗಳ ಹಾಡು ಇತ್ಯಾದಿ ಗ್ರಂಥಗಳಿವೆ.

922

ಕೆ.ಬಿ. ೩೫೧/೭	**ಪುಷ್ಪಾಂಜಲಿ ಸ್ತೋತ್ರ ಇತ್ಯಾದಿ**	ಷಟ್ಪದಿ
೮″ × ೬.೨″	?	?
೧೩೭–೧೪೧ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ದೇವನಪ್ಪಣೆವಿಡಿದು ಮರ್ತ್ಯಲೋಕಕ್ಕಿಳಿದು
ಜೀವಧರ್ಮವ ಕಳೆದು ಗುರು ಕರುಣಮಂ ಪಡೆದು
ಗಾವಿಲ ದುರಾಚಾರಮಂ ತೊರೆದು ವೀರಶೈವಾಚಾರ ಮಾರ್ಗವಿಡಿದು
ಭಾವಜ ಮದಾಪಹರನಂಘ್ರಿಯಂ ಭಜಿಪ ಸ
ದ್ಭಾವಿಗಳು ಸಹಿತುಭಯಹಸ್ತಮಂ ಜೋಡಿಸುತ
ತೀವಿದುತ್ಸಾಹದಿಂ ಭವಹರಗೆ ಗುರುವರೆಗೆ ಸ್ವರ್ಣಪುಷ್ಪವನೀವೆನು ‖ ೧ ‖

ಅಂತ್ಯ : ಬಯಲ ರೂಪಾಗಿರ್ಪ ಲಿಂಗವ
ಬಯಲ ಹಸ್ತದೊಳಿರಿಸಿ ಸಂತತ
ಬಯಲ ಪೂಜೆಯ ಮಾಡಿ ಮನ ಮುಳುಗಾಡಿ ಮುದದಿಂದ
ಬಯಲ ದ್ರವ್ಯನರ್ಪಿಸುತ ..... ‖

ವಿಷಯ : ಪುಷ್ಪಾಂಜಲಿ ಮತ್ತು ನಿರಾಳ ಗುರು ಸ್ತೋತ್ರಗಳು.

ವಿಶೇಷ : ನಿರಾಳ ಗುರು ಸ್ತೋತ್ರವು ಭಾಮಿನೀ ಷಟ್ಪದಿಯಲ್ಲಿದ್ದು ಅಸಮಗ್ರವಾಗಿದೆ. ಈ ಗ್ರಂಥದೊಡನೆ ಗುಂಡು ಬ್ರಹ್ಮಯ್ಯಗಳ ಸುವ್ವಿ, ಜೋಗುಳ ಪದ, ಬಸವಾಷ್ಟಕ, ಬಸವೇಶ್ವರ ರಗಳೆ, ಗಣಾಷ್ಟಕ, ಬಸವ ಪಾವಡ, ನುಲಿಯ ಚಂದಯ್ಯಗಳ ವಚನ, ಹಾಡುಗಳು, ಪುರಾತನರ ದೇವಿಯರ ತ್ರಿಪದಿ ಇತ್ಯಾದಿ ಗ್ರಂಥಗಳಿವೆ. ಗ್ರಂಥದ ಕೊನೆಯಲ್ಲಿ ೧೩ ಪತ್ರಗಳು ವಿವಿಧ ವಿಷಯುಗಳನ್ನೊಳಗೊಂಡಿವೆ.

923

ಕೆ. ಎ. ೧೪೫	**ಪೂಜ್ಯಪಾದ ಚರಿತ್ರೆ**	ಸಾಂಗತ್ಯ
೧೨.೯″×೮.೨″	ಪದ್ಮರಾಜಕವಿ	?
೧–೪೬ ಪತ್ರ	೩೨ ಪಂಕ್ತಿ	೩೨ ಅಕ್ಷರ

ಆದಿ · ಪೂಜ್ಯಪಾದ ಚರಿತ್ರೆ ಸಾಂಗತ್ಯ। ಜೈನ ಗ್ರಂಥಾ
ಷಟ್ಪದ॥ ಶ್ರೀ ಸುರೋರುಗ ಮರ್‍ತ್ಯಮಕುಟಾ
ವಾಸ ಮಣಿಗಣರತ್ನಕೀಲಿತ
ಭಾಸುರೋಜ್ವಲ ಕಿರಣ ಜೀವವ ದೌತಪದಯುಗಳಾ
ಭಾಸುರಾರ್ಚಿತ ಮೋಕ್ಷಲಕ್ಷ್ಮಿಗ
ಧೀಶ ವಿಜಯ ಜಿನೇಶ ಪಾಲಿಸು
ನಿರಘ ನಿತ್ಯಾನಂದ ಸಂಪದವಾ ॥
ಅತಿಮಮತೆಯೊಳೆತಿಪತಿಯ ಕೃತಿಯ ಪೇಳ್ವೆ
ಮತಿವಂತರಿರದೆ ಲಾಲಿಪುದೂ ॥ ಪಲ್ಲ ॥
ತ್ರಿಸುಮನಸ ಮಾನುಷಭೋಗೇಶರ
ಭಾಸುರ ಮಕುಟಪಂಕ್ತಿಯೊಳೂ
ಲೇಸಾಗಿ ಮೆರೆವ ಶ್ರೀ ವಿಜಯಜಿನರ ಪಾದ
ಕೇಸರಿಗಳಿಗೆರಗುವೆನೂ ॥

ಅಂತ್ಯ: ಮಂಗಲ ಮಹಿಮ ಮಾಂಗಲ್ಯ ವರ್ದ್ಧನ ಭು
ಜಂಗ ಭೂಷಣ ಮರಕಥದಾ
ಅಂಗನೆ ಮತಿದೋರಿ ರಕ್ಷಿಪುದೆಂನನು
ಸ್ರುಂಗಾರಯುತ ಪಾರ್ಶ್ವಜಿನಪ ॥

X X X X

ಕರುಣಾಲಂಕಾರ ಚೇತ ವರಮುನಿಪದಪಂಕೇಜ ಸೇವಾನು ಭ್ರುಗ
ಸ್ಮರ ಬಾಣಧ್ವಂಸಿಯಪ್ಪ ಜಿನಪತಿನುತಿಯಂ ತೆಂನ ವಾಖ್ಯೋಪಹಾರಂ
ಸ್ಪುರಿಸಲ್ ಶ್ರೀವತ್ಸಗೋತ್ರ ದ್ವಿಜನತಿಮುದದಿಂ ಪೇಳ್ದೆ ಸೌಖ್ಯಂಗಳಂ ಮಾ
ಳ್ಕಿರದಿ ಭವ್ಯರ್ಗೆ ಸವುಖ್ಯಮಂ ಕನಕಗಿರಿ ವರಾಧೀಶ್ವರಂ ಪಾರ್ಶ್ವನಾಥಾ ॥
ಅಂತು ಸಂಧಿ ೧೫ಕ್ಕಾಂ ಪದನು ೧೯೩೭ ಸಾವಿರದ ವಂಬೈನೂರಮುವತ್ತೊಂಬ
ತ್ತಕ್ಕಂ ಮಂಗಳ ಜಯಮಂಗಳ ಶುಭಮಂಗಳ ನಿತ್ಯಮಂಗಳ ಮಹಾಶ್ರೀ

ವಿಷಯ ; ಪೂಜ್ಯಪಾದರ ಚರಿತ್ರೆ.

ವಿಶೇಷ : ಮೋಡಿ ಅಕ್ಷರ

924

ಕೆ. ೨೮೦	ಪೂಜ್ಯಪಾದ ಚರಿತ್ರೆ	ಸಾಂಗತ್ಯ
೧೮"×೧.೪"	?	?
೧—೧೦೩ ಪತ್ರ	೬ ಪಂಕ್ತಿ	೭೪ ಅಕ್ಷರ

ಆದಿ : ಮದುವೆ ಸಂಧಿ—

ಕಟ್ಟಿ ಮೌನದ ಕಂಕಣವ ಬಳಿ
ಕಿಟ್ಟ್ವ ನಿರ್ಜ್ಜರೆ ಸಂವರೆಯು ನೆಱ
ಮೆಟ್ಟಿ ರಾಗದ್ವೇಷಗಳ ಸುಧ್ಯಾನ ತಿಲಕವನೂ
ಯಿಟ್ಟ್ವ ಧೈರ್ಯದಿ ನಡೆದು ನಿಲೆ ಮುಂ
ದಿಟ್ಟ ಕರ್ಮ್ಮದ ತೆರೆಯು ಜಾರಲು
ಮುಟ್ಟ ಮುಕ್ತ್ಯಾಂಗನೆಯು ಕೂಡಿದ ವಿಜಯಜಿನ ಸಲಹೂ ||

ಪ್ಲ || ದಿನವ ಸೋದಿಸಿ ಕಮಲಿನಿಗೆ ಮದುವೆ ಮಾಡೆ
ಜನಿಸಿದ ನಾಗಾರ್ಜ್ಜುನನೂ ||

ಪದಾ || ಪಡೆದು ನೀನ್ಯೆದು ಕಲ್ಯಾಣವ ಧ್ಯಾನದಿ
ಕೊಡಹಿ ದುರಿತವ ಮುಕ್ತಿಯೊಳೂ
ಕಡುಸುಖವಡೆದೆನೆ ಸುಮತಿಯ ಕೊಡಿಸೆ
ನ್ನೊಡೆಯ ಶ್ರೀಪಾರ್ಶ್ವತೀರ್ತ್ಥೇಶಾ || ೧ ||

ಅಂತ್ಯ : ಕಂದಾ || ಕೆನ್ನೆಯೊಳಗದಿರೆ ನಱೆಗಳು
ಕನ್ನಡಿಯಂ ನೋಡಿ ಕಂಡು ಮಂತ್ರಿಲಲಾಮಂ
ಬೆನ್ನೊಡಬಿದ್ದಿದೆ ದೇಹದ
ಬಿಂನ್ನಾಣದ ಕೌತುಕಕ್ಕೆ ನಾಣ್ಚಿದನಾಗಳ್ ||

ವ || ಬಳಿಕ ವೈರಾಗ್ಯಸ್ತ್ರೀಗೆ ವಲ್ಲಭನಾ (ಇಲ್ಲಿಗೆ ೯೯ ನೇ ಗರಿ ಮುಗಿದಿದೆ.)
ಮುಹೂರ್ತದೊಳು ದಿಗ್ವಿಜಯಪ್ರಯಾಣ ಬೇರೀನೀನಾದ ಪರಿಪೂರಿತಾ
ಖಿಲದಿಶಾಮುಖಂ x x x x ಳನೆ ದಿನದುಳಿಯದಿ ವೇದಿ ನಿರ್ವರ್ತ್ಥ |
ಹೇಳಲೇನತಿ ರಂಮ್ಯಾವಾಯ್ತೂ
ಕೇಳಿ ರಾತ್ರಿಯೊಳು ವಾಸ್ತೂ ಬಲಿಗ್ರಹಾ ಯಜ್ಞೆ
ಆಳಾಪ ಲಘುಶಾಂತಿಯಂಥೂ || ೧೬ ||
ಆರನೆ ದಿನ ಪಗಲೊಳು ಧ್ವರರೋಹಣ
ಭೇರೀತಾಡನ ರಾತ್ರೆಯೊಳು

ವಿಷಯ : ಪೂಜ್ಯಪಾದರ ಚರಿತ್ರೆ.

ವಿಶೇಷ : ಅಸಮಗ್ರ. ಶಕಟರೇಫದ ಬಳಕೆ ಇದೆ. ಹುಳು ತಿಂದು ಗರಿಗಳಲ್ಲಿ ರಂಧ್ರ, ಬಿದ್ದಿದೆ.

925

ಕೆ ಎ. ೨೧೬ ಪೂಜ್ಯಪಾದ ಚರಿತ್ರೆ ಸಾಂಗತ್ಯ

೧೨.೫" × ೭.೭" ? ?

೧–೨೧೪ ಪುಟ ೨೦ ಪಂಕ್ತಿ ೨೩ ಅಕ್ಷರ

ಆದಿ : ಶ್ರೀ ಪೂಜ್ಯಪಾದರ ಚರಿತ್ರೆ, ವಿವಾಹ ಸಂಧಿ ||
ಕಟ್ಟಿ ಮೌನದ ಕಂಕಣವ ಬಳಿ
ಕೆಟ್ಟು ನಿರ್ಜ್ಜರೆ ಸಂವರೆಯ ನೆರೆ
ಮೆಟ್ಟಿ ರಾಗದ್ವೇಷಗಳ ಸುಧ್ಯಾನ ತಿಲುಕವನು
ಯಿಟ್ಟು ಧೈರ್ಯದಿ ನಡೆದು ನಿಲೆ ಮುಂ
ದಿಟ್ಟ ಕರ್ಮ್ಮದ ತೆರೆಯು ಜಾರಲು
ಮುಟ್ಟು ಮುಕ್ತ್ಯಾಂಗನೆಯ ಕೂಡಿದ ವಿಜಯ ಜಿನ ಸಲಹು ||

ಪ್ಲ || ದಿನವ ಸೋದಿಸಿ ಕಮಲಿನಿಗೆ ಮದುವೆ ಮಾಡೆ
ಜನಿಸಿದ ನಾಗಾರ್ಜುನನೂ |

ಪದಾ || ಪಡದು ನೀನ್ಯೆದು ಕಲ್ಯಾಣವ ಧ್ಯಾನದಿ
ಕೊಡಹಿ ದುರಿತವ ಮುಕ್ತಿಯೊಳೂ ||
ಕಡು ಸುಖವಡೆದನೆ ಸುಮತಿಯ ಕೊಡಿಸೆ
ನ್ನೊಡೆಯ ಶ್ರೀಪಾರ್ಶ್ವತೀರ್ಥೇಶಾ || ೧ ||

ಅಂತ್ಯ : ಯೇಳನೇಯ ದಿನದುದಯಾದಿವೇದಿ ನೀರ್ಪ್ರತಿಷ್ಠೆ
ಹೇಳಲೇನತಿರಮ್ಯವಾಯ್ತೂ ||
ಕೇಳಿ ರಾತ್ರೆಯೊಳು ವಾಸ್ತುಬಲಿ ಗೃಹಾಯಜ್ಞೆ
ಆಳಾಪ ಲಘು ಶಾಂತಿಯಂದೂ || ೧೬ ||

ಆರನೇ ದನ ಪಗಲೊಳು ಧ್ವಜಾರೋಹಣ
ಭೇರಿ ತಾಡನ ರಾತ್ರಿಯೊಳೂ || .... ||
ಮಂಗಳಂ ಶ್ರೀ ಸಮಾಪ್ತ8 ಶ್ರೀ
ಅರಮನೆ ಸೂರಿಪಂಡಿತರವರ ಮನೆ ಬುಕ್ಕಿನಲ್ಲಿ
ಜಿ. ಶ್ರೀನಿವಾಸರಾಯನಿಂದ ಕಾಪಿ ಮಾಡಲ್ಪಟ್ಟಿತೂ 8–9–910

ವಿಷಯ : ಶ್ರೀ ಪೂಜ್ಯಪಾದರ ಕಥೆ.

ವಿಶೇಷ : ವಿವಾಹ ಸಂಧಿಯಿಂದ ಗ್ರಂಥ ಪ್ರಾರಂಭವಾಗಿದೆ.

926

ಕೆ.ಎ. ೩೨೬	ಪೂರ್ವರಾಮ ಚರಿತಂ	ನಾಟಕ
೧೩.೩"×೮"	ಹನುಮರ್‍ಾ–ವೇಂಕಟರಾಯ	೨೦ ನೆಯ ಶತಕ
೧–೮೬ ಪತ್ರ	೩೩ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ॥ ವೇಂಕಟರಾಯ ಕವಿಕೃತಂ ಪೂರ್ವರಾಮ ಚರಿತಂ (ನಾಟಕಂ)
(ಪ್ರಥಮಾಂಕಂ)
(ನಾಂದ್ಯಂತದೊಳ್ ಸೂತ್ರಧಾರಂ ಪ್ರವೇಶಿಸಿ ಮುಕುಳಿತಾಂಜಲಿಪುಟಂ)
ಸೂತ್ರಧಾರಂ–ವೃ॥
ಶ್ರೀಮತ್ಪೃಥ್ವೀಕುಮಾರೀ ಕುಚಯುಗ ಮಕರೀಪತ್ರ ಕಸ್ತೂರಿಕಾಶ್ರೀ
ಸೌರಭ್ಯಸ್ಫಾರ ತಾರಾತರಳ ವಿಮಳ ಮುಕ್ತಾವಳೀ ಮಂಜುವಕ್ಷಂ
ದೈತ್ಯವ್ರಾತಾಭಿಘಾತ ಪ್ರಕಟಿತ ವಿಲಸಚ್ಚಾಪ ವಿದ್ಯಾವಿಲಾಸಂ
ರಾಮಂ ಸೀತಾವರಂ ಪಾಲಿಸುಗೆ ದಶಶಿರ ಪ್ರಾಣಪಾಶಂ ರಮೇಶಂ ॥ ೧ ॥

x x x x

ನಟ–(ಸಾನುಸ್ಮರಣಂ) ಅಪ್ಪುದಿರ್ಪುದೀಗಳರಿದೆಂ
ಕಂ ॥ ವಿಬುಧಂ ಭಾರದ್ವಾಜ
ಪ್ರಬುದ್ಧಗೋತ್ರಂ ಹನೂಮದಾತ್ಮಜನೊವಜಂ
ಘನಶಾತ್ರಾದ ಶ್ರೀವೈಷ್ಣವ
ಕುಲಜಂ ವೇಂಕಟಾರ್ಯನದನೊಲ್ದೊರೆದಂ ॥ ೧೦ ॥

ಸೂತ್ರಧಾರಂ–ನಿಕ್ಕುವಂ ಆ ಕವಿಯಭಿಮತವಿಂತು
ಕಂ ॥ ಬಿಗುಪಾಂತಿರೆ ಪದಬಂಧಂ
ಬಗೆಗೊಪ್ಪಿರೆ ಶಯ್ಯೆ ಕೇಶವ ವ್ಯಾಕರಣ
ಕ್ಕಗಲದೆ ನೆಗಳ್ದೊಡೆ ಕೃತಿಯದು
ಬಗೆಗೊಳ್ಗುಂ ಪರಸಮೇಕೆ ಪೇಳದು ವಿರಸಂ ॥ ೧೧ ॥
ಎಂದು.

ನಟ–(ಸಾಶ್ಚರ್ಯಂ) ಆರ್ಯ! ಏನಿದು. ಪೂರ್ವದಿನುಂ ಪಿರಿಯರೊಪ್ಪುಗೆಯಿ
ನೊಪ್ಪುವೀ ಪ್ರಾಸಮಂ ಕಳ್ಳನಿವನೆಂತಳಿಪುವಂ
ಸೂತ್ರಧಾರಂ–ಅದರ್ಕಿವನಿಂತೊರೆವಂ
ಕಂ ॥ ಪ್ರತಿಪಾದದೊಳೆರಡನೆಯ
ಕ್ಕರಮಲ್ತು ಪರಸಮದು ಮೃದುಪದ ಸಂಗತಿಯಿಂ

ನೆರೆವುದು ವರ್ಣಾವೃತ್ತಿಯಿ
ನೊದವುಗುಮೆಲ್ಲೆಡೆಯೊಳುಚಿತಪದ ಪದ್ಧತಿಯಿಂ ॥ ೧೨ ॥

ಅಂತ್ಯ : ಆದೊಡಮಿದಕ್ಕೆ ಭರತವಾಕ್ಯಂ

ವೃ ॥ ಧರೆಯಿರ್ಪನ್ನೆವರಂ ಶುಭಂ ನೆಗಳ್ಗೆ ದಲ್ ಶ್ರೀವೈಷ್ಣವರ್ಕಳ್ಗೆ ಮೇ
ದಿನಿಯುಂ ಕೃಷ್ಣಮಹೀಂದ್ರನಾಳ್ಗೆ ಭರತಕ್ಷ್ಮಾಶಕ್ತಿ ಪೆಂಪಕ್ಕೆ ಸ
ತ್ಕವಿಗಳ್ ಶ್ರೀಯುತರಿರ್ಕೆ ಪೊಯ್ಗೆ ಮಳೆ ಲೋಕಕ್ಕಕ್ಕೆ ಸನ್ಮಂಗಳಂ
ಚಿರಮಿರ್ಕೀ ಕವಿರಾಜನಾಸ್ಥೆ ವಿಪುಲಂ ಶ್ರೀರಾಮನೊಳ್ ನಿಶ್ಚಲಂ ॥ ೭೨ ॥
(ಎಂದೆಲ್ಲರುಂ ಪೋಪರ್) ಸಪ್ತಮಾಂಕಮಿದು
ಪೂರ್ವರಾಮ ಚರಿತಂ ಸಂಪೂರ್ಣಂ.

ವಿಷಯ : ಸೀತಾಪರಿಣಯ.

ವಿಶೇಷ: ಆರಾ, ಪೂನಾ ಭಂಡಾರ್ಕರ್ ಓರಿಯಂಟಲ್ ಇನ್ಸ್‌ಟಿಟ್ಯೂಟ್, ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿ, ಮೈಸೂರ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ–ಈ ನಾಲ್ಕು ಸಂಸ್ಥೆಗಳಲ್ಲೂ ಈ ಕವಿ ರಚಿಸಿರುವ ಹನ್ನೆರಡು ಕೃತಿಗಳ ಒಂದೊಂದು ಪ್ರತಿ ಇರುವುದೆಂದು ಗ್ರಂಥಾಂತ್ಯದಲ್ಲಿ ಬರೆದಿದೆ. ಪ್ರಕೃತ ಗ್ರಂಥವನ್ನು ಸರ್ವಧಾರಿ ಸಂವತ್ಸರ ದಲ್ಲಿ ಬರೆದಿದೆ. ಚಂದ್ರಹಾಸಾಭ್ಯುದಯವೆಂಬ ಚಂಪೂ ಪ್ರಬಂಧವನ್ನು ರಚಿಸಿದ ಬಳಿಕ ರಾಮಭದ್ರಕವಿಯು ಜಾನಕೀಪರಿಣಯವೆಂಬ ನಾಟಕವನ್ನು ತಾನು ಹಳಗನ್ನಡದಲ್ಲಿ ಪರಿವರ್ತಿಸಿದೆನೆಂದು ಆದಿಯ ಮುನ್ನುಡಿಯಲ್ಲಿ ತಿಳಿಸಿರುತ್ತಾನೆ. ಈತನ ಊರು ಬೆಳ್ಳಾವೆ. ಮುನ್ನುಡಿಯಾದ ಮೇಲೆ ಒಂದು ಪತ್ರದಲ್ಲಿ ಈ ನಾಟಕದ ಪಾತ್ರಗಳ ವಿವರವಿದೆ.

927

ಕೆ.ಬಿ. ೧೪೩	**ಪ್ರಜ್ಞಾವತೀ ವಿಜಯ**	ನಾಟಕ
೭.೫" × ೬.೫"	ಸುಬ್ರಾಯರು	೨೦ ನೆಯ ಶತಕ
೧–೮೩ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಶೃಂಗಾರಪುರದ ಬೀದಿ | ೧ ನೇ ಸ್ಥಾನ
ಪ್ರಜ್ಞಾವತೀವಿಜಯ ನಾಟಕ
(ಅಶೋಕ, ಸುಬಾಹು, ಸಿಂಹಕೇತುಗಳ ಪ್ರವೇಶ)

ಅಶೋಕ–ನಿಜವಾಗಿಯೂ ನನಗಿಷ್ಟು ವ್ಯಸನ ಉಂಟಾಗಿರಲು ಕಾರಣವೇನೋ ತಿಳಿಯದು. ಬಹಳವಾಗಿ ಕರೆಕರೆಯನ್ನು ಹುಟ್ಟಿಸಿರುವದು. ನಿನಗೂ ಕಿಂಕೃತಿಯುಂಟಾಗಿರುವದೆಂದು ಹೇಳುತ್ತೀಯೆ.

ಕಂ ॥ ಕೊರಗೆನಗೇಕೊದವಿಹುದೇ
ತರಿನುದ್ಭವಿಸಿತ್ತಿದಾದುದಾವಾವುದರಿಂ
ನಿರುಕಿಸಿದೆನೆಂತಿದಂ ದು
ಸ್ತರಮಾಗಿಹುದಿದರಿನೆನ್ನ ನಾನಾರಿವುದುಮುಂ ॥

ಸುಬಾಹು ॥ ವೃ ॥ ಬಳಿಸಂದೈತರೆ ಭಕ್ತಿಯಿಂ ಪರಿಜನಂ ಬಪ್ಪಂತಿರಲ್ಪೋತಗ
ಳ್ತಳೆದುದ್ಯಧ್ವಜಮುಂ ಯಶಂಬೊಲೆಯಲ್ಬ್ರೀಮಂತ ಸಂಯೋಗಿ ಸಂ
ಕುಲಕಂ ಪೆರ್ಚಿದನಾಣನಿತ್ತುದಧಿಯೊಳ್ಕಲ್ಲೋಲ ಸಂಘರ್ಷದಿಂ
ದಲೆಯುತ್ತಿಪ್ಪ ಪಡುಂಗಿನೊಂದಿಗಿಹುದೈ ನಿನ್ನಾತ್ಮಮುಂ ಚಿಂತೆಯಿಂ ॥

ಅಂತ್ಯ : ಸುಪಾರ್ಶ್ವ-ಇನ್ನು ನಾನು ಬದುಕಿರುವವರೆಗೂ ಈ ಉಂಗುರವನ್ನು ಕಳೆದು ಕೊಳ್ಳುವದಿಲ್ಲ.

ಬಾಲ—ಕಂ ॥ ಮಹಿತೋತ್ಸಹವಾಯ್ತಿಂದೆಲೆ
ಮಹಿಳಾಮಣಿ ನಿನ್ನ ಸಾಸಮುಂ ನೆರೆ ಪೊಗಳ
ಲ್ಕಹಿಪತಿಗುಮರಿದು ನಿಜದಿಂ
ಮಹಿಯೊಳ್ ಸ್ತ್ರೀಕುಲದೆ ನೀನೆಯೇ ಧನ್ಯಾತ್ಮಳ್॥
ಪಂಚಮಾಕಂ ಸಂಪೂರ್ಣಂ.

ವಿಷಯ : ಕುಶಲಪುರದ ಸುಂದರಾಂಗಿಯಾದ ಪ್ರಜ್ಞಾವತಿಯ ಕಥೆ.

ವಿಶೇಷ : ಅಕ್ಷರಗಳು ವಿರಳವಾಗಿಯೂ ಸ್ಫುಟವಾಗಿಯೂ ಇವೆ. ಈ ನಾಟಕ ಇಂಗ್ಲೀಷಿನಲ್ಲಿರುವ ಮರ್ಚೆಂಟ್ ಆಫ್ ವೆನಿಸ್ ಎಂಬ ನಾಟಕದ ಕನ್ನಡ ಅನುವಾದ.

928

ಕೆ.ಬಿ. ೮೩	**ಪ್ರಜ್ಞಾಸೂತ್ರ ಪ್ರಸನ್ನ ಕೃಷ್ಣ ವಿಲಾಸಾಭಿಜ್ಞಾನ**	ಯಕ್ಷಗಾನ
೭.೫″ × ೫.೯″	ತಾಳೂರು ವೆಂಕಟರಮಣ	೧೯ನೇ ಶತಕ
೧–೧೪೦+೧–೧೪೦ ಪತ್ರ	೨೭, ೧೧ ಪಂಕ್ತಿ	೨೪ ಅಕ್ಷರ

ಆದಿ : ಶ್ರೀ ಪ್ರಜ್ಞಾಸೂತ್ರ ಪ್ರಸಂನ ಕೃಷ್ಣವಿಲಾಸಾಭಿಜ್ಞಾನ ಪಾರಿಜಾತ ಮಹಾ ಶೃಂಗಾರ ನಾಟಕ ಪ್ರಬಂಧರಾಜದ ಪ್ರಥಮ ಗ್ರಂಥದೊಳ್ ಶ್ರೀಕೃಷ್ಣಾಭ್ಯುದಯವೆಂಬ ಪ್ರಥಮೋಧ್ಯಾಯ ಪ್ರಾರಂಭಃ ಶ್ರೀರಸ್ತು॥

ಆನಂದ ಭೈರವಿ ॥ ಆದಿತಾಳ ॥

ಶ್ರೀಗಣನಾಥ ಕೃಪಾಲಯ ಸರ್ವಸಿದ್ಧಿಪ್ರದಾತ
ಮಾಂ ಪಾಲಯ ಗಂಧ ಶಿಂದೂರ ವಕ್ತ್ರ ಸುಬೋಧಯ
ಘನ ವಿಘ್ನಾಂಧಕಾರಪ್ರಭೋದಯ
ಸುಪ್ರಸಾದಕ ಮೋದಕ ಖಾದಯ ವೇದ
ನಾದಾಂತ ಮಧ್ಯವಿನೋದಯ ನಮೊ ಶ್ರೀಗಣನಾಥ ॥ ಪ ॥

x x x x

ವಿಜ್ಞಾನ ದೀಪವಮಾದೀ
ಪ್ರಜ್ಞಾಸೂತ್ರ ಪ್ರಸನ್ನ ಕೃಷ್ಣವಿಲಾಸಾ
ಭಿಜ್ಞಾನ ಪಾರಿಜಾತ ಸು
ಸೌಂಜ್ಞೆಯ ಶೃಂಗಾರ ಕಾವ್ಯ ಸರಣಿಯ ತೋರ್ಪೆಂ ॥ ೨ ॥

ಸುರಭೀಭತ್ಸಾಸುರರಂ
ಕಿರಿದೆನೆ ತರಿದ್ವರಿಯು ಭಾವೆಯುರು ಶಿರಿತರುವಂ
ಬರವಾಡಿದ ಪರಿ ಕೇಳ್ ಶ್ರೀ
ವರ ವೆಂಕಟಕವಿಯ ಮಧುರವಚನಾ ರಚನಾ ॥ ೩ ॥

ಮತ್ತೀ ಕವಿ ಆವನೆಂದಡೆ ॥
ಶ್ರೀ ಜಯಕೀರ್ತಿ ನೃಸಿಂಹಂ
ಭೂಜನನುತ ವೇಂಕಟಾರ್ಯ ಪೌತ್ರ ಪೇಳ್ದನೀ
ರಾಜದ್ವೃತ್ತ ಕವಿತ್ವವ
ಧೀಜನರಿದ ಕೇಳಿ ಚಿತ್ರಪದಕೃತಿ ಸಹಿತಂ ॥ ೪ ॥

ಅಂತ್ಯ : ವಚನ ॥ ಇಂತು ಶ್ರೀಹರಿಯು ಪರಮ ಸಂತೋಷದಲಿ ಸತ್ಯಭಾಮಾದೇವಿಯಂ ಕೂಡಿಯಿರುವ ಸಮಯದಲ್ಲಿ ಶ್ರೀಕೃಷ್ಣ ಸತ್ಯಭಾಮಾದೇವಿಯ ದರ್ಶನಾರ್ಥವಾಗಿ ಬಹುಮಂದಿ ದೇವತೆಗಳು ಋಷಿಗಳು ಬರುತ್ತಿದ್ದರ ದೆಂತೆನೆ ॥ ಛಾಯಾಗೀತ ॥

ಪ್ರಕೃತಿಪುರುಷರೂಪಾ ಪ್ರಕಟಕೀರ್ತಿ ಪ್ರತಾಪಾ
ಕ್ಷೀರವಾರಿಧಿ ಶಯನಾ ಚಿತ್ಸರೋಜಾತನಯನ

ನಿಶಿಪ ಕುಲಸುದೀಪ ನೀಲ ಮೇಘಾಭರೂಪ
ನತಜನಸುರಸಾಲ ನಂದಗೋಪಾಲ ಬಾಲಾ ||

ಪಾದ ವಚನ ||

ಭಕ್ತಿಯಿಂದಾವರೀ ಕೃತಿ ಪಾರಿಜಾತವಂ
ನಿತ್ಯವಂ ಬರದೋದಿ ಕೇಳಿದರ್ಗೆ
ಪುತ್ರ ಪೌತ್ರವೃದ್ಧಿ ಅರ್ಥಮಾಯುಷ್ಯಮಂ
ಇತ್ತು ಸಲಹುದ ಹರಿಯು
ಸತ್ಯಭಾಮೆ || ಶ್ರೀ ||

ವಿಷಯ : ಶ್ರೀಕೃಷ್ಣನ ವಿಲಾಸ.

ವಿಶೇಷ: ಮೊದಲಿನ ೧೪೦ ಪತ್ರಗಳನ್ನೂ ಕೊನೆಯ ೧೪೦ ಪತ್ರಗಳನ್ನೂ ಬರೆದವರು ಬೇರೆ ಬೇರೆ ಲಿಪಿಕಾರರಿರಬಹುದೆಂದು ಬರವಣಿಗೆಯಿಂದ ಸ್ಪಷ್ಟಪಡುತ್ತದೆ. ಎರಡನೇ ೧೪೦ ಪತ್ರಗಳ ಬರವಣಿಗೆ ಸುಂದರವಾಗಿದೆ. ಇದರ ಕಾಗದವೂ ದಪ್ಪನಾಗಿದೆ. ಮೊದಲಿನ ೧೪೦ ಪತ್ರಗಳ ಕಾಗದ ತೆಳುವು. ಪತ್ರಗಳ ಕ್ರಮಾಂಕ ೧ರಿಂದ ೧೪೨ ಇದ್ದು ಮತ್ತೆ ೧ರಿಂದ ೧೪೦ ಇದೆ. ಕೆಲವು ಪತ್ರಗಳಲ್ಲಿ ಮಧ್ಯೆಮಧ್ಯೆ ಜಾಗ ಬಿಟ್ಟಿದೆ.

೯೨೧

ಕೆ.ಬಿ. ೧೦೫	**ಪ್ರತಾಪಸಿಂಹ ಚರಿತ್ರೆ**	ನಾಟಕ
ಲ.೨″×೬.೭″	ಆಯ್ಯಾಶಾಸ್ತ್ರಿ	೧೯ನೆಯ ಶತಕ
೩೪ ಪತ್ರ	೨೩ ಪಂಕ್ತಿ	೨೫ ಅಕ್ಷರ

ಆದಿ : ಪ್ರತಾಪಸಿಂಹ ಚರಿತ್ರೆ.

ಸೂತ್ರಧಾರ (ಪ್ರವೇಶಿಸಿ)

ವೃತ್ತಂ|| ಶ್ರೀಶೈಲಾಧಿಪ ಕನ್ಯಕಾಂತ ಸದಲಂಕಾರಂ ಜಪಾಪುಷ್ಪ ಸಂ
ಕಾಶಾಂಗದ್ಯುತಿ ಭಾಸುರಂ ಶ್ರುತಿ ಶಿರಸ್ಸೀಮಂತ ಮುಕ್ತಾಫಲಂ
ಶ್ರೀಶಾದಿಸ್ತುತ ವೈಭವಂ ತ್ರಿಭುವನ ಪ್ರತ್ಯೂಹ ವಿಧ್ವಂಸಿ ವಿ
ಘ್ನೇಶಂ ಕ್ಷೇಮುವನಿತ್ತು ಪಾಲಿಕೆ ಕರಂ ಶ್ರೀ ಚಾಮರಾಜೇಂದ್ರನಂ ||

x x x x

ಕಂ॥ ವೀರ ಪ್ರತಾಪಸಿಂಹನ
ಚಾರಿತ್ರವನೀಗಳಾಡಿಸುವೆನೀ ಸಭೆಯೊಳ್
ಸಾರಜ್ಞರೆ ಸದ್ಗುಣ ಗಂ
ಭೀರರೆ ಮನವಿಟ್ಟು ನೀವು ಕೇಳ್ವುದು ಮುದದಿಂ॥ ಎಂದು ತೆರಳಿದನು

ಅಂತ್ಯ: ಸೂತ್ರಧಾರ ಪ್ರವೇಶಿಸಿ

ಕಂ॥ ಈ ಮಹೀವಲಯದೆ ಸಂತರ್
ಕ್ಷೇಮದಿ ಸಂತೋಷಯುಕ್ತರೆನಿಸಿರಲೆಂದುಂ
ಶ್ರೀಮಚ್ಚಾಮಮಹೀಪತಿ
ಭೂಮಿಯ ಪಾಲಿಸಲಿ ಧರ್ಮದಿಂ ಚಿರಕಾಲಂ॥

ರಾಗ॥ ಜಯ ಮಂಗಳ ಶೈಲಸುತೆ ಲಲಿತೆ
ಜಯ ಮಂಗಳ ಶಂಭುಹಿತೆ ಮಹಿತೆ ॥ ೧ ॥

ಕರುಣಾಪಾರಾವಾರೆ
ಹರಿಣಾಂಕಕಲಾಂಕಿತ ಕೋಟೀರೇ ॥ ೨ ॥

ವರದೇ ಚಾಮುಂಡಾಂಬೆ
ಕರದೇವತೆ ಚಾಮನೃಪಾಲಂಬೆ ॥ ೩ ॥

ಪಂಚಮಾಂಕಂ ಸಂಪೂರ್ಣಂ॥

ವಿಷಯ: ವೀರಪ್ರತಾಪಸಿಂಹನ ಕಥೆ.

ವಿಶೇಷ: ಅಕ್ಷರಗಳು ಸ್ಫುಟವಾಗಿಯೂ ಸಣ್ಣಗೂ ಇವೆ. ಪತ್ರಗಳಿಗೆ ಕ್ರಮಾಂಕ ವಿಲ್ಲ. ಪುಸ್ತಕದ ಅಂತ್ಯದಲ್ಲಿ ಕೆಲವು ಶುದ್ಧ ಪತ್ರಗಳಿವೆ.

930

ಕೆ. ೩೮೩/೧	**ಪ್ರತಿಭಾಗೀ ಕನ್ನಡ ವ್ಯಾಖ್ಯಾನ**	ಶ್ಲೋಕ, ಟೀಕು
೧೪.೪"×೧.೭"	?	?
೧—೨೪ ಪತ್ರ	೭ ಪಂಕ್ತಿ	೭೬ ಅಕ್ಷರ

ಆದಿ: ಪ್ರತಿಭಾಗೆ ಮೇಲೆ ಪಂಚಾಂಗಾ ಗುಣಿಸುವದಕ್ಕೆ ಗ್ರಂಥಾ
ಷಷ್ಟಿದ್ವಾರ್ವಿಂಶತಿ ಗುಣಿತಂ ವ್ಯಪಗತ ಸಂವತ್ಸರೇಣ ಸಂಮ್ಮಿಶ್ರಂ।
ನವ ಗಗನಾಬ್ಧಿ ಸಮೇತಂ ಶಕನೃಪಕಾಲಂ ವಿಜಾನೀಯಾತ್॥

ಟೀಕು–ಷಷ್ಟಿ೩–೬೦ ಯಿಟ್ಟುಕೊಂಡು, ದ್ವಾವಿಂಶತಿ ಗುಣಿತಂ ಯೆಂದು ೨೨ ರಿಂದಾ ಹೆಚ್ಚು ಗುಣಿಸಿ ಆದರೊಳಗೆ ತಾನು ಆವ ಸಂವತ್ಸರಕ್ಕೆ ಗುಣಿಸುಬೇಕಾಗಿ ಯಿದ್ಧೀತು ಆವ ಸಂವತ್ಸರಕ್ಕೆ ಹಿಂದೆ ಪ್ರಭವಾವಾದಿಗತ ಸಂವತ್ಸರಗಲು ಯೆಷ್ಟು ಆಧೀತು ಅಷ್ಟಸಂವತ್ಸರಗಲನೂ ಕೂಡುವದು. ಆ ಮೇಲೆ ನವ ಗಗನಾಬ್ಧಿಸಮೇತಂ ಎಂದು ೪೦೯ ಇದನು ಕೂಡಿದರೆ ಶಕನೃಪಕಾಲಂ ವಿಜಾನೀಯಾತ್ ಎಂದು ಶಾಲಿವಾಹನಶಕ ವರ್ಷಂಗಲು ಬಾಹುದು ॥ ೧ ॥
ಕಲ್ಯಾದಿದ್ಯುಗುಣಾ ತಾಹವಕ್ಕೆ ಗ್ರಂಥಾ.
ಶಾಕೋ ಗೋದ್ರಿ ನಿಶಾಕರಾಗ್ನಿ ಮಿಲಿತೋ ಮಾಸೀಕೃತೋ ಮಾಸೀಕೃತೋ ಮಾಸಯು ।
ಗ್ದ್ವಿಷ್ಠೋ ದಸ್ರಹತಂ ಷ್ಪತರ್ಕ ಶಶಿ ನಂದಾಂಶೇನ ಸಂವರ್ಜಿತಃ ॥
ಬಾಣಂಗೈರ್ವಿಹೃತಃ ಫಲೇನ ಸಹಿತೋ ವ್ಯೋಮಾಗ್ನಿ ನಿಘ್ನೋ ಯುತಃ ।
ಸ್ವೇಷ್ವಾಹೈಃ ಪೃಥಗಷ್ಟಶೂನ್ಯಮುನಿಭಿಃ ಸ್ವಾಂಶೇನ ಸಂಯೋಜಯೇತ್ ॥
ಭಕ್ತಸ್ಸಾಗರ ಷಡ್ಭಿರಾಪ್ತರಹಿತೋ ರಾಮಾರಿ ಪೂರ್ಯಾಸ್ತದಾ ।
ಸ್ಯಾದಹ್ನಾಂನಿಚಯೋರ್ಧರಾತ್ರಿಸಮಯೇ ಶುಕ್ರಾಖ್ಯ ವಾರಾದಿತಃ ॥

ಅಂತ್ಯ : ಸ್ವಾಶಾನಿ ವಲನಾಂಗುಲಗಲನು ಆ ತತ್ಕಾಲಚಂದ್ರಬಿಂಬಾರ್ಧಾಂಗುಲದಿಂದ ಗುಣಿಶಿ ೪೯ ರಿಂದಾ ಭಾಗಿಸಿ ಬಂದ ಲಬ್ಧಾ ಅಪವರ್ತಿತ ವಲನಾಂಗುಲ ಗಲೆಂದು ಬರೆದಿರಿಸುವದು. ಶ್ರೀ ॥ ಇನ್ನು ಪರಿಲೇಖನೆ ಬರವ ಕ್ರಮು.

ಪರಿಲೇಖನ ಜ್ಞಾನಾರ್ಥಂ ಅಯಂ ಸೂಕ್ಷ್ಮೋಪಾಯ ಕ್ರಮಃ ತತ್ತತ್ಸಿದ್ಧಾಂತೋಕ್ತ ತ್ರಿಜ್ಯಾಮಿತ ವ್ಯಾಸಾರ್ಧಸ್ಯ ರಾಶಿತ್ರಯಯುತ x x x x ಉಭಯಿಥಾಪಿ ಗ್ರಾಹ್ಯಾಬಿಂಬಾರ್ಧಾನಪವರ್ತಿತ ವಿಕ್ಷೇಪಂ ವಲನಾಭಿ ಮುಖಂ ಪ್ರಾಪಯೇತ್. ಯತ್ರ ತದಗ್ರಂ ಸ್ಪೃಶತಿ ತತಃ ಗ್ರಾಹಕಾ.

ವಿಷಯ : ಪಂಚಾಂಗ ಗಣಿತ (ಕರಣಗ್ರಂಥ).

ವಿಶೇಷ : ನಂದಿ ನಾಗರೀ ಲಿಪಿ. ಗ್ರಂಥ ಅಸಮಗ್ರ. ಇದೇ ಕಟ್ಟಿನಲ್ಲಿ ಕೊನೆಯ ೨೪ ಗರಿಗಳಲ್ಲಿ ಬೃಹಜ್ಜಾತಕ ಮತ್ತು ಶ್ರೀಪತಿ ಜಾತಕ ಪದ್ಧತೀಗ್ರಂಥದ ಕೆಲವು ಸಂಸ್ಕೃತ ಶ್ಲೋಕಗಳಿವೆ.

931

ಕೆ. ೩೮೪/೧	**ಪ್ರತಿಭಾಗೀ ಕನ್ನಡ ವ್ಯಾಖ್ಯಾನ**	**ಶ್ಲೋಕ, ಟೀಕು**
೧೪.೨"×೧.೪"	?	?
೧–೧೬ ಪತ್ರ	೭ ಪಂಕ್ತಿ	೬೬ ಅಕ್ಷರ

ಆದಿ : ಪೈಂಗಲ ಸಂವತ್ಸರದ ಭಾದ್ರಪದ ಬಹುಲ ಛಿದಿಗೆ ದಿವಸ ಪ್ರತಿಭಾಗೀ ವ್ಯಾಖ್ಯಾನ ಬರೆವದಕ್ಕೆ ಶುಭಮಸ್ತು ॥ ಚಂದ್ರನ ಸ್ಫುಟದ ಕ್ರಮು ॥
ನಕ್ಷತ್ರಮಿಂದೋರ್ಘಟಿಕಾನತಘ್ನಂ ತತ್ಸರ್ವನಾಡ್ಯಾಪ್ತ ಫಲೋ ನಖಘ್ನಂ
ಧನೋಧೃತಾಂಶಾದಿ ಶಶೀನನಂದಂ ನತೇರ್ಹತಂ ತತ್ಸರಮಾಪ್ತ ಭಕ್ತಿಃ ॥೧॥

ಟೀಕು ॥ ನಿತ್ಯ ನಕ್ಷೆತ್ರ ಯಾವ ದಿವಸಕ್ಕೆ ಚಂದ್ರಸ್ಫುಟಾ ಮಾಡಬೇಕೊ ಆ ದಿವಸವ ನಕ್ಷತ್ರ ಅಶ್ವಿನಿಯಾದಿಯಾಗಿ ಆ ದಿವಸ ನಿತ್ಯನಕ್ಷತ್ರ ಪರ್ಯಂತರ ಯೆಣಿಸಿ ಯೆಷ್ಟು ಆಗುವದೋ ಅಷ್ಟನೇ ಸಂಖೆ ಇಟುಕೊಂಡು ಅದರ ಕೆಲಗೆ ಆ ನಕ್ಷತ್ರದ ಘಲಿಗೆ ವಿಘಲಿಗೆಗಲ ಪ್ರತಿಯನು ಇಟ್ಟು ಕೊಂಡು ಈ ಮೂರು ಪ್ರತಿಯಂನ್ನು ಅರವತ್ತರಿಂದಾ ಗುಣಿಶಿ ಕೆಲಗಣಪ್ರತಿ ಯಂನ್ನು ೬೦ ರಿಂದಾ ಭಾಗಿಶಿ ನಡುವಣ ಪ್ರತಿಯಲ್ಲಿ ಕೂಡಿ ಆ ನಡುವಣ ಪ್ರತಿಯಂನ್ನು ಆ ನಕ್ಷತ್ರದ ಹಿಂಪೆ ಸಂದ ಮುಂದೆ ಅನುಭವಿಸುವ ಘಲಿಗೆ ಗಳಂನ್ನು ಕೂಡಿದ ಸಂಖೆ ಯೆಷ್ಟು ಆಗುವದೋ ಅಷ್ಟರಿಂದ ಭಾಗಿಶಿ ಬಂದ ಲಪ್ತಾದಿ ಫಲವಂನ್ನು ಮೇಲಣ ಪ್ರತಿಯಲ್ಲಿ ಕಲವುದು.

ಅಂತ್ಯ : ವಿಷಧ್ರುವಂ ಖಖಾಷ್ಟಘ್ನಂ ಚಂದ್ರಗತ್ಯಾ ವಿಭಾಜಿತಂ ।
ಪೂರ್ವ ಋಕ್ಷೇಣ ಸಂಯುಕ್ತಂ ಯೋಜ್ಯಂ ವಾ ವಿಷ ಸಿದ್ಧಯೇ ॥

ಟೀಕು ॥ ವಿಷಧ್ರುವನಿಟುಕೊಂಡು ೮೦೦ರಿಂದಾ ಗುಣಿಶಿ ಚಂದ್ರನ ಗತಿಇಂದಾ ಭಾಗಿಶಿ ಬಂದ ಲಬ್ಧವಂನ್ನು ಪೂರ್ವನಕ್ಷತ್ರದ ಘಲಿಗೆ ವಿಘಲಿಗೆ ವೊಲೆಗೆ ಕೂಡಿದರೆ ಘಟಿಕಾಸು ಆಗುವದು. ಆ ಘಟಿಕಾಸು ಇಟುಕೊಂಡು ೬೦ ಅಧಿಕವಾದರೆ ೬೦ ಕಲೆದು ಆ ಶೇಷವು ೩೦ ಅಧಿಕವಾದರೆ ದಿವಾಪ್ರಮಾಣಾ ಕಲೆದು ರಾತ್ರೆಯಂದು ಬರವುದು. ದಿವಾಪ್ರಮಾಣಕೆ ಕಡಮೆಯಾಗಿ ಇದ್ದರೆ ದಿವದಲ್ಲಿ ವಿಷಯಂದು ಬರವುದು ಶ್ರೀ.

ವಿಷಯ : ಪಂಚಾಂಗವನ್ನು ಮಾಡುವ ಕ್ರಮ (ಕರಣ ಗ್ರಂಥ)

ವಿಶೇಷ : ನಾಗರೀ ಲಿಪಿ, ಗ್ರಂಥ ಅಸಮಗ್ರ, ಇದೇ ಕಟ್ಟಿನಲ್ಲಿ ನಾರದೀಯ ಸಂಹಿತೆ ಎಂಬ ಸಂಹಿತಾ ಗ್ರಂಥವಿದೆ. ಇದಲ್ಲದೆ ೧೭ ರಿಂದ ೧೨೨ ರ ವರೆಗಿನ ಗರಿ ಗಳಲ್ಲಿ ಶಕುನ, ಶಾಂತಿ ಮೊದಲಾದ ಕೆಲವು ವಿಷಯಗಳ ಸಂಗ್ರಹವಿದೆ.

932

ಕೆ. ೩೦೬	**ಪ್ರತಿಷ್ಠಾಕಲ್ಪದ ಕನ್ನಡ ಟೀಕು**	ಟೀಕು
೧೩.೭"×೨.೧"	ಕುಮುದಚಂದ್ರ	೧೧೦೦
೨_೭೬ ಪತ್ರ	೧೦ ಪಂಕ್ತಿ	೬೫ ಅಕ್ಷರ

ಆದಿ: .... ಗುರುಪರಂಪರಾಕ್ರಮದಿ ಬಂದ ಜಿನಸಂಹಿತಾ ಜಿನಸಂಹಿತೆಯೆಂಬ ಶಾಸ್ತ್ರಂ। ಮಯಾ। ಯೆಂನಿಂದಂ ಅಧುನಾ .... ಪೂರ್ವ್ವಾಚಾರ್ಯ್ಯರೆಂತು ಪೇಳ್ದರಂತೆ। ಸಂಪ್ರಕಾಶ್ಯತೆ। ಲೇಸಾಗಿ ಪ್ರಕಾಶಿಸಲ್ಪಡುವುದು॥
ಲ॥ ಮಾಗದ ಪ್ರಶ್ನಮುದ್ದಿಶ್ಯ ಗೌತಮು ಪ್ರತ್ಯಓಚತ।
ಇತೀದಮನುಸಂದಾಯ ಪ್ರಬಂದೋಽಯಂ ನಿಬದ್ಯತೆ॥
ಮಾಗದಪ್ರ ....ಶ್ರೇಣಿಕಂ ಮಾಡಿದ ಪ್ರಶ್ನೆಯಂ। ಉದ್ದಿಶ್ಯ। ಉದ್ದೇಶಿಸಿ ಗೌತಮು। ಗೌತಮು ಗಣದರಂ। ಪ್ರತ್ಯವೋಚತ। ಪ್ರತಿಬೋದಿಸಿದಂ

ಅಂತ್ಯ: ಯಿಂತು ಸಮಸ್ತ ಪ್ರಜೆಗಳ್ಗೆ ತಂತಂಮ ಜಾತಿಯೋಗ್ಯವಾಗಿ ಪೇಳಲ್ಪಟ್ಟುದು। ಸರ್ವಜ್ಞನಿಂ ಕೃತಯುಗ ಪ್ರಾರಂಭದೊಳು ಜಾತಿ ವಿಭಾಗಂ। ಯಿದು ಮಾಡಲ್ಪಟ್ಟುದು। ಚತುರ್ತ್ಥಕಾಲ ಪ್ರಾರಂಭ ಸಮಯ ....ಬ್ರಹ್ಮನಪ್ಪ ಪುರುಪರಮೇಸ್ವರನಿಂ ಇತಿ ಶೌಚಾಚಾರ ವಿದಿಃ ಸಮಾಪ್ತಃ॥ ॥ ಲ ॥ ಇತಿ ಶ್ರೀಮಾಘಣಂದಿ ಸಿದ್ಧಾಂತ ಚಕ್ರವರ್ತ್ತಿ ಸುತ ಚತುರ್ವಿದ ಪಾಂಡಿತ್ಯ ಚಕ್ರವರ್ತ್ತಿ ಶ್ರೀವಾದಿ ಕುಮು....ಪಂಡಿತ ವಿರಚಿತೇ ಪ್ರತಿಷ್ಟಾ ಕಲ್ಪಟಿಪ್ಪಣಿ ತ್ರೈವರ್ಣ್ನಿಕ ವ್ಯವಸ್ಥಾ ಸಮಾಪ್ತಾಃ....ಪ್ರತಿಸಮಾನವಾಗಿ ಬರೆದೆನು॥ ಶ್ರೀ ಬಂಗವಾಡಿ ಪುರದ ಶ್ರೀ ಶಾಂತಿತಿರ್ಥೇಶ್ವರನ ಸಂನಿದಿ ಯಲ್ಲಿ ಪಾರಿಶ್ವದೇವಗಳ ಮ .. ಪ್ಪನು ಬರೆದ ಯಿಂದ್ರಣಂದಿ ವ್ಯಾಖ್ಯಾನ ಪುಸ್ತಕಕ್ಕೆ ಮಂಗಲ ಮಹಾಶ್ರೀ॥

ವಿಷಯ: ಪ್ರತಿಷ್ಠಾಕ್ರಮದ ಕನ್ನಡ ಟೀಕೆ.

ವಿಶೇಷ: ೧,೩೫, ೪೩–೪೫, ೫೮ ಈ ಆರು ಪತ್ರಗಳು ಲುಪ್ತವಾಗಿವೆ. ಅಸಮಗ್ರ ಪ್ರತಿ.

933

ಕೆ. ೨೩೮ | **ಪ್ರಪನ್ನಾಮೃತದ ಸಾರಾರ್ಥ** | ಗದ್ಯ
೧೮.೭"×೧.೬" | ರಾಯಸದ ವರದಾರ್ಯ | ?
೧–೩೯ ಪತ್ರ | ೬ ಪಂಕ್ತಿ | ೭೬ ಅಕ್ಷರ

ಆದಿ: ಯಿೂ ಪ್ರಪಂನಾಮೃತದ ದಶಾಶ್ವಾಸಂಗಳಲ್ಲಿಯು ಯಿರುವ ಸಾರಾರ್ಥ ಸೂಚಕಂಗಳ ಬರಯುವದಕ್ಕೆ ಮಂಗಳಂ। ಪ್ರಥಮಾಶ್ವಾಸದಲ್ಲಿ ವೈಕುಂಠ ವರ್ನನಂ। ಶ್ರೀಮನ್ನಾರಾಯಣಂ......... ಂದ್ರುಂಗೆ ನಿರವಿಸಿದ ವಿವರಣಂ

ಪ್ರಥಮಾಶ್ವಾಸಂ || ೭ರಲ್ಲಿ ಗಂಗಾಸ್ನಾನಾನಂತರಂ ಯಾದವಂ ಕಂ....ದಲ್ಲಿ ರಾಮಾನುಜಾರ್ಯರ ಅವತರಣಂ |

x x x x

(ಈ ಕೆಳಗಿನಭಾಗ ೬ನೆಯ ಗರಿಯಿಂದ ಬರೆದುದು)

ಕೊಯಿಲ್ ಕಂದಾಡೆಯಂಣನ್ ತಿರುವಡಿಹಳೆ ಶರಣಂ || ರಾಯಸದ ವರದಾರ್ಯರಿಂದ ಕಂನಡಿಸಲ್ಪಟ್ಟ ಪ್ರಪಂನಾಮೃತವೆಂಬ ರಾಮಾನುಜ ಚರಿತ್ರಮುಂ ಬರಯುವದಕ್ಕೆ ಮಂಗಳಂ || ಶ್ರಿಶೈಲೇಶ ದಯಾಪಾತ್ರಂ ಧೀ ಭಕ್ತ್ಯಾದಿ ಗುಣಾರ್ನವಂ ಯತೀಂದ್ರ ಪ್ರವಣಂ ವಂದೇ ರಮ್ಯ ಜಾಮಾತರಂ ಮುನಿಂ ಲಕ್ಷ್ಮೀನಾಥ ಸಮಾರಂಭಾಂ ನಥಯಾಮುನ ಮಧ್ಯಮಾಂ ಅಸ್ಮದಾಚಾರ್ಯ ಪರ್ಯಂತಾಂ ವಂದೇ ಗುರುಪರಂಪರಾಂ ||

ಅಂತ್ಯ: ಅನಂತ ಕೌತ್ತುಪರಿವಾರ ಸಮೇತರಾಗಿ | ರಾಮಾನುಜರಾನಯನಾರ್ಥಂ ಪೊರಮಟ್ಟು ಪೋಪಾಗಾ | ರಾಮಾನುಜರಂ | ಯತ್ಯಾಶ್ರಮ ಸಮಸ್ತ ಕೃತ್ಯಂಗಳಂ ಶಾಸ್ತ್ರೋಕ್ತಮಿರ್ದಂತೆಸಗಿ | ವೇದವೇದಾಂತ ಪಾರಂಗತರಾಧನೇಕ ಶ್ರೀವೈಷ್ಣವರುಗಳೊಡನೆ ವರದನ ಸೇವೆ ನಿಮಿತ್ತಂ | ಯಿಧಿರಿಗೆ ಬರಲಾಗಿ | ತಿರುಕಚ್ಚಿನಂಬಿಗಳುಂ | ರಾಮಾನುಜರಂ | ಅ....

ವಿಷಯ: ಶ್ರೀರಾಮಾನುಜಾಚಾರ್ಯರ ಚರಿತ್ರೆ.

ವಿಶೇಷ: ಅಸಮಗ್ರಪ್ರತಿ. ಆರಂಭದ ೧೦ ಗರಿಗಳ ಒಂದುಕಡೆ ಅಂಚು ಹೋಗಿ ಶಿಥಿಲವಾಗಿದೆ. ಮೊದಲ ಆರು ಗರಿಗಳಲ್ಲಿ, ೧೦೦ ಆಶ್ವಾಸಗಳಲ್ಲಿ ಪ್ರತಿಪಾದಿಸುವ ವಿಷಯಗಳ ಸೂಚಿಯಿದೆ. ಆರನೇ ಗರಿಯಿಂದ ಗ್ರಂಥ ಪ್ರಾರಂಭವಾಗಿದೆ.

934

ಕೆ.ಬಿ. ೭೮	**ಪ್ರಬೋಧ ಚಂದ್ರೋದಯ**	ನಾಟಕ
೮"×೬.೪"	ದೇ. ಶ್ರೀನಿವಾಸಯ್ಯಂಗಾರ್	೧೯ನೆಯ ಶತಕ
೧—೪೯ ಪತ್ರ	೧೯ ಪಂಕ್ತಿ	೨೦ ಅಕ್ಷರ

ಆದಿ: ಸೂತ್ರಧಾರಂ (ಪ್ರವೇಶಿಸಿ) ವೃತ್ತಂ ||

ನೀರಂ ಭೂ ನಭಮಗ್ನಿವಾಯುವೆನಿಪೀ ಲೋಕಂಗಳಜ್ಞಾನದಿಂ
ವಾರಿ ಭ್ರಾಂತಿ ಮರೀಚಿಕಾ ವಿತತಿಯೊಳ್ತೋಪ..ತೆ ವಿಭ್ರಾಜಿಕುಂ
ಕೋರಲ್ಕೈದೆ ಸುತತ್ವಮಾಸ್ರಜದೆ ಭೋಗಭ್ರಾಂತಿಯೊಳ್ತೋಪುದಾ
ಸಾರಾನಂದ ನಿಜಾತ್ಮಬೋಧಮನದಂ ಸತ್ತೇಜಮಂ ಧ್ಯಾನಿಪೆಂ ॥

ರಾಗ (ಜುಂಜೋಟಿ) ಖರಹರಪ್ರಿಯ (ಚಲಿಮುನಕ್ಯಾಲ)
ಯದುಗಿರಿವಾಸ ದಾಸ ಕಾಮಿತಾರ್ಥದಾಯಕ ॥ ಪ ॥
ಕಾಮಿತಾರ್ಥದಾಯಕ ಸಮಸ್ತ ಲೋಕನಾಯಕ ॥ ಅ ॥

X X X X

ಉಪನಿಷತ್ತುಗಳಿಗೆ ವರ್ಣಿಸುವದಕ್ಕೆ ಅಸಾಧ್ಯವಾದ ಭಗವನ್ಮಹಿಮೆಯನ್ನು ಪಾಮರರಾದ ನಾವು ವರ್ಣಿಸುವದಕ್ಕೆ ಸಮರ್ಥರಾದೆವೆ. ಅದು ಹಾಗಿರಲಿ ಜಗದೈಕವೀರನಾದ ಗೋಪಾಲ ಮಹೀಪಾಲಕನು

ಕಂ ॥ ವರಕೃಷ್ಣ ಶರ್ಮವಿದ್ವ
ನ್ವಿರಚಿತಮಾದಾ ಪ್ರಬೋಧ ಚಂದ್ರೋದಯಮಂ
ಧರಣೀಶ ಕೀರ್ತಿವರ್ಮಂ
ನಿರುಕಿಸಲಭಿನಯಿಪುದೆಂದು ನೇಮವನಿತ್ತಂ ॥

ಅಂತ್ಯ: ಪುರುಷ—ತಾಯೆ ಕೃತಕೃತ್ಯನನ್ನಾಗಿ ಮಾಡಿಸಿ ಬ್ರಹ್ಮಾನಂದ ಪದದಲ್ಲಿ ನಿಲ್ಲಿಸಿ ಇರುತ್ತೀಯೆ. ಇದಕ್ಕಿಂತಲೂ ನನಗೆ ಆಗಬೇಕಾದ್ದೇನು ಇರುವದು.

X X X X

ದಿವಸಕರನಂತೆ ಸ್ವಪ್ರಕಾಶದಿಂದ ಪ್ರೇರಿಸುವ ನಿನ್ನಲ್ಲಿ ವಿಶ್ವಾಸವನ್ನೂ ನಿರಂತರವಾಗಿ ಕರುಣಿಸಲೆಂದು ಪರಮಾತ್ಮನಿಗೆ ಮಂಗಳಾಶಾಸನವನ್ನು ಮಾಡೋಣ.

ವಿಷ್ಣುಭಕ್ತಿ—ಆಗಬಹುದು.

ರಾಗ ॥ ಲಲಿತ ॥

ವೇದಾಚಲನಾಯಕ। ಯಾದವ ಸೇವಿತ। ಪಾದಾಬ್ಜಕೆ ಮಂಗಳಂ ॥ ಪಲ್ಲವಿ

X X X X

ಚಾಮರಾಜೇಂದ್ರ ಸು। ನಾಮ ಭೂಮಿಶಗೆ। ಕಾಮಿತಸಿದ್ಧಿಯ। ಪ್ರೇಮದಿ ನಾಗಿಪ ॥ ೩ ॥ ಎಲ್ಲರೂ ಹೋಗುವರು ॥ ಷಷ್ಠಾಂಕಂ ಸಂಪೂರ್ಣಂ ॥
ಭರತವಾಕ್ಯ

ಕಂ ॥ ಕೊಡವಾಲ್ಗರೆಯಲಿ ಪಶುಗಳ್
ಜಡದಂ ಸದ್ವೃಷ್ಟಿಗರೆದು ಧರೆ ಸಸ್ಯಗಳಂ
ಕೊಡುತೋವುಗ್ಯೆದೆ ಜನರಂ
ಪೊಡವಿಯ ಪಾಲಿಸುಗೆ ಧರ್ಮದಿಂದವನೀಶನ್ ॥ಶ್ರೀ॥

ವಿಷಯ : ವೇದಾಂತ ತತ್ತ್ವ ಪ್ರತಿಪಾದಕ ನಾಟಕ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಮೋಡಿ ಅಕ್ಷರ.

935

ಕೆ.ಬಿ. ೪೧೪	**ಪ್ರಬೋಧ ಚಂದ್ರೋದಯ**	ನಾಟಕ
೮" × ೫.೩"	ದೇ. ಶ್ರೀನಿವಾಸಯ್ಯಂಗಾರ್	೧೯ ನೆಯ ಶತಕ
೭೯ ಪತ್ರ	೧೭ ಪಂಕ್ತಿ	೧೪ ಅಕ್ಷರ

ಆದಿ : ಆದಕಾರಣ ನಟಿಯಂ ಬರಿಸಿ ಸಂಗೀತಕ್ಕೆ ಆರಂಭಿಸುವೆನು.
ಪೂಜ್ಯಳೆ ಯಿತ್ತ ಬಾ
ಜೀಯ್ಯಾ –ಯಿಗೋ ಬಂದಿರುವೆನು, ಏನಪ್ಪಣೆ.

ಪೂಜ್ಯಳೆ–ಬ್ರಹ್ಮಾನಂದಾನುಭವದಿಂದ ಕಾಲಕ್ಷೇಪ ಮಾಡಲುದ್ದೇಶಿತನಾದ ಗೋಪಾಲ ಮಹೀಪಾಲಕಂ। ಶಾಂತರಸ ಪ್ರಯೋಗಾಭಿನಯದೊಡನೆ ಕೂಡಿರುವ ನಾಟಕವನ್ನು ನೋಡೋಣದರಿಂದ x x x x ಅಭ್ಯಾಸ ಮಾಡಿರುವ ಪ್ರಬೋಧ ಚಂದ್ರೋದಯ ನಾಟಕವನ್ನು ಈಗ ಅಭಿನಯಿಸುವದೆ ಯುಕ್ತವೆಂದು ನನಿಗೆ ತೋರುತ್ತೆ.

ಅಂತ್ಯ : ಚಾಮರಾಜೇಂದ್ರನು । ನಾಮ ಭೂಮೀಶನೇ ।
ಕಾಮಿತ ಸಿದ್ಧಿಯ । ಪ್ರೇಮದಿನಾಗಿಪ ॥ ೩ ॥
ಯಂದು ಪುಷ್ಪಾಂಜಲಿಯನ್ನು ಮಾಡಿ ಎಲ್ಲರೂ ಹೋಗುವರು।
ಪರದೆ ಭರತವಾಕ್ಯಂ ॥
ಕಂದ ॥ ಕೊಡವಾಲ್ಗರೆಯಲಿ ಪಶುಗಳ್
ಜಡದಂ ಸದ್ವೃಷ್ಟಿಗರೆದು ಧರೆ ಸಸ್ಯಗಳಂ
ಕೊಡುತೋವುಗ್ಯೆದೆ ಜನರಂ
ಪೊಡವಿಯ ಪಾಲಿಸುಗೆ ಧರ್ಮದಿಂದವನೀಶಂ ॥

ವಿಷಯ : ವೇದಾಂತ ತತ್ತ್ವ ಪ್ರತಿಪಾದಕ ನಾಟಕ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಮೋಡಿ ಅಕ್ಷರ. ಕೆಲವುಕಡೆ ಬಿಟ್ಟಿರುವ ಭಾಗವನ್ನು ಬೇರೆ ಕಾಗದದಲ್ಲಿ ಬರೆದು ಅಂಟಿಸಿದೆ. ಆದಿಯಲ್ಲಿ ಗ್ರಂಥ ಲುಪ್ತವಾಗಿದೆ.

936

ಕೆ.ಎ. ೨೦೧	**ಪ್ರಭಂಜನ ಚರಿತೆ**	ಸಾಂಗತ್ಯ
೧೨.೯"×೪"	ಮಂಗರಸ	೧೫೦೮
೧-೮೩ ಪತ್ರ	೨೧ ಪಂಕ್ತಿ	೨೩ ಅಕ್ಷರ

ಆದಿ : ಪ್ರಭಂಜನ ಚರಿತ್ರೆ॥
ಶ್ರಿ ಮೃದುಪಾದಕೊಲಿದು ವಂದಿಪೆನು
ದ್ಧಾಮ ಸದ್ಗತಿವಡೆದವನಾ
ಪ್ರೇಮವನಾ ಕುವರಿಯ ಕಾಣಿಸದ
ಸ್ವಾಮಿ ಜಿನೇಂದ್ರಗೆ ವಂದಿಪೆನೂ ॥ ೧ ॥

x x x x

ಸಮತೆಯಿಂದವೆ ಜಿನಮತದ ಯಕ್ಷರನು ಸ
ಕ್ರಮದಿಂದ ನುತಿಸಿ ಪೇಳುವೆನೂ
ವಿಮಲ ಗುಣಾನ್ವಿತನಾ ಪ್ರಭಂಜನ ಭೂ
ರಮಣೇಶನ ಚರಿತೆಯನೂ ॥ ೭ ॥

ಯದುಕುಲವಂಶ ನೃಪನ ಶಚಿವಾನ್ವಯಾಂಬರ ಭಾನು
ಸದಮಲ ಗುಣಭೂಷಣನೂ
ಮದನಸ್ವರೂಪ ಮಂಗರಸ ನಾನತಿ ಸಂ
ಮುದದಿನೊರದೆನೀ ಕೃತಿಯಾ ॥ ೧೪ ॥

ಅಂತ್ಯ : ಜಯ ಮಂತ್ರಿಯು ಮೇರುವೆಂಬ ಮಗನು ಗೂಡಿ
ಭಯ ಮುತ್ತು ಬದ್ಧಕಿಲ್ಬಿಷಕೆ
ಜಯ ಜಯವೆನೆ ಜಗತೀಮಂಡಳವೆಲ್ಲ
ನಯದಿ ಯಶೋಧರರೆಂಬಾ॥ ೬೭ ॥

ವಿಷಯ : ಪ್ರಭಂಜನ ಮಹಾರಾಜನ ಚರಿತ್ರೆ.

ವಿಶೇಷ : ಅಸಮಗ್ರಪ್ರತಿ, ಅಕ್ಷರಗಳು ವಿರಳವೂ ಸ್ಫುಟವೂ ಆಗಿವೆ ನಾಲ್ಕು ಸಂಧಿಗಳು ಪೂರ್ತಿಯಾಗಿದ್ದು ಐದನೆಯ ಸಂಧಿಯಲ್ಲಿ ೬೭ ಪದ್ಯಗಳಿವೆ.

937

ಕೆ.ಬಿ. ೩೧೦	**ಪ್ರಭಾವತಿ ಸ್ವಯಂವರ**	ಯಕ್ಷಗಾನ
೭.೬"×೬.೩"	?	?
೧-೬೪ ಪತ್ರ	೧೬ ಪಂಕ್ತಿ	೨೧ ಅಕ್ಷರ

ಆದಿ : ಹರಿವಂಶದೊಳಗಣ ಪ್ರಭಾವತೀ ಸ್ವಯಂವರ ಬರಿಯುವದಕ್ಕೆ ಶುಭಸ್ತು॥
ನಿರ್ವಿಘ್ನಮಸ್ತು ॥
॥ ರಾಗ ॥ ನಾಟಿ ॥ ರೂಪಕ ॥ ಜಯ ಚಾಮುಂಡೇಶ್ವರಿ ।
ಜಯ ದುರ್ಗಾಂಬಿಕೆ ಶಂಕರಿ
ಜಯ ಸುಹಗಣಪತಿ ಮಾತೆ
ಜಯ ಪಾವನ ಚರಿತೆ ಜಯ ಮಹಿಷಾಸುರ ಮರ್ದ್ದಿನಿ ॥

x x x x

ಸ್ಮರಿಸು ಸರ್ವರ ಚರಣಾಂಬುಜವನು
ಹರಿಯಾತ್ಮಜಗೆ ಪ್ರಭಾವತಿಯ
ಪರಿಣಯವೆಸಗಿದ
ಚರಿತೆಯ ಪೇಳುವೆ । ಹರುಷದಿ ಲಾಲಿಪುದೀ ಕೃತಿಯಾ ॥ ೭ ॥

ಅಂತ್ಯ : ಭಾಮಿನಿ ॥
ಯಿಂತ್ತು ವಿಭವದೊಳಾಗಲಾ ಶ್ರೀ
ಕಾಂತ ಸತಿಸುತ ಸೋದರರನ
ತ್ಯಂತ ಸೌಖ್ಯದಿ ಪೊರೆಯುತಿದ್ದನು ಸತತವೆಂದೆನುತ
ಶಾಂತ ವೈಶಂಪಾಯನ ಧರಣೀ
ಕಾಂತನಾದ ಜನಮೇಜಯುಗೆ ಮಾ
ಕಾಂತ ವಂಶವನುಸುರ್ದ್ದಕುಡುಮೇಶ್ವರನ ಕರುಣದಲೀ ॥ ೭೮೦ ॥

ವಿಷಯ : ಹರಿವಂಶದಲ್ಲಿ ಉಕ್ತವಾಗಿರುವ ಪ್ರಭಾವತೀ ಸ್ವಯಂವರ.

ವಿಶೇಷ : ಮೋಡಿ ಬರಹ. ಇದನ್ನು ಮೂಲ ಪ್ರತಿಯೊಡನೆ 1903 ರಲ್ಲಿ ತಾಳೆ ನೋಡಿ ತಪ್ಪುಗಳನ್ನು ಕೆಂಪು ಮಸಿಯಿಂದ ತಿದ್ದಿರುತ್ತಾರೆ.

938

ಕೆ. ೫೩೧/೨	ಪ್ರಭುಚರಿತ್ರೆ	ಯಕ್ಷಗಾನ
೧೫.೫″ × ೧.೫″	?	?
೧-೪೬ ಪತ್ರ	೬ ಪಂಕ್ತಿ	೭೪ ಅಕ್ಷರ

ಆದಿ : ಪ್ರಭುಚರಿತ್ರೆ ರಾಗ ಪೂಲಾ । ಯಕ್ಷಗಾನ ಬರೆಯುವದಕ್ಕೆ ಶುಭಮಸ್ತು ॥
ಶ್ರೀರಸ್ತು ॥ ಶ್ರೀಮದ್ವಾಬಕ್ತಾಂತರಂಗಂ ಸ್ತಿತ ನಿಜಸಂಗಂ ಮೌನಿಹೃದ್ವದ್ಮ ಭ್ರುಂಗಂ
ಕಾಮಾಂಗ ದಹನ ಭಸಿತ ಲೇಪನಾಂಗಂ ಶುಭಾಂಗಂ ।
ಮಾಯಾದೂರಂ ಜನರಹಿತಂ ನಿರ್ಮಲಾಂಗಂ ನಿರಂಗಂ
ನೀನೆ ಸಾಗಿಸು ನಿಂನ ಕೃತಿಯ ನಿರ್ವಿಗ್ನದಿಂದಲ್ಲಿವಾ ॥
ವಚನಾ ॥ ಯಂದು ಸರ್ವಾತ್ಮಕನಾದ ಪ್ರಭುವಂ ಧ್ಯಾನಿಸಿ ಮುಂದೆ ಕಥಾ ಸೂಚನೆಯಂ ವಿಸ್ತರಿಸಿ ಪೇಳ್ವೆನದೆಂತೆನೆ ॥

ಅಂತ್ಯ : ಯಿಂತು ಯಲ್ಲರಿಳಿಗೆ ಬರುತಲಿ
ಸಂತಸದಲಿ ಪುಟ್ಟಿ ಯಿಹದಲಿ
ಚಿಂತೆದೊರೆದು ಭಕ್ತಿಯಂನ್ನು ನಿ
ರಂತರದೊಳು ಮಾಡಿ ಸುಖದಿಂ
ಚಿಂತಿತಾರ್ತ್ಥವಂನ್ನು ಕೊಡುವ
ಚಿಂತಮಣಿಯ ವೃಷಭ ಸಹಿತ ॥ ೭ ॥
ವಚನಾ ॥ ಯಿಂತು ವೃಷಭೇಶ್ವರನು ಸಹಾ ಬಂದು ಮರ್ತ್ಯದಲ್ಲಿ ಜನಿಸಿ ಭಕ್ತಿಕಂಗಳಂ ಮಾಡಿದರದೆಂತೆನೆ । ಪ್ರಭು ॥
ವಚನಾ ॥ ಅಂತು ಸಂಧಿಕಾಂ ಪದನೂ ೪೮೦ ಕಂ ಮಂಗಳ ಮಹಾಶ್ರೀ ॥

ವಿಷಯ : ಅಲ್ಲಮಪ್ರಭುವಿನ ಕಥೆ.

ವಿಶೇಷ : ಕೊನೆಯಲ್ಲಿ ಗ್ರಂಥಕ್ಕೆ ಸಂಬಂಧಿಸದ ಕೆಲವು ಶ್ಲೋಕಗಳೂ ಕನ್ನಡ ಪದ್ಯಗಳೂ ಇವೆ. ಇದೇ ಕಟ್ಟನಲ್ಲಿ ಭೀಮಸೇನ ವಿಲಾಸ ಎಂಬ ಕೃತಿ ಇದೆ.

939

ಕೆ. ೬೨೧	ಪ್ರಭುಚರಿತ್ರೆ	ಯಕ್ಷಗಾನ
೧೭ ೫″×೧.೫″	?	?
೧–೧೭೪ ಪತ್ರ	೭ ಪಂಕ್ತಿ	೭೦ ಅಕ್ಷರ

ಆದಿ : ಶ್ರೀ x x ವುಲಿಕಲ್ಲು ಗಂಟ್ಟದ ರಾಮಸ್ವಾಮಿ ಪಾದಾರವಿಂದವೇ ಗತಿ ||
ಪ್ರಭುಚರಿತ್ರೆ ಬರೆಯುವದಕ್ಕೆ ನಿರ್ವಿಗ್ಘ್ನಮಸ್ತು ||
ಶ್ರೀಮದ್ಭಾಕಾಂತ್ತರಂಗೆ ಸ್ಥಿತ ನಿಜಸಂಗಂ ಮೌನಿವೃತ್ತಪದ್ಮಭೃಂಗಂ
ಕಾಮಾಂಗಂ ದಹನಬಸಿತಂ ಲೇಪನಾಂಗಂ ಶುಭಾಂಗಂ
ಮಾಯಾದೂರಂ ಜನನರಹಿತಂ ನಿರ್ಮಲಾಂಗಂ ಸರಾಗಂ
ನೀನೆ ಸಾಗಿಸು ಕಂಡ್ಯ ನಿಂನ್ನ ಕೃತಿಯುಂ ನಿರ್ವಿಘ್ನದಿಂದಲ್ಲಮಾ || ೧ ||

ಅಂತ್ಯ : ಯಡೆಯು ಪುರದಲ್ಲಿ ದೃಢದಿಂದ ನೆಲಸುತ್ತ
ಪೊಡವಿಯ ಭಕ್ತರ ಪೊರೆವುತಲೀ
ವುಡುಪತಿಧರನೊಡಗಲಸುವ ಜಪವಂನ್ನು
ನುಡಿದೆನಗಭಯುದಲಿ ತೊಡೆಯನಿಗೇ || ೧೮ ||

ಗ್ರಂ || ಮಂಗಳಂ ಗಿರಿಜಾನಾತ್ತ
ಮಂಗಳಂ ಮೌನಿಪ್ರಿಯ
ಮಂಗಳಂ ಸಿದ್ಧಲಿಂಗೇಶ
ಮಂಗಳಂ ಮುಕ್ತಿಧಾಯಕ
ಮಂಗಳಂ ಮಂಗಳಂ ಅಸ್ತು ಮಂಗಳಂ ಶುಭ ಮಂಗಳಂ || ೧೯ ||

ಕಂ || ಸಂಧಿಯು ಹದಿಮೂರ್ಪದವಿದ
ಕೊಂದಿತ್ತು ನೂರಾರು ಯಲ್ಲಾ ಸಂಧಿಯ ಪದಸಹ
ವೊಂದಾಗೆಣಿಸಲು ಸಾವಿರ
ದಿಂಥಂ ಯೇಳ್ನೂರ ಮ್ಯಾಲೆ ತೊಂಬತ್ತೈದು || ೧ ||

ವ || ಅಂತ್ತು ಸಂದಿ ೧೩ ಕಾಂ, ೧೭೯೫ ಕಂ, ವಚನ ೩೩೨, ಅಂತ್ತೂ ೨೪೬ ।
ಕಂ, ಪ್ರಭು ಚರಿತ್ರೆ ರಾಗಮಾಲೆ ಸಂಪೂರ್ನಂ ಶುಭಮಸ್ತು || ಶ್ರೀ || x x
ಶುಭಕೃತು ಸಂವತ್ಸರದ || ಬಾದ್ರಪದ ಶ ೧ ಮಂಗಳವಾರದಲ್ಲೂ ಪ್ರಭು
ಚರಿತ್ರೆ ಸಂಪೂರ್ನ ಮಂಗಳ ಮಹಾ ಶ್ರೀ ||

ವಿಷಯ : ಅಲ್ಲಮಪ್ರಭುವಿನ ಕಥೆ.

ವಿಶೇಷ : ಮಧ್ಯದಲ್ಲಿ ಒಂದೊಂದು ಪತ್ರ ತ್ರುಟಿತ. ೨೮ ನೆಯ ಪತ್ರದಲ್ಲಿ ಒಂದೂ ವರೆ ಪಂಕ್ತಿ ಬರವಣಿಗೆಯಿದೆ. ೧೯, ೪೩ ಕ್ರಮಾಂಕದ ಎರಡೆರಡು ಪತ್ರಗಳಿವೆ.

940

ಕೆ.ಬಿ. ೩೪೧/೪	**ಪ್ರಭುಚರಿತ್ರೆ**	ಯಕ್ಷಗಾನ
೮.೨″ × ೬.೧″	?	?
೧೮-೬೧ ಪತ್ರ	೨೭ ಪಂಕ್ತಿ	೨೩ ಅಕ್ಷರ

ಆದಿ : ಶುಭಕೃತು ಸಂವತ್ಸರದ ಮಾಘ ಬ ೧೨ ಲ್ಲು ಪ್ರಭುಚೆರಿತ್ರೆ ಯಕ್ಷಗಾನ ದಲ್ಲಿ ಬರೆಯುವದಕ್ಕೆ ಸುಭಮಸ್ತು ॥

ವೃತ್ತ ॥ ಶ್ರೀಮದ್ಭಸ್ಮಾಂಗರಂಗಸ್ತಿತಾ ನಿಜಸಂಗಂ ಮವುನಿ ಹೃತ್ಪದ್ಮ ಭೃಗಂ
ಕಾಮಾಂಗಂ ದಹನ ಭಶಿತ ಲೇಪನಾಂಗಂ ಶುಭಾಂಗಂ
ಮಾಯಾದೂರಂ ಜನನರಹಿತಂ ನಿರ್ಮಾಲಾಂಗಂ ನಿರಂಗಂ
ನೀನೆ ಸಾಲಿಸು ಕಂಡ್ಯ ನಿಂನ ಕೃತಿಯಂ ನಿರ್ವಿಘ್ನದಿಂದಲ್ಲಮಾ ॥ ೧ ॥

ವಚನಾ ॥ ಸರ್ವಾತ್ಮಕನಾದ ಪ್ರಭುವಂ ಧ್ಯಾನಿಸೀ ಮುಂದೆ ಕಥಾ ಸೂಚ ನೆಯಂ ವಿಸ್ತರಿಸಿ ಪೇಳ್ವೆನದೆಂತೆನೇ ॥ ಮಾಲಾ ವೃತ್ತಾ ॥
ಕಾರುಣ್ಯಾಕರಾ ಅಲ್ಲಮಾಪ್ರಭುವಿನಾ ಚರಿತ್ರಮುದರೊಳ್ ಶಿವಂ
ಶ್ರೀ ರುದ್ರಾಣಿಗೆ ನಿಜವಂ ತೋರಿದ ಕಥಾ ಸುತ್ರಾಧಿಯೊಳ್ ನಿರ್ಮಲಂ
ಕಾರುಣ್ಯಾಕೃತಿ ಲೀಲೆದಾಳ್ದ್ದು ನಿರಹಂಕಾರರ್ಗೇ ನಿಜಮೋಕ್ಷಮಂ
ದೋರುತಂ ನೆರೆ ಮಾಯಿಯಂನೂ ಘಳಿವುತ್ತೋರಂತೆ ತಾಂ ಸಿಲ್ಕದೇ ॥

ಅಂತ್ಯ : ಕರುಣಾರಸವೆರದು ಭಕ್ತರಾ
ಚಿರಪಾದದೊಳಗಿಟ್ಟು ಬೇಗ ರಕ್ಷಿವೆನೆಂಬಾ
ತುರತದೊಳು ಹೆಚ್ಚಿ ಹಿಗ್ಗುತಾ
ಸರಸದೋಳ್ಪೆಯುತಹನೇ ಮುಂದೆ ಸಂಧಿಯೂ ಯಿಲ್ಲಿಗೆ ॥ ೨ ॥
ಸಂಧಿಯು ಐದನೇ ಪದಾ ಯಿದ
ಕೊಂದಿದರದಾ ನೂರಮುವ್ವತ್ತೈದನೇ ಹಿಂದಣ
ಸಂದಿಯು ಸಹಾ ಗಣಿಸಲ್ ಪದಾ
ಬಂದೂದು ನಾನಾರ ಮೇಲೆ ಯಂಬತ್ತಿಲ್ಲಿಗೇ ॥ ೩ ॥

ಅಂತು ಸಂದೀ ॥ ೫ ಕ್ಕಂ ಪದನೂ ॥ ನಾನೂರಯಂಬತ್ತಕ್ಕಂ ಮಂಗಳ ಮಾಹಾಶ್ರೀ । ತೋಂಟದ ಶಿದ್ಧಲಿಂಗೇಶ್ವರಸ್ವಾಮಿಗಳವರಾ ಪಾದವೆ ಗತಿ । ಸಂಪೂರ್ನ ಮಂಗಳಾ ಮಹಾಶ್ರೀ ॥

ವಿಷಯ : ಅಲ್ಲಮಪ್ರಭುವಿನ ಕಥೆ.

ವಿಶೇಷ : ಮೋಡಿ ಬರಹ. ಇದರೊಂದಿಗೆ ಕಾಮನಾವಚನಗಳು, ಪ್ರಸಾದ ವಾಕ್ಯ ಮೊದಲಾದ ಇತರ ೭ ಗ್ರಂಥಗಳಿವೆ. ಒಂದೊಂದೂ ಒಂದೊಂದು ವಿಧವಾದ ಬರವಣಿಗೆಯಲ್ಲಿರುವುದರಿಂದ ಇದನ್ನು ಒಂದು ಸಂಕಲನ ಗ್ರಂಥವೆಂದು ಕರೆಯ ಬಹುದು. ಪ್ರಕೃತಕೃತಿಯಲ್ಲಿ ಇರುವ ವಚನಗಳನ್ನು ಕೆಂಪು ಮಸಿಯಲ್ಲಿ ಬರೆದಿರುವುದು ಒಂದು ವಿಶೇಷ.

941

ಕೆ.ಬಿ. ೩೬೯	ಪ್ರಭುಚರಿತ್ರೆ	ಯಕ್ಷಗಾನ
೭.೮"×೫.೮"	ನಂಜುಂಡಾರಾಧ್ಯ	?
೫೦ ಪತ್ರ	೧೩ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಪ್ರಭುಚರಿತ್ರೇ — ನಾಟಕದ ಕಥೇ ಬರೆಯೂವದಕ್ಕೆ ಶುಭಮಸ್ತೂ ||
ಗಣೇಶ್ವರನ ಪ್ರಾರ್ಥನೇ || ಕಂದ ಪದ್ಯಾ || ರಾಗ ನಾಟೀ
ಶ್ರೀಕರ ವರನುತ ಶುಭಕರ
ಪ್ರಾಕಟ ಗೌರೀಕಳತ್ರ ಪಾವನ ಚರಿತ
ಲೋಕೈಕವೀರ ಶಂಕರ
ನೀಂ ಕರುಣಿಶಿ ಕಾವುದೀಶ ಚಂದ್ರಮೌಳೀಶಾ || ೧ ||

x x x x

ಪ್ರಭುಚರಿತ್ರೆಯ ಪೇಳ್ವದಭಿಮಥವು ಪುಟ್ಟಿ ಪಂಡಿತಾರಾಧ್ಯ ವಂಶೋತ್ಪಂನ ನಾದ ಗುರುಶಾಂತಮೂರ್ತಿಯವರ ಪತ್ನಿಯಾದ ನಂಜಾಂಬೆಗರ್ಭಗಂಜಾತ ನಾದಂತ ನಂಜುಂಡಾರಾಧ್ಯನು ನಯದಲ್ಲಿ ಪೇಳ್ದನಿಂದು ಲಾಲಿಪುದೆಲ್ಲ ನೀತಿ ಕೋವಿದರು.

ಅಂತ್ಯ : ಧರೆಯೊಳು ರಾಮಾದ್ರಿಪುರದಿ
ಹರುಷದಿಂದ ನೆಲಶಿ
ಯಿರುವ ವರದಗಣನಾಥದೇವ
ಹರುಷದಿಂದ ಸಲಹೋ ಮುದದೀ
ಬೇಡುವೆ ಸಾಂಬಾ ಸೌಭಾಗ್ಯಕದಂಬಾ || ೮ ||
ತೋಂಗಾ ದಿಗಿ ತೊಂಗಾ ದಿಗ್ಗುಲರೆ ಧಿತ್ತ ಜಣು ತೋಂಮ್ಮಾ ||

ವಿಷಯ : ಅಲ್ಲಮಪ್ರಭುವಿನ ಕಥೆ.

ವಿಶೇಷ : ವೋಡಿ ಅಕ್ಷರ. ತೆಳುವು ಕಾಗದ, ಪತ್ರಗಳಿಗೆ ಕ್ರಮಾಂಕವಿಲ್ಲ

942

ಕೆ.ಬಿ. ೩೪೧.೨	ಪ್ರಭುಚರಿತ್ರೆಯ ಪೀಠಿಕೆ	ಯಕ್ಷಗಾನ
೮.೨" × ೬.೧"	?	?
೭—೧೫ ಪತ್ರ	೨೦ ಪಂಕ್ತಿ	೧೬ ಅಕ್ಷರ

ಆದಿ : ವಚನ ॥ ಯಿಂತೂ ಕಥ ಸೂಚನೆಯಂ ತೋರಿ, ಮುಂದೆ ದೇವತಾ
ಸ್ತ್ರೋತ್ರವುಕ್ಯವಂ ಮಾಳ್ಪವದೆಂತೆನೆ ॥ ಕಂದ ॥
ಗುರುಪದ ಕಮಲವ ನೆನೆವುತ
ಚೆರಲಿಂಗವನೆ ಬೇಡಿ ಶಿವನ ಪ್ರಾರ್ಥಿಶಿ ಶಿವೆಯಂ
ಸ್ಮರಿಸುತ ಗಣಪತಿ
ವಿರರಾಜಂ ವೃಷಗಣರ ಕವಿಗಳನು ನುತಿಬೇಡುವೆ ॥
ವ.... ಹಿಂಗೆ ॥ ಸೂಚನೆಯಂ ತೋರಿ ಯಿಂನ್ನೂ ಶ್ರೀ ಗುರುವಂ ನುತಿಪೆಂ ॥
ರಾಗ ಸೌರಾಷ್ಟ್ರಿಗ ॥ ಅಷ್ಟತಾಳ ॥

ಅಂತ್ಯ : ಭಕ್ತಿಗೆ ಭೀಜವು ಗ್ನಾನಕ್ಕೆ ಬಿತ್ತರಸ
ತಿವಿರತಿ ಪೊಂಣು ನಿಜರಾಘವೆತ್ತಿ ರಂಜಿಪುದು
ಪ್ರಭುವಿನ ಅತ್ಯುಂನತ ಲೀಲಾರಾಘವ ॥.... ಚರಿತೆಯಾ ॥ ೬ ॥
ವೋದಿ ಬರದರ್ತ್ಥಗೆಯುಲೊ
ನಿಥರದಿಂದೇಕಚಿತ್ತದಿಂ ಬೆಸಗೊಳ್ಳೆ
ಮೂದೇವರೊಡೆಯನಲ್ಲಮ
ನಾಧರಿಸುತ ಭಕ್ತಿ ಮುಕ್ತಿ ಸಂಪದವನೀವನೂ ॥ ೭ ॥
ವ ॥ ಯಿಂತು ವಿಸ್ಥರಿಶಿ ಸಮುದ್ರ ವರ್ನಿಸೆ ಬೇಕಿಲ್ಲಿಗೆ ॥
ಕಂದ ॥ ಸಂದ್ದಿಯಾ ವಂಥಿದರೊಳ್ಪದ
ಬಂಧಿವುವೈವತ್ತುನಾಲ್ಕು ಕಂದಂಗೂಡಿ
ಯಿಂದಿವರೊಳ್ ಸ್ಥಿತಿಯು
ಮುಂದಾ ಶಿಂಧುವನೊರ್ನಿಪೆನು ಸಲಹೊ ನಂದೀಶ್ವರನೇ ॥
ವಚನ ॥ ಪೀಠಿಕೆ ಪ್ರಕರಣಾ ಸಮುಸ್ತು ಮುಂಗಳ ಮಹಾಶ್ರೀ ॥

ವಿಷಯ : ಅಲ್ಲಮಪ್ರಭುಚರಿತ್ರೆಯ ಪೀಠಿಕೆ.

ವಿಶೇಷ : ಅಸಮಗ್ರ. ಮೋಡಿ ಅಕ್ಷರ. ಇದಾದನಂತರ ೧೫,೧೬ನೆಯ ಪತ್ರಗಳಲ್ಲಿ ಮಂಗಳಾರತಿ ಪದಗಳಿವೆ. ಈ ಗ್ರಂಥದೊಂದಿಗೆ ಶಿವಾಷ್ಟೋತ್ತರ ಶತನಾಮ (ಸಂಸ್ಕೃತ), ಪ್ರಭುಚರಿತ್ರೆ ಮೊದಲಾದ ಇತರ ೭ ಗ್ರಂಥಗಳಿವೆ.

943

ಕೆ. ೭೫/೧ **ಪ್ರಭುದೇವರ ಟೀಕಿನ ವಚನ** **ವಚನ, ಟೀಕು**

೧೦.೭"×೨.೨" ಮಹಲಿಂಗದೇವ ೧೪೩೦

೧–೭೯ ಪತ್ರ ೧೭ ಪಂಕ್ತಿ ೭೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಪ್ರಭುದೇವರು ನಿರೂಪಿಸಿದ ಟೀಕಿನ ವಚನಂಗಳು ॥

ಗದ್ಯ॥ ಸ್ವಸ್ತಿಸಮಸ್ತ ಭುವನ ಜನ ತಿಮಿರಹರಣ ಕಾರಣ ಸ್ವರೂಪರುಂ। ಭಕ್ತಿದೇಹಿಕ ದೇವರುಂ। ಭಕ್ತಿವತ್ಸಲರುಂ। ಸರ್ವಾಂಗ ಪ್ರಾಣಲಿಂಗಮೂರ್ತಿ ವಿಲಾಸರುಂ। ಪುಲಿಗೆಱೆಯ ಪುರವರಾಧೀಶ್ವರರುಂ। ಆ ಪೂರ್ವ್ವ ಸ್ವಯಂಭುಪ್ರಸಂನ ಚೆಂನದಕ್ಷಿಣ ಶ್ರೀ ಸೊಮನಾಥದೇವರ ದಿವ್ಯಶ್ರೀ ಪಾದಪದ್ಮಾರಾಧಕರುಂ ತ್ರಿಖಾಂಡನಿಷ್ಟರುಂ। x x x x ಸಚ್ಚಿದಾನಂದ ನಿರಂಜನ ಪರಂಜ್ಯೋತಿ ಸ್ವರೂಪರುಮಪ್ಪ ಗುರುಮೂರ್ತ್ತಿ ಜಗದಾರಾಧ್ಯರುಮಪ್ಪ ಮಹಾಲಿಂಗದೇವರ ಅನಾದಿ ಸಂಸಿದ್ಧ ಗುರುಕುಳದನ್ವಯವೆಂತೆಂದೊಡೆ ಪ್ರಥಮದಲ್ಲಿ x x x ಶಿಲೆಯೊಳಗಣ ಪಾವಕನಂತೆ x x ಗೊಹೇಶ್ವರಾ ನಿಂಮ ಶರಣ ಸಂಬಂಧ ॥

ಟೀಕು ॥ ಶಿಲೆಯೊಳಗಿಪ್ಪ ಅಗ್ನಿ ವ್ಯೆದೋಱದ ಹಾಂಗೆ ಪರಬ್ರಹ್ಮವು ಪಿಂಡಸ್ಥವಾಗಿದ್ದು ಕಾಣಿಸಬಾರದೆಂಬುದೀಗ। ಶಿಲೆಯೊಳಗಣ ಪಾವಕನಂತೆಯೆಂಬ ಶಬ್ದಕ್ಕರ್ತ್ಥ ॥

ಅಂತ್ಯ : ಗದ್ಯ॥ ಸ್ವಸ್ತಿಸಮಸ್ತ ಭುವನಜನ ತಿಮಿರಹರಣ ಕಾರಣಸ್ವರೂಪರುಂ x x ಮಹಾಲಿಂಗದೇವರು ತಂಮ ದಿವ್ಯ ಜ್ಞಾನಾನಂದ ಸಿದ್ಧವರ ಪ್ರಸಂನ ಪ್ರಸಾದವನೂ ನಿಜ ತತ್ಶಿಷ್ಯ ಭಕ್ತಿಭಂಡಾರಿ ಜಕ್ಕಂಣಾಚಾರ್ಯ್ಯಂಗೆ ಸತ್ಪ್ರೇಮ ಮಹಾನುಭಾವ ಸಂಬೋದೆ ಸಂಬಂಧ ನಿರೂಪಣ ಕಾರಣಾರ್ತ್ಥ ವಿರಚಿತಮಪ್ಪ ಪ್ರಭುದೇವರ ಷಡುಸ್ಥಲದೊಳು ಐಕ್ಯನವರ್ಗ್ಗಂ ಷಷ್ಟಮಂ

ಪರಿಚ್ಛೇದಃ ಶ್ರೀ॥ ಶ್ರೀಮದ್ದೇಶಿಕ ಷಟ್ಸ್ಥಲ ಚಕ್ರವರ್ತಿಬ್ರಹ್ಮಾನಂದಪರಶಿವ ಮೂರ್ತಿ ವಿರಕ್ತಶಿಖಾಮಣಿ ಮಾಯಾಕೋಳಾಹಾಳ ಪ್ರಭುದೇವರು ನಿರೂಪಿಸಿದ ವಚನಂಗಳು ಸಮಾಪ್ತ ಮಂಗಳ ಮಹಾಶ್ರೀ ಅಂತು ಸ್ಥಲ ೬ಕ್ಕಂ ಸಂಬಂಧಿಸಿದ ವಚನಂಗಳು ೬೯೪ ಕ್ಕಂ ॥ ಮಂಗಳ ಮಹಾಶ್ರೀ

ವಿಷಯ : ಷಟ್ಸ್ಥಲ ಸಿದ್ಧಾಂತ ಬೋಧಕ ಪ್ರಭುದೇವರ ವಚನಗಳಿಗೆ ಟೀಕೆ.

ವಿಶೇಷ : ಸಮಗ್ರ. ೫೦ ಮತ್ತು ೫೭ ನೆಯ ಪತ್ರಗಳು ಸ್ವಲ್ಪ ತ್ರುಟಿತವಾಗಿವೆ. ಕೊನೆಯ ನಾಲ್ಕು ಸಾಲಿನಲ್ಲಿ ಅಘೋರ ಮಂತ್ರಜಪವನ್ನು ಬರೆದು ಮುಗಿಸಿದೆ. ಇದರೊಂದಿಗೆ 'ಹಿರಿಯ ಮಂತ್ರಗೋಪ್ಯ' ಮುಂತಾದ ಇತರ ಹನ್ನೆರಡು ಗ್ರಂಥಗಳಿವೆ. ಶಕಟರೇಫದ ಪ್ರಯೋಗವಿದೆ.

944

ಕೆ ೩೬೪	**ಪ್ರಭುದೇವರ ಟೀಕಿನ ವಚನ**	ವಚನ, ಟೀಕು
೯.೨" × ೧.೮"	ಮಹಲಿಂಗದೇವ	೧೪೩೧
೧—೨೦೧ ಪತ್ರ	೧೦ ಪಂಕ್ತಿ	೫೯ ಅಕ್ಷರ

ಆದಿ : ಸ್ವಸ್ತಿ ಸಮಸ್ತ ಭುವನಜನ ತಿಮಿರ ಹರಣ ಕಾರಣ ಸ್ವರೂಪರುಂ। ಭಕ್ತಿ ದೇಹಿಕ ದೇವರುಂ ಭಕ್ತವತ್ಸಲರುಂ ಸರ್ವಾಂಗ ಪ್ರಾಣಲಿಂಗಮೂರ್ತಿ ವಿಲಾಸರುಂ। ಪುಲಿಗೆಱೆಯ ಪುರವರಾಧೀಶ್ವರರುಂ। X X X X ಪಿಂಡ ಸ್ಥಲವಾದುದೂ॥ ಆ ಸ್ಥಲದನುಭಾವದ ವಚನ॥ ಶಿಲೆಯೊಳಗಣ ಪಾವಕ ನಂತೆ ಉದಕದೊಳಗಣ ಪ್ರತಿಬಿಂಬದಂತೆ ಬೀಜದೊಳಗಣ ವೃಕ್ಷದಂತೆ। ಶಬ್ದದೊಳಗಣ............ಸಂಮಂಥ॥

ಟೀಕು॥ ಶಿಲೆಯೊಳಗಿಪ್ಪ ಅಗ್ನಿ ಮಯಿದೋಱದ ಹಾಂಗೆ ಪರಬ್ರಹ್ಮವು ಪಿಂಡಸ್ಥ ವಾಗಿದ್ದುರ್ದ ಕಾಣಿಸಬಾರದೆಂಬುದೀಗ ಶಿಲೆಯೊಳಗಣ ಪಾವಕನಂತೆ ಯೆಂಬ ಶಬ್ದಕ್ಕರ್ತ್ಥ। ಆಉದಾನೊಂದು ಪ್ರತಿಬಿಂಬವು ಉದಕದೊಳಡಗಿದ್ದುರ್ದ ಉದ ಕದ ಗುಣಧರ್ಮ ಕರ್ಮವ ಹೊದ್ದದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥ ವಾಗಿದ್ದುರ್ದ ಆ ಪಿಂಡದ ಗುಣಧರ್ಮ ಕರ್ಮವ ಹೊದ್ದದಿಪ್ಪುದೀಗ ಉದಕ ದೊಳಗಣ ಪ್ರತಿಬಿಂಬದಂತೆ ಯೆಂಬ ಶಬ್ದಕ್ಕರ್ತ್ಥ। ಬೀಜದೊಳಗಿಪ್ಪ ವೃಕ್ಷದ ಹಾಂಗೆ ಆ ಪರಬ್ರಹ್ಮವು ಪಿಂಡಮಧ್ಯದಲ್ಲಿ ಗೂಢವಾಗಿಪ್ಪುದೆಂಬುದೀಗ ಬೀಜದೊಳಗಣ ವೃಕ್ಷದಂತೆ ಎಂಬ ಶಬ್ದಕ್ಕರ್ತ್ಥ। ಶಬ್ದದೊಳಗೆ ನಿಃಶಬ್ದ

ಏದ್ದುದನೂ ಭೇದಿಸಬಾರದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥವಾಗಿದ್ದುರ್ ಅಭೇದ್ಯವಾಗಿಪ್ಪುದೆಂಬುದೀಗ ಶಬ್ದದೊಳಗಣ ನಿಃಶ್ಯಬ್ದದಂತೆ ಯೆಂಬ ಶಬ್ದಕ್ಕರ್ತ್ಥ। ಇದು ಪಿಂಡಸಂಬಧ ನಿರ್‍ವ್ವಚನ ॥ ೧ ॥

ಅಂತ್ಯ : ....ಯ್ಯಾರ್ತ್ಥ ॥ ೮೯ ॥

ಗದ್ಯ॥ ಸ್ವಸ್ತಿ ಸಮಸ್ತ ಭುವನಜನದ ತಿಮಿರ ಹರಣ ಕಾರಣ ಸ್ವರೂಪರುಂ ಭಕ್ತಿದೇಹಿಕ ದೇವರುಂ। ಭಕ್ತಿವತ್ಸಲರುಂ। ಸರ್‍ವ್ವಾಂಗ ಪ್ರಾಣಲಿಂಗ ಮೂರ್ತ್ತಿ ವಿಲಾಸರುಂ। X X X X ಭಕ್ತಿಭಂಡಾರಿ ಜಕ್ಕಣಾಚಾರ್ಯಂಗೆ। ಸತ್ಪ್ರೇಮ ಮಹಾನುಭಾವ ಸಂಬೋಧ ಸಂಬಂಧ ನಿರೂಪಣ ಕಾರಣಾರ್ತ್ಥ ವಿರಚಿತಮಪ್ಪ ಪ್ರಭುದೇವರ ಷಟ್‌ಸ್ಥಲದೊಳು ಐಕ್ಯನ ವರ್ಗ್ಗ ಷಷ್ಠಮ ಪರಿಚ್ಛೇದಃ ॥

ಯಿತಿ ತ್ರಿಪದ ವಾಕ್ಯಾರ್ತ್ಥ ಪ್ರಮಾಣಜ್ಞೇನ ಧಿಮತಾ ಅಕ್ಷರಾತ್ಯಾರ್ಯ್ಯ ವರ್ಯ್ಯೆ ಸುವ್ಯಕ್ತಂ ಲೇಖನ॥

ವ್ಯಯ ಸಂವತ್ಸರದ ಮಾರ್ಗ್ಗಶಿರ ಶು ೫ಯಲ್ಲು ಗುರುಶಾಂತದೇವರಿಗೆ ಮಲ್ಲನು ಬರದ॥ ಪ್ರಭುದೇವರ ಟೀಕಿನ ವಚನಕ್ಕೆ ನಮಸ್ತೆ ನಮಸ್ತೆ ನಮೋಸ್ತು ಐಕ್ಯಸ್ಥಲ ಸಮಾಪ್ತಂ ಮಂಗಳಮಹಾಶ್ರೀ

ವಿಷಯ : ಷಟ್ಸ್ಥಲ ಸಿದ್ಧಾಂತ ಬೋಧಕ ಪ್ರಭುದೇವರ ವಚನಗಳಿಗೆ ಟೀಕು.

ವಿಶೇಷ : ಶಕಟರೇಫವನ್ನು ಬಳಸಿದೆ. ೨ನೆಯ ಮತ್ತು ೨೦೦ನೆಯ ಪತ್ರಗಳು ಲುಪ್ತವಾಗಿವೆ. ಈ ಗ್ರಂಥ ಮುಗಿದಮೇಲೆ ಇದೇ ಕಟ್ಟಿನಲ್ಲಿ ೨೫ ಸಂಸ್ಕೃತ ಶ್ಲೋಕಗಳಲ್ಲಿ 'ನವಚಕ್ರ ಗ್ರಂಥವೂ' ಎಂಬ ಕೃತಿ ಇರುವುದಲ್ಲದೆ ಬೇರೆ ಗ್ರಂಥದ ನಾಲ್ಕು ಸಂಸ್ಕೃತ ಶ್ಲೋಕಗಳು ಸೇರಿಕೊಂಡಿವೆ. ಗ್ರಂಥದ ಆದಿಯ ಮೂರು ಪತ್ರಗಳನ್ನು ಮತ್ತು ಅಂತ್ಯದ ನಾಲ್ಕು ಪತ್ರಗಳನ್ನು ಅಲ್ಲಲ್ಲಿ ಹುಳು ತಿಂದಿದೆ.

945

ಕೆ. ೪೪೯	**ಪ್ರಭುದೇವರ ಟೀಕಿನ ವಚನ**	ಗದ್ಯ
೮.೩" × ೧.೫"	ಮಹಲಿಂಗದೇವ	೧೪೩೦
೧–೩೭೩ ಪತ್ರ	೭ ಪಂಕ್ತಿ	೪೦ ಅಕ್ಷರ

ಆದಿ : ಪ್ರಭು ದೇವರ ಟೀಕಿನ ವಚನ ॥ ಗದ್ಯ ॥ ಸ್ವಸ್ತಿ ಸಮಸ್ತ ಭುವನಜನ ತಿಮಿರಹರ ಕಾರಣ ಸ್ವರೂಪರುಂ ಭಕ್ತದೇಹಿಕ ದೇವರುಂ ಭಕ್ತಿವತ್ಸಲರುಂ ಸರ್ವಾಂಗ ಪ್ರಾಣಲಿಂಗ ಮೂರ್ತಿ ವಿಲಾಸರುಂ ಪುಲಿಗೆರೆಯು ಪುರವರಾಧೀಶರುಂ x x x x x ಮುಂದೆ ಪ್ರಥಮದಲ್ಲಿ ಪಿಂಡಸ್ಥಲ ॥ ಶಿಲೆಯೊಳಗನ ಪಾವಕದಂತೆ । ಉದಕದೊಳಗನ ಪ್ರತಿಬಿಂಬದಂತೆ । ಬೀಜದೊಳಗಣ ಉೃಕ್ಷದಂತೆ ಶಬ್ದದೊಳಗಣ ನಿಃಶಬ್ದದಂತೆ। ಗುಹ್ಯೇಶ್ವರಾ ನಿಂಮ ಶರಣ ಸಂಬಂಧ ॥

ಟೀಕು ॥ ಶಿಲೆಯೊಳಗಿಪ್ಪ ಅಗ್ನಿ ವ್ಯೆದೋರದ ಹಾಂಗೆ । ಪರಬ್ರಹ್ಮಉ ಪಿಂಡಸ್ಥವಾಗಿರ್ದ್ದು ಕಾಣಿಸಬಾರದೆಂಬುದೀಗ ಶಿಲೆಯೊಳಗಣ ಪಾವಕನಂತೆ ಯೆಂಬುದಕ್ಕರ್ಥ x x x x ಆ ಪರಬ್ರಹ್ಮಉ ಪಿಂಡಸ್ಥವಾಗಿರ್ದ್ದು ಅಭೇದ್ಯವಾಗಿಪ್ಪುದೆಂಬುದೀಗ ಶಬ್ದದೊಳಗಣ ನಿಃಶಬ್ದದಂತೆ ಯೆಂಬುದಕ್ಕರ್ಥ । ಯಿನು ಪಿಂಡಸಂಭವ ನಿರ್ವಚನ ॥ ೧ ॥

ಅಂತ್ಯ : ॥ ಟೀ ॥ ಬ್ರಹ್ಮತತ್ವದ ಸುಚಿತ್ತವೆಂಬ ಕಕ್ಷದಲ್ಲಿ ಆಚಾರ ಗ್ರಹಣವಾಯಿತ್ತೆಂಬುದೀಗ । ಕಕ್ಷದಲ್ಲಿ ಲಿಂಗವ ಧರಿಸಿಕೊಂಡಾತನು ಬ್ರಹ್ಮನೆಂಬ ಶಬ್ದಕ್ಕರ್ಥ । x x x x ಉಪಮಾತೀತತ್ವದ ಸರ್ವಾಂಗದಲ್ಲಿ ಮಹಾಲಿಂಗ ಗ್ರಹಣವಾಯಿತ್ತೆಂಬುದೀಗ ಲಿಂಗಸೆಜ್ಜೆಯಲ್ಲಿ ಲಿಂಗವಧರಿಸಿಕೊಂಡಾತನುಉಪಮಾತೀತನು ಎಂಬ

ವಿಷಯ : ಷಟ್ಸ್ಥಲ ಸಿದ್ಧಾಂತ ಬೋಧಕ ಪ್ರಭುದೇವರ ವಚನಗಳಿಗೆ ಟೀಕು.

ವಿಶೇಷ : ೨, ೩ ನೆಯ ಪತ್ರಗಳ ಒಂದು ಪಕ್ಕ ಸೀಳಿದೆ. ೨೪೪ ನೆಯ ಪತ್ರ ಮುರಿದಿರುವುದರಿಂದ ಹೊಲಿದಿದೆ. ೨೪೫ ನೆಯ ಪತ್ರದ ಒಂದು ಪಕ್ಕ ಮುರಿದಿದೆ. ೩೭೨ ಮತ್ತು ೩೭೩ ನೆಯ ಪತ್ರಗಳ ಪಕ್ಕಗಳು ಸ್ವಲ್ಪ ಸ್ವಲ್ಪ ಮುರಿದಿವೆ.

946

ಕೆ.ಎ. ೧೦೪	**ಪ್ರಭುದೇವರ ಟೀಕಿನ ವಚನ**	ವಚನ, ಟೀಕು
೧೨.೫"×೭.೭"	ಮಹಲಿಂಗದೇವ	೧೪೩೦
೧—೧೧೨ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಪ್ರಭುದೇವರು ನಿರೂಪಿಸಿದ ಟೀಕಿನ ವಚನಂಗಳು

ಗದ್ಯ ॥ ಸ್ವಸ್ತಿ ಸಮಸ್ತ ಭುವನಜನ ತಿಮಿರ ಹರಣ ಕಾರಣ ಸ್ವರೂಪರುಂ। ಭಕ್ತಿದೇಹಿಕ ದೇವರುಂ। ಭಕ್ತಿವತ್ಸಲರುಂ। ಸರ್ವಾಂಗ ಪ್ರಾಣಲಿಂಗ ಮೂರ್ತಿ ವಿಲಾಸರುಂ ಪುಲಿಗೆರೆಯ ಪುರವರಾಧೀಶ್ವರರುಂ x x x x ಆ ಶ್ರೀಗುರುಸ್ವಾಮಿ ತಮ್ಮ ಪರಮಜ್ಞಾನಾನುಭಾವ ಪ್ರಸನ್ನ ಪ್ರಕಾಶ ದಿಂದ ಷಟ್ಸ್ಥಲವನು ಪ್ರಭುದೇವರು ವಚನಂಗಳಿಂದ ಸಂಕಲ್ಪಿಸಿ ಸುಲಲಿತ ವಾಕ್ಯಾಮೃತವಾಗಿ ಆ ವಚನಂಗಳನು ಟೀಕಿಸಿ ಪರಮಾರ್ಥ ತತ್ವಬೋಧೆ ಯನು ನಿರೂಪಿಸಿದ ಭೇದವೆಂತಿದ್ದೂದೆಂದೊಡೆ ಮುಂದೆ ಪ್ರಥಮದಲ್ಲಿ ಪಿಂಡಸ್ಥಲ ವಚನಂಗಳು :—'ಶಿಲೆಯೊಳಗಣ ಪಾವಕನಂತೆ, ಉದಕದೊಳ ಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ ಶರಣ ಸಂಬಂಧ'

ಟೀ ॥ ಶಿಲೆಯೊಳಗಿರ್ಪ ಅಗ್ನಿ ವ್ಯೈದೋಱದ ಹಾಂಗೆ ಪರಬ್ರಹ್ಮವು ಪಿಂಡಸ್ಥ ವಾಗಿರ್ದು ಕಾಣಿಸಬಾರದೆಂಬುದೀಗ। ಶಿಲೆಯೊಳಗಣ ಪಾವಕನಂತೆ ಯೆಂಬ ಶಬ್ದಕ್ಕರ್ಥ x x x x ಶಬ್ದದೊಳಗೆ ನಿಶ್ಶಬ್ದವಾಗಿರ್ದು ದನು ಭೇದಿಸಬಾರದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಅಭೇದ್ಯವಾಗಿರ್ಪುದೆಂಬುದೀಗ ಶಬ್ದದೊಳಗಣ ನಿಶ್ಶಬ್ದದಂತೆ ಯೆಂಬುದ ಕ್ಕರ್ಥ.

ಅಂತ್ಯ : ಟೀ ॥ ಪರಮಜ್ಞಾನಿಯನು ಪರಬ್ರಹ್ಮವು ಬಂದು x x x x ಗುಹೇ ಶ್ವರನ ಬೇಱೆ ಅಱಸಲಿಲ್ಲವೆಂಬ ಶಬ್ದಕ್ಕರ್ಥ ॥ ೧೦೬ ॥

ಮೂ ॥ ನೆನಹ ನೆನವ ಮನದಲಿಲ್ಲ ತನುವಿನಾಸಿ ಮುನ್ನಿಲ್ಲ ಮನ ಮನವ ನೊಳಕೊಂಡ ಘನ ಘನವನೆಂತೆಂಬೆ ತನ್ನಲ್ಲಿ ತಾನೆಯಾಯಿತ್ತೂ ನೆನೆಯ ಲಿಲ್ಲದನಿಂದ ನಿರಾಳ ಅನಾಗತವಾದುದಕಂ

ವಿಷಯ : ಷಟ್ಸ್ಥಲ ಸಿದ್ಧಾಂತ ಬೋಧಕ ಪ್ರಭುದೇವರ ವಚನಗಳಿಗೆ ಟೀಕು.

ವಿಶೇಷ : ಶಕಟರೇಫದ ಬಳಕೆಯಿದೆ. ಇದರಲ್ಲಿ ೧೦೬ ವಚನಗಳಿಗೆ ಮಾತ್ರ ಟೀಕೆ ಸಂಪೂರ್ಣವಾಗಿದ್ದು ೧೦೭ ನೆಯ ವಚನ ಆರಂಭವಾಗಿದೆ. ಉಳಿದ ವಚನ ಗಳ ಟೀಕೆಯು ಕೆ. ಎ. ೧೮೯ ರಲ್ಲಿ ಪೂರ್ಣವಾಗಿದೆ. ಪ್ರಕೃತ ಗ್ರಂಥದ ಆದಿಯ ಐದಾರು ಪತ್ರ ಮತ್ತು ಅಂತ್ಯದ ಐದಾರು ಪತ್ರಗಳನ್ನು ಅಲ್ಲಲ್ಲಿ ಹುಳು ತಿಂದಿದೆ.

947

ಕೆ.ಬಿ. ೩೭೯/೧ **ಪ್ರಭುದೇವರ ಟೀಕಿನ ವಚನ** ವಚನ, ಟೀಕು

೧೧.೬"×೩.೮" ಮಹಲಿಂಗದೇವ ೧೪೩೦

೧–೨೪೬ ಪತ್ರ ೧೧ ಪಂಕ್ತಿ ೩೮ ಅಕ್ಷರ

ಆದಿ: ಶ್ರೀ ಗುರ ರುದ್ರಸ್ವಾಮಿ ಪಾದಪದ್ಮಂಗಳೆ ಗತಿಃ ॥ x x ಪ್ರಭುವಿನ ಟೀಕಿನ ಪುಸ್ತಕಕ್ಕೆ ಶೋಭನಮಸ್ತು ॥ ಸರ್ವ್ವಶಾಂತಿಮಸ್ತು ॥ ಪಿಂಡಸ್ಥಲ॥

ಗದ್ಯಾ॥ ಸ್ವಸ್ತಿ ಸಮಸ್ತ ಭುವನ ಜನದ ತಿಮಿರ ಹರಣ ಕಾರಣ.... ಪರುಂ। ಭಕ್ತ ದೇಹಿಕ ದೇವರುಂ । ಭಕ್ತವತ್ಸಲರಂ । ಸರ್ವ್ವಾಂಗ ಪ್ರಾಣಲಿಂಗ ಮೂರ್ತ್ತಿ ವಿಲಾಸರುಂ। ಪುಲಿಗೇರಿಯ ಪುರವರಾದೀಶರುಂ ಆ ಪೂರ್ವ ಸ್ವಯಂಭು.... ಸಂನ ಚೆಂನ ದಕ್ಷಿಣ ಶ್ರೀ ಸೋಮನಾಥ ದೇವರ ದಿವ್ಯಾ x ಎ x x x ಜಗದಾರಾಧ್ಯರುಮಪ್ಪ ಮಹಾಲಿಂಗದೇವರ ಅನಾದಿ ಸಂಸಿದ್ಧ ಗುರಕುಳ ದನ್ವಯವೆಂತೆದೊಡೆ । x x x x (೨ ನೆಯ ಪತ್ರ) ಪ್ರಥಮದಲ್ಲಿ ಪಿಂಡಸ್ಥಲವಾದುದೂ ॥ ಪಿಂಡಸ್ಥಲದ ವಚನಾ ॥ ಶಿಲೆಯೊಳ ಗಣ ಪಾವಕ ನಂತೆ। ಉದಕದೊಳಗಣ ಪ್ರತಿಬಿಂಬದಂತೆ। ಬೀಜದೊಳಗಣ ವೃಕ್ಷ ದಂತೆ। ಶಬ್ದದೊಳಗಣ ನಿಃಶಬ್ದದಂತೆ। ಗೊಹೇಶ್ವರ ನಿಂಮ್ಮ ಶರಣ ಸಂಮಂದಲೂ ॥

ಟೀಕೂ ॥ ಶಿಲೆಯೊಳಗಿಪ್ಪ ಅಗ್ನಿವ್ಯೆದೋರದ ಹಾಂಗೆ ಪರಬ್ರಹ್ಮಉ ಪಿಂಡಸ್ಥಲವಾಗಿದ್ದೂ । ಕಾಣಬಾರದೆಂಬುದೀಗಾ । x x x x x ಶಬ್ದ ದೊಳಗೆ ನಿಃಶಬ್ದವಿದ್ದುದನೂ । ಭೇದಿಸಬಾರದ ಹಾಂಗೆ। ಪರಬ್ರಹ್ಮಉ ಪಿಂಡಸ್ತವಾಗಿದ್ದೂ । ಅಭೇದ್ಯವಾಗಿಪ್ಪುದೀಗಾ। ಶಬ್ದದೊಳಗಣ ನಿಃ ಶಬ್ದದಂತೆ ಯಂಬ ಶಬ್ದಕ್ಕರ್ಥಾ ॥ ೪ ॥

ಅಂತ್ಯ : (೨೪೪ ನೆಯ ಪತ್ರ) ಬಯಲ ಬೆರಗಿನ ಸುಖದ ಸವಿಯ ಬೆರಗಲ್ಲದೆ ಕಾಣೆ ನೆಂಬ ನುಡಿಗೆಡೆಯ ಕಾಣೆ। ಕುರುಹುಗೆಟ್ಟರಿವ ನೆರೆಯರಿದು ಬೆರಸಿದನೆಂಬ। ಬರಿ ನುಡಿಯ ನುಡಿಗೆ ನಾಚಿದನ್ಯೆಯ್ಯಾ ಗೊಹೇಶ್ವರಾ ॥

ಟೀಕೂ ॥ ಅರಿವ ನೆರೆಯದು ಅರಿದೇವಾನರಿದೆನೆಂಬ ಸುಖವ ತನಗೆ ತಾ ನುಡಿದುಕೊಂಡರೆ । ಅದೇ ಭಿಂನವೆಂದರಿದೂ । ನಿಃಶಬ್ದ ವ್ಯೆಧಿಯಾಗಿ। ಆ ನಿಃಶಬ್ದ ವ್ಯೆಧಿಯಾದ ನಿಲವನು । ನಿಃಶಬ್ದ ವ್ಯೆಧಿಯೆಂದು ಸಿನೆಯರಿ ಯದೆ ಮಹಾಲಿಂಗೈಕ್ಯನು ಮಹಾಘನ ನಿರಾಳ ಲಿಂಗವೇ ಯಾಗಿದ್ಧನೆಂಬು ದೀಗಾ । ಈ ವಚನದ ತಾತ್ಪರ್ಯ್ಯಾರ್ಥಾ ॥ ೮೯ ॥

ಸ್ವಸ್ತಿ ಸಮಸ್ತ ಭುವನ ಜನದ ತಿಮಿರ ಹರಣ ಕಾರಣ x x x x ಮಹಾ ಲಿಂಗದೇವರು ತಂಮ ದಿವ್ಯಾಜ್ಞಾನಾನಂದ ಸಿದ್ಧವರ ಪ್ರಸಂನ ಪ್ರಸಾದ ವನೂ। ನಿಜ ಸತ್ಯಸ್ಯ ಭಕ್ತಿಭಂಡಾರಿ ಜಕ್ಕಂಣಾಯ್ಯರ್ಗಂಗೆ ಸತ್ರೀಮ ಮಹಾನುಭಾವ ಸಂಭೋದೆ ಸಂಮಂಧ ನಿರೂಪಣ ಕಾರಣಾರ್ಥ ವಿರಚಿತ ಮಪ್ಪ ಪ್ರಭುದೇವರ ಷಡುಸ್ಥಲದೊಳೂ। ಐಖ್ಯನ ವರ್ಗಶ್ರೆಷ್ಟಮಃ ಪರಿ ಛೇದಃ ಸಮಾಪ್ತ ಸಂಪೂರ್ಣ ಮಂಗಳ ಮಹಾಶ್ರೀ x x x x ಈ ಪ್ರಭುದೇವರ ವಚನ ವ್ಯಾಖ್ಯಾನಂಗಳನೂ ಹೇಳಿದವರಿಗೆಯೂ। ಕೇಳಿದ ವರಿಗೆಯೂ ಮಂಗಳ ಮಹಾ ಜಯತೂ॥ ಶ್ರೀ॥ ಶ್ರೀ ಗುರು ಪ್ರಸಂನ। ನ್ರುಪ ಶಾಲಿವಾಹನ ಸಕಉ। ೧೭೧೩ ಕ್ಕೆ ಸಲ್ಲುವ। ವಿರೋದಿ ಕ್ರುತು ನಾಮ ಸಂ॥ ಶ್ರವಣ ಬ॥ ೯ ಸೋಮೂವಾರ ಹಗಲಿನ ಐದು ತಾಸೂ ಕ್ರುಷ್ಟ್ಣಪಕ್ಷ।....ನ ಹೊಯ್ರ್ಯಾ। ರೋಹಿಣಿ ನಕ್ಷತ್ರ। ಯರಡನೆ ಚರಣದಲ್ಲು॥ ಶ್ರೀ ಗುರು ಸಶ್ಚಿದಾನಂದ ಸ್ವರೂಪನಾದ। ಪ್ರಭುಸ್ವಾಮಿ ಗಳು ನಿರೋಪಿಸಿದಂತ್ತ। ಪ್ರಭುಟೀಕಿ ವೇಕ್ಯಾನ ಪುಸ್ತಕಉ ಸಂಪೂರ್ಣ ವಾಗಿ। ಬರವದು। ಮುಗಿದಂತ್ತ ಧಿವಸದ ಕಟ್ಟಳಿ ವಿವರಉ। ಸಮಸ್ತ ಮಂಗಳ ಮಹಾಶ್ರೀ॥

ವಿಷಯ : ಷಟ್ಸ್ಥಲ ಸಿದ್ಧಾಂತ ಬೋಧಕ ಪ್ರಭುದೇವರ ವಚನಗಳಿಗೆ ಟೀಕು.

ವಿಶೇಷ : ಕೆಲವು ಪತ್ರಗಳ ಒಂದೊಂದು ಕಡೆ ಅಲ್ಲಲ್ಲಿ ಹುಳು ತಿಂದಿದೆ. ೨೪೭–೨೬೫ರ ವರೆಗಿನ ಪತ್ರಗಳಲ್ಲಿ ವಸ್ತು ನಿರ್ದೇಶ ಸ್ಥಲವೆಂಬ ಸಂಸ್ಕೃತ ಗ್ರಂಥವಿದೆ.

948

ಕೆ. ೩೫೪	**ಪ್ರಭುದೇವರ ಪುರಾಣ**	ವಿವಿಧ ಷಟ್ಪದಿ
೭.೯ X೧.೬″	ಎಳಂದೂರು ಹರೀಶ್ವರ	ಸು.೧೬೦೬
೧–೧೦೬ ಪತ್ರ	೯ ಪಂಕ್ತಿ	೪೦ ಅಕ್ಷರ

ಆದಿ : ಅಲ್ಲಮಾ ಪ್ರಭು ದೇವರ ಪುರಾಣ ಬರುವುದಕ್ಕೆ ಸುಭಾಮಸ್ತು॥ ನಿರ್ವಿಘ್ನ ಮಸ್ತು॥ ರಾಗ। ಶಂಕರ ಭರಣಾ।

ಪರಿವರ್ಧಿನಿ॥ ಶ್ರೀಮತ್ಪ್ರಭುದೇವನ ಚಿತ್ಕ್ರುತಿಯು
ತ್ರೀಮದೊಳೊಲ್ದಾರಿಸಿ ಶಿವಭಕ್ತರ
ಸ್ತೋಮಾ ಕಲ್ಪನ ಕ್ರುಪೆಯಿಂ ಪೇಳ್ದಿಂ ಕ್ರುತಿಮುಖ ಪದ್ಧತಿಯಿಂ॥

ಪದನೂ ॥ ಶ್ರೀದ್ಭಸಿತಾಂಗ ವಿಹುದ್ರುದ್ಭೂಭಂಗ ಲ
ಸದ್ಭಕ್ತಿದ ಕುದರೋದ್ಭೂವಭವ
ಭಿದ್ಭೀವೂಾರ್ಜುನ ಹಾರಂ ಕಾಶ ಸರೋದ್ಭವ ಪ್ರತ್ತ್ಯರ್ತ್ರಿ
ಸದ್ಭಾಕುಂದ ಮರುದ್ಭೂಜೋತ್ಸರು
ಸದ್ಭವಾ ಶಿವಯ ಹುದ್ಭಂಜನ ಜ
ಗದ್ಭಯ ಕ್ರುಂತಮುದ್ಭಯಹರ ಬ್ರಂಮ್ಹಾದ್ಯಾನೇತ್ರ ಜಯಾ ॥ ೧ ॥

ಅಂತ್ಯ : ಮಾತಿನೊಳಗೆರವೆಂದೊಡಂ ಬಿಡೆನು ಕೇಳು ಗಿರಿ
ಜಾತೆಯಲ್ಲಿಗೆ ನಿಂನ ಪಿಡಿದೊಯ್ಯದಿರ್ದೊಡಂ
ಶ್ರೀತ ವಿಖ್ಯಾತದೊಲೆಗಳೆಯಲ್ಲ ನೋಡೆಂನವಾಯಯೊಳಿಂಥನೂ
ಪೂತುರೆ ನಿಂನ ಮೊಲೆಯಲ್ಲವೊ ಶುಂಠಿಯೋ
ಕೀತ ಕುರುವೊ ವಿಮಿಳಿಯೊಳು ಪೇಳು ಯೆಂದೆನುತೆ
ಜೋತಿರ್ಮಯಾಂಗ ಶ್ರೀ ಪ್ರಭುರಾಯ ಬಯಲಾಗೆ ಮಾಯೆಯತಿ
ಮೂರ್ಛೆಯೋಗೆ ॥ ೧೬೦ ॥

ವಿಷಯ : ಅಲ್ಲಮಪ್ರಭುದೇವರ ಕಥೆ.

ವಿಶೇಷ : ೮೩ನೆಯ ಗರಿಯಿಲ್ಲ. ೫೪ ರಿಂದ ೬೪ರ ವರೆಗಿನ ಪದ್ಯಗಳು ಲುಪ್ತವಾಗಿವೆ. ಶಕಟರೇಫವಿದೆ.

949

ಕೆ.ಎ. ೨೮೨	ಪ್ರಭುದೇವರ ಪುರಾಣ	ವಿವಿಧ ಷಟ್ಪದಿ
೧೨.೯″×.೮″	ಎಳಂದೂರು ಹರೀಶ್ವರ	ಸು. ೧೬೦೬
೧-೪೫೮ ಪತ್ರ	೧೬ ಪಂಕ್ತಿ	೨೮ ಅಕ್ಷರ

ಆದಿ : ಶ್ರೀ ಪ್ರಭುದೇವರ ಪುರಾಣವನ್ನು ಬರವುದಕ್ಕೆ ಶುಭಮಸ್ತು ನಿರ್ವಿಘ್ನ ಮಸ್ತು ರಾಗ ಶಂಕರಾಭರಣ
ಪರಿವರ್ಧಿನಿ ॥ ಶ್ರೀಮತ್ಪ್ರಭುದೇವನ ಚಿತ್ಕೃತಿಯು
ತ್ರೀಮದೊಳೊಲ್ದಾಲಿಸಿ ಶಿವಭಕ್ತರ್
ಸೋಮಾಕಲ್ಪನ ಕೃಪೆಯಿಂ ಪೇಳ್ದೆಂ ಕೃತಿಮುಖ ಪದ್ಧತಿಯಂ ॥
ಪದನು ॥ ಚಿದ್ಭಸಿತಾಂಗ ವಿಹೃದ್ಭೂಭಂಗ ಲ
ಸದ್ಭಕ್ತಿದ ಕುಧರೋದ್ಭೂದವಭವ
ಬಿದ್ಭೀಮಾರ್ಜುನ ಹಾರ ವಿಕಾಶ ಸರೋದ್ಭವ ಪ್ರತ್ಯರ್ಥೀ

ಸದ್ಭಾಕುಂದಮರುದ್ಭಾಜೋತ್ಸವರು
ಸದ್ಭಾವ್ಯಾವಯ ಹೃದ್ಭಂಜನ ಜ
ಗದ್ಭಯ ಕೃಂತನ ಮದ್ಭಯಹರ ಬೃಹದ್ಭಾ ನೇತ್ರ ಜಯ ‖ ೧ ‖

x x x x

ಹರನಾಜ್ಞೆ ಮಾತ್ರದೊಳ್ತ್ವರಿತದಿಂದವತರಿಸಿ
ಚರರೂಪ ಧರಿಸಿ ಭೂವಳಯದೊಳ್ಚರಿಸುತ್ತ
ಧರಣಿಯೊಳಧಿಕವೆನಿಸುವ ಯಳಂದೂರ ಸಿಂಹಾಸನಾಧಿಷ್ಠರಾದ
ಗುರು ಹರೀಶ್ವರ ದೇವರೊಂತನಯ ಪ್ರಭುದೇವ
ರೊರನಂದನಂ ತೋಂಟದಾಚಾರ್ಯರೆನಿಸುತಿಹರ
ವರಪುತ್ರಂ ಹರೀಶ್ವರ ದೇವನುಸಿರ್ದನೀ ಪರಮ ಪಾವನ ಕೃತಿಯನು
‖ ೫೧ ‖

ಅಂತ್ಯ : ವಿಶ್ವಾವಸುನಾಮ ಸಂವತ್ಸರದ ಶುಕ್ರ ಶುದ್ಧ ನಿಜ
ಭಾಸ್ವರದ ಪಾಡ್ಯದೊಳು ಯುದ್ಯವಂ ಮಾಡಿ
ಶಾಶ್ವತದ ಪರಾಭವಾಬ್ದದ ಜೇಷ್ಟ ಬಹುಳ ದಶಮಿಯೊಳು ಬಹು ಹರುಷ
ದಿಂದಂ
ಶಾಶ್ವತಂ ಶ್ರಿ ಮಹಾ ಪ್ರಭುವರನ ಕೃತಿಯು ಸ
ಪ್ರಶ್ವಾರ್ಭಕನ ಭಂಜಿಸಿದ ಕೃಪೆಯಿಂದಂ ಹ
ರೀಶ್ವರಾಚಾರ್ಯನೆನಿಸುವನು ಸಂಪೂರ್ಣಮಾಗುಸುರ್ದ ಶುಭಮಸ್ತು
ಸತತಂ ‖ ೨೭೫ ‖

ಸರಸ ವಚ ಸುಮನಸ ರಸಿಕ ಗಜ ದನುಜಮದ
ಹರಹರಿಣಧರ ಶಿರಸಹೃದಯ ಗುರುಚರ ಚರಣ
ಸರಸಿರುಹ ಮಕರಂದ ರಸಪಾನ ಮಧುಕರ ಗುರು ಹರೀಶ್ವರ ದೇವನು
ಪರಮ ಹರುಷದಿ ವಿರಚಿಸಿದ ಕರುಣ ಶರಧಿ ಮಹಾ
ಸರಳತರ ಗರಳಗಳಧರ ಶಿಶಿರಕರ ತರಣಿ
ವರ ವಸು ನಯನ ಘನತರ ಪ್ರಭುವಿನಘಕೃತಿಯತಿ ನವ ಪ್ರಕರ
ಣವಿಂದು ‖ ೨೭೭ ‖

ಅಂತು ಸಂಧಿ ೯ಕ್ಕಂ ಪದ ೧೪೭೭ ಪ್ರಭುದೇವರ ಪುರಾಣ ಸಂಪೂರ್ಣಂ
ಮಂಗಳ ಮಹಾ.

ವಿಷಯ : ಅಲ್ಲಮಪ್ರಭುದೇವರ ಕಥೆ.

ವಿಶೇಷ : ಪತ್ರದ ಒಂದು ಪಾರ್ಶ್ವದಲ್ಲಿ ಮಾತ್ರ ಬರೆದಿದೆ. ಪ್ರತಿಯ ಕಾಲ ೧೯೨೨ ಆದಿಯ ಒಂದು ಪತ್ರದಲ್ಲಿ ಗ್ರಂಥದ ವಿಷಯ ಸಂಗ್ರಹವಿದೆ.

950

ಕೆ. ೩೫/೭ **ಪ್ರಭುದೇವರ ಪುರಾಣದ ನಾಂದ್ಯ** ವಿವಿಧ ಷಟ್ಪದಿ
೧೨"×೧.೪" ಎಳಂದೂರು ಹರೀಶ್ವರ ಸು. ೧೬೦೬
೫೨–೫೮ ಪತ್ರ ೭ ಪಂಕ್ತಿ ೫೦ ಅಕ್ಷರ

ಆದಿ : ಪ್ರಭುದೇವರ ಪುರಾಣದ ನಾಂದ್ಯಂಗಳು ||
ಪರಿವರ್ಧಿನಿ || ಶ್ರೀದ್ಭಸಿತಾಂಗ ವಿಹೃದ್ಭೂಭಗಂ ಲ
ಸದ್ಭಕ್ತಿದ ಕುಥರೋದ್ಭೂಥವಭವ
ಬಿದ್ಧೀವಾರ್ಜ್ಜನ ಹಾರಂ ಕಾಶ ಸರೋದ್ಭವ ಪ್ರತ್ಯಕ್ಥೀ
ಸದ್ಭಾಕುಂದವರುದ್ಭೂಜೋತ್ಸರು
ಸದ್ಭವ್ಯಾವಯ ಹೃದ್ಭಂಜನಜ
ಗದ್ಭಯಕೃಂತಮಮುದ್ಭಯ ಹರಬೃಹದ್ಭಾನ್ನೇತ್ರಜಯ || ೧ ||

ಅಂತ್ಯ : ಜಯಜಯ ಜಲಂಧರ ಕಕಂಧರನ ಸದೃಶಾಂಗ
ಜಯಜಯ ಮಹಾ ಪ್ರಮಥಗಣ ಶಸ್ಯ ಪ್ರಾವೃಟ
ನ್ಜಯ ಜಯಾಮಲತಾಲ ವಿತ್ರೋಲಂನತ ಭವಾಬ್ಧಿ ಭೈತ್ರಾತ್ರಿವಿನುತಾ
ಜಯ ಜಯ ಜನನ ಮರಣ ಕುಜ ಕೃತ್ರಕ್ಸ್ಷಿತ ಪರಶ
ಜಯ ಜಯ ಯೆತೀಶ ಹೃತ್ಕುಮುದ ರಜನಿಕರಾ
ಜಯ ಜಯತು ಮಾಯಾಂಥರಾರಭೇದನ ಸೂರ್ಯ್ಯ ಪ್ರಭುವೆ ಮಾಂ
ತ್ರಾಹಿ ತ್ರಾಹಿ || ೫೦ ||
ಪ್ರಭುದೇವರ ಪುರಾಣದ ನಾಂದ್ಯಂಗಳು ಸಂಪೂರ್ನ್ನಂ ಶ್ರೀ

ವಿಷಯ : ಪ್ರಭುದೇವರ ಪುರಾಣದ ನಾಂದೀಪದ್ಯಗಳು.

ವಿಶೇಷ : ಈ ಗ್ರಂಥದಲ್ಲಿ ೫೬ನೆಯ ಪತ್ರ ಮುರಿದಿರುವುದರಿಂದ ಅಂಟಿಸಿದೆ. ಇದೇ ಕಟ್ಟಿನಲ್ಲಿ ಮಲ್ಲೇಶ್ವರ ಶತಕ, ಪಾರ್ವತೀವಲ್ಲಭ ಶತಕ, ಉಮಾಮಹೇಶ್ವರ ಶತಕ, ಪ್ರಾಣನಾಥ ಶತಕ, ಶ್ರೀಕಂಠಸೋಮೇಶ್ವರ ಶತಕ, ಕಂದಶತಕ, ಮಹಿಮ್ನ ಸ್ತೋತ್ರದ ಟೀಕು, ಶಿವಪೂಜಾವಿಧಾನ, ಚೇರಮಕಾವ್ಯ ಎಂಬ ಗ್ರಂಥಗಳಿವೆ.

951

ಕೆ. ೧೬೯/೨೦ **ಪ್ರಭುದೇವರ ಪುರಾಣದ ನಾಂದ್ಯ** **ವಿವಿಧ ಷಟ್ಪದಿ**

೯.೬" × ೨" **ಎಳಂದೂರು ಹರೀಶ್ವರ** **ಸು. ೧೬೦೬**

೧೦೨–೧೧೧ ಪತ್ರ ೧೦ ಪಂಕ್ತಿ [redacted]೦ ಅಕ್ಷರ

ಆದಿ : ಪ್ರಭುದೇವರ ಪುರಾಣದ ನಾಂದ್ಯವ ಬರವುದಕ್ಕೆ ಶುಭಮಸ್ತು ||
ಶ್ರೀದ್ಭಸಿತಾಂಗವಿಹೃದ್ಭೂಭಂಗ ಲ
ಸದ್ಭಕ್ತಿದ ಕುದರೋದ್ಭೋದವ ಭವ
ಭಿದ್ಭೀಮಾರ್ಜುನ ಹಾರವಿಕಾಶ ಸರೋದ್ಭವ ಪ್ರತ್ಯಕ್ತ್ರೀ
ಸದ್ಭಾಕುಂದ ಮರುದ್ಭೂಜೋತ್ಸರು
ಸದ್ಭವ್ಯಾವಯ ಹೃದ್ಭಂಜನ ಜ
ಗದ್ಭಯಕೃತಂ ನಮದ್ಭಯ ಹರಬೃಹದ್ಭಾನ್ವಕ್ಷೀ ಜಯಾ || ೧ ||

ಅಂತ್ಯ : ಜಯ ಜಯ ಜಲಂಧರನಕ ಕಂದರನ ಸದ್ಯಶಾಂಗ
ಜಯ ಜಯ ಮಹಾಪ್ರಮಥಗಣ ಶಾಸ್ಯಪಾವೃಟ
ಜಯ ಜಯ ಮಲತ್ರಯಲತಾಲ ವಿತ್ರೋಂನತ ಭಾವಾಬ್ಧಿ
ಭೈತ್ರಹತ್ರವಿನುತಾ
ಜಯ ಜಯ ಜನನ ಮರಣ ಕೃತಕ್ಷತ ಪರಸು
ಜಯ ಜಯ ಯೆತೀಶ ಹೃತ್ಕುಮುದ ರಜನಿಕರಾ
ಜಯತ ಮಾಯಾಂಧಕಾರಭೇದ್ಯನ ಸೂರ್ಯ್ಯ ಪ್ರಭುವೆ
ಮಾಂ ತ್ರಾಹಿ ತ್ರಾಹಿ || ೭೯ ||

ಪ್ರಭುದೇವರ ಪುರಾಣದ ನಾಂದ್ಯ ಸಂಪೂರ್ನ್ನ ಮಂಗಳ ಮಹಾಶ್ರೀ||

ವಿಷಯ : ಪ್ರಭುದೇವರ ಪುರಾಣದ ನಾಂದೀ ಪದ್ಯಗಳು.

ವಿಶೇಷ : ಇದೇ ಕಟ್ಟಿನಲ್ಲಿ ಸೌಂದರಪುರಾಣದ ನಾಂದ್ಯ, ಕಾರಣಾಗಮ ಮೊದಲಾದ ಇನ್ನೂ ೨೩ ಗ್ರಂಥಗಳಿವೆ. ೧೧೯ನೇ ಗರಿಯಿಂದ ಮುಂದಕ್ಕೆ ೧೦೧೦ ಎಂದು ಮುಂದುವರೆದಿದೆ. ಇದು ೧೧೦ಕ್ಕೆ ಬದಲಾಗಿದೆ. ಪ್ರಮಾದ ವಶಾತ್ ಒಂದು ಸೊನ್ನೆ ಹೆಚ್ಚಿಗೆ ಬಿದ್ದಿದೆ. ಮುಂದಿನ ಸಂಖ್ಯೆಗಳೆಲ್ಲಾ ಹಾಗೇ ಮುಂದುವರೆದಿವೆ.

952

ಕೆ. ೩೨೫/೭ | **ಪ್ರಭುದೇವರ ಪುರಾಣದ ನಾಂದ್ಯ** | ವಿವಿಧ ಷಟ್ಪದಿ
೯.೫´×೨´´ | ಎಳಂದೂರು ಹರೀಶ್ವರ | ಸು. ೧೬೦೬
೧೫–೨೨ ಪತ್ರ | ೧೧ ಪಂಕ್ತಿ | ೫೬ ಅಕ್ಷರ

ಆದಿ : ಪ್ರಭುದೇವರ ಪುರಾಣದ ನಾದ್ಯ ॥ ಪರಿವರ್ದ್ಧನಿ
ಶ್ರೀ ಧ್ಭಸಿತಾಂಗ ವಿಹ್ವದ್ಭೂಭಂಗ ಲ
ಸದ್ಭಕ್ತಿದ ಕುದರೋದ್ಭೂಥವ ಭವ
ಬಿದ್ಭೀಮಾರ್ಜುನಹಾರಂ ವಿಕಾಶ ಸರೋದ್ಭವ ಪ್ರತ್ಯತ್ರೀ
ಸದ್ಭಾಕುಂದ ಮರುದ್ಭೂಜೋತ್ಸರು
ಸದ್ಭವ್ಯಾವಯ ಹೃದ್ಭಂಜನ ಜ
ಗದ್ಭಮಕ್ರುಂತನಮುದ್ಭಯಹರ ಬೃಹದ್ಭಾನಕ್ಷಿ ಜಯಾ ॥ ೧ ॥

ಅಂತ್ಯ : ಯಿಂತಪ್ಪ ಮಾಯರಹಿತನ ಸುಚಾರಿತ್ರಮಂ
ಸಂತತಂ ಬರದೋದಿ ಕೇಳಿ ವಿಸ್ತರಿಸಿದೊಡೆ
ಅಂತರಂಗದ ಕುಟಿಲವಳಿದು ಸುಜ್ಞಾನವರ್ದ್ಧಿವದನ ವರಮುದದಿಂ ॥
ಮುಂತೆ ಮುಕ್ತ್ಯಾಂಗನೆಯು ಕೈವಸಮುದಾಗಿ ಘನ
ವಾಂತ ನಿಃಕಲ ನಿರಂಜನ ಬ್ರಮ್ಹದಲ್ಲಿ ನಿಜ
ನಿಂತು ನೀರೊಳು ನಿರ್ಕು ಪಾಲು ಪಾಲೊಳು ಬೆರದಂತಹರು
ಸಿದ್ಧಾಂತವು ॥ ೮೧ ॥
ಪ್ರಭುದೇವ ಪುರಾಣದ ನಾದ್ಯ ಸಮಾಪ್ತ ಶ್ರೀ ಮಂಗಳ ಮಹಾಶ್ರೀ॥

ವಿಷಯ : ಪ್ರಭುದೇವ ಪುರಾಣದ ನಾಂದೀಪದ್ಯಗಳು.

ವಿಶೇಷ : ಇದೇ ಕಟ್ಟಿನಲ್ಲಿ ಶಿವಲಿಂಗದ ನಾಂದ್ಯ, ಸೋಮನಾಥನ ಕಾವ್ಯದ ನಾಂದ್ಯ ಮೊದಲಾದ ಇನ್ನೂ ಇತರ ೨೪ ಗ್ರಂಥಗಳಿವೆ.

953

ಕೆ.೧೮೮/೪ | **ಪ್ರಭುದೇವರ ಮಂತ್ರಗೋಪ್ಯ (ಸಟೀಕು)** | ಪದ್ಯ, ಟೀಕು
೧೭.೬´´×೨´´ | ಪ್ರಭುದೇವರು | ೧೧೬೦
೮–೧೨ ಪತ್ರ | ೧೧ ಪಂಕ್ತಿ | ೯೨ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಪ್ರಭುದೇವರ ಮಂತ್ರಗೋಪ್ಯ ॥
ಪಲ್ಲವ ॥ ರಾಮು ಕೇಳ ಧ್ಯಾನ ಸೋಮು ಕೇಳನುಭಾವ । ಸಿದ್ಧರಾಮು ಕೇಳಾನಂದ ನಿಂದ ನಿಜವಾ ॥

ಟೀ ॥ ದೇಹೇಂದ್ರಿಯ ವಿಷಯಕರಣಾದಿಗಳ ಮೀಱಿದ ಶಿವಶಕ್ತಿ ಯುಕ್ತವಾದಂಥಾ ಆತ್ಮಾನಾತ್ಮನೆಂಬ ಬಯಲಿ ರಾಮನೆ। ಧ್ಯಾನ। ಧ್ಯಾನಯೋಗವೆಂಬುದನು । ಕೇಳ । ಆಲಿಸ ।

ಅಂತ್ಯ : ಮುಖ ಕಮಲ ಶಿಖರ ಸಿಹ್ವಾಸನಾಗ್ರದ ಮೇಲೆ
ಮಕರದೋರಣವದ ಕೆಲ ಕೆಲದಲಿ
ಸಕಲಗಣ ತಿಂಥಿಣಿಯು ಜಯತು ಜಯತೆಂದೆನಲು
ಸುಖಿ ಗುಹೇಶ್ವರನ ಶರಣ ಸಿದ್ಧರಾಮಾ ॥

ಟೀ ॥ ಮುಖ ಕಮಲ । ವದನ ಕಮಲದ । ಶಿಖರ । ಶಿಖಾಚಕ್ರದ । ಸಿಹ್ವಾಸನಾಗ್ರದ ಮೇಲೆ। ಅವಾಚ್ಯ ಪ್ರಣವವೆಂಬ ಮೃಗೇಂದ್ರ ಪೀಠದಲ್ಲಿ । ಅದರ। ಆ ಗದ್ದುಗೆಯ। ಕೆಲ ಕೆಲದಲಿ। ಸವ್ಯಾಪಸವ್ಯ ಭಾಗದಲ್ಲಿ। ಮಕರ ತೋರಣ। ಜ್ಞಾನ ಸುಜ್ಞಾನ ಮಹಾಜ್ಞಾನವೆಂಬ ತೋರಣವುಂಟಾಗಿಪ್ಪುದು। ಆ ಗದ್ದುಗೆಯ ಸುತ್ತ। ಸಕಲ ಗಣಂಗಳ ತಿಂಥಣಿಯು। ಲಿಂಗಸೇವನೆಯಿಂದೆ ನಿತ್ಯತ್ವವನು ಪಡೆದ। ಸಕಲ ಕರಣಂಗಳ ಸಮೂಹದ ಸಂದಣಿಯು । ತು । ವಿಶೇಷವಾಗಿ । ಜಯ ಜಯತೆಂದೆನಲೂ । ಸರ್ವೋತ್ಕೃಷ್ಟವಾಗೆಂದು ಕೀರ್ತಿಸುತ್ತಿರಲು । ಗುಹೇಶ್ವರನ । ಸರ್ವರ ಹೃದಯಾಧೀಶ್ವರನಾದಂಥಾ ಪರಶಿವಲಿಂಗದ। ಶರಣ। ಏಕಲಿಂಗ ನಿಷ್ಠಾಪರನಾದಂಥಾ। ಸಿದ್ಧರಾಮು। ಸಿದ್ಧರಾಮೇಶ್ವರನು। ಸುಖ। ಶಿವಯೋಗಾನಂದವುಳ್ಳಂಥಾತನೂ ॥ ೨೭ ॥

ಪ್ರಭುದೇವರು ನಿರೂಪಿಸಿದ ಮಂತ್ರಗೋಪ್ಯ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ.

ವಿಷಯ : ಲಿಂಗಾಂಗ ರಹಸ್ಯ ಪ್ರತಿಪಾದನೆ

ವಿಶೇಷ: ಶಕಟರೇಫ ಬಳಸಿದೆ. ಇದರೊಂದಿಗೆ ಮರುಳ ದೇವರ ಕಂದ, ಪ್ರಭುಲಿಂಗದ ಕಂದ ಮೊದಲಾದ ಇತರ ೧೫ ಗ್ರಂಥಗಳಿವೆ.

954

ಕೆ.ಬಿ. ೪೧೬/೨ **ಪ್ರಭುದೇವರ ಲಿಂಗಸೂತ್ರ** ವಚನ

೫.೭"×೫.೪" ಪ್ರಭುದೇವರು ೧೧೬೦

೧೦೪–೧೦೮ ಪತ್ರ ೮ ಪಂಕ್ತಿ ೧೪ ಅಕ್ಷರ

ಆದಿ : ಮುಂದೆ ವಿಶುದ್ಧಿ ಚಕ್ರಕ್ಕೆ ೧೬ ದಳದ ವಿವರಾ—

೧೬ ಅಕ್ಷರ ಸಂಬಂಧ। ಕಂಠದಿಂದ–ದಂತಗಳಿಗೆ। ಚರಿಸುವಂಥ ವಾಯು ವಂದೆ। ಆದರಿಂದ ೧೬ ದಂತಗಳು ದಳವಾಗಿ ಚೇತನದಿಂದಿರುವದೂ ॥ ಮುಂದೆ ಆಜ್ಞೆಯ ಚಕ್ಕಕ್ಕೆ ೨ ದಳ ವಿವರಾ । ಯರಡುನೇತ್ರವು ಅಲ್ಲಿ ಸಾಕ್ಷಾತ್ ಕೈಲಾಸ । ವೈಕುಂಠವಿರುವದು ಯಂದೂ ಶ್ರೀಗುರುಸ್ವಾಮಿಗಳು ಸುಜ್ಞಾನಿ ಯಾದ ಸತ್ಪುರುಷ ಶಿಷ್ಯನಿಗೆ ಯಿದೇಹದಲ್ಲಿರುವಂಥ ೬ ಚಕ್ರದ ನಿರ್ಣಯ ವನ್ನು ವಿವರವಾಗಿ ಹೇಳಿದ್ದರಿಂದ ಶಿಷ್ಯನು ಗುರುವಿಗೆ ವಂದನೆಯಮ್ಮಾಡಿ ಮೌನದಿಂದ ನಿಂದಿರ್ದ ಶಿಷ್ಯನಂ ನೋಡಿ ಕೇಳೈಯ ದೃಡಶಿಷ್ಯನೆ ಯಿಾ ಲಿಂಗಾಂಗ ಸಮರಸದಿಂದ ನಂಮ ಬಸವಾದಿ ಪ್ರಥಮರು ಅನಾದಿಯಾಗಿ ಆಚರಿಸದಂಥದ್ದು—

ಅಂತ್ಯ : ಶರಣು ಯನ್ನುವಂಥಾದ್ದು ಸತಿಯಾಗಿ ಯಿಾಲಿಂಗವು ಪತಿಯಾಗಿ ಸತಿಪತಿ ನ್ಯಾಯವಾಗಿ ಶ್ರೀತನುವಾಗಿ ತ್ರಿಲಿಂಗಕ್ಕೆ ಅರ್ಪಿಸುವಂಥಾ ಯಿಾಚಕ್ರವನ್ನು ಶ್ರೀಸದ್ಗುರು ಕಟಾಕ್ಷದಿಂದ ತನ್ನಲ್ಲಿ ತಂನ ನಿಜರೂಪವನ್ನು ತೋರಿದವನಾಗಿ ನಾನು ನೀನು ಯಂಬ ಭೇದವಿಲ್ಲದ ತನುವು ತಾನಾದುದು ವುಭಯವೂ ಕೂಡಿದಹಾಗೆ ಮತ್ತು ಕಲ್ಲಿನ ಲಿಂಗ್ಯೈಕ್ಯವು ಯಿದೆಲ್ಲವು ಬಹುಗುಹ್ಯಕ್ಕೆ ಗುಹ್ಯ ಗೋಪ್ಯಕ್ಕೆ ಗೋಪ್ಯ ರಹಸ್ಯಕ್ಕೆ ರಹಸ್ಯ. ಯಿದೆಲ್ಲವನ್ನು ಮಹಾಪ್ರಭುವಾದ ಗುಹ್ಯೆಶ್ವರ ಬಲ್ಲನಲ್ಲದೆ ಕಂಣಿಗೆಟ್ಟ ಅಂಣಗಳು ಯಿದನೆತ್ತ ಬಲ್ಲರೈಯ ಗುಹ್ಯೇಶ್ವರಾ ಶ್ರೀ ॥

ವಿಷಯ : ವೀರಶೈವತತ್ತ್ವ.

ವಿಶೇಷ : ಇದೇ ಪುಸ್ತಕದಲ್ಲಿ ಗುಹೇಶ್ವರಾಂಕಿತ ವಚನ, ತತ್ತ್ವಚಿಂತಾಮಣಿ ಚೆನ್ನಬಸವೇಶ್ವರ ವಚನ ಎಂಬ ಕೃತಿಗಳಿವೆ. ಮಧ್ಯದಲ್ಲಿ ರುದ್ರಾಧ್ಯಾಯಕ್ಕೆ ಸಂಬಂಧಪಟ್ಟ ಎರಡು ಪತ್ರಗಳಿವೆ. ಅಸಮಗ್ರ. ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ. ಇವುಗಳಲ್ಲಿ ಮಧ್ಯೆ ಒಂದೆರಡು ಪತ್ರಗಳಲ್ಲಿ ಹಿಂದಿಯ ಒಂದೆರಡು ಹಾಡುಗಳೂ ಕೆಲವು ತತ್ತ್ವಬೋಧಕ ಹಾಡುಗಳೂ ಅಪೂರ್ಣ ವಾಗಿ ಇವೆ

955

ಕೆ. ೪೫೦/೧ | ಪ್ರಭುದೇವರ ವಚನಗಳು (ಸಟೀಕು) | ವಚನ, ಟೀಕು
೭.೩"×೧.೮" | ಮಹಲಿಂಗದೇವ | ೧೪೩೦
೧–೧೨೧ ಪತ್ರ | ೧೫ ಪಂಕ್ತಿ | ೬೦ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಪ್ರಭುದೇವರು ನಿರೂಪಿಸಿದ ಟೀಕಿನ ವಚನಂಗಳು ॥

ಗದ್ಯ ॥ ಸ್ವಸ್ತಿ ಸಮಸ್ತ ಭುವನ ಜನತಿಮಿರ ಹರಣ ಕಾರಣ ಸ್ವರೂಪರುಂ। ಭಕ್ತಿದೇಹಿಕ ದೇವರುಂ। ಭಕ್ತಿ ವತ್ಸಲರುಂ। ಸರ್ವಾಂಗ ಪ್ರಾಣಲಿಂಗ ಮೂರ್ತಿ ವಿಲಾಸರುಂ। ಪುಲಿಗೆರೆಯ ಪುರವರಾಧೀಶ್ವರರುಂ x x x x ವಿಂಶತಿಯಲ್ಲಿ ಮಹಾಲಿಂಗಶ್ರೀದೇವರು। ಯೇಕವಿಶಂತಿಯಲ್ಲಿ ಕುಮಾರ ಬಂಕನಾಥ ದೇವರು ॥ ಆ ಕುಮಾರ ಬಂಕನಾಥ ದೇವರ ದಿವ್ಯಜ್ಞಾನಾನಂದ ಕರಕಮಳದಲ್ಲಿ ವುದಯವಾದ ನಿಜ ತಶ್ಶಿಸ್ಯ ಭಕ್ತಿಭಂಡಾರಿ ಜಕ್ಕಂಣನು ಆಶ್ರೀಗುರು ಯಂಗೆ ಬಿಂನಪಂಗೈದು। ಪರಮ ಗುರುವೆ ನಿಂಮಡಿಗಳು ಯಂನ ಪೂರ್ವಜನ್ಮ ನಿವೃತ್ತಿಯಂ ಮಾಡಿ। ಪುನರ್ಜಾತನೆನಿಸಿ ಅಂಗದಲ್ಲಿ ಲಿಂಗ ಪ್ರತಿಷ್ಠೆಯಂ ಮಾಡಿ। ಪ್ರಣವ ಪಂಚಾಕ್ಷರಿಯಂ ಪ್ರಾಣಸ್ಥಲದಲ್ಲಿ ಸ್ಥಾಪಿಸಿ ಯಂನ ಕೃತಾರ್ಥನಂ ಮಾಡಿದಿರಿ ದೇವಾ ಯಿಂನು ಯಂನ ಷಡಾಂಗವು ಲಿಂಗದಲ್ಲಿ ಲೀಯ್ಯವಹ ಭೇದನುಂ ನಿರೂಪವಂ ಕೊಟ್ಟು ಪಾಲಿಸೂದೆಂದೊಡೆ ... ಸ್ವಾಮಿ ತಂಮ ಪರಮಸ್ವಾನುಭಾವ.... ಸಂನ ಪ್ರಕಾಶದಿಂದ ಷಟ್ಸ್ಥಲವನೂ ಪ್ರಭುದೇವರ ವಚನಂಗಳಿಂದ ಸಂಕಲ್ಪಿಸಿ ಸುಲಲಿತ ವಾಕ್ಯಾಮೃತವಾಗಿ। ಆ ವಚನಂಗಳನು.... ರಮಾರ್ಥ ತತ್ವಬೋಧೆಯನು ನಿರೂಪಿಸಿದ ಭೇದಮಂ ತಿದ್ದುತೆಂದಡೆ ಮುಂದೆ ಪ್ರಥಮದಲ್ಲಿ ಪಿಂಡಸ್ಥಲ ॥

ಪಿಂಡಸ್ಥಲದ ವಚನ ॥ ಶಿಲೆಯೊಳಗಣ ಪಾವಕನಂತೆ। ವುದಕದೊಳಗಣ ಪ್ರತಿಬಿಂಬದಂತೆ। ಬೀಜದೊಳಗಣ ವೃಕ್ಷದಂತೆ। ಶಬ್ದದೊಳಗಣ ನಿಃಶಬ್ದದಂತೆ ಗೊಹೇಶ್ವರಾ ನಿಂಮ ಶರಣ ಸಂಬಂಧ ॥

ಟೀಕು ॥ ಶಿಲೆಯೊಳಗಿಪ್ಪ ಅಗ್ನಿ ವ್ಯೆದೋಜದ ಹಾಂಗೆ। ಪರಬ್ರಹ್ಮವು ಪಿಂಡಸ್ಥಲವಾಗಿರ್ದ್ದು ಕಾಣಿಸಬಾರದೆಂಬುದೀಗ। ಶಿಲೆಯೊಳಗಣ ಪಾವಕನಂತೆ ಯೆಂಬ ಶಬ್ದಕ್ಕರ್ಥ।

ಅಂತ್ಯ: ಮಹಲಿಂಗ ದೇವರು ತಂಮ ದಿವ್ಯಜ್ಞಾನಾನಂದಸಿದ್ಧ ವರ ಪ್ರಸಂನ ಪ್ರಸಾದವನೂ ನಿಜ ತಶ್ಶಿಸ್ಯ ಭಕ್ತಿಭಂಡಾರಿ ಜಕ್ಕಂಣಾಚಾರ್ಯಂಗೆ ಸತ್ಪ್ರೇಮ

ಮಹಾನುಭಾವಸಂಬೋಧೆ ಸಂಬಂಧನಿರೂಪಣ ಕಾರಣಾರ್ತ್ಥವಿರಚಿತಮಪ್ಪ ಪ್ರಭುವೇವರ ಷಡುಸ್ಥಲದೊಳು ಐಕ್ಯನ ವರ್ಗಂ ಷಷ್ಟಮಂ ಪರಿಚ್ಛೇದಃ॥ ಶ್ರೀ ಮದ್ದೇಶಿಕ ಷಟ್ಸ್ಥಲ ಚಕ್ರವರ್ತ್ತಿ ಬ್ರಹ್ಮಾನಂದ ಪರಶಿವಮೂರ್ತ್ತಿ ವಿರಕ್ತ ಶಿಖಾಮಣಿ ಮಾಯಾಕೋಳಾಹಳ ಪ್ರಭುದೇವರುನಿರೂಪಿಸಿದ ವಚನಂಗಳು ಸಮಾಪ್ತಿ ಮಂಗಳಂ ಮಹಾ ಶ್ರೀ ಶ್ರೀ ಶ್ರೀ ॥ ಅಂತು ಸ್ಥಲ ೬ಕ್ಕಂ ಸಂಬಂಧಿಸಿದ ವಚನಂಗಳು ೬೯೪ಕ್ಕಂ ಮಂಗಳ ಮಹಾ ಶ್ರೀ ॥

ವಿಷಯ : ಷಟ್ಥಲ ಪ್ರತಿಪಾದನೆ ಹಾಗೂ ವಿವರಣೆ.

ವಿಶೇಷ : ಸಮಗ್ರವಾಗಿದೆ. ಶಕಟರೇಫ ಪ್ರಯೋಗವಿರುತ್ತದೆ. ಇದೇ ಕಟ್ಟಿನಲ್ಲಿ ಇದರೊಂದಿಗೆ ಏಕೋತ್ತರಶತಸ್ಥಲ ಗ್ರಂಥವೂ ಇರುತ್ತದೆ.

956

ಕೆ.ಎ. ೧೦೯	**ಪ್ರಭುದೇವರ ವಚನಗಳು (ಸಟೀಕು)**	ವಚನ, ಟೀಕು
೧೨.೭" × ೭.೬"	ಮಹಲಿಂಗದೇವ	೧೪೩೦
೧೧೩–೨೯೭ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಡು ನಾನು ಬೆಱಗಾದೆ ಅಂತು ಇಂತು ಯೆನಲಿಲ್ಲ ಚಿಂತೆಯಿಲ್ಲದ ಮಹಾ ಘನವ ಗುಹ್ಯೇಶ್ವರ ಲಿಂಗವನೇಱಿ ಅಱಿಯಲಿಲ್ಲಾ ॥

ಟೀ ॥ ಮನವೆ ಲಿಂಗವಾಯಿತ್ತಾಗಿ ನೆನೆಯಲಿಲ್ಲವಾಯಿತೆಂಬುದೀಗ ನೆನಹ ನೆನವ ಮನದಲಿಲ್ಲವೆಂಬ ಶಬ್ದಕ್ಕರ್ಥ ತನುವೆ ಆ ಮನೊಮೂರ್ತಿ ಲಿಂಗಕ್ಕೆ ಪೀಠಿಗೆಯಾದ ಕಾರಣ ಆ ತನುವಿನ ಮೇಲೆ ಆಶೆಯಿಲ್ಲವೆಂಬುದೀಗ ತನು ವಿನಾಶಿ ಮುನ್ನಲಿಲ್ಲವೆಂಬ ಶಬ್ದಕ್ಕರ್ಥ x x x x ಇಂತಪ್ಪ ಪರಬ್ರಹ್ಮದ ನಿಲವ ಅಂತಿಂತೆನಲಿಲ್ಲ ಚಿಂತೆಯಿಲ್ಲದ ಮಹಾಘನಲಿಂಗವ ಬೆಱಸಲಿಲ್ಲವೆಂಬು ದೀಗ ಈ ವಚನದ ತಾತ್ಪರ್ಯಾರ್ಥ ॥ ೧೦೭ ॥

ಅಂತ್ಯ : ಟೀ ॥ ಅಱಿವನೆಱಿಯಱಿದು ಅಱಿವನಱಿದೆನೆಂಬ ಸುಖವ ತನಗೆ ತಾ ನುಡಿದುಕೊಂಡೊಡೆ ಆದೆ ಭಿನ್ನವೆಂದಱಿದು ನಿಶ್ಶಬ್ದವೆದಿಯಾಗಿ ನಿಶ್ಶಬ್ದವೇದಿಯಾದ ನಿಲವನು ನಿಶ್ಶಬ್ದವೇದಿ ಯಂದುಸಿನೆಯಱಿಯದೆ ಮಹಾಲಿಂಗೈಕ್ಯನು ಮಹಾಘನ ನಿರಾಳ ಲಿಂಗ ವೇದಿಯಾಗಿರ್ದನೆಂಬುದೀ ವಚನದ ತಾತ್ಪರ್ಯಾರ್ಥ ॥ ೮೯ ॥

ಮೂ || ಸ್ವಸ್ತಿ ಸಮಸ್ತ ಭುವನಜನದ ತಿಮಿರ ಹರಣ ಕಾರಣ ಸ್ವರೂಪರುಂ X X X X ಭಕ್ತಿಭಂಡಾರಿ ಜಕ್ಕಣಾಚಾರ್ಯಂಗೆ ಸತ್ಪ್ರೇಮ ಮಹಾನುಭಾವ ಸಂಬೋಧೆ ಸಂಬಂಧಿನಿರೂಪಣ ಕಾರಣಾರ್ಥ ವಿರಚಿತಮಪ್ಪ ಪ್ರಭುದೇವರ ಷಡುಸ್ಥಲದೊಳು ಐಕ್ಯನವರ್ಗಂ ಷಷ್ಠ ಪರಿಚ್ಛೇದಃ || ಶ್ರೀ ಶ್ರೀ || ಶ್ರೀಮದ್ದೇಶಿಕ ಷಟ್ಸ್ಥಲ ಚಕ್ರವರ್ತಿ ಬ್ರಹ್ಮಾನಂದ ಪರಶಿವಮೂರ್ತಿ ವಿರಕ್ತ ಶಿಖಾಮಣಿ ಮಾಯಾಕೋಳಾಹಳ ಪ್ರಭುದೇವರು ನಿರೂಪಿಸಿದ ವಚನಂಗಳು ಸಮಾಪ್ತ ಮಂಗಳಂ ಮಹಾ || ಶ್ರೀ ||

ಅಂತುಸ್ಥಲ ೬೭ಕ್ಕಂ ಸಂಬಂಧಿಸಿದ ವಚನಂಗಳು ೯೪ಳ ಕ್ಕಂ ||ಮಂಗಳಮಸ್ತು ||

ವಿಷಯ : ಷಟ್ಸ್ಥಲ ಪ್ರತಿಪಾದನೆ.

ವಿಶೇಷ : ಶಕಟರೇಫದ ಬಳಕೆಯಿದೆ. ಈ ಪುಸ್ತಕದಲ್ಲಿ ಪ್ರಭುದೇವರ ಷಟ್ಸ್ಥಲ ಜ್ಞಾನ ಚಾರಿತ್ರದ ವಚನ ಟೀಕೆಯೇ ಮುಂದುವರಿದಿದೆ. ೧೦೬ನೆಯ ವಚನದ ಅಂತ್ಯದಿಂದ ಪ್ರಾರಂಭವಾಗಿ ೯೪ಳ ವಚನಗಳಿಂದ ಮುಕ್ತಾಯವಾಗಿದೆ.

957

ಕೆ.ಬಿ. ೪೧೬/೧	**ಪ್ರಭುದೇವರ ವಚನ**	ವಚನ
೫.೭" × ೫.೪"	ಪ್ರಭುದೇವ	೧೧೬೦
೭—೧೦೦ ಪತ್ರ	೧೨ ಪಂಕ್ತಿ	೧೭ ಅಕ್ಷರ

ಆದಿ : ಗುಹೇಶ್ವರ ನಿರೂಪಿಶಿದ ವಚನ ಬರೆಯುುವದಕ್ಕೆ ಶುಭಮಸ್ತು ||
ಯಿಷ್ಟಲಿಂಗದಲ್ಲಿ ಪರೀಕ್ಷೆ ನೋಡುವ ಕ್ರಮವೆಂತ್ತೆಂದಡೇ ಮೂರಂಗುಲ ಪ್ರಮಾಣಿನಲ್ಲಿ ಕಿರಿದೃಷ್ಟಿಯಲ್ಲಿ ನೋಡಲು ಚತ್ಕಳೆ ಪ್ರಕಾಶ ತೋರುವದು ಯಿದಕ್ಕೆ ಮಂತ್ರಾ ಮಾಂ। ಜಪಾ ೯ ತಕ್ಕು || ೧ || X X X X

ಕಾಲಜ್ಞಾನವಾಯಿತೆಂದು ಬ್ರಂಹ್ಮನೊಡನೆ ಧಿಕ್ಕರ ಬ್ಯಾಡಾ
ಕಾಲಜ್ಞಾನವಾಯಿತೆಂದು ಖರ್ಮವ ಅಳಿಯ ಬ್ಯಾಡಾ
ಸಿವಜ್ಞಾನವಾಯಿತೆಂದು ಶಿವಚರಣರೊಡನೆ ಧಿಕ್ಕಾರ ಬ್ಯಾಡಾ ||

ಯಿಂತ್ರಿ ತ್ರಿವಿಧೋಕ್ತಸ್ತಲದ್ದು ಕೂಡಲಸಂಗೈಯ್ಯಾ ಯಿವರು ವೇಸಿಯ ಮಕ್ಕಳು || ಗುರುವೇ ಗತಿ ||

ನೋಟವೇ ಕೂಟ। ಕೂಟವೇ ಪ್ರಾಣ। ಪ್ರಾಣವೆ ಯೇಕಾ। ಯೇಕವೇ ಸಮರಸಾ। ಸಮರಸವೇ ಲಿಂಗಾ। ಲಿಂಗವೇ ಪರಿಪೂರ್ನಾ। ಪರಪೂರ್ನವೆ ತಾನು ಗುಂಹ್ಯೇಶ್ವರಾ ॥ ೧ ॥

ಅಂತ್ಯ : ಮದ್ಯಮಾಂಸಾದಿಗಳ ಮುಟ್ಟೆನೆಂದಂಬಿರಿ। ನೀವು ಕೇಳಿರೆ ಮದ್ಯವಲ್ಲದೇನೊ। ಅಷ್ಟಮದಂಗಳು ಮಾಂಸವಲ್ಲದೇನು। ಸಂಸಾರಸಂಗವು ಯಿವು ಭಯವನಳಿದಾತನೆ। ಗುಹೇಶ್ವರ ಲಿಂಗದಲ್ಲಿ ಲಿಂಗೈಕ್ಯನೂ ॥ ೮೭ ॥

ಯಿವರಲ್ಲಿ ಕಬುದಿಲ್ ಆಗಿಯಿರುವದು ವಚನ ೧ ವುಬಯಂ ೮೮ ಮಂಗಳ ಮಹಾಶ್ರೀ ॥

ವಿಷಯ : ವೀರಶೈವ ತತ್ತ್ವಬೋಧಕಗಳಾದ ಗುಹೇಶ್ವರಾಂಕಿತ ವಚನಗಳು.

ವಿಶೇಷ: ಇದೇ ಪುಸ್ತಕದಲ್ಲಿ ಪ್ರಭುದೇವರ ಲಿಂಗಸೂತ್ರ, ತತ್ತ್ವಚಿಂತಾಮಣಿ, ಚೆನ್ನಬಸವೇಶ್ವರವಚನ ಎಂಬ ಕೃತಿಗಳಿವೆ. ಮಧ್ಯದಲ್ಲಿ ರುದ್ರಾಧ್ಯಾಯಕ್ಕೆ ಸಂಬಂಧಪಟ್ಟ ಎರಡು ಪತ್ರಗಳಿವೆ. ಅಸಮಗ್ರಪ್ರತಿ. ಕೊನೆಯಲ್ಲಿ ಕೆಲವು ಶುದ್ಧಪತ್ರಗಳಿವೆ. ಇವುಗಳಲ್ಲಿ ಮಧ್ಯೆ ಒಂದೆರಡು ಪತ್ರಗಳಲ್ಲಿ ಹಿಂದಿಯ ಒಂದೆರಡು ಹಾಡುಗಳೂ, ಕೆಲವು ತತ್ತ್ವಬೋಧಕ ಹಾಡುಗಳೂ ಅಪೂರ್ಣವಾಗಿ ಇವೆ.

958

ಕೆ. ೧೮೮/೧೭	**ಪ್ರಭುದೇವರ ಸೃಷ್ಟಿಯ ವಚನ (ಸಟೀಕು)**	ವಚನ, ಟೀಕು
೧೭.೬″×೨″	ಪ್ರಭುದೇವ	೧೧೬೦
೨೫೧—೨೫೪ ಪತ್ರ	೧೨ ಪಂಕ್ತಿ	೯೦ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ॥ ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ ॥

ನಿಂದರೆ ನೆಳಲಿಲ್ಲದೆ ಸುಳಿದರೆ ಹೆಜ್ಜೆಯಿಲ್ಲದೆ ಬಯಲ ಬೆಳಗೆ ವೊಬ್ಬುಳಿಯಾಗಿ ತೋಱುವ ಶಾಂಭವಲೋಕದಲ್ಲಿರ್ದ್ದಂಥಾ ನಿರಂಜನ ಗಣಾಧೀಶ್ವರ ತಾನೇ ಮರ್ತ್ಯಲೋಕಕ್ಕೆ ಪ್ರಭುಸ್ವಾಮಿಗಳಾಗಿ ಬಂದ ತಂಮಂಶೀಭೂತರಾದ ಮರ್ತ್ಯಲೋಕದ ಮಹಾಗಣಂಗಳು ಬರೆದೋದಿ ಹಾಡಿ ಕೇಳಿ ಆಱಿದು ಆನಂದಿಸಿ ನಿತ್ಯ ಶಿವಸುಖಿಗಳಾಗಲಿಯೆಂದು ಬೋಧಿಸಿದ ಸೃಷ್ಟಿಯ ವಚನ।

ಜಗತ್ಸೃಷ್ಟಿನಿಮಿತ್ಯರ್ತ್ಥವಾಗಿ ಹಾಡಿದಂಥಾ ವಾಚ್ಯವಾಲೆಯು । ಪ್ರಥಮ ದಲ್ಲಿ । ಮೊದಲಲ್ಲಿ । ವಸ್ತು । ಅಸ್ತೀತ್ಯಾರಭ್ಯತೇ ವಸ್ತು । ತತ್ಸತ್ತಾಭಾವ ಉಚ್ಯತೇ॥ ಎಂದು ಸದ್ರೂಪವಾದ ಪರಬ್ರಹ್ಮವು ॥

ಅಂತ್ಯ : ಮತ್ರಂ॥ ತತ್ಪದವೆ ಲಿಂಗ। ತ್ವಂ ಪದವೆ ಅಂಗ । ಯೀ ಯಜಡರ ಐಕ್ಯವೇ ಅಸಿಪದವೆಂದು ಹೇಳುತ್ತಿರ್ಪುದಾಗಿ। ಮತ್ತಂ । ತತ್ಪದಸ್ವರೂಪವಾದುದೇ ಲಿಂಗ । ತ್ವಂ ಪದಸ್ವರೂಪವಾದುದೆ ಅಂಗ । ಯಿ........ಗಾಂಗವೆಂಬೆಜಡರ ಕೂಟ ಸ್ವರೂಪವಾದುದೆ ಶಿವಾದ್ವೈತ ಭಕ್ತಿಯು ಯೆಂದುದಾಗಿ । ಹಿಂಗೆಂದು ಹೇಳುತ್ತಿರ್ಪುದಾಗಿ ॥ ಇಂತು । ಯೀಪ್ರಕಾರದಿಂದೆ ಸಕಲ ನಾಗಬಲ್ಲ। ಲಿಂಗಾಂಗ ಸಂಬಂಧದ ... .

ವಿಷಯ : ಜಗತ್ಸೃಷ್ಟಿಯ ವಿವರಣೆ.

ವಿಶೇಷ : ೨೫೨, ೨೫೩ ನೆಯ ಪತ್ರಗಳು ತ್ರುಟಿತವಾಗಿವೆ. ಶಕಟರೇಫದ ಬಳಕೆಯಿದೆ. ಈ ಗ್ರಂಥದೊಂದಿಗೆ ಬಸವೇಶ್ವರ ವಚನಸಾರಾರ್ಥ, ಏಕೋತ್ತರ ಶತಸ್ಥಲದ ಟೀಕೆ ವೊದಲಾದ ಇತರ ೧೫ ಗ್ರಂಥಗಳಿವೆ.

959

ಕೆ. ೪೬೮/೫	**ಪ್ರಭುದೇವರ ಸೃಷ್ಟಿಯ ವಚನ**	ವಚನ
೧೫.೩″ × ೧″	ಪ್ರಭುದೇವ	೧೧೬೦
೧೩-೧೫ ಪತ್ರ	೪ ಪಂಕ್ತಿ	೫೦ ಅಕ್ಷರ

ಆದಿ : ಪ್ರಭುದೇವರ ಶ್ರುಷ್ಟಿ ॥ ಪ್ರತಮದಲ್ಲಿ ವೊಸ್ತುವು ಯೇನೂ ಯಿಲ್ಲದಂಥು । ಮಹಾಘನಶೂನ್ಯ ಬ್ರಂಹ್ಮವಾಗಿ ಯಿತ್ತು। ಅಂತಿರ್ಥ ಪರಬ್ರಂಹ್ಮ ವಸ್ತುವೆ ತಾನೆ। ತಂನ್ನ ದಿವ್ಯನಂದ ಸಲೀಲಾಸ್ವಭಾವದಿಂಥಾದುದೂ ॥

ಅಂತ್ಯ : ಅದೆಂತೆಂದಡೆ। ತತ್ಪವೆ ಅಂಗ। ಯಿ ಯರಡರ ಐಕ್ಯವೆ। ಆಶೆಯಿಂದಳಿದುವಾಗಿ ಯಿಂತೂ ಸಕಲಾನಾಗಬಲ್ಲ। ಸಕಲಾ ನಿಷ್ಕಲಾತೀತನಾಗಿ। ಯೇನು ಯೇನು ಯಿಲ್ಲದ । ಮಹಾಘನ ಶೂನ್ಯಬ್ರಂಹ್ಮವಾಗಿರಬಲ್ಲವನೆ ನಂಮ್ಮ ಗೊಹೇಶ್ವರ ಲಿಂಗವೂ ॥ ಪ್ರಭುದೇವರ ಶ್ರುಷ್ಟಿ ಸಮಾಪ್ತಂ ॥

ವಿಷಯ : ಜಗತ್ಸೃಷ್ಟಿ ಕ್ರಮದ ವಿವರ.

ವಿಶೇಷ: ಗೊಹೇಶ್ವರಾಂಕಿತವಿದೆಯಾಗಿ ಪ್ರಭುದೇವರದೆಂದು ಸ್ಪಷ್ಟ. ಸಮಗ್ರ ವಾಗಿರುತ್ತದೆ. ಈ ಕಟ್ಟನಲ್ಲಿ ಪುಷ್ಪಮಾಲೆ, ಶಂಕರದೇವರ ಕಂದ ಮೊದ ಲಾದ ಗ್ರಂಥಗಳಿವೆ.

960

ಕೆ. ೬೩/೨ | ಪ್ರಭುನಟನಾ ತಾರಾವಳಿ | ಹಾಡು
೧೪" × ೧.೪" | ಮರಿರಾಜವಟ್ಟದೇವ | ಸು. ೧೬೫೦
೧—೧೫ ಪತ್ರ | ೬ ಪಂಕ್ತಿ | ೬೦ ಅಕ್ಷರ

ಆದಿ: ಪ್ರಭುತಾರಾವಳಿ—

ಯಂತು ನುತಿಪೆ ನಿಂಮ್ಮ ಯತಿಗಳ ....
.... ಭು ರಾಯ ನಿರ್ವಾಣಯಾ ॥ ಪಲ್ಲಾ ॥
ನಿರುತ ನಿರಂಜನ ಸೂನ್ಯ ನಿಷ್ಕಲ ಪರತರ ಸುಮಹಾಲಿಂಗ ಶಿವ ಸದಾಶಿವ ನಾದ ಪರಿಪೂರ್ನ ಬ್ರಂಹ್ಮವೆ ಪರಿಚಾಲಾವನ ವಿ ..... ಲ್ಲಿಗೆ ಮಾಯಾ ಕ್ಕೋಳಹಳ ಬಿಲಿದಂನಾಗಿರ್ದ ಅಲ್ಲಮಪ್ರಭು ಬರೆ ಗಿರಿಸುತೆಯರಸನ ವಾಲಾಗದೊಳಗಿರ್ದ ಕಲಿಮುಕ ಶಾರ್ದುಲ ಮುಕ x x x x ಬರದಣಿ ವಂತೆ ನುತಿಸುತಿರ್ದರೆಲ್ಲಾ ॥ ೧ ॥

ಅಂತ್ಯ: ಸಾರಶರಣ ಮಂದಾರ ಭಜಕ ಭವದೂರ x x x ಪ್ರಶಂನ ದೇಸಿಕನ ಕುಮಾರನೆಂ .... ಗವನು .... ದೇವಹರತದೋದರನು ಶ್ರೀ ಪ್ರಭುದೇವನು ನಡಸಿದ ಶ್ರುಂ .... ನಾನೂ ॥ ೨೭ ॥

ಕಂದ॥ ಗರುಣಿ ಭಸವೇಶಂ ಪ್ರಭು
ಗುರುನುತಿಯಂ ಮಾಳ್ಪುದೆಂದು ಕರದೆನಗರುಪ
ಲ್ಪಿರಚಿಸಿದಂ ಪ್ರಭುನಟನಾ ....
....
ಸಾರತರ ಪ್ರಭುನಟನಾ
ತಾರಾವಳಿಯೀ ಸಮಸ್ತ ಬಕ್ತಮಹೇ
ಶ್ವರರಾರೈದ ಪಾಟಿಸಿ ನುತಿಸ
ಲ್ಕಿರೈಯಜ ನಿಟ್ಟಿಸಿವಿರೋಧಿಗಳಕ್ಕು ॥

.... ಸಿರುಪಿ.ದ ಅಲ್ಲಮ ಪ್ರ .... ಮಿಯ ನಟನ ತಾರಾವಳಿ ಸಂಪೂರ್ನ ಮಂಗಳ ಮ.ಹಾಶ್ರೀ ಶ್ರೀ

ವಿಷಯ : ಪ್ರಭುದೇವರು ಮದ್ದಳೆಯನ್ನು ಮಾಯೆಯ ನರ್ತನಕ್ಕೆ ಬಾರಿಸಿದ ಪ್ರಸಂಗ.

ವಿಶೇಷ : ಆದ್ಯಂತ ಗರಿಗಳು ತುದಿಯಲ್ಲಿ ಮುರಿದಿವೆ. ಮಧ್ಯದಲ್ಲಿರುವ ಗರಿಗಳನ್ನು ಅಲ್ಲಲ್ಲಿ ಹುಳುಗಳು ತಿಂದಿವೆ. ಈ ಕಟ್ಟಿನಲ್ಲಿ ನಾನಾರ್ಥ ರತ್ನಾಕರ, ಶಂಕರದೇವಕಂದ, ಎಲ್ಲ ಪುರಾತನರ ತ್ರಿವಿಧಿ, ಗುರುರಗಳೆ, ಎಂಬ ಕೃತಿಗಳಿವೆ. ೪ನೇ ಕ್ರಮಾಂಕದ ಗರಿ ಎರಡು ತುಂಡಾಗಿದೆ. ೧೧ನೇ ಗರಿ ಇಲ್ಲ.

961

ಕೆ. ೩೨೫/೨೫	**ಪ್ರಭುನಟನಾ ತಾರಾವಳಿ**	ಹಾಡು
೯.೫" × ೨"	ಮರಿರಾಚವಟ್ಟದೇವ	ಸು ೧೬೫೦
೩೧–೪೩ ಪತ್ರ	೧೦ ಪಂಕ್ತಿ	೪೫ ಅಕ್ಷರ

ಆದಿ : ಅಲ್ಲಮ ಪ್ರಭುನಟನಾ ತಾರಾವಳಿ ॥ ರಾಗ ಕಂನಡ ಕಾಂಬೋದಿ ॥

ಪಲ್ಲ॥ ಯೆಂತು ನುತಿಪೆ ನಿಂನ್ನ ಯೆತ್ತಿಗಳ ಕಲೆ ರಂನ್ನ
ಕಂತು ವಿಜಯ ಜೀಯ್ಯ ಪ್ರಭುರಾಯ ನಿರ್ಮಾಯಾ ನಾ
ನೆಂತ್ತು ನುತ್ತಿಪೆ ನೀಮ್ಮನು ॥

ಪದ॥ ನಿರು .... ನಿರಂಜನ ಶೂಂನ್ಯ ನಿಷ್ಕಲಪರ
ತರ ಸುಮಹಾಲಿಂಗ ಶಿವ ಸದಾಶಿವನಾದ
ಪರಿಪೂಂರ್ನಬ್ರಂಹ್ಮ ವೇಶಿ ಪಂಚಲಾಪನ ಥಿಂನೊ
ಪ್ಪುರುತಿರಲಲ್ಲಿಗೆ ಮಾಯ ಕೋಳಾಹಾಳ ॥

ಅಂತ್ಯ : ಸಾರತರಪ್ರಭುನಟನಾ
ತಾರವಳಿಯಿದು ಸಮಸ್ತ ಭಕ್ತಮಹೇಶ್ವರ
ರಾರೈದು ಪಠಿಸಿ ನುತಿಸ
ಲ್ಕೊರೆಯರೆ ನಿಷ್ಟಾ ಸಿದ್ಧಿವೃದ್ಧಿಗಳಕ್ಕುಂ ॥ ೨ ॥
ಮರಿರಾಚವಟ್ಟದೇವರು ನಿರೂಪಿಸಿದ ಪ್ರಭುದೇವರ ನಟನಾತಾರಾವಳಿ
ಸಮಾಪ್ತ ಮಂಗಳಮಹಾಶ್ರೀ ॥

ವಿಷಯ : ಪ್ರಭುದೇವರು ಮದ್ದಳೆಯನ್ನು ಮಾಯೆಯ ನರ್ತನಕ್ಕೆ ಬಾರಿಸಿದ ಪ್ರಸಂಗ.

ವಿಶೇಷ: ಈ ಗ್ರಂಥವು ಮೊದಲ ೯೭ ಗರಿಗಳಾದ ಮೇಲೆ ಮತ್ತೆ ಕ್ರಮಾಂಕ ೩೧ರಿಂದ ಪ್ರಾರಂಭವಾಗಿದೆ. ೩೧ನೇಗರಿ ತುಂಡಾಗಿದೆ. ೩೬ನೇ ಗರಿ ಇಲ್ಲ. ಅಲ್ಲಲ್ಲಿ ಹುಳುಗಳು ಗರಿಗಳನ್ನು ತಿಂದಿವೆ. ೪೩ ನೇ ಗರಿಯಾದನಂತರ ಮತ್ತೆ ೧ಳ ರಿಂದ ೧೯ ಸಂಖ್ಯೆಗಳುಳ್ಳ ಮತ್ತಾವುದೋ ಗ್ರಂಥವಿದೆ. ಅದರ ಆದಿ ಅಂತ್ಯ ಗಳು ದೊರಕಿಲ್ಲ. ಇದೇ ಕಟ್ಟಿನಲ್ಲಿ ನೀಲಲೋಚನೆ ಸ್ತವಿತ್ರ- ನೀಲಾಂಬಿಕೆಯ ತತ್ತ್ವಮಾಲಾಸ್ತೋತ್ರ ಮುಂತಾದ ೨೧ ಗ್ರಂಥಗಳಿವೆ.

962

ಕೆ.ಬಿ. ೨೮೨ | **ಪ್ರಭುನಟನಾ ತಾರಾವಳಿ** | ಹಾಡು
೮.೨"×೬.೫" | ಮರಿರಾಜವಟ್ಟದೇವ | ಸು. ೧೬೫೦
೧–೬ ಪತ್ರ | ೨೫ ಪಂಕ್ತಿ | ೩೨ ಅಕ್ಷರ

ಆದಿ : ಪ್ರಭುನಟನ ತಾರಾವಳಿ ಶೈವ ಗ್ರಂಥಾ ॥ ವೋಗುವರೀಗ ಜಾತರಿಗೆ ॥
ಶ್ರೀಸರ್ವಸಿದ್ಧಿ ಪ್ರದಾಯಕ ವಿನಾಯಕಾಯ ನಮಃ ॥ ರಾಗ ಸರಣಿ ॥
ಯಂತು ನುತಿಪೆ ನಿಂಮನು
ಯಂತು ನುತಿಪೆ ನಿಂಮ್ಮ ಯತಿಗಳ ತನೆಗಂನ
ಕಂತು ವಿಜಯ ಜಯ ಪ್ರಭುರಾಯ ನಿರ್ವಾಯ
ಯಂತು ನುತಿಪೆ ನಿಂಮನೂ ॥ ಪಲ್ಲ ॥

ನಿರುತ ನಿರಂಜನ ಶೂಂನ್ಯ ನಿಃಕಲ
ತರ ಸುಮಹಾಲಿಂಗಾ ಶಿವ ಸದಾಶಿವನಾದ
ಪರಿಪೂರ್ನ ಬ್ರಂಹ್ಮವೆ ಪಂಚಲಾಪನದಿ ನೊ
ಪ್ಪಿರುತಿರಲಿಲ್ಲಿಗೆ ಮಾಯೆ ಕೋಳಾಹಳ
ಬಿರಿದಂಕನಾಗಿರ್ದ ಅಲ್ಲಮಪ್ರಭು ಬರೆ
ಗಿರಿಸುತೆಯರಸನೋಲಗದೊಳಗಲ್ಲಿದ್ದ್ರ

ಕರಿಮುಖ ಶಾರ್ದೂಲಮುಖ ಘೋರಮುಖದಿಂದೆ
ನರಮುಖ ಮೇಷಹಿ ವೃಷಭ ವಾರಾಹಿಂದೆ
ಶರಭ ಗೋಮುಖದಶ್ವಮುಖರಾದಿಯಾಗಿರ್ದ
ಸ್ಥಿರಕಾಳರೂಪ ಪ್ರಮಥ ಸಂಕುಳದಿಂದೆ ॥

ಅಂತ್ಯ : ವಿದ್ಯಾಕಾರ ಪ್ರಭುವೆ ನಿಂಮ ಚಾರುಚರಣಕೆ ಪ್ರಸಂನ ದೇಶಿಕ ಕುಮಾರ ನೆಂದೆನಿಸುವ ಮರಿರಾಜವಟ್ಟಿತ ವೀರಮೈಲಾರ ನಿರಂಮ್ಯ ಕುಸುರನೂ

ಪಾರ ಗರ್ಜಿಸಿ ಮುಖ್ಯ ಧಾರುಣಿಯೊಳಗಾಸು ಕ್ರೂರ ಚಿದ್ಘನ ಪ್ರಭುದೇವ ಮುಖ್ಯವಾದ ಸಾರ ಸದ್ಭಕ್ತಿ ಗಂಗಾಧರ ನಟಿಸಿದ ಶೃಂಗಾರನುತಿಯನಿದನೂ ಪ್ರಾರ್ಥಿಸಿದಾತ ಸಾರಸಪದವೊಂದುತನು ಯನುತ ಮಾಯೆವಾರ ಗಂಬೀರ ವನೂ ಭಕ್ತಿಗ್ಙಾನವಾರ ಸಂಘಟಿಪುದೆನು ಚಿಂನನಿಯ ವಾರಪ್ಪು ಚಾರರನೂ ಯನುತ ಕೇಳೆ ವಾರವಂತಸೀತನೂ ನೀತಿಯ ಪೇಳಿ ॥ ಸಾರಸಮ್ಯಗಥರನು ಯಂದೆನುತ ವಿಘೋರ ತವರವೀವನು ನುತಿಸಿ ಬರೆ ವೀರತ್ವಪದವೀವನೂ॥ ಯಂತು ನುತಿಪೆ ನಿಂಮನೂ ॥ ೨೭ ॥ ಪ್ರಭುನಟನ ತಾಂಡವಳಿ ಸಂಪೂರ್ನ ಮಂಗಳ ಮಹಾಶ್ರೀ.

ವಿಷಯ : ಪ್ರಭುದೇವರು ಮದ್ದಳೆಯನ್ನು ಮಾಯೆಯ ನರ್ತನಕ್ಕೆ ಬಾರಿಸಿದ ಪ್ರಸಂಗ.

ವಿಶೇಷ : ನೋಡಿ ಬರಹ.

963

ಕೆ.೧೮೮/೬	**ಪ್ರಭುಲಿಂಗದ ಕಂದ (ಸಟೀಕು)**	ಕಂದ, ಟೀಕು
೧೭.೬"×೨"	ಮುರಿಗಾಸ್ವಾಮಿ	ಸು. ೧೫೩೦
೧೯–೨೭ ಪತ್ರ	೧೧ ಪಂಕ್ತಿ	೯೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯನಮಃ ॥
ಕಂ॥ ನಾದಾತ್ಮನಾದ ಪ್ರೇಮಗೆ
ವೇದಾಗಮ ಸಕಲಶಾಸ್ತ್ರಕಾದಿಯೆನಿಪ್ಪಗೆ
ಸಾಧಕರಿಗಸಾಧ್ಯಮಹಿಮಗೆ
ವೇದಾತ್ಮಕ ಶಾಂತವೀರಗವನತನಪ್ಪೆಂ ॥ ೧ ॥
ಶ್ರೀಮನ್ಮುರಿಗಾಖ್ಯ ಸ್ವಾಮಿಗಳು ಸ್ವಾತ್ಮಜ್ಞಾನದಿಂ ನಿರೂಪಿಸಿದ ಪ್ರಭುಲಿಂಗದ ಕಂದದ ಟೀಕಾ॥
ಕಂ॥ ಶ್ರೀಮತ್ಸಮಂತ ಮಂತ್ರ
ಸ್ತೋಮ ಪ್ರಭುಲಿಂಗರಾಜ ಕರಕಂಜಪುರ
ಸ್ವಾಮಿಸ್ವತಂತ್ರನಿಜ ನಿ
ಸ್ಸೀಮಾತುಳ ಶಾಂತವೀರ ಶಿವ ಜಯ ರುದ್ರಾ॥
ಟೀಕೆ॥ ಶ್ರೀಮತ್ ಷಡ್ಗುಣ್ಯೈಶ್ವರ್ಯವನುಳ್ಳಂಥಾ । ಮತ್ತಂ । ನಿರತಿ ಶಯೈಶ್ವರ್ಯವನುಳ್ಳಂಥಾ। ಸಮಂತ। ಲೇಸಾದಂಥಾ ಮಂತ್ರ। ಸಪ್ತಕೋಟಿ

ಮಹಾಮಂತ್ರ ವುಪಮಂತ್ರ ಕೋಟಾನಕೋಟಿ ಮಂತ್ರಂಗಳ। ಸ್ತೋಮ। ಸಮೂಹಕ್ಕೆ.

ಅಂತ್ಯ : ॥ ೫೨ ॥ ಪ್ರಭುಲಿಂಗದ ಬಾವನ್ನದ
ಶುಭನುತಿಗಳ ಪಠಿಸಿ ಕೋಪ ತಾಪ ನಿಷೇಧಾ
ದಿ ಭವಪ್ರಕೃತಿಗಳಳಿದ
ವಿಭವದ ನಿಜಭಕ್ತಿ ಮುಕ್ತಿ ಸುಖಪದವುಕ್ಕುಂ ॥

ಟೀಕೆ॥ ಪ್ರಭು ಸ್ವತಂತ್ರ ಕರ್ತೃರ್ವಾದಂಥಾ । ಲಿಂಗದ। ಲಯ ಗಮನಂಗಳಿಗೆ ಕಾರಣವಾದಿಷ್ಟಲಿಂಗದ । ಬಾವನ್ನದ । ಅಯ್ವತ್ತೆರಡಾದಂಥಾ । ಶುಭನುತಿಗಳ। ಮಂಗಲವಾದಂಥಾ ಸ್ತೋತ್ರಂಗಳನು । ಪಠಿಸಿ। ಪಾಠವ ಮಾಡಲಾಗಿ ಕೋಪ । ಸಿಟ್ಟು । ತಾಪ । ಸಂಜ್ವರವು । ನಿಷೇಧಾದಿ । ನಿಷಿದ್ಧ ಮೊದಲಾದಂಥಾ। ಭವಪ್ರಕೃತಿಗಳ್। ಜನ್ಮಸಂಸಾರ

ವಿಷಯ : ಇಷ್ಟಲಿಂಗಸ್ತುತಿ.

ವಿಶೇಷ : ಸಮಗ್ರ. ಶಕಟರೇಫ ಪ್ರಯೋಗವಿದೆ. ೨೮ ರಿಂದ ೪೦ರವರೆಗೆ ಪತ್ರಗಳು ಲೋಪ. ಬಾವನ್ನದ ನುತಿಗಳು ಎಂದರೆ ೫೨ ನುತಿಕಂದಗಳು ಸಮಗ್ರವಾಗಿದ್ದು. ಈ ನುತಿಗಳ ಟೀಕು ಕೊನೆಯ ಕಂದದಲ್ಲಿ ಸ್ವಲ್ಪಭಾಗ ಮಾತ್ರ ಇಲ್ಲವಾಗಿದೆ. ಈ ಗ್ರಂಥದೊಂದಿಗೆ ಶೀಲವಂತಯ್ಯನ ತ್ರಿವಿಧಿ, ಷಡ್ವಕ್ತ್ರ ಸ್ತೋತ್ರದ ಕನ್ನಡ ಟೀಕು ಮೊದಲಾದ ಇತರ ೧೫ ಗ್ರಂಥಗಳಿವೆ.

964

ಕೆ. ೩೧೬/೨	**ಪ್ರಭುಲಿಂಗದ ಕಂದ (ಸಟೀಕು)**	ಕಂದ, ಟೀಕು
೯.೭″ × ೨″	ಮುರಿಗಾಸ್ವಾಮಿ	ಸು ೧೫೩೦
೧೦೨–೧೧೪ ಪತ್ರ	೧೨ ಪಂಕ್ತಿ	೫೦ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ॥
ಕಂ॥ ನಾದಾತ್ಮನಾದ ಪ್ರೇಮಗೆ
ವೇದಾಗಮ ಸಕಲಶಾಸ್ತ್ರಕಾದಿ ಯೆನಿಪ್ಪಗೆ
ಸಾಧಕರಿಗೆ ಸಾಧ್ಯಮಹಿಮಗೆ
ವೇದಾತ್ಮಕ ಶಾಂತವೀರಗವನತನಪ್ಪೆಂ ॥ ೧ ॥

ಶ್ರೀಮನ್ಮುರಿಗಾಖ್ಯ ಸ್ವಾಮಿಗಳು ಸ್ವಾತ್ಮಜ್ಞಾನದಿಂ ನಿರೂಪಿಸಿ ಪ್ರಭುಲಿಂಗದ ಕಂದದ ಟೀಕಾ॥

ಕಂ ॥ ಶ್ರೀಮತ್ಸಮಂತಮಂತ್ರ
ಸ್ತೋಮ ಪ್ರಭುಲಿಂಗರಾಜ ಕರಕಂಜಪುರ
ಸ್ವಾಮಿ ಸ್ವತಂತ್ರ ನಿಜ ನಿ
ಸ್ಸೀಮಾತುಳಶಾಂತವೀರ ಶಿವ ಜಯ ರುದ್ರಾ ॥

ಟೀಕೆ ॥ ಶ್ರೀಮತ್ । ಷಡ್ಗುಣೈಶ್ವರ್ಯವನುಳ್ಳಂಥಾ । ಮತ್ತಂ । ನಿರತಿಶಯೈಶ್ವರ್ಯವನುಳ್ಳಂಥಾ । ಸಮಂತ । ಲೇಸಾದಂಥಾ । ಮಂತ್ರ । ಸಪ್ತಕೋಟಿಮಹಾಮಂತ್ರ ವುಪಮಂತ್ರ ಕೋಟಾನಕೋಟಿ ಮಂತ್ರಂಗಳ । ಸ್ತೋಮ। ಸಮೂಹಕ್ಕೆ x x x x ಕರಕಂಜಪುರ। ಹಸ್ತಾರವಿಂದವೆಂಬ ಪಟ್ಟಣಕ್ಕೆ । ಸ್ವಾಮಿ । ವಡೆಯನಾದಂಥಾ । ಯಲೆ ಯಿಷ್ಟ ಲಿಂಗದೇವನೆ । ಜಯ। ಸರ್ವೋತ್ಕೃಷ್ಟನಾಗು॥ ಇತ್ಯಾಶೀರ್ವಾದಮಂಗಲಂ ॥ ೧ ॥

ಅಂತ್ಯ : ॥ ೫೧ ॥ **ಪೂಜಾಸ್ತೋತ್ರದ ಜಪದಾ**
ಸ್ಸೈಜಧ್ಯಾನದ ಸಮಾಧಿಯಗಣಿತ ಘನದ್ವಾ
ರಾಜತ್ಪರಮಚಿದಂಕರ
ಸೋಜಿಗದನುಭಾವದಿಷ್ಟಲಿಂಗ ನಿರಂಗ ॥

ಟೀ ॥ **ಪೂಜಾ** । ಅರ್ಚನೆಯ । ಸ್ತೋತ್ರದ । ಸ್ತೌತ್ಯದ । ಜಪದ । ಮಂತ್ರೋಚ್ಚಾರಣೆಯ ॥ ಮತ್ತಂ x x x x ಯಿಷ್ಟಲಿಂಗನಿರಂಗ । ನಿರಾಕಾರ ಸ್ವರೂಪವಾದೆಲೆ ಯಿಷ್ಟಲಿಂಗದೇವನೆ । ಪಾಲಿಪುದು ರಕ್ಷಿಸುವುದು ॥ ೫೨ ॥ ಪ್ರಭುಲಿಂಗದ ಬಾವನ್ನದ । ಶುಭನುತಿಗಳ ಪಠಿಸೆ ಕೋಪ ತಾಪ ನಿಷೇಧಾ। ದಿಭ.

ವಿಷಯ : ಇಷ್ಟಲಿಂಗಸ್ತುತಿ.

ವಿಶೇಷ : ೫೨ ಕಂದಗಳಿಗೆ ಸಮಗ್ರ ವ್ಯಾಖ್ಯಾನವಿದೆ. ಫಲಸ್ತುತಿರೂಪ ಅಂತ್ಯ ಕಂದಗಳು ಲುಪ್ತವಾಗಿವೆ. ಅಸಮಗ್ರ. ಶಕಟರೇಫವುಂಟು, ಇದರೊಂದಿಗೆ ಶತಕತ್ರಯವ್ಯಾಖ್ಯಾನವೂ ಗುರುಸ್ತೋತ್ರ ತ್ರಿವಿಧಿ ವ್ಯಾಖ್ಯಾನವೂ ಕೆಲಖಿಲ ಪತ್ರಗಳೂ ಇರುತ್ತವೆ. ೧೧೫ರಿಂದ ೧೨೩ರ ವರೆಗೆ ಇರುವ ಪತ್ರಗಳಿಲ್ಲ.

965

ಕೆ. ೩೬೯/೧೩ **ಪ್ರಭುಲಿಂಗದ ಕಂದ** ಕಂದ

೮" × ೧.೮" ಮುರಿಗಾಸ್ವಾಮಿ ಸು. ೧೫೩೦

೯೪–೯೮ ಪತ್ರ ೯ ಪಂಕ್ತಿ ೪೧ ಅಕ್ಷರ

ಆದಿ : ಮುರಿಗಾಸ್ವಾಮಿಗಳು ನಿರೂಪಿಸಿದ ಪ್ರಭುಲಿಂಗದ ಕಂದ ||
ಶ್ರೀಮತ್ಸಮಂತ್ರಮಂತ್ರ
.... ಪ್ರಭುಲಿಂಗರಾಜಕರ ಕಂಪಿಪುರ
ಸ್ವಾಮಿ ಸ್ವತಂತ್ರ ನಿಜ ನಿ
ಸ್ಸೀಮ ಮಾತುಳ ಶಾಂತವೀರ ಶಿವ ಜಯ || ೧ ||
ಆಮಿಷ ಓನ್ಮಿಗಮಾಗಮ
ಕೋಮಲಮತಿಗತಿ ವಿಶೇಷಭೂಷಣ ಭವಭಿ
ತ್ಕಾಮಹರ ಕಾ .... ಜನ
ರಾಮಾಂಚಿತ ರಾಜಮೂರ್ತಿ ಲಿಂಗ ಪ್ರಭುವೇ || ೨ ||

ಅಂತ್ಯ : ಪ್ರಭುಲಿಂಗದ .... ವಂನದ
ಶುಭನುತಿಗಳ ಪಠಿಸಿ ಕೋಪ ತಾಪ ನಿಷೇಧಾ
ದಿ ಭವಪ್ರಕೃತಿಗಳಳಿದ
ವಿಭವ .... ನಿಜಭಕ್ತಿಮುಕ್ತಿ ಸುಖಪದಮಕ್ಕುಂ || ೫೩ ||
ಮುರಿಗಾಸ್ವಾಮಿಗಳು ನಿರೂಪಿಸಿದ ಪ್ರಭುಲಿಂಗದ ಕಂದ ಸಮಾಪ್ತ ಮಂಗಳ ಮಹಾಶ್ರೀ ||

ವಿಷಯ : ಇಷ್ಟಲಿಂಗ ಸ್ತುತಿ.

ವಿಶೇಷ: ಈ ಗ್ರಂಥವು ಶಿಥಿಲವಾಗಿದೆ. ಸಮಗ್ರ ಆದರೆ ಅಲ್ಲಲ್ಲಿ ಲುಪ್ತ. ಇದೇ ಕಟ್ಟನಲ್ಲಿ ಗುರು, ಷಡಾಕ್ಷರಿ, ಬಸವ, ಮನೋವಿಕಾರ ನಿರಸನ, ಭಕ್ತಿಬಿನ್ನಹ ರಗಳೆಗಳೂ, ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ, ಶಂಕರದೇವ, ಮರುಳುದೇವರ ಕಂದಗಳೂ, ಅಕ್ಷರ ಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ, ಶತಕತ್ರಯ, ಮಲ್ಹಣ ಸ್ತೋತ್ರ ಗ್ರಂಥಗಳಿವೆ.

966

ಕೆ. ೧೫೪	**ಪ್ರಭುಲಿಂಗ ಲೀಲೆ**	ಭಾಮಿನೀಷಟ್ಪದಿ
೧೨"×೧.೩"	ಚಾಮರಸ	೧೪೩೦
೧—೧೮೫ ಪತ್ರ	೪ ಪಂಕ್ತಿ	೬೨ ಅಕ್ಷರ

ಆದಿ : ಪ್ರಭುಲಿಂಗಲೀಲೆಯ ಬರವುದಕ್ಕೆ ಶುಭಮಸ್ತು॥
ರಾಗ ಮಲಹರಿ ॥ ಪಲ್ಲವ ॥
ಶ್ರೀಮದಮೃತಾಂಸು ಪ್ರಮೌಳಿ
ಪ್ರೇ .... ಳಿಗಾನಂದ ನಿತ್ಯವ
ನೇಮಿಸಿದನೆಂಮಲ್ಲಮಪ್ರಭು ಗುರುಗೊಹೇಶ್ವರನೂ ॥

ಪದನು ॥ ಶ್ರೀಮದಮಲನ್ಯಾನ ಭಕ್ತಿ
ಪ್ರೇಮ ವೇದ ಪೂರಾಣ ಶಾಸ್ತ್ರ
ಸ್ತೋಮನುತನತ ಚಾರು .... ಭೋಜ ಘನಮಹಿಮಾ
ನಾಮರೂಪು ಶ್ರೀಕಳಾಪ ವಿ
ರಾಮನನುಪಮ ದಿವ್ಯತೇಜೋ
ವ್ಯೋಮ ಮೂರುತಿ ಗುರುಗೊಹೇಶ್ವರಲಿಂಗ ಶರಣಾರ್ತ್ಥಿ ॥ ೧ ॥

x x x x

ಸತ್ತವರ ಕಥೆಯಲ್ಲ ಜನನದ
ಕುತ್ತದಲಿ ಕುದಿಕುದಿದು ಕರ್ಮ್ಮದ
ಕತ್ತಲಿಗೆ ಸಿಲುಕುವರ ಸೀಮೆಯ ಮಾತು ತಾನಲ್ಲಾ
ಹೊತ್ತು ಹೋಗದೆ ಪುಂಡರಾಲಿಪ
ಮತ್ತಮತ್ತಿಗಳ ಗೋಷ್ಠಿಯಲ್ಲಿದು
ಸತ್ಯಸರಣರು ತಿಳಿಉದೀ ಪ್ರಭುಲಿಂಗಲೀಲೆಯನೂ ॥ ೧೩ ॥

ಅಂತ್ಯ : ವೊಂದುಸಾವಿರ ವೊಂದುಶತ ಹಂ
ನೊಂದು ಪದನೆಂದೆಂಬ ಪರುಶದ
ಸಂದ ಶಿಲೆಯನು ಬಳಸಿ ಯಿಪ್ಪತ್ತೈದು ಗತಿಯೆಂಬಾ
ಹೊಂದಿ .... ಳ ಬಲಿ
ದಂದವಿಸಿಯಲ್ಲಮನ ಪರಮಾ
ನಂದಲೀಲಾಮೃತ ಸರೋವರವಾಯಿತು ಜಗವೊಗೆಯ ॥ ೨೫ ॥

ಅಂತು ಗತಿ ೨೫ ಕ್ಕಂ ಪದನೂ ೧೧೧೧ಕ್ಕಂ ಮಂಗಳ ಮಹಾಶ್ರೀ॥ ತಪ್ಪಂ ಬರದಾತಂ x x x x ॥ ೧ ॥

ಶ್ರೀಗುರು ಗೊಹೇಶ ಚರಣಂ।
ರಾಗದಿ .... ಪರಹಿಶಾಂತಹ್ಕರಣಂ ನಿಖಿ
ಳಾಗಮ ನಿಪುಣಂ ಸನಾಮಸೀಮಂ ಚಾಮಂ ॥

ಪರಾಭವ ಸಂವತ್ಸರದ ಮಾಘ ಶುದ್ಧ ೧೫ಯು....ಣ ಕಾಲದಲ್ಲಿ ಶ್ರೀಭವ ರೋಗ ವೈದ್ಯನ ಸದ್ಭಕ್ತರೂ ಪೂರಣದೊಡೆರು ಬರದ ಶ್ರೀ ಪ್ರಭುಲಿಂಗ ಲೀಲೆ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಅಲ್ಲಮಪ್ರಭುದೇವನ ಚರಿತ್ರೆ.

ವಿಶೇಷ : ಪ್ರತಿಯೊಂದು ಪತ್ರವನ್ನೂ ಹುಳುಗಳು ಅಲ್ಲಲ್ಲಿ ತಿಂದಿರುವುದರಿಂದ ರಂಧ್ರಗಳು ಬಿದ್ದಿವೆ. ಕೆಲವು ಪತ್ರಗಳು ಶಿಥಿಲವಾಗಿವೆ. ಶಕಟರೇಫದ ಬಳಕೆಯಿದೆ.

967

ಕೆ. ೧೮೦/೧	**ಪ್ರಭುಲಿಂಗಲೀಲೆ**	ಭಾಮಿನೀ ಷಟ್ಪದಿ
೧೧.೩"x೧.೯"	ಚಾಮರಸ	೧೪೩೦
೧-೭೧ ಪತ್ರ	೧೨ ಪಂಕ್ತಿ	೬೮ ಅಕ್ಷರ

ಆದಿ : ಪ್ರಭುಲಿಂಗಲೀಲೆಯ ಬರವುದಕ್ಕೆ ಶುಭಮಸ್ತು ॥ ರಾಗ ನಾಟ ॥
ವಚನ ॥ ಆದಿಯ ವೊಬ್ಬ ಮೂರ್ತಿಯಾದ। ಆತನ ಮೂರ್ತಿಯಿಂದ ಸದಾಶಿವನಾದ । ಆ ಸದಾಶಿವನ ಮೂರ್ತಿಯಿಂದ ಜ್ಞಾನಶಕ್ತಿಯಾದಳು x x x λ x x ಕೂಡಲ ಚೆನ್ನಸಂಗಯ್ಯ ॥ ೧ ॥

ಕಂದ ॥ ಶ್ರೀ ಗುರು ಗೊಹೇಶ್ವರ ಶರಣಂ
ರಾಗದ್ವೇಶಾದಿ ವಿರಹಿತಾಂತಃಕರಣಂ
ಯೋಗನುತಾಚರಣಂ ನಿಖಿ
ಳಾಗಮ ನಿಪುಣಂ ಸುನಾಮಸೀಮಂ ಚಾಮಂ ॥ ೨ ॥

ಕಂದ || ಪ್ರಭುಲಿಂಗಲೀಲೆಗೊಪ್ಪುವ
ಶುಭದಿಪ್ಪತ್ತೈದು ಗತಿಗಳಂತಾ ಗತಿಯೊಳು
ಪ್ರಭು ಲಿಂಗಲೀಲೆಗದನ
ಪ್ರಭುಕಿಱುಗಂನೆಡೆಯೊಳೆಸೆವ ತೆಱದಿಂದೆಸಗುಂ || ೫ ||

ಮೊದಲ ಗತಿಯೊಳು ಪುರಾತರ
ಪದ ಪದ್ಮಂಗಳ ಸಮಸ್ತ ಸಂಖ್ಯಾದಿಕಾ
ಸ್ಪದ ದೇವತಾ ಭವಾಳಿ
ಮುದದಿಂ ಪ್ರಭುಲಿಂಗಲೀಲೆಯೊಳ್ಪ್ರಕಟಿಸುಗುಂ || ೬ ||

|| ರಾಗ ಲಳಿತೆ || ಪಲ್ಲವ ||
ಶ್ರೀಮದಮೃತಾಂಶು ಪ್ರಮೌಳಿ
ಪ್ರೇಮಿಗಳಿಗಾನಂದ ನಿತ್ಯವ
ನೇಮಿಸಿದನೆಂಮಲ್ಲಮಾಪ್ರಭು ಗುರು ಗುಹೇಶ್ವರನೂ ||

ಪದನ೦ || ಶ್ರೀಮದಮಲ ಜ್ಞಾನ ಭಕ್ತಿಯ
ಪ್ರೇಮ ವೇದ ಪುರಾಣ ಶಾಸ್ತ್ರ
ಸೋಮನುತ ನತ ಚಾರು ಚರಣಾಂಭೋಜ ಘನಮಹಿಮಾ
ನಾಮರೂ ಕ್ರೀಕಳಾಪ ವಿ
ರಾಮನನುಪಮ ದಿವ್ಯ ತೇಜ್ಯೋ
ವ್ಯೋಮ ಮೂರುತಿ ಗುರು ಗೊಹೇಶ್ವರ ಲಿಂಗ ಶರಣಾರ್ತ್ತಿ || ೧ ||

ಅಂತ್ಯ : ವೊಂದು ಸಾವಿರದೊಂದುಶತ ಹಂ
ನೊಂದು ಪದನೆಂದೆಂಬ ಪರುಷದ
ಸಂದ ಶಿಲೆಯನು ಬಳಸಿ ಯಿಪ್ಪತ್ತೈದು ಗತಿಯೆಂಬಾ
ಹೊಂದಿಗೆಯ ಸೋಪಾನಗಳ ಬಲಿ
ದಂದವಿಸೆ ಯಲ್ಲಮನ ಪರಮಾ
ನಂದ ಲೀಲಾಮೃತ ಸರೋವರವಾಯ್ತು ಜಗದೊಳಗೆ || ೨೫ ||

ಅಂತು ಗತಿ ೨೫ ಕ್ಕಂ ಪದ ೧೧೧೧ ಕ್ಕಂ ಮಂಗಳ ಮಹಾಶ್ರೀ ಶ್ರೀ||
ಪ್ರಭುಲಿಂಗಲೀಲೆ ಸಮಾಪ್ತ ಮಂಗಳ ಮಹಾ

ವಿಷಯ : ಅಲ್ಲಮಪ್ರಭುದೇವನ ಚರಿತ್ರೆ.

ವಿಶೇಷ : ಶಕಟರೇಫದ ಬಳಕೆಯಿದೆ. ಅಕ್ಷರಗಳು ಸ್ಫುಟವಾಗಿವೆ. ಈ ಕಟ್ಟಿನಲ್ಲಿ ಭೈರವೇಶ್ವರ ಕಾವ್ಯ, ಪಂಚಾಶಿಕೆ, ಯೋಗಪ್ರದೀಪಿಕಾ, ಎಂಬ

ಗ್ರಂಥಗಳಿವೆ. ಕೊನೆಯ ಎರಡು ಪತ್ರಗಳಲ್ಲಿ ಬೆಡಗಿನ ವಚನದಂತಿರುವ ಹಾಡುಗಳಿವೆ.

968

ಕೆ. ೩೨೪	**ಪ್ರಭುಲಿಂಗಲೀಲೆ**	ಭಾಮಿನೀಷಟ್ಪದಿ
೧೨.೫"X೨"	ಚಾಮರಸ	೧೪೩೦
೧–೬೯ ಪತ್ರ	೧೦ ಪಂಕ್ತಿ	೭೦ ಅಕ್ಷರ

ಆದಿ : ಪ್ರಭುಲಿಂಗಲೀಲೆಯ ಬರವುದಕ್ಕೆ ಶುಭಮಸ್ತು॥
ಆ ...ಲೊಬ್ಬ ಮೂರ್ತಿಯಾದ ಆತನ ಮೂರ್ತ್ತಿಯಿಂದ । ಸದಾಶಿವನಾದ ।
ಆ ಸದಾಶಿವನ ಮೂರ್ತ್ತಿಯಿಂ । ಜ್ಞಾನಶಕ್ತಿಯಾದಳು x x x x x
ಕೂಡಲ ಚೆಂನ ಸಂಗಮ ದೇವಯ್ಯ ॥ ೧ ॥ ರಾಗ ಮಲಹರಿ ॥
ಶ್ರೀಮದಮ್ರುತಾಂಶುಪ್ರಭಾವಳಿ
ಪ್ರೇಮಿಗಳಿಗಾನಂದ ನಿತ್ಯವ
ನೇಮಿಸಿದನೆಂಮಲ್ಲಮಪ್ರಭು ಗುರು ಗೊಹೇಶ್ವರನೂ ॥

॥ ಪಲ್ಲ ॥ ಶ್ರೀಮದಮಲಜ್ಞಾನ ಭಕ್ತಿ
ಪ್ರೇಮ ವೇದ ಪುರಾಣ ಶಾಸ್ತ್ರ
ಸ್ತೋಮ ನುತ ನತ ಚಾರು ಚರಣಾಂಭೋಜ ಘನಮಹಿಮಾ
ನಾಮರೂಪ ಕ್ರಿಯೆ ಕಳಾಪ....
ರಾಮನನುಪವ ಪುಂಣ್ಯ ತೇಜ
ವ್ಯೋಮ ಮೂರುತಿ ಗುರು ಗೊಹೇಶ್ವರಲಿಂಗ ಶರಣಾರ್ಥಿ ॥ ೧ ॥

ಅಂತ್ಯ : ವೊಂದು ಸಾವಿರದೊಂದು ಶತ ಹ
ನ್ನೊಂದು ಪದನೆಂದೆಂಬ ಪರುಷದ
ಸಂದ ಶಿಲೆಯನು ಬಳಸಿದಿಪ್ಪತ್ತೈದು ಗತಿಯಂಬಾ
ಹೊಂದಿಗೆಯ ಸೋಪಾನಗಳ....
............ನ ಪರಮಾ
ನಂದ ಲೀಲಾಮೃತ ಸರೋವರವಾಯಿತು ಜಗದೊಳಗೆ ॥ ೨೫ ॥
ಕಂದ ॥ ಅತಿಶಯದ ಶರಣ ಚರಣ x x x x ಗೊಹೇಶ್ವರಲಿಂಗಾ ॥ ೧ ॥
ಅಂತೂ ಗತಿ ೨೫ ಕ್ಕಂ ಪದನು ॥ ೧.೧೧೧ ಕ್ಕಂ ಮಂಗಳ ಮಹಾಶ್ರೀ.

ವಿಷಯ : ಅಲ್ಲಮಪ್ರಭುದೇವನ ಚರಿತ್ರೆ

ವಿಶೇಷ : ಆದ್ಯಂತ ಪತ್ರಗಳು ಶಿಥಿಲವಾಗಿದ್ದು ಗ್ರಂಥಭಾಗವು ಲುಪ್ತವಾಗಿದೆ. ಮಧ್ಯದಲ್ಲೂ ಕೆಲವು ಪತ್ರಗಳು ಶಿಥಿಲವಾಗಿವೆ. ಶಕಟರೇಫದ ಪ್ರಯೋಗವಿದೆ.

969

ಕೆ. ೩೫೬	**ಪ್ರಭುಲಿಂಗಲೀಲೆ**	ಭಾಮಿನೀಷಟ್ಪದಿ
೧೪.೮" × ೧.೫"	ಚಾಮರಸ	೧೪೩೦
೧–೧೧೮ ಪತ್ರ	೭ ಪಂಕ್ತಿ	೬೨ ಅಕ್ಷರ

ಆದಿ : ಪ್ರಭುಲಿಂಗಲೀಲೆ ॥ ವಚನ ॥ ಸಹಜದಿಂದ ನಿರಾಲಂಬವಾಯಿತ್ತು । ನಿರಾಲಂಬದಿಂದ ನಿರಾಳವಾಯಿತ್ತು । ನಿರಾಳದಿಂದ ನಿರವಯವಾಯಿತ್ತು । ನಿರವಯದಿಂದ ಆದಿಯಾಯಿತ್ತೂ । x x x x ಕೂಡಲ ಚಂನ ಸಂಗಯ್ಯ ॥ ೨ ॥ ರಾಗದ್ವೇಷ ವಿರಹಿತಾಂತಃಕರಣಂ x x x x ಲೀಲೆಯೊಳ್ ಪ್ರಕಟಿಸುಗುಂ ॥ ೭ ॥ ರಾಗ ಶಾಂತಮಲಹರಿ ॥
॥ ಪಲ್ಲವ ॥ ಶ್ರೀಮದಮೃತಾಂಶು ಪ್ರಮೌಳಿ
ಪ್ರೇಮಿಗಳಿಗಾನಂದ ನಿತ್ಯವ
ನೇಮಿಸಿದನೆಂಮಲ್ಲಮಪ್ರಭು ಗುರು ಗೊಹೇಶ್ವರನೂ ॥

॥ ಪದ ॥ ಶ್ರೀಮದಮಲಜ್ಞಾನ ಭಕ್ತಿ
ಪ್ರೇಮ ವೇದ ಪುರಾಣ ಶಾಸ್ತ್ರ
ಸ್ತೋಮನುತ ನತ ಚಾರು ಚರಣಾಂಭೋಜ ಘನಮಹಿಮಾ
ನಾಮರೂಪ ಕ್ರಿಯೆ ಕಳಾಪ ವಿ
ರಾಮನನುಪಮ ದಿವ್ಯ ತೇಜ
ವ್ಯೋಮ ಮೂರುತಿ ಗುರು ಗೊಹೇಶ್ವರಲಿಂಗ ಶರಣಾರ್ಥಿ ॥ ೧ ॥

ಅಂತ್ಯ : ವೊಂದು ಸಾವಿರದೊಂದು ಶತ ಹಂ
ನೊಂದು ಪದನೆಂದೆಂಬ ಪರುಷದ
ಸಂದ ಶಿಲೆಯನು ಬಳಸಿದಿಪ್ಪತ್ತೈದು ಗತಿಯೆಂಬಾ
ಹೊಂದಿಗೆಯ ಸೋಪಾನಗಳ ಬಲಿ
ದಂದವಿಸಿಯಲ್ಲಮನ ಪರಮಾ
ನಂದ ಲೀಲಾಮೃತ ಸರೋವರವಾಯ್ತು ಜಗದೊಳಗೆ ॥ ೨೫ ॥
ಅಂತ್ತು ಗತಿ ೨೫ ಕ್ಕಂ ಪದ ೧೧೧೧ ಕ್ಕ ಶ್ರೀ॥

ಸಿದ್ಧಾರ್ತ್ಥಿ ಸಂವತ್ಸರದ ಕಾರ್ತ್ತಿಕ ಶುದ್ಧ ೫ ರಲ್ಲು ವಿರಕ್ತ ಮಹತ್ತ್ರದೇವರಿಗೆ ಹೆಗ್ಗವಾಡಿಪುರದ ಚೆಂನಮಲ್ಲಿಕಾರ್ಜ್ಜುನ ದೇವರು ತಮ್ಮ ಭಕ್ತಿಯಿಂದ ಬರಸಿಕೊಟ್ಟ ಪ್ರಭುಲಿಂಗಲೀಲಾಕಥನಂ ಶಿವಾರ್ಪಿತಂ ಮಂಗಳ ಮಹಾಶ್ರೀ ||

ವಿಷಯ : ಅಲ್ಲಮಪ್ರಭುದೇವನ ಚರಿತ್ರೆ.

ವಿಶೇಷ : ಶಕಟರೇಫದ ಬಳಕೆಯಿದೆ. ೧೨ ನೆಯ ಪತ್ರ ಅರ್ಧಕ್ಕೆ ಮುರಿದು ಲುಪ್ತ ವಾಗಿದೆ. ಉಳಿದ ಪತ್ರಗಳಲ್ಲಿ ಹುಳು ತಿಂದಿರುವುದರಿಂದ ಅಲ್ಲಲ್ಲಿ ರಂಧ್ರ ಗಳು ಬಿದ್ದಿವೆ. ಈ ಕಟ್ಟಿನಲ್ಲಿ ಸಿದ್ಧೇಶ್ವರ ಪವಾಡದ ಪ್ರಬಂಧ, ಕಲಿಗಣ ನಾಥನ ತಾರಾವಳಿ, ಗೌರವಾಂಕನ ಪ್ರಬಂಧ ಎಂಬ ಗ್ರಂಥಗಳಿಗೆ ಸಂಬಂಧ ಪಟ್ಟ ಏಳು ಪತ್ರಗಳೂ, ತರುವಾಯ ಮೂರು ಶುದ್ಧ ಪತ್ರಗಳೂ, ಆ ಬಳಿಕ ಮೂರು ಪತ್ರಗಳಲ್ಲಿ ಚನ್ನಬಸವಾದಿ ಶರಣರ ವಚನಗಳೂ ಇವೆ.

970

ಕೆ. ೪೫೧/೧	**ಪ್ರಭುಲಿಂಗಲೀಲೆ**	ಭಾಮಿನೀಷಟ್ಪದಿ
೧೩.೧″ × ೧.೪″	ಚಾಮರಸ	೧೪೩೦
೧—೧೨೬ ಪತ್ರ	೭ ಪಂಕ್ತಿ	೬೧ ಅಕ್ಷರ

ಆದಿ : ಪ್ರಭುಲಿಂಗಲೀಲೆ ಬರವವಕ್ಕೆ ಶುಭಮಸ್ತು ನಿರ್ವಿಗ್ನಮಸ್ತು|| ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಪಭುಲಿಂಗಲೀಲೆಯ ಪ್ರತವು ಪೀಠಿಕಾ ಬರವುದಕ್ಕೆ ಶುಭಮಸ್ತು || ಶ್ರೀ ಕೈಲಾಸ ಪುರವರಾಧೀಶ್ವರನ ದ್ಯಾನಾರೂಢರುಮಪ್ಪ ಶಿವೈಕ್ಯರ ವಪ್ಪವೆಂತೆಂದಡೇ || ಮತ್ತ್ರೊಪ್ಪುವದುಂ| x x x x ಕಾಣಾ ಗುಹೇಶ್ವರಾ || ೩ || ಕಂದಾ || ಶ್ರೀ ಗುರ್ರು ಗುಹೇಶ್ವರ ಶರಣುಂ| x x x x ಪ್ರಭುಲಿಂಗಲೀಲೆಯೊಳ್ಪ್ರಕಟಿಸುಗುಂ || ೮ ||

ಪಲ್ಲವ || ಶ್ರೀ ಮದಾಂಮೃತಾಂಸು ಪ್ರಮೌಳಿ
ಪ್ರೇಮಿಗಳಿಗಾನಂದ ನಿತ್ಯವ
ನೇಮಿಸಿದನೆಂಮಲ್ಲಮಾಪ್ರಭು ಗುರುಗುಹೇಶ್ವರನೂ
ಪದನೂ || ಶ್ರೀ ಮದಮಲಗ್ನಾನ ಭಕ್ತಿ
ಪ್ರೇಮ ವೇದ ಪುರಾಣ ಶಾಸ್ತ್ರ
ಸ್ತೋಮ ನತ ನುತ ಚಾರ್ರು ಚರಣಾಂಭೋಜ ಘನ ಮಹಿಮಾ

ನಾಮ ರೂಪು ಕ್ರೀ ಕಳಾಪ ವಿ
ರಾಮನನುಪಮ ದಿವ್ಯ ತೇಜ
ವ್ಯೋಮ ಮೂರ್‍ರುತಿ ಗುರು ಗುಹೇಶ್ವರವಿಂಗೆ ಶರಣಾರ್ತಿ ॥ ೧ ॥

ಅಂತ್ಯ : ವೊಂದುಸಾವಿರದೊಂದು ಶತ ಹಂ
ನೊಂದು ಪದನೆಂದೆಂಬ ಪರ್‍ರುಷದ
ಸಂದ ಸಿಲೆಯನು ಬಳಸಿ ಯಿಪ್ಪತ್ತೈದು ಗತಿಯಂಬಾ
ಹೊಂದಿಗೆಯ ಸೋಪಾನಗಳ ಬಲಿ
ದಂದವಿಸಿಯಲ್ಲಮನ ಪರಮಾ
ನಂದ ಲೀಲಾವೃತ ಸರೋವರವಾಯಿತು ಜಗ ಹೊಗಳೇ ॥ ೨೫ ॥

ಕಂದ ॥ ಶ್ರೀ ಗುರ್‍ರು ಗೊಹೇಶ್ವರನ ಶರಣಂ
ರಾಗದ್ವೇಷಾದಿ ವಿರಹಿತಂತಹ್ಕರಣಂ
ರೋಗ ಮ್ಮೃದಾಚರಣಂ ನಿಖಿ
ಲಾಗಮ ನಿಪುಣಂ ಸ್ಸನಾಮ ಸ್ಸೀಮಾಚಾರ್ಯ್ಯಂ ॥

ಅಂತೂ ಗತಿ ೨೫ ಕ್ಕಂ ಪದನೂ ॥ ೧೧೧೧ ಕಂ ಮಂಗಳ ಮಹಾಶ್ರೀ

ವಿಷಯ : ಅಲ್ಲಮಪ್ರಭುದೇವನ ಚರಿತ್ರೆ.

ವಿಶೇಷ : ೧೫ ನೆಯ ಪತ್ರದಲ್ಲಿ ಸ್ವಲ್ಪ ಭಾಗವನ್ನು ಹುಳು ತಿಂದಿದೆ. ೧೬ ನೆಯ ಪತ್ರ ಕಾಲುಭಾಗ ಮುರಿದು ಲುಪ್ತವಾಗಿದೆ. ಕೊನೆಯ ಪತ್ರ ಮೇಲ್ಭಾಗದಲ್ಲಿ ಸ್ವಲ್ಪ ಮುರಿದು ಲುಪ್ತವಾಗಿದೆ. ೯೦ ನೆಯ ಪತ್ರದ ಒಂದು ಭಾಗದಲ್ಲಿ ಮಾತ್ರ ಬರವಣಿಗೆಯಿದೆ. ಇದೇ ಕಟ್ಟನಲ್ಲಿ ಬಸವ ಚರಿತ್ರೆ ಎಂಬ ಮತ್ತೊಂದು ಗ್ರಂಥವಿದೆ.

971

ಕೆ.ಎ. ೧೭೦	**ಪ್ರಭುಲಿಂಗಲೀಲೆ**	ಭಾಮಿನೀ ಷಟ್ಪದಿ
೧೨.೯"X೮.೪"	ಚಾಮರಸ	೧೪೩೦
೭–೧೧೧ ಪತ್ರ	೨೦ ಪಂಕ್ತಿ	೨೬ ಅಕ್ಷರ

ಆದಿ : ಸರ್ಕ ೧೮೮೩ ನೆಯ ಯಿಸವಿ ಸಪಟ್ಟಂಬರ್ ತಾರೀಕು ೨೦ಕ್ಕೆ ಸರಿಯಾದ ಸ್ವಭಾನು ಸಂವತ್ಸರದ ಆಶ್ವೀಜ ಬಹುಳ ೫ಯಲ್ಲು ಪ್ರಭುಲಿಂಗಲೀಲೆ ಬರೆಯುುವದಕ್ಕೆ ಶುಭಮಸ್ತು ॥ x x x x

ಶ್ರೀಮತ್ಪರಮ ತತ್ವಪರಮಾರ್ಥ ಪರಮೇಶ್ವರ ಅಗಂಮ್ಯ x x x x
ಮೊದಲಗತಿಯೊಳು ಪುರಾತರ
ಪಾದವ ಸ್ತುತಿಸಿ ಸಮಸ್ತಶಕ್ತ ದೀ
ರಾಸ್ಪದ ದೇವತಾಭವಾಳಿಯು
ಮುಧದಿಂ ಪ್ರಭುಲಿಂಗಲೀಲೆಯೊಳು ಪ್ರಕಟಿಸುಗುಂ ॥ ೪ ॥

ರಾಗ ॥ ಮಲಾಹಾರ ॥

ಭಾಮಿನಿ ಷಟ್ಪದಿ ಪಲ್ಲವಾ ॥
ಶ್ರೀಮದಮೃತಾಂಶು ಪ್ರಮೌಳಿ
ಪ್ರೇಮಿಗಳಿಗಾನಂದ ನಿತ್ಯವ
ನೇಮಿಸಿದ ನಂಮಲ್ಲಮಾಪ್ರಭು ಗುರುಗುಹ್ಯೇಶ್ವರನೂ ॥

ಪದನೂ ॥ ಶ್ರೀಮದಮಲಜ್ಞಾನ ಭಕ್ತಿ
ಪ್ರೇಮ ವೇದ ಪುರಾಣ ಶಾಸ್ತ್ರ
ಸ್ತೋಮ ನುತ ನತ ಚಾರು ಚರಣಾಂಭೋಜ ಘನಮಹಿಮಾ
ನಾಮರೂಪಕ್ರಿಯ ಕಳಾಪ್ರವಿ
ರಾಮನನುಪಮ ದಿವ್ಯತೇಜೋ
ವ್ಯೋಮ ಮೂರುತಿ ಗುರುಗುಂಹ್ಯೇಶ್ವರಲಿಂಗ ಶರಣಾರ್ತಿ ॥ ೧ ॥

ಅಂತ್ಯ : ವಂದು ಸಾವಿರದೊಂದು ಶಕ ಹಂ
ನೊಂದು ಪದನೆಂದೆಂಬ ಪರುಷದ
ಸಂದ ಶಿಲೆಯನು ಬಳಸಿಯಿಪ್ಪತ್ತೈದು ಗತಿಯೆಂಬಾ
ಹೊಂದಿಕೆಯ ಸೋಪಾನಗಳ ಬಲಿ
ದಂದವಿಸಿಯಲ್ಲಮನ ಪರಮಾ
ನಂದ ಲೀಲಾಮೃತ ಸರೋವರವಾಯ್ತು ಜಗವರಿಯೆ ॥ ೨೪ ॥

ಅಂತು ಗತಿ ೨೫ಕ್ಕಂ ಪದನು ೧೧೧೧ಕ್ಕಂ ಮಂಗಳ ಮಹಾಶ್ರೀ
ಯಿದ್ದಂತಿದ್ದ ನಿಧಾನವ
ತಿದ್ದೈವವರದಾರು ಮುಂನ ಕರದಂದವರ
ಸದ್ದಿಲ್ಲದೆ ತಿಳಿದಾತ್ಮನೋ
ಳಿದ್ದಂತಿರಬೇಕು ಶಿವಯೋಗಿ ಶುಂಡೈತೇ ॥
ಶಶಿಧರನ ಲೀಲಾಮೃತವನಾ
ಬಸವರಾಜನ ಕರುಣವಡೆಯಲು
ಪಸರಿಸಿದ ಪ್ರತಿ ನೋಡಿ ಬರೆದನು ತಪ್ಪುವೊಪ್ಪುಗಳಾ

ಬೆಸುಗೆಯತಿಯನು ಬುಧರು ನೀವು ಕೋ
ಪಿಸದೆ ತಪ್ಪನು ತಿದ್ದಿ ವೋದುವ
ಹಸನ ದಯವಮಾಡಲಿಕೆ ನಿಂಮ್ಮ ಡಿಗಳಿಗೆ ಶರಣಾರ್ಥಿ॥
ಅಂತು ಪ್ರಭುಲಿಂಗಲೀಲೆ ಸಂಪೂರ್ಣವಾದುದು ॥

ವಿಷಯ : ಅಲ್ಲಮಪ್ರಭುದೇವನ ಚರಿತ್ರೆ.

ವಿಶೇಷ : ಮೊದಲನೆಯ ಗತಿಯಲ್ಲಿ ವಚನ, ಕಂದಪದ್ಯಗಳು ಇವೆ. ಮೊದಲಿನ ಎಂಟು ಪತ್ರಗಳನ್ನು ಅಲ್ಲಲ್ಲಿ ಸ್ವಲ್ಪ ಹುಳು ತಿಂದಿದೆ. ಕೊನೆಯ ಪತ್ರವೂ ಸ್ವಲ್ಪ ಶಿಥಿಲವಾಗಿದೆ.

972

ಕೆ.ಎ. ೨೯೫	**ಪ್ರಭುಲಿಂಗಲೀಲೆ**	ಭಾಮಿನೀಷಟ್ಪದಿ
೧೩.೩" × ೮.೩"	ಚಾಮರಸ	೧೪೩೦
೧—೨೪೧ ಪತ್ರ	೩೧ ಪಂಕ್ತಿ	೧೪ ಅಕ್ಷರ

ಆದಿ : ಪ್ರಭುಲಿಂಗಲೀಲೆ
ವಚನ—ಸಹಜದಿಂದ ನಿರಾಲಂಬವಾಯಿತು। ನಿರಾಲಂಬದಿಂದ ನಿರಾಳ ವಾಯಿತ್ತು। ನಿರಾಳದಿಂದ ನಿರವಯವಾಯಿತ್ತು। ನಿರವಯದಿಂದ ಆದಿ ಯಾಯಿತ್ತು। x x x x
ಮೊದಲಗತಿಯೊಳ್ಪುರಾತನ
ಪದಪದ್ಯಸ್ತುತಿ ಸಮುಸ್ತ ಶಕ್ತ್ಯಾದಿಶಾ
ಸ್ಪದ ದೇವತಾ ಭವಾವಳಿ
ಮುದದಿಂ ಪ್ರಭುಲಿಂಗಲೀಲೆಯೊಳ್ ಪ್ರಕಟಿಸುಗುಂ ॥ ೭ ॥

ರಾಗ ಶಾಂತ ಮಲಹರಿ ॥
ಪಲ್ಲವ ॥ ಶ್ರೀಮುದಮೃತಾಂಶು ಪ್ರವಹೌಳಿ
ಪ್ರೇಮಿಗಳಿಗಾನಂದ ನಿತ್ಯವ
ನೇಮಿಸಿದ ನಂಮಲ್ಲಮಪ್ರಭು ಗುರು ಗೊಹೇಶ್ವರನೂ ॥
ಪದ ॥ ಶ್ರೀಮುದಮಲ ಜ್ಞಾನಭಕ್ತಿ
ಪ್ರೇಮ ವೇದ ಪುರಾಣ ಶಾಸ್ತ್ರ
ಸ್ತೋಮ ನುತ ನತ ಚಾರು ಚರಣಾಂಭೋಜಘನ ಮಹಿಮಾ

ನಾಮರೂಪಕ್ರಿಯೆ ಕಳಾಪ ವಿ
ರಾಮನನುಪಮ ದಿವ್ಯತೇಜ
ವ್ಯೋಮ ಮೂರುತಿ ಗುರು ಗೊಹೇಶ್ವರಲಿಂಗ ಶರಣಾರ್ಥಿ ॥ ೧ ॥

ಅಂತ್ಯ : ವೊಂದು ಸಾವಿರದೊಂದು ಶತ ಹ
ನ್ನೊಂದು ಪದನೆಂದೆಂಬ ಪರುಷದ
ಸಂದ ಶಿಲೆಯನು ಬಳಸಿದಿಪ್ಪತ್ತೈದು ಗತಿಯೆಂಬಾ
ಹೊಂದಿಗೆಯ ಸೋಪಾನಗಳ ಬಲಿ
ದಂದವಿಸಿಯಲ್ಲಮ್ಮನ ಪರಮಾ
ನಂದ ಲೀಲಾಮೃತ ಸರೋವರವಾಯ್ತು ಜಗದೊಳಗೆ ॥ ೨೫ ॥
ಅಂತು ಗತಿ ೨೫ ಕ್ಕಂ ಪದ ೧೧೧೧ ಕ್ಕಂ ಮಂಗಳಮಸ್ತು ।

ವಿಷಯ : ಅಲ್ಲಮಪ್ರಭುದೇವನ ಚರಿತ್ರೆ.

ವಿಶೇಷ : ಪತ್ರದ ಒಂದೇಕಡೆ ಬರವಣಿಗೆಯಿದೆ. ಪ್ರತಿಪದ್ಯಕ್ಕೂ ಪಾದ ವಿಂಗಡಣೆ ಯಿದೆ ಶಕಟರೇಫದ ಬಳಕೆಯಿದೆ.

973

ಕೆ. ೫೮೫	**ಪ್ರಭುವಿನ ಸಾಂಗತ್ಯ**	ಸಾಂಗತ್ಯ
೯.೧" × ೧.೮"	ಪರ್ವತೇಶ	ಸು ೧೬೦೦
೧–೬೧ ಪತ್ರ	೯ ಪಂಕ್ತಿ	೪೪ ಅಕ್ಷರ

ಆದಿ : ಪ್ರಭುವಿನ ಸಂಗತ್ಯವ ಭರವುದಕ್ಕೆ ಶುಬಮಸ್ತು ॥
ಶ್ರೀಯುಮೆ ವದನಾಭ್ಜ ಭ್ರುಂಗತಿಂಗಳು ಗಂಣ
ಶ್ರೀಪತಿಗರ್ಧಾಗನನೆ
ಶ್ರೀಗಿರಿವಾಸ ಶ್ರೀಮಲ್ಲಿಕಾರ್ಜುನ ಕೊಡು
ಶ್ರೀಯೆಂಬ ಪದವನಿತ್ತೆನಗೆ ॥ ೧ ॥

x x x x

ಉಮೆವರ ಪಾದ ಸರೋಜಕೆಱಗುವಳಿ
ವಿಮಲಾಂಗ ಪರ್ವತೇಶ್ವರನೂ
ಕಮನಿತ್ರ ಜೂಟ ವೀರೇಶನ ಕ್ರುತಿ ಪೇಳ್ವೆ
ಮಮಕಲಿಸುವದು ಬಲವರೂ ॥ ೨೧ ॥

x x x x

ಯಲ್ಲ ಗಣಂಗಳ ಶ್ರೀ ಚರಣವ ಮನ
ದಲ್ಲಿ ನೆನದು ಹರುಶದಲಿ
ಆಲ್ಲಮುಪ್ರಭುರಾಯನ ಚಾರಿತ್ರವ
ಸೊಲ್ಲಿೃಸುವೆ .ು ಬಲ .... ತೆ ॥ ೨೩ ॥

ಅಂತ್ಯ : ಅಂಗಜ ರುಸಿಜನವೆಲ್ಲರ ಮನನನೂ
ಭಂಗಿಸುವೆನ .... ಗಲೆಂದೂ
ಹೊಂಗೇದಗೆಯ ಗುರಿಯ ಕಟ್ಟಿ ಕಾವಮಾ ....
ರಂಗಳಿಂದವೆ ನೋಯುಚ್ಚಾ ॥ ೭೫ ॥

ಸರಸಿ ಹಾವಸೆಯಲ್ಲಿ ಮುತ್ತಿಗೆವಡದಿದ
ಮರುತನು ಬೀಸುವಂಗದಲಿ
ವರಮುನಿ ದುರ್ವಾಸ ಕರದಾ ರುಶಿಗಳು

ವಿಷಯ : ಅಲ್ಲಮುಪ್ರಭುದೇವನ ಚರಿತ್ರೆ.

ವಿಶೇಷ : ಅಸಮಗ್ರ, ಅಂತ್ಯಭಾಗದ ಕೆಲವು ಗರಿಗಳು ತ್ರುಟಿತ. ಶಕಟರೇಫದ ಬಳಕೆಯಿದೆ. "ಶಿಕಾರಿಪುರದ ತಾಲ್ಲೋಕು ಹಿತ್ತಲ ಗ್ರಾಮದಲ್ಲಿರುವ ಮ. ರಾ. ಸಾಹುಕಾರ್ ವೀರಬಸಪ್ಪಗೌಡರಿಂದ ಉಚಿತವಾಗಿ ಬಂದ ಪ್ರಭುವಿನ ಸಾಂಗತ್ಯ ಪರ್ವತೇಶ" ಎಂದು ಬರೆದಿರುವ ಕಾಗದವನ್ನು ೭೧ ನೆಯ ಗರಿಯ ಮೇಲೆ ಅಂಟಿಸಿದೆ.

974

ಕೆ. ೫೧೭	**ಪ್ರಮೇಯ ಮುಕ್ತಾವಳಿ**	ಗದ್ಯ
೧೬.೪" × ೧.೪"	ವಾದಿರಾಜ	?
೧–೨೩ ಪತ್ರ	೫ ಪಂಕ್ತಿ	೬೦ ಅಕ್ಷರ

ಆದಿ : ತೃಣ ಜೀವ ಮೊದಲುಮಾಡಿ ಬ್ರಹ್ಮ ಪರ್ಯಂತರವಾಗಿ ಅವರವರ ಸಾಧನ ಅವರವರ ಜ್ಞಾನ ಅವರವರಾಪರೋಕ್ಷ ಲಿಂಗಭಂಗಾನಂತರದಲ್ಲಿ ಅವರು ಈಹಾಸ್ಥಲ ಮುಕ್ತಿಯಲ್ಲಿ ಭೋಗ ಯಿವುಗಳು ಹೇಳಲ್ಪಡುತ್ತದೆ. ತೃಣ ಜೀವರು ಮೊದಲು ಮನುಷ್ಯ ಗಂಧರ್ವ ಪರಿಯಂತ ತೃಣಜೀವರು ಕೀಟ ಪಕ್ಷಿ ೧ ಪಶ್ವಾದಿಗಳು ೨.

ಅಂತ್ಯ : (೨೨ ನೆಯ ಪತ್ರ) ಇಂಥಾವರು ಭೂಭಾಗ ದುರ್ಗಭಾಗಗಳಿಗೆ ಬಂದು ಸ್ವೇಚ್ಛೆಯಿಂದ ಕ್ರೀಡಾ ಮಾಡುಥಾರೆ. ಆರೂಢ ವರ್ಣನ ವಾದಿರಾಜ ಸ್ವಾಮಿಗಳು ವೈಕುಂಠ ವರ್ಣನೆಯಲ್ಲಿ ವಿಷ್ಣುರಹಸ್ಯಾದಿ ಗ್ರಂಥಗಳಲ್ಲಿ ಹೇಳಿದ್ದಾರೆ. ತದನುಸಾರ ತಿಳಿಬೇಕು.

ಬ್ರಹ್ಮಚರ್ಮ ಶಿರಃ ಪಟ್ಟೀ ದಿಕ್ಪಾಲೋಥ್ಯಾಂಗ ಭೂಷಣಾಃ ।
ದ್ವಾದಶಾರ್ಕ ಶಿರೋದಾಮಾ ರುದ್ರಶೀರ್ಷೈಕ ನೂಪುರಃ ॥

ಇತಿ ಶ್ರೀ ವಾದಿರಾಜಕೃತ ಪ್ರಮೇಯ ಮುಕ್ತಾವಳೀ ಸಮಾಪ್ತಾ ॥ ಶ್ರೀ ॥

ವಿಷಯ : ಮಧ್ವ ಸಿದ್ಧಾಂತ.

ವಿಶೇಷ : ನಂದಿನಾಗರಿಲಿಪಿ. ಓದುವುದು ಕಷ್ಟ. ೨೨ ನೆಯ ಪತ್ರದಲ್ಲಿ ಗ್ರಂಥವು ಮುಗಿದಿದೆ. ೨೩ ನೆಯ ಪತ್ರದಲ್ಲಿ ವಾದಿರಾಜ ವಿರಚಿತ ಕನ್ನಡ ಲಘುವಾಯು ಸ್ತುತಿಯ ಅಂತ್ಯಭಾಗವಿದೆ. ೧ ನೆಯ ಗರಿ ತುಂಡಾಗಿದೆ. ಕೊನೆಯ ಗರಿ ಮುರಿದಿದೆ. ಕೆಲವು ಗರಿಗಳನ್ನು ಹುಳು ಹೊಡೆದಿರುವುದರಿಂದ ಅವುಗಳಲ್ಲಿ ರಂಧ್ರ ಬಿದ್ದಿದೆ. ೨೩ ನೆಯ ಪತ್ರದ ಅಂತ್ಯದಲ್ಲಿ " ಪ್ಲವನಾಮ ಸಂವತ್ಸರ ಚೈತ್ರ ಶುದ್ಧ ಪೌರ್ಣಮಿ ಕುನ್ನುವಲೀ ಬರೆದದು " ಎಂದಿದೆ.

975

ಕೆ. ೫೦	**ಪ್ರಶ್ನ ಚಿಂತಾಮಣಿ**	ವಚನ
೬.೩" × ೧.೨"	?	?
೨–೧೦೮ ಪತ್ರ	೫ ಪಂಕ್ತಿ	೧೮ ಅಕ್ಷರ

ಆದಿ : ಯಿಾ ಬದುಕು ಆದೀತೋ ಆಗದೊ ?

೧. ಯಿಾ ಬದುಕು ಸ್ಥಿರದಿ.... ಲೇನುಂಟು ॥
೨. ಯಿಾ ಚಿಂತಿಸಿದ ಕಾರ್ಯ ಆಗಲರಿಯದೂ ॥
೩. ಯಿಾ .... ನಾಳೆ ಬಂದೆ, ಸುಕಯಿದರೂ ॥
೪. ಯಿಾ .... ಸ್ತ್ರವಯಿಕೆ ತೆಗೆದಳೂ॥ ಬರಲರಿಯದೂ ॥
೫. ಯಿಾ ... ಡ ಮೊದಲೆಸಕಾನೂ ॥
೬. ಯಿಾ ಕರ್ನಿಕೆಯು ಕೊಟ್ಟರೆ ರಾಜಮುಂನ್ನಣೆ.

ಅಂತ್ಯ : ಯಿಾ ವಸ್ತುವ ತೆಗದ ಕಳನು ಯೀತನೂ ಅಹುದೊ ಅಲ್ಲವೊ ?

೧. ಯಿಾ ವಸ್ತುವ ತೆಗದದು ಉಂಟು । ಸುಂಮನೆ ಕೊ ...ಲ. ।

೨. ಯಿಾ ಹೆಂಡತ್ತಿ ಮಕ್ಕಳ ಹೆತ್ತು .... ಬಿಸುದು....ಳು ।
ಮತ್ತೊಬ್ಬ ಹೆಂಡತ್ತಿ ಬಂದರೆ ಗಂಡ ಸಾಕನು ॥

೩. ಯಿಾ ಕರ್ನಿಕೆಯು ಕೊಂಡರೆ ದಾರಿದ್ರವಹುದು ॥

೪. ಯಿಾ ಗರ್ಭ ನಿಲ್ಲದು ಮತ್ತೆ ಅಹುದು ॥

೫. ಯಿಾ ದೇವರ ಕೊಂಡರೆ ವೆವಸಾಯ ಲಾಬ ಉಂಟೂ ॥

೬. ಯಿಾಲ್ಲಿ ಯಿಹುದೆ ನಿಜ ಮನೆಯಾಗಿ ಯಿದಾರೂ ॥

೭. ಯಿಾ ವಸ್ತು ಆ ಪಾರಥಿನಮಾರಿತೂ ॥

೮. ಯಿಾತಗೆ ಬಹಳ ಹರಕೆಯ ಮಡೂದೂ ॥

೯. ಯಿಾ ಕೋಟೆಯ ದೆಸೆಯಿಂದ ಕರ್ತಾನಿಗೆ ಪ್ರಣ ... ನಿ ॥
ಯಿಾ ಸರ್ವತಾ ಬಂ ಬಂಧಾನೋ ಬರನೊ ?

೧. ಯಿಾ. ೨. ಯಿಾ. ೩. ಯಿಾ ೪. ಯಿಾ, ೫. ಯಿಾ.

೬. ಯಿಾ, ೭. ಯಿಾ. ೮. ಯಿಾ ೯. ಯಿಾ.

ವಿಷಯ : ಪ್ರಶ್ನಶಾಸ್ತ್ರ.

ವಿಶೇಷ : ಅತ್ಯಂತ ಶಿಥಿಲ ಮತ್ತು ಅಸಮಗ್ರಪ್ರತಿ. ಹುಳು ಹೊಡೆದಿದೆ. ೧ನೆಯ ಪತ್ರ ವಿಲ್ಲ. ೧೨ ನೆಯ ಪತ್ರದಿಂದ ೩೨ ನೆಯ ಪತ್ರದವರೆಗೆ ಅರ್ಧಕ್ಕಿಂತ ಹೆಚ್ಚು ಭಾಗ ಹುಳು ಹೊಡೆದು ಗ್ರಂಥ ಲುಪ್ತವಾಗಿದೆ. ೯೦ ಎಂದು ಕ್ರಮಾಂಕ ವಿರುವ ಎರಡು ಪತ್ರಗಳಿವೆ. ಕೊನೆಯಲ್ಲಿ ನಂದಿ ನಾಗರಿಯ ೨ ಪತ್ರಗಳೂ, ಒಂದು ಶುದ್ಧ ಪತ್ರವೂ ಇವೆ.

976

ಕ. ೨೮೬ ಪ್ರಶ್ನಚಿಂತಾಮಣಿ ಇತ್ಯಾದಿ ಜ್ಯೋತಿಷ ವಿಷಯ ಶ್ಲೋಕ, ಗದ್ಯ
? ?
೬.೪" × ೧.೨"
೫೦+೨೭೩ ಪತ್ರ [illegible] ಪಂಕ್ತಿ ೨೪ ಅಕ್ಷರ

ಆದಿ : ಆಕಾರೇ ಸರ್ವಸಿದ್ಧಿಸ್ಸ್ಯಾತ್ ಅವ್ಯೈತ್ರೀವ್ಯೈತ್ರವಾನ್ ಭವೇತ್ ।
ಅನರ್ಥಾಶ್ಚ ವಿನಶ್ಯಂತಿ ಸಂತತಿಶ್ಚ ಪ್ರವರ್ತತೇ ॥ ಉತ್ತಮಂ ॥

ಈಶಾನ್ಯ] ದಶರಥಮಹಾರಾಯರು ಅಯೋಧ್ಯಾ ಪಟ್ಟಣದಲ್ಲಿ ಪಟ್ಟಾಭಿಷೇಕ ಮಾಡಿದ ತಾವು ಉತ್ತಮು ....

ಇಕಾರೇ ಪುತ್ರಲಾಭಂ ಚ ತಥಾ ಐಶ್ವರ್ಯಮೇವ ಚ ।
ಪ್ರಮಾಣಃ ಸರ್ವಸಿದ್ಧಿಸ್ಸ್ಯಾತ್ ಸೌಖ್ಯಾಂಶ್ಚ ಪ್ರಗ್ರಹಂ ಭವೇತ್ ॥
ಉತ್ತಮಃ

ಅಂಗಾರಕ] ದಶರಥಮಹಾರಾಯನು ಅಯೋಧ್ಯಾ ಪಕ್ಕದಲ್ಲಿ ಸಿಂಹಾಸನಾರೂಢರಾಗಿ ಪ್ರಜಾಪರಿಪಾಲನೆ ಮಾಡಿದ ತಾವು ಉತ್ತಮಂ ॥

ಅಂತ್ಯ : ಜನ್ಮಸಂಪದ್ವಿಪತ್ಕ್ಷೇಮ ಪ್ರತ್ಯಕ್ ಸಾಧಕೋ ವಧಃ ।
ಮಿತ್ರಂ ಪರಮಮೈತ್ರಂ ಚ ಜನ್ಮಾದೀನಾಂ ಪುನಃ ಪುನಃ ॥
ಜನ್ಮರಾಶಿ ಸಮಾರಭ್ಯ ಗಣ್ಯಂತೇ ನಿತ್ಯರಾಶಿಕಂ।
ಷಟ್ತ್ರಿದಶಲ್ಲೋಭಾನುಃ ಷಟ್ತ್ರಿದಶ ಜನ್ಮತ್ರಿ ॥

ವಿಷಯ : ಜ್ಯೋತಿಶ್ಶಾಸ್ತ್ರದ ಪ್ರಶ್ನವಿಚಾರ ಮತ್ತು ಶಕುನ ವಿಚಾರ.

ವಿಶೇಷ : ಮೊದಲಿನಲ್ಲಿ ೫೦ ಪತ್ರಗಳಲ್ಲಿ ಅಕ್ಷರ ಪ್ರಶ್ನೆ ಇದೆ. ಇದರಲ್ಲಿ ಒಂದನೆಯ ಮತ್ತು ಮೂವತ್ತೊಂದನೆಯ ಓಲೆಗಳಿಲ್ಲ. ಬಳಿಕ ೧ರಿಂದ ೩೪ ಪತ್ರಗಳಲ್ಲಿ ನಂದಿಕೇಶ್ವರ ಪ್ರಶ್ನೆ ಇದೆ. ೩೫ರಿಂದ ೮೦ ಪೂರ್ತಿ, ಸೀನಿನ ಫಲ, ಗೌಳಿನುಡಿದ ಫಲ, ಗೌಳಿಪತನ ಫಲ, ಅಂಗಸ್ಫುರಣ ಫಲ, ಸರ್ಪ, ಗಾರ್ದಭ, ಕಪ್ಪೆ ಇವುಗಳ ಶಕುನ ವಿಚಾರವಿದೆ. ೮೦ ರಿಂದ ೧೧೭ನೆಯ ಪತ್ರದವರೆಗೆ ಗ್ರಂಥಲೋಪ. ೧೧೭ರಿಂದ ೧೩೩ ಪೂರ್ತಿ ೧೬ ಮನೆಗಳ ಕೋಷ್ಟಕ ಪ್ರಶ್ನೆ, ಬಳಿಕ ೧೭೬ರ ವರೆಗೆ ಗ್ರಾಮ ಸಾಲಾವಳಿ, ನವಗ್ರಹ ಚೂಡಾಮಣಿ ಪ್ರಶ್ನೆ, ಶಕುನಗಳು ಇತ್ಯಾದಿ ವಿಚಾರಗಳಿವೆ. ೧೭೬ ರಿಂದ ೨೫೩ರ ವರೆಗೆ ಪ್ರಶ್ನೆ ವಿಚಾರವು ತೆಲಗು ಭಾಷೆಯಲ್ಲಿದೆ. ಇಲ್ಲಿ ಓಲೆಗಳ ಒಂದು ಪಾರ್ಶ್ವದಲ್ಲಿ ಮಾತ್ರ ಬರೆದಿದೆ. ೨೫೪ ರಿಂದ ೨೭೩ ಪತ್ರಪೂರ್ತಿ, ನಕ್ಷತ್ರಗಳಿಗೆ ಯೋನಿ, ದಶಕೂಟಗಳು, ಗ್ರಾಮ ಸಾಲಾವಳಿಯ ವಿಚಾರ ವಿದೆ. ಗ್ರಂಥವು ನಂದಿನಾಗರಿ ಲಿಪಿಯಲ್ಲಿದೆ.

977

ಕೆ. ೫೬೬	**ಪ್ರಸಾದ ಚಿಂತಾಮಣಿ ಟೀಕು**	ಗದ್ಯ, ಶ್ಲೋಕ
೮.೫"×೨"	ಶಾಂತಾಚಾರ್ಯ	?
೧-೨೬ ಪತ್ರ	೧೨ ಪಂಕ್ತಿ	VH ಅಕ್ಷರ

ಆದಿ : ಪ್ರಸಾದ ಚಿಂತಾಮಣಿ ಪಂಚ್ಯಾದ್ಯಯ ॥ ಶ್ರೀಗುರು ಸ್ತೋತ್ರ॥

ಗ್ರಂಥ ॥ ಶ್ರೀಗುರುಸ್ಯ ಮಹಾಯೊಯೊಮಂ ನಾದಬಿಂದು ಕಲಾನ್ವಿತಂ।
ತತ್ವಾತೀತಂ ಗುಣಾತೀತಂ ತಸ್ಮೈ ಶ್ರೀಗುರುವೇ ನಮಃ॥
ವರ್ನ್ನರೂಪ ವಿನಾಮೂರ್ತಿ ಸರ್ವ ಚಿತಂನ್ಯದಾಯುಂ।
ವಿಶವ್ಯಾಪಿಮಯ ಶಾಂತಂ ಗುರುದೇವೋ ನಮಸ್ತು ತೇ ॥೨॥
ನಿಶಬ್ದಂ ಚ ನಿರಾಲಂ ಚ ನಿಃಶೂಂನ್ಯಂ ಚ ನಿರಾಶ್ರಯಂ।
ನಿರ್ದೇಹಿ ನಿರ್ಮಲಂ ನಿತ್ಯಂ ಗುರುದೇವೋ ನಮೋಸ್ತು ತೇ ॥ ೩ ॥

ಹಿಂಗೆ ಆಚಾರ್ಯನು ತಂನ ಗುರುಸ್ತೋತ್ರವಂ ಮಾಡಿ ಯಿಾ ಪ್ರಸಾದ ಚಿಂತಾಮಣಿಯೆಂಬ ವೇದಾಗಮ ನಿರುತಾರ್ಥ ಸಂಗ್ರಹದಲ್ಲಿ ಗುರುಲಿಂಗ ಜಂಗಮದ ಪಾದೋದಕಪ್ರಸಾದ ಚರವಿಶೇಷವಮಂ ಉತ್ಪತ್ಯ ಮಹಾತ್ವಮಂ ವಿಧಿವತ್ತಾಗಿ ವೇದಾಗಮ ಪೌರಾಣಂಗಳಲ್ಲಿ ಅಂನ್ಯಮತಾಂಕರ ಶಾಸ್ತ್ರಂ ಗಳಲ್ಲಿ ವಿಧಿತವಾದ ಗ್ರಂಥದಿಂ ಪ್ರತ್ಯಕ್ಷ ಪ್ರಮಾಣಿನಿಂ ಪೇಳ್ವಪೆಂ। ಹಂನೊಂದು ಲಕ್ಷ ಗ್ರಂಥವನುಳ್ಳ ಪರಮೇಶ್ವರಾಗಮವು ಯೇಳು ಭೇದವ ದೇವಿಯರಿಗೆ ಬೋಧಿಸಿ ಅರ್ಥದಲ್ಲಿ ಯಂಭತ್ತನೆಯ ಪಟಲದಲ್ಲಿಯ ಗ್ರಂಥ।

ಅಂತ್ಯ : ಬರದುದಷ್ಟಾಂಗಯೋಗಸಂಪಂನರಾದ ಸಾದನ ಚತುಷ್ಟಯ ಸಂಪಂನ ರಾದ ಷಟ್ಸ್ಥಲ ಬ್ರಂಹ್ಮಿ ಷಡದ್ವಾತೀತನಪ್ಪ ತತ್ವಮೂರ್ತಿ ಸಿದ್ಧೇಶ್ವರ ನವರ ಕಾರುಂಣ್ಯಾ ಕೃಪಾವಲೋಕನದಿಂದ ಯಿಾ ಪ್ರಸಾದ ಚಿಂತಾಮಣಿ ಯಲ್ಲಿ ತೀರ್ತ್ಥಪ್ರಸಾದ ಗುರು ಲಿಂಗ ಜಂಗಮ ವುತ್ಪತ್ಯಾದಿ ವಿಶೇಷವಂ ವೇದಾಗಮ ಪುರಾಣಂಗಳಲ್ಲಿ ವಿದಿತವಾದ ಗ್ರಂಥಮಂ ಸೂಚನ ಮಾತ್ರದಿಂ ಯೋಗಾಚಾರ್ಯ ಷಟ್ಸ್ಥಲ ನಿರ್ನ್ನಯಾಂನ್ವಿತರಪ್ಪ ವೇದಾಗಮತೀತರಪ್ಪ ಶಾಂತಾಚಾರ್ಯನು ಸಮಸ್ತ ಶಿವ ಮಾಹೇಶ್ವರರ ವರ ಕಾರುಂಣ್ಯದಿಂ ಕಿಂಚಿತು ಸುಮತಿಯಿಂ ಸ್ವಾನುಭಾವ ಸಿದ್ಧದಿಂ ಜನಹಿತಾರ್ತ್ಥವಾಗಿ ಪ್ರಕಾಶಿಸಲ್ಪಟ್ಟಿತು.

ಮಹಾನಾದ ಮಹಾಬಿಂದು ಮಹಾಕಾಶ ಸ್ವರೂಪಕಂ।
ಮಹಾಜ್ನಾನಮಯಂ ಶಾಂತಂ ಗುರುದೇವೋ ನಃ ಸ್ತುತೇ ॥
ಸರ್ವಕರ್ಮ ವಿನಿರ್ಮುಕ್ತಂ ಸರ್ವಸಂಗ ವಿವರ್ಜಿತಂ।
ಸರ್ವದೇವಮಯಂ ಶಾಂತಂ ಪಾಹಿ ಮದ್ಗುರು ದೇವಯೋ ॥
ಶುದ್ಧಬೋಧಾದ್ಮಕಂ ಪಾಹಿ ಪಾಹಿ ಪರಮಾತ್ಮರೂಪಂ।
ಪಾಹಿ ಮಾಂ ಪರಮಾಂ ದೇಪಾ ಶ್ರೀಮಂನಾಥಶ್ಚ ಪಾಹಿ ಮಾಂ ॥೩೦॥

ಯಿತಿ ಪ್ರಸಾದ ಚಿಂತಾಮಣೀಯ್ಯ ಪಂಚಮಾಧ್ಯಾಯ ಸಮಾಪ್ತ ಮಂಗಳ ಮಹಾಶ್ರೀ

ವಿಷಯ : ವೀರಶೈವ ಪ್ರಕ್ರಿಯೆಯಂತೆ ಪ್ರಸಾದದ ಮಹಿಮೆ.

ವಿಶೇಷ : ೨೪ನೆಯ ಪತ್ರ ಇಲ್ಲ. ಶಕಟರೇಫದ ಬಳಕೆ ಇದೆ.

978

ಕೆ.ಬಿ. ೩೪೧/೭	**ಪ್ರಸಾದವಾಕ್ಕು**	**ವಚನ**
೮.೨" × ೬.೧"	ಬಾಲಲೀಲೆ ಮಹಾಂತಸ್ವಾಮಿಗಳು	**೧೯ನೆಯ ಶತಕ**
೧೨೮–೧೪೪ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಬಾಲಲೀಲೆ ಮಾಹಾಂತ್ತ ಸ್ವಾಮಿಗಳು ಅಪ್ಪಣೆ ಕೊಟ್ಟ ಪ್ರಸಾದವಾಕ್ಕು ಬರೆವುದಕ್ಕೆ ಶುಭಮಸ್ತು ॥ ಹೋಳಿಪಥ ॥

ದುಂದುಮೆಯಂ ನಿರಿನೆಂದೆನ್ನಿ
ಚಂದ್ರಸೇಖರಗೇ
ದುಂದುಮಿ ಬಿಂದು ನಿಗ್ರಹನಾ ಹಬ್ಬಾ ॥ ಪ ॥

ಮೂರು ತನುವೆಂಬ ಮಂಥರ ಮೇರು ಕೈಲಾಸ
ಸೇರಿರುವ ಮಹಗುರುವೆ ಪಾಲಿಸೆನ್ನಾ
ಘೋರಲಂಪಟದೊಳಗೆ ಮಾನ ಮೆಗ್ನವಾದಿಂದೆ
ಸಾರಮುಕ್ತಿಯ ಪಾದಪ ಪಡವುದೆಂತೈಯ್ಯಾ ॥ ೧ ॥

ಅಂತ್ಯ : ಶ್ರೀಮನ್ಮಹಾನಾದ ಚಿಂನಾದ ಚಿದ್ಬಿಂದು ಚಿತ್ಕಾಲಾಲಿಂಗ
ಚಿತಗರ್ಭಜನಿತ ಶಿಶುಮಾಹಾಂತಾ ಲಿಂಗ್ಗಾಸ್ವಾಮಿನ್ ॥
ಶ್ರೀಮನ್ಮಹಾನಾದ ಬಿಂದು ಕಲಾಲಿಂಗ
ಜಿತಗರ್ಭ ಜನಿತಾ ಶಿಶುಮಾಹಾಂತಲಿಂಗನೇ
ಶ್ರೀಮನ್ಮಹಗುರು ಕಟಕ್ಷನ್‌ದೊಳನೇಂತರ
ಪದ್ಮಸಾನ ಶಿರಶಿಶು ಮಾಹಾಂತ್ತಾ
ಶ್ರೀಮನ್ಮಹಾಪಂಚ್ಚಮಚಕ್ರ ನಿರಂಜನಲಿಂಗಾ
ಜಿತಗರ್ಭಜನಿತಾಶಿಶು ಮಹಾಂತ್ತಾಲಿಂಗ್ಗಾ ಸಾರಮನ್ ಬಾಹುಪರಾಕು
ನಂದೀಶ್ವರಾದಿ ಪ್ರಮಥಗಣ ॥ ಸಂಮ್ಮೋಹನ ಕರ ಶಿಶು
ಮಾಹಾಂತಾ ಲಿಂಗ್ಗಾಸ್ವಾಮಿನ್ ಬಾ ಪಾರಾಕು ॥ ೫ ॥ ಶ್ರೀ

ವಿಷಯ : ಪ್ರಸಾದ ವಾಕ್ಯಗಳು.

ವಿಶೇಷ : ನೋಡಿ ಅಕ್ಷರಗಳು. ಇದೇ ಪುಸ್ತಕದಲ್ಲಿ ಹಾಡುಗಳು ಮೊದಲಾದ ೭ ಗ್ರಂಥಗಳಲ್ಲದೆ ೧೪೫ ರಿಂದ ೨೧೨ ಶುದ್ಧ ಪತ್ರಗಳಿವೆ. ೨೧೬ನೆಯ ಪತ್ರದಲ್ಲಿ ಒಂದು ಚಿತ್ರವಿದೆ. ಅಂತ್ಯದಲ್ಲಿ ಹಿಂದೂಸ್ತಾನಿ ಕನ್ನಡ ಮಿಶ್ರ ರೂಪವಾದ ಹಾಡುಗಳಿವೆ. ಒಂದೊಂದೂ ಒಂದೊಂದು ವಿಧವಾದ ಬರವಣಿಗೆಯಲ್ಲಿರುವುದರಿಂದ ಇದನ್ನು ಒಂದು ಸಂಕಲನ ಗ್ರಂಥವೆಂದು ಹೇಳಬಹುದು.

979

ಕೆ. ಬಿ. ೨೮೩	**ಪ್ರಸಾದ ಸಾಂಗತ್ಯ**	ಸಾಂಗತ್ಯ
೮″ × ೬.೫″	ಮಲ್ಲುಕವಿ	ಸು. ೧೬೦೦
೧–೬ ಪತ್ರ	೨೫ ಪಂಕ್ತಿ	೩೫ ಅಕ್ಷರ

ಆದಿ : ರಾಗ, ಸಾಂಗತ್ಯ—

ಶ್ರೀಗುರುಲಿಂಗ ಜಂಗಮದಾ ಚರಣಕ್ಕೆ
ಬಾಗುವೆನೆಂನಯ ಶಿರವಾ
ಬೇಗದೊಳೆನಗೆ ಮತಿಯನಿತ್ತು ಕೃಪೆಯಾಗಿ
ಲೀಗಲೀ ಕೃತಿರಾಜಪಂತೇ ॥ ೧ ॥

x x x x

ಕಡೆಮೊದಲಕ್ಷರವಡಿ ಪ್ರಾಸುಗಳೆಂಬ
ಅಡಿವಜ್ಜೆಯ ಬೆಂಬಳಿಯಾ
ಗೊಡವೆಯನರಿಯ ಬಲ್ಲದ ಮಲ್ಲು ಪೇಳಿದ
ಮೃಡ ಶರಣರ ಕರುಣದಲೀ ॥

ಅಂತ್ಯ : ಧನ ಧಾಂನ್ಯ ಸುತರಷ್ಟ ಭಾಗ್ಯವನೀವನೂ
ಮನಸಂದು ಕೇಳಿದವರಿಗೆ
ಯಿನಿತೆಲ್ಲ ಸತ್ಯವೆನುತ ಬಲ್ಲುದ ಮಲ್ಲು
ವಿನೆಯಾದಿ ಪೇಳ್ದವಧರಿಸೀ ॥
ಯಿಂದುಧರನ ಭಕ್ತರ ಚಾರಿತ್ರದ
ಲೊಂದಕ್ಷರವ ಕೇಳ್ದರಿಗೆ

ಹಿಂದೆ ಮಾಡಿದ ಪಾಪವೆಲ್ಲ ದಹಿಸಿ ಪೋಪು
ದೆಂದೆನೆ ಸಂದಿ ಸಂಪೂರ್ಣ ||

ಅಂತುಪ್ರಸಾದ ಸಾಂಗತ್ಯ ಸಂಪೂರ್ನ ಮಂಗಳಮಹಾ ಜಯಮಂಗಳ ಮಹಾಶ್ರೀ ||

ವಿಷಯ : ಉತ್ತರದೇಶದ ಬೆಜವಾಡಿ ಸೇದಿರಾಜನೆಂಬ ಭಕ್ತನ ಕಥೆ.

ವಿಶೇಷ: ಮೋಡಿ ಅಕ್ಷರ, ಕೆಲವು ಪತ್ರದ ಅಂಚಿನಲ್ಲಿ ಹುಳು ತಿಂದಿದೆ.

980

ಕೆ. ೨೧	**ಪ್ರಹ್ಲಾದ ಚರಿತ್ರೆ**	ಭಾಮಿನೀ ಷಟ್ಪದಿ
೧೬.೬" × ೧.೨"	ನರಹರಿ	ಸು. ೧೬೫೦
೧–೧೯೯ ಪತ್ರ	೪ ಪಂಕ್ತಿ	೬೩ ಅಕ್ಷರ

ಆದಿ : ಪ್ರಹಲ್ಲಾದ ಚರಿತ್ರೆ ಬರೆಯುವುದಕ್ಕೆ ಶುಭಮಸ್ತು ||
ಸ್ತುತಿಪದಾ || ಶ್ರೀರಮಣ ಸುರನಿಕರವಂದಿತ
ಕ್ಷೀರವಾರುಧಿಶಯನ ಪುರಹರ
ವಾರಿಜೋದ್ಭವ ಜನಕ ಮನುಮುನಿ ವಿಬುಧಜನವಂದ್ಯಾ |
ಕಾರಣಾತ್ಮಕನೆನಿಪ ಕರುಣಾ
ನಾರಸುಹ್ರುದೆ ರಕ್ಷಿಸುಗೆ ಮೂಜಗವ ಕರುಣದಲೀ || ೧ ||

ಧರೆಯೊಳಗೆ ಕರ್ನಾಟಕದ ಕವಿ
ನರಹರಿಯ ನುಡಿಗೇಳ್ದರಾಯೆಂ
ದಿರದೆ ಕೊಂಡಾಡಿದರೆ ಕಾವ್ಯಕೆ ಭಂಗ ಸಿರಿಧರನಾ
ವರದ ಕವಿತಾಸಾರ ಭವಸಾ
ಗರವನೀಸುರ ತೆಪ್ಪವಿದ ವಿ
ಸ್ತರಿಸುವೆನು ಕಿವಿಗೊಟ್ಟು ಕೇಳುವದೊಲಿದು ಸಜ್ಜನರೂ ||೧೩||
ಪೀಠಿಕಾಸಂಧಿ ಸಂಪೂರ್ನ ಮಂಗಳಮಹಾ ||

ಅಂತ್ಯ : ಈ ಕಥೆಯ ಕೇಳ್ದರಿಗೆ ಬಹಳ ವಿ
ವೇಕ ಭಕ್ತಿಗಳುದಿಶಿ ಚಿಂತಾ
ವ್ಯಾಕುಲತೆಗಳ ಬಿಟ್ಟು ಬಂದಪಮೃತ್ಯು ಪರಿಹರಿಶೀ
ಬೇಕೆನಿಪ ಭಾಗ್ಯಗಳನಿಹದಲ
ನೇಕದಿನವನುಭವಿಶಿ ಮೇಲೆ ಮ
ಹಾ ಕಮಲಲೋಚನನ ಕೂಡುವರರಸ ಕೇಳೆಂದಾ ॥

ಅಂತೂ ಸಂಧಿ ೧೭ ಕಂ ಪದನೂ ೧೧೧೫ ಕಂ ಮಂಗಳ ಮಹಾಶ್ರೀ। ಸೌಮ್ಯ ಸಂಮತ್ಸರದ ಮಾಘ ಬ ೧೦ಲ್ಲು ಪ್ಯಾಟೆ ಸುಂಬಂಣ ಬರದ ಪ್ರಹ್ಲಾದಚರಿತ್ರೆ ಸಂಪೂ....

ವಿಷಯ : ಭಕ್ತಪ್ರಹ್ಲಾದನ ಕಥೆ.

ವಿಶೇಷ: ಪತ್ರಗಳನ್ನು ಹುಳು ಕೊರೆದಿದೆ. ಕೆಲವು ಪತ್ರಗಳು ಶಿಥಿಲ. ೧೩, ೪ನೆಯ ಪತ್ರಗಳಿಲ್ಲ. ೫೨, ೭೨, ೭೩, ೧೭೦, ೧೮೨ ನೆಯ ಪತ್ರಗಳು ಮುರಿದು ಒಂದೊಂದು ತುಂಡು ಮಾತ್ರ ಇವೆ.

981

ಕೆ. ೧೦೦	**ಪ್ರಹ್ಲಾದ ಚರಿತ್ರೆ**	ಭಾಮಿನೀಷಟ್ಪದಿ
೧೨.೮″ × ೧.೩″	ನರಹರಿ	ಸು. ೧೬೫೦
೧—೧೬೦ ಪತ್ರ	■ ಪಂಕ್ತಿ	೪೬ ಅಕ್ಷರ

ಆದಿ : ಶ್ರೀರಸ್ತು। ಶ್ರೀರಾಮಾ। ಶೋಭಕೃತ್ತು ಸಂಮತ್ಸರದ .... ಣ ಶುಧ ೨ ಶುಕ್ರ ವಾರ ದಿವಸ ಪ್ರಾರಂಭಂ ಪ್ರಹ್ಲಾದ ಚರಿತ್ರೆ ಬರೆಯುವುದಕ್ಕೆ ನಿರ್ವಿಘ್ನೆ ಮಸ್ತು ॥

ಸೂಚನೆ॥ ಶ್ರೀರಮಣ ಸುರನಿಕರಾ ವಂದಿತಾ
ಕ್ಷೀರವಾರುಧಿ ಶಯನನಘಹರ
ವಾರಿಜೋದ್ಭವ ಪಿತದಿ ವಿ .... ವಿರೋಧಿ ತಮರವಿಯೇ
ಕರುಣಾತ್ಮಕನೆನಿಪ ಕರುಣಾ ಸಾ
ಗರ ಶ್ರುತಿ ತರ್ಕ್ಕಗಳು ಕಾಣದ
ನಾರಸಂಹ್ವನೆ ರಕ್ಷಿಸೆ .... ವ ಕರುಣದಲೀ ॥ ೧೬ ॥

ಅಂತ್ಯ : .... ದೇವರ ತ್ರಿಜಗವ
ಕಾವ ಕಾಮನ....ನಕಗು....ಸಂ
ಜೀವ ಜೀವನ....ಯ ಸಜ್ಜನ....ವ
.... ಪದ ....
ಜೀವ ಪಟ್ಟದ ಚದುರಶುಬಯ್ಯೊ
ಗೀವರನ ಪ್ರಹ್ಲಾದ ಚರ್ರಿತಾ ಕಾವ್ಯ....॥ ೬೫ ॥

ಅಂತು ಸಂಧಿ ೧೬ಕಂ ಪದನೂ ೧೨೧೫ಕಂ ಮಂಗಳ ಮಹಾಶ್ರೀ

ವಿಷಯ : ಭಕ್ತ ಪ್ರಹ್ಲಾದನ ಕಥೆ.

ವಿಶೇಷ : ತ್ರುಟಿತ. ಕೆಲವು ಗರಿಗಳು ತುಂಡಾಗಿವೆ.

982

ಕೆ. ೩೯೬	**ಪ್ರಹ್ಲಾದ ಚರಿತ್ರೆ**	ಭಾಮಿನೀಷಟ್ಪದಿ
೯.೮"×೧.೬"	ನರಹರಿ	ಸು. ೧೬೫೦
೩–೧೧೯ ಪತ್ರ	೯ ಪಂಕ್ತಿ	[redacted] ಅಕ್ಷರ

ಆದಿ : ....ಬ್ಬರಿಸೆ ಹರಿ ಸಲ
ಹೆಂಬ ಮಾತಿಗೆ ಭಕ್ತಗೋಸುಗ
ಕಂಭದಿಂದೆದ್ದರಿಯ ಸೀಳನೆ ಮೂರು ಜಗವರಿಯೆ ॥ ೫ ॥
ನಾಡಬಳಕೆಯ ದೈವವಲ್ಲಲೆ
ರೂಢಿ ಪತಿನೆನೆ ಹರಿಯ ಮುಕುತಿಯೊ
ಳಾಡಬಹುದೆಂದೆನೆ ಪರೀಕ್ಷಿದ್ರಾಜಿ ಶುಕಮುನಿಯಾ
ಜೋಡಿಸಿದ ಕಂಭದಲಿ ನರಹರಿ
ಮೂಡಿ ದೈತ್ಯನ ಕರುಳ ಹರಿದೀ
ಡಾಡಿ ಶರಣನ ಸಲಹಿದುದ ವಿಸ್ತರಿಸಬೇಕೆಂದಾ ॥ ೬ ॥

ಅಂತ್ಯ : ತಂನನೇ ಧ್ಯಾನಿಸುವ ಮನುಜರ
ತಂನ್ನವೋಲ್ಮಾಡುವನು ಭುವನದಿ
ತಂನ್ನ ನೆರೆ ನಂಬಿರ್ದ್ದ ಭಕ್ತರ ಬಿಡದೆ ಸಲಹುವನೂ
ತಂನ್ನ ಕೃತಿಯನು ಕೇಳ್ವರಾಲಿಪ
ಸಂನುತಿಪ ಬರದೋದಿ ರಸಂ
ಪಂನ ನರಹರಿ ಹೊರವ ಸೋಮಾದಿತ್ಯರುಳ್ಳಂನಾ ॥ ೬೫ ॥

ಅಂತು ಸಂಧಿ ೧೬ಕ್ಕಂ। ಪದನು ೧೧೩೪ಲಕ್ಕಂ। ಮಂಗಳ ಮಹಾಶ್ರೀ॥

ವಿಷಯ : ಭಕ್ತ ಪ್ರಹ್ಲಾದನ ಕಥೆ.

ವಿಶೇಷ : ಮೊದಲ ಎರಡು ಗರಿಗಳಿಲ್ಲ. ೪೨ ಮತ್ತು ೪೬ನೇ ಗರಿಗಳು ತುಂಡಾಗಿವೆ. ಕೆಲವು ಗರಿಗಳು ಶಿಥಿಲ.

983

ಕೆ. ೫೫೬	**ಪ್ರಹ್ಲಾದ ಚರಿತ್ರೆ**	ಭಾಮಿನೀಷಟ್ಪದಿ
೧೪.೮" × ೨.೪"	ನರಹರಿ	ಸು. ೧೬೫೦
೧_೭೬ ಪತ್ರ	೧೦ ಪಂಕ್ತಿ	[illegible] ಅಕ್ಷರ

ಆದಿ : ಪ್ರಹಲ್ಲಾದ ಭಾರತ ಬರವುದಕ್ಕೆ ಶುಭಾಮಸ್ತೂ॥

ಪಲ್ಲಾ॥ ಶ್ರೀರಮಣ ಸುರನಿಕರವಂದಿತ
ಕ್ಷೀರವಾರುದಿ ಶಯನ ನಘೆಧರ
ವಾರಿಜೋದ್ಭವ ಪಿತನೆ ಥನುಜ ವಿರೋಧಿ ತಮರವಿಯೇ ॥

ಪದಾ ॥ ಕಾರುಣಾತ್ಮಕನೆನಿಪ ಕರುಣಾ
ಸಾರ ಶ್ರುತಿ ತರ್ಕಗಳು ಕಾಣದ
ನಾರಸಿಂಹನೆ ರಕ್ಷಿಸುಗೆ ಮೂಜಗವ ಕರುಣದಲೀ ॥೧॥

x x x x

ಧರೆಯೊಳಗೆ ಕರ್ನಾಟಕದ ಕವಿ
ನರಹರಿಯ ನುಡಿಗೇಳ್ದರಾಯೆಂ
ದಿರದೆ ಕೊಂಡಾಡಿದರೆ ಕಾವ್ಯಕೆ ಭಂಗ ಸಿರಿಧರನಾ
ವರದ ಕವಿತಾಸಾರ ಭವಸಾ
ಗರವ ದಾಂಟುವ ತೆಪ್ಪವಿದ ವಿ
ಸ್ತರಿಸುವೆನು ಕಿವಿಗೊಟ್ಟು ಕೇಳುವದೊಲಿದು ಸಜ್ಜನರೂ ॥ ೧೩ ॥

ನಾಂದೀಪದ ಸಮಾಪ್ತಂ ಮಂಗಳ ಮಹಾಶ್ರೀ

ಅಂತ್ಯ : ತಂನ್ನನೇ ಧ್ಯಾನಿಸುವ ಮನುಜರ
ತಂನ್ನವೋಲ್ಮಾಡುವನು ಭುವನದಿ
ತಂನ್ನ ನೆರೆ ನಂಬಿರ್ದ ಭಕ್ತರ ಬಿಡದೆ ಸಲಹುವನೂ

ತಂನ್ನ ಕ್ರುತಿಯನು ಕೇಳಿ ಲಾಲಿಪ
ಸಂನ್ನುತಿಪ ಬರದೋದಿದರ ಸಂ
ಪಂನ್ನ ನರಹರಿ ಹೊರವ ಸೋವಾದಿತ್ಯರುಳ್ಳನಕಾ ॥ ೬೫ ॥

ಅಂತೂ ಸಂಧಿ ೧೭ಕ್ಕೆ ಪದ ೧೧೩೫ಕ್ಕಂ ಮಂಗಳಮಹಾಶ್ರೀ ....ಪ್ರಹಲ್ಲಾದ ಭಾರತ ಸಮಾಪ್ತಂ ಮಂಗಳ ಮಹಾಶ್ರೀ। ಚಿತ್ರಭಾನು ಸಂದ ಮಾಘ ಶು ೧೫ ಸವುನ್ಯವಾರ ಗುರವಳ್ಳಿ ಐಗಳು ವೆಂಕಸೆಟ್ಟಿ ಬರದು ಸಂಪೂರ್ಣವಾದ್ದು ಶುಭಮಸ್ತು॥

ವಿಷಯ : ಭಕ್ತ ಪ್ರಹ್ಲಾದನ ಕಥೆ.

ವಿಶೇಷ : ಸುಂದರಾಕ್ಷರ.

984

ಕೆ. [illegible] — **ಪ್ರಹ್ಲಾದ ಚರಿತ್ರೆ** — ಭಾಮಿನೀಷಟ್ಪದಿ
೧೩·೭″ × ೨.೨″ — ನರಹರಿ — ಸು. ೧೬೫೦
೧—೧೦೮ ಪತ್ರ — ೯ ಪಂಕ್ತಿ — ೫೦ ಅಕ್ಷರ

ಆದಿ : ಪ್ರಹಲ್ಲಾದ ಭಾರತ ಬರವುದಕ್ಕೆ ಶುಭಮಸ್ತು ॥
ಶ್ರೀರಮಣ ಸುರನಿಕರ ವಂದಿ
....ರ ವಾರುದಿಶಯನ ನಗಧರ
ವಾರಿಜೋಧ್ಭವ ದಿವಿಜವಿರೋಧಿ ತಮರವಿಯೆ
ಕಾರಣಾತ್ಮಕನೆನಿಪ ಕರುಣಾ
ಸಾರ ಶ್ರುತಿ ತರ್ಕಗಳು ಕಾಣದ
....ಹ್ಹನೆ ರಕ್ಷಿಸುಗೆ ಮೂಜಗವ ಕರುಣದಲಿ ॥ ೧ ॥

X X X X

ಧರೆಯೊಳಗೆ ಕರ್ನಾಟಕದ ಕವಿ
ನರಹರಿಯ ನುಡಿ ಕೇಳ್ದವರಾಯಂ
ದಿರದೆ ಕೊಂಡಾಡಿದರೆ ಕಾವ್ಯಕೆ ಭಂಗ ಸಿರಿಧರನಾ
ವರವ ಕವಿತಾಸಾರ ಛವಸಾ
ಗರವ ದಾಟುವ ತಪ್ಪಲಿದ ವಿ
ಸ್ತರಿಸುವೆನು ಕವಿಗೊಟ್ಟು ಕೇಳೂದೊಲಿದು ಸಜ್ಜನರೂ ॥ ೧೩ ॥
ನಾಂದಿಪದ ಸಮಾಪ್ತಃ ॥

ಅಂತ್ಯ : ತಂನನೇ ಧ್ಯಾನಿಸುವ ಮನಜರ
ತಂನಲೊಲ್ಯಾಡುವನು ಭುವನದಿ
ತಂನ ನೆರೆ ನಂಭಿರ್ದ ಭಕ್ತರ ಬಿಡದ ಸಲಹುವನು
ತಂನ ಕ್ರುತಿಯನು ಕೇಳ್ವರಾಧಿಪ
ಸಂನುತಿಪ ಬಂದೋದಿಧರ ಸಂ
ಪಂನ ನರಹರಿ ಹೊರವ ಸೋಮಾದಿತ್ಯರುಳ್ಳನಕಾ ॥ ೬೫ ॥

ಅಂತು ಸಂಧಿ ೧೭ ಕ್ಕಾಂ ಪದ ೧೩೫೦ ಕ್ಕಾಂ ಮಂಗಳ ಮಹಾ ಶ್ರೀ ...

ತೀರ್ಥಮುತ್ತೂರ ಮಠದ ಶಾನಭೋಗ ಅನಂತೈಯನ ಮಸ್ತೆ ಸ್ವಹಸ್ತ ಬರದ ಪುಸ್ತುಕಾ ॥ ಆಚಂದ್ರಾರ್ಕಮಸ್ತು । ಕ್ಷಯಸಂ । ದ । ಆಶಾಡ ಶು ೧ ಭೌಮಾರ ಬರದು ಮುಗಿದು । ಮಂಗಳ ಮಹಾ ಶ್ರೀ.

ವಿಷಯ : ಭಕ್ತಪ್ರಹ್ಲಾದನ ಚರಿತ್ರೆ

ವಿಶೇಷ : ಹುಳು ಹಿಡಿದು ಕೆಲವು ಪತ್ರಗಳಲ್ಲಿ ರಂಧ್ರ ಬಿದ್ದಿದೆ.

985

ಕೆ.ಎ. ೧೭೩/೨	**ಪ್ರಹ್ಲಾದ ಚರಿತ್ರೆ**	ಭಾಮಿನೀಷಟ್ಪದಿ
೧೧.೧" × ೭.೪"	ನರಹರಿ	ಸು. ೧೬೫೦
೧೫–೬೨ ಪತ್ರ	೩೫ ಪಂಕ್ತಿ	೨೬ ಅಕ್ಷರ

ಆದಿ : ಪ್ರಹಲ್ಲಾದ ಚರಿತ್ರೆ ಬರೆಯುವುದಕ್ಕೆ ನಿರ್ವಿಗ್ನಮಸ್ತು.
ಧರಣಿಪತಿ ಸುಪರೀಕ್ಷಿತಗೆ ಮಿಗೆ ವಿ
ಸ್ತರಿಸಿದನು ಹರಿ ಹರಿಭಕ್ತಿಸಾರದ
ವರ ಕಥಾಮೃತರಸವಾ ಶುಕ ಯೋಗಿಂದ್ರ ಮುನಿರಾಯಾ ॥

ಪದನೂ ॥ ಶ್ರೀ ರಮಣಿ ಮುನಿ ನಿತರ ವಂದಿತ
ಕ್ಷೀರ ವಾರುಧಿ ಶಯನ ನಗಹರ
ವಾರಿಜೋದ್ಭವ ಪಿತನೆ ದಿವಿಜ ವಿರೋಧಿ ತಮುರವಿಯೆ
ಕಾರಣಾತ್ಮಕನೆನಿಪ ಕರುಣಾ
ಸಾರ ಶೃತಿ ತರ್ಕಗಳು ಕಾಣದ
ನಾರಸುಂಹ್ವನೆ ರಕ್ಷಿಸುಗೆ ಮೂಜಗವ ಕರುಣದಲ್ಲಿ ॥ ೧ ॥

ಅಂತ್ಯ : ಧಾರುಣಿಯೊಳುಂನತದ ದಕ್ಷಿಣ
ವಾರಿಣಾಶಿಯೆನಿಸಿ ಮೆರೆವ ಕಾ
ವೇರಿ ತೀರದಲೆಸೆವ್ವ ಬಲ್ಲಾಳಪುರದ ಪ್ರಭುವಿಳೆಗೆ
ವೀರ ವೈಷ್ಣವ ಸಂಗಪ್ಪಗಳ
ನರಹರಿ ದೇವನೀ ಕೃತಿ
ಸಾರವನು ವರ್ನಿಶಿದನೊಲಿದು ನೃಶಿಂಹ್ಯನೊಲವಿನಲಿ ॥ ೬೪ ॥

ಅಂತ್ತು ಸಂಧಿ ೧೭ ಕಂ ಪದನೂ ೧೨೪೪ ಕಂ ಜಯ ಮಂಗಳ ಮಹಾಶ್ರೀ ವಿಕೃತು ನಾಮ ಸಂವತ್ಸರದ ಬಾದ್ರಪತ ಶುದ್ಧ ೫ ಚಂದ್ರವಾರ ಘಳಿಗೆ ಯು ಪತ್ತರಲ್ಲಿಗೆ ಹೆಗ್ಗಡದೇವನ ಕೋಟಿ ಕೃಷ್ಣಶೆಟ್ಟರ ಮಗ ಗೋಪಾಲ ಶೆಟ್ಟ ದುಯಂಪರಾಷುಖಾನೆ ಚವದ್ರಿ ಮರಿಯಪ್ಪನಿಗೆ ಬರದುಕೊಟ್ಟ ಸಾನಂದಗಣೇಶನ ಸಂಗಿತ್ಯಾ ಪ್ರಹಲ್ಲಾದ ಚರಿತ್ರೆಗೆ ಜಯ ಮಂಗಳ ಮಹಾ ಶ್ರೀ.

ವಿಷಯ : ಭಕ್ತ ಪ್ರಹ್ಲಾದನ ಕಥೆ.

ವಿಶೇಷ : ಮೋಡಿ ಬರಹ, ಈ ಗ್ರಂಥದೊಡನೆ ಸಾನಂದ ಚರಿತ್ರೆ, ಶಾರದಾಂಬಾಷ್ಟ ಕಾದಿಗಳು, ಪಂಚತಂತ್ರ ಕಥೆ, ಕಪೋತವಾಕ್ಯ, ಪಾರ್ವತೀ ಕೊರವಂಜಿ ಎಂಬ ಕೃತಿಗಳಿವೆ. ಪ್ರತಿಯು ಉತ್ತಮವಾಗಿದೆ. ಪುಸ್ತಕದ ಕಡೆಯಲ್ಲಿ ವಾಲಿ ಸುಗ್ರೀವರ ಕಾಳಗ (ಯಕ್ಷಗಾನ), ಗದುಗಿನ ಭಾರತದ ದ್ರೋಣ ಪರ್ವದ ಕೆಲವು ಪದ್ಯಗಳು ಮಾತ್ರಇವೆ.

986

ಕೆ.ಬಿ. ೨೦	**ಪ್ರಹ್ಲಾದ ಚರಿತ್ರೆ**	ಭಾಮಿನೀಷಟ್ಪದಿ
೮″ × ೬.೫″	ನರಹರಿ	ಸು. ೧೬೫೦
೧–೧೪೮ ಪತ್ರ	೧೪ ಪಂಕ್ತಿ	೧೮ ಅಕ್ಷರ

ಆದಿ ; ಪ್ರಹ್ಲಾದ ಚರಿತ್ರೆ ಪುಸ್ತುಕಕ್ಕೆ ಕಲ್ಯಾಣಮಸ್ತು.
ಸೂಚನೆ॥ ಧರಣಿಪತಿ ಸುಪರೀಕ್ಷಿತಗೆ ವಿ
ಸ್ತರಿಸಿದನು ಹರಿಭಕ್ತಿಸಾರದ
ವರಕಥಾಮೃತ ರಸನ ಶುಕಯೋಗೇಂದ್ರ ಮುನಿರಾಯ॥

ಪದನೂ ॥ ಶ್ರೀರಮಣ ಮುನಿನಿಕರ ವಂದಿತ
ಕ್ಷೀರವಾರುಧಿ ಶಯನ ನಗಧರ
ವಾರಿಜೋದ್ಭವ ಪಿತನೆ ದಿವಿಜ ವಿರೋದಿ ತಮುರವಿಯೆ
ಕಾರಣಾತ್ಮಕನೆನಿಪ ಕರುಣಾ
ಸಾರ ಶ್ರುತಿ ತರ್ಕ್ಕಂಗಳು ಕಾಣದ
ನಾರಸಿಂಹ್ಯನೆ ರಕ್ಷಿಸುಗೆ ಮೂಜಗವ ಕರುಣದಲೀ ॥ ೧ ॥

x x x x

ಕ್ಷಿತಿಯೊಳಗೆ ಪ್ರಹ್ಲಾದ ಚರಿತದ
ಕಥೆಯ ನಾ ಪೇಳುವೆನು ಶ್ರೀರಮು
ಪತಿಯು ತಾ ಕಂಭದಲಿ ರಉದ್ರದೊಳುದಿಸಿದಂದವನೂ
ಅತಿಶಯದಿ ಕವಿಜನರು ವೈಷ್ಣವ
ತತಿಯು ಮನರಂಜಿಸಲು ಪಂಚನು
ಶ್ರುತಿಯೆನಿಪ ಕಾವ್ಯವನು ಕೇಳ್ವುದು ಬಲ್ಲ ಕೋವಿದರೂ ॥ ೨ ॥

ಅಂತ್ಯ : ಕತ್ತರಿಸಿತಿಳೆ ರಥ ತುರಗ ಬಲು
ಮತ್ತಗಜ ಕಾಲಾಳ ಪದಹತಿ
ಗೆತ್ತಿ ಮುಸುಕಿತು ಧೂಳಿಯಿಂ ಬಲು ಧ್ವಜ ಪತಾಕೆಗಳೂ
ಚತ್ರ ಚಮುರಾವಳಿಯ ಸಬಳದ
ಮೊತ್ತದಿಂದಿರುಳೆನಿಸಿ ದಿವದ ...

ವಿಷಯ : ಭಕ್ತಪ್ರಹ್ಲಾದನ ಕಥೆ.

ವಿಶೇಷ ; ಅಸಮಗ್ರ. ಸುಂದರ ಬರಹ.

587

ಕೆ.ಎ. ೮೭/೨	**ಪ್ರಹ್ಲಾದಚರಿತ್ರೆ**	ಯಕ್ಷಗಾನ
೧೫.೨" × ೯.೫"	ಶ್ರೀನಿವಾಸ	೧೮೮೧
೨೨–೩೬ ಪತ್ರ	೩೦ ಪಂಕ್ತಿ	೨೫ ಅಕ್ಷರ

ಆದಿ : ಪ್ರಹ್ಲಾದ ಚರಿತ್ರೆ ಪ್ರಾರಂಭ.
ಶ್ರೀಕಾಂತಂ ಸುರವೈರಿದಾವದಹನಂ ಬ್ರಂಹ್ಮೇಶ ಸಂಸೇವಿತಂ
ಪಾಕಾರಾತಿ ಮುಖಾಮರೈಕಶರಣಂ ದಿವ್ಯಾಯುಧಾಲಂಕೃತಂ ।

ಶೂಕೋತ್ತ್ರೇಜಿತ ವಜ್ರದಂಷ್ಟ್ರಯುಗಳಂ ದೀವ್ಯತ್ಸಟೋಶೋಭಿತಂ
ಲೋಕೇಶಂ ನಿಜಭಕ್ತವಾರಶರಣಂ ಶ್ರೀ ನಾರಸಿಂಹಂ ಭಜೆ ॥ ೧ ॥

ರಾಗ ಮಧ್ಯಮಾವತಿ, ಅಟತಾಳ ॥
ನರಹರಿ ಪರಿಪಾಲಿಸು ಕಾರುಣ್ಯಸಿಂಧು ॥ ಪಲ್ಲ ॥
ನರಹರಿ ತವಪದ ಸ್ಮರಣೆಯ ಕರುಣಿಸಿ ದುರಿತವಾರಿಧಿಯನ್ನು
ತರಣವ ಮಾಡಿಸೋ ಅನು॥
ಶರದಿಯನೀ ಪೋಕ್ಕು ವೇದವ ಕದ್ದ
ದುರುಳನ ನೀತರಿದು ಗಿರಿಯನು ಕಳೆಯುತ ಪೊರೆದೆಯೊ
ಕರುಣದಿ ಹಿರಣ್ಯಕ ದೈತ್ಯನ ಹರಣವನೀಗಿದ ॥ ೧ ॥

ಅಂತ್ಯ : ವಾರಿನಿಧಿ ಜೀವನಾಪಹರವಾಹನನಪ್ರ
ಪಾರುವನ ಭಯದುದಿಂದ ಕಂದದಂತೆ
ಆರೈಯ್ಯೆ ಬಟ್ಟುಗೈದಟ್ಟಿದನ ಮನೆಯಿಂದ
ಸಾರಿ ಬಂದಾ ಶ್ರೀನಿವಾಸಗೊಲಿದಳಿಗೆ ॥ ೩ ॥

(ಈ ಮಂಗಳ ಇಲ್ಲಿ ಓದಕೂಡದು) ಸಂಪೂರ್ಣಂ

ಅಂತು ಸಂಧಿ ರಾಗ ನಾದನಾಮಕ್ರಿಯಾ ಆದಿತಾಳ (ಶಂಭೋಶಂಕರದರ್ಪ)
ಜಯ ರಾವಣಾನುಜ ಯತಿಕುಲ ಮಂಡನಭವಭಯಹರ ತೇ ನಮೋನಮೋ
ಸ್ಮಯಮಯ ದುಷ್ಟಮತಾಟವಿದಾಹನ ನತಜನ ರಕ್ಷಕ ನಮೋನಮೋ ॥

x x x x

ಮಾನಿತಗುಣಭೂಷ ಮಾಧುರ್ಯತರಭಾಷ
ಆನತಜನರಕ್ಷಕ
ಮೌನಸಮಾಶ್ರಿತ ಮಹನೀಯ್ಯಗುಣಯುತ
ಶ್ರೀನಿವಾಸಾರ್ಚಿತ ಶ್ರಿತಕಲ್ಪಪಾದಪ ॥ ೩ ॥

ವಿಷಯ : ಭಕ್ತ ಪ್ರಹ್ಲಾದನ ಕಥೆ.

ವಿಶೇಷ : ಇದರಲ್ಲಿ ಮಧ್ಯಮಧ್ಯದಲ್ಲಿ ತಪ್ಪಾಗಿರುವುದನ್ನು ಬೇರೆ ಕಾಗದದಲ್ಲಿ ಬರೆದು ಅಲ್ಲಲ್ಲಿ ಅಂಟಿಸಲಾಗಿದೆ. ಇದರೊಂದಿಗೆ ಸಮುದ್ರ ಮಥನ, ಗಿರಿಜಾ ಪರಿಣಯ, ಕಿರಾತಾರ್ಜುನೀಯ, ಹರಿಶ್ಚಂದ್ರ ವಿಲಾಸ, ನಳೋಪಾಖ್ಯಾನ ಹರಿಲೀಲಾವಿಲಾಸವೆಂಬ ಗ್ರಂಥಗಳೂ ಇವೆ.

988

ಕೆ.ಬಿ. ೨೫/೨	**ಪ್ರಹ್ಲಾದ ಚರಿತ್ರೆ**	ಶ್ಲೋಕ, ಟೀಕು
೯.೫"×೭"	ರಂಗನಾಥಶಾಸ್ತ್ರಿ	೧೯ ನೆಯ ಶತಕ
೧–೨೩ ಪತ್ರ	೧೫ ಪಂಕ್ತಿ	೨೮ ಅಕ್ಷರ

ಆದಿ : ಶುಭಮಸ್ತು ॥ ಪ್ರಹ್ಲಾದ ಚರಿತ್ರೆ ಸಟೀಕು ಬರೆಯುವದಕ್ಕೆ ನಿರ್ವಿಘ್ನೆಮಸ್ತು ॥

ಜ್ಞಾನಾನಂದಮಯಂ ದೇವಂ ನಿರ್ಮಲಸ್ಫಟಿಕಾಕೃತಿಂ।
ಆಧಾರಂ ಸರ್ವವಿದ್ಯಾನಾಂ ಹಯಗ್ರೀವಮುಪಾಸ್ಮಹೆ ॥
ಶ್ರೀಮದ್ಗೋಪಾಲ ಪಾದಾಬ್ಜ ಸುಜನ್ಯೈಕ ಪರಾಯಣಃ ।
ರಂಗನಾಥೋ ರಂಗಪುರೀಮಧಿತಿಷ್ಠತಿ ಸರ್ವದಾ ॥

ಟೀಕ್ಕು ॥ ಶ್ರೀ ಗೋಪಾಲ ಪಾದಪದ್ಮವಂನ್ನು ಪೂಜೆಮಾಡೂದರಲ್ಲಿ ಆಸಕ್ತನಾದ ಪಶ್ಚಿಮ ರಂಗನಾಥನ ಪಟ್ಟಣದಲ್ಲಿ ವಾಸಮಾಡುವಂತ್ಥಾ ರಂಗನಾಥ ಶಾಸ್ತ್ರಿಯು....ಶನನ್ನು ಭಜಿಸುತ್ತಾನೆ ಗೋಪಾಲಸ್ವಾಮಿಯಂನ್ನು ॥

ಶ್ರೀನರಸಿಂಹಸ್ಯ ಪುರಾಣಸ್ಥನೃಶಿಂಹಸ್ಯ ಸಮುದ್ಭವೇ ।
ಪ್ರಹ್ಲಾದ ಚರಿತಂಚಾಪಿ ವಿವಿಚ್ಯ ಚ ವಿಶೇಷತಃ ॥
ಕರ್ನಾಟ ಭಾಷಯಾ ಟೀಕಾಂ ಕುರ್ವೇ ವಿದ್ವತ್ಸ್ರತೋಷಿಣೀಂ ॥

ಅಂತ್ಯ : ಅನಂತರದಲ್ಲಿ ಆ ಹಿರಣ್ಯಕಶಿಪುವು ಕೆಲವುಕಾಲ ಸ್ವರ್ಗಸುಖವಂನ್ನು ಅನುಭವಿಶಿ ಪೂರ್ವದಲ್ಲಿ ವೈಕುಂಠದಲ್ಲಿ ಹೇಗೆಯಿದ್ಧಾನೋ । ಅದೇ ಪ್ರಕಾರ ಶಾಪವಿಮುಕ್ತನಾಗಿ ಶ್ರೀಹರಿಯಂನ್ನು ಸ್ಮರಿಸಿಕೊಂಡು ಯಿದ್ದಾನು. ದ್ವಾರ ಪಾಲಕರಾಗಿ ॥ ಯಿತಿ ಶ್ರೀ ನೃಸಿಂಹ ಪುರಾಣೆ ಹಿರಣ್ಯಕಶಿಪುರ್ಮೋಕ್ಷೆ ಪ್ರಹ್ಲಾದ ರಾಜ್ಯಾಭಿಷೇಕೋತ್ಸವ ದ್ವಿತೀಯೋಧ್ಯಾಯಃ ಸಂಪೂರ್ಣಃ ॥ ಶ್ರೀ ಕೃಷ್ಣಾರ್ಪಣಮಸ್ತು ॥ ಯಿತಿ ಶ್ರೀರಂಗಪಟ್ಟನಸ್ಥ ರಂಗಶಾಸ್ತ್ರಿಕೃತ ಪ್ರಹ್ಲಾದ ಚರಿತ್ರೆಯಲ್ಲಿ ವಿದ್ವತ್ಸ್ರತೋಷಿಣಿಯಂಬ ಟೀಕಿನಲ್ಲಿ ಯರಡನೆ ಅಧ್ಯಾ ಸಂಪೂರ್ಣವಾಗಿ ಮುಗಿತ್ತು ಮಂಗಳ ಮಹಾ ಶ್ರೀ ॥ ಫಾಲ್ಗುಣ ಬ ೨ ದಿನಕ್ಕೆ ಶಾಲಿವಾಹನಶಕ್ಕೆ ೧೭೭೦ ಸಾವಿರದಯೆನೂರ ೭೦ ಯಪ್ಪತ್ತು ಸಂತು ॥

ವಿಷಯ : ನೃಸಿಂಹ ಪುರಾಣಾಂತರ್ಗತ ಭಕ್ತಪ್ರಹ್ಲಾದ ಚರಿತ್ರೆಯ ಟೀಕು.

ವಿಶೇಷ : ಅತ್ಯಂತ ಶಿಥಿಲಪ್ರತಿ. ಈ ಟೀಕಿಗೆ ವಿದ್ವತ್ಪ್ರತೋಷಿಣಿ ಎಂಬ ಹೆಸರನ್ನು ಟೀಕಾಕಾರರು ಕೊಟ್ಟಿರುತ್ತಾರೆ. ಪತ್ರಗಳನ್ನು ಹುಳು ಹೊಡೆದಿದೆ. ಪುಸ್ತಕದ ಕೊನೆಯಲ್ಲಿ ಮತ್ತು ಆದಿಯಲ್ಲಿ ಶ್ರೀರಂಗಪಟ್ಟಣದ ಚರಿತ್ರೆ ಇದೆ. ಮೊದಲನೆಯ ಪತ್ರದಲ್ಲಿ ನಾಗರಿಲಿಪಿಯ ಒಂದು ಜಾತಕವೂ ಸುಂದರ ಕಾಂಡ ಸಪ್ತಸರ್ಗೀ ಪಾರಾಯಣದ ಸರ್ಗ ಸಂಖ್ಯೆಯೂ ಇದೆ.

989

ಕೆ.ಬಿ. ೪೩೮	**ಪ್ರಹ್ಲಾದ ಚರಿತ್ರೆ**	ಸಾಂಗತ್ಯ
೭.೯"×೬.೫"	ಚನ್ನಿಗರಾಯ	ಸು. ೧೭೦೦
೧-೧೩೨ ಪತ್ರ	೧೬ ಪಂಕ್ತಿ	೨೩ ಅಕ್ಷರ

ಆದಿ : ಶಂಕರಲಿಂಗ ದೇವಸುತ ಚನ್ನಿಗರಾಯ ಕೃತ ಪ್ರಾಲ್ಹಾದ ಚರಿತ
ಶ್ರೀಗಣೇಶಾಯ ನಮಃ|| ಪ್ರಾಲ್ಹಾದ ಚರಿತ ಬರೆಯುವದಕ್ಕೆ ಶುಭಮಸ್ತು||

ಶ್ರೀನರಸಿಂಹ ಭಕುತಜನವತ್ಸಲ
ದಾನವ ಕುಲಭಿಂಜನೆ
ಆನತಜನಪಾಲಕ ಸುರವಂದ್ಯನೆ
ಜ್ಞಾನವನೆನಗೆ ಪಾಲಿಪುದು || ೧ ||

X X X X

ನರಸಿಂಹತನುಜ ಶಂಕರಲಿಂಗದೇವನ
ವರಸುತ ಹೆಸರು ಚನ್ನಿಗನೂ
ವಿರಚಿಸಿದನು ನರಸಿಂಹ ಚರಿತ್ರವ
ಧರೆಯ ಜನರು ಕೇಳುವುದು || ೧೦ ||

ಅಂತ್ಯ : ಧರೆಯೊಳೀ ಕಥೆಯ ಕೇಳಿದವರ ಪಾಪವು
ಹರದು ಹೋಹುದು ನಿಮಿಷದಲಿ
ನರಸಿಂಹನೊಲಿದೀವನಿಹಪರವೆರಡಕ್ಕೆ
ಪರಮಸುಖದ ಸಂಪದವ || ೬೬ ||

ಅಂತು ಸಂಧಿ ೧೩ಕ್ಕಂ ಪದ ....ಕ್ಕಂ ಮಂಗಳ ಮಹಾಶ್ರೀ.

ವಿಷಯ : ಭಕ್ತ ಪ್ರಹ್ಲಾದನ ಕಥೆ.

ವಿಶೇಷ : ಕೆಲವು ಕಡೆ ತಪ್ಪುಗಳನ್ನು ಕೆಂಪುಮಸಿಯಿಂದ ತಿದ್ದಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

990

ಕೆ.ಬಿ. ೮೪/೧	**ಪ್ರಹ್ಲಾದ ಚರಿತ್ರೆ**	ಯಕ್ಷಗಾನ
೮.೬"×೬.೫"	?	?
೧–೬೫ ಪತ್ರ	೧೫ ಪಂಕ್ತಿ	೧೮ ಅಕ್ಷರ

ಆದಿ : ರಾಗ। ತಾಳ। ಝಂಪೆ। ಕಾಮಿತ್ತಾಫಲಾಧಾತ್ತಾ। ಶ್ರೀ ಗಣಾನಾಥಾ ಕಾಮಿತ್ತಾ ಫಲಧಾತ್ತಾ। ಕರುಣ ವಿಖ್ಯಾತ್ರನೆ। ಆಕುವಾಹನನೆ ವರ ಯೇಕದಂತನೆ ಕಾಮಿತ್ತ ॥ ೧ ॥

ಫಣಿ ಫಣ ಭೂಷಿತ್ರನೆ
ಮಣಿ ಗಣಾರಂಜಿತ್ರನೆ
ಶ್ರೀ ಣೀಕೃತ ಚಂದ್ರ ಪುರಂದರ ವಂದಿತನೆ ಕಾಮಿ ॥ ೨ ॥

ಅಂತ್ಯ : ಭಕ್ತ ಪ್ರಹ್ಲಾದನೆ ಯಿಾವತ್ತಿನ ದಿವ್ಸದಲ್ಲಿ ಯಿಾ ರತ್ನಪೂರಿಯಂ ನಿನಗೆ ನಾನಾಗಿರ್ರುವಂತ್ತಾವನು ಪಟಾಭಿಷೇಕವಂನ್ನು ಮಾಡಿಸುತ್ತೇನೆ ಕಂಡ್ಯಾ। ನೀನಾಗಿರ್ರುವಂ....ವನೂಷ್ಠ ದಿಕಿನಲ್ಲಿಯೂ ಕೀರ್ತಿಯಿಂದಲೂ। ಸತ್ಯ ದಿಂದಾಲೂ। ಸುಖ ಪಡುವಂತಾವನಾಗುತ್ತಿ. ಆದರ್ರು[1] ಮುಂದ್ದೇಳೇನೂ ॥ ೨ ॥ ದ್ರುಷ್ಟನಿಗ್ರಹ ಶ್ರಿಷ್ಟಿಪರಿಪಾಲಕರಂದೂ ದಿಟ್ಟದಿಂ ಪೊಗಳುವ ಪುರ್ಷ ನಂಮ್ಮಯ ಬಿ

ವಿಷಯ : ಭಕ್ತ ಪ್ರಹ್ಲಾದನ ಕಥೆ.

ವಿಶೇಷ : ಈ ಪುಸ್ತಕದಲ್ಲಿ ಅಷ್ಟಪದಿ ಟೀಕು ಎಂಬ ಮತ್ತೊಂದು ಗ್ರಂಥವಿದೆ. ಗ್ರಂಥವು ಅತ್ಯಂತ ತ್ರುಟಿತ.

991

ಕೆ.ಬಿ. ೮೬/೧	**ಪ್ರಹ್ಲಾದ ಚರಿತ್ರೆ**	ಯಕ್ಷಗಾನ
೮.೨"×೬.೫"	?	?
೧–೪೬ ಪತ್ರ	೧೯ ಪಂಕ್ತಿ	೨೨ ಅಕ್ಷರ

ಆದಿ : ಪ್ರಹ್ಲಾದ ಚರಿತ್ರೆ ಬರೆಯುವದಕ್ಕೆ ಶುಭಮಸ್ತು ||

ಶ್ಲೋಕ || ಅತ್ರ್ಯೈವೋದಾಹೃತಃ ಪೂರ್ವಮಿತಿಹಾಸಃ ಸುರರ್ಷಿಣಾ |
ಪ್ರೀತ್ಯಾ ಮಹಾಃಕ್ರತೌ ರಾಜನ್ ಪೃಛ್ಛತೆ ಜಾತ ಶತ್ರವೇ || ೧ ||

X X X X

ಕಂ || ಅನಂದ ಭೈರವಿ ||
ಶ್ರೀ ಶುಕ ಮುಖದಲಿ ತುಳುಕಿದ
ಕೇಶವ ಚರಿತಾಃನುವಾದ ಕೀರ್ತನೆಗಳನೂ
ಆಸುರ ಕುಲದಲಿ ಜನಿಶಿದ
ಶೇಷಾಂಶನ ಸಚ್ಚರಿತ್ರೆ ಸ್ವೀಕರಿಶಿದನೂ ||

ಅಂತ್ಯ : ಪರಮಾತ್ಮ ಪರಿಪೂರ್ಣ ಸುತೇಜ ನಾರಸಿಂಹ
ಸ್ವಾಮಿ ವರದಮೂರ್ತಿ ಕೊಲಿಮೆರ್ಲ ನರಸಿಂಹ
ಸುರನರ ಭುವನಸ್ತೋತ್ರ ಸ್ವಾಮಿ ಗರುಡಾದ್ರಿ ಗಿರೀವಾಸ ನರಸಿಂಹಾ ||

ವಿಷಯ : ಭಕ್ತ ಪ್ರಹ್ಲಾದನ ಕಥೆ.

ವಿಶೇಷ : ಈ ಕಥೆಯ ಆರಂಭದಲ್ಲಿ ೯ ಪತ್ರಗಳಲ್ಲಿ ಕೀರ್ತನೆಗಳಿವೆ. ಇದೇ ಪುಸ್ತಕದಲ್ಲಿ ದಾನವ್ರತ, ಸಮುದ್ರ ಮಥನ ಮತ್ತು ಶ್ರೀ ಪ್ರಸನ್ನ ಕೃಷ್ಣ ಕೊರವಂಜಿ ಕಥೆಗಳಿವೆ. ಗ್ರಂಥ ಮುಗಿದ ಮೇಲೆ ೪೭ ನೆಯ ಪತ್ರದಲ್ಲಿ ೫ ಮಂಗಳ ಪದ್ಯಗಳಿವೆ. ಇದರ ಕೊನೆಯಲ್ಲಿ ವೆಂಕಟ ಸದ್ಗುರು ಚಿದ್ಘನಕೆ || ಮಂ || ೫ || ಎಂದಿದೆ.

992

ಕೆ.ಬಿ. ೧೮೭	**ಪ್ರಹ್ಲಾದ ಚರಿತ್ರೆ**	ಯಕ್ಷಗಾನ
೭.೫″ × ೬.೨″	ವೆಂಕಟ	?
೧–೧೩೬ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ: ಪ್ರಹ್ಲಾದ ಚರಿತ್ರಕಥಾ ಬರೆಯುವದಕ್ಕೆ ಶುಭಮಸ್ತು ನಿರ್ವಿಘ್ನಮಸ್ತು ||
ಕೀರ್ತನೆ || ರಾ || ಆನಂದ ಭೈರವಿ || ಆದಿತಾಳ ||
ಶ್ರೀಗಣನಾಥಕೃಪಾಲಯ| ಸರ್ವ| ಸಿದ್ಧಿ ಪ್ರದಾತ ಮಾಂ ಪಾಲಯ| ಗಂಧ| ಸಿಂಧುರ ವಕ್ತ್ರ ಸುಬೋಧಯ|

X X X X

ಆದಿಪೂಜಿತಃ ಸರ್ವಾಗಮವರ್ನಿತ
ಆದ್ಯಂತರಹಿತ: ನಿನ್ನಾದಿಯೊಳ್ ಧ್ಯಾನಿಪೇಂ ॥ ೨ ॥

ಈಶ ವೆಂಕಟ ಕಪಿ ಪೋಷ । ಪರಮಸುಪ್ರಕಾಶ । ಸರ್ವೇಶ ದಿಗೀಶ ವಾಗೀಶ
ವಂದ್ಯ ॥ ಶ್ರಿಗಣನಾಥ ಕೃಪಾಲಯ ॥ ೩ ॥

x x x x

(೧೮ನೆಯ ಪತ್ರದಲ್ಲಿ)
ಪ್ರಹ್ಲಾದ ಚರಿತ್ರೆಯಲ್ಲಿ ॥ ಪ್ರಥಮಾಧ್ಯಾಯ ಪ್ರಾರಂಭ ॥

ಕಂದ॥ ಶ್ರೀ ಜಂಭಾರಿ ಮುಖಸ್ತುತ
ರಾಜಾನ್ವಯ ಜಲಧಿ ಚಂದ್ರನಾದ ಹರಿ ಕೃಪೆಯಿಂ
ದೀ ಜಂಬೂದ್ವೀಪದಿನಾ
ಮಾಜಂಬೂ ನದಾಂಬರನ ಚರಿತೆಯರ್ಥಿಲಿ ಪೇಳ್ವೆಂ ॥

ಅಂತ್ಯ: ಛಾಯಗೀತ
ಪ್ರಕೃತಿ ಪುರುಷರೂಪಾ ಪ್ರಕಟಕೀರ್ತ್ತಿಪ್ರತಾಪ ।
ಕ್ಷೀರವಾರಿಧಿ ಶಯನಾ ಚಿತ್ಸರೋಜಾತನಯನ ॥

ನಿಶಿಪ ಕುಲ ಸುದೀಪಾ ನೀಲಮೇಘಾಭರೂಪ ।
ನತಜನಸುರಸಾಲಾ ನಂದಗೋಪಾಲ ಬಾಲ ॥

ಪಾದವಚನ ॥ ಭಕ್ತಿಯಿಂದಾವರೀ ಪ್ರಹ್ಲಾದ ಚರಿತೆಯಂ ।
ನಿತ್ಯಮುಂ ಬರದೋದಿ ಕೇಳಿದರ್ಗ್ಗೆ ।
ಪುತ್ರ ಪೌತ್ರವೃದ್ಧಿ ಅರ್ಥಮಾಯುಷ್ಯಮಂ ।
ಇತ್ತು ಸಲಹುವ ಶ್ರೀ ಲಕ್ಷ್ಮೀನಾರಸಿಂಹ ॥
ಪ್ರಹ್ಲಾದ ಚರಿತ್ರೆಯೊಳ್ ತೃತೀಯಾಧ್ಯಾಯಕ್ಕೆ ಮಂಗಳಮಹಾ ॥ ಇಲ್ಲಿಗೆ
ಪ್ರಹ್ಲಾದ ಚರಿತ್ರೆಯು ಸಮಾಪ್ತಮಾದುದು ಶ್ರೀ ॥

ವಿಷಯ: ಭಕ್ತ ಪ್ರಹ್ಲಾದನ ಕಥೆ.

ವಿಶೇಷ: ಕೊನೆಯಲ್ಲಿ ೨, ೩ ಮತ್ತು ೪ ನೆಯ ಹಾಡುಗಳು ಲುಪ್ತ. ಅಕ್ಷರ ಸುಂದರವಾಗಿವೆ.

993

ಕೆ. ೨೩೭ ಪಾಕೃತ ಮಂಜರಿ ಗದ್ಯ
೧೪.೫" × ೧.೪" ರಘುನಾಥಯತಿ ?
೧–೫೨ ಪತ್ರ ೪ ಪಂಕ್ತಿ ೫೦ ಅಕ್ಷರ

ಆದಿ : ಸೃಷ್ಟಿಗಿಂತಾ ಪೂರ್ವದಲ್ಲಿ ವಾಸುದೇವನಾಮಕ ನಾರಾಯಣದೇವರು ಅವ್ಯಾಕೃತಾಕಾಶದಲ್ಲಿ ಪರಮಯೋ ಮಾಯಂ ... . ಶ ವಿಶೇಷದಲ್ಲಿ ರಮಾಲಿಗಿಂತರಾಗಿ ಇದ್ದರು .... ಬ್ರಹ್ಮದೇವರು ಮಾನದಿಂದ ೧೦೦ ವರ್ಷ ಪರಿಮಿತವಾದ ಪ್ರಳಯಕಾಲದ ವಲ .... ಭತ್ತೇಳುವರೆ ವರ್ಷ—

ಅಂತ್ಯ: ಇಂಥಾ ನಿತ್ಯವಾದ ಪ್ರದೇಶಗಳಲ್ಯು ಯಥೇಷ್ಟವಾಗಿ ಸಂಚಾರವ ಮಾಡುತ್ತಾ ಸಂಸಾರದ ಶೇಷಲ್ಲಿ ಅನುಭೂತವಾದ ಜ್ಞಾನಮಯ ... . ಗಳು ಸ್ಮರಿಶಿಕೊಂಡು ಇಂಥಾ ಕ್ಲೇಶಗಳನು ಬಿಡಿಶಿ ನಮಗೆ ಇಂಥಾ ಪರಮಾನಂದಗಳ ದೇವರು ಕೊಟ್ಟು ರಕ್ಷಿಸುಥಾರೆಯೆಂಬ ವಿಶ್ವಾಸಾ .... ನಿತ್ಯಸುಖವನು ಅನುಭವಿಶಿಕೊಳುತಾ ಇರುಥಾರೆ ॥ ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಾಣಾಂ ಶ್ರೀಮಲ್ಲಕ್ಷ್ಮೀನಾರಾಯಣತೀರ್ಥ ಪೂಜ್ಯಪಾದಾನಾಂ ಶಿಷ್ಯೇಣ ಶ್ರೀಮದ್ರಘುನಾಥಯತಿನಾ ಕೃತಾ ಪ್ರಾಕೃತ ಮಂಜರೀ ಸಂಪೂರ್ಣಾ ॥

ವಿಷಯ : ತತ್ತ್ವವಿಚಾರ.

ವಿಶೇಷ : ನಂದಿನಾಗರಿ ಲಿಪಿ. ಗರಿಗಳ ಒಂದುಕಡೆ ಅಂಚು ಮುರಿದು ಮಧ್ಯ ಮಧ್ಯದಲ್ಲಿ ಗ್ರಂಥವು ಲುಪ್ತವಾಗಿದೆ.

994

ಕೆಎ. ೨೯೧/೧ ಪ್ರಾಕ್ತನ ಗಣಕಥಾವಳಿ ಭಾಮಿನೀಷಟ್ಪದಿ
೧೩"×೮" ನನ್ನಯ್ಯ ?
೧–೧೦ ಪುಟ ೩೦ ಪಂಕ್ತಿ ೨೨ ಅಕ್ಷರ

ಆದಿ : ಪ್ರಾಕ್ತನ ಗಣಕಥಾವಳಿ ಬರಿವದಕ್ಕೆ ಶುಭಮಸ್ತು ॥ ಭಾಮಿನಿಷಟ್ಪದಿ ॥

ಶ್ರೀಗುರುವೆ ಶರಣಾಗು ಭವಭಯ
ರೋಗಹರ ಶರಣಾಗು ಸರ್ವಕ
ಳಾಗುರುವೆ ಶರಣಾಗು ಸುರಮುನಿಗಣ ವಿಸರವಂದ್ಯಾ
ಬ್ಯಾಗದಿಂದಲಿ ನಿಂನ ನೆನೆದವ
ರ್ಗೀಗಭೀಷ್ಟವನಿತ್ತು ಪಾಲಿಪ
ರಾಗ ವಿರಹಿತನಾಗ ಸೇವಿತ ಭೋಗಿಭೂಷಕನೇ ‖ ೧ ‖

ಅಂತ್ಯ : ಚೋರಕವಿಯಿವನೇದು ದೂರುತೆ
ಮೀರಿ ನುಡಿಯದಿರೀಗಳೆ ನಾನು
ಸಾರ ನಿಜಗುಣಯೋಗಿ ರಚಿತ ತ್ರಿವಿದಿ ವಿಸರವನೇ
ಆರೈದು ಷಟ್ಪದಿಗಳಿಂ ಮನ
ವಾರೆ ಪೇಳಿದೆ ನಾಂ ಜನರರಿಯೆ
ಚಾರು ಪ್ರಾಕ್ತನಗಣ ಕಥಾವಳಿಯೆಂಬ ಪೆಸರಿನಲೀ ‖ ೭೧ ‖

ಯಿದು ಪರಮ ಶಿವ ಸಮಯದೊಳು ತಾಂ
ಪಡೆದು ವರ ಕೀರ್ತಿಯನು ತಾಳುತೆ
ಸೆದ ಮರುಳಸಿದ್ಧ ಭವ ಕವಿಗೆ ಸಕಲರರಿವಂತೇ
ಪದುಳದಿಂ ಸಹಜಾತನೆಂದೆನಿ
ಸಿದ ನಿರಘ ಗುರುಪಾದ ದೇವನ
ವಿಧಿತ ಸುತನಹ ನಂನಯಾಹ್ವಯನಿಂ ರಚಿತವಾಯ್ತು ‖ ೭೨ ‖

ಪ್ರಾಕ್ತನ ಗಣಕಥಾವಳಿ ಸಮಾಪ್ತಃ

ವಿಷಯ : ಅರುವತ್ತುಮೂರು ಪುರಾತನರ ಸ್ತೋತ್ರ.

ವಿಶೇಷ : ಇದರೊಂದಿಗೆ ಆರುವತ್ತು ಮೂರು ಪುರಾತನ ಚರಿತ್ರೆ ಎಂಬ ಮತ್ತೊಂದು ಗ್ರಂಥವಿದೆ.

995

ಕೆ. ೩೫/೪	**ಪ್ರಾಣನಾಥ ಶತಕ**	**ವೃತ್ತ**
೧೨″×೧.೪″	ವೀರಭದ್ರರಾಜ	**ಸು. ೧೫೩೦**
೨೪–೩೭ ಪತ್ರ	೭ ಪಂಕ್ತಿ	[redacted] ಅಕ್ಷರ

ಆದಿ; ಪ್ರಾಣನಾಥ ಶತಕ ||

ಶ್ರೀದುರ್ಗ್ಗಾ ನೇತ್ರಯುಗ್ಮಂ ಕುಸುಮ ಮುರುಕುಚಂ ಸತ್ಫಲಂ ಮೆಲ್ಪುವೆತ್ತಾ
ಪಾದದ್ವಂದ್ವಂತಳಿರ್ನ್ನಂ ಬೆರಲ್ಗಳೆ ಕೊನರ್ಗ್ಗಳ್ಕುಂತಳಂ ತುಂಬಿಯಾಗ
ಲ್ಕಾ ದಿವ್ಯಾಂಗಂ ಸದಾವಲ್ಲಿ ವೊಲಿರಸ್ರೆಡರಾಗಿರ್ಪ್ಪ ಕಲ್ಪಾಂಘ್ರಿಪಂ ನಿ
ನಾದಾಶಾವಾಸ ನಂಮುಂ ಸಲಹನವರತಂ ಪಾರ್ವ್ವತೀ ಪ್ರಾಣನಾಥಾ ||೧||

ಅಂತ್ಯ : ಶ್ರೀಕಂಠಕ್ಷ್ಮಾಪ ವಂಶೋದ್ಭವ ವಿರುಪ ನೃಪಾಲಾತ್ಮಜಂ ವೀರಭದ್ರಂ
ಶ್ರೀಕಂಠಗರ್ಪಿಸಿದ್ದೀಶ ತಕಘೆನರಸಂ ಧಾತ್ರಿಯೊಳ್ನೋಡೆ ವಿದ್ವತ್
ಶ್ರೀಕಂಠಾನಿತತಾನಂದಮನತಿಶಯದಿಂ ಮಾಡದುಂತಿಕ್ಕುಮೆ ಕೇಳ್
ಲೋಕಾಧೀಶಾ ಮಹೇಶಾ ಹರಿ ವಿಧಿವಿನುತಾ ಪಾರ್ವ್ವತೀ ಪ್ರಾಣನಾಥಾ
|| ೧೦೧ ||

ವಿಷಯ : ಶಿವಸ್ತುತಿ ಮತ್ತು ತತ್ತ್ವಬೋಧೆ.

ವಿಶೇಷ : ಅಕ್ಷರ ಸ್ಫುಟವಾಗಿವೆ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮಲ್ಲೇಶ್ವರ ಶತಕ, ಪಾರ್ವತೀವಲ್ಲಭ ಶತಕ, ಉಮಾಮಹೇಶ್ವರ ಶತಕ, ಶ್ರೀಕಂಠ ಸೋಮೇಶ್ವರ ಶತಕ, ಕಂದಶತಕ, ಪ್ರಭುದೇವರ ಪುರಾಣದ ನಾಂದ್ಯಗಳು, ಮಹಿಮ್ನ ಸ್ತೋತ್ರದ ಟೀಕು, ಶಿವಪೂಜಾವಿಧಾನ, ಚೇರಮ ಕಾವ್ಯಗಳೆಂಬ ಇತರ ಗ್ರಂಥಗಳಿವೆ.

996

ಕೆ. ೨೫೯/೨	**ಪ್ರಾಣಲಿಂಗಜ್ಞಾನದರ್ಪಣ**	ವಾರ್ಧಕಷಟ್ಪದಿ
೯.೫″ × ೧.೭′	?	?
೧೪ ಪತ್ರ	೧೩ ಪಂಕ್ತಿ	೫೨ ಅಕ್ಷರ

ಆದಿ : ಪ್ರಾಣಲಿಂಗ ಜ್ಞಾನದರ್ಪಣ ಚಾರಿತ್ರ ಬರಉದಕ್ಕೆ ಶುಭಮಸ್ತು ||
ವಾರ್ಧಿಕಷಟ್ಪದಿ || ಪಲ್ಲವ ||
ಶ್ರೀ ಸದಾಶಿವನ ಭಕ್ತರುಗಳಾರಾದಡಂ
ವಾಸರಿಸದಂತರಂಗದೊಳು ದಶಚಕ್ರದ
ವಾಸದೊಳು ಪದ್ಮಪ್ರಣವಾದಿ ಲಿಂಗವರ್ಚಿಸಲು ಸದಾಶಿವರಪ್ಪರೂ ||

ಪದನೂ ॥ ಹಲವು ವ್ರತ ಶೀಲದೊಳು ಕುಲಉ ನೂರೊಂದರೊಳು
ಚಲನೆ ಮಾಗಳ ಹಿಡಿದು ಹೊಲಬುಗೆಡುವರಿಗೆ ಯಿದು
ಅಳವಡದು ಗುರುಲಿಂಗ ಜಂಗಮದಿ ತಲ್ಲೀಯ್ಯ ವಳಹೊರಗೆ ವಂದೆಂಬಗೆ
ಸಲುಉದಿದುವಂತರಂಗದೊಳು ದಶಚಕ್ರದೊಳು
ಕಳಿಥರನ ಅನುಭಾವವರಿದು ಅರ್ಚ್ಚಿಸುತಿಹ
ಫಲಪದವನೊದೆದು ಮಲರಹಿತನೊಳಗೊಡವೆರವ ಶೂಲಭರಿಧನಾಲಿಸು
ವದೂ ॥ ೧ ॥

ಬಸವ ಮೊಥಲಾದ ಪರಮಗ್ನ್ಯಾನ ಸಂಪೂರ್ನ
ವಸಮವಜಗಂಣ ಗೊಗ್ಗಯ್ಯ ಮುಕ್ತಾಯೆಗೆ
ಪೆಸರ್ವಡೆದ ಮಡಿವಾಳೈಯ್ಯಂ ಕಿಂನರಿಯ ಬ್ರಂಹ್ಮ ಹಸುಳೆ ಉಡುತಡಿ
ದೇವಿಗೆ
ಬಿಸಿಗಂಣ ಸಿದ್ಧರಾಮಗೆ ಮರುಳುಶಂಕರಗೆ
ಸಶಿನೆ ಶ್ರೋತ್ರದೊಳೊಗೆದ ಚೆಂನಬಸವೇಶ್ವರಗೆ
ವಸೆದು ಪ್ರಭುವಿತ್ತ ಷಡುಸ್ತಲಗ್ನ್ಯಾನದುಪದೇಶ ಪಸರಿಸುವ ದರ್ಪಣ
ವಿದೂ ॥ ೨ ॥

ಅಂತ್ಯ : ಪದನೂ ॥ ಪರಮ ಪತಿವ್ರತೆಯು ಪುರುಷನು ಮುನಿದು ದುರ್ಜನರೊ
ಳಿರಿಸೆ ಪುರುಷನ ಚಿಂತ್ತೆಯಲ್ಲದನ್ಯವನರಿಯ
ದಿರಲರಿದು ತತ್ಪುರುಷನ್ಯೆತಂಥು ಮೋಹಿಸುವ ಪರಿಯಂತ್ತೆ ಯಂನ ನೀನು
ಶರೀರ ಕರಣಂಗಳೊಳಗಿರಿಸೆ ನಿಂನಯ ಪದಥ
ಸ್ಮರಣೆ ದ್ಯಾನದೊಳುವರ್ಚಿಸುತ್ತಿರ್ಪ ಕಿಂಕರನ
ಚರಣ ಕಮಲದೊಳು ಯಿಂಬಿಟ್ಟು ಸಲಹುವುದೆಂನ ಗುರುಹೇಶ್ವರ
ಲ್ಲಿಂಗವೆ ॥ ೨೮ ॥

ಸಾಕ್ಷಿ ॥ ಹ್ರುದಯಂ ಹ್ರುದಯಸ್ಯಾವ ಸ್ರೋತ್ರಂ ಸ್ರೋತ್ರಸ್ಯ ಸರ್ವದಾ।
ದರ್ಶನಾತ್ಸ್ಪರ್ಶನಂ ಚ್ಯೆವ ದ್ರುಷ್ಟಾದ್ರುಷ್ಟಿಂ ಸ್ತಥೈವ ಚ॥
ಜಿಂಹ್ವಾಯಾಪಿ ಚ ಜಿಂಹ್ವಾಚ ಘ್ರಾಣೇನ ಘ್ರಾಣಯೇವ ಚಾ।
ಯೇಕ್ಯೆಕಂ ಪ್ರಾಣಮಾಖ್ಯಾತಂ ಮಿತ್ತ್ರೈತೇ ಸಹವರ್ತಿನಾಂ॥
ನಾಹಂ ವಾಸಾಮಿ ಕ್ಯೆಲಾಸೇ ನಮೇಕಾನಚ ಮಂದರೇ।
ಮದ್ಭಕ್ತಾ ಯೆತ್ರ ತಿಸ್ಟಂತಿ ತಿಸ್ಟಾಮಿ ಪಾರ್ವತಿ ॥ ೨೭ ॥

ಪ್ರಾಣಲಿಂಗಗ್ನಾನ ದರ್ಪಣ ಚಾರಿತ್ರ ಸಮಾಪ್ತ ಮಂಗಳ ಮಹಾಶ್ರೀ

ವಿಷಯ : ಲಿಂಗಾರ್ಪಣಸದ್ಭಾವ [ಮಿಶ್ರಾರ್ಪಣ] ಷಟ್ಸ್ಥಲಗತ ಷಡ್ಲಿಂಗಗಳಿಗೆ ಅರ್ಪಣ ಮಾಡುವ ವಿವರ.

ವಿಶೇಷ : ಕನ್ನಡ ಪದ್ಯದಲ್ಲಿ ವಿವರಣೆ ಮತ್ತು ಸಂಸ್ಕೃತದ ಆಧಾರಗಳು ಇವುಗಳಿಂದ ಕೂಡಿದೆ. 'ಪ್ರಭುವಿತ್ತ ಷಡುಸ್ತಲ ಗ್ನಾ್ಯನದುಪದೇಶ'ವಿದೆಂದು ಎರಡನೆಯ ಪದ್ಯದಲ್ಲಿದೆ. ಪದ್ಯ ೨೭ ರಲ್ಲಿ 'ಗುರು [ಗು ?] ಹೇಶಲ್ಲಿಂಗವೆ' ಎಂಬ ಅಂಕಿತವಿದೆ. ಈ ಕಟ್ಟಿನಲ್ಲಿರುವ ಇತರ ಗ್ರಂಥಗಳೆಂದರೆ ಗುರುಭಕ್ತನ ಕಾವ್ಯ, ಅಕ್ಕಗಳ ಸೃಷ್ಟಿ, ಸರ್ವಾಂಗಲಿಂಗಸ್ಥಲದ ವಚನ, ಮತ್ತು ಸ್ವತಂತ್ರ ಸಿದ್ಧಲಿಂಗೇಶ್ವರನ ವಚನಗಳು.

997

ಕೆ. ೧೨೭	**ಪ್ರಾಣೇಶ್ವರ ಶತಕ**	ವೃತ್ತ
೬.೮" × ೧.೮"	ಶಾಲ್ಮದ ಕೃಷ್ಣರಾಜ	೧೭೪೮
೧–೧೦ ಪತ್ರ	೧೨ ಪಂಕ್ತಿ	೪೦ ಅಕ್ಷರ

ಆದಿ : ಶ್ರೀಮದ್ವರ್ನ ವಿಲಾಸದಿಂ ದಳಗಳಿಂ ಸತ್ಕರ್ನಿಕಾ ಕೇಸರ
ಪ್ರಾಮುಖ್ಯಸ್ಥಿತ ಲಗಳಿಂ ಗುಭಂಗಳಿಂ ವೃಂತದಿಂ
ಪ್ರೇಮಂ ಪುಟ್ಟಸುತಿರ್ದೊಡಕ್ಷ್ಣಿಯುಗಳಕ್ಕಂ ಶಾಲ್ಮಲೀಭೂಜಮೇ
ಣಾ ಮಾಕಂದಮಿದಲ್ಲ ಕೀರಖಗವೇ ನೋಡೆನ್ನ ಪ್ರಾಣೇಶ್ವರಾ ॥ ೧ ॥

ಅಂತ್ಯ : ತಾರಾಮಾರ್ಗ ಸುಮಾರ್ಗ ದಿವ್ಯಭ ಮಹಾಭ್ರಪ್ರಾಕರಣ್ಯಂಗಳಾ
ಧಾರಾಭೃದ್ಗಿರಿ ತಾಮಸಸ್ಥಲನಮಂ ಸಾರುತ್ತಿರಲ್ದುಸ್ತರ
ಕ್ಷಾರಾಂಬೋಧಿಯಲೀ ಪುರಾಣತರಿಯಂ ವೇಲಾಂತಿಕಂ ಸಾರ್ಚಲಿ
ನ್ನಾರುಂಟೈ ಪೃಷಶ್ವ ನಿನ್ನ ಪೊರತಾಗಿಂತೆನ್ನ ಪ್ರಾಣೇಶ್ವರಾ ॥ ೧೦೧ ॥
ಅಪ್ರಸ್ತುತ ಪ್ರಶಂಸಾಯಾಮನವದ್ಯ ಕುಶೇಶಯಂ।
ಕೃಷ್ಣಾಢ್ಯೇನಾರ್ಪಿತಂ ಸಮ್ಯಕ್ಪ್ರಾಣೇಶ್ವರ ಪದದ್ವಯೇ ॥ ಶ್ರೀ

ವಿಷಯ : ನೀತಿ ಮತ್ತು ವೇದಾಂತವನ್ನು ಬೋಧಿಸುವ ಅನ್ಯೋಕ್ತಿ ರೂಪವಾದ ಪದ್ಯಗಳು.

ವಿಶೇಷ : ಪ್ರತಿ ವೃತ್ತವೂ 'ಪ್ರಾಣೇಶ್ವರಾ' ಎಂದು ಮುಗಿಯುತ್ತದೆ. ನಾಲ್ಕನೆಯ ಪತ್ರವಿಲ್ಲ. ಈ ಕೃತಿಗೆ ಅಪ್ರಸ್ತುತ ಪ್ರಶಂಸಾ ಶತಕ ಎಂಬ ಬೇರೆ ಹೆಸರೂ ಇದೆ.

998

ಕೆ.ಜಿ. ೯ | ಪ್ರಾಣೇಶ್ವರ ಶತಕ | ವೃತ್ತ

ಲ.೨" × ೬.೫" | ಶಾಲ್ಯದ ಕೃಷ್ಣರಾಜ | ೧೭೪೮

೧—೧೨ ಪತ್ರ | ೧೫ ಪಂಕ್ತಿ | ೨೨ ಅಕ್ಷರ

ಆದಿ : ಶೀಲಕ್ಷ್ಮೀವಲ್ಲಭಾಯ ನಮಃ ॥ ಶ್ರೀ ॥

ಶ್ರೀಮದ್ವರ್ಣವಿಲಾಸದಿಂ ದಳಗಳಿಂ ಸತ್ಕರ್ಣಿಕಾ ಕೇಸರ
ಪ್ರಾಮುಖ್ಯಸ್ಥಿತಗಂಧದಿಂ ಫಲಂಗಳಿಂ ಗುಛಂಗಳಿಂ ವೃಂತದಿಂ
ಪ್ರೇಮಂ ಪುಟ್ಟಸುತಿರ್ದೊಡಕ್ಷಿಯುಗಳಕ್ಕಂ ಶಾಲ್ಮಲೀಭೂಜ ಮೇ
ಣಾ ಮಾಕಂದವಿದೆಲ್ಲ ಕೀರಖಗವೇ ನೋಡೆನ್ನ ಪ್ರಾಣೇಶ್ವರಾ ॥ ೧ ॥

ಲಲಿತಾಂತರ್ಗತ ಭಾವಭಾವಿತ ಕಲಾಯೋಗಸ್ಥಗಂ ರಥ್ಯವಾ
ದೆಲೆ ಕೀರೋತ್ತಮ ಹೇಮದುಗ್ಧಫಲೇಚ್ಛಾ ಭ್ರಾಂತಿಯಂ ಮಾಣು ನಿ
ರ್ಮಲ ಮಾಧುರ್ಯವೆ ಸಾರವೆ ಸುರಭಿಯೆ ಯೇನುಂಟು ದುರ್ಜಂತು ಸಂ
ಕುಲದಿಂ ಬೀಜಸಮೂಹದಿಂದಿಹದು ನೋಡಿಂತೆನ್ನ ॥ ೨ ॥

ಅಂತ್ಯ : ತಾರಾಮಾರ್ಗ ಸುಮಾರ್ಗದಿವ್ಯಭ ಮಹಾಭ್ರಿಪ್ರಾಕರಣ್ಯಂಗಳಾ
ಧಾರಾಭೃದ್ಗಿರಿ ತಾಮಸಸ್ಥಲನಮಂ ಸಾರುತ್ತಿರಲ್ದುಸ್ತರ
ಕ್ಷಾರಾಂಬೋಧಿಯಲೀ ಪುರಾಣಕರಿಯಂ ವೇಲಾಂತಿಕಂ ಸಾರ್ಚವಿ
ನ್ನಾರುಂಟೈ ಪೃಷದಶ್ವ ನಿನ್ನ ಪೊರತಾಗಿಂತೆನ್ನ ಪ್ರಾಣೇಶ್ವರಾ ॥ ೧೦೧ ॥
ಅಪ್ರಸ್ತುತ ಪ್ರಶಂಸಾಯಾಂಮನವದ್ಯ ಕುಶೇಶಯಂ ।
ಕೃಷ್ಣಾಢ್ಯೆನಾರ್ಪಿತಂ ಸಮ್ಯಕ್ಪ್ರಾಣೇಶ್ವರ ಪದದ್ವಯೇ ॥

ವಿಷಯ : ನೀತಿ ಮತ್ತು ವೇದಾಂತವನ್ನು ಬೋಧಿಸುವ ಅನ್ಯೋಕ್ತಿ ರೂಪವಾದ ಪದ್ಯಗಳು.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಪ್ರತಿ ಪದ್ಯದ ಕೊನೆಯಲ್ಲೂ 'ಪ್ರಾಣೇಶ್ವರ' ಎಂದು ಇರಬೇಕಾದುದನ್ನು ಪ್ರತಿಕಾರರು ಬರೆದಿಲ್ಲ. ೩೨ ನೆಯ ಪದ್ಯದಿಂದ ೪೨ ನೆಯ ಪದ್ಯದವರೆಗಿನ ಗ್ರಂಥಭಾಗವಿಲ್ಲ. ೯೪ ನೆಯ ಪದ್ಯದ ಮಧ್ಯದಲ್ಲು ಗ್ರಂಥಲೋಪವಿದೆ. ಈ ಕೃತಿಗೆ ಅಪ್ರಸ್ತುತ ಪ್ರಶಂಸಾ ಶತಕ ಎಂಬ ಬೇರೆ ಹೆಸರೂ ಇದೆ.

999

ಕೆ.ಬಿ. ೧೭೯/೩	**ಪ್ರಾಣೇಶ್ವರ ಶತಕ**	ವೃತ್ತ
೮" × ೬.೪"	ಶಾಲ್ಯದ ಕೃಷ್ಣರಾಜ	೧೭೪೮
೩೦–೪೧ ಪತ್ರ	೧೭ ಪಂಕ್ತಿ	೧೯ ಅಕ್ಷರ

ಆದಿ : ಶ್ರೀಮತ್ಪರ್ಣ ವಿಲಾಸದಿಂ ಕುಸುಮದಿಂ ಸದ್ವೃತ್ತದಿಂ ಕರ್ಣಿಕಾ
ಸೀಮಾಲಂಬಿ ವಿರಾಗದಿಂ ಪರಿಮಲಾಪ್ತೇಂದಿಂದಿರ ಶ್ರೇಣಿಯಿಂ
ಪ್ರೇಮಂಬುಟ್ಟಿಸುತಿರ್ದೊಡಕ್ಷಿಯುಗಳಕ್ಕಂ ಶಾಲ್ಮಲೀ ಭೂಜ
ಮೇ ನಾಮಕಂಡ ಮಿದಲ್ತು ಕೀರಖಗವೆ ನೋಡಿತ್ತ ಪ್ರಾಣೇಶ್ವರಾ ॥ ೧ ॥

ಅಂತ್ಯ : ಆರಾರಿಂಗತಿ ದುರ್ನಿರೀಕ್ಷ್ಯ ಭೃಗು ಹೋಳ್ ಸಂಭೂತಿಯಿಂದಾಳ್ದಮಂ
ದಾರ ಕಾರ್ತ್ತಪನಾಂಶು ವಹ್ನಿಮುಖದಿಂ ಸಂರಕ್ಷಿಪರ್ಬಂದುದೀ
ಘೋರಪದ್ವಿಸರಂ ವಿಲಂಬಿಸದೆ ನೀನೆ ಪೋಗಿ ದರ್ಭಾಮೃತಾ
ಸಾರಂಗೊಟ್ಟಿಲೆ ನೀಲಕಂದರನೆ ಕಾಪಾಡೆಂನ ಪ್ರಾಣೇಶ್ವರಾ ॥ ೧೦೨ ॥
ಪರಮ ಮತ್ತೇಭ ಶಾರ್ದೂಲಾ ಪದಗಳಾದಿಯಾದ ವಿಕ್ರೀಡಿತ ವೃತ್ತ
ಮಾಗೆ ಕಲಿಯೊಳಭ್ರವಾರಿದಿ ನಾಗ ವೇದಾಬ್ದಮಾದುದೀ ಶತಕಮಾರ್ಯ
ರೆಣಿಸೆ ಪ್ರಾಣೇಶ್ವರಾಂಕಂ ॥ ತೆಪ್ಪಂ ಬರೆದಾತಂ x x x x
ಪ್ರಾಣೇಶ ಶತಕ ಸಂಪೂರ್ಣ ಮಂಗಳ ಮಹಾ ॥ ಶ್ರೀ ಶ್ರೀ

ವಿಷಯ : ನೀತಿ ಮತ್ತು ವೇದಾಂತವನ್ನು ಬೋಧಿಸುವ ಅನ್ಯೋಕ್ತಿ ರೂಪವಾದ ಪದ್ಯಗಳು.

ವಿಶೇಷ : ಪ್ರತಿ ಪದ್ಯವೂ ಪ್ರಾಣೇಶ್ವರಾ ಎಂದು ಮುಗಿಯುತ್ತದೆ ಈ ಕೃತಿಗೆ ಅಪ್ರಸ್ತುತ ಪ್ರಶಂಸಾ ಶತಕ ಎಂಬ ಬೇರೆ ಹೆಸರೂ ಇದೆ. ಈ ಪುಸ್ತಕದೊಂದಿಗೆ ವಿರೂಪಾಕ್ಷ ಶತಕ, ಸದಾಶಿವ ಶತಕ, ಗುರುಶಿಷ್ಯಸಂವಾದ, ಅಂಬರೀಶ ಚರಿತ್ರೆ, ಧ್ರುವ ಚರಿತ್ರೆ, ದೂರ್ವಾಸ ಚರಿತ್ರೆಗಳಿವೆ,

1000

ಕೆ.ಬಿ. ೩೮೪/೧	**ಪ್ರಾಣೇಶ್ವರ ಶತಕ**	ವೃತ್ತ
೭.೬" × ೫.೯"	ಶಾಲ್ಯದ ಕೃಷ್ಣರಾಜ	೧೭೪೮
೧–೧೭ ಪತ್ರ	೧೮ ಪಂಕ್ತಿ	೧೭ ಅಕ್ಷರ

ಆದಿ : ಪ್ರಾಣೇಶತಕ ॥ ಶಾರ್ದೂಲ ಕ್ರೀಡಿತಾವೃತ್ತ ॥
ಶ್ರೀಮತ್ಪರ್ಣವಿಲಾಸದಿಂ ಕುಸುಮದಿಂ ಸದ್ವೃತ್ತದಿಂ ಕರ್ಣಿತಾ
ಸೀಮಾಲಂಬಿ ವಿರಾಗದಿಂ ಪರಿಮಲಾಪ್ತೇಂದಿಂದಿರ ಶ್ರೇಣಿಯಿಂ
ಪ್ರೇಮಂಬುಟ್ಟೆಸುತಿರ್ದೊಡಕ್ಷಿಯುಗಳಕ್ಕಂ ಶಾಲ್ಮಲೀಭೂಜಮೇ
ನಾಮಾಕಂದಮಿದಲ್ತು ಕೀರ ಖಗವೇ ನೋಡಿತ್ತ ಪ್ರಾಣೇಶ್ವರ ॥ ೧ ॥

ಲಲಿತ ಶ್ರೀರಸಮುಖ್ಯನಾದ ಕಮಲಾಪುತ್ರಂತೆ ಸತ್ಪಾತ್ರಮಾ
ದಲೆ ಕೀರೋತ್ತಮ ಹೇಮದುಗ್ಧ ತಪಲೆಜಾ ಬ್ರಾಂತಿಯಂ ಮಾಣು ನಿ
ರ್ಮಲ ಮಾಧುರ್ಯಮೆ ಸಾರಮೇ ಸುರಭಿಯೇ ಯೇನುಂಟು ದುರ್ಜಂತುಸಂ
ಕುಲಮಾಗಿರ್ದ ಫಲಪ್ರದೇಶದಲಿ ನೀ ನೋಡಿತ್ತ ಪ್ರಾಣೇಶ್ವರ ॥ ೨ ॥

ಅಂತ್ಯ : ಆರಾರಿಂಗತಿ ದುರ್ನಿರೀಕ್ಷ್ಯ ಭೃಗುಹೊಳ್ ಸಂಭೂತಿಯಂ ತಾಳ್ದ ಮಂ
ದಾರ ಕಾರ್ತ್ತಪನಾಂಶು ವಹ್ನಿಮುಖದಿಂ ಸಂರಕ್ಷಿಪರ್ಬಂದುದೀ
ಘೋರಪದ್ಧಿಸರಂ ವಿಲಂಬಿಸದೆ ನೀನೇ ಪೋಗಿ ದರ್ಪಾಮೃತಾ
ಸಾರಂಗೊಟ್ಟಿಲೆ ನೀಲಕಂದರನೆ ಕಾಪಾಡೆಂನ ಪ್ರಾಣೇಶ್ವರ ॥ ೧೦೨ ॥
ಪರಮಮತ್ತೇಭ ಶಾರ್ದೂಲಾ ಪದಗಳಾದಿಯಾದ ವಿಕ್ರೀಡಿತಾವೃತ್ತಮಾಗೆ
ಕಲಿಯೊಳಬ್ರ ವಾರಿದಿ ನಾಗ ವೇದಾಬ್ದಮಾದುದೀ ಶತಕಮಾರ್ಯರೆಣಿಸೆ
ಪ್ರಾಣೇಶ್ವರಾಂಕಂ ॥

ಪ್ರಾಣೇಶಶತಕ ಸಂಪೂರ್ಣ ಮಂಗಳ ಮಹಾಶ್ರೀ ॥

ವಿಷಯ : ನೀತಿ ಮತ್ತು ವೇದಾಂತವನ್ನು ಬೋಧಿಸುವ ಅನ್ಯೋಕ್ತಿರೂಪವಾದ ಪದ್ಯಗಳು.

ವಿಶೇಷ : ಅಕ್ಷರಗಳು ದಪ್ಪವಾಗಿಯೂ ಸ್ಫುಟವಾಗಿಯೂ ಇವೆ. ಪ್ರತಿಪದ್ಯವು "ಪ್ರಾಣೇಶ್ವರಾ" ಎಂದು ಮುಗಿಯುತ್ತದೆ. ಈ ಕೃತಿಗೆ ಅಪ್ರಸ್ತುತ ಪ್ರಶಂಸಾ ಶತಕ ಎಂಬ ಬೇರೆ ಹೆಸರೂ ಇದೆ. ತೆಳುವು ಕಾಗದ. ಇದೇ ಪುಸ್ತಕದಲ್ಲಿ ವಿರೂಪಾಕ್ಷಶತಕ- ಸದಾಶಿವ ಶತಕ ಎಂಬ ಇತರ ಎರಡು ಕೃತಿಗಳಿವೆ

1001

ಕೆ. ಎ. ೮೫/೨	**ಪ್ರಾಬೋಧಕೀ ಸ್ತೋತ್ರಮಾಲಾ**	ತಮಿಳು ಹಾಡು, ಟೀಕು
೧೨.೮"×೮".೧	ಶ್ರೀನಿವಾಸದಾಸ	೨೦ನೆಯ ಶತಕ [ವಾರ್ಧಕ ಗಿತೆ]
೨೪– ೩೬ ಪತ್ರ	೨೬ ಪಂಕ್ತಿ	೨೭ ಅಕ್ಷರ

ಆದಿ : ತಿರುಪಳ್ಳಿಯೆಬುಚ್ಚಿ ॥ ತನಿಯನ್ ॥
ತಮೇವ ಮತ್ವಾ ಪರವಾಸುದೇವಂ ರಂಗೇಶಯಂ ರಾಜವದರ್ಹಣೀಯಂ ।
ಪ್ರಾಬೋಧಕೀಂ ಯೋಕೃತ ಸೂಕ್ತಿಮಾಲಾ ಭಕ್ತಾಂಘ್ರಿರೇಣುಂ ಭಗವಂತ ಮೀಡೆ ॥

ಟೀಕಾ॥ ರಾಜನೋಪಾದಿಯಲ್ಲಿ ಪೂಜ್ಯನಾದ, ಶ್ರೀರಂಗದಲ್ಲಿ ಯೋಗನಿದ್ರಾ ಮುದ್ರಿತಾಕ್ಷನಾಗಿರ್ಪ ಆ ರಂಗೇಶನನ್ನೆ ಪರವಾಸುದೇವನೆಂದು ಭಾವಿಸಿ ಯಾರು ಪ್ರಾಬೋಧಕೀ ಸೂಕ್ತಿಮಾಲೆಯನ್ನು ವಿರಚಿಸಿದರೋ ಆ ಪೂಜ್ಯರಾದ ಭಕ್ತಾಂಘ್ರಿರೇಣುವನ್ನು ನುತಿಸುವೆನು ॥

ವಾರ್ಧಕ ಷಟ್ಪದಿ ॥
ಶ್ರೀರಂಗದೊಳ್ಯೋಗನಿದ್ರೆಯೊಳ್ಮೆರೆಯುತಿ
ರ್ಪಾ ರಂಗರಾಜನಂ ರಾಜವತ್ಪೂಜ್ಯನಂ
ನ್ನೋರಂತೆ ಭಾವಿಸುತ ಪರವಾಸುದೇವನೆಂದಿಳೆಯವರ್ಮುದವೊಂದಲು
ಪೂರಿತಾನಂದದಿಂ ಪಾಬೋಧಕೀ ಸ್ತೋತ್ರ
ಹಾರಮಂ ವಿರಚಿಸಿದ ಭಕ್ತಾಂಘ್ರಿರೇಣುವನ
ನಾರತಂ ಮನದಣಿಯೆ ಕೊಂಡಾಡುವೆಂ ಪರಮಭಾಗವತವೌಳಿ ಮಣಿಯಂ ॥
ಮನ್ದಂ ಕುಡಿಯನ್ಬರ್ ಮಾಮರೈಯೋರ್ಮನ್ನಿಯಶೀರ್
ಕೊಂಡರಡಿಪ್ಪೊಡಿ ತೊನ್ನಗರಂ
ವಂಡು ತಿಣರ್ತವಯರ್ತ್ತೇನ್ನರಂಗತ್ತಮ್ಮಾನ್ನೈ ಪಳ್ಳಿ
ಯುಣರ್ತುಂ ಪಿರಾನುದಿತ್ತವೂರ್ ॥

ಅಂತ್ಯ : ರಾಗ ಶ್ಯಾಮ ಕಲ್ಯಾಣಿ ॥
ಪವಡಿಸದೇಳೈ ಭುವನೇಶ ರಂಗರಾಜ ॥ ಪ ॥
ಪರಿಮಳಕಂಜವರಳದೌ ನೋಡೈ ನೀನು
ಸರಸಿಜ ಬಂಧು ಪೂರ್ವ
ಶರಥಿಯೊಳೆದ್ದನಿದುವೊ ॥ ೧ ॥

X X X X

ಯತಿರಾಜಪಾದ
ಶ್ರಿತದೇವ ಶಿಖಾಮಣಿ
ಸುತ ಶ್ರೀನಿವಾಸಾರಾಧ್ಯ
ನತ ಜಾಲ ಕಾಮಧೇನು ॥ ೫ ॥

ಪ್ರಾಬೋಧಕೀ ಸ್ತೋತ್ರಮಾಲಾ ಸಂಪೂರ್ಣಂ ॥ ತಿರುಪ್ಪಳ್ಳಿಯ ಬುಚ್ಚಿ
ಮುಡಿತ್ತು ತೊಂಡರಡಿಪ್ಪೊಡಿಯಾಳ್ವಾರ್ ತಿರುವಡಿಗಳೇ ಶರಣಂ ॥

ವಿಷಯ : ತಮಿಳು ಪ್ರಬಂಧ ತಿರುಪಳ್ಳಿಯಬುಚ್ಚಿ ಎನ್ನುವ ಕೃತಿಯ ಕನ್ನಡ ಪದ್ಯಾನುವಾದ ಹಾಗೂ ತಾತ್ಪರ್ಯ.

ವಿಶೇಷ : ಗ್ರಂಥಾರಂಭದಲ್ಲಿ ಅವತಾರಿಕೆಯೂ, ಮುಕುಂದಮಾಲಾ ತಾತ್ಪರ್ಯ ಮತ್ತು ತಿರುಪ್ಪಾವೈ ಎಂಬ ಕೃತಿಗಳೂ ಇವೆ.

1001(a)

ಕೆ.ಬಿ. ೫೦೬/೧	**ಪ್ರೌಢರಾಯನ ಕಾವ್ಯ**	ವಾರ್ಧಕಷಟ್ಪದಿ
೭.೨" × ೫.೮"	ಅದೃಶ್ಯಕವಿ	ಸು. ೧೫೮೦
೧–೧೯೩ ಪತ್ರ	೧೯ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ x x ಪ್ರಮಾತ್ತಿ ಸಂವತ್ಸರದ ಪಾಲ್ಗುಶ್ಧ ೭ಲ್ಲು ವುಳುವೆ ಮಹಮನೆ ಬಾಳಪ್ಪ ದೇವರ ವಹಿಗೆ ಪ್ರಹುಡರಾಯನ ಕಾವ್ಯ ಬರೆಯುವದಕ್ಕೆ ನಿರ್ವಿಗ್ನಾ್ಯಮಸ್ತು। ಶುಭಮಸ್ತು। ಶ್ರೀರಸ್ತು। ಶ್ರೀಗುರುವೇ ಗತಿ।

ವಾರ್ಧಿಕ್ಯಷಟ್ಪದಿ ॥

ಶ್ರೀಮಹೀಧರಾತ್ಮಜ ಹೃದಭ್ಜಾಜಕರಮರಾ
ಶಾಮುಗಾತ್ರಾ ಸುಪ್ರೀಯ ತಾಮುರಸ ಶರಕೆ....ಯ
ಯೋಮುಕುಂತ್ತಾಳ ಸುಮನ ಪತಿನ....ಲ್ಪದಾಂಬೋಜ ಸಾಮುಗಾನ
ಪ್ರಿಯ್ಯನೇ
ಸೋಮಶೇಕ್ಕರಾ ಫೆಸ್ಮರಾಭರಣಾ ಭಕ್ತಾಜನ
ಪ್ರೇಮಿಯಾನತಕಲ್ಪ ಕುಜಕುಮುದ ಸಖಗೋಪ
ಧೂಮದ್ವಜಾಕ್ಷ ದುರಿತವ ಪರಿದು ಪಾಲಿಪುದು ಕಾಮಿತವನಿತ್ತು
ಮುದದಿ ॥ ೧ ॥

ಅಂತ್ಯ : ವಾರ್ಧೀಕ ಷಟ್ಪದಿ ॥

ಹರುಷ ಹಂನೊಂದು ನೂರ ಹದಿಮೂರು ಪದ
ಮೆಸವ ಯಿಪ್ಪತೊಂದು ಜೆನ ಬಂಧಿಗಳಿಂದ
ಧರೆಯಲ್ಲಿ ಪ್ರಹುಡರಾಯರ ಕಾವ್ಯ ಯಿರವೆಂದ್ವಿಜಾಪುರದ ಪ್ರಾಂಥದಲ್ಲೀ

ತೊರೆಸಾಲಕೊಲ್ಲಾರದರೆಯ ಅಂಣೇಂದ್ರನ
ತರುಳ ಅದೃಶ್ಯ ಪೇಳಿಸಿದ ಸಂಗಮೇ
ಶ್ವರನಲ್ಲದೆನಗೆ ಸ್ವತಂತ್ರಮೆಳ್ಳಿನಿತಿಲ್ಲ ಗುರುರಾಯ ತಾನೆ ಬಲ್ಲಾ ॥ ೪೨ ॥

X X X X

ಗುರುವೆ ಜಯ ಪರಬ್ರಹ್ಮದಿರುವೆ ಜಯ ಸದಮಲಾ
ದರುವೆ ಜಯ ಸತ್ಯದಾಗರವೆ ಜಯ ನತಕಲ್ಪ
ತರುವೆ ಜಯ ಜಯ ತರಣಿ ಶಶಿಕೋಟಿ ಚಿರಗಾತ್ರತರವೆ ಜಯಭಕ್ತಜನರಾ
ಪೊರವೆ ಜಯ ಭವಪಾಶ ಹರಿವೆ ಜಯ ಮುಕ್ತಿಪಥ
ವರವೆ ಜಯ ಅಭಯಕರ ಮೆರವೆ ಜಯ ಜಯ ಪರಾ
ತ್ಪರವೆ ಜಯ ವರ ಮಳೆಯ ಮಲ್ಲೇಶ ಮದ್ಗುರುವೆ ಮನದಿಷ್ಟವಿತ್ತು
ಸಲಹೂ ॥ ೪೫ ॥

ಅಂತ್ಯ ಸಂಧೀ '೨೧ ಕಂ ಪದನು ೧೧೩೨ ಕ್ಕಂ ಗ್ರಂಥ ೭ ಕ್ಕಂ ಮಂಗಳ ಮಹಾಶ್ರೀ ವಿಕ್ರಮ ಸಂವತ್ಸರದ ಶ್ರಾವಣ ಶುದ್ಧ ಸಪ್ತಮಿ ಸ್ಥಿರವಾರ ದಲ್ಲು ಭೂಕೈಲಾಸ ವುಳುವೆ ಮಹಮನೆ ಸೂತ್ರಾನುವರ್ತಿಗಳಾದ ಬಾಳಪ್ಪ ಸ್ವಾಮಿಗಳ ಕರಸಂಜಾತಳಾದ ಪುಟ್ಟ ನಂಜಂಮ

ವಿಷಯ : ಶಿವಶರಣಕಥೆ ಮತ್ತು ವೀರಶೈವ ಸಿದ್ಧಾಂತ ಮಹಿಮೆ.

ವಿಶೇಷ: ಸಮಗ್ರ. ಕೆ. ಬಿ. ೫೦೭ನೆಯ ನಂಬರಿನ ಈ ಗ್ರಂಥದಲ್ಲಿ ಖಾಲಿಪತ್ರಗಳೂ ಸೇರಿ ಒಟ್ಟು ೧ರಿಂದ ೨೬೮ ಪತ್ರಗಳಿದ್ದು ಒಟ್ಟು ೨೨ ಪದಗಳು (ಹಾಡುಗಳೂ) ಚನ್ನಬಸವೇಶ್ವರಸ್ವಾಮಿಯ ಕನ್ನಡ ಅಷ್ಟಕವೂ, ಕೆ. ಬಿ. ೫೦೬/೨ ಬಸವೇಶ್ವರ ರಗಳೆಯೂ ಕೆ. ಬಿ. ೫೦೬/೩ ಬಸವೇಶ್ವರ ಚರಿತ್ರೆಯೂ ಅಲ್ಲದೆ ೨೫೮–೨೬೦ರ ವರೆಗಿನ ಪತ್ರಗಳಲ್ಲಿ ಕೊಡಗಿನ ಮಠಕ್ಕೆ ೧೮೯೦ರಲ್ಲಿ ಮಾಡಿದ ರಿಪೇರಿಯ ಖರ್ಚಿನ ವಿವರವೂ ಮತ್ತು ಮುರುಗಿಯ ಮಠದ ದುರ್ವ್ಯಾಜ್ಯ ಪರಿಹಾರಕ್ಕೆ ೮೦ ರೂ. ಬೆಲೆಬಾಳುವ ವಜ್ರದ ಹತಕಡಕನ್ನು ವ್ರಯಮಾಡಿದ ವಿಚಾರವೂ ಇದೆ. ೧೮೯೦–೯೧ರಲ್ಲಿನ ಆರ್ಥಿಕಜೀವನ ವಿಧಾನದ ಬಗ್ಗೆ ಈ ಲೆಕ್ಕದ ವಿವರ ಕೆಲವಂಶವನ್ನು ಒದಗಿಸುತ್ತದೆ.